ಆನಂದ ಕರ್ಣಾಟಕ ಗ್ರಂಥರತ್ನಮಾಲೆ. ನಂ. ೧

ಶ್ರೀ

ವಾಲ್ಮೀಕಿಮಹರ್ಷಿಪ್ರಣೀತ

ಶ್ರೀಮದ್ರಾಮಾಯಣವು

(ಸುಂದರಕಾಂಡವು)

ಕರ್ಣಾಟಕ ವಚನವು

Vol. 6

ಶ್ರೀಮದ್ಭದುಶೈಲನಿವಾಸಿಕ

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು.

ಪ್ರಕಾಶಕರು:

ಆರ್. ವೆಂಕಟೇಶ್ವರ ಅಂಡ್ ಕಂಪೆನಿ,

ಭೀಮಸೇನಾಗಾರ್ಡನ್ಸ್, ಮೈಲಾಪ್ಪರ, ಮದರಾಸು-೪

೧೩೫, ಆನಂದ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿ

ಪ್ರಕಟಿಸಲ್ಪಟ್ಟಿದೆ.

1965.

[All Rights Reserved]

[Price Rs. 4-50

DEDICATED
TO
SRI RAGHAVENDRA SWAMI
OF
MANTRALAYA

All Rights Reserved.

ಕಾಪೀರೈಟ್, ೧೯೧೩—ಈ ಪುಸ್ತಕದ ಸರ್ವಸ್ವಾಮ್ಯಂತ್ಯಾ ಶ್ರೀ ಮದ್ವಾಸ್, ಆರ್. ವೆಂಕಟೇಶ್ವರ ಕಂಪೆನಿಯವರಿಗೆ ಸೇರಿದೆ. ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲೀ ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿಲ್ಲದು. ಈ ಪುಸ್ತಕದೊಳಗಿನ ಭಾವಗಳನ್ನಾಗಲೀ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲೀ ಇತರರು ಕಾಪೀಮಾಡಿದ ಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ

೧೨. ಕೊನೆಗೆ ಹನುಮಂತನು ಸೀತೆಯನ್ನು ಕಾಣದುದಕ್ಕಾಗಿ ಶೋಕಿಸುತ್ತ, ತಿರುಗಿ ರಾವಣಾಂತಃಪುರಕ್ಕೆ ಬಂದು ಹುಡುಕಿದುದು. ೬೫

೧೩. ಹನುಮಂತನು ಅಶೋಕವನದ ಪ್ರಾಕಾರವನ್ನೇರಿದುದು ಸೀತೆಯನ್ನೂ, ರಾವಣಾದಿಗಳನ್ನೂ ಕುರಿತು ನಾನಾವಿಧದಲ್ಲಿ ಚಿಂತಿಸಿ, ಅಶೋಕ ವನವನ್ನು ಹುಡುಕಬೇಕೆಂದು ಪ್ರಯತ್ನಿಸಿ, ಅದಕ್ಕಾಗಿ ಮೊದಲು ದೇವತೆಗಳಿಗೆ ನಮಸ್ಕರಿಸಿದುದು ೬೮

೧೪. ಹನುಮಂತನು ಅಶೋಕವನವನ್ನು ಪ್ರವೇಶಿಸಿ ಶಿಂಶುಪಾವೃಕ್ಷವನ್ನು ನೋಡಿದುದು ೭೬

೧೫. ಹನುಮಂತನು ಸೀತೆಯನ್ನು ಕಂಡುದು. ೮೧

೧೬. ಹನುಮಂತನು ಸೀತೆಯ ದುರ್ದಶೆಯನ್ನು ನೋಡಿ ಬಹಳವಾಗಿ ದುಃಖಿಸಿದುದು. ೮೯

೧೭. ಹನುಮಂತನು ಸೀತೆಯು ಸುತ್ತಲೂ ಕಾವಲಿದ್ದ ಘೋರರಾಕ್ಷಸಿಯರನ್ನು ಕಂಡು, ಶಿಂಶುಪಾವೃಕ್ಷದ ಮರೆಯಲ್ಲಿ ಅಡಗಿಕೊಂಡುದು. ೯೪

೧೮. ರಾವಣನು ಬೆಳಿಗಿನ ಜಾವದಲ್ಲಿ ಕೆಲವು ರಾಕ್ಷಸಸ್ತ್ರೀಯರೊಡನೆ ಹೊರಟು, ಸೀತೆಯನ್ನು ನೋಡುವುದಕ್ಕಾಗಿ ಅಶೋಕವನಕ್ಕೆ ಬಂದುದು. ೯೬

೧೯. ರಾವಣನು ಸೀತೆಯು ಬಳಿಗೆ ಬಂದು, ಅವಳಿಗೆ ಒಸೆಹುಟ್ಟಿಸುವ ಮಾತುಗಳನ್ನು ಹೇಳತೊಡಗಿದುದು. ೯೯

೨೦. ರಾವಣನು ಸೀತೆಗೆ ಆಸೆಹುಟ್ಟಿಸುವ ಮಾತುಗಳನ್ನು ಹೇಳಿ ತನ್ನನ್ನು ವರಿಸುವಂತೆ ಪ್ರಾರ್ಥಿಸಿದುದು. ೧೦೨

೨೧. ಸೀತೆಯು ರಾವಣನನ್ನು ಕಣ್ಣೆತ್ತಿಯೂ ನೋಡದೆ, ನಡುವೆ ಒಂದು ಹುಲ್ಲುಕಡ್ಡಿಯನ್ನಿಟ್ಟು, ಅದರೊಡನೆ ಮಾತಾಡುವ ನೆವದಿಂದ ರಾವಣನಿಗೆ ಪ್ರತ್ಯುತ್ತರವನ್ನು ಹೇಳಿ, ಅವನಿಗೆ ಕೆಲವು ಬುದ್ಧಿವಾದಗಳನ್ನೂ ಹೇಳಿದುದು. ೧೦೮

೨೨. ರಾವಣನು ಸೀತೆಯ ಮಾತನ್ನು ಕೇಳಿ ಕೋಪಗೊಂಡು, ಅವಳಿಗೆ ಎರಡು ತಿಂಗಳ ಅವಧಿಯನ್ನು ಸೂಚಿಸಿ, ಅಷ್ಟರಲ್ಲಿಯೂ ತನ್ನ ದಾರಿಗೆ ಬಾರದಿದ್ದರೆ ಅವಳನ್ನು ಭಕ್ಷಿಸುವುದಾಗಿ ಹೆದರಿಸಿದುದು. ಸೀತೆಯು ಪ್ರತ್ಯುತ್ತರವು. ರಾವಣನು ಸೀತೆಯನ್ನು ವಶೀಕರಿಸು

ವಂತೆ ಅಲ್ಲಿನ ರಾಕ್ಷಸಸ್ತ್ರೀಯರುಗಳಿಗೆ ನಿಯಮಿಸಿ, ತನ್ನ ಅಂತಃಪುರಕ್ಕೆ ಹಿಂತಿರುಗಿದುದು. ೧೩೦

೩೬. ರಾಘವನು ಅತ್ತಲಾಗಿ ಹೋದಮೇಲೆ ಇತ್ತಲಾಗಿ ರಾಕ್ಷಸಸ್ತ್ರೀಯರು ಸೀತೆಯನ್ನು ಹೆದರಿಸಿದುದು. ೧೩೫

೩೭. ರಾಕ್ಷಸಸ್ತ್ರೀಯರು ತಿರುಗಿ ಸೀತೆಯನ್ನು ನಿರ್ಬಂಧಿಸಿದುದು. ಸೀತೆಯು ರೋದನವು. ೧೪೯

೩೮. ಸೀತೆಯು ರಾಕ್ಷಸಿಯರ ಹಿಂಸೆಯನ್ನು ತಡೆಯಲಾರದೆ ವಿಲಪಿಸಿದುದು. ೧೪೫

೩೯. ಸೀತೆಯು ನಾನಾವಿಧದಲ್ಲಿ ದುಃಖಿಸಿ, ಆ ರಾಕ್ಷಸಿಯರ ಮುಂದೆ ತಾನೇ ಪ್ರಾಣವನ್ನು ಬಿಡುವುದಾಗಿ ಹೇಳಿದುದು. ೧೬೬

೪೬. ತ್ರಿಜಟೆಯು ತನ್ನ ಸ್ವಪ್ನವೃತ್ತಾಂತವನ್ನು ರಾಕ್ಷಸಸ್ತ್ರೀಯರಿಗೆ ತಿಳಿಸಿದುದು. ೧೭೩

೪೮. ಸೀತೆಯು ರಾಕ್ಷಸಿಯರ ಹಾವಳಿಯನ್ನು ತಡೆಯಲಾರದೆ ಪರಮ ದುಃಖಿತೆಯಾಗಿ, ತನ್ನ ಜಡೆಯನ್ನು ಕೊರಲಿಗೆ ಸುತ್ತಿಕೊಂಡು ನೇಣುಹಾಕಿಕೊಳ್ಳುವುದಕ್ಕೆ ಯತ್ನಿಸಿದುದು. ಇಷ್ಟರಲ್ಲಿ ಅವಳಿಗೆ ಶುಭಶಕುನಮಿತ್ರಗಳು ತೋರಿದುದು. ೧೮೦

೪೯. ಸೀತೆಗೆ ಶುಭಶಕುನಮಿತ್ರಗಳು ತೋರಿದುದು. ೧೯೫

೫೦. ಶಿಂಶುಪಾವೃಕ್ಷದ ಮೇಲೆ ಕುಳಿತಿದ್ದ ಹನುಮಂತನು, ಆಗಲೇ ತಾನು ಕೆಳಗಿಳಿದು ಬಂದು, ತಾನೇ ಸೀತೆಯನ್ನು ಸಮಾಧಾನ ಪಡಿಸುವ ವಿಷಯದಲ್ಲಿ ಔಚಿತ್ಯಾನೌಚಿತ್ಯಗಳನ್ನು ವಿಚಾರಿಸಿದುದು. ೨೦೫

೫೧. ಹನುಮಂತನು ಶಿಂಶುಪಾವೃಕ್ಷದಲ್ಲಿ ಕುಳಿತಿರುವಾಗಲೇ, ಸೀತೆಯು ಕವಿಗೆ ಬೀಳುವಂತೆ ರಾಮನ ವೃತ್ತಾಂತವನ್ನು ಹೇಳುತ್ತಿದ್ದುದು. ಸೀತೆಯು ತಲೆಯೆತ್ತಿ ಮೇಲೆ ನೋಡಿದುದು. ೨೬೦

೫೨. ಸೀತೆಯು ಮರದ ಮೇಲಿದ್ದ ಹನುಮಂತನನ್ನು ನೋಡಿ ಭಯಪಟ್ಟು, ದುಸ್ವಪ್ನವೆಂದು ಭ್ರಮಿಸಿ, ಆ ವೃತ್ತಾಂತವೆಲ್ಲವೂ ಸತ್ಯವಾಗಿರಲೆಂದು ದೇವತಾಪ್ರಾರ್ಥನೆಯನ್ನು ಮಾಡಿದುದು. ೨೬೬

೫೩. ಹನುಮಂತನು ಕೆಳಗಿಳಿದು ಸೀತೆಗೆ ಕೈಮುಗಿದು ನಿಂತು ಏನೂ ತಿಳಿಯದವನಂತೆ ಅಳೆಯನ್ನು ಕುರಿತು ಅವಳ ಪೂರ್ವೋತ್ತರಗಳನ್ನು

ಪಡಿಸಿದುದು. ಸೀತೆಯು ತನ್ನ ಪೂರ್ವವೃತ್ತಾಂತವನ್ನು ಹನುಮಂತನಲ್ಲಿ ಹೇಳಿಕೊಂಡುದು. ೧೫೫

೪೪. ಹನುಮಂತನು ಸೀತೆಗೆ ರಾಮಲಕ್ಷ್ಮಣರ ಕ್ಷೇಮವನ್ನು ಹೇಳಿ, ಅವಳನ್ನು ಸಂತೋಷಪಡಿಸಲು, ಅಕೆಗೂ ಇವನಲ್ಲಿ ನಂಬಿಕೆ ಹುಟ್ಟಿ, ಸನಿಹಕ್ಕೆ ಕರೆಸಿಕೊಂಡುದು. ತರುವಾಯ ಅವನನ್ನು ರಾವಣನೆಂದು ಭ್ರಮಿಸಿ, ಆ ಭ್ರಮೆಯನ್ನು ಪರಿಹರಿಸಿಕೊಳ್ಳುವುದಕ್ಕಾಗಿ, ರಾಮನಲ್ಲಿರುವ ಅಸಾಧಾರಣ ಗುಣಗಳನ್ನು ಹೇಳೆಂದು ಕೇಳಲು, ಹನುಮಂತನು ರಾಮಗುಣಗಳನ್ನು ಪರ್ಣಿಸಿದುದು. ೧೫೯

೪೫. ಸೀತೆಯು ತನಗೆ ನಂಬಿಕೆ ಹುಟ್ಟುವುದಕ್ಕಾಗಿ ಹನುಮಂತನನ್ನು ಕುರಿತು ರಾಮನ ಗುಣಲಕ್ಷಣಾವಿಗಳನ್ನು ಕೇಳಿದುದು. ಹನುಮಂತನು ಅವೆಲ್ಲವನ್ನೂ ತಿಳಿಸಿ ಸೀತೆಯನ್ನು ಸನ್ನಾಹನ ಪಡಿಸಿದುದು. ೧೬೨

೪೬. ಹನುಮಂತನು ಸೀತೆಗೆ ರಾಮನ ಉಂಗುರವನ್ನು ಕೊಟ್ಟುದು, ಸೀತೆಯು ತನ್ನನ್ನು ರಾಮನು ಇದುವರೆಗೂ ಬಿಡಿಸಿಕೊಂಡು ಹೋಗದುದಕ್ಕೆ ಕಾರಣವೇನೆಂದು ಕೇಳಲು, ಹನುಮಂತನು ಅದಕ್ಕೆ ತಕ್ಕ ಕಾರಣವನ್ನು ಹೇಳಿದುದು. ೧೬೯

೪೭. ಸೀತೆಯು ತನಗೆ ರಾವಣನು ಹೇಳಿರುವ ಎರಡು ಸಿಂಗಳ ಗಡುವನ್ನು ಹನುಮಂತನಿಗೆ ತಿಳಿಸಿದುದು. ಹನುಮಂತನು ತನ್ನ ಭುಜದ ಮೇಲೇರಿ ರಾವಣನ ಬಳಿಗೆ ಬರುವಂತೆ ಸೀತೆಯನ್ನು ಕೇಳಲು, ಸೀತೆಯು ರಾಮನೇ ಇಲ್ಲಿಗೆ ಬಂದು ರಾವಣನನ್ನು ಕೊಂದು, ತನ್ನನ್ನು ಕರೆದುಕೊಂಡು ಹೋಗುವುದು ಉಚಿತವೆಂದು ಹೇಳಿದುದು. ೧೭೬

೪೮. ರಾಮನ ನಂಬಿಕೆಗಾಗಿ ಒಂದು ಗುರುತನ್ನು ಕೊಡಬೇಕೆಂದು ಹನುಮಂತನು ಸೀತೆಯನ್ನು ಕೇಳಿದುದು. ಸೀತೆಯು ಕಾಕಾಸುರ ವೃತ್ತಾಂತವನ್ನು ಹೇಳಿ, ಚೂಡಾಮಣಿಯನ್ನು ಕೊಟ್ಟುದು. ೧೮೫

೪೯. ರಾಮಲಕ್ಷ್ಮಣರಾಗಲಿ, ಇತರ ವಾನರರಾಗಲಿ ಈ ಮಹಾಸಮುದ್ರವನ್ನು ಹೇಗೆ ದಾಟಿ ಬರಬಲ್ಲರೆಂದು ಸೀತೆಯು ಆಂಜನೇಯನನ್ನು

ಕೇಳಲು, ಆಂಜನೇಯನು ಅಳಿಗೆ ವಾನರರ ಪ್ರಭಾವವನ್ನು ತಿಳಿಸಿ, ಕೊನೆಗೆ ತಾನೇ ಆ ರಾಮಲಕ್ಷ್ಮಣರನ್ನು ಭುಜದ ಮೇಲೇರಿಸಿಕೊಂಡಾದರೂ ಬಂದು ರಾವಣನನ್ನು ಕೊಲ್ಲಿಸಿ, ಅಳೆಯನ್ನು ಕರೆದುಕೊಂಡು ಹೋಗುವುದಾಗಿ ಸಮಾಧಾನ ಹೇಳಿದುದು. ೨೦೯

೪೦ ಸೀತೆಯು ಹನುಮಂತನ ಮಾತಿನಿಂದ ಸಮಾಧಾನವನ್ನು ಹೊಂದಿ, ಮತ್ತೊಂದು ಗುರುತನ್ನು ರಾಮನಿಗೆ ಹೇಳಿ ಕಳುಹಿಸಿದುದು. ಹನುಮಂತನು ಸೀತೆಯ ಅನುಮತಿಯನ್ನು ಹೊಂದಿ, ಮುಂದಿನ ಕಾರ್ಯಕ್ಕೆ ಆಲೋಚಿಸಿದುದು. ೨೨೫

೪೧. ಹನುಮಂತನು ಸೀತೆಯ ಅನುಜ್ಞೆಯನ್ನು ಪಡೆದು, ಅಶೋಕವನವನ್ನು ಭಂಗಪಡಿಸಿದುದು. ೨೩೮

೪೨. ಅಶೋಕವನಕ್ಕುಂಟಾದ ಭಂಗವನ್ನು ನೋಡಿ, ಅಲ್ಲಿದ್ದ ರಾಕ್ಷಸಸ್ತ್ರೀಯರು ಭಯಗೊಂಡು, ಸೀತೆಯನ್ನು ನೋಡಿ ಹನುಮಂತನಾರೆಂದು ಪ್ರಶ್ನೆ ಮಾಡಿದುದು. ಸೀತೆಯು ತನಗೇನೂ ತಿಳಿಯದೆಂದು ಪ್ರತ್ಯುತ್ತರವನ್ನು ಹೇಳಲು, ರಾಕ್ಷಸಿಯರು ಈ ಸಂಗತಿಯನ್ನು ರಾವಣನಿಗೆ ತಿಳಿಸಿದುದು. ರಾವಣನು ಕಳುಹಿಸಿದ ರಾಕ್ಷಸಸೈನ್ಯವೆಲ್ಲವನ್ನೂ ಹನುಮಂತನು ಕೊಂದುಹಾಕಿದುದು. ೨೪೦

೪೩. ಹನುಮಂತನು ಕೋಟೆಯ ಹೊರಬಾಗಿಲನ್ನು ಬಿಟ್ಟು, ಅಲ್ಲಿನ ಚೈತ್ಯ ಪ್ರಾಸಾದವನ್ನೇರಿ ಆವನ್ನು ಮುರಿದು ಅಲ್ಲಿನ ರಾಕ್ಷಸರನ್ನೂ ಧ್ವಂಸಮಾಡಿದುದು. ೨೪೬

೪೪. ರಾವಣನ ಪ್ರೇರಣೆಯಿಂದ ಬಂದ ಪ್ರಹಸ್ತಪುತ್ರನಿಂದ ಜಂಬುಮಾಲಿಯೆಂಬವನು ಹನುಮಂತನಿಂದ ಹತನಾದುದು. ೨೫೪

೪೫. ಹನುಮಂತನು ತನ್ನ ಮೇಲೆ ಯುದ್ಧಕ್ಕೆ ಬಂದ ಸಚಿವಮಂತ್ರಿಕುಮಾರರನ್ನೂ ಕೊಂದುದು. ೨೬೧

೪೬. ಹನುಮಂತನು ವಿರೂಪಾಕ್ಷನೇ ಮೊದಲಾದ ಐದುಮಂದಿ ಸೇನಾಧಿಪತಿಗಳನ್ನು ಕೊಂದುದು. ೨೬೫

೪೭. ಹನುಮಂತನು ಅಕ್ಷಕುಮಾರನನ್ನು ಕೊಂದುದು. ೨೭೭

೪೮. ರಾವಣನು ಇಂದ್ರಜಿತ್ತಿಗೆ ನಯವಾಕ್ಯವನ್ನು ಹೇಳಿ ಹನುಮಂತನ ಮೇಲೆ ಯುದ್ಧಕ್ಕೆ ಕಳುಹಿಸಿದುದು. ಇಂದ್ರಜಿತ್ತು ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿ ರಾವಣನ ಬಳಿಗೆ ತಂದುದು. ೨೮೨

೪೯. ಹನುಮಂತನು ರಾವಣನನ್ನು ನೋಡಿ, ಅವನ ತೇಜೋವಿತೇಷಕ್ಕಾಗಿ ಆಶ್ಚರ್ಯಗೊಂಡುದು. ೩೫೦

೫೦. ಹನುಮಂತನು ರಾವಣನೊಡನೆ ಸಂಭಾಷಿಸಿದುದು. ೩೫೨

೫೧. ಹನುಮಂತನು ರಾಮನ ವನವಾಸವೇ ಮೊದಲಾಗಿ, ತಾನು ಲಂಕೆಗೆ ಬಂದವರೆಗಿನ ವೃತ್ತಾಂತವನ್ನು ತಿಳಿಸಿ, ಸೀತೆಯನ್ನು ರಾಮನಿಗೊಪ್ಪಿಸಿಬಿಡುವಂತೆ ರಾವಣನಿಗೆ ಹಿತೋಪದೇಶವನ್ನೂ ಹೇಳಿದುದು. ೩೫೪

೫೨. ವಿಭೀಷಣನು ದೂತಕಾರ್ಯಕ್ಕಾಗಿ ಬಂದವರನ್ನು ಕೊಲ್ಲುವುದು ರಾಜಧರ್ಮಕ್ಕೆ ವಿರುದ್ಧವೆಂದು ರಾವಣನಿಗೆ ಬುದ್ಧಿವಾದವನ್ನು ಹೇಳಿ ತಡೆದುದು. ೩೬೨

೫೩. ರಾವಣಾಜ್ಞೆಯಿಂದ ರಾಕ್ಷಸರು ಹನುಮಂತನ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ, ಲಂಕೆಯ ಬೀದಿಗಳಲ್ಲಿ ಸುತ್ತಿಸಿದುದು, ಇದನ್ನು ತಿಳಿದು ಸೀತೆಯು ಅಗ್ನಿದೇವನನ್ನು ಪ್ರಾರ್ಥಿಸಲು, ಅಗ್ನಿಯು ಹನುಮಂತನ ಬಾಲವನ್ನು ನುಡದೆ ಶೀತಲನಾಗಿದ್ದುದು. ೧೬೭

೫೪. ಹನುಮಂತನು ತನ್ನ ಬಾಲಾಗ್ನಿಯಿಂದ ಲಂಕೆಯಲ್ಲಿ ವಿಭೀಷಣಗೃಹವೊಂದನ್ನು ಬಿಟ್ಟು ಉಳಿದ ರಾಕ್ಷಸಗೃಹಗಳೆಲ್ಲವನ್ನೂ ಸುಟ್ಟುದು. ೩೭೨

೫೫. ಹನುಮಂತನು ಸಮುದ್ರದಲ್ಲಿ ತನ್ನ ಬಾಲವನ್ನದ್ದಿ ಬೆಂಕಿಯನ್ನಾರಿಸಿದಮೇಲೆ, ಅವನಿಗೆ ಸೀತೆಯ ಸ್ಮರಣೆಯು ಬಂದು, ಸೀತೆಯೇನಾದಳೋ ಎಂದು ಭಯದಿಂದ ಚಿಂತಿಸಿದುದು. ಅಮೇಲೆ ಚಾರಣರ ವಾಕ್ಯದಿಂದ ಅವಳ ಕ್ಷೇಮವನ್ನು ತಿಳಿದು, ಆಕೆಯನ್ನು ತಿರುಗಿ ನೋಡಿಬರಲು ಪ್ರಯಾಣಸನ್ನದ್ಧನಾದುದು. ೩೮೮

೫೬. ಹನುಮಂತನು ಸೀತೆಯನ್ನು ಕಂಡು, ಅವಳ ಅನುಜ್ಞೆಯನ್ನು ಪಡೆದು, ಅರಿಷ್ಟಪರ್ವತವನ್ನೇರಿ ಸಮುದ್ರಲಂಘನಕ್ಕಾಗಿ ಉದ್ಯೋಗಿಸಿದುದು. ೩೯೨

೫೭. ಹನುಮಂತನು ಸಮುದ್ರವನ್ನು ದಾಟಿ ಉತ್ತರತೀರವನ್ನು ಸೇರಿದುದು. ಅಲ್ಲಿ ಜಾಂಬವದಾದಿಗಳು ಅತ್ಯಾತುರದಿಂದ ಲಂಕೆಯ ವೃತ್ತಾಂತವನ್ನು ವಿಚಾರಿಸಿದುದು. ೪೦೫

೫೮. ಹನುಮಂತನು ತಾನು ಲಂಕೆಗೆ ಹೋಗಿಬಂದ ವೃತ್ತಾಂತಗಳೆಲ್ಲವನ್ನೂ ವಾನರರಿಗೆ ವಿವರಿಸಿ ತಿಳಿಸಿದುದು. ೪೨೦

೫೯. ಹನುಮಂತನು ತಿರುಗಿ ಲಂಕೆಯ ವೃತ್ತಾಂತವನ್ನಾರಂಭಿಸಿ, ತನ್ನ ಸಾಮರ್ಥ್ಯವನ್ನು ಹೇಳಿಕೊಂಡುದು. ೪೨೬

೬೦. ಅಂಗದನೂ ಹನುಮಂತನ ಮಾತನ್ನನುಮೋದಿಸಿ, ತಾನೇ ಸೀತೆಯನ್ನು ಕರೆತಂದು ರಾಮನಬಳಿಗೆ ಸೇರಿಸಬೇಕೆಂದು ಹೇಳಲು, ಜಾಂಬವಂತನು ಅವನ ಮಾತವನ್ನು ನಿವಾರಿಸಿ ಸಮಾಧಾನ ಹೇಳಿದುದು. ೪೩೦

೬೧. ಹನುಮದಾದಿ ವಾನರರೆಲ್ಲರೂ, ಹಿಂತಿರುಗಿ ರಾಮನ ಬಳಿಗೆ ಪ್ರಯಾಣ ಹೊರಟು, ಸಡುದಾರಿಯಲ್ಲಿ ಮಧುವನವನ್ನು ಪ್ರವೇಶಿಸಿ, ಅಲ್ಲಿ ಅಂಗದನ ಅನುಮತಿಯಿಂದ ಜೇನನ್ನು ಕುಡಿಯುತ್ತಿರಲು, ಅಲ್ಲಿ ಕಾವಲಿದ್ದ ದಧಿಮುಖನು ಅವರನ್ನು ಆಕ್ಷೇಪಿಸಿ ತಡೆದುದು. ೪೩೫

೬೨. ದಧಿಮುಖನಿಂದ ನಿವಾರಿತರಾದ ವಾನರರನ್ನು, ಹನುಮಂತನೂ, ಅಂಗದನೂ ಮತ್ತಷ್ಟು ಪ್ರೋತ್ಸಾಹಿಸಿದುದು. ದಧಿಮುಖನು ವಾನರರ ಪ್ರಹಾರದಿಂದ ನೊಂದು ಸುಗ್ರೀವನ ಬಳಿಗೆ ಹೋದುದು. ೪೩೯

೬೩. ದಧಿಮುಖನು ಸುಗ್ರೀವನೊಡನೆ ಮಧುವನಭಂಗವನ್ನು ಹೇಳಲು, ಅಂಗದಾದಿವಾನರರೇ ಸೀತೆಯನ್ನು ನೋಡಿ ಬಂದ ಸಂತೋಷದಿಂದ ಹಾಗೆ ಮಾಡಿರಬಹುದೆಂದು ಸುಗ್ರೀವನು ಲಕ್ಷ್ಮಣನಿಗೆ ತಿಳಿಸಿ, ಅವರನ್ನು ಬೇಗನೆ ಕರೆತರುವಂತೆ ದಧಿಮುಖನನ್ನು ಕಳುಹಿಸಿದುದು. ೪೪೭

೬೪. ದಧಿಮುಖನು ಅಂಗದಾದಿಗಳನ್ನು ಸುಗ್ರೀವನಬಳಿಗೆ ಕರೆತಂದುದು. ಹನುಮಂತನು ಸೀತೆಯನ್ನು ನೋಡಿಬಂದ ಸಂಗತಿಯನ್ನು ರಾಮನಿಗೆ ತಿಳಿಸಿದುದು. ೪೫೪

೬೫. ಹನುಮಂತನು ರಾಮನ ಸನ್ನಿಧಿಯಲ್ಲಿ ಸೀತಾವೃತ್ತಾಂತವೆಲ್ಲವನ್ನೂ ತಿಳಿಸಿ ಚೂಡಾಮಣಿಯನ್ನು ಕೊಟ್ಟನು. ೬೪೪

೬೬. ರಾಮನು ಚೂಡಾಮಣಿಯನ್ನು ನೋಡಿ ದುಃಖಿಸುತ್ತ ತಿರುಗಿ ಸೀತಾವೃತ್ತಾಂತವನ್ನು ಇನ್ನೂ ವಿಸ್ತಾರವಾಗಿ ತಿಳಿಸುವಂತೆ ಹನುಮಂತನನ್ನು ಕೇಳಿದುದು. ೬೪೬

೬೭. ಹನುಮಂತನು ಸೀತೆಯ ಸಂದೇಶವನ್ನು ಸವಿಸ್ತರವಾಗಿ ರಾಮನಿಗೆ ತಿಳಿಸಿದುದು. ೬೪೭

೬೮. ಹನುಮಂತನು ತಾನು ಸೀತೆಗೆ ಹೇಳಿದ ಇನ್ನೂ ಕೆಲವು ಸಮಾಚಾರಗಳನ್ನೂ ರಾಮನಿಗೆ ತಿಳಿಸಿ, ಸೀತೆಯು ಕ್ಷೇಮವನ್ನೂ ತಿಳಿಸಿದುದು. ೬೪೯

ಸುಂದರಕಾಂಡದ ಪಟಗಳ ಪಟ್ಟಿ.

ಹನುಮಂತನು ಸಮುದ್ರನನ್ನು ಲಂಘಿಸಿದುದು. ೮

ಸಮುದ್ರವಧ್ಯದಿಂದ ಮೈನಾಕಪರ್ವತವು ಮೇಲೆದ್ದು ನಿಂದು ಹನುಮಂತನಿಗೆ ಕಾಣಿಸಿಕೊಂಡುದು ೧೨

ಲಂಕಾಧಿದೇವತೆಯು ಲಂಕೆಯ ಬಾಗಿಲಲ್ಲಿ ಹನುಮಂತನನ್ನು ತಡೆದು ಇವನಿಂದ ಪರಾಜಿತಳಾದುದು. ೨೮

ಹನುಮಂತನು ರಾವಣನ ಅಂತಃಪುರದಲ್ಲಿ ಪ್ರವೇಶಿಸಿ ಸೀತೆಯನ್ನು ಹುಡುಕಿದುದು. ೩೩

ಹನುಮಂತನು ಶಿಂಶುಪಾವೃಕ್ಷದ ಮೇಲೆ ಮರೆಯಾಗಿ ಕುಳಿತಿದ್ದುದು. ರಾವಣನು ಧಾನ್ಯಮಾಲಿನಿಯೊಡನೆ ಬಂದು ಸೀತೆಯನ್ನು ಪ್ರಾರ್ಥಿಸಿದುದು. ೩೭

ರಾಕ್ಷಸಿಯರ ಬಾಧೆಯನ್ನು ತಡೆಯಲಾರದೆ ಸೀತೆಯು ಕೂದಲನ್ನು ಕೊರಳಿಗೆ ಸುತ್ತಿಕೊಂಡು ಪ್ರಾಣತ್ಯಾಗಕ್ಕೆ ಪ್ರಯತ್ನಿಸಿದುದು. ಇದನ್ನು ನೋಡಿ ಹನುಮಂತನು ಮರದ ಮೇಲಿಂದಲೇ ಶ್ರೀರಾಮ ಗುಣಾದಿಗಳನ್ನು ವರ್ಣಿಸಿದುದು. ೪೧

ರಾಕ್ಷಸಿಯರ ಬಾಧೆಯನ್ನು ತಡೆಯಲಾರದೆ ಸೀತೆಯು, ಕೂದಲನ್ನು ಕೊರಳಿಗೆ ಸುತ್ತಿಕೊಂಡು ಪ್ರಾಣತ್ಯಾಗಕ್ಕೆ ಪ್ರಯತ್ನಿಸಿದುದು. ಹನುಮಂತನು ಮರದ ಮೇಲಿಂದ ಶ್ರೀರಾಮನ ಗುಣಾದಿಗಳನ್ನು ವರ್ಣಿಸಿದುದು. ೪೫

ಹನುಮಂತನು ಸೀತೆಗೆ ತನ್ನ ನಿಜಸ್ವರೂಪವನ್ನು ತೋರಿಸಿದುದು. ೫೬

ಸೀತಾದೇವಿಯು ರಾಮನಿಗೆ ಗುರುತಿಗಾಗಿ ತನ್ನ ಚೂಡಾಮಣಿಯನ್ನು ಹನುಮಂತನ ಕೈಗೆ ಕೊಟ್ಟುದು. ೬೧

ಇಂದ್ರಜಿತ್ತು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಹನುಮಂತನು ಬದ್ಧನಾಗಿದ್ದುದು. ೬೪

ರಾಕ್ಷಸಭಟರು ಹನುಮಂತನನ್ನು ಹಗ್ಗಗಳಿಂದ ಬಿಗಿದುತಂದು ರಾವಣನಮುಂದೆ ನಿಲ್ಲಿಸಿದುದು. ರಾವಣನು ಅವನನ್ನು ಕೊಲ್ಲುವಂತೆ ಆಜ್ಞೆಮಾಡಿದುದು. ೨೬೪

ಹನುಮಂತನು ತನ್ನ ವಾಲಾಗ್ನಿಯಿಂದ ಲಂಕೆಯನ್ನು ಸುಟ್ಟುದು. ೨೭೪

ಹನುಮಂತನು ತನ್ನ ಬಾಲವನ್ನು ಸಮುದ್ರದಲ್ಲಿ ಅದ್ದಿ ಬೆಂಕಿಯನ್ನಾರಿಸಿದಮೇಲೆ, ಸೀತೆಯೇನಾದಳೋ ಎಂದು ಚಿಂತಿಸುತ್ತಿದ್ದುದು ೨೭೫

ಜಾಂಬವಂತನು ಹನುಮಂತನನ್ನು ಕುರಿತು ಲಂಕೆಯ ವೃತ್ತಾಂತವೇನೆಂದು ಕೇಳಿ ಮಾಡಿದನು. ಹನುಮಂತನು ಅಲ್ಲಿನ ವೃತ್ತಾಂತವನ್ನು ತಿಳಿಸಿದುದು. ೨೮೦

ಅಂಗದಾದಿಗಳು ಮಧುವನವನ್ನೆನುಗ್ಗಿ, ಅಲ್ಲಿ ಮಧುಪಾನಮಾಡಿದುದು. ೨೮೦

ದಧಿಮುಖನು ಸುಗ್ರೀವನೊತನೆ ಅಂಗದಾದಿಗಳ ಮೇಲೆ ದೂರು ಹೇಳಿದುದು. ದುಃಖಿತನಾದ ದಧಿಮುಖನನ್ನು ಸುಗ್ರೀವನು ಸಮಾಧಾನಪಡಿಸಿದುದು. ೨೮೫

ಹನುಮಂತನು ರಾಮನನ್ನು ಭಿಮುಲ್ಲಿ ಸೀತಾವೃತ್ತಾಂತವೆಲ್ಲವನ್ನೂ ತಿಳಿಸಿ ಚೂಡಾಮಣಿಯನ್ನೊಪ್ಪಿಸಿದುದು. ೨೯೫

ಶ್ರೀ ರ ಸ್ತು.

ಶ್ರೀ ಸೀತಾಲಕ್ಷ್ಮಣಸಮೇತ ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ಅವತಾರಿಕೆ

ರಾಮಾಯಣದ ಇತರಕಾಂಡಗಳೆಲ್ಲವೂ ಅಯೋಧ್ಯಾಕಥಾಸಂದರ್ಭಗಳನ್ನನುಸರಿಸಿ ಅನ್ವರ್ಥನಾಮದಿಂದಿರುವಾಗ, ಈ ಸುಂದರಕಾಂಡಕ್ಕೆ ಮಾತ್ರ ಈ ಹೆಸರು ಬರುವುದಕ್ಕೆ ಕಾರಣವೇನೆಂಬ ಶಂಕೆಯುಂಟಾಗಬಹುದು. ಕೆಲವರು ಸುಂದರ ಶಬ್ದವು ಕಪಿನಾಮಕವೆಂದೂ, ಇಲ್ಲಿ ಆಂಜನೇಯನ ಚರಿತ್ರೆಯೇ ಪ್ರಧಾನವಾದುದರಿಂದ ಇದಕ್ಕೆ ಸುಂದರಕಾಂಡವೆಂಬ ಹೆಸರು ಬಂದುದಾಗಿಯೂ ಹೇಳುವರು. ಮತ್ತೆ ಕೆಲವರು ಈ ಕಾಂಡದಲ್ಲಿ ಅಲ್ಲಲ್ಲಿ ಆಂಜನೇಯನು, 'ರಾಮಃ ಕಮಲಪತ್ರಾಕ್ಷಃ, ಶ್ಲಕ್ಷ್ಣಶ್ಚಾಪ್ಯಮಿತಪ್ರಭಶ್ಚ' ಇತ್ಯಾದಿ ವಾಕ್ಯಗಳಿಂದ ಶ್ರೀರಾಮಸೌಂದರ್ಯವನ್ನೂ, 'ದುಷ್ಕರಂ ಕುರುತೇ ರಾಮೋ ಹೀನೋ ಯದನಯಾಪ್ರಭುಃ' ಇತ್ಯಾದಿ ವಾಕ್ಯಗಳಿಂದ ಸೀತಾಸೌಂದರ್ಯವನ್ನೂ ವಿಶೇಷವಾಗಿ ವರ್ಣಿಸಿರುವುದರಿಂದ, ಸೌಂದರ್ಯವರ್ಣನಪ್ರಧಾನವಾದ ಈ ಕಾಂಡಕ್ಕೆ ಸುಂದರಕಾಂಡವೆಂಬ ಹೆಸರುಂಟೆಂದು ಹೇಳುವರು. ಇದುವರೆಗೆ ವಿಯೋಗದುಃಖವನುಭವಿಸಿದ್ದ ಸೀತಾರಾಮರಿಬ್ಬರೂ ಅನ್ಯೋನ್ಯಕ್ಷೇಮಲಾಭಗಳನ್ನು ತಿಳಿದು ಸಂತುಷ್ಟರಾದುದರಿಂದ ಇದಕ್ಕೆ ಈ ಹೆಸರು ಬಂದುದಾಗಿ ಬೇರೆ ಕೆಲವರ ಅಭಿಪ್ರಾಯವು. ಹೇಗಿದ್ದರೂ ಶಬ್ದಾರ್ಥರಚನೆಗಳಲ್ಲಿಯೂ, ವರ್ಣನಾಭಾಗಗಳಲ್ಲಿಯೂ, ಕಥಾಭಾಗದಲ್ಲಿಯೂ ಲೋಕರಂಜಕವಾಗಿ, ನಿತ್ಯಪಾರಾಯಣಕ್ಕೆ ಯೋಗ್ಯವಾಗಿ, ಸಂಪೂರ್ಣಸಿದ್ಧಿಪ್ರದವಾಗಿರುವುದರಿಂದ, ಇದಕ್ಕೆ ಸುಂದರಕಾಂಡವೆಂಬ ಹೆಸರು ಸರ್ವತೋಮುಖವಾಗಿ ಅನ್ವರ್ಥವಾಗಿರುವುದರಲ್ಲಿ ಸಂದೇಹವಿಲ್ಲ. ಈ ಕಾಂಡದೊಳಗಣ ಸಾರಾಂಶವೇನೆಂದರೆ :—

ಇದುವರೆಗೆ ಶ್ರೀರಾಮನಲ್ಲಿ ಪರತ್ವಾಸಾಧಾರಣವಾದ ಸಮಸ್ತಕಲ್ಯಾಣಗುಣಾಕರತ್ವವು ನಿರೂಪಿಸಲ್ಪಟ್ಟಿತು. ಈ ಸುಂದರಕಾಂಡದಲ್ಲಿ "ಬ್ರಹ್ಮಾಸ್ವಯಂ ಭೂಶ್ಚತುರಾನನೋವಾ.....ತ್ರಾತುಂ ನಶಕ್ತಾಯುಧಿರಾಮವಧ್ಯಾನ್" ಇತ್ಯಾದಿ ಶ್ಲೋಕಾರ್ಧಗಳಿಂದ ಸರ್ವಸಂಹಾರಕತ್ವವು ಪ್ರತಿಪಾದಿಸಲ್ಪಡುವುದು. ಹಾಗೆಯೇ

ಹಿಂದೆ ಮಿತ್ರರಕ್ಷಣವು ಅವಶ್ಯಕರ್ತವ್ಯವೆಂಬ ನೀತಿಯು ಬೋಧಿಸಲ್ಪಟ್ಟಿರುವುದು. ಈ ಕಾಂಡದಲ್ಲಿ ದೂತಲಕ್ಷಣವೂ, ಪತಿವ್ರತೆಯರ ನಡತೆಯೂ ಬೋಧಿಸಲ್ಪಡುವವು. ಸುಗ್ರೀವನು ಸೀತಾನ್ವೇಷಣಕ್ಕಾಗಿ ಕೋಟ್ಯನುಕೋಟಿ ವಾನರರನ್ನು ನಾನಾದಿಕ್ಕುಗಳಿಗೆ ಕಳುಹಿಸುವಾಗ, "ತದ್ಯಥಾಲಭ್ಯತೇ ಸೀತಾ ತತ್ತ್ವಮೇವೋಪಪಾದಯ" ಎಂದು ಸೀತೆಯನ್ನು ಕಂಡುಹಿಡಿಯಬೇಕಾದ ಕಾರ್ಯಭಾರವೆಲ್ಲವನ್ನೂ ಹನುಮಂತನ ಮೇಲೆಯೇ ಹೊರಿಸಿ, "ತ್ವಯ್ಯೇವ ಹನುಮನ್ನಸ್ತಿ ಬಲಂ ಬುದ್ಧಿಃ ಪರಾಕ್ರಮಃ। ದೇಶಕಾಲಾನುವೃತ್ತಿಶ್ಚ ನಯಶ್ಚಾಪಿ ಪಂಡಿತ" ಎಂದು ಅವನಲ್ಲಿ ಕಾರ್ಯಸಾಧನೆಗೆ ಬೇಕಾದ ಬುದ್ಧಿ ಸಾಹಸಾದಿಸಮಸ್ತಗುಣಗಳನ್ನೂ ಎತ್ತಿ ತೋರಿಸಿರುವನಲ್ಲಜೆ, ಶ್ರೀರಾಮನೂ ತನ್ನ ಕೈಯಲ್ಲಿಯೇ ತಪ್ಪ ಉಂಗುರವನ್ನು ಕೊಟ್ಟು ಕಳುಹಿಸಿದನಷ್ಟೆ? ಸದೆನ್ನನುಸರಿಸಿ ಹನುಮಂತನೂ ಸುರಸೆಯಿನ್ನು ನಿಗ್ರಹಿಸಿದುದು, ಸಿಂಹಿಕೆಯನ್ನು ಸೀಳಿದುದು, ಲಂಕಿಣಿಯನ್ನಡಗಿಸಿದುದು, ಇನೇ ಮೊದಲಾದ ಸಾಹಸಗಳಿಂದ ತನ್ನ ಅಸಾಧಾರಣಬಲವನ್ನೂ, ಲಂಕೆಯಲ್ಲಿ ತಾನು ಏಕಾಕಿಯಾಗಿ ನಿಂತು ಅನೇಕ ಘೋರರಾಕ್ಷಸರನ್ನು ಕೊಂದುದರಿಂದ ತನ್ನ ವೀರ್ಯವನ್ನೂ ತೋರ್ಪಡಿಸಿದನು. ಮತ್ತು ಇಂದ್ರಜಿತ್ತಿನ ಬ್ರಹ್ಮಾಸ್ತ್ರವು ತನ್ನನ್ನು ಬಿಟ್ಟುಹೋದರೂ ಹಗ್ಗಗಳಲ್ಲಿ ಕಟ್ಟಿಬಿದ್ದವನಂತೆ ನಟಿಸುತ್ತ, ಆ ರಾಕ್ಷಸರ ಸಹಾಯದಿಂದಲೇ ರಾವಣನ ಸಭಾಸ್ಥಾನಕ್ಕೆ ಪ್ರವೇಶಿಸಿ ಅವನೊಡನೆ ಸಂಭಾಷಿಸಿ ಬಂದುದೂ, ರಾಕ್ಷಸರು ತನ್ನ ಬಾಲಕ್ಕೆ ಬೆಂಕಿಯಿಟ್ಟು ಹತ್ತಿಸಿರುವಾಗಲೂ, ಲಂಕೆಯ ದುರ್ಗರಹಸ್ಯಾದಿಗಳನ್ನು ನೋಡಿ ಬರಬೇಕೆಂಬ ಕೋರಿಕೆಯಿಂದ, ಮಾನಾವಮಾನಗಳನ್ನೂ ಲಕ್ಷಿಸಿಕೊಸದೆ ಬಾಲದ ಬೆಂಕಿಯೊಡನೆ ಲಂಕೆಯ ಬೀದಿಬೀದಿಗಳಲ್ಲಿ ಮೆಗವಣಿಗೆ ಬಂದುದೂ, ತನ್ನ ಬಾಲವನ್ನು ಸುಡುವುದಕ್ಕಾಗಿ ಹತ್ತಿಸಿದ ಬೆಂಕಿಯಿಂದಲೇ ಲಂಕೆಯನ್ನು ಸುಟ್ಟುದೂ, ಇವೆಲ್ಲವೂ ಅವನ ಕಾಲೋಚಿತಪ್ರತಿಭೆಯನ್ನೂ, ಅವನ ದೇಶಕಾಲಾನುವರ್ತನವನ್ನೂ ವ್ಯಕ್ತಪಡಿಸುವುವು. ಮತ್ತು ಇವನು, "ಭೂತಾಶ್ಚಾರ್ಥಾವಿಷದ್ಯಂತೇ ದೇಶಕಾಲವಿರೋಧಿತಾಃ। ವಿಕ್ಲಬಂ ದೂತಮಾಸಾದ್ಯ" ಎಂದು ಹೀನದೂತರಲ್ಲಿರತಕ್ಕ ದೋಷಗಳಿಗೂ, "ಕಾರ್ಯೇ ಕರ್ಮಣಿ ನಿರ್ದಿಷ್ಟೇ ಯೋ ಬಹೂನ್ಯಪಿ ಸಾಧಯೇತ್। ಪೂರ್ವಕಾಲಾವಿರೋಧೇನ ಸಕಾರ್ಯಂ ಕರ್ತುಮರ್ಹತಿ" ಎಂದು ಉತ್ತಮದೂತರ ಗುಣಗಳಿಗೂ ತಾರತಮ್ಯವನ್ನು ವಿಮರ್ಶಿಸಿರುವುದರಿಂದ, ಆತನ ಮಂತ್ರಪ್ರಾಢಿಮೆಯು ವ್ಯಕ್ತವಾಗುವುದು. ಸೀತೆಯನ್ನು ಮಾತಾಡಿ ಬಂದಮೇಲೆ ರಾವಣನನ್ನು ನೋಡಿಬರಬೇಕೆಂಬ ಕಾರ್ಯಶೇಷವನ್ನು ಕುರಿತು ವಿಚಾರಿಸುವಾಗ "ತ್ರೀನುಪಾಯಾನತಿಕ್ರಮ್ಯ ಚತುರ್ಥ ಇಹಲಕ್ಷ್ಯತೇ। ನ ಸಾಮರಕ್ಷಸ್ಸು ಗುಣಾಯ

ಕಲ್ಪತೇ' ಇತ್ಯಾದಿ ವಾಕ್ಯಗಳಿಂದ ಶತ್ರುಸಾಧನೋಪಾಯವನ್ನು ಚಿಂತಿಸಿರುವುದರಿಂದ ಅವನ ರಾಜನೀತಿನೈಪುಣ್ಯವು ಪ್ರಕಟವಾಗುವುದು. ಅನೇಕ ಘೋರರಾಕ್ಷಸರ ನಡುವೆ ಸಿಕ್ಕಿಬಿದ್ದಿರುವಾಗಲೂ ಸ್ವಲ್ಪವಾದರೂ ಎದೆಗುಂದದೆ ಅವರಮುಂದೆ ನಿಂತು, 'ಜಯತ್ಯತಿಬಲೋ ರಾಮೋ' ಎಂದಾರಂಭಿಸಿ, 'ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ। ಹನುಮಾನ್ ಶತ್ರುಸೈನ್ಯಾನಾಂ ನಿಶುಂಭಾ ಮಾರುತಾತ್ಮಜಃ' ಎಂದು ಶತ್ರುತಿರಸ್ಕಾರಪೂರ್ವಕವಾಗಿ, ತನ್ನ ನಾಮಪಿತೃಮಾತೃಗಳನ್ನು ದ್ಯೋತಿಸಿ ಧೈರ್ಯಗುಣವನ್ನು ತಾನೆಸಿರುವನು. ಇವುಗಳಿಂದ ದೂತರಿಗಿರಬೇಕಾದ ಬುದ್ಧಿಸಾಹಸಾದಿಗುಣಗಳು ಬೋಧಿತವಾಗುವುವು.

ಇದರಂತೆಯೇ ಇಲ್ಲಿ ಸೀತೆಯು ಶೀಲಸ್ವಭಾವಾದಿಗಳೂ ಸ್ತ್ರೀಯರಿಗೆ ಪಾತಿವ್ರತ್ಯಾದಿಗಳನ್ನು ಬೋಧಿಸುವುದು. ರಾಕ್ಷಸಜಕ್ರನರ್ತಿಯಾದ ರಾವಣನೇ ತನ್ನಿದಿರಾಗಿಬಂದು ಕಲಿಬಿಗ್ಗನಮಸ್ಕರಿಸಿ, ತನ್ನ ಸರ್ವೈಶ್ವರ್ಯವನ್ನೂ ಕೊಡುವುದಾಗಿ ಆಸೆತೋರಿಸಿದರೂ, ಸೀತೆಯು ಅತನನ್ನು ಕಣ್ಣೆತ್ತಿಯೂ ನೋಡದೆ "ತೃಣಮಂತರತಃ ಕೃತ್ವಾ" ಎಂಬಂತೆ ನಡುವೆ ಹುಲ್ಲನ್ನು ಹಾಕಿ, ಆ ರಾವಣನನ್ನು ಕೃಣಕ್ಕಿಂತಲೂ ಕಡೆಯಾಗಿ ಭಾವಿಸಿ ತಿರಸ್ಕರಿಸಿದುದರಿಂದ ಪಾತಿವ್ರತ್ಯವನ್ನು ತೋರಿಸಿರುವಳು. ತನ್ನಲ್ಲಿ ಮಹಾಪರಾಧಿಯೆಂದ ಆ ರಾವಣನಲ್ಲಿಯೂ ಮರುಕಗೊಂಡು ಅವನನ್ನುದ್ಧರಿಸುವುದಕ್ಕಾಗಿ "ತೇನಮೈತ್ರೀ ಭವತು ತೇ ಯದಿ ಜೀವಿತುಮಿಚ್ಛಸಿ" ಇತ್ಯಾದಿವಾಕ್ಯಗಳಿಂದ ಹಿತೋಪದೇಶವನ್ನು ಮಾಡಿ ದಯಾಸ್ವಭಾವವನ್ನು ತೋರಿಸಿರುವಳು! ಆ ರಾಕ್ಷಸನು ಕ್ರೂರವಾಕ್ಯಗಳಿಂದ ಹೆದರಿಸುವಾಗಲೂ, ಅವನನ್ನು "ರಾಕ್ಷಸಾಧಮ" ಎಂದು ಹೀನವಾಕ್ಯಗಳಿಂದ ತಿರಸ್ಕರಿಸಿ ಧೈರ್ಯಗುಣವನ್ನು ತೋರಿಸಿರುವಳು. ತನ್ನ ಕಷ್ಟದಶೆಯನ್ನು ನೋಡಿ ಆಂಜನೇಯನೇ ತನ್ನನ್ನು ರಾಮಲಕ್ಷ್ಮಣರ ಬಳಿಗೆ ಸೇರಿಸುವುದಾಗಿ ಪ್ರಾರ್ಥಿಸಿದಾಗಲೂ, ತಾನು ಪರಪುರುಷಸಂಸ್ಪರ್ಶಕ್ಕೆ ಇಷ್ಟಪಡದುದರಿಂದ, ವೀರಪತ್ನಿಯರ ಧರ್ಮವನ್ನೂ, ಪರಪುರುಷವಿರಕ್ತಿಯನ್ನೂ ತೋರಿಸಿರುವಳು. ಮತ್ತು ರಾವಣನು ತನ್ನನ್ನು ಪ್ರಾರ್ಥಿಸುವಾಗ "ಮಾಂಹಿಧರ್ಮಾತ್ಮನಃ ಪತ್ನೀಂ" ಇತ್ಯಾದಿ ವಾಕ್ಯಗಳಿಂದ, ತನಗೆ ಪತಿಯಲ್ಲಿರುವ ಎಣೆಯಿಲ್ಲದ ಭಕ್ತಿಗೌರವಗಳನ್ನೂ ಸೂಚಿಸಿರುವಳು. ಇವೆಲ್ಲವೂ ಲೋಕದಲ್ಲಿ ಸ್ತ್ರೀಯರಿಗಿರಬೇಕಾದ ಪಾತಿವ್ರತ್ಯಕ್ಕೆ ಪ್ರಧಾನನಿದರ್ಶನಗಳು.

ಇದಲ್ಲದೆ ಇದಕ್ಕೆ ಮೊದಲು ಕಿಷ್ಕಿಂಧಾಕಾಂಡದಲ್ಲಿ, ಸರ್ವರಕ್ಷಣಪ್ರವೃತ್ತನಾದ ವಿಷ್ಣುವಿಗೆ ಆಚಾರ್ಯರೂಪವಾದ ಪುರುಷಕಾರಲಾಭವು ಹೇಳಲ್ಪಟ್ಟಿತು.

ಈ ಕಾಂಡದಲ್ಲಿ ಆಚಾರ್ಯಕೃತ್ಯವು ಹೇಳಲ್ಪಡುವುದು. ಆದಕ್ಕಾಗಿಯೇ

" ತತೋ ರಾವಣನೀತಾಯಾಃ ಸೀತಾಯಾಶ್ಶತ್ರುಕರ್ಶನಃ।
ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ॥

ಎಂಬೀ ಪ್ರಥಮಶ್ಲೋಕದಲ್ಲಿ, ಸದಾಚಾರ್ಯನು ಮಾಡತಕ್ಕ ಸಚ್ಛಿಷ್ಯಾನ್ವೇಷಣವು ಉಪಪಾದಿಸಲ್ಪಡುವುದು. ಹೇಗೆಂದರೆ, (ತತಃ) ಭಗವಚ್ಚಾಸ್ತ್ರೋಪದೇಶವನ್ನು ಪಡೆದಮೇಲೆ (ಶತ್ರುಕರ್ಶನಃ) " ಗುಶಬ್ದಸ್ತ್ವಂಧಕಾರಸ್ಯಾತ್ ರುಶಬ್ದಸ್ತನ್ನಿರೋಧಕಃ।
ಅಂಧಕಾರನಿರೋಧಿತ್ವಾದ್ಗುರುರಿತ್ಯಭಿಧೀಯತೇ " ಎಂಬಂತೆ ಅಜ್ಞಾನನಿವರ್ತನ ಶೀಲನಾದ ಗುರುವು, (ಚಾರಣಾಚರಿತೇಪಥಿ) ಪೂರ್ವಾಚಾರ್ಯರು ನಡೆದ ದಾರಿಯಲ್ಲಿ, ಎಂದರೆ ಸದಾಚಾರದಲ್ಲಿದ್ದವನಾಗಿ (ರಾವಣನೀತಾಯಾಃ) ಅನಶ್ವರಾಪಗಳನ್ನುಂಟು ಮಾಡತಕ್ಕ ಅನಿವೇಕಗಳಿಗೆಡೆಯಾಗ (ಸೀತಾಯಾಃ) 'ಸ್ತ್ರೀಪ್ರಾಯಮಿತರತ್ಸರ್ವಂ' ಎಂಬಂತೆ ಭಗವತ್ಪರತಂತ್ರನಾದ ಚೇತನನ (ಪದಂ) ಸ್ವಾಮಿನಿಯನ್ನು (ಅನ್ವೇಷ್ಟುಂ) ಹುಡುಕುವುದಕ್ಕಾಗಿ (ಇಯೇಷ) ಅಪೇಕ್ಷಿಸಿದನು. ಎಂದರೆ, ಅಜ್ಞಾನನಿವರ್ತಕನಾದ ಗುರುವು, ಭಗವಂತನಿಂದ ಪ್ರೇರಿತನಾಗಿ ಪೂರ್ವಾಚಾರ್ಯರ ಮಾರ್ಗವನ್ನು ಹಿಡಿದು, ಅಜ್ಞಾನವಶನಾದ ಚೇತನನನ್ನು ಉದ್ಧರಿಸುವುದಕ್ಕಾಗಿ, ತಾನೇ ಹೊರಡುವುದಾಗಿ ತಕ್ಷಾರ್ಥವು.



ಶ್ರೀಃ.

ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ.

ಶ್ರೀಮದಾನಂದರಾಮಾಯಣವು

(ಸುಂದರಕಾಂಡವು)

—(:) ಸಮುದ್ರಲಂಘನವು (:)—

ಅನಂತರದಲ್ಲಿ ಶತ್ರುಸೂದನನಾದ ಹನುಮಂತನು, [1] ರಾವಣನು ಸೀತೆಯನ್ನು ಕದ್ದಿಟ್ಟಿರುವ ಸ್ಥಾನವನ್ನು ಹುಡುಕುವುದಕ್ಕಾಗಿ, ಚಾರಣಸಂಚಾರಕ್ಕೆ ಯೋಗ್ಯವಾದ ಆಂತರಿಕ್ಷದ ದಾರಿಯಲ್ಲಿಯೇ ಹೋಗಬೇಕೆಂಬುದ್ದೇಶಿಸಿದನು. ಬೇರೆಬ್ಬರಿಗೆ ಸಾಧ್ಯವಲ್ಲದ ಈ ಸಾಹಸಕಾರ್ಯವನ್ನು ತಾನು ಕಡೆಯಿಲ್ಲದೆ ನಡೆಸಬೇಕೆಂದೂ ನಿಶ್ಚಯಿಸಿಕೊಂಡು, ಉಬ್ಬಿದ ಕೊರಲುಳ್ಳವನಾಗಿ ಪರ್ವತದ ಮೇಲೆ ನೋಡುತ್ತ ನಿಂತಿದ್ದಾಗ, ಆ ಕಪಿವೀರನು, ಮದವಿಂದ ಕೊಬ್ಬಿ ನಿಂತಿರುವ ಒಂದು ಮಹಾಪ್ರಸಿದ್ಧದಂತೆ ಶೋಭಿಸುತಿದ್ದನು. ಅನೇಕ ಮಹಾಬಲಾಢ್ಯನಾದ ಮತ್ತು ಧೀರನಾದ ಆ ಆಂಜನೇಯನು, ಸೈದೂರ್ಯದ ಬಣ್ಣವುಳ್ಳವುಗಳಾಗಿ, ನೀರಿನಂತೆ ಸ್ವಚ್ಛವಾದ ಅಲ್ಲಿನ ಹಸುರುಹುಲ್ಲಿನ ನೆಲಗಳಲ್ಲಿ ಉತ್ಸಾಹದಿಂದ

---

1 ಈ ಮೊದಲನೆಯ ಶ್ಲೋಕದಲ್ಲಿ "ರಾವಣನೀತಾಯಾಃ" ಎಂದು ಸೂಚಿಸಿರುವ "ವ" ಎಂಬಕ್ಷರವು ಗಾಯತ್ರಿಯ ಹನ್ನೆರಡನೇ ಅಕ್ಷರವಾಗಿರುವದರಿಂದ, ಇಷ್ಟರವರೆಗೆ ರಾಮಾಯಣದಲ್ಲಿ ಹನ್ನೊಂದು ಸಾವಿರಗ್ರಂಥಗಳು ಮುಗಿದು ಇಲ್ಲಿ ಹನ್ನೆರಡನೆಯ ಸಹಸ್ರವು ಆರಂಭಿಸುವುದಾಗಿ ಗ್ರಹಿಸ್ಯವು.

ಅತ್ತಿತ್ತ ತಿರುಗುತ್ತ, ಅಲ್ಲಲ್ಲಿ ಹಾರಾಡುತಿದ್ದ ಹಕ್ಕಿಗಳನ್ನು ಹೆದರಿಸಿ ಓಡಿಸಿದನು. ಆಡ್ಡ ಲಾಗಿಬೆಳೆದಿದ್ದ ಮರಗಳನ್ನು ಎದೆಯಿಂದ ತಟ್ಟಿ ನುರಿದು ಕೆಡಹಿದನು. ಇದಿಗೆ ಕಂಡ ಅನೇಕ ಮೃಗಗಳನ್ನೂ ಕೊಬ್ಬಿದ ಸಿಂಹದಂತೆ ಕೊಂದು ಹಾಕುತ್ತ ಬಂದನು. ಆ ಹನುಮಂತನು ನಿಂತಿದ್ದ ಪರ್ವತಪ್ರದೇಶವಾದರೋ ಅಲ್ಲಲ್ಲಿ ಸ್ವಭಾವಜನ್ಯಗಳಾಗಿ ಚಿತ್ರವಿಚಿತ್ರಗಳಾದ ನೀಲಿ, ಕೆಂಪು, ಹಳದಿ, ಹಸುರು, ಬಿಳುಪು, ಕಪ್ಪು, ಮೊದಲಾದ ಬಣ್ಣಗಳುಳ್ಳ ಅನೇಕ ಧಾತುಗಳಿಂದ ಶೋಭಿತವಾಗಿರುವುದು. ಕಾಮರೂಪಿಣಿಯಾಗಿಯೂ, ಸರ್ವಾಲಂಕಾರಭೂಷಿತರಾಗಿಯೂ ಇರುವ ಯಕ್ಷರೂ, ಕಿನ್ನರರೂ, ದೇವಸಮಾನರಾದ ಪನ್ನಗರೂ ಆಗಾಗ ಅಲ್ಲಿಗೆ ಬಂದು ವಿನೋದಿಸುತ್ತಿರುವರು. ಮತ್ತು ಅದು ಅತಿಮನೋಹರವಾಗಿಯೂ, ಅನೇಕಮದದಾನೆಗಳಿಗೆ ನಿತ್ಯಾಶ್ರಯವಾಗಿಯೂ ಇರುವುದು. ಇಂತಹ ಪರ್ವತದ ತಪ್ಪಲಿನಲ್ಲಿ ನಿಂತು ನೋಡುತಿ ಆ ಹನುಮಂತನು ದೊಡ್ಡ ಮಡುವಿನಲ್ಲಿ ನಿಂತ ಮದದಾನೆಯಂತೆಯೇ ಶೋ ಸುತ್ತಿದ್ದನು. ಹೀಗೆ ಸಿದ್ಧನಾಗಿ ನಿಂತು ಆಂಜನೇಯನು ಮೊದಲು ಸೂರ್ಯನಿಗೂ ಇಂದ್ರನಿಗೂ, ವಾಯುದೇವನಿಗೂ, ಬ್ರಹ್ಮನಿಗೂ, ದೇವಯೋನಿಗಳಾದ ಇತ ಭೂತಗಳಿಗೂ ಕೈಮುಗಿದು ನಮಸ್ಕರಿಸಿ, ಹಾರುವುದಕ್ಕೆ ನಿಶ್ಚಯಿಸಿಕೊಂಡನು. ಅಮೇಲೆ ತಿರುಗಿ ಪೂರ್ವಾಭಿಮುಖನಾಗಿ ನಿಂತು, ಮತ್ತೊಮ್ಮೆ ತನ್ನ ಜನಕನಾ ವಾಯುವನ್ನು ಕೈಮುಗಿದು ಧ್ಯಾನಿಸಿ, ಆ ಸಮುದ್ರದ ದಕ್ಷಿಣಕ್ಕೆ ನೂ ಯೋಜನಗಳನ್ನು ಹಾರುವುದಕ್ಕೆ ತಕ್ಕಂತೆ ತನ್ನ ಮೈಯನ್ನು ಬೆಳೆಸಿಕೊಂಡನು. ಹೀಗೆ ಹಾರುವುದಕ್ಕೆ ಸಿದ್ಧನಾಗಿ ನಿಂತಿದ್ದ ಹನುಮಂತನನ್ನು ಅಲ್ಲಿದ್ದ ವಾನ ಶ್ರೇಷ್ಠರೆಲ್ಲರೂ ಕುತೂಹಲದಿಂದ ನೋಡುತಿದ್ದರು. ಪರ್ವಕಾಲದ ಸಮುದ್ರ ದಂತೆ ರಾಮಾಭ್ಯುದಯಕ್ಕಾಗಿ ಈ ಆಂಜನೇಯನೂ ಮೇಲೆಮೇಲೆ ವೃದ್ಧಿ ಹೊಂದುತಿದ್ದನು. ಹೀಗೆ ತನ್ನ ಮೈಯನ್ನು ಅಷ್ಟಿಷ್ಟೆಂದು ನಿರ್ಣಯಿಸಲಾ ದಷ್ಟು ಪ್ರಮಾಣಕ್ಕೆ ಹೆಚ್ಚಿಸಿಕೊಂಡು, ಅಲ್ಲಿಂದಲೇ ಹಾರಿ ಸಮುದ್ರವನ್ನು ದಾಟಬೇಕೆಂದುದ್ದೇಶಿಸಿ, ಆ ಪರ್ವತದ ಬಲವನ್ನು ಪರೀಕ್ಷಿಸುವುದಕ್ಕಾಗಿ ಅದನ್ನು ತನ್ನ ತೋಳುಗಳಿಂದಲೂ, ಕಾಲುಗಳಿಂದಲೂ ಒಮ್ಮೆ ಬಲವಾಗಿ ಗುದ್ದಿ ನೋಡಿದನು. ಆ ಪರ್ವತವು ಅಚಲವೆನಿಸಿಕೊಂಡಿದ್ದರೂ ಅವನ ಗುದ್ದಿ ತಡೆಯಲಾರದೆ ಒಂದು ಮುಹೂರ್ತಕಾಲದನಂತರ ಚಲಿಸಿಹೋಯಿತು. ಪುಷ್ಪಿ ಸಿದ ಕೊನೆಗಳುಳ್ಳ ಅಲ್ಲಿನ ಗಿಡಗಳಲ್ಲಿದ್ದ ಹೂಗಳೆಲ್ಲವೂ ನಿಶ್ಶೇಷವಾಗಿ ಉದುರಿ ಬಿದ್ದುವು. ಹೀಗೆ ಮರಗಳಿಂದುದುರಿಬಿದ್ದ ಸುಗಂಧಪುಷ್ಪಗಳ ಸಮೂಹದಿಂದ, ಆ ಬೆಟ್ಟದ ಸಮಸ್ತಪ್ರದೇಶವೂ ಮುಚ್ಚಿಹೋಗಲು, ಅದು ಕೇವಲ ಪುಷ್ಪ

ಮಯವಾದ ಬೆಟ್ಟದಂತೆಯೇ ಕಾಣಿಸುತಿತ್ತು. ಮಹಾವೀರ್ಯವುಳ್ಳ ಈ ಹನುಮಂತನ ತುಳಿತದಿಂದ ಆ ಪರ್ವತದ ನಾಲ್ಕುಕಡೆಗಳಿಂದಲೂ, ಮದದಾನೆಗಳಿಂದ ಸುರಿಯುವ ಮದಜಲದಂತೆ ಒಳಗಿನ ದ್ರವಜಲವು ಮೇಲೆ ಜಿನುಗಿ ಪ್ರವಾಹವಾಗಿ ಹೊರಡಲಾರಂಭಿಸಿತು. ಮಹಾಬಲಾಢ್ಯನಾದ ಹನುಮಂತನ ಗುದ್ದಿಗೆ ತಡೆಯಲಾರದೆ ಆ ಮಹೇಂದ್ರಪರ್ವತವು ತನ್ನೊಳಗೆ ಹುದುಗಿದ್ದ ಚಿನ್ನ, ಬೆಳ್ಳಿ ಅಂಜನಶಿಲೆ ಮೊದಲಾದ ಖನಿಜರೇಣುಗಳನ್ನು ಹೊರಕ್ಕೆ ಕಕ್ಕುತಿತ್ತು. ಮತ್ತು [1] ಬೆಂಕಿಯು ತನ್ನ ಮಧ್ಯಜ್ವಾಲೆಯಿಂದ ಹೊಗೆಯನ್ನು ಕಕ್ಕುವಂತೆ ಆಗ ಆ ಮಹೇಂದ್ರ ಪರ್ವತವು ಮಣಿಶಿಲೆಯೆಂಬ ಧಾತುಗಳಿಂದ ಕೂಡಿದ ದೊಡ್ಡದೊಡ್ಡ ಕಲ್ಲುಬಂಡೆಗಳನ್ನು ಹೊರಕ್ಕೆಸೆಯುತಿತ್ತು. ಬಲಾಢ್ಯನಾದ ಹನುಮಂತನು ಆ ಪರ್ವತವನ್ನು ತಟ್ಟಿನೋಡಿದಾಗ, ಅದರ ಸುತ್ತಲೂ ಅಲ್ಲಲ್ಲಿ ಗುಹೆಗಳೊಳಗಿದ್ದ ಸಮಸ್ತಭೂತಗಳೂ ಆ ಪೆಟ್ಟಿನಿಂದ ನೊಂದವುಗಳಾಗಿ ವಿಕಾರಸ್ವರಗಳಿಂದ ಅರಚಿಕೊಳ್ಳುತ್ತಿದ್ದುವು. ಹೀಗೆ ಪರ್ವತವನ್ನು ತಟ್ಟಿದುದರಿಂದ ಅಲ್ಲಿನ ಪ್ರಾಣಿಗಳು ಕೂಗಿಕೊಳ್ಳುವ ದೊಡ್ಡ ಆಕ್ರಂದನಧ್ವನಿಯು ಸಮಿಾಪದ ಕಾಡುಗಳನ್ನೂ, ದಿಕ್ಕುಗಳನ್ನೂ, ಸಮಸ್ತಭೂಮಿಯನ್ನೂ ತುಂಬಿತು. ಆ ಬೆಟ್ಟದ ಮೇಲಿದ್ದ ವಿಷಸರ್ಪಗಳೆಲ್ಲವೂ ನಾಗರತ್ನರೇಖೆಯುಳ್ಳ ತಮ್ಮತಮ್ಮ ದೊಡ್ಡ ತಲೆಗಳನ್ನೆತ್ತಿ, ಬಾಯಿಂದ ಘೋರವಾದ ವಿಷವನ್ನು ಕಕ್ಕುತ್ತ, ಕೋಪಗೊಂಡು, ತಮ್ಮ ಹಲ್ಲುಗಳಿಂದ ಅಲ್ಲಿನ ಶಿಲೆಗಳನ್ನು ಕಡಿಯುತಿದ್ದುವು. ಹೀಗೆ ಕ್ರೂರವಿಷಗಳುಳ್ಳ ಸರ್ಪಗಳು ಕೋಪದಿಂದ ಕಚ್ಚಿದೊಡನೆಯೇ ಆ ಶಿಲೆಗಳಲ್ಲಿ ಅಗ್ನಿಜ್ವಾಲೆಗಳು ಹೊರಡಲಾರಂಭಿಸಿದುವಲ್ಲದೆ, ಅವು ಸಾವಿರಾರು ತುಂಡುಗಳಾಗಿ ಸೀಳಿ ಸಿಡಿದು ಮೇಲ್ಹಾರುತಿದ್ದುವು. ಆ ಬೆಟ್ಟದಲ್ಲಿ ವಿಷಹರಗಳಾದ ಮೂಲಿಕೆಗಳು ವಿಶೇಷವಾಗಿ ಹುಟ್ಟಿದ್ದರೂ, ಈ ಸರ್ಪಗಳ ವಿಷವನ್ನಡಗಿಸುವುದಕ್ಕೆ ಅವುಗಳಿಗೂ ಸಾಧ್ಯವಿಲ್ಲದಂತಾಯಿತು. ಈ ಅತ್ಯಾಹಿತಗಳನ್ನು ನೋಡಿ ಅಲ್ಲಿದ್ದ ತಪಸ್ವಿಗಳೆಲ್ಲರೂ, ಈ ಪರ್ವತವು ಪಂಚಭೂತಗಳೊಡನೆ ಒಡೆದುಹೋಗಬಹುದೆಂದು ಹೆದರಿ, ಆಗಲೇ ಅಂತರಿಕ್ಷಕ್ಕೆ ಹಾರಿಬಿಟ್ಟರು. ಮತ್ತು ಅಲ್ಲಿ ತಮ್ಮ ಸ್ತ್ರೀಯರೊಡಗೂಡಿ ಪಾನಭೋಜನಾದಿಗಳಿಂದ ವಿಹರಿಸುತಿದ್ದ ವಿದ್ಯಾಧರರು, ಆ ಪರ್ವತವು ನಡುಗುತ್ತಿರುವುದನ್ನು ಕಂಡು ಭಯಪಟ್ಟು ಮೇಲೆ ನೆಗೆಯಲಾರಂಭಿಸಿ, ತಾವು ಕೈಯಲ್ಲಿ ಹಿಡಿದಿದ್ದ ಚಿನ್ನದ ಪಾನಪಾತ್ರೆಗಳನ್ನೂ ಆ ಪಾನಭೂಮಿ

1. ಅಗ್ನಿಗೆ, "ಕಾಳಿ, ಕರಾಳಿ, ವಿಸ್ಫುಲಿಂಗಿನಿ, ಧೂಮ್ರ, ವಿಶ್ವರೋಚಿ, ಲೋಹಿತೆ, ಮನೋಜವೆ" ಎಂದು ಸಪ್ತ ಜ್ವಾಲೆಗಳುಂಟು. ಅವುಗಳಲ್ಲಿ ಧೂಮ್ರ ಯೆಂಬುದು ಮುಖ್ಯವಾ ಜ್ವಾಲೆಯು.

ಯಲ್ಲಿಯೇ ಬಿಸುಟರು. ಬೆಲೆಯುಳ್ಳ ಭೋಜನಪಾತ್ರೆಗಳನ್ನೂ ಅಲ್ಲಿಯೇ ಹಾಕಿ ಬಿಟ್ಟರು. ಚಿನ್ನದ ಕರಗಗಳನ್ನೂ ಅಲ್ಲಲ್ಲಿಯೇ ಬಿಟ್ಟುಹೋದರು. ಮತ್ತು ತಾವು ಆಸೆಯಿಂದ ಸಂಗ್ರಹಿಸಿಟ್ಟಿದ್ದ ಮೇಲಾದ ಭಕ್ಷ್ಯಗಳನ್ನೂ, ಲೇಹ್ಯಗಳನ್ನೂ, ಒಗೆ ಬಗೆಯ ಮಾಂಸಗಳನ್ನೂ, ಎಷ್ಟಿನ ಚರ್ಮದ ಗುರಾಣಿಗಳನ್ನೂ, ಚಿನ್ನದ ಪಿಡಿಗ ಳುಳ್ಳ ತಮ್ಮ ಕಠ್ಠಾರಿಗಳನ್ನೂ, ಅಲ್ಲಿಯೇ ಬಿಟ್ಟು ತಮ್ಮ ತಮ್ಮ ಪಕ್ಷಿವಾಹನವನ್ನು ಕರೆದುಕೊಂಡು ಮೇಲಕ್ಕೆ ಹಾರಿಬಿಟ್ಟರು. ಮತ್ತು ಅಲ್ಲಿ ಪ್ರಭಾತದಿಂದಲೇ ಕಮಲದಂತೆ ಕಣ್ಣುಳ್ಳ ಕೆಲವು ವಿದ್ಯಾಧರರು, ಮಧ್ಯಾಹ್ನವಾದದಿಂದ ಮತ್ತನ್ನು ಕೆಂಪೇರಿದ ಕಣ್ಣುಳ್ಳವರಾಗಿ, ಉತ್ತಮಗಳಾದ ಹಾರಗಳನ್ನೂ, ರತ್ನಮಾಲಿಕೆ ಗಳನ್ನೂ, ರಕ್ತಚಂದನಗಳನ್ನೂ ಧರಿಸಿ, ಸಂತೋಷದಿಂದ ಮೈಮರೆತು ತಿರುಗು ತಿದ್ದರೂ, ಆ ಪರ್ವತವು ಅಕಸ್ಮಾತ್ತಾಗಿ ಅಮಂಗಲಸ್ಪರ್ಶವನ್ನು ಕಂಡು ಭಯ ಪಟ್ಟು ಆ ಕ್ಷಣವೇ ಮೇಲಕ್ಕೆ ಹಾರಿಬಿಟ್ಟರು. ಮೇಲಾದ ಹಾರಗಳಿಂ ದಲೂ, ಕಾಲಂದುಗೆಗಳಿಂದಲೂ, ತೋಳ್ಬಳೆಗಳಿಂದಲೂ, ಕೈಬಳೆಗಳಿಂದಲೂ ಅಲಂಕೃತವಾಗಿ ಅಲ್ಲಲ್ಲಿ ವಿಕಸಿಸುತಿದ್ದ ದೇವಕಾಸ್ತ್ರೀಯರೆಲ್ಲರೂ, ಆ ಬೆಟ್ಟವು ನಡುಗುವುದನ್ನು ಕಂಡು ಬೆಚ್ಚರಗೊಂಡು, ಆಗಲೇ ತಮ್ಮ ತಮ್ಮ ನಾಯಕರೊಡಗೂಡಿ ಆಕಾಶಕ್ಕೆ ಹಾರಿ ಅಲ್ಲಿ ಪ್ರಸನ್ನಮುಖರಾಗಿ ನಿಂತು ಈ ಆಶ್ಚರ್ಯ ವನ್ನು ನೋಡುತಿದ್ದರು! ಮತ್ತು ಅಲ್ಲಿ ಮಹರ್ಷಿಗಳಂತೆ ತಪಸ್ವಿಗಳಾದ ಬೇರೆ ಕೆಲವು ವಿದ್ಯಾಧರರು, ತಮ್ಮ ತಮ್ಮ ಅಣಿಮಾದ್ಯಷ್ಟಸಿದ್ಧಿಗಳ ಬಲದಿಂದ ನಿಮಿಷ ಮಾತ್ರದಲ್ಲಿ ಆಕಾಶಕ್ಕೇರಿ, ಅಲ್ಲಿ ಗುಂಪುಗೂಡಿ ಈ ಪರ್ವತವನ್ನು ನೋಡುತಿದ್ದರು. ಹೀಗೆ ಅವರೆಲ್ಲರೂ ಅಂತರಿಕ್ಷವಲ್ಲಿ ನೆರೆದು ನಿಂತಿದ್ದಾಗ, ಅಲ್ಲಿ ಅಶ್ಮಜ್ಞಾನವುಳ್ಳ ಮಹರ್ಷಿಗಳೂ, ಚಾರಣರೂ, ಸಿದ್ಧರೂ, ಈ ಹನುಮಂತನ ಮಹಿಮೆಯನ್ನು ತಮ್ಮ ಧ್ಯಾನದೃಷ್ಟಿಯಿಂದಲೇ ತಿಳಿದು ಸಂತೋಷಗೊಂಡು, ಒಬ್ಬರಿಗೊಬ್ಬರು "ಅಹಾ! ಈ ಮಹಾತ್ಮನ ದೇಹವೇ ಒಂದು ದೊಡ್ಡ ಬೆಟ್ಟದಂತಿರುವುದು. ಇದರಮೇಲೆ ಇವನು ವಾಯುಪುತ್ರನು! ಹೀಗಿರುವಾಗ ಇವನ ಧೈರ್ಯವನ್ನೂ, ವೇಗವನ್ನೂ, ಇವನ ಬಲವನ್ನೂ ಕೇಳಬೇಕೆ? ಅತಿಭಯಂಕರವಾದ ಈ ಮಹಾಸಮುದ್ರವನ್ನೂ ಈತನು ಹಾರಬೇಕೆಂದೆಣಿಸಿರುವನು. ರಾಮನ ಹಿತಕ್ಕಾಗಿಯೂ, ವಾನರರ ಕ್ಷೇಮಕ್ಕಾಗಿಯೂ, ಇವನು ಬೇರೊಬ್ಬರಿಗೆ ಸಾಧ್ಯವಲ್ಲದ ಈ ಸಾಹಸಕಾರ್ಯಕ್ಕೆ ಪ್ರಯತ್ನಿಸಿರುವನು. ಅದರೇನು? ಇದು ಬೇರೊಬ್ಬರಿಗೆ ಸಾಧ್ಯವಲ್ಲದಿದ್ದರೂ ಇವ ನಿಗೆ ಅಸಾಧ್ಯವಾಗಿರದು. ಇಚ್ಛಾಮಾತ್ರದಿಂದಲೇ ಇವನು ಈ ಸಮುದ್ರದ ಕೊನೆಯನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲ" ಎಂದರು. ಈ ಮಾತುಗಳನ್ನು

ಕೇಳಿ ಅಲ್ಲಿದ್ದ ವಿದ್ಯಾಧರರಿಲ್ಲರೂ ಪರಮಾಶ್ಚರ್ಯಭರಿತರಾಗಿ, ಎಣೆಯಿಲ್ಲದ ಮಹಿಮೆಯುಳ್ಳವನಾಗಿ ಆ ಪರ್ವತದಮೇಲೆ ನಿಂತಿದ್ದ ಆ ಹನುಮಂತನನ್ನೇ ನಟ್ಟಕಣ್ಣಿನಿಂದ ನೋಡುತಿದ್ದರು. ಇತ್ತಲಾಗಿ ಆ ಪರ್ವತಾಗ್ರದಮೇಲೆ ದೊಡ್ಡ ಬೆಟ್ಟದಂತೆ ನಿಂತಿದ್ದ ಹನುಮಂತನಾದರೋ, ಅಲ್ಲಿಂದ ಹಾರುವುದಕ್ಕೆ ಸಿದ್ಧನಾಗಿ ತನ್ನ ಕೂದಲುಗಳನ್ನೆಬ್ಬಿಸಿಕೊಂಡು, ಒಮ್ಮೆ ಮೈಯನ್ನೊದರಿದನು. ಮಹಾ ಮೇಘದಂತೆ ಒಂದು ದೊಡ್ಡ ಸಿಂಹನಾದವನ್ನು ಮಾಡಿದನು. ಗರುಡನು ಮಹಾಸರ್ಪವನ್ನು ಹಿಡಿದು ತೂಗುವಂತೆ ಕೂದಲು ಜುಂಬಿ ಬಳೆಯಂತೆ ದುಂಡಗೆ ಸುತ್ತಿದ್ದ ತನ್ನ ಬಾಲವನ್ನು ಬಿಚ್ಚಿ, ಉದ್ದಕ್ಕೆ ಬೀಸಿ, ಹಾರುವುದಕ್ಕೆ ಸಿದ್ಧನಾದನು. ಮೈಗೆ ಲಂಘನವನ್ನು ತೆಗೆದುಕೊಂಡು ನಿಂತಿದ್ದ ಆ ಹನುಮಂತನು ತನ್ನ ಹಿಂದೆ ಬಿಚ್ಚಿಟ್ಟಿದ್ದ ಬಾಲವು, ಗರುಡನಿಂದುಯ್ಯಲ್ಪಡುವ ಮಹಾಸರ್ಪದಂತೆಯೇ ಕಾಣುತಿತ್ತು. ದೊಡ್ಡ ಅಗಳಿಗಳಂತೆ ಉದ್ದವಾಗಿ ನೀಡಿದ ತನ್ನ ತೋಳುಗಳೆರಡನ್ನೂ ಬಾಗಿಸಿ ಬೆಟ್ಟದಮೇಲೆ ಬಲವಾಗಿ ಊರಿಕೊಂಡು, ಕಾಲುಗಳನ್ನು ಕುಗ್ಗಿಸಿ, ಕೊರಲನ್ನುಡುಗಿಸಿನಿಂತನು. ಹಾರುವುದಕ್ಕೆ ಸಿದ್ಧನಾಗಿ ನಿಂತಿದ್ದ ಆ ಆಂಜನೇಯನಲ್ಲಿ ತೇಜಸ್ಸೂ, ಬಲವೂ, ವೀರ್ಯವೂ ಮೊದಲಿಗಿಂತಲೂ ಇಮ್ಮಡಿಯಾಗಿ ಬೆಳೆದು ಅವನಿಗೆ ಮಹೋತ್ಸಾಹವನ್ನು ಕೊಟ್ಟವು. ಈ ಮಹೋತ್ಸಾಹದಿಂದ ಅವನು ಮೇಲೆ ಆಕಾಶದಲ್ಲಿ ಬಹುದೂರಕ್ಕೆ ದೃಷ್ಟಿಯಿಟ್ಟು, ತನ್ನ ದಾರಿಯನ್ನುಗುರಿಯಿಟ್ಟು ನೋಡುತ್ತ, ಉಸಿರುಗಟ್ಟಿ ಬಲವಾಗಿ ನೆಲದಮೇಲೆ ಕಾಲೂರಿ ನಿಂತು, ಕಿವಿಗಳನ್ನು ಕುಗ್ಗಿಸಿಕೊಂಡು, ನೆಗೆಯುವುದಕ್ಕೆ ಸಿದ್ಧನಾಗಿ, ತನ್ನ ಸುತ್ತಲೂ ನಿಂತಿದ್ದ ವಾನರರನ್ನು ಕುರಿತು, "ಎಲೈ ವೀರರೇ! ನಮ್ಮ ಶ್ರೀರಾಮನಿಂದ ಪ್ರಯೋಗಿಸಲ್ಪಡುವ ಬಾಣವು ಹೇಗೆ ಸಾಯುವೇಗದಿಂದ ಹೋಗುವುದೋ, ಅದರಂತೆಯೇ ಈಗ ನಾನೂ ಒಂದೇ ನೆಗೆತಕ್ಕೆ ರಾವಣರಕ್ಷಿತವಾದ ಲಂಕೆಗೆ ಹೋಗುವುದನ್ನು ನೋಡಿರಿ! ಒಂದುನೇಳೆ ಲಂಕೆಯಲ್ಲಿ ನಾನು ಆ ಜನಕಪುತ್ರಿಯನ್ನು ಕಾಣದಿದ್ದರೆ, ಅದೇ ವೇಗದಿಂದ ಸ್ವರ್ಗಕ್ಕೆ ಹಾರಿಬಿಡುವೆನು. ಅಲ್ಲಿಯೂ ಸೀತೆಯನ್ನು ಕಾಣದಿದ್ದರೆ ಅಗಲೇ ನಿಂತಿರುಗಿ ಪುನಃ ಲಂಕೆಗೆ ಬಂದು ರಾಕ್ಷಸರಾಜನಾದ ರಾವಣನನ್ನೇ ಹಿಂಗೆಟ್ಟುಕಟ್ಟಿ ಇಲ್ಲಿಗೆ ತಂದು ಬಿಡುವೆನು. ಸರ್ವಪ್ರಕಾರದಿಂದಲೂ ನಾನು ಈಗ ಹಿಡಿವ ಕಾರ್ಯವನ್ನು ಸಾಧಿಸದೆ ಬಿಡುವವನಲ್ಲ. ಹೇಗಾದರೂ ನಾನು ಸೀತೆಯನ್ನು ಕರೆತರುವುದೇ ನಿಜವು. ಕೊನೆಗೆ ರಾವಣಸಹಿತವಾಗಿ ಆ ಲಂಕೆಯನ್ನೇ ಕಿತ್ತುತಂದರೂ ತರುವೆನು" ಎಂದನು. ಮಹಾವೇಗಶಾಲಿಯಾಗಿಯೂ ವಾನರೋತ್ತಮನಾಗಿಯೂ ಇರುವ ಹನುಮಂತನು ಹೀಗೆಂದು ವಾನರರಿಗೆ ಹೇಳಿ,

ಮನಸ್ಸಿನಲ್ಲಿ ಸ್ವಲ್ಪವಾದರೂ ಅಳುಕಿಲ್ಲದೆ ಆ ಕ್ಷಣವೇ ಮಹಾವೇಗದಿಂದ ಮೇಲಕ್ಕೆ ಹಾರಿಬಿಟ್ಟನು. ಸಮುದ್ರದಮೇಲೆ ಅಂತರಿಕ್ಷದಲ್ಲಿ ಹಾರುವಾಗಲೂ ಕೂಡ, ಅವನು ನಿರ್ಭಯನಾಗಿ, ತಾನೇ ಗರುಡನೆಂಬ ಭಾವದಿಂದ ಮಹೋತ್ಸಾಹ ಗೊಂಡಿದ್ದನು. ಹೀಗೆ ಹನುಮಂತನು ಮೇಲೆ ಹಾರಿದೊಡನೆ ಅವನ ವೇಗದಿಂದ ಆ ಬೆಟ್ಟದ ಮೇಲೆ ಬೆಳೆದ ಮರಗಿಡಗಳೆಲ್ಲವೂ ಸಮೂಲವಾಗಿ ಕಿತ್ತು, ಮುರಿದ ಕೊಂಬೆಗಳೊಡನೆ ಅವನ ಹಿಂದೆ ಗಾಳಿಯಲ್ಲಿ ತೂರಿಬರುತಿದ್ದುವು. ಹೀಗೆ ಹನುಮಂತನು, ಮದಿಸಿದ ಕಾಡಕೊಕ್ಕರೆಗಳಿಂದ ತುಂಬಿ ಪುಷ್ಪಭರಿತಗಳಾಗಿರುವ ಎಷ್ಟೋ ಮರಗಳನ್ನು ತನ್ನ ತೊಡೆಗಳ ವೇಗದಿಂದ ಸೆಳೆದುಕೊಂಡು ಆಕಾಶದಲ್ಲಿ ಹಾರುತಿದ್ದನು. ಅವನ ತೊಡೆಯ ವೇಗದಿಂದ ಕೀಳಲ್ಪಟ್ಟ ವೃಕ್ಷಗಳೆಲ್ಲವೂ ದೂರ ಪ್ರಯಾಣಕ್ಕಾಗಿ ಹೊರಟಿರುವವನನ್ನು, ಅವನ ನಂಟರಿಷ್ಟರು ದಾರಿಕಳುಹಿಸುವು ದಕ್ಕಾಗಿ ಸ್ವಲ್ಪದೂರದವರೆಗೆ ಹಿಂಬಾಲಿಸುವಂತೆ, ಒಂದು ಮುಹೂರ್ತಕಾಲದ ವರೆಗೆ ಆ ವಾನರೇಂದ್ರನನ್ನೇ ಹಿಂಬಾಲಿಸಿ ಬರುತಿದ್ದುವು. ಅವನ ತೊಡೆಯ ವೇಗ ದಿಂದ ಕಿತ್ತು ಬಂದ ಸಾಲೆ ಮೊದಲಾದ ಇನ್ನೂ ಅನೇಕವೃಕ್ಷಗಳು, ರಾಜನನ್ನು ಹಿಂಬಾಲಿಸಿ ಹೊರಡುವ ಸೇನೆಯಂತೆ ಆ ಹನುಮಂತನ ಹಿಂದೆ ಬರುತಿದ್ದುವು. ಪುಷ್ಪಿತಗಳಾದ ಅನೇಕ ವೃಕ್ಷಗಳು ದೊಡ್ಡ ದೇಹವುಳ್ಳ ಈತನನ್ನು ಸುತ್ತಿ ಬರುತ್ತಿರಲು, ಆಗ ಹನುಮಂತನು ಗಿಡಗಳಿಂದ ತುಂಬಿದ ಒಂದು ದೊಡ್ಡ ಬೆಟ್ಟ ದಂತೆ ಅದ್ಭುತಾಕಾರದಿಂದ ಕಾಣಿಸಿಕೊಂಡನು. ಭಾರವುಳ್ಳ ಕೆಲವು ಮರಗಳು ಇಂದ್ರನ ಭಯಕ್ಕಾಗಿ ಸಮುದ್ರದಲ್ಲಿ ಬಿದ್ದು ಮುಳುಗುವ ಬೆಟ್ಟಗಳಂತೆ ನಡು ದಾರಿಯಲ್ಲಿ ಕೆಳಗೆಬಿದ್ದು ಮುಳುಗಿಹೋದುವು. ಮೇಘದಂತೆ ಮಹಾಕಾಯ ವುಳ್ಳ ಹನುಮಂತನ ದೇಹದ ಸುತ್ತಲೂ, ಚಿತ್ರವಿಚಿತ್ರಗಳಾದ ಬಣ್ಣಗಳಿಂದ ಕೂಡಿದ ಕೆಲವು ಹೂಗಳು ಅವರಿಸಿ ಬರುತ್ತಿರಲು, ಅದರಿಂದ ಅವನು ಮಿಂಚು ಹುಳುಗಳಿಂದ ಮುಂಬಿದ ಬೆಟ್ಟದಂತೆ ಶೋಭಿಸುತಿದ್ದನು. ಇವನ ವೇಗಕ್ಕೆ ಸಿಕ್ಕಿ ಬಂದ ಮರಗಿಡಗಳಲ್ಲಿ ಕೆಲವು ತನ್ಮತಮ್ಮ ಹೂಗಳನ್ನು ದಿರಿಸುತ್ತ ನೀರಿನಲ್ಲಿ ಬೀಳುವಾಗ ಸ್ನೇಹಿತನನ್ನು ದಾರಿಕಳುಹಿಸಿ ಹಿಂತಿರುಗುವಾಗ, ಕಣ್ಣೀರುಬಿಡುತ್ತ ದುಃಖಸಮುದ್ರದಲ್ಲಿ ಮುಳುಗುವ ಇಷ್ಟಜನರಂತಿದ್ದುವು. ಈ ಅಂಜನೇಯನು ಹಾರುವಾಗ ಅವನ ಗಾಳಿಯ ವೇಗದಿಂದ ಹಾರಿ ಚದರಿಬಿದ್ದ ಚಿತ್ರವಿಚಿತ್ರಗಳಾದ ಹೂಗಳಿಂದ, ಆ ಸಮುದ್ರವೂ ಕೂಡ ಅನೇಕ ನಕ್ಷತ್ರಗಳಿಂದ ತುಂಬಿದ ಆಕಾಶ ದಂತೆ ಕಾಣುತಿತ್ತು. ಅಂಜನೇಯನು ತನ್ನ ಹಿಂದೆ ಹಾರಿ ಬರುತಿದ್ದ ಬಗೆ ಬಗೆಯ ಬಣ್ಣಗಳುಳ್ಳ ಹೂಗಳಿಂದ, ಆಕಾಶದಲ್ಲಿ ಮಿಂಚಿನ ಪರಂಪರೆಗಳಿಂದ

ಕೂಡಿದ ಮೇಘದಂತೆ ಶೋಭಿಸುತಿದ್ದನು. ಈ ಹನುಮಂತನ ವೇಗದಿಂದುದಿರಿಬಿದ್ದ ಹೂಗಳಿಂದ ಆ ಲವಣಸಮುದ್ರದ ನೀರೆಲ್ಲವೂ, ಮನೋಹರಗಳಾದ ನಕ್ಷತ್ರಪರಂಪರೆಗಳ ಉದಯದಿಂದ ಶೋಭಿಸುವ ಗಗನಪ್ರದೇಶದಂತೆ ತೋರಿತು. ಹನುಮಂತನು ಆಕಾಶದಲ್ಲಿ ಹಾರಿಹೋಗುವಾಗ ನೀಡಿದ ಅವನ ತೋಳುಗಳೆರಡೂ, ಪರ್ವತದ ಮೇಲೆ ತಲೆಯೆತ್ತಿ ಅಡುತ್ತಿರುವ ಐದು ಹೆಡೆಯ ಸರ್ಪಗಳಂತೆ ಕಾಣುತಿದ್ದುವು. ಹೀಗೆ ಹನುಮಂತನು ಕೆಳಕ್ಕೂ ಮೇಲಕ್ಕೂ ತೂಗಾಡುತ್ತ ಹಾರುವಾಗ, ಒಮ್ಮೆ ಅಲೆಗಳಿಂದ ತುಂಬಿದ ಆ ಮಹಾಸಮುದ್ರವನ್ನೇ ಹೀರಿಬಿಡುವಂತೆಯೂ, ಮತ್ತೊಮ್ಮೆ ಆಕಾಶವನ್ನೇ ನುಂಗಿಬಿಡುವಂತೆಯೂ ತೋರುತಿದ್ದನು. ಅಂತರಿಕ್ಷಮಾರ್ಗವನ್ನು ಹಿಡಿದು ಹೋಗುತ್ತಿರುವಾಗ ಮಿಂಚಿನಂತೆ ಮಿರುಗುತಿದ್ದ ಅವನ ಕಣ್ಣುಗಳೆರಡೂ ಬೆಟ್ಟದಮೇಲೆ ಉರಿಯುವ ಕಾಡುಗಿಚ್ಚಿನ ಎರಡು ಜ್ವಾಲೆಗಳಂತೆ ತೋರುತಿದ್ದುವು. ಮತ್ತು ಪಿಂಗಳವರ್ಣದಿಂದ ಕೂಡಿ, ವಿಸ್ತಾರವಾಗಿ ದುಂಡಗಿರುವ ಅವನ ಕಣ್ಣುಗುಡ್ಡೆಗಳೆರಡೂ, ಆಕಾಶದಲ್ಲಿ ಉದಿಸಿ ಬಂದಿರುವ ಸೂರ್ಯಚಂದ್ರಬಿಂಬಗಳಂತೆ ತೋರುತಿದ್ದುವು. ಕೆಂಪಾದ ಮೂಗಿನ ಕಾಂತಿಯಿಂದ ಕೂಡಿದ ಅವನ ಮುಖವು ಸಂಜೆಗೆಂಪಿನಿಂದ ಕೂಡಿದ ಸೂರ್ಯಬಿಂಬದಂತೆ ಕಾಣಿಸಿತು. ಹಾರುವಾಗ ಮೇಲಕ್ಕೆತ್ತಿದ ಅವನ ಬಾಲವು, ಆಕಾಶದಲ್ಲಿ ಎತ್ತಿ ಕಟ್ಟಲ್ಪಟ್ಟ ಇಂದ್ರಧ್ವಜದಂತೆ ಶೋಭಿಸಿತು. ದೊಡ್ಡ ದೇಹವುಳ್ಳವನಾಗಿಯೂ, ಬಿಳುಪಾದ ಕೋರೆಗಳುಳ್ಳವನಾಗಿಯೂ ಇರುವ ಮಹಾಪ್ರಾಜ್ಞನಾದ ಹನುಮಂತನು ಹಾರುವಾಗ, ಅವನ ಬಾಲವು ಆಗಾಗ ಅವನ ಮೈಗೆ ಜಕ್ಕಾಕಾರವಾಗಿ ಸುತ್ತಿಕೊಳ್ಳಲು, ಪರಿವೇಷದಿಂದ ಕೂಡಿದ ಸೂರ್ಯನಂತೆ ಕಾಣುತಿದ್ದನು. ಸುತ್ತಲೂ ಕೆಂಪಾದ ಬಾಲಮೂಲಪ್ರದೇಶದಿಂದ ಕೂಡಿದ ಆ ಮಹಾಕಪಿಯು, ಆಗಲೇ ಆಗೆದು ತೆಗೆದ ವಿಸ್ತಾರವಾದ ಕೆಂಪ್ರಥಾತುವಿನ ಗನಿಯುಳ್ಳ ಬೆಟ್ಟದಂತಿದ್ದನು. ಆ ವಾನರಸಿಂಹನು ಮಹಾವೇಗದಿಂದ ಸಮುದ್ರವನ್ನು ದಾಟಿ ಹೋಗುತಿದ್ದ ಕಾಲದಲ್ಲಿ, ಅವನ ಕಂಕುಳಿನ ಸಂದಿನಲ್ಲಿ ನುಗ್ಗಿಬರುವ ಗಾಳಿಯು ಮೇಘದಂತೆ ನೊಳಗುತಿತ್ತು. ಆ ಹನುಮಂತನು ಹಾರಿಬರುವಾಗ ಅವನ ಉದ್ದವಾದ ಬಾಲವು ಆಕಾಶದಲ್ಲಿ ಉತ್ತರದಿಕ್ಕಿನಿಂದ ದಕ್ಷಿಣಕ್ಕೆ ಬೀಸುವ ಉತ್ಪಾತಸೂಚಕವಾದ ಉಲ್ಕೆ (ಬಾಲಚುಕ್ಕಿ)ಯಂತೆ ತೋರುತಿತ್ತು. ಸೂರ್ಯನಂತೆ ತೇಜಸ್ವಿಯಾಗಿಯೂ, ದೀರ್ಘದೇಹವುಳ್ಳವನಾಗಿಯೂ ಇದ್ದ ಆ ಹನುಮಂತನ ದೇಹವು, ನಡುವಿಗೆ ಹಗ್ಗವನ್ನು ಕಟ್ಟಿದಾಗ ಉದ್ದವಾಗುವ ಆನೆಯ ದೇಹದಂತೆ ಕಾಣಿಸಿತು. ಮತ್ತು ಅವನು ಹಾರುವಾಗ ಅಂತರಿಕ್ಷದಲ್ಲಿರುವ

ಆನನ ದೇಹವೂ, ಸಮುದ್ರದ ನೀರಿನಲ್ಲಿ ಬಿದ್ದ ಅವನ ಪ್ರತಿಬಿಂಬವೂ ಏಕಾಕಾರವಾಗಿ ಕಾಣುತ್ತ. ಮುಂದೆಮುಂದೆ ಸಾಗುತ್ತಿರಲು, ಸಮುದ್ರದಲ್ಲಿ ಗಾಳಿಯಿಂದ ನಡೆಯುವ ಒಂದು ದೊಡ್ಡ ಹಡಗಿನಂತೆ ತೋರುತಿತ್ತು. ಈ ಮಹಾಕಪಿಯು ಸಮುದ್ರದ ಮೇಲೆ ಯಾವಯಾವ ಕಡೆಗೆ ಹಾರಿ ಹೋಗುತ್ತಿದ್ದನೋ ಆಯಾ ಕಡೆಗಳಲ್ಲಿ ಸಮುದ್ರದ ನೀರು ಇವನ ತೊಡೆಗಳ ವೇಗದಿಂದ ಉಲ್ಲೋಲಕಲ್ಲೋಲವಾಗಿ, ತಿರುಗುವ ಸುಳಿಗಳಿಂದಲೂ, ಕಾರುವ ನೊರೆಗಳಿಂದಲೂ, ಪ್ರವಾಹದ ಮೊರೆತದಿಂದಲೂ, ಆಪಸ್ಮಾರರೋಗಿಯಂತೆ ಕಾಣಿಸುತಿತ್ತು. ಮಹಾವೇಗವುಳ್ಳ ಆ ವಾನರೋತ್ತಮನು ದೊಡ್ಡದೊಡ್ಡ ಬಂಡೆಗಳಂತೆ ಮೇಲೇಳುವ ಅಲೆಗಳೆಲ್ಲವನ್ನೂ ತನ್ನ ಎದೆಯ ಗಾಳಿಯ ವೇಗದಿಂದಲೇ ಅಡಗಿಸುತ್ತ ಹಾರಿ ಹೋದನು. ಇವನ ವೇಗದಿಂದುಂಟಾದ ಪ್ರಬಲವಾದ ಗಾಳಿಯೂ, ಮೇಘದ ಗಾಳಿಯೂ ಒಂದಾಗಿ ಕಲೆತು, ಭಯಂಕರಧ್ವನಿಯೊಡನೆ ಸಮುದ್ರವನ್ನೇ ನಡುಗಿಸಿಬಿಡುವಂತಿದ್ದುವು. ಕಪಿಶ್ರೇಷ್ಠನಾದ ಆ ಹನುಮಂತನು ಹಾರುವಾಗ, ಲವಣಸಮುದ್ರದಿಂದ ಮೇಲೆದ್ದು ಬರುವ ದೊಡ್ಡದೊಡ್ಡ ಅಲೆಗಳನ್ನೂ ತನ್ನ ವೇಗದಿಂದ ಆಕರ್ಷಿಸುತ್ತ, ಭೂಮ್ಯಾಕಾಶಗಳೆರಡನ್ನೂ ಕಿತ್ತೆಸೆಯುವಂತೆ ತೋರುತಿದ್ದನು. ಆ ಮಹಾಸಮುದ್ರದಲ್ಲಿ ನೋರುಮಂದರಪರ್ವತಗಳಿಗೆ ಸಮಾನವಾಗಿ ಮೇಲೆದ್ದು ಬರುವ ದೊಡ್ಡ ಅಲೆಗಳೆಲ್ಲವನ್ನೂ ಎಣಿಸಿಕೊಂಡು ಹೋಗುವಂತೆ ಅವೆಲ್ಲವನ್ನೂ ಕ್ರಮವಾಗಿ ದಾಟಿ ವೇಗದಿಂದ ಹಾರಿ ಬರುತಿದ್ದನು. ಅವನ ವೇಗದಿಂದ ಮೇಲೆ ಹೊರಟ ಸಮುದ್ರ ಜಲಪ್ರವಾಹವು, ಆಕಾಶದಲ್ಲಿ ಮೇಘಗಳೊಡನೆ ಕಲೆತು, ವಿಸ್ತಾರವಾದ ಬೇರೊಂದು ಶರನ್ಮೇಘದಂತೆ ತೋರುತಿತ್ತು. ಹೀಗೆ ಎಡೆಬಿಡದೆ ಸಮುದ್ರಜಲವು ಮೇಲೆ ಹಾರುತಿದ್ದುದರಿಂದ ಆ ಸಮುದ್ರದೊಳಗಿನ ಮೀನು, ಮೊಸಳೆ, ತಿಮಿ, ಮೊದಲಾದ ಪ್ರಾಣಿಗಳೆಲ್ಲವೂ, ಬಟ್ಟೆಯನ್ನು ಬಿಚ್ಚಿಹಾಕಿದ ಮನುಷ್ಯರ ಅವಯವಗಳಂತೆ ಸ್ಪಷ್ಟವಾಗಿ ಗೋಚರಿಸುತಿದ್ದುವು. ಆಕಾಶದಲ್ಲಿ ಹಾರುತ್ತಿರುವ ಈ ಕಪಿಶ್ರೇಷ್ಠನನ್ನು ಕಂಡು, ಆ ಸಮುದ್ರದೊಳಗಿನ ಮಹಾಸರ್ಪಗಳೆಲ್ಲವೂ ಜತನೇಗರುಡನೆಂಬ ಭ್ರಾಂತಿಯಿಂದ ಭಯಪಟ್ಟು ತತ್ತರಿಸುತಿದ್ದುವು. ಹತ್ತುಯೋಜನಗಳ ಅಗಲಕ್ಕೂ, ಮೂವತ್ತುಯೋಜನಗಳ ಉದ್ದಕ್ಕೂ ವ್ಯಾಪಿಸಿದ, ಆ ವಾನರಶ್ರೇಷ್ಠನ 1 ಮೈನೆರಳು, ಸಮುದ್ರಜಲಕ್ಕೂ ಒಂದಪೂರ್ವ ಶೋಭೆಯನ್ನುಂಟು

1. ಇಲ್ಲಿ ಛಾಯೆಯೆಂದರೆ ನೆರಳೇ ಹೊರತು ಪ್ರತಿಬಿಂಬವಲ್ಲ. ಬಿಂಬವು ಪ್ರತಿಬಿಂಬ ಪ್ರಮಾಣಕ್ಕೆ ಸರಿಯಾಗಿರಬೇಕಾದುದರಿಂದ ಬಿಂಬವಾದ ಆಂಜನೇಯನ ಶರೀರವೂ ಅದರಂತೆಯೇ ಮೂವತ್ತುಯೋಜನಗಳ ವಿಸ್ತಾರವುಳ್ಳದಾಗಿರಬೇಕು. ಹಾಗಿದ್ದರೆ ಮೂರೇ

ಮಾಡುತಿತ್ತು. ಹೀಗೆ ಸಮುದ್ರದಲ್ಲಿ ವಿಸ್ತಾರವಾಗಿ ವ್ಯಾಪಿಸಿ ಇವನನ್ನು ಹಿಂಬಾಲಿಸುತಿದ್ದ ಅವನ ಛಾಯೆಯು ಬೆಳ್ಮೇಘಗಳ ಸಮೂಹದಂತೆ ತೋರುತಿತ್ತು. ಮಹಾತೇಜಸ್ವಿಯಾಗಿಯೂ, ದೊಡ್ಡದೇಹವುಳ್ಳವನಾಗಿಯೂ ಇದ್ದ ಆ ಕಪಿಶ್ರೇಷ್ಠನು, ನಿರಾಶ್ರಯವಾದ ಅಂತರಿಕ್ಷದಲ್ಲಿ ರೆಕ್ಕೆಗಳುಳ್ಳ ಒಂದು ದೊಡ್ಡ ಬೆಟ್ಟದಂತೆ ಕಾಣುತಿದ್ದನು. ಈ ಕಪಿಶ್ರೇಷ್ಠನು ಅಂತರಿಕ್ಷದಲ್ಲಿ ಯಾವ ದಾರಿಯನ್ನು ಹಿಡಿದು ಹೋಗುತ್ತಿದ್ದನೋ, ಆ ದಾರಿಯುದ್ದಕ್ಕೂ ಸಮುದ್ರದ ನೀರು ಇವನ ವೇಗದಿಂದ ಹಗ್ಗ ಉದ್ದಕ್ಕೆ ಳಾಬುನೆಯನ್ನು ತೋಡಿಯಂತೆ ಕಾಣುತಿತ್ತು. ಪಕ್ಷಿಗಳಿಗೆ ದಾರಿಯಾದ ಆಕಾಶದಲ್ಲಿ ಈತನೂ ಪಕ್ಷಿರಾಜನಂತೆ ಹಾರುತ್ತ, ವಾಯುವಿನಂತೆ ತನ್ನ ಹಿಂದೆ ಮೇಘಗಳನ್ನೆಳೆದುಕೊಂಡು ಹೋಗುತ್ತಿರಲು, ಬಿಳುಪು, ಕೆಂಪು, ಅಪ್ಪು, ಹಳದಿ ಮುಂತಾದ ವಿಚಿತ್ರವರ್ಣಗಳಿಂದ ಕೂಡಿ ಇವನನ್ನು ಬೆಂಬಿಡದೆ ಬರುತಿದ್ದ ಆ ಮೇಘಗಳು, ಬಹಳ ಅಂದವಾಗಿ ತೋರುತಿದ್ದುವು. ಇವನು, ಮೇಲೆ ಹಾರುವಾಗ ಒಮ್ಮೊಮ್ಮೆ ಮೇಘಗಳ ನಡುವೆನುಗ್ಗಿ ಬರುತಿದ್ದುದರಿಂದ ಆಕಾಶದಲ್ಲಿ ಆಗಾಗ ಮೇಘಗಳ ಮರೆಯಲ್ಲಡಗಿ ಪುನಃಪುನಃ ಹೊರಕ್ಕೆ ಪ್ರಕಾಶನಿಂದ ಕಾಣಿಸುವ ಚಂದ್ರನಂತೆ ತೋರುತಿದ್ದನು. ಹೀಗೆ ವೇಗದಿಂದ ಅಂತರಿಕ್ಷದಲ್ಲಿ ಹಾರಿ ಬರುವ ಕಪಿವೀರನನ್ನು ಕಂಡು, ದೇವ ಗಂಧರ್ವದಾನವರೆಲ್ಲರೂ ಅವನ ಮೇಲೆ ಪುಷ್ಪವೃಷ್ಟಿಯನ್ನು ಕರೆದರು. ರಾವಣನ ಕಾರ್ಯಸಿದ್ಧಿಗಾಗಿ ಹಾರಿ ಹೋಗುತ್ತಿರುವ ಆ ವಾನರೋತ್ತಮನನ್ನು ಸೂರ್ಯನೂ ತನ್ನ ಕಿರಣಗಳಿಂದ ಬಹಿಸಲಿಲ್ಲ. ವಾಯುವೂ ಸುಖಸ್ಪರ್ಶವಾಗುವಂತೆ ಬೀಸುತಿದ್ದನು. ಋಷಿಗಳೆಲ್ಲರೂ ಸ್ತೋತ್ರಮಾಡುತಿದ್ದರು. ಮಹಾಪರಾಕ್ರಮವುಳ್ಳ ಈತನು ಆಕಾಶಮಾರ್ಗವಾಗಿ ಹೋಗುತ್ತಿರುವುದನ್ನು ಕಂಡು, ದೇವತೆಗಳೂ, ಗಂಧರ್ವರೂ ಇವನನ್ನು ಕೊಂಡಾಡಿ ಕೀರ್ತಿಸುತಿದ್ದರು. ಈ ಹನುಮಂತನು ಸ್ವಲ್ಪವಾದರೂ ಬಳಲಿಕೆಯನ್ನು ಕಾಣಿಸದೆ ಅಷ್ಟು ಸಾಹಸಕಾರ್ಯವನ್ನು ಮಾಡುತ್ತಿರುವುದನ್ನು ಕಂಡು, ನಾಗರೂ, ಯಕ್ಷರೂ, ರಾಕ್ಷಸರೂ, ದೇವತೆಗಳೂ, ಪನ್ನಗರೂ ಇವನನ್ನು ಸ್ತುತಿಸುತಿದ್ದರು. ಹೀಗೆ ಕಪಿಶ್ರೇಷ್ಠನಾದ ಹನುಮಂತನು ರಾಮಕಾರ್ಯಾರ್ಥವಾಗಿ ಮೇಲೆ ಹಾರುತ್ತಿರುವುದನ್ನು ಕಂಡು ಇಕ್ಷ್ವಾಕುವಂಶಕ್ಕೆ

ಅಡಿಯಿಂದ ಅಂಜನೇಯನು ಸಮುದ್ರವನ್ನು ದಾಟಿಬಿಡುತಿದ್ದನು. ಇದಲ್ಲದೆ ಈ ನಡುವೆ ಸಂಭವಿಸಿದ ಸುರಸಾ ಸಂವಾದಾದಿಗಳಿಗೂ ಸರಿಹೋಗದು. ಆದುದರಿಂದ ಇಲ್ಲಿ ನೇರಳೆಂದೇ ಗ್ರಹಿಸಬೇಕು. ಅಂಜನೇಯನು ಸಮುದ್ರವನ್ನು ದಾಟಿದುದು ಬೆಳಗಿನ ಜಾವವಾದುದರಿಂದ ಆ ವೇಳೆಯಲ್ಲಿ ನೆಳಲು ಇಂಬಕ್ಕಿಂತ ಉಪ್ಪವಾಗುವುದು ಅನುಭವಸಿದ್ಧವು.

ಮೇಲ್ಮೈಯನ್ನು ಕೋರೆತಕ್ಕವನಾದ ಸಮುದ್ರರಾಜನಿಗೂ ಒಂದಾಲೋಚನೆ ಹುಟ್ಟಿತು. "ನಾನೂ ವಾನರೇಂದ್ರನಾದ ಈ ಹನುಮಂತನಿಗೆ ಈ ಕಾಲದಲ್ಲಿ ತಕ್ಕ ಸಹಾಯವನ್ನು ಮಾಡದಿದ್ದರೆ, ಈ ಪ್ರಪಂಚದಲ್ಲಿ ಬಾಯುಳ್ಳವರೊಬ್ಬೊಬ್ಬರೂ ನನ್ನನ್ನು ಬಯ್ಯದೆ ಬಿಡಲಾರರು. ಮುಖ್ಯವಾಗಿ ಇಕ್ಷ್ವಾಕುಕುಲಕ್ಕೆ ಹಿರಿಯನಾದ ಸಗರನಿಂದಲೇ ನಾನು ವೃದ್ಧಿಗೆ ಬಂದವನು. ಆ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ರಾಮನಿಗೆ ಈ ಹನುಮಂತನು ಪರಮಮಿತ್ರನು. ಆ ರಾಮನ ಕಾರ್ಯಾರ್ಥವಾಗಿಯೇ ಇವನು ಇಷ್ಟು ಕಾರ್ಯವನ್ನೂ ಮಾಡುತ್ತಿರುವನು. ಇವನ ಕಷ್ಟವನ್ನು ನೋಡಿಯೂ ನಾನು ಸುಮ್ಮನಿರಬಹುದೆ? ಇವನು ದಾರಿಯಲ್ಲಿ ತನ್ನ ಬಳಲಿಕೆಯನ್ನಾರಿಸಿಕೊಂಡು ಹೋಗುವಂತೆ ಒಂದುಪಾಯವನ್ನು ಮಾಡಬೇಕು. ಈತನು ನನ್ನಲ್ಲಿ ವಿಶ್ರಮಿಸಿಕೊಂಡಮೇಲೆ ಉಳಿದಿನ ದಾರಿಯನ್ನು ಸುಖದಿಂದ ದಾಟಬಹುದು" ಎಂದು ಸಮುದ್ರರಾಜನು ಸಾಧುಬುದ್ಧಿಯಿಂದ ಯೋಚಿಸಿ, ತನ್ನಲ್ಲಿ ಮುಳುಗಿಪ್ಪ ಸುವರ್ಣನಾಭವೆಂದು ಹೆಸರುಗೊಂಡ ಮೈನಾಕ ಪರ್ವತವನ್ನು ಕರೆಕು, "ಎಲ್ಲೆ ಪರ್ವತಶ್ರೇಷ್ಠನೆ! ಪಾತಾಳದಲ್ಲಿ ವಾಸಮಾಡುವ ರಾಕ್ಷಸರು ಮೇಲಿದ್ದು ಬಾರದಂತೆ, [1] ಅವರನ್ನು ತಡೆದಿಡುವುದಕ್ಕಾಗಿಯೇ ಇಂದ್ರನಿಂದ ನೀನು ಈ ಸಮುದ್ರದಲ್ಲಿಡಲ್ಪಟ್ಟಿರುತ್ತೆ. ಆಗಾಗ ಮೇಲಿದ್ದು ಬರುತ್ತಿದ್ದ ಮಹಾವೀರ್ಯವುಳ್ಳ ರಾಕ್ಷಸರಿಗೆ ಆಶ್ರಯವಾದ ದೊಡ್ಡ ಪಾತಾಳಲೋಕದ ಬಾಗಿಲನ್ನು ಅಗಳಿಯಂತೆ ತಡೆದು ನಿಂತಿರುವೆಯಲ್ಲವೆ, ನಿನಗೆ ಅಡ್ಡಲಾಗಿಯಾಗಲಿ, ಮೇಲಕ್ಕಾಗಲಿ, ಕೆಳಗಡೆಗಾಗಲಿ, ಬೆಳೆದುಕೊಂಡು ಹೋಗುವ ಅದ್ಭುತಶಕ್ತಿಯುಂಟು. ಅದುದರಿಂದ ಇಷ್ಟು ಮಹಾಮಹಿಮೆಯುಳ್ಳ ನಿನ್ನನ್ನೇ ಈಗ ನಾನು ಪ್ರೋತ್ಸಾಹಿಸಬೇಕಾಗಿರುವುದು. ಏಳು! ಏಳೋ! ಶಿಖರಶ್ರೇಷ್ಠನಾದ ಮತ್ತು ಮಹಾವೀರ್ಯವುಳ್ಳ ಹನುಮಂತನು ರಾಮಕಾರ್ಯಾರ್ಥವಾಗಿ ಭಯಂಕರನಾದ ಕಾರ್ಯವನ್ನಾರಂಭಿಸಿ, ನಮ್ಮ ಮೇಲೆ ಆಕಾಶದಲ್ಲಿ ನೆಗೆಯುತ್ತಿರುವುದನ್ನು ನೋಡು. ಇಕ್ಷ್ವಾಕುವಂಶದವರಿಂದ ವೃದ್ಧಿಯನ್ನು ಹೊಂದಿ, ಅವರನ್ನೇ ನಂಬಿರುವ ನಾನು ಈಗ ಅವನಿಗೆ ತಕ್ಕ ಸಹಾಯವನ್ನು ಮಾಡಲೇಬೇಕು. ಇಕ್ಷ್ವಾಕುವಂಶದವರು ಸದಾಗೇ ಬಹಳಪೂಜ್ಯರಾಗಿರುವಾಗ, ನನ್ನನ್ನಾಶ್ರಯಿಸಿರುವ ನಿನಗೆ ಅವರು ಇನ್ನೂ ವಿಶೇಷಪೂಜ್ಯರೆಲ್ಲವೆ? ಈಗ ನೀನು ಅವನಿಗೆ ಸಹಾಯವನ್ನು ಮಾಡಿಯೇ ತೀರಬೇಕು. ಕಾರ್ಯವು ವಿಘಾತವಾಗಬಾರದು. ಆಯಾ

1. ಇಂದ್ರನು ಪರ್ವತಭೇದನಕಾಲದಲ್ಲಿ ಮೈನಾಕಕ್ಕೆ ಈ ಆಜ್ಞೆಯನ್ನು ಮಾಡಿ ಮನ್ನಿಸಿ ಬಿಟ್ಟುದಾಗಿ ಊಹ್ಯವು.

ಕಾಲದಲ್ಲಿ ನಡೆಸಬೇಕಾದ ಕಾರ್ಯವನ್ನು ಮಾತನಿದ್ದರೆ ಸತ್ಪುರುಷರಿಗೆ ಕೋಪವನ್ನುಂಟುಮಾಡಿದಂತಾಗುವುದು. ಈಗಲೇ ನೀನು ನೀರಿನಿಂದ ಮೇಲಕ್ಕೇಳು. ಈ ಕಪಿಯು ನಿನ್ನ ಮೇಲೆ ಸ್ವಲ್ಪಕಾಲದವರೆಗೆ ಕುಳ್ಳಿರಲಿ! ಈ ವಾನರೋತ್ತಮನು ನಮಗತಿಥಿಯಾಗಿರುವನಲ್ಲದೆ ಪೂಜ್ಯನಾಗಿಯೂ ಇರುವನು. ಎಲ್ಲೆ ಪರ್ವತವೆ! ನೀನು ಹಾರುವವರಲ್ಲಿ ಮೇಲೆನಿಸಿಕೊಂಡವನು! ನಿನ್ನ ಲ್ಲಿರುವಂತೆ ಸುವರ್ಣದ ಸಾರವು ಬೇರೆಲ್ಲಿರುವುದು! ದೇವಗಂಧರ್ವರೆಲ್ಲರೂ ನಿನ್ನನ್ನು ಸೇವಿಸುವರು. ಈ ಹನುಮಂತನೂ ನಿನ್ನಲ್ಲಿ ತನ್ನ ಬಳಲಿಕೆಯನ್ನು ತೀರಿಸಿಕೊಂಡು ಆ ಮೇಲೆ ಉಳಿದ ಭಾಗವನ್ನು ದಾಟಿ ಹೋಗಲಿ! ಎಲ್ಲೆ ಮೈನಾಕವೆ! ಆ ಶ್ರೇಷ್ಠನ ದಯಾಸ್ವಭಾವವನ್ನೂ, ಸೀತೆಗುಂಟಾಗಿರುವ ಕಷ್ಟವನ್ನೂ, ಅದಕ್ಕಾಗಿ ಈಗ ಈ ಹನುಮಂತನು ವಹಿಸಿರುವ ಶ್ರಮವನ್ನೂ ಚೆನ್ನಾಗಿ ಪರ್ಯಾಲೋಚಿಸಿ, ನೀನು ಈಗಲೇ ಮೇಲೆದ್ದು ಹೋಗಿಬಾ" ಎಂದನು. ಸಮುದ್ರವು ಹೇಳಿದ ಈ ಮಾತನ್ನು ಕೇಳಿದ ಕ್ಷಣವೇ ಮೈನಾಕವು, ತನ್ನಲ್ಲಿರುವ ದೊಡ್ಡ ದೊಡ್ಡ ಗಿಡಬಳ್ಳಿಗಳೊಡನೆ ನೀರಿನಿಂದ ಮೇಲೆ ಹಾರಿತು. ಜ್ವಲಿಸುತ್ತಿರುವ ಕಿರಣಗಳೊಡನೆ ಮೇಘಮಂಡಲವನ್ನು ಭೇದಿಸಿಕೊಂಡು ಹೊರಕ್ಕೆ ಬರುವ ಸೂರ್ಯನಂತೆ ಒಂದು ಮುಹೂರ್ತದೊಳಗಾಗಿಯೇ ಸಮುದ್ರಜಲವನ್ನು ಭೇದಿಸಿಕೊಂಡು ಆ ಪರ್ವತವು ಸಮುದ್ರರಾಜನ ಆಜ್ಞೆಯಿಂದ ಮೇಲೆದ್ದು ತನ್ನ ಶಿಖರಗಳನ್ನು ತೋರಿಸಿತು. ಸುವರ್ಣಮಯಗಳಾಗಿಯೂ, ಕಿನ್ನರರಿಂದಲೂ, ನಾಗರಿಂದಲೂ ತುಂಬಿದುದಾಗಿಯೂ, ಉದಿಸಿದ ಸೂರ್ಯಬಿಂಬಕ್ಕೆ ಸಮಾನಗಳಾಗಿಯೂ ತೋರುತ್ತಿರುವ ಆ ಶಿಖರಗಳು ಆಕಾಶವನ್ನು ಚುಚ್ಚಿಕೊಂಡು ಹೋಗುವಂತೆ ಮೇಲೆ ಹೊರಡಲು, ಪ್ರಜ್ವಲಮಯಗಳಾದ ಈ ಮೈನಾಕಶಿಖರಗಳ ಕಾಂತಿಯಿಂದ ಕತ್ತಿಯಂತೆ ಕಪ್ಪಾದ ಆಕಾಶವೆಲ್ಲವೂ ಹೊಂಬಣ್ಣವಳ್ಳುದಾಯಿತು. ಹೀಗೆ ಸ್ವಾಭಾವಿಕವಾದ ಕಾಂತಿವಿಶೇಷದಿಂದ ಕೂಡಿದ ಸುವರ್ಣಶಿಖರಗಳಿಂದ ಆ ಮೈನಾಕವು ಏಕಕಾಲದಲ್ಲಿ ನೂರಾರು ಸೂರ್ಯಮಂಡಲಗಳು ಉದಯಿಸಿದಂತೆ ಕಾಣಿಸಿತು. ಹೀಗೆ ಏಕಾಕಿಯಾಗಿ ಮೇಲಕ್ಕೆದ್ದು ತನ್ನ ಮುಂದೆ ಲವಣಪಯೋರಾಶಿಯ ಮಧ್ಯದಲ್ಲಿ ನಿಂತಿದ್ದ ಪರ್ವತವನ್ನು ನೋಡಿ ಹನುಮಂತನು, ತನ್ನ ಗಮನಕ್ಕೆ ವಿಘ್ನವೇನೋ ಬಿಳ್ಳುವುದೆಂಬಾಯಿತೆಂದು ಎಣಿಸಿದನು. ಮಹಾವೇಗವುಳ್ಳ ಆ ಹನುಮಂತನು ಅತ್ಯುನ್ನತನಾಗಿ ತನ್ನಮುಂದೆ ನಿಂತಿದ್ದ ಆ ಬೆಟ್ಟವನ್ನು ನೋಡಿ, ಗಾಳಿಯು ಮೇಘವನ್ನು ಅಪ್ಪಳಿಸುವಂತೆ ತನ್ನ ಎದೆಯಿಂದ ಗುದ್ದಿ ಕೆಡಹಿದನು. ಮೈನಾಕನು ಆ ಪ್ರಹಾರವನ್ನು ತಡೆಯಲಾರದೆ ಕೆಳಗೆ ಬೀಳುತಿದ್ದರೂ, ಹನುಮಂತನ ವೇಗಾತಿಶಯ

ನನ್ನು ನೋಡಿ ಪರಮಸಂತೋಷವನ್ನುಹೊಂದಿ ಆನಂದದಿಂದುಕ್ಕುತಿದ್ದನು. ಹನುಮಂತನ ವೀರ್ಯಕ್ಕೆ ಸಂತೋಷಗೊಂಡು ಪ್ರಸನ್ನಮುಖನಾಗಿ ತಿರುಗಿ ಆಕಾಶಕ್ಕೆ ಹಾರಿ ಮನುಷ್ಯರೂಪದಿಂದ ತನ್ನ ಶಿಖರದಮೇಲೆ ಕಾಣಿಸಿಕೊಂಡು, ಆಕಾಶದಲ್ಲಿರುವ ಆಂಜನೇಯನನ್ನು ಕುರಿತು, "ಎಲೆ ವಾನರೋತ್ತಮನೆ! ನೀನು ಈಗ ಬೇರೊಬ್ಬರಿಗೂ ಸಾಧ್ಯವಲ್ಲದ ಈ ಕಾರ್ಯವನ್ನು ನಡೆಸುತ್ತಿರುವೆ! ನನ್ನ ಶಿಖರದಲ್ಲಿ ಕ್ಷಣಕಾಲದವರೆಗೆ ನಿಂತು, ನಿನ್ನ ಬಳಲಿಕೆಯನ್ನಾರಿಸಿಕೊಂಡಾದರೂ ಸುಖವಾಗಿ ಮುಂದೆ ಹೋಗಬಾರದೆ? ಈ ಸಮುದ್ರನು ರಘುವಂಶದಲ್ಲಿ ಹುಟ್ಟಿದ ವರಿಂದಲೇ ವೃದ್ಧಿಗೆ ಬಂದವನು. ಆ ರಘುವಂಶೋತ್ತಮನಾದ ರಾಮನ ಹಿತಕ್ಕಾಗಿಯೇ ನೀನು ಹೊರಟುಬಂದಿರುವುದರಿಂದ ಈತನು ನಿನ್ನನ್ನು ಸತ್ಕರಿಸಬೇಕೆಂದಿರುವನು. ಉಪಕಾರವನ್ನು ಮಾಡಿದವರಿಗೆ ಪ್ರತ್ಯುಪಕಾರವನ್ನು ಮಾಡಬೇಕಾದುದೇ ನ್ಯಾಯವು. ಇದು ಪುರಾತನಧರ್ಮವು. ಪೂರ್ವದಲ್ಲಿ ಸಗರನು ತನಗೆ ಮಾಡಿದ ಉಪಕಾರವನ್ನು ಸ್ಮರಿಸಿಕೊಂಡು, ಈ ಸಮುದ್ರನು ಆ ವಂಶದಲ್ಲಿ ಹುಟ್ಟಿದ ರಾಮನಿಗೆ ದೂತನಾಗಿ ಬಂದ ನಿನಗೆ ಆತಿಥ್ಯವೆಂಬ ಪ್ರತ್ಯುಪಕಾರವನ್ನು ಮಾಡಬೇಕೆಂದು ಉದ್ದೇಶಿಸಿರುವನು. ಆದುದರಿಂದ ನಾನು ಮಾಡುವ ಆತಿಥ್ಯವನ್ನು ಸ್ವೀಕರಿಸಿದರೆ, ನೀನು ಸಮುದ್ರನನ್ನು ಸಮ್ಮಾನಿಸಿದಂತಾಗುವುದು. ನಿನಗಾಗಿಯೇ ಸಮುದ್ರನು ನನ್ನನ್ನು ಎಷ್ಟೋ ವಿಧದಿಂದ ಪ್ರೋತ್ಸಾಹಿಸುತ್ತ, ನನ್ನನ್ನು ನೋಡಿ "ಈ ಕಪಿಶ್ರೇಷ್ಠನು ನೂರು ಯೋಜನಗಳನ್ನೂ ಒಂದೇ ನೆಗೆತಕ್ಕೆ ದಾಟಬೇಕೆಂದು ಹಾರಿರುವನು. ಈ ನಡುವೆ ನಿನ್ನ ತಪ್ಪಲುಗಳಲ್ಲಿ ವಿಶ್ರಮಿಸಿಕೊಂಡು ಅಮೇಲೆ ಉಳಿದ ಭಾಗವನ್ನು ದಾಟಲಿ" ಎಂದು ಹೇಳಿ ಕಳುಹಿಸಿರುವನು. ಆದುದರಿಂದ ಎಲೈ ವಾನರೋತ್ತಮನೆ! ನನ್ನ ಮೇಲೆ ಈಗ ಸ್ವಲ್ಪಕಾಲದವರೆಗೆ ಕುಳಿತಿದ್ದು ಶ್ರಮವನ್ನಾರಿಸಿಕೊಂಡು ಮುಂದೆ ಹೋಗು. ಇಗೋ! ಇಲ್ಲಿ ರುಚಿರುಚಿಯಾದ, ಗಡ್ಡೆಗಣಸುಗಳು ಬೇಕಾದಷ್ಟು ಬೆಳೆದಿರುವುವು. ಸುಗಂಧಪುಷ್ಪಗಳು ತುಂಬಿರುವುವು. ಇವೆಲ್ಲವನ್ನೂ ಅನುಭವಿಸಿ ಮುಂದೆ ಹೋಗು. ಎಲೈ ಕಪೀಂದ್ರನೆ! ನಿನ್ನೊಡನೆ ನಮಗುಂಟಾಗಿರುವ ಸಂಬಂಧವು ಲೋಕಪ್ರಸಿದ್ಧವಾದುದು. ಇದರಮೇಲೆ ನೀನು ಅತಿಥಿಯು. ನಾವು ಆತಿಥ್ಯವನ್ನು ಕೊಡುವವರಾಗಿರುವೆವು. ಈ ಘಟನೆಯನ್ನಾದರೂ ನೀನು ಮನಸ್ಸಿಗೆ ತಂದುಕೊಂಡು ನಮ್ಮ ಪೂಜೆಯನ್ನು ಕೈಕೊಳ್ಳಬೇಕು. ಈ ಸಂಬಂಧವನ್ನು ಹೊಸದಾಗಿ ನಾವಿಬ್ಬರು ಮಾತ್ರ ಕೊಂಡಾಡುವವರಲ್ಲ. ಮಜ್ಜಾತ್ಮರಾದ ಸಜ್ಜನರೆಲ್ಲರೂ ಅತ್ಯಾದರದಿಂದ ಇದನ್ನು ಪರಿಗ್ರಹಿಸಿರು

ವು. ಆದರೆ, ಎಲ್ಲಿ ವಾನರೋತ್ತಮನೆ! ನೀನು ಇಷ್ಟು ಕಂಗಿ ಜೋದವಮಾತ್ರಕ್ಕೆ ನಿನ್ನ ಶಕ್ತಿಗೆ ನ್ಯೂನತೆಯುಂಟೆಣಿಸಬೇಡ! ವೇಗದಲ್ಲಿಯಾಗಲಿ, ಲಂಘನಶಕ್ತಿಯಲ್ಲಿ ಯಾಗಲಿ ನೀನು ಮೇಲೆನಿಸಿ-ವುದರಲಿ ಸಂದೇಹವಿಲ್ಲ. ಧರ್ಮನನ್ನು ಕಳಿದವನಿಗಾಗಲಿ, ಅಧನ್ನು ಕಳಿಯಬೇಕೆಂಬ ಅಕ್ಕರೆಯುಳ್ಳವನಿಗಾಗಲಿ ಅತಿಥಿಯು ಕೇವಲ ಪ್ರಾಕೃತನಾಗಿದ್ದರೂ ಪೂಜಾರ್ಹನೆನಿಸುವನು. ಜಾಗರೂಕನಾಗಿ ನಿನ್ನಂತಹ ಸುಜ್ಞಾನಿಯು ಪೂಜೆಗೆ ಯೋಗ್ಯನೆಂಬುದನ್ನು ಹೇಳಬೇಕಾದುದೇನು? ಎಲ್ಲ ಕಪಿಗಳಿಂದಲೂ ರನೆ! ನೀನಾದರೋ ದೇವಶ್ರೇಷ್ಠನಾಗಿ ಹುಟ್ಟಿಶಾಸ್ತ್ರನಿಪುಣನೆಂಬಿಂಡ ವಾಯುದೇವನಿಗೆ ಪುತ್ರನು. ವೇಗದಲ್ಲಿಯೂ ಅತನಿಗೆ ಸಮಾನನನು. ನಾವು ನಿನ್ನನ್ನು ಸತ್ಕರಿಸಿದರೆ ಆ ವಾಯುದೇವನನ್ನೇ ಸತ್ಕರಿಸಿದಂತಾಗುವುದು. ಆದುದರಿಂದ ನೀನು ಜಗತ್ಪೂಜ್ಯನಾಗಿ ನಮಗೆ ಪೂಜ್ಯನು. ವಾಯುವನ್ನು ನಾನು ಪೂಜಿಸಬೇಕಾದುದಕ್ಕೆ ಕಾರಣವನ್ನು ಹೇಳುವೆನು ಕೇಳು. ಮೊದಲು ಕೃತಯುಗದಲ್ಲಿ ಪರ್ವತಗಳೆಲ್ಲವೂ ರೆಕ್ಕೆಯುಳ್ಳವುಗಳಾಗಿದ್ದುವು. ಆವು ಆ ರೆಕ್ಕೆಗಳ ಬಲದಿಂದ ಗರುಡನಿಗೂ ವಾಯುವಿಗೂ ಸಮವಾದ ವೇಗವುಳ್ಳವುಗಳಾಗಿ ನಾನಾದಿಕ್ಕುಗಳಿಗೂ ಹಾರುತಿದ್ದುವು. ಹೀಗೆ ಬೆಟ್ಟಗಳು ಹಾರುತ್ತಿರುವುದನ್ನು ಕಂಡು, ದೇವತೆಗಳೂ, ಋಷಿಗಳೂ, ಸಮಸ್ತ ಭೂತಗಳೂ "ಇವು ತಮ್ಮ ಮೇಲೆ ಎಲ್ಲಿ ಬೀಳುವುವೋ" ಎಂದು ಭಯಗೊಂಡರಲು, ಆಗ ಕುಪಿತನಾದ ಇಂದ್ರನು ಕೋಪಗೊಂಡು, ತನ್ನ ವಜ್ರಾಯುಧದಿಂದ ಪರ್ವತಗಳ ರೆಕ್ಕೆಯನ್ನು ಕಂಡಕಂಡಕಡೆಯಲ್ಲಿ ಕಡಿಯುತ್ತ ಬಂದನು. ಹಾಗೆಯೇ ದೇವೇಂದ್ರನು ತನ್ನ ವಜ್ರಾಯುಧವನ್ನೆತ್ತಿಕೊಂಡು ನನ್ನನ್ನೂ ಬೆನ್ನಟ್ಟಿ ಬಂದನು. ಆಗ ಮಹಾತ್ಮನಾದ ನಿನ್ನ ತಂದೆಯು ಅತಿವೇಗದಿಂದ ನನ್ನನ್ನು ತೂರಿಸಿಕೊಂಡು ಬಂದು ಈ ಲವಣಸಮುದ್ರದಲ್ಲಿ ಹಾಕಿಬಿಟ್ಟನು. ಎಲ್ಲೆ ವಾನರೋತ್ತಮನೆ! ನಿನ್ನ ತಂದೆಯೇ ನನ್ನ ರೆಕ್ಕೆಗಳನ್ನೂ ಉಳಿಸಿ ನನ್ನನ್ನು ಕಾಪಾಡಿದನು. ಅದು ದರಿಂದ ಆ ವಾಯುದೇವನು ನನಗೆ ಪರಮಪೂಜ್ಯನು. ಆದಕ್ಕಾಗಿಯೇ ನಿನ್ನನ್ನೂ ನಾನು ಸತ್ಕರಿಸಬೇಕಾಗಿರುವುದು. ಈಗ ನಿನ್ನೊಡನೆ ನನಗುಂಟಾದ ಸಂಬಂಧವು ನನ್ನ ಭಾಗ್ಯವೆಂದೇ ಭಾವಿಸುವೆನು. ಅದುದರಿಂದ ಎಲೆ ಮಹಾಕಪೀ! ಈ ಸಂದರ್ಭದಲ್ಲಿ ನೀನು ಪ್ರೀತಿಯುಟ್ಟು, ನನ್ನ ಸತ್ಕಾರವನ್ನು ಸ್ವೀಕರಿಸಿ ಈ ಸಮುದ್ರರಾಜನಿಗೂ, ನನಗೂ ಮನಸ್ಸಂತೋಷವನ್ನುಂಟುಮಾಡಬೇಕು. ನಿನ್ನ ಬಾಲಿಕೆಯನ್ನೂ ತೀರಿಸಿಕೊಂಡು ನನ್ನ ಪೂಜೆಯನ್ನೂ ಸ್ವೀಕರಿಸು! ನನ್ನ ಪ್ರೀತಿಪೂರ್ವಕವಾದ ಈ ಸತ್ಕಾರವನ್ನು ನೀನು ಅವಶ್ಯವಾಗಿ ಮನ್ನಿಸಬೇಕು. ನಿನ್ನ ದರ್ಶನವೇ ನನಗೆ ಅತ್ಯಾನಂದವನ್ನುಂಟುಮಾಡಿರುವುದು" ಎಂದನು. ಇದನ್ನು

ಕೇಳಿ ಆ ವಾನರಶ್ರೇಷ್ಠನು ಆ ಪರ್ವತೋತ್ತಮನನ್ನು ಕುರಿತು, "ಎಲೈ ಮೈನಾಕನೆ! ಇಷ್ಟರಿಂದಲೇ ನಾನು ಸಂತೋಷಪಟ್ಟೆನು. ನಿನ್ನ ಆತಿಥ್ಯವೂ ನನಗೆ ಬಂದಂತಾಯಿತು. ನಿನ್ನ ವಿಷಾದವನ್ನು ಬಿಡು! ನನ್ನನ್ನು ಮನ್ನಿಸಿ ಬಿಟ್ಟುಕೊಡು! ನನ್ನ ಮುಂದಿನ ಕಾರ್ಯಕ್ಕೆ ಇದು ತಕ್ಕ ಕಾಲವಾಗಿರುವುದು. ಈ ಕಾಲವೇ ನನ್ನನ್ನು ಅತುರಪಡಿಸುತ್ತಿರುವುದು. ಹಗಲು ಕಳೆಯುತ್ತ ಬಂದಿತು. ನಾನು ರಾಮಬಾಣದಂತೆ ಎಲ್ಲಿಯೂ ನಿಲ್ಲದೆ ವೇಗದಿಂದ ಲಂಕೆಗೆ ಹೋಗಿ ಬರುವೆನೆಂದು ವಾನರರಿಗೆ ಪ್ರತಿಜ್ಞೆಮಾಡಿಕೊಟ್ಟು ಬಂದಿರುವೆನು. ನಡುವೆ ನಿಲ್ಲುವುದು ಯುಕ್ತವಲ್ಲ" ಎಂದು ಸಮಾಧಾನವನ್ನು ಹೇಳಿ ಸಂತೋಷದಿಂದ ಅರಳಿದ ಮುಖವುಳ್ಳವನಾಗಿ, ತನ್ನ ಕೈಯಿಂದ ಆ ಬೆಟ್ಟವನ್ನು ಸವರಿ ಅಂತರಿಕ್ಷದ ದಾರಿಯನ್ನೇ ಹಿಡಿದು ಮುಂದೆ ಹೊರಟನು. ಇತ್ತ ರಲ್ಲಿ ಪರ್ವತರಾಜ ಸಮುದ್ರರಾಜರಿಬ್ಬರೂ ಆ ವಾಯುಪುತ್ರನನ್ನು ಗೌರವಿಸಿ, ತಕ್ಕ ಆಶೀರ್ವಚನಗಳನ್ನು ಹೇಳಿ ಪೂಜಿಸಿದರು. ಆ ಮೇಲೆ ಅಂಜನೇಯನು ಆ ಬೆಟ್ಟವನ್ನೂ ಬಿಟ್ಟು, ಮೇಲೆ ಬಹಳದೂರಕ್ಕೆ ಹಾರಿ ನೆಗೆದು ತನ್ನ ತಂದೆಯಾದ ವಾಯುವಿನ ಮಾರ್ಗವನ್ನೇ ಸೇರಿ ಆಕಾಶದಲ್ಲಿ ಹೋಗುತ್ತಿದ್ದನು. ಹನುಮಂತನು ನಡೆಸಿದ ಈ ಎರಡನೆಯ ಅಸಾಧ್ಯಕಾರ್ಯವನ್ನೂ ನೋಡಿ ಸಮಸ್ತ ದೇವತೆಗಳೂ, ಸಿದ್ಧರೂ, ಮಹರ್ಷಿಗಳೂ ಅತನನ್ನು ಪ್ರಶಂಸೆಮಾಡುತಿದ್ದರು. ಮತ್ತು ಸುನಾಭವೆಂಬ ಆ ಸುವರ್ಣಪರ್ವತದ ಕಾರ್ಯವನ್ನು ನೋಡಿ ಅಲ್ಲಿದ್ದ ದೇವತೆಗಳೂ, ಸಹಸ್ರಾಕ್ಷನಾದ ಇಂದ್ರನೂ, ಸಂತೋಷಭರಿತರಾಗಿದ್ದರು. ಆಗ ಧೀಮಂತನಾದ ಇಂದ್ರನೂ, ಸಂತೋಷದಿಂದ ಕುಗ್ಗಿದ ಗಂಭೀರಸ್ವರವುಳ್ಳವನಾಗಿ, ತಾನಾಗಿಯೇ ಮುಂದೆ ಬಂದು ಸುನಾಭನೆಂಬ ಆ ಪರ್ವತೋತ್ತಮನನ್ನು ಕುರಿತು, "ಎಲೈ ಹಿರಣ್ಯನಾಭನೆ! ನೀನೀಗ ಸಮಸ್ತಪರ್ವತಗಳಿಗೂ ಮೇಲಾದವನು. ನಿನ್ನ ಕಾರ್ಯಕ್ಕಾಗಿ ನಾನು ಬಹಳ ಸಂತೋಷಪಟ್ಟೆನು. ನನಗೆ ನಿನ್ನಲ್ಲಿದ್ದ ವೈರವೂ ಹೋಯಿತು. ನಿನಗೆ ಅಭಯವನ್ನು ಕೊಡುವೆನು. ನಿನಗಿಷ್ಟಬಂದಂತೆ ಸುಖವಾಗಿರು. ಭಯಪಡಬೇಕಾದ ಸಂದರ್ಭದಲ್ಲಿಯೂ ನಿರ್ಭಯನಾಗಿ ಸಮುದ್ರದ ಮೇಲೆ ನೂರು ಯೋಜನಗಳನ್ನು ದಾಟುತಿದ್ದ ವೀರನಾದ ಹನುಮಂತನಿಗೆ ನೀನು ಒಳ್ಳೇ ಸಹಾಯನ್ನುಮಾಡಿದೆ. ದಶರಥಪುತ್ರನಾದ ರಾಮನಿಗೆ ಈ ವಾನರನು ದೂತನಾಗಿ ಹೊರಟಿರುವಾಗ ಅವನಿಗೆ ನೀನು ಸತ್ಕಾರವನ್ನುಮಾಡಿದುದಕ್ಕಾಗಿ ನಾನು ಬಹಳ ಸಂತೋಷಪಟ್ಟೆನು" ಎಂದನು. ತನ್ನ ವಿಷಯದಲ್ಲಿ ದೇವೇಂದ್ರನು ಸಂತುಷ್ಟನಾದುದನ್ನು ನೋಡಿ ಆ ಪರ್ವತಕ್ಕೂ ಪರಮಸಂತೋಷವಾಯಿತು. ಇಂದ್ರನಿಂದ ಅಭಯವನ್ನು ಪಡೆದ ಮೈನಾಕವು ಅಂದಿನಿಂದ

ನಿರ್ಭಯವಾಗಿ ಸುಖದಿಂದಿತ್ತು. [1] ಮೈನಾಕವು ಅವರಿಸಿ ನಿಂತಿದ್ದ ಸಮುದ್ರ ಪ್ರದೇಶವನ್ನೂ ಆಂಜನೇಯನು ಒಂದು ಮುಹೂರ್ತದಲ್ಲಿ ದಾಟಬಿಟ್ಟನು. ಅಮೇಲೆ ದೇವತೆಗಳೂ, ಸಿದ್ಧರೂ, ಗಂಧರ್ವರೂ, ಮಹರ್ಷಿಗಳೂ ಸೇರಿ, ಸೂರ್ಯನಂತೆ ತೇಜಸ್ಸುಳ್ಳವಳಾಗಿಯೂ, ಹನ್ನಿರಿಗೆ ಮಾತೆಯಾಗಿಯೂ ಇರುವ ಸುರಸೆಯೆಂಬವಳನ್ನು ನೋಡಿ, "ಎಲೆ ಸುರಸೆ ಹನುಮಂತನೆಂಬ ಹೆಸರುಳ್ಳ ಈ ವಾಯುಪುತ್ರನು ಸಮುದ್ರಮಧ್ಯದಲ್ಲಿ ಹಾರಿ ಹೋಗುವುದನ್ನು ನೋಡು! ಎಷ್ಟುದೂರಕ್ಕೆ ಹಾರಿದರೂ ಅವನಿಗೆ ಮೇಲಿಮೇಲೆ ಬಲವು ಹೆಚ್ಚುತ್ತಿರುವುದು. ಅವನ ಕಾಂತಿಯೂ ಉಬ್ಬಿಬರುತ್ತಿರುವುದು. ಈಗ ನೀನು ಪರ್ವತದಂತೆ ದೊಡ್ಡದಾಗಿಯೂ ಭಯಂಕರವಾಗಿಯೂ ಇರುವ ಒಂದು ರಾಕ್ಷಸಾಕೃತಿಯನ್ನು ತಾಳಿ, ಅವನ ದಾರಿಗಡ್ಡಲಾಗಿ ನಿಂತು, ಒಂದು ಮುಹೂರ್ತಕಾಲದವರೆಗೆ ಅವನ ಗಮನವನ್ನು ತಡೆದಿಡು! ಪಿಂಗಳವರ್ಣವಾದ ಕಣ್ಣುಗಳನ್ನೂ, ಭಯಂಕರಗಳಾದ ಕೋರೆದಾಡೆಗಳನ್ನೂ ತೋರಿಸುತ್ತ, ಆಕಾಶದಂತೆ ಅಗಲವಾದ ಬಾಯನ್ನು ತೆರೆದೇ ಅವನ ಮುಂದೆ ನಿಲ್ಲು. ಅವನು ನಿನ್ನನ್ನು ಜಯಿಸಿ ಮುಂದೆ ಹೋಗುವನೋ, ಅಥವಾ ಭಯಪಟ್ಟು ದುಃಖದಿಂದೋಡುವನೋ ಎಂಬುದನ್ನು ತಿಳಿಯಬೇಕೆಂದಿರುವೆವು. ಆದರೆ ಅವನ ಬಲಪರಾಕ್ರಮಗಳನ್ನು ನಾವು ಮೊದಲೇ ಚೆನ್ನಾಗಿ ಬಲ್ಲೆವು. ಅದರೂ ಸಂದೇಹನಿವೃತ್ತಿಗಾಗಿ ತಿರುಗಿ ಪರೀಕ್ಷಿಸಬೇಕೆಂಗು ತೋರಿರುವುದು" ಎಂದರು. ದೇವತೆಗಳೆಲ್ಲರೂ ಹೀಗೆಂದು ಹೇಳಿ ಸುರಸೆಯನ್ನು ಸತ್ಕರಿಸಿ ಕಳುಹಿಸಲು, ಅಗಲೇ ಆ ನಾಗಮಾತೆಯು, ಸಮುದ್ರದನಡುವೆ ಅತಿವಿಕಾರವಾದ ಘೋರರಾಕ್ಷಸಿರೂಪದಿಂದ ಆ ವಾನರವೀರನ ಪಾಂಥನ್ನಡ್ಡಗಟ್ಟಿ ನಿಂತು, ಅತನನ್ನು ಕುರಿತು ಹೇಳುವಳು. "ಎಲೈ ವಾನರೋತ್ತಮನೆ! ದೇವತೆಗಳು ನಿನ್ನನ್ನು ನನಗೆ ಆಹಾರವಾಗಿ ತೋರಿಸಿರುವರು ನಿನ್ನನ್ನು ನಾನು ಭಕ್ಷಿಸಿಬಿಡಬೇಕು. ನನ್ನ ಬಾಯಲ್ಲಿ ಪ್ರವೇಶಿಸು" ಎಂದಳು. ಸುರಸೆಯು ಹೇಳಿದ ಈ ಮಾತನ್ನು ಕೇಳಿಯೂ, ಆಂಜನೇಯನು ಉಲ್ಲಾಸದಿಂದರಳಿದ ಮುಖವುಳ್ಳವನಾಗಿ, ಕೈಜೋಡಿಸಿ ಅವಳ ಮುಂದೆ ನಿಂತು, "ದಶರಥಪುತ್ರನಾದ ರಾಮನೆಂಬವನು ತನ್ನ ತಮ್ಮನಾದ ಲಕ್ಷ್ಮಣನೊಡನೆಯೂ, ಭಾರ್ಯೆಯಾದ ಸೀತೆಯೊಡನೆಯೂ ಸೇರಿ ದಂಡಕಾರಣ್ಯಕ್ಕೆ ಬಂದಿದ್ದನು. ಅಲ್ಲಿನ ರಾಕ್ಷಸರೊಡನೆ ಪ್ರಬಲವಾದ ವೈರವನ್ನು ಬೆಳೆಸಿದ ಆ ರಾಮನು ಬೇರೆ ಕಾರ್ಯಾತುರದಿಂದ ಸೀತೆಯನ್ನು

1. ಆಂಜನೇಯನು ಹಿಂತಿರುಗಿ ಬರುವಾಗಲೂ ಈ ಮೈನಾಕವನ್ನು ಮುಟ್ಟಿಬಂದು ಪಾಗಿ ಹೇಳಿರುವುದರಿಂದ ಮೈನಾಕವು ಆದುವರೆಗೂ ಹಾಗೆಯೇ ನಿಂತಿತ್ತೆಂದೂಹ್ಯವು.

ನಿರ್ಭಯವಾಗಿ ಸುಖದಿಂದಿತ್ತು. [1] ಮೈನಾಕವು ಅವರಿಸಿ ನಿಂತಿದ್ದ ಸಮುದ್ರ ಪ್ರದೇಶವನ್ನೂ ಆಂಜನೇಯನು ಒಂದು ಮುಹೂರ್ತದಲ್ಲಿ ದಾಟಬಿಟ್ಟನು. ಅಮೇಲೆ ದೇವತೆಗಳೂ, ಸಿದ್ಧರೂ, ಗಂಧರ್ವರೂ, ಮಹರ್ಷಿಗಳೂ ಸೇರಿ, ಸೂರ್ಯನಂತೆ ತೇಜಸ್ಸುಳ್ಳವಳಾಗಿಯೂ, ಪನ್ನಗರಿಗೆ ಮಾತೆಯಾಗಿಯೂ ಇರುವ ಸುರಸೆಯೆಂಬವಳನ್ನು ನೋಡಿ, "ಎಲೆ ಸುರಸೆ! ಹನುಮಂತನೆಂಬ ಹೆಸರುಳ್ಳ ಈ ವಾಯುಪುತ್ರನು ಸಮುದ್ರದಮೇಲೆ ಹಾರಿ ಹೋಗುವುದನ್ನು ನೋಡು! ಎಷ್ಟುದೂರಕ್ಕೆ ಹಾರಿದರೂ ಅವನಿಗೆ ಮೇಲೆಮೇಲೆ ಬಲವು ಹೆಚ್ಚುತ್ತಿರುವುದು. ಅವನ ಕಾಂತಿಯೂ ಉಬ್ಬಿಬರುತ್ತಿರುವುದು. ಈಗ ನೀನು ಪರ್ವತದಂತೆ ದೊಡ್ಡದಾಗಿಯೂ ಭಯಂಕರವಾಗಿಯೂ ಇರುವ ಒಂದು ರಾಕ್ಷಸಾಕೃತಿಯನ್ನು ತಾಳಿ, ಅವನ ದಾರಿಗಡ್ಡಲಾಗಿ ನಿಂತು, ಒಂದು ಮುಹೂರ್ತಕಾಲದವರೆಗೆ ಅವನ ಗಮನವನ್ನು ತಡೆದಿಡು! ಪಿಂಗಳವರ್ಣವಾದ ಕಣ್ಣುಗಳನ್ನೂ, ಭಯಂಕರಗಳಾದ ಕೋರೆದಾಡೆಗಳನ್ನೂ ತೋರಿಸುತ್ತ, ಆಕಾಶದಂತೆ ಅಗಲವಾದ ಬಾಯನ್ನು ತೆರೆದೇ ಅವನ ಮುಂದೆ ನಿಲ್ಲು. ಅವನು ನಿನ್ನನ್ನು ಜಯಿಸಿ ಮುಂದೆ ಹೋಗುವನೋ, ಇಥವಾ ಭಯಪಟ್ಟು ದುಃಖದಿಂದೋಡುವನೋ ಎಂಬುದನ್ನು ತಿಳಿಯಬೇಕೆಂದಿರುವೆವು. ಅದರೆ ಅವನ ಬಲಪರಾಕ್ರಮಗಳನ್ನು ನಾವು ಮೊದಲೇ ಚೆನ್ನಾಗಿ ಬಲ್ಲೆವು. ಆದರೂ ಸಂದೇಹನಿವೃತ್ತಿಗಾಗಿ ತಿರುಗಿ ಪರೀಕ್ಷಿಸಬೇಕೆಂಗು ತೋರಿರುವುದು" ಎಂದರು. ದೇವತೆಗಳೆಲ್ಲರೂ ಹೀಗೆಂದು ಹೇಳಿ ಸುರಸೆಯನ್ನು ಸತ್ಕರಿಸಿ ಕಳುಹಿಸಲು, ಅಗಲೇ ಆ ನಾಗಮಾತೆಯು, ಸಮುದ್ರದನಡುವೆ ಅತಿವಿಕಾರವಾದ ಘೋರರಾಕ್ಷಸರೂಪದಿಂದ ಆ ವಾನರವೀರನ ದಾರಿಯನ್ನಡ್ಡಗಟ್ಟಿ ನಿಂತು, ಅತನನ್ನುದ್ದೇಶಿಸಿ ಹೇಳುವಳು. "ಎಲೈ ವಾನರೋತ್ತಮನೆ! ದೇವತೆಗಳು ನಿನ್ನನ್ನು ನನಗೆ ಆಹಾರವಾಗಿ ತೋರಿಸಿರುವರು. ನಿನ್ನನ್ನು ನಾನು ಭಕ್ಷಿಸಿಬಿಡಬೇಕು. ನನ್ನ ಬಾಯಲ್ಲಿ ಪ್ರವೇಶಿಸು" ಎಂದಳು. ಸುರಸೆಯು ಹೇಳಿದ ಈ ಮಾತನ್ನು ಕೇಳಿಯೂ, ಆಂಜನೇಯನು ಉಲ್ಲಾಸದಿಂದರಳಿದ ಮುಖವುಳ್ಳವನಾಗಿ, ಕೈಜೋಡಿಸಿ ಅವಳ ಮುಂದೆ ನಿಂತು, "ದಶರಥಪುತ್ರನಾದ ರಾಮನೆಂಬವನು ತನ್ನ ತಮ್ಮನಾದ ಲಕ್ಷ್ಮಣನೊಡನೆಯೂ, ಭಾರ್ಯೆಯಾದ ಸೀತೆಯೊಡನೆಯೂ ಸೇರಿ ದಂಡಕಾರಣ್ಯಕ್ಕೆ ಬಂದಿದ್ದನು. ಅಲ್ಲಿನ ರಾಕ್ಷಸರೊಡನೆ ಪ್ರಬಲವಾದ ವೈರವನ್ನು ಬೆಳೆಸಿದ ಆ ರಾಮನು ಬೇರೆ ಕಾರ್ಯಾತುರದಿಂದ ಸೀತೆಯನ್ನು

1. ಆಂಜನೆಯನು ಹಿಂತಿರುಗಿ ಬರುವಾಗಲೂ ಈ ಮೈನಾಕವನ್ನು ಮುಟ್ಟಿಬಂದು ಹಾಗಿ ಹೇಳಿರುವುದರಿಂದ ಮೈನಾಕವು ಅದುವರೆಗೂ ಹಾಗೆಯೇ ನಿಂತಿತ್ತೆಂದೂಹ್ಯವು.

ಬಿಟ್ಟು ಹೊರಗೆ ಹೋಗಿದ್ದಾಗ, ಕೀರ್ತಿಮತಿಯಾದ ಅತನ ಪತ್ನಿಯನ್ನು ರಾವಣನೆಂಬ ರಾಕ್ಷಸನು ಕದ್ದುಯ್ದಿರುವನು. ನಾನು ಆ ರಾಮನ ಆಜ್ಞಾನುಸಾರವಾಗಿಯೇ ಸೀತೆಯು ಬಳಿಗೆ ದೂತನಾಗಿ ಹೋಗುತ್ತಿರುವೆನು. ಅಮ್ಮಾ! ನೀನಾ ಕೂಡ ತ್ರಿಲೋಕನಾಥನಾದ ಆ ರಾಮನ ರಾಜ್ಯದಲ್ಲಿ ವಾಸಮಾಡುವವಳಲ್ಲವೆ? ಆದುದರಿಂದ ಶ್ರೀಘ್ರದಾದಮಟ್ಟಿಗೆ ನೀನೂ ಅವನಿಗೆ ಸಹಾಯವನ್ನು ಮಾಡಬೇಕು. ಆದುದರಿಂದ ಅವನ ಕಾರ್ಯಾರ್ಥವಾಗಿ ಹೊರಟಿರುವ ಇನ್ನನ್ನು ಪಿಡಿಯಬೇಡ! ಸರ್ವಥಾ ನನ್ನನ್ನು ಬಿಡುವುದಕ್ಕೆ ನಿನಗೆ ಸಮ್ಮತವಿಲ್ಲದ ಪಕ್ಷದಲ್ಲಿ, ನಾನು ಸೀತೆಯನ್ನೂ, ರಾಮನನ್ನೂ ಕಂಡು, ಅವರವರ ಯೋಗಕ್ಷೇಮಗಳನ್ನು ತಿಳಿಸಿ ಬಂದನಂತರ ನಿನ್ನ ಬಾಯಲ್ಲಿ ಪ್ರವೇಶಿಸಿಬಿಡುವೆನು. ಬೇಕಾದರೆ ಈ ವಿಷಯದಲ್ಲಿ ನಾನು ನಿನಗೆ ಆಣೆಯಿಟ್ಟು ಪ್ರಮಾಣಮಾಡಿಕೊಡುವೆನು" ಎಂದನು. ಇದನ್ನು ಕೇಳಿ ಕಾಮರೂಪಿಣಿಯಾದ ಸುರಸೆಯು ಪುನಃ ಹನುಮಂತನನ್ನು ಕುರಿತು, "ಅಯ್ಯಾ! ಯಾರಾದರೇನು? ನನ್ನ ಕಡೆಗೆ ಬಂದಮೇಲೆ ನನ್ನನ್ನು ವಿಾರಿ ಹೋಗಕೂಡದು. ನನಗೆ ಇದೊಂದು ವರವು" ಎಂದಳು. (1 ಆ ಹನುಮಂತನ ಬಲವನ್ನು ಪರೀಕ್ಷಿಸಬೇಕೆಂದು ಬಂದ ಸುರಸೆಯು ಹೀಗೆಂದು ಹೇಳಿ ತಿರುಗಿ ಅತನನ್ನು ನೋಡಿ "ಎಲೆ ವಾನರೋತ್ತಮನೇ! ಯಾರಾದರೇನು? ನನ್ನ ಬಾಯಲ್ಲಿ ಪ್ರವೇಶಿಸದೆ ಮುಂದೆ ಹೋಗಕೂಡದು. ಆದುದರಿಂದ ನೀನು ನನ್ನ ಬಾಯನ್ನು ಪ್ರವೇಶಿಸಿಯೇ ಹೋಗಬೇಕು. ಪೂರ್ವದಲ್ಲಿ ನನಗೆ ಬ್ರಹ್ಮನು ಈ ವರವನ್ನು ಕೊಟ್ಟಿರುವನು" ಎಂದು ಹೇಳುತ್ತ, ಆ ಸುರಸೆಯು ಅತಿವೇಗದಿಂದ ಮುಂದೆ ಬಂದು ವಿಸ್ತಾರವಾಗಿ ತನ್ನ ಬಾಯನ್ನು ತೆರೆದುಕೊಂಡು ಮಾರುತಿಯ ಮುಂದೆ ನಿಂತಳು. ಇದನ್ನು ಕಂಡು ಹನುಮಂತನಿಗೆ ತಡೆಯಲಾರದ ಕೋಪವುಂಟಾಯಿತು. ಆಗ ಆ ಕಪಿವೀರನು ಅತ್ಯಾಕ್ರೋಶದಿಂದ ಸುರಸೆಯನ್ನು ನೋಡಿ "ಎಲೆ ಸುರಸೆ! ಎಲ್ಲಿ? ನನ್ನನ್ನು ನುಂಗುವ ನಿನ್ನ ಬಾಯನ್ನು ತೋರಿಸು" ಎಂದಾರ್ಭಟಿಸಿ, ಆಗಲೇ ತನ್ನ ದೇಹವನ್ನು ಹತ್ತುಯೋಜನಗಳ ಉದ್ದಕ್ಕೂ, ಅಷ್ಟೇ ಅಗಲಕ್ಕೂ ವ್ಯಾಪಿಸುವಂತೆ ಬೆಳೆಸಿಬಿಟ್ಟನು. ಈ ಹನುಮಂತನು ಹತ್ತುಯೋಜನಗಳ ವಿಸ್ತಾರಕ್ಕೆ ಬೆಳೆದು ಮಹಾನೇಘವಂತಿರುವುದನ್ನು ಕಂಡು, ಸುರಸೆಯು ತನ್ನ ಬಾಯನ್ನು ಇಪ್ಪತ್ತುಯೋಜನಗಳ ವಿಸ್ತಾರಕ್ಕೆ ಅಗಲಿಸಿದಳು. ಇವಳ ಬಾಯಿಯು ಅಷ್ಟುದೊಡ್ಡದಾದನ್ನು ಕಂಡು ಧೀವಂತನಾದ ಹನುಮಂತನು, ತನ್ನ ಮೈಯನ್ನು ಮೂವತ್ತುಯೋಜನಗಳ ಪ್ರಮಾಣಕ್ಕೆ ಬೆಳೆಸಿದನು.

1. ಈ ಕುಂಡಲೀಕರಣವುಳ್ಳಭಾಗವು ಪ್ರಕ್ಷಿಪ್ತವೆಂದು ತೋರುವುದು.

ಇದನ್ನು ನೋಡಿ ಸುರಸೆಯು ನಾಲ್ವತ್ತು ಯೋಜನಪ್ರಮಾಣಕ್ಕೆ ತನ್ನ ಬಾಯನ್ನ ಗಲಿಸಿದಳು. ಹನುಮಂತನು ಐವತ್ತುಯೋಜನಕ್ಕೆ ಬಳೆದನು. ಸುರಸೆಯ ಬಾಯಿಯು ಅರುವತ್ತು ಯೋಜನಗಳ ಅಗಲವಾಯಿತು. ಹನುಮಂತನ ದೇಹವು ಎಪ್ಪತ್ತು ಯೋಜನಗಳ ಪ್ರಮಾಣಕ್ಕೆ ಬಳೆಯಿತು. ಸುರಸೆಯು ಎಂಬತ್ತು ಯೋಜನಗಳ ಪ್ರಮಾಣಕ್ಕೆ ಬಾಯನ್ನಗಲಿಸಿದಳು. ಹನುಮಂತನ ದೇಹವು ತೊಂಬತ್ತು ಯೋಜನಗಳಷ್ಟಾಯಿತು. ಸುರಸೆಯ ಬಾಯಿಯು ನೂರುಯೋಜನಗಳ ಅಗಲದಷ್ಟಾಯಿತು. ಆಗ ಧೀಮಂತನಾದ ವಾಯುಪುತ್ರನು ಉದ್ದವಾದ ನಾಲಗೆಯಿಂದ ಕೂಡಿ, ನರಕದಂತೆ ಭಯಂಕರವಾಗಿ ತೆರೆದಿರುವ ಆ ಸುರಸೆಯ ಬಾಯನ್ನು ನೋಡಿದನು. ಸೂಕ್ಷ್ಮರೂಪದಿಂದ ಆ ಬಾಯೊಳಗೆ ನುಗ್ಗಿ ತಟ್ಟನೆ ಹೊರಗೆ ಬಂದುಬಿಡುವುದಕ್ಕೆ ಇದೇ ಸರಿಯಾದ ಸಮಯವೆಂದೂಹಿಸಿ, ತನ್ನ ಮೈಯನ್ನು ಅತಿಸೂಕ್ಷ್ಮವಾಗಿ ಹೆಬ್ಬೆರಳಿನ ಗಾತ್ರಕ್ಕೆ ಮಾಡಿಕೊಂಡು, ಆ ಬಾಯೊಳಗೆ ನುಗ್ಗಿ, ಎವೆಹಾರುವಷ್ಟರಲ್ಲಿ ವೇಗದಿಂದ ಹೊರಕ್ಕೆ ಬಂದು, ಮೊದಲಿನಂತೆ ಅಂತರಿಕ್ಷದಲ್ಲಿ ನಿಂತು, ಆಕೆಯನ್ನು ಕುರಿತು ಹೀಗೆಂದು ಹೇಳುವನು. "ಎಲೆ [1] ದಕ್ಷಪುತ್ರಿ! ನಾನು ನಿನ್ನ ಬಾಯಲ್ಲಿ ನುಗ್ಗಿಬಂದೆನಷ್ಟೆ? ಇನ್ನು ನಿನಗೆ ನಮಸ್ಕಾರವು. ಬ್ರಹ್ಮನು ನಿನಗೆ ಕೊಟ್ಟಿರುವ ವರವೂ ಸಫಲವಾಯಿತು. ಇನ್ನು ನನ್ನನ್ನು ಬಿಡು" ಎಂದನು. ರಾಹುವಿನ ಬಾಯಿಯಿಂದ ಮುಕ್ತನಾದ ಚಂದ್ರನಂತೆ ತನ್ನ ಬಾಯಿಂದ ಹೊರಕ್ಕೆ ಬಂದು ನಿಂತಿರುವ ಆಂಜನೇಯನನ್ನು ಕಂಡು ಆ ಸುರಸಾದೇವಿಯು ಸಂತುಷ್ಟಳಾಗಿ, ತನ್ನ ನಿಜರೂಪವನ್ನು ತೋರಿಸುತ್ತ "ಅಯ್ಯಾ ವಾನರೋತ್ತಮನೆ! ಎಲೆ ಸೌಮ್ಯನೆ! ಇನ್ನು ನೀನು ಸುಖವಾಗಿ ನಿನ್ನ ಕಾರ್ಯಸಿದ್ಧಿಗಾಗಿ ಹೋಗಿ ಬಾ! ಸೀತೆಯನ್ನು ತಂದು ಮಹಾತ್ಮನಾದ ಶ್ರೀರಾಮನೊಡನೆ ಸೇರಿಸು" ಎಂದಳು. ಹನುಮಂತನು ನಡೆಸಿದ ಈ ಮೂರನೆಯ ಅಸಾಧ್ಯಕಾರ್ಯವನ್ನೂ ನೋಡಿ ಅಲ್ಲಿದ್ದ ಸಮಸ್ತಭೂತಗಳೂ "ಭಲೆ ಭಲೆ!" ಎಂದು ಆ ವಾನರೋತ್ತಮನನ್ನು ಕೊಂಡಾಡುತಿದ್ದುವು. ವೇಗದಲ್ಲಿ ಗರುಡನಿಗೆಣೆಯಾದ ಈ ಆಂಜನೇಯನು ಬೇರೊಬ್ಬರಿಂದ ದಾಟಲಸಾಧ್ಯವಾದ ಆ ಮಹಾಸಾಗರವನ್ನೂ ಕೂಡ ಆಕಾಶಮಾರ್ಗದಿಂದಲೇ ದಾಟಿ ಹೋಗುತ್ತಿದ್ದನು. ಅಂತರಿಕ್ಷಮಾರ್ಗಸಂಚಾರವೇನು ಸುಲಭಸಾಧ್ಯವೆ? ನೋಡಗಳಿಂದ ಅಲ್ಲಲ್ಲಿ ಪ್ರವಹಿಸುವ ಜಲಧಾರೆಯೇ ಎಡೆಬಿಡದೆ ಸುರಿಯುತ್ತಿರುವುದು. ಅಲ್ಲಲ್ಲಿ ಪಕ್ಷಿ

1. ಇಲ್ಲಿ ಹನುಮಂತನು ದಕ್ಷಪುತ್ರಿಯೆಂದು ಸಂಬೋಧಿಸಿರುವುದರಿಂದ, ಹಿಂದೆ ಸುರಸೆಯು ಹೇಳಿದಮಾತಿನಲ್ಲಿ ತನ್ನ ಜನ್ಮವೃತ್ತಾಂತವನ್ನೂ ಆಕೆಗೆ ತಿಳಿಸಬೇಕೆಂಬೂಹ್ಯವು.

ಸಮೂಹಗಳು ಗುಂಪಾಗಿ ಸಂಚರಿಸುತ್ತಿರುವುವು. ಮತ್ತೊಂದುಕಡೆಯಲ್ಲಿ ಗಾನ ವಿದ್ಯೆಗೆ ಆಚಾರ್ಯರಾದ ತುಂಬುರಮೊದಲಾದ ವಿದ್ಯಾಧರರು ತುಂಬಿರುವರು. ಅಲ್ಲಲ್ಲಿ ಉದ್ದವಾಗಿ ನೆಟ್ಟಗಿರುವ ಇಂದ್ರಧ್ವಜಸ್ತಂಭಗಳು ಹಬ್ಬಿರುವುದು. ಸಿಂಹಗಳಿಂದಲೂ, ಆನೆಗಳಿಂದಲೂ, ಹುಲಿಗಳಿಂದಲೂ, ಪಕ್ಷಿಗಳಿಂದಲೂ, ಸರ್ಪಗಳಿಂದಲೂ ಎಳೆಯಲ್ಪಡುವ ಅತಿಶುಭ್ರಗಳಾದ ದೇವವಿಮಾನಗಳು ಅಲ್ಲಲ್ಲಿ ಸುತ್ತಿಬರುತ್ತಿರುವುವು. ಆಗಾಗ ಇಂದ್ರನ ವಜ್ರಾಘಾತದಿಂದುಂಟಾದ ಸಿಡಿಲಿನ ವೇಗದಿಂದುಬ್ಬಿ ಬರುವ ಬೆಂಕಿಯ ಕಿಡಿಗಳು ಅಕಸ್ಮಿಕವಾಗಿ ವ್ಯಾಪಿಸುತ್ತಿರುವುವು. ತಾವು ನಡೆಸಿದ ಪುಣ್ಯಕಾರ್ಯಗಳಿಂದ ಸ್ವರ್ಗವನ್ನು ಜಯಿಸಿದ ಮಹಾತ್ಮರನೇಕರು ಅಲ್ಲಲ್ಲಿ ತುಂಬಿರುವರು. ಅಗ್ನಿಹೋತ್ರವನ್ನು ದೇವತೆಗಳಿಗೆ ಹವಿಸ್ಸನ್ನು ಹೊತ್ತುಕೊಂಡು ಹೋಗುವ ದಾರಿಯೇ ಇದು. ಅಶ್ವಿನ್ಯಾದಿತಾರೆಗಳಿಗೂ, ಸೂರ್ಯಚಂದ್ರರಿಗೂ, ಇತರ ಗ್ರಹನಕ್ಷತ್ರಗಳಿಗೂ ಇದೇ ಆಶ್ರಯವಾಗಿ ಶೋಭಿಸುತ್ತಿರುವುದು. ಎಲ್ಲಿ ನೋಡಿದರೂ ಮಹರ್ಷಿಗಳೂ, ನಾಗರೂ, ಯಕ್ಷರೂ, ಗಂಧರ್ವರೂ ತುಂಬಿರುವರು. ಮತ್ತು ಅದು ವಿವಿಕ್ತವಾಗಿಯೂ ನಿರ್ಮಲವಾಗಿಯೂ, ಕೊನೆಮೊದಲಿಲ್ಲದೆ ಸರ್ವವ್ಯಾಪಕವಾಗಿಯೂ, ವಿಶ್ವಾವಸುವೆಂಬ ಗಂಧರ್ವರಾಜನಿಂದ ಸೇವಿತವಾಗಿಯೂ ಇರುವುದು. ಐರಾವತಕ್ಕೂ ಚಂದ್ರಸೂರ್ಯರಿಗೂ ಆದೇ ಸಂಚಾರಮಾರ್ಗವು. ಪ್ರಾಣಿಲೋಕಕ್ಕಾಗಿ ಬ್ರಹ್ಮನು ನಿರ್ಮಿಸಿದ ವಿಸ್ತಾರವಾದ ಮೇಲುಕಟ್ಟೋ ಎಂಬಂತಿರುವುದು. ವೀರರಾದ ವಿದ್ಯಾಧರರು ಆಗಾಗ ಅಲ್ಲಿ ಬಂದು ನೆರೆಯುತ್ತಿರುವರು. ಇಂತಹ ಆಕಾಶದಲ್ಲಿಯೂ ಹನುಮಂತನು ಗರುಡನಂತೆ ವೇಗದಿಂದ ಹಾರಿಬಂದನು. (ಇವನು ಬಿರುಗಾಳಿಯಂತೆ ತನ್ನ ವೇಗದಿಂದ ಮೇಘಗಳನ್ನೂ ಎಳೆದುಕೊಂಡು ಹೋಗುತ್ತಿದ್ದನು. ಇವನ ಹಿಂದೆ ಕಪ್ಪು, ಕೆಂಪು, ಹಳದಿ, ಬಿಳುಪು ಮುಂತಾದ ಬಣ್ಣಗಳುಳ್ಳ ಮೇಘಗಳು ಶೋಭಿಸುತ್ತಿರಲು, ಆಗಾಗ ಮೇಘಗಳಿಂದಾಚೆಯಿಂದ ಇಣುಕಿ ಇಣುಕಿ ಬರುತ್ತ ಮಳೆಗಾಲದ ಚಂದ್ರನಂತೆ ತೋರುತ್ತಿದ್ದನು.) ಹೀಗೆ ನಿರಾಲಂಬವಾದ ಆಕಾಶದಲ್ಲಿ ರೆಕ್ಕೆಯುಳ್ಳ ಬೆಟ್ಟದಂತೆ ಅತಿವೇಗದಿಂದ ಹಾರಿಬರುತ್ತಿರುವ ಹನುಮಂತನನ್ನು, ಸಿಂಹಿಕೆಯೆಂಬ ರಾಕ್ಷಸಿಯೊಬ್ಬಳು ನೋಡಿದಳು. ಅವಳೂ ಕಾಮರೂಪಿಣಿಯಾದುದರಿಂದ, ತನ್ನ ದೇಹವನ್ನು ದೊಡ್ಡದಾಗಿ ಬಳೆಸಿಕೊಂಡು, ತನ್ನ ಮನಸ್ಸಿನಲ್ಲಿ "ಅಹಾ! ಬಹುಕಾಲಕ್ಕೆ ಈಗ ನಾನು ಚೆನ್ನಾಗಿ ಆಹಾರವನ್ನು ಭಕ್ಷಿಸಬಹುದು. ಬಹುಕಾಲಕ್ಕೆ ಈ ದೊಡ್ಡಜಂತುವು ನನ್ನ ಕೈಗೆ ಸಿಕ್ಕಿಬಿದ್ದಿರುವುದು" ಎಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ಸಮುದ್ರದಮೇಲೆ ಬಿದ್ದಿದ್ದ ಆಂಜನೇಯನ ದೇಹಚ್ಛಾಯೆ

ಯನ್ನು ಹಿಡಿದು ತಡೆದಳು. ಈ ನೆರಳನ್ನು ಹಿಡಿದೊಡನೆಯೇ ಹನುಮಂತನ ನಡೆಯೂ ನಿಂತುಹೋಯಿತು. ಆಗ ಹನುಮಂತನು ಬೆಜ್ಜರಬಿದ್ದು ತನ್ನ ಮನಸ್ಸಿನಲ್ಲಿ "ಓಹೋ! ಅಕಸ್ಮಾತ್ತಾಗಿ ಯಾರೋ ನನ್ನನ್ನು ತಡೆದಿರುವರಲ್ಲಾ! ಸಮುದ್ರದಲ್ಲಿ ಇದಿರುಗಾಳಿಯಿಂದ ತಡೆಯಲ್ಪಟ್ಟ ದೊಡ್ಡ ಹಡಗಿನಂತೆ ಈಗ ನನ್ನ ಪರಾಕ್ರಮಕ್ಕೂ ಕಾಲುಮುರಿದಂತಾಯಿತು" ಎಂದು ಚಿಂತಾಕ್ರಾಂತನಾಗಿ, ದಿಗ್ಭ್ರಾಂತನಾದಂತೆ ತನ್ನ ಪಕ್ಕಗಳಲ್ಲಿಯೂ, ಮೇಲೆಯೂ, ಕೆಳಗೂ ಕಣ್ಣಿಟ್ಟು ನೋಡುತ್ತಿದ್ದನು. ಆಗ ಕೆಳಗೆ ಲವಣ ಸಮುದ್ರದಲ್ಲಿ ಮೇಲೆದ್ದು ನಿಂತಿದ್ದ ಒಂದು ದೊಡ್ಡ ಭೂತವು ಅವನ ಕಣ್ಣಿಗೆ ಗೋಚರಿಸಿತು. ವಿಕಾರವಾದ ಮುಖವುಳ್ಳ ಆ ಭೂತವನ್ನು ನೋಡಿ ಹನುಮಂತನು ತನ್ನ ಮನಸ್ಸಿನಲ್ಲಿ "ಆಹಾ! ಹಿಂದೆ ಸುಗ್ರೀವನು ಸಮುದ್ರದಲ್ಲಿ ನೆರಳನ್ನು ಹಿಡಿದು ಭಕ್ಷಿಸತಕ್ಕ ಭೂತವಿರುವುದೆಂದೂ, ಅದು ಮಹಾವೀರ್ಯವುಳ್ಳದೆಂದೂ, ಅದ್ಭುತಾಕಾರವುಳ್ಳದೆಂದೂ ಹೇಳಿದ್ದನು. ಇದೇ ಆ ಭೂತವೆಂಬುದರಲ್ಲಿ ಸಂದೇಹವಿಲ್ಲ" ಎಂದೆಣಿಸಿ, ಬುದ್ಧಿಶಾಲಿಯಾದುದರಿಂದ, ಆ ಸಿಂಹಿಕೆಯ ನಿಜತತ್ವವನ್ನು ತಾನಾಗಿಯೇ ಚೆನ್ನಾಗಿ ಊಹಿಸಿ ತಿಳಿದುಕೊಂಡು, ಮಳೆಗಾಲದ ಮೇಘದಂತೆ ಕ್ಷಣಮಾತ್ರದಲ್ಲಿ ತನ್ನ ದೇಹವನ್ನು ದೊಡ್ಡದಾಗಿ ಬಳೆಸಿಬಿಟ್ಟನು. ಆ ಮಹಾಕಪಿಯ ದೇಹವು ಹೀಗೆ ಮೇಲೆಮೇಲೆ ಬಳೆಯುತ್ತಿರುವುದನ್ನು ನೋಡಿ ಸಿಂಹಿಕೆಯು, ಪಾತಾಳರಂಧ್ರಕ್ಕೆ ಸಮಾನವಾದ ತನ್ನ ಬಾಯನ್ನೂ ಮೇಲೆಮೇಲೆ ಅಗಲಿಸುತ್ತ ಬಂದಳು. ಮೇಘಗಳ ಗುಡುಗಿನಂತೆ ಗರ್ಜಿಸುತ್ತ ಅವನಮೇಲೆ ಹಾರುವುದಕ್ಕೂ ಯತ್ನಿಸಿದಳು. ಆಗ ಹನುಮಂತನು ಆ ರಾಕ್ಷಸಿಯ ಬಿಚ್ಚಿದ ಬಾಯನ್ನೂ, ಅವಳ ದೇಹದ ಪ್ರಮಾಣವನ್ನೂ, ಪ್ರಾಣಾಶ್ರಯವಾದ ಅವಳ ಮರ್ಮಸ್ಥಳವನ್ನೂ ನೋಡಿ ತಿಳಿದುಕೊಂಡನು. ವಜ್ರದಂತೆ ದೃಢದೇಹವುಳ್ಳ ಈತನು ಅಗಲೇ ತನ್ನ ದೇಹವನ್ನು ಚೆನ್ನಾಗಿ ಉಡುಗಿಸಿ ಸಣ್ಣದಾಗಿ ಮಾಡಿಕೊಂಡು, ಆ ರಾಕ್ಷಸಿಯ ಬಿಚ್ಚಿದ ಬಾಯಿಯಲ್ಲಿ ಬಿದ್ದನು. ಪರ್ವಕಾಲದಲ್ಲಿ ರಾಹುವಿನಿಂದ ನುಂಗಲ್ಪಡುವ ಪೂರ್ಣಚಂದ್ರನಂತೆ ಆ ರಾಕ್ಷಸಿಯ ಬಾಯಿಯಲ್ಲಿ ಪ್ರವೇಶಿಸಿರುವ ಆಂಜನೇಯನನ್ನು ಸಿದ್ಧಚಾರಣಾದಿಗಳೆಲ್ಲರೂ ಆಶ್ಚರ್ಯದಿಂದಲೂ, ಸಂಭ್ರಮದಿಂದಲೂ ನೋಡುತ್ತಿದ್ದರು. ಅಮೇಲೆ ಹನುಮಂತನು ತನ್ನ ಕೂಜಾಪ ಉಗುರುಗಳಿಂದ ಸಿಂಹಿಕೆಯ ಮರ್ಮಸ್ಥಳಗಳನ್ನು ಭೇದಿಸಿ ಅಗಲೇ ಮನೋವೇಗದಿಂದ ಮೇಲೆ ಹಾರಿಬಿಟ್ಟನು. ಹೀಗೆ ಮಹಾಬುದ್ಧಿಯುಳ್ಳ ಹನುಮಂತನು ತನ್ನ ಸೂಕ್ಷ್ಮದೃಷ್ಟಿಯ ಬಲದಿಂದಲೂ, ತನ್ನ ಧೈರ್ಯದಿಂದಲೂ, ಸಾಮರ್ಥ್ಯ

ದಿಂದಲೂ ಸಿಂಹಿಕೆಯನ್ನು ಕೊಂದು, ತೀರಿಗಿ ಮೊದಲಿನಂತೆ ತನ್ನ ದೇಹವನ್ನು ದೊಡ್ಡದಾಗಿ ಬಳೆಸಿಕೊಂಡನು. ಹನುಮಂತನಿಂದ ಸೀಳಲ್ಪಟ್ಟ ಎದೆಯುಳ್ಳ ರಾಕ್ಷಸಿಯು ಆಗಲೇ ಶಕ್ತಿಗುಂದಿ ಸತ್ತು ನೀರಿನಲ್ಲಿ ಬಿದ್ದಳು. ಹೀಗೆ ವಾನರನಿಂದ ಹತಳಾಗಿ ಬಿದ್ದ ರಾಕ್ಷಸಿಯನ್ನು ನೋಡಿ ಆಕಾಶಚಾರಿಗಳಾದ ಸಮಸ್ತಭೂತಗಳೂ ಹನುಮಂತನನ್ನು ಕೊಂಡಾಡುತ್ತ, ಅವನನ್ನು ಕುರಿತು "ಎಲೈ ಕಪಿಶ್ರೇಷ್ಠನೆ! ಈಗ ನೀನು ನಡೆಸಿದ ಕಾರ್ಯವೋ ಬಹಳ ಭಯಂಕರವಾದುದು. ನಿನ್ನಿಂದ ಒಂದು ಮಹಾಭೂತವು ಸಂಹೃತವಾಯಿತು. ಇನ್ನು ನೀನು ಉದ್ದೇಶಿಸಿರುವ ಕಾರ್ಯವನ್ನು ಕ್ಷೇಮದಿಂದ ಸಾಧಿಸು. ಎಲೈ ವಾನರೇಂದ್ರನೆ! ಲೋಕದಲ್ಲಿ ಯಾವನಿಗೆ ನಿನ್ನಲ್ಲಿರುವಂತೆ ಈ ಧೈರ್ಯವೂ, ಈ ಸೂಕ್ಷ್ಮದೃಷ್ಟಿಯೂ, ಈ ಮಹಾಬುದ್ಧಿಯೂ, ಈ ಸಾಮರ್ಥ್ಯವೂ, ಇವು ನಾಲ್ಕೂ ತುಂಬಿರುವುವೋ ಅವನ ಕಾರ್ಯಗಳು ಎಂದಿಗೂ ಕೆಡುವುದಿಲ್ಲ" ಎಂದರು. ಹೀಗೆ ಪೂಜ್ಯನಾದ ಹನುಮಂತನು ಅವರಿಂದ ಸಮ್ಮಾನಿತನಾಗಿ, ಮುಂದೆ ನಡೆಸಬೇಕಾದ ತನ್ನ ಕಾರ್ಯವನ್ನುದ್ದೇಶಿಸಿ ಗರುಡವೇಗದಿಂದ ಆಕಾಶದಲ್ಲಿ ಹೋಗುತ್ತಿದ್ದನು. ಹೀಗೆ ನೂರುಯೋಜನಗಳನ್ನೂ ದಾಟಿ ಕೆಚ್ಚು ಕಡಿಮೆಯಾಗಿ ಆ ದಕ್ಷಿಣತೀರದ ಸಮೀಪವನ್ನು ಸೇರಿ, ಅಲ್ಲಿ ಸುತ್ತಲೂ ಕಣ್ಣಿಟ್ಟು ನೋಡುತ್ತಿರುವಾಗ, ಮುಂದೆ ಆ ಸಮುದ್ರತೀರದಲ್ಲಿ ಒಂದು ದೊಡ್ಡ ಅಡವಿಗಳ ಸಾಲನ್ನು ಕಂಡನು. ಹಾರಿಬರುತ್ತಿರುವಾಗಲೇ ಆ ವಾನರೋತ್ತಮನು ಮುಂದೆ ಬಗೆಬಗೆಯ ವೃಕ್ಷಗಳಿಂದಲಂಕೃತವಾದ ಒಂದು ದ್ವೀಪವನ್ನೂ, ಮಲಯಪರ್ವತದ ಉಪವನಗಳನ್ನೂ ಕಂಡನು. ಮತ್ತು ಅಲ್ಲಿನ ಸಮುದ್ರವನ್ನೂ, ಅದರ ತೀರದಲ್ಲಿರುವ ಜಲಮಯಪ್ರದೇಶಗಳನ್ನೂ, ಅಲ್ಲಿನ ಮರಗಳನ್ನೂ, ಅಲ್ಲಿನ ನದಿಗಳ ಉತ್ಪತ್ತಿಸ್ಥಾನಗಳನ್ನೂ ಕಂಡನು. ಅವನು ಬಹಳ ಬುದ್ಧಿವಂತನಾದುದರಿಂದ, ಮಹಾನೇಳೆದಂತೆ ಆಕಾಶವೆಲ್ಲವನ್ನೂ ವ್ಯಾಪಿಸಿದಂತಿರುವ ತನ್ನ ದೊಡ್ಡ ದೇಹವನ್ನು ತಾನೇ ನೋಡಿ, ತನ್ನಲ್ಲಿ ತಾನು "ಓಹೋ! ಇದೇನು! ನನ್ನ ದೇಹವು ಹೀಗೆ ಬಳೆದಿರುವುದನ್ನೂ, ನನ್ನ ಈ ಮಹಾವೇಗವನ್ನೂ ನೋಡಿದರೆ, ಇಲ್ಲಿನ ರಾಕ್ಷಸರೆಲ್ಲರೂ ಆಶ್ಚರ್ಯಪಟ್ಟು ನನ್ನ ನಿಜಸ್ಥಿತಿಯನ್ನು ತಿಳಿದುಕೊಳ್ಳಬೇಕೆಂದು ಕುತೂಹಲದಿಂದ ನನ್ನ ಮುಂದೆ ಸೇರಿಬಿಡುವರಲ್ಲವೆ? ಎಂದು ಚಿಂತಿಸಿ, ಆಗಲೇ ಪರ್ವತದಂತಿರುವ ತನ್ನ ದೇಹವನ್ನು ಸಣ್ಣದಾಗಿ ಮಾಡಿ ತಮಸ್ಸನ್ನು ಕಿತ್ತುಹಾಕಿದ ಆತ್ಮಜ್ಞಾನಿಯಂತೆ ಸೌಮ್ಯಸ್ವರೂಪದಿಂದಿದ್ದನು. ಬಲಿಯ ಕೊಬ್ಬನ್ನು ಮುರಿಯುವುದಕ್ಕಾಗಿ ತ್ರಿವಿಕ್ರಮಾವತಾರವನ್ನೆತ್ತಿ ಈ ಪ್ರಕಟಜವೆಲ್ಲವನ್ನೂ ಮೂರಡಿಗಳಿಂದಳೆದು ತಿರುಗಿ ವಾಮನರೂಪದಿಂದ ಕಾಣಿಸಿ

ಕೊಂಡ ಮಹಾವಿಷ್ಣುವಿನಂತೆ, ಹನುಮಂತನು ತನ್ನ ದೇಹವನ್ನು ಬಹಳವಾಗಿ ಉಡುಗಿಸಿಕೊಂಡು, ಸಾಮಾನ್ಯಸ್ವರೂಪದಿಂದಿದ್ದನು. ಹೀಗೆ ಆಂಜನೇಯನು ಆಯಾಕಾರ್ಯಗಳಿಗೆ ತಕ್ಕಂತೆ ನಾನಾರೂಪಗಳನ್ನು ಧರಿಸಿ ಕೊನೆಗೆ ಸಮುದ್ರತೀರವನ್ನೂ ಸೇರಿದನು. ಶತ್ರುಗಳಿಗೆ ದುರ್ಜಯನಾದ ಆ ಹನುಮಂತನು ಮುಂದಿನ ಕಾರ್ಯಾಲೋಚನೆಯಿಂದ ತನ್ನ ದೊಡ್ಡದೇಹವನ್ನು ತಾನೇ ನೋಡಿ, ಅದು ಲಂಕಾಪ್ರವೇಶಕ್ಕೆ ಉಚಿತವಾದ ರೂಪವಲ್ಲವೆಂದು ನಿರ್ಧರಿಸಿಕೊಂಡು, ತನ್ನ ನಿಜರೂಪದಿಂದಲೇ ಇದ್ದನು. ದೊಡ್ಡ ಪರ್ವತಶಿಖರದಂತಿರುವ ಆ ಮಹಾತ್ಮನು ಆಕಾಶದಿಂದ ಕೆಳಗೆ ತೂಗಾಡುವುದೋ ಎಂಬಂತೆ ಕೊನೆಗಾಣದ ಔನ್ನತ್ಯವುಳ್ಳ ಲಂಬವೆಂಬ ಒಂದು ಪರ್ವತದ ಶಿಖರದಲ್ಲಿ ಇಳಿದನು. ವಿಚಿತ್ರಶಿಖರಗಳುಳ್ಳುದಾಗಿಯೂ ತಾಳೆ, ತೆಂಗು, ಶ್ಲೇಷ್ಮಾತಕ (ಅಂಬಟೆ), ಮೊದಲಾದ ವೃಕ್ಷಗಳಿಂದ ತುಂಬಿದುದಾಗಿಯೂ ಇರುವ ಆ ಶಿಖರದಲ್ಲಿಳಿದು, ಅಲ್ಲಿಂದ ಸಮುದ್ರತೀರಕ್ಕೆ ಬಂದು ತ್ರಿಕೂಟಪರ್ವತದ ಮೇಲಿದ್ದ ಲಂಕಾನಗರಿಯನ್ನೂ ಕಂಡನು. ಅಲ್ಲಿಯೂ ಹನುಮಂತನು ತನ್ನ ದೊಡ್ಡ ಸ್ವರೂಪವನ್ನು ಬಿಟ್ಟು ಅಲ್ಲಿನ ಮೃಗಗಳನ್ನೂ ಪಕ್ಷಿಗಳನ್ನೂ ಹೆದರಿಸುತ್ತಾ, ಆ ತ್ರಿಕೂಟಪರ್ವತವನ್ನು ಸೇರಿದನು. ಹೀಗೆ ಆಂಜನೇಯನು ಅಸಂಖ್ಯಾತರಾದ ದಾನವರಿಗೂ, ಪನ್ನಗರಿಗೂ, ಆಶ್ರಯವಾಗಿಯೂ ದೊಡ್ಡ ದೊಡ್ಡ ಅಲೆಗಳ ಪರಂಪರೆಯಿಂದ ಕೂಡಿದುದಾಗಿಯೂ ಇರುವ ಮಹಾಸಾಗರವನ್ನು ತನ್ನ ದೇಹಬಲದಿಂದಲೇ ಹಾರಿ, ಸಮುದ್ರತೀರದಲ್ಲಿಳಿದು, ಅಮರಾವತಿಯಂತೆ ಸೊಬಗುಳ್ಳ ಲಂಕಾಪುರಿಯನ್ನು ಕಂಡನು.

ಇಲ್ಲಿಗೆ ಮೊದಲನೆಯ ಸರ್ಗವು.

ಹನುಮಂತನು ಲಂಕೆಯ ಸವಿಾಪಕ್ಕೆ ಬಂದುದು, ಚಂದ್ರೋದಯವು.

ಹೀಗೆ ಮಹಾಬಲಾಢ್ಯನಾದ ಆಂಜನೇಯನು ಯಾರಿಂದಲೂ ದಾಟಲಸಾಧ್ಯವಾದ ಸಮುದ್ರವನ್ನು ನಿಶ್ಚಿಂತಚಿತ್ತನಾಗಿ ದಾಟಿ, ತ್ರಿಕೂಟಶಿಖರದಲ್ಲಿರುವ ಲಂಕೆಯನ್ನು ಕಂಡನು. ಅಲ್ಲಿ ಮರಗಳಿಂದುದಿರಿದ ಪುಷ್ಪವರ್ಷದಿಂದ ಮುಚ್ಚಿದ ಮೈಯುಳ್ಳವನಾಗಿ, ಪುಷ್ಪದಿಂದ ಮಾಡಿದ ಒಂದು ವಾನರಪ್ರತಿಮೆಯಂತೆ ಕಾಣುತಿದ್ದನು. ಶ್ರೀಮಂತನಾದ ಆ ಆಂಜನೇಯನು ಅತ್ಯುತ್ತಮ ಪರಾಕ್ರಮವುಳ್ಳವ

ನಾದುದರಿಂದ, ಒಂದೇ ನೆಗೆತಕ್ಕೆ ಆ ನೂರುಯೋಜನಗಳನ್ನು ದಾಟಿದರೂ, ಒಂದು ನಿಟ್ಟುಸಿರನ್ನಾದರೂ ಬಿಡದೆ, ಸ್ವಲ್ಪಮಾತ್ರವಾದರೂ ಬಳಲಿಕೆಯಿಲ್ಲದಿದ್ದನು. ಆಗಲೂ ಅವನು ತನ್ನ ಮನಸ್ಸಿನಲ್ಲಿ " ಅನೇಕ ಶತಯೋಜನಗಳನ್ನಾದರೂ ದಾಟಬಲ್ಲ ನನಗೆ ನೂರೇ ಯೋಜನಗಳೆಂಬ ಸಂಖ್ಯಾನಿಯಮವುಳ್ಳ ಈ ಸಮುದ್ರದ ಕೊನೆಯನ್ನು ಹಾರುವುದೊಂದು ಸಾಧ್ಯವೆ ?" ಎಂದು ಉತ್ಸಾಹದಿಂದುಬ್ಬುತ್ತಿದ್ದನು. ವೀರ್ಯವುಳ್ಳ ಸಮಸ್ತವಾನರರಿಗೂ ತಾನೊಬ್ಬನೇ ಮೇಲೆನಿಸಿಕೊಂಡ ಆ ಹನುಮಂತನು, ಹೀಗೆ ಸಮುದ್ರವನ್ನು ದಾಟಿ ಲಂಕೆಯನ್ನು ಸಮೀಪಿಸಿ, ಅಲ್ಲಿನ ಹಸುರಾದ ಹುಲ್ಲುನೆಲಗಳನ್ನೂ, ಸುಗಂಧವುಳ್ಳ ತೋಟಗಳನ್ನೂ, ದೊಡ್ಡ ದೊಡ್ಡ ಕಲ್ಲುಬಂಡೆಗಳುಳ್ಳ ಪ್ರದೇಶಗಳನ್ನೂ, ಬೆಟ್ಟದ ಸೀಮೆಗಳನ್ನೂ, ಮರಗಳ ಸಾಲುಗಳನ್ನೂ ನೋಡುತ್ತ, ಅವುಗಳ ನಡುದಾರಿಯಿಂದಲೇ ಹೊರಟು ಹಾಗೆಯೇ ಮರಗಳಿಂದ ತುಂಬಿದ ಅನೇಕ ಪರ್ವತ ಶಿಖರಗಳನ್ನೂ, ಪುಷ್ಪಿತಗಳಾದ ತೋಟಗಳ ಸಾಲುಗಳನ್ನೂ ನಾಟಿಹೋದನು. ಮಹಾತೇಜಸ್ವಿಯಾಗಿಯೂ, ವಾನರೋತ್ತಮನಾಗಿಯೂ ಇರುವ ಆ ಹನುಮಂತನು, ಕೊನೆಗೆ ಲಂಬವೆಂಬ ಆ ಬೆಟ್ಟದಮೇಲೆ ನಿಂತು ಅದರ ಪುತ್ತಿನ ಅಡವಿಗಳನ್ನೂ, ತೋಟಗಳನ್ನೂ, ತ್ರಿಕೂಟಶಿಖರದಲ್ಲಿರುವ ಲಂಕಾಪಟ್ಟಣವನ್ನೂ ನೋಡಿದನು. ಮತ್ತು ಅದರ ಸುತ್ತಲೂ ಸರಳವೃಕ್ಷಗಳನ್ನೂ, ಕರ್ಣಿಕಾರಗಳನ್ನೂ, ಪುಷ್ಪಿತಗಳಾದ ಖರ್ಜೂರದ ಗಿಡಗಳನ್ನೂ, ಜಂಬೀರವೃಕ್ಷಗಳನ್ನೂ, ಹೂಗಳಿಂದಲೂ ಮೊಗ್ಗುಗಳಿಂದಲೂ ತುಂಬಿ, ಅನೇಕ ಪಕ್ಷಿಗಳಿಗಾಶ್ರಯವಾಗಿ, ಗಾಳಿಯಿಂದಾಡುವ ಕೊನೆಗಳುಳ್ಳ ಬೆಟ್ಟದ ಮಲ್ಲಿಗೆ, ಕೇದಗೆ, ಪ್ರಿಯಂಗು, ಸುವಾಸನೆಯುಳ್ಳ ಕಡವು, ಏಳೆಲೆಬಾಳೆ, ಸರ್ಜಕ, ಕೋವಿದಾರ, ಕಣಿಗಿಲೆ, ಮುಂತಾದ ಮರಗಳ ಸಾಲನ್ನೂ ಕಂಡನು. ಮತ್ತು ಹಂಸ ಕಾರಂಡವಾದಿ ಜಲಪಕ್ಷಿಗಳಿಂದಲೂ, ತಾವರೆ, ನೈದಿಲೆ ಮೊದಲಾದ ನೀರುಹೂಗಳಿಂದಲೂ ತುಂಬಿದ ಕೊಳಗಳನ್ನೂ, ಬಗೆಬಗೆಯ ಕ್ರೀಡಾಸ್ಥಾನಗಳನ್ನೂ, ನಾನಾವಿಧಗಳಾದ ಜಲಾಶಯಗಳನ್ನೂ ಕಂಡನು. ಸಮಸ್ತ ಋತುಗಳಲ್ಲಿಯೂ ಫಲಪುಷ್ಪಗಳನ್ನು ಬಿಡತಕ್ಕ ಬಗೆಬಗೆಯ ಮರಗಳಿಂದ ತುಂಬಿದ ತೋಟಗಳನ್ನೂ, ಮನೋಹರಗಳಾದ ಉದ್ಯಾನಗಳನ್ನೂ ನೋಡಿದನು. ಶ್ರೀಮಂತನಾದ ಆ ಕಪಿಶ್ರೇಷ್ಠನು ಹಾಗೆಯೇ ಇನ್ನೂ ಮುಂದೆ ಹೋಗಿ ರಾವಣಪಾಲಿತವಾದ ಲಂಕೆಯನ್ನು ಸಮೀಪಿಸಿ ಅಲ್ಲಿ ನಿಂತು, ಅದರ ಅಂದವನ್ನು ನೋಡುತಿದ್ದನು. ಆ ಲಂಕೆಯ ಸುತ್ತಲೂ ತಾವರೆ, ನೈದಿಲೆ ಮೊದಲಾದ ಹೂಗಳಿಂದಲಂಕೃತವಾದ ಕಂದಕಗಳು ಶೋಭಿಸುವುವು. ಸೀತೆಯನ್ನು ಕದ್ದು ತಂದುದಕ್ಕೆ ಪ್ರಯೋಜನವನ್ನು ಸಾಧಿಸಬೇಕೆಂದು

ರಾವಣನು ಅದರ ಸುತ್ತಲೂ ಪ್ರಬಲವಾದ ಕಾವಲನ್ನಿರಿಸಿದ್ದುದರಿಂದ, ಭಯಂಕರವಾದ ಬಿಲ್ಲುಬಾಣಗಳನ್ನು ಹಿಡಿದ ರಾಕ್ಷಸರು ಸುತ್ತಲೂ ಎಚ್ಚರಿಕೆಯಿಂದ ಪಹರೆ ಕೊಡುತ್ತಿರುವರು. ಆ ಮಹಾಪಟ್ಟಣವು ಸುತ್ತಲೂ ಮನೋಹರವಾದ ಚಿನ್ನದ ಕೋಟೆಯಿಂದ ಆವರಿಸಲ್ಪಟ್ಟಿರುವುದು. ನವಗ್ರಹಗಳ ಸಮೂಹದಂತೆ ದೊಡ್ಡವುಗಳಾಗಿಯೂ, ಶರತ್ಕಾಲದ ಮೇಘಗಳಂತೆ ಬಿಳುಪಾಗಿಯೂ ಇರುವ ಮನೆಗಳಿಂದ ರಮ್ಯವಾಗಿರುವುದು. ಉಭಯಪಾರ್ಶ್ವದ ಸೌಧಗಳ ಸಾಲಿನಿಂದ ಬಿಳುಪಾಗಿಯೂ, ಎತ್ತರವಾಗಿಯೂ ಕಾಣುವ ರಾಜಬೀದಿಗಳು ನೂರಾರು ಅಟ್ಟಲಿಗಳಿಂದಲೂ 1 ಧ್ವಜಪತಾಕೆಗಳಿಂದಲೂ ಶೋಭಿಸುತ್ತಿರುವುವು. ಅಲ್ಲಿನ ಚಿನ್ನದ ಬಾಗಿಲುಗಳೆಲ್ಲವೂ ವಿಚಿತ್ರಲತೆಗಳಂತಿರುವ ಚಿತ್ರರೇಖೆಗಳಿಂದ ಶೋಭಿಸುತ್ತಿರುವುವು. ಸ್ವರ್ಗದಲ್ಲಿರುವ ಅಮರಾವತಿಯಂತೆ ಬಹಳ ಶುಭ್ರಗಳಾಗಿಯೂ ಮಂಗಳಕರಗಳಾಗಿಯೂ ಇರುವ ಮನೆಗಳಿಂದ ನಿಬಿಡವಾಗಿ, ಅತ್ಯುನ್ನತವಾದ ಬೆಟ್ಟದ ತುದಿಯ ಮೇಲಿರುವ ಆ ಲಂಕಾಪಟ್ಟಣವು, ಆಕಾಶದಲ್ಲಿಯೇ ಕಟ್ಟಿರುವ ಒಂದು ದೊಡ್ಡ ಪಟ್ಟಣದಂತೆ ತೋರುತ್ತಿತ್ತು. ಹೀಗೆ ರಾಕ್ಷಸೇಂದ್ರನಿಂದ ರಕ್ಷಿತವಾಗಿಯೂ, ವಿಶ್ವಕರ್ಮನಿಂದ ನಿರ್ಮಿತವಾಗಿಯೂ ಇರುವ ಆ ಲಂಕೆಯು ಅಂತರಿಕ್ಷದಲ್ಲಿ ತೂಗಾಡುವಂತಿರುವುದನ್ನು ಕಂಡನು. ಕೈಸಾಲೆಗಳೆಂಬ ಜಘನಗಳಿಂದಲೂ, ಸ್ವಚ್ಛವಾದ ನೀರೆಂಬ ದುಕೂಲದಿಂದಲೂ, ತೋಟಗಳ ಮೇಲೆ ಏರಿಸಲ್ಪಟ್ಟ ಶತಘ್ನೀ ಶೂಲಗಳೆಂಬ ತುರುಬಿನಿಂದಲೂ, ಅಟ್ಟಲಿಗಳೆಂಬ ಹೂಮುಡಿಗಳಿಂದಲೂ ಆ ನಗರಿಯು ಒಬ್ಬ ಸುಂದರಸ್ತ್ರೀಯಂತೆ ತೋರುತಿತ್ತು. ವಿಶ್ವಕರ್ಮನಿರ್ಮಿತವಾದರೂ ಮನಸ್ಸಂಕಲ್ಪದಿಂದಲೇ ಮಾಡಿಟ್ಟಂತೆ ಲೋಕಮೋಹಕವಾದ ಆ ಲಂಕೆಯನ್ನು ನೋಡುತ್ತ ಹನುಮಂತನು ಅಲ್ಲಿಂದ ಹಾಗೆಯೇ ಆ ಪಟ್ಟಣದ ಉತ್ತರದಿಕ್ಕಿನ ಬಾಗಿಲನ್ನು ಸೇರಿ, ಅಲ್ಲಿ ನಿಂತು, ಸೀತೆಯನ್ನು ಕಾಣುವ ಉಪಾಯವೇನೆಂದು ಚಿಂತಿಸುತಿದ್ದನು. ಆ ನಗರಿಯು ಕೈಲಾಸಶಿಖರದಂತೆ ಕಾಂತಿವಿಶಿಷ್ಟವಾಗಿ, ಆಕಾಶವನ್ನು ಹುಚ್ಚುವಂತೆ ಮಹೋನ್ನತವಾಗಿ, ಎತ್ತರವಾದ ಉಪ್ಪರಿಗೆಯ ಮನೆಗಳಿಂದ ಮೇಲೆ ಹಾರಿ ಹೋಗುವಂತಿತ್ತು. ಸರ್ಪಗಳಿಂದ ತುಂಬಿದ ಭೋಗವತೀ ಪಟ್ಟಣದಂತೆ ಅನೇಕ ಘೋರರಾಕ್ಷಸರಿಂದ ತುಂಬಿ, ಪೂರ್ವದಲ್ಲಿ ಧನಪತಿಯಾದ ಕುಬೇರನಿಗೆ ವಾಸಸ್ಥಾನವಾಗಿಯೂ ಸುನಿರ್ಮಿತವಾಗಿಯೂ ಸ್ಪಷ್ಟವಾಗಿಯೂ ಇರುವ ಆ

1. ಹೂಬಳ್ಳಿ ಮೊದಲಾದ ಚಿತ್ರರೇಖೆಗಳಿಂದ ಕೂಡಿ ಅಲಂಕಾರಾರ್ಥವಾಗಿ ನಡಲ್ಪಟ್ಟಿವುಗಳಿಗೆ ಪತಾಕೆಗಳೆಂದೂ, ಮೀನು, ಮೊಸಳೆ, ಮುಂತಾದ ಆಕಾರಗಳಿಂದ ಅಯಾ ರಾಜ್ಯಕ್ಕೆ ಅಸಾಧಾರಣ ಚಿಹ್ನಗಳಾಗಿರುವ ಬಾವುಟಗಳಿಗೆ ಧ್ವಜಗಳೆಂದೂ ವ್ಯವಹಾರವು.

ಪಟ್ಟಣದ ಸೊಗಸನ್ನಾಗಲಿ, ಅದರ ವಿಸ್ತಾರವನ್ನಾಗಲಿ ಹೀಗೆಂದೂಹಿಸುವುದೂ ಸಾಧ್ಯವಿಲ್ಲದಂತಿತ್ತು. ಬಲದಲ್ಲಿ ಕಾವಲಿರುವ ವಿಷಸರ್ಪಗಳಂತೆ ಕ್ರೂರವಾದ ಕೋರೆಹಲ್ಲುಗಳುಳ್ಳ ಘೋರರಾಕ್ಷಸರನೇಕರು ಶೂಲಪಟ್ಟಸಾದ್ಯಾಯುಧಗಳನ್ನು ಕೈಯಲ್ಲಿ ಹಿಡಿದು, ಅದರ ಸುತ್ತಲೂ ಕಾವಲಿರುವರು. ಹೀಗೆ ಆ ಪಟ್ಟಣಕ್ಕಿರುವ ಬಲವಾದ ಕಾವಲನ್ನೂ, ಅದನ್ನು ಬಳಸಿಕೊಂಡಿರುವ ಅಗಾಧವಾದ ಸಮುದ್ರವನ್ನೂ, ರಾವಣನೆಂಬ ತನ್ನ ಘೋರಶತ್ರುವು ಅದರ ನಡುವೆ ಸೇರಿಕೊಂಡಿರುವುದನ್ನೂ ನೋಡಿದಮೇಲೆ, ಆಂಜನೇಯನ ಮನಸ್ಸಿನಲ್ಲಿ ಪ್ರಬಲವಾದ ಚಿಂತೆಯು ಹುಟ್ಟಿತು. "ಇಲ್ಲಿಗೆ ನನ್ನ ಕಡೆಯ ವಾನರರು ಬಂದರೂ ಅವರಿಂದ ಏನೂ ಸಾಧ್ಯವಾಗದು. ಯುದ್ಧಮಾಡಿ ಈ ಲಂಕೆಯನ್ನು ಜಯಿಸಬೇಕೆಂದರೆ ದೇವತೆಗಳಿಂದಲೂ ಸಾಧ್ಯವಿಲ್ಲ. ರಾವಣನೆಂಬ ಕ್ರೂರ ರಾಕ್ಷಸನಿಂದ ರಕ್ಷಿಸಲ್ಪಡುತ್ತಲಿರುವ ಅತಿದುರ್ಗಮವಾದ ಈ ಲಂಕೆಯನ್ನು, ಒಂದು ವೇಳೆ ಮಹಾಬಾಹುವಾದ ರಾಮನು ಪ್ರಯತ್ನಪಟ್ಟು ಬಂದು ಸೇರಿದರೂ ಇಲ್ಲಿ ಅವನೇನು ಮಾಡಬಲ್ಲನು? ಇಲ್ಲಿನ ರಾಕ್ಷಸರು ಅತಿಮೂರ್ಖರಾದುದರಿಂದ ಸಾಮಕ್ಕೆ ವಶರಾಗುವವರಲ್ಲ. ದಾನಕ್ಕೆ ಆಶೆಪಡುವವರಲ್ಲ. ಭೇದದಿಂದ ಬೇರ್ಪಡುವವರಲ್ಲ. ದಂಡೋಪಾಯಕ್ಕೂ ಹೆದರುವವರಲ್ಲ, ಇವರು ಯಾವುದಕ್ಕೂ ಬಗ್ಗುವವರಲ್ಲ. ಇದೂ ಅಲ್ಲದೆ, ವಾಲಿಪುತ್ರನಾದ ಅಂಗದನೊಬ್ಬನು, ನೀಲನೊಬ್ಬನು, ನಾನೊಬ್ಬನು, ಧೀಮಂತನಾದ ನಮ್ಮ ಸುಗ್ರೀವ ರಾಜನೊಬ್ಬನು; ಈ ನಾಲ್ಕುಮಂದಿ ವಾನರರು ಮಾತ್ರವೇ ಒಂದುವೇಳೆ ಈ ದುರ್ಗಮವಾದ ಲಂಕೆಗೆ ಬರಬಹುದೇ ಹೊರತು, ಬೇಕೊಬ್ಬರಿಗೂ ಇಲ್ಲಿಗೆ ಬರುವುದಕ್ಕೂ ಸಾಧ್ಯವಲ್ಲವೆಂದೇ ತೋರುವುದು. ಅವೆಲ್ಲವೂ ಹಾಗಿರಲಿ! ಮೊದಲು ಸೀತೆಯು ಇನ್ನೂ ಬದುಕಿರುವಳೋ ಇಲ್ಲವೊ ಎಂಬುದನ್ನು ತಿಳಿದುಕೊಳ್ಳುವೆನು. ಮೊದಲು ಅವಳನ್ನು ಕಂಡಮೇಲೆ ಮುಂದಿನ ಕಾರ್ಯಗಳ ಸಾಧ್ಯಾಸಾಧ್ಯತೆಯನ್ನು ಯೋಚಿಸಿಕೊಳ್ಳಬಹುದು" ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು. ಅಮೇಲೆ ಕಪಿಶ್ರೇಷ್ಠನಾದ ಆ ಹನುಮಂತನಿಗೆ ಮತ್ತೊಂದಾಲೋಚನೆಯು ಹುಟ್ಟಿತು. ರಾಮನ ಮೇಲ್ಕೆಯನ್ನೇ ಚಿಂತಿಸುತ್ತಿರುವ ಆತನು ಆ ಬೆಟ್ಟದ ಶಿಖರದಲ್ಲಿ ನಿಂತಹಾಗೆಯೇ, ಒಂದು ಮುಹೂರ್ತಕಾಲದವರೆಗೆ ತನ್ನಲ್ಲಿ ತಾನೇ ಚಿಂತಿಸುತ್ತ ಕೊನೆಗೆ, ಈ ರೂಪದಿಂದಲೇ ನಾನು ಈ ರಾಕ್ಷಸರ ನಗರಿಯನ್ನು ಪ್ರವೇಶಿಸಬೇಕೆಂದರೆ ಸಾಧ್ಯವಾಗದು. ಬಲಾಢ್ಯರಾದ ಅನೇಕ ಕ್ರೂರ ರಾಕ್ಷಸರು ಇದನ್ನು ಕಾಯುತ್ತಿರುವರು. ಇಲ್ಲಿನ ರಾಕ್ಷಸರೊಬ್ಬೊಬ್ಬರೂ ಬಹಳ ಪರಾಕ್ರಮವುಳ್ಳವರು. ಮತ್ತು ಬಲವುಳ್ಳವರು. ಇವರೆಲ್ಲರನ್ನೂ ವಂಚಿಸಿಯೇ ನಾನು ಸೀತೆಯನ್ನು ಹುಡುಕಬೇಕೇ ಹೊರತು ಬೇರೆ

ದಾರಿಯಿಲ್ಲ. ಕಂಡೂ ಕಾಣದ ರೂಪದಿಂದ ಈ ರಾತ್ರಿಯಲ್ಲಿಯೇ ಲಂಕೆಯನ್ನು ಪ್ರವೇಶಿಸಿ ನನ್ನ ಈ ದೊಡ್ಡ ಕಾರ್ಯವನ್ನು ಸಾಧಿಸಿಕೊಳ್ಳಬೇಕಾದುದೇ ಈಗ ಯುಕ್ತವು!' ಎಂದು ನಿರ್ಧರಿಸಿಕೊಂಡನು. ಹೀಗೆ ಹನುಮಂತನು ದೇವದಾನವರಿಗೂ ಪ್ರವೇಶಿಸಲಸಾಧ್ಯವಾದ ಆ ಲಂಕಾನಗರಿಯನ್ನು ನೋಡಿ, ಮುಂದೆ ಹೇಗೆ ನಡೆಯಿಸಬೇಕೆಂದು ಚಿಂತಿಸುತ್ತ ಏನೊಂದೂ ತೋರದೆ ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತ, "ದುರಾತ್ಮನಾದ ರಾವಣನ ಕಣ್ಣಿಗೆ ಬೀಳದಂತೆ ಈ ಲಂಕೆಯನ್ನು ಹುಡುಕಿ, ಜನಕಪುತ್ರಿಯಾದ ಸೀತೆಯನ್ನು ಯಾವ ಉಪಾಯದಿಂದ ನೋಡಲಿ! ಮಹಾತ್ಮನಾದ ರಾಮನ ಕಾರ್ಯವು ಕೆಡದಂತೆ ನಡೆಯುವ ರೀತಿಯು ಹೇಗೆ? ಯಾರೂ ಇಲ್ಲದೆ ಸೀತೆಯೊಬ್ಬಳೇ ಇರುವ ಸಮಯದಲ್ಲಿ ನಾನೊಬ್ಬನೇ ಹೋಗಿ ಅವಳನ್ನು ನೋಡಿಬರುವುದು ತಾನೇ ಹೇಗೆ? ಅವಿವೇಕಿಯಾದ ದೂತನ ವಶದಲ್ಲಿ ಬಿಟ್ಟರೆ, ಪೂರ್ಣವಾಗಿ ಕೈಗೂಡಿ ಬರುತ್ತಿರುವ ಕಾರ್ಯವೂ ಕೂಡ ದೂರಾಲೋಚನೆಯಿಲ್ಲದೆ ದೇಶಕಾಲಗಳಿಗೆ ಅನುಸಾರವಾಗದೆ, ಸೂರ್ಯೋದಯಕಾಲದ ಕತ್ತಲೆಯಂತೆ ಕೆಟ್ಟುಹೋಗುವುದು. ಮೊದಲೇ ಕಾರ್ಯಾಕಾರ್ಯಗಳನ್ನು ಜಿನ್ನಾಗಿ ವಿಮರ್ಶಿಸಿ, ದೂರಾಲೋಚನೆಯಿಂದ ನಿಶ್ಚಯಿಸಿದ ಬುದ್ಧಿಯೂ ಕೂಡ ಅಂತಹ ಬುದ್ಧಿಹೀನರಾದ ದೂತರ ವಶಕ್ಕೆ ಬಿಟ್ಟರೆ ಫಲಿಸದೆ ಕೆಟ್ಟುಹೋಗುವುದು. ಏನೂ ತಿಳಿಯದಿದ್ದರೂ ತಾವು ಎಲ್ಲವನ್ನೂ ಬಲ್ಲೆವೆಂಬ ಗರ್ವವುಳ್ಳ ದೂತರು ಕೈಗೆ ಬಂದ ಕಾರ್ಯವನ್ನೂ ಕೆಡಿಸಿ ಅನರ್ಥವನ್ನೂ ತಂದಿಡುವರು. ಈಗ ಮಾಡುವುದೇನು! ರಾಮನ ಕಾರ್ಯವು ಕೆಡದಿರುವುದಕ್ಕೆ ಉಪಾಯವೇನು? ನಾನು ಏನೂ ತಿಳಿಯದ ಮೂಢನೆಂದು ಹೇಳಿಸಿಕೊಳ್ಳದೆ ಚಾತುರ್ಯದಿಂದ ಕಾರ್ಯಸಾಧನೆಯನ್ನು ಮಾಡಿಕೊಂಡು ಹೋಗುವ ರೀತಿಯಾವುದು? ಸಮುದ್ರಲಂಘನವನ್ನು ಮಾಡಿ ಬಂದುದು ವ್ಯರ್ಥವಾಗಿ ಹೋಗದಂತೆ ಮಾಡುವುದಕ್ಕೆ ದಾರಿಯೇನು? ಈಗ ನಾನು ಮಾತ್ರ ರಾಕ್ಷಸರ ಕಣ್ಣಿಗೆ ಬಿದ್ದುಬಿಟ್ಟರೆ, ರಾವಣನನ್ನು ಕೊಲ್ಲಬೇಕೆಂದಿರುವ ಆ ರಾಮನ ಕಾರ್ಯವೆಲ್ಲವೂ ಕೆಟ್ಟುಹೋಗುವುದೇ ನಿಜವು. ರಾಕ್ಷಸರಿಗೆ ತಿಳಿಯದಂತೆ ಈ ಪಟ್ಟಣದಲ್ಲಿ ಯಾವಕಡೆಯಲ್ಲಿರುವುದಕ್ಕೂ ಸಾಧ್ಯವಲ್ಲ. ಬೇರೊಬ್ಬರು ರಾಕ್ಷಸ ರೂಪದಿಂದಲೇ ಇಲ್ಲಿಗೆ ಬಂದರೂ ಅವರು ಕಂಡುಹಿಡಿಯುವರು. ಹೀಗಿರುವಾಗ ಬೇರೆ ರೂಪದಿಂದ ಹೋದರೆ ಇನ್ನು ಹೇಳತಕ್ಕುದೇನು? ಗಾಳಿಯಾದರೂ ಇಲ್ಲಿ ರಾಕ್ಷಸರಿಗೆ ತಿಳಿಯದಹಾಗೆ ಸಂಚರಿಸಲಾರದೆಂದೇ ನನಗೆ ತೋರುವುದು. ಬಲಾಢ್ಯರಾದ ಈ ರಾಕ್ಷಸರಿಗೆ ತಿಳಿಯದುದೊಂದೂ ಇಲ್ಲವು. ಇಲ್ಲಿಗೆ ನಾನು ಈ ದೊಡ್ಡ ರೂಪದಿಂದಲೇ ಹೋದಪಕ್ಷದಲ್ಲಿ ನಾನೂ ನಾಶ

ಹೊಂದುವುದಲ್ಲದೆ ಪ್ರಭುವಾದ ರಾಮನ ಕೆಲಸವೂ ಕೆಟ್ಟುಹೋಗುವುದು. ಆದು ದರಿಂದ ಕಾರ್ಯಸಿದ್ಧಿಗಾಗಿ ಈ ರಾತ್ರಿಯಲ್ಲಿ ನನ್ನ ರೂಪವನ್ನು ಸಣ್ಣದಾಗಿ ಮಾಡಿ ಕೊಂಡು, ಈ ಲಂಕೆಯನ್ನು ನುಗ್ಗಿ ಬಿಡುವೆನು. ಬೇರೊಬ್ಬರಿಗೆ ಪ್ರವೇಶಿಸ ಲಸಾಧ್ಯವಾದ ಈ ರಾವಣ ನಗರಿಯನ್ನು ಈ ರಾತ್ರಿಯಲ್ಲಿಯೇ ಪ್ರವೇಶಿಸಿ, ಇಲ್ಲಿನ ಸಮಸ್ತ ಗೃಹಗಳನ್ನೂ ಹುಡುಕಿ ಸೀತೆಯನ್ನು ನೋಡುವುದೇ ನಿಜವು" ಹೀಗೆಂದು ನಿಶ್ಚಯಿಸಿಕೊಂಡು ಹನುಮಂತನು ಸೀತೆಯನ್ನು ಹುಡುಕು ವುದರಲ್ಲಿ ಆತುರವುಳ್ಳವನಾಗಿ ಸೂರ್ಯಾಸ್ತಸಮಯವನ್ನೇ ನಿರೀಕ್ಷಿಸುತಿದ್ದನು. ಸೂರ್ಯನು ಮುಳುಗಿ ರಾತ್ರಿಯೂ ಸಮಿಾಪಿಸಿತು. ಆಗ ಹನುಮಂತನು ತನ್ನ ದೇಹ ವನ್ನು ಸಂಕೋಚಪಡಿಸಿಕೊಂಡು, ಬೆಕ್ಕಿನ ಗಾತ್ರದಷ್ಟು ಮೈಯುಳ್ಳವನಾಗಿ, ಅತ್ಯಾ ಶ್ಚರ್ಯಕರವಾದ ರೂಪವನ್ನು ಹೊಂದಿಬಿಟ್ಟನು. ಪ್ರದೋಷಕಾಲಕ್ಕೆ ಸರಿಯಾಗಿ ಈ ವೀರ್ಯವಂತನು ವೇಗದಿಂದ ಹೊರಟು ವಿಸ್ತಾರವಾದ ರಾಜಮಾರ್ಗಗಳುಳ್ಳ ಲಂಕಾ ಪುರಿಯನ್ನು ಪ್ರವೇಶಿಸುವುದಕ್ಕೆ ಸಿದ್ಧನಾದನು. ಅಲ್ಲಿ ಅವನು, ಉಪ್ಪರಿಗೆಗಳ ಸಾಲಿ ನಿಂದಲೂ, ಚಿನ್ನದ ಬೆಳ್ಳಿಗಳ ಕಂಬಗಳಿಂದಲೂ, ಸುವರ್ಣಮಯವಾದ ಗವಾಕ್ಷಗ ಳಿಂದಲೂ ನಿಬಿಡವಾಗಿ, ಗಂಧರ್ವನಗರದಂತೆ ಆಶ್ಚರ್ಯಕರವಾಗಿ ಮತ್ತು ಏಳೆಂಟು ಕಕ್ಷ್ಯೆಗಳುಳ್ಳ ಉಪ್ಪರಿಗೆಗಳಿಂದ ಕೂಡಿರುವ ಆ ಮಹಾನಗರಿಯ ಅಂದವನ್ನು ನೋಡುತಿದ್ದನು. ಸ್ಫಟಿಕದ ಹರಳುಗಳಿಂದ ಕೆತ್ತಲ್ಪಟ್ಟ ಅಲ್ಲಿನ ಸುವರ್ಣದ ನೆಲ ಗಟ್ಟುಗಳನ್ನೂ, ವೈಡೂರ್ಯರತ್ನಗಳಿಂದ ಚಿತ್ರಿತವಾಗಿ ಮುತ್ತಿನ ಕುಚ್ಚುಗಳಿಂದಲಂ ಕರಿಸಲ್ಪಟ್ಟ ಅಲ್ಲಿನ ರಾಕ್ಷಸರ ಮನೆಗಳನ್ನೂ ಕಂಡನು. ಅಲ್ಲಲ್ಲಿ ಕಟ್ಟಿರುವ ಚಿತ್ರ ವಿಚಿತ್ರಗಳಾದ ಚಿನ್ನದ ತೋರಣಗಳು ಆ ಲಂಕಾನಗರಿಗೆ ಅತಿಶಯವಾದ ಒಂದು ಶೋಭೆಯನ್ನುಂಟುಮಾಡುತಿದ್ದುವು. ಹೀಗೆಂದೂಹಿಸುವುದಕ್ಕೂ ಸಾಧ್ಯವಲ್ಲದ ಅದ್ಭುತಾಕಾರವುಳ್ಳ ಆ ಲಂಕೆಯನ್ನು ನೋಡಿಮೊಡನೆ, ಈ ಹನುಮಂತನಿಗೆ, ಅದನ್ನು ಹೇಗೆ ಪ್ರವೇಶಿಸುವುದೆಂಬ ಚಿಂತೆಯೂ, ಅದರ ಅದ್ಭುತಾಕಾರವನ್ನು ನೋಡುವುದರಿಂದುಂಟಾದ ಸಂತೋಷವೂ ಸಮವಾಗಿ ನೆಲೆಗೊಂಡಿತು. ಸೀತಾನ್ವೇಷಣದಲ್ಲಿ ಆತುರವುಳ್ಳ ಆ ವಾಯುಪುತ್ರನು ಬಿಳುಪಾಗಿಯೂ, ಮಹೋನ್ನತವಾಗಿಯೂ ಇರುವ ಉಪ್ಪರಿಗೆಗಳ ಸಾಲುಳ್ಳುದಾಗಿಯೂ, ಚಿನ್ನದ ಕುಚ್ಚಿನ ತೋರಣವುಳ್ಳುದಾಗಿಯೂ, ರಾವಣನ ಭುಜಗಳಿಂದ ರಕ್ಷಿತವಾಗಿಯೂ ಭಯಂಕರ ಪರಾಕ್ರಮವುಳ್ಳರಾಕ್ಷಸರಿಂದ ನಿಬಿಡವಾಗಿಯೂ ಇರುವ ಲೋಕಪ್ರಸಿದ್ಧ ವಾದ ಪಟ್ಟಣವನ್ನು ನೋಡುತ್ತ, ಹೀಗೆ ಚಿಂತಿಸುತ್ತಿರುವಷ್ಟರಲ್ಲಿ, ಚಂದ್ರನೂ ಇವನಿಗೆ ಸಹಾಯಮಾಡುವವನಂತೆ, ನಕ್ಷತ್ರಸಮೂಹದಿಂದ ಪರಿವೃತವಾಗಿ ತನ್ನ

ಚಂದ್ರಿಕೆಯಿಂದ ಸಮಸ್ತಲೋಕವನ್ನೂ ಬೆಳಗುತ್ತ, ಅನೇಕ ಸಹಸ್ರಕಿರಣಗಳೊಡನೆ ಆಕಾಶದಲ್ಲಿ ಉದಿಸಿಬಂದನು. ಶಂಖದಂತೆಯೂ, ಹಾಲಿನಂತೆಯೂ, ಕಾವರೆದಂಟಿನಂತೆಯೂ, ಶುಭ್ರವರ್ಣವುಳ್ಳವನಾಗಿ, ಕೊಳದಲ್ಲಿ ಈಜಾಡುವ ಹಂಸದಂತೆ ಆಕಾಶದಲ್ಲಿ ಉದಿಸಿ ಬಂದಿರುವ ಚಂದ್ರನನ್ನು ಈ ಆಂಜನೇಯನೂ ನೋಡಿದನು.

ಇಲ್ಲಿಗೆ ಎರಡನೆಯ ಸರ್ಗವು.

ಲಂಕಾದೇವತೆಯು ಹನುಮಂತನನ್ನು ತಡೆದುದು; ಹನುಮಂತನು ಅವಳನ್ನು ನಿಗ್ರಹಿಸಿ ಅವಳ ಅನುಮತಿಯಿಂದ ಪಟ್ಟಣಪ್ರವೇಶಮಾಡಿದುದು.

ಹೀಗೆ ಹನುಮಂತನು ಆಕಾಶದಲ್ಲಿ ತೂಗಾಡುವ ಮೇಘದಂತಿದ್ದ ಲಂಬವೆಂಬ ಆ ಪರ್ವತಶಿಖರದಲ್ಲಿ ನಿಂತು, ಪ್ರಕೃತಕಾರ್ಯವನ್ನು ಚಿಂತಿಸಿ ಮನಸ್ಸಿಗೆ ಧೈರ್ಯವನ್ನು ತಂದುಕೊಂಡನು. ಬುದ್ಧಿಶಾಲಿಯಾಗಿಯೂ, ಮಹಾ ವೀರ್ಯವುಳ್ಳವನಾಗಿಯೂ ಇರುವ ಆ ವಾನರೋತ್ತಮನು ಆ ರಾತ್ರಿಯಲ್ಲಿಯೇ ಲಂಕೆಯನ್ನು ಪ್ರವೇಶಿಸಿಬಿಡಬೇಕೆಂದೆಣಿಸಿದನು. ರಾವಣರಕ್ಷಿತವಾದ ಆ ಪಟ್ಟಣದಲ್ಲಿಯಾದರೋ ಎಲ್ಲಿ ನೋಡಿದರೂ ಅಂದವಾದ ಅಡವಿಗಳೂ, ಸ್ವಚ್ಛಜಲವುಳ್ಳ ಮಡುಗಳೂ ತುಂಬಿರುವುವು. ಎತ್ತ ನೋಡಿದರೂ ಶರತ್ಕಾಲದ ಮೇಘಗಳಂತಿರುವ ಉಪ್ಪರಿಗೆ ಮನೆಗಳು ಕಂಗೊಳಿಸುವುವು. ಅಲ್ಲಿ ಯಾವಾಗಲೂ ಜನಗಳ ಕೋಲಾಹಲವು ಸಮುದ್ರಘೋಷದಂತೆ ಕೇಳಿಸುತ್ತಿರುವುದು. ಆ ಪಟ್ಟಣದ ಯಾವಮೂಲೆಯಲ್ಲಿ ನಿಂತರೂ ತಂಪಾದ ಸಮುದ್ರದ ಗಾಳಿಯು ಬೀಸುತ್ತಿರುವುದು. ಕುಬೇರನಗರಿಯಾದ ಅಲಕಾನಗರಿಯೋ ಎಂಬಂತೆ ವಿಶೇಷಧನಾಢ್ಯರಿಂದ ನಿಬಿಡವಾಗಿರುವುದು. ಸುಣ್ಣ ಬಳಿದು ಬಿಳುಪಾದ ಬಾಗಿಲುವಾಡಗಳೆಲ್ಲವೂ ಜಗತಿಕಟ್ಟುಗಳಿಂದಲೂ ತೋರಣಗಳ ಸಾಲಿನಿಂದಲೂ ಶೋಭಿಸುತ್ತಿರುವುವು. ಸರ್ಪಗಳಿಗೆ ನೆಲೆಯಾಗಿ ಪಾತಾಳದಲ್ಲಿ ಅಡಗಿರುವ ಭೋಗವತೀಪಟ್ಟಣದಂತೆ ಕಾಣುತ್ತಿರುವುದು. ಅಲ್ಲಿನ ಉಪ್ಪರಿಗೆಗಳು ಮಿಂಚಿನಿಂದ ಕೂಡಿದ ಮೇಘಗಳಿಗೆ ವಿಶ್ರಮಸ್ಥಾನವಾಗಿಯೂ, ನಕ್ಷತ್ರಮಾರ್ಗಗಳಿಗೆ ನೆಲೆಯಾಗಿಯೂ, ಮಂದಮಾರುತಕ್ಕೆ ಸಂಚಾರಸ್ಥಾನವಾಗಿಯೂ ಇರುವುದರಿಂದ, ಆ ಪುರವು ಇಂದ್ರನ ಅಮರಾವತಿಯಂತೆಯೇ ಶೋಭಿಸುತ್ತಿರುವುದು. ಅದರ ಸುತ್ತಲೂ ಸುವರ್ಣಮಯವಾದ ಪ್ರಾಕಾರವು ಬಳಸಿಕೊಂಡಿರುವುದು. ಅಲ್ಲಲ್ಲಿ ಕಿರುಗೆಜ್ಜೆಗಳ ಘಲಘಲಧ್ವನಿ

ಯೊಡನೆ ಧ್ವಜಪತಾಕೆಗಳು ಆಡುತ್ತಿರುವುವು. ಇಂತಹ ಲಂಕಾನಗರಿಯನ್ನು ಸವಿಾಪಿಸಿ, ಅದರ ಪ್ರಾಕಾರದ ಬಳಿಯಲ್ಲಿ ನಿಂತು. ಹನುಮಂತನು ಆ ಪಟ್ಟಣದ ನಾಲ್ಕು ಕಡೆಗಳನ್ನೂ ನೋಡಿ ಆಶ್ಚರ್ಯದಿಂದ ಬೆರಗಾಗಿದ್ದನು. ಇದಲ್ಲದೆ ಪ್ರಾಕಾರದ ಮುಂಭಾಗದಲ್ಲಿ ಚಿನ್ನದಬಾಗಿಲುಗಳು' ಅದರ ಮುಂದೆ ವೈಡೂರ್ಯದ ಜಗಲಿಗಳು! ವಜ್ರ,ಸ್ಫಟಿಕ, ಮುತ್ತು, ಕೆಂಪು ಮುಂತಾದ ನವರತ್ನಗಳಿಂದ ಕೆತ್ತಲ್ಪಟ್ಟ ನೆಲಗಟ್ಟುಗಳು! ಪುಟಹಾಕಿದ ಚಿನ್ನದಿಂದ ಮಾಡಲ್ಪಟ್ಟ ಜಗಲಿಗಳು! ಅವುಗಳ ಮೇಲೆ ಜೊಕ್ಕ ಬೆಳ್ಳಿಯ ಚಿತ್ರದ ಕೆಲಸಗಳು! ಆ ಜಗಲಿಗಳ ಮುಂದೆ ವೈಡೂರ್ಯದ ಸೋಪಾನಗಳು! ಆ ಸೋಪಾನಗಳ ಕೆಳಗೆ ಸ್ಫಟಿಕದ ಮರಳುಗಳಿಂದ ತುಂಬಿದ ಅಂಗಳಗಳು! ಇವುಗಳಿಂದ ಮನೋಹರವಾದ ಅಲ್ಲಿನ ದ್ವಾರಪ್ರದೇಶವನ್ನು ನೋಡಿದನು. ಮತ್ತು ಅಲ್ಲಲ್ಲಿ ಅಂದವಾದ ತೊಟ್ಟಿಯ ಮನೆಗಳೂ ಆಕಾಶಕ್ಕೆ ಹಾರಿ ಹೋಗುವಂತಿರುವ ಮಹೋನ್ನತಗಳಾದ ಉಪ್ಪರಿಗೆಗಳೂ ಗೋಚರಿಸುತಿದ್ದುವು. ಮತ್ತು ಆ ಪ್ರಾಕಾರದ ಬಾಗಿಲಲ್ಲಿ ಒಂದು ಕಡೆಯಿಂದ ಕ್ರೌಂಚಪಕ್ಷಿಗಳ ಕೂಗು! ಮತ್ತೊಂದು ಕಡೆಯಿಂದ ನವಿಲುಗಳ ಕೇಕಾಧ್ವನಿ! ಇನ್ನೊಂದು ಕಡೆಯಲ್ಲಿ ರಾಜಹಂಸಗಳ ಕಲಧ್ವನಿ! ಒಂದು ಕಡೆಯಿಂದ ಮಂಗಳವಾದ್ಯಧ್ವನಿಗಳು! ಬೇರೊಂದು ಕಡೆಯಿಂದ ಸ್ತ್ರೀಯರ ಆಭರಣಧ್ವನಿಗಳು! ಇವೆಲ್ಲವೂ ಈ ಆಂಜನೇಯನ ಕಿವಿಗೆ ಬೀಳುತಿದ್ದುವು. ಪೂರ್ವದಿಕ್ಕಿನಲ್ಲಿದ್ದ ಇಂದ್ರನಗರಿಯೇ ಅಲ್ಲಿಗೆ ಬಂದು ನೆಲಸಿದಂತೆ ಅತಿ ವೈಭವದಿಂದ ಕೂಡಿದುದಾಗಿಯೂ, ಈಗ ಆಕಾಶಕ್ಕೆ ಹಾರಿಹೋಗಬೇಕೆಂದು ಪ್ರಯತ್ನಿಸುತ್ತಿದೆಯೋ ಎಂಬಂತೆ ಮಹೋನ್ನತವಾಗಿಯೂ ಇರುವ ಆ ಪಟ್ಟಣವನ್ನು ನೋಡಿ ಹನುಮಂತನಿಗೆ ಬಹಳ ಹರ್ಷವುಂಟಾಯಿತು. ಸರ್ವೋತ್ತಮವಾಗಿಯೂ, ಸರ್ವಸೌಭಾಗ್ಯಯುಕ್ತವಾಗಿಯೂ ಇರುವ ರಮ್ಯವಾದ ಆ ರಾಕ್ಷಸರಾಜನ ಪಟ್ಟಣವನ್ನು ನೋಡಿ ಹನುಮಂತನು ತನ್ನ ಮನಸ್ಸಿನಲ್ಲಿ "ಅಹಾ! ಶಸ್ತ್ರಪಾಣಿಗಳಾದ ರಾವಣನ ಸೈನಿಕರಿಂದ ರಕ್ಷಿತವಾದ ಈ ಪಟ್ಟಣವನ್ನು ಬೇರೆ ಯಾರೂ ತಮ್ಮ ಶಕ್ತಿಯಿಂದ ನುಗ್ಗಿಬರಲಾರರು. ಒಂದುವೇಳೆ ಪ್ರಯತ್ನಪಟ್ಟರೆ, ಕುಮುದಾಂಗದರಿಬ್ಬರು, ವಾನರೇಂದ್ರನಾದ ಸುಷೇಣನೊಬ್ಬನು, ಮೈಂದದ್ವಿವಿದರಿಬ್ಬರು, ಇವರಿಗೆಮಾತ್ರ ಸಾಧ್ಯವಾದರೂ ಆಗಬಹುದು. ಸೂರ್ಯಪುತ್ರನಾದ ಸುಗ್ರೀವನೂ ಕುಶಪರ್ವನೆಂಬ ಕಪಿಯೂ, ಋಕ್ಷನೂ, ಕೇತುಮಾಲನೂ, ಇದನ್ನು ಸಾಧಿಸಬಲ್ಲರೆಂಬುದರಲ್ಲಿಯೂ ಸಂದೇಹವಿಲ್ಲ. ಹಾಗೆಯೇ ನನಗೂ ಅಷ್ಟಾಗಿ ಇದು ಅಸಾಧ್ಯವಾಗಿರದು" ಎಂದು ಚಿಂತಿಸಿ, ಶ್ರೀರಾಮಲಕ್ಷ್ಮಣರಂತೂ ಇದನ್ನು ಅನಾಯಾಸದಿಂದಲೇ ಸಾಧಿಸಬಹುದೆಂದೂ ನಿಶ್ಚಯಿಸಿಕೊಂಡು, ಮನಸ್ಸಿನಲ್ಲಿ ಸಂತೋಷ

ದಿಂದ ಹಿಗ್ಗುತ್ತಿದ್ದನು. ಪುನಃ ಆ ವಾನರೋತ್ತಮನು ಸುತ್ತಲೂ ಚೆನ್ನಾಗಿ ಕಣ್ಣಿಟ್ಟು ನೋಡುವಾಗ ಆ ನಗರಿಯು ರತ್ನರಾಶಿಗಳೆಂಬ ಬಟ್ಟೆಯನ್ನುಟ್ಟು, ಗೋಕುಲಗಳೆಂಬ ತಲೆದುರುಬುಗಳಿಂದ ಕೂಡಿ ಯಂತ್ರಶಾಲೆಗಳೆಂಬ ಸ್ತನಗಳಿಂದ ಶೋಭಿಸುತ್ತಿರುವ ಸರ್ವಾಲಂಕಾರಭೂಷಿತೆಯಾದ ಒಬ್ಬ ಉತ್ತಮಸ್ತ್ರೀಯಂತೆ ಕಾಣುತ್ತಿತ್ತು. ಅಲ್ಲಿನ ದೊಡ್ಡ ಮನೆಗಳ ಕಾಂತಿಯಿಂದಲೇ ಅಲ್ಲಿನ ಅಂಧಕಾರವೆಲ್ಲವೂ ಅಡಗಿ ಹೋಗುವಂತೆ ಪ್ರಕಾಶಮಾನವಾಗಿತ್ತು. ಆ ಲಂಕೆಯನ್ನು ಪ್ರವೇಶಿಸುವುದಕ್ಕಾಗಿ ಮಹಾಬಲಾಢ್ಯನಾದ ಈ ವಾನರೋತ್ತಮನು ಮುಂದೆ ಬರುತ್ತಿರುವಾಗ, ಲಂಕಾಧಿದೇವತೆ ಮೊದಲು ಅತನನ್ನು ಕಂಡಳು. ರಾವಣ ರಕ್ಷಿತೆಯಾದ ಆ ಲಂಕೆಯು ಈತನು ಒಳಗೆ ಬರುವುದನ್ನು ಕಂಡೊಡನೆ, ಮೇಲೆದ್ದು ನಿಂತು, ವಿಕಾರವಾದ ಮುಖವುಳ್ಳವಳಾಗಿ, ಆ ವಾಯುಪುತ್ರನ ಮುಂದೆ ನಿಂತು ಉಚ್ಚಸ್ವರದಿಂದ ಅರ್ಭಟಿಸುತ್ತ, ಅವನನ್ನು ಕುರಿತು "ಎಲೆ ಕಾಡುಕಪಿಯೆ! ನೀನು ಯಾರು? ಇಲ್ಲಿಗೆ ಬಂದ ಕಾರ್ಯವೇನು? ನಿನ್ನ ಪ್ರಾಣವಿರುವುದರೊಳಗಾಗಿ ನಿಜಸ್ಥಿತಿಯನ್ನು ಹೇಳಿಬಿಡು? ಸುತ್ತಲೂ ರಾವಣನ ಸೈನ್ಯದಿಂದ ರಕ್ಷಿತವಾದ ಈ ಲಂಕೆಯನ್ನು ಪ್ರವೇಶಿಸಬೇಕೆಂದರೆ, ವಾನರನಾದ ನಿನಗೆ ಎಂದಿಗೂ ಸಾಧ್ಯವಲ್ಲ" ಎಂದಳು. ಹೀಗೆ ಅಡ್ಡಗಟ್ಟಿ ಕೂಗುತ್ತಿರುವ ಆಕೆಯನ್ನು ನೋಡಿ ವೀರನಾದ ಹನುಮಂತನು, "ಎಲೆ ರಾಕ್ಷಸಿ! ನೀನು ನನ್ನನ್ನು ಪ್ರಶ್ನೆಮಾಡುವುದರಿಂದ ನನ್ನ ನಿಜಸ್ಥಿತಿಯನ್ನು ನಿನಗೆ ಮುಂದೆ ತಿಳಿಸುವೆನು. ಮೊದಲು ನೀನು ಯಾರೆಂಬುದನ್ನು ನನಗೆ ತಿಳಿಸು. ವಿಕಾರವಾದ ಕಣ್ಣುಳ್ಳ ನೀನು ಈ ಪಟ್ಟಣದ ಬಾಗಿಲಲ್ಲಿ ನಿಂತಿರುವುದೇಕೆ? ಹೀಗೆ ಭಯಂಕರಸ್ವರೂಪಳಾಗಿ ನನ್ನನ್ನು ತಡೆದು ಹೆದರಿಸುವುದಕ್ಕೆ ಕಾರಣವೇನು?" ಎಂದನು. ಹನುಮಂತನು ಹೇಳಿದ ಈ ವಾಕ್ಯವನ್ನು ಕೇಳಿ, ಕಾಮರೂಪಿಣಿಯಾದ ಆ ಲಂಕೆಯು ಬಹಳ ಕೋಪಗೊಂಡು, ಕ್ರೂರಸ್ವರದಿಂದ ಅತನನ್ನು ಕುರಿತು "ಎಲೈ ವಾನರನೆ! ನಾನು ಇಲ್ಲಿನ ರಾಕ್ಷಸರಿಗೆ ರಾಜನಾದ ಮಹಾತ್ಮನಾದ ರಾವಣನ ಆಜ್ಞೆಯಂತೆ ಈ ಪಟ್ಟಣಕ್ಕೆ ಕಾವಲಿರುವೆನು. ನನ್ನನ್ನಿದಿರಿಸುವುದು ಯಾರಿಗೂ ಸಾಧ್ಯವಲ್ಲ. ನನ್ನನ್ನು ತಿರಸ್ಕರಿಸಿ ಈ ಲಂಕೆಗೆ ಪ್ರವೇಶಿಸುವುದಕ್ಕೂ ನಿನ್ನಿಂದ ಸಾಧ್ಯವಾಗದು. ಈಗಲೇ ನೀನು ನನ್ನಿಂದ ಹತನಾಗಿ ಪ್ರಾಣವನ್ನು ಬಿಟ್ಟು ನೆಲದಮೇಲೆ ಮಲಗುವುದರಲ್ಲಿ ಸಂದೇಹವಿಲ್ಲ. ಎಲೆ ಕಪಿಯೇ! ನಾನೇ ಲಂಕಾ ನಗರಿಯೆಂದು ತಿಳಿ! ನಾನೇ ಇದನ್ನು ಸುತ್ತಲೂ ಕಾಯುತ್ತಿರುವೆನು. ಇದ್ದ ಸ್ಥಿತಿಯನ್ನು ನಿನಗೆ ತಿಳಿಸಿರುವೆನು" ಎಂದಳು. ಲಂಕೆಯು ಹೇಳಿದ ಈ ಮಾತನ್ನು ಕೇಳಿದಾಗಲೂ, ವಾಯುಪುತ್ರ

ನಾದ ಹನುಮಂತನು ಸ್ವಲ್ಪವೂ ಭಯಪಡದೆ, ತನ್ನ ಪ್ರಯತ್ನವನ್ನೂ ಬಿಡದೆ, ಒಂದು ದೊಡ್ಡ ಬೆಟ್ಟದಂತೆ ಅವಳ ಮುಂದೆ ಅಲ್ಲಾಡದೆ ನಿಂತಿದ್ದನು. ಬುದ್ಧಿಯಿಂದಲೂ, ಪರಾಕ್ರಮದಿಂದಲೂ ಮೇಲೆನಿಸಿಕೊಂಡ ಆ ಹನುಮಂತನು ವಿಕಾರವಾದ ಸ್ತ್ರೀ ರೂಪದಿಂದಿರುವ ಅಕೆಯನ್ನು ನೋಡಿ, ಮೃದುವಾಕ್ಯದಿಂದ "ಎಲೆ ಲಂಕೆ! ಉಪ್ಪರಿಗೆಗಳಿಂದಲೂ, ಕೋಟೆಗಳಿಂದಲೂ ಪುರದ್ವಾರಗಳಿಂದಲೂ, ಶೋಭಿಸುವ ಈ ಲಂಕಾ ಪುರಿಯನ್ನು ನೋಡಬೇಕೆಂಬುದಕ್ಕಾಗಿಯೇ ನಾನು ಇಲ್ಲಿಗೆ ಬಂದೆನು. ಇದನ್ನು ನೋಡಿ ಬರಬೇಕೆಂದು ನನಗೆ ಬಹಳ ಆಸೆಯುಂಟು. ಈ ಲಂಕೆಯಲ್ಲಿರುವ ವನಗಳನ್ನೂ, ತೋಟಗಳನ್ನೂ, ದೊಡ್ಡ ದೊಡ್ಡ ಅಡವಿಗಳನ್ನೂ, ಇಲ್ಲಿನ ಮರಗಳನ್ನೂ ಸುತ್ತಿ ನೋಡುವುದಕ್ಕಾಗಿಯೇ ಬಂದಿರುವೆನು" ಎಂದನು. ಇದನ್ನು ಕೇಳಿ ಲಂಕೆಯು ತಿರುಗಿ ಆಂಜನೇಯನನ್ನು ಕುರಿತು, ಮತ್ತಷ್ಟು ಕ್ರೂರಸ್ವರದಿಂದ ಕೂಗುತ್ತ "ಎಲೆ ಬುದ್ಧಿಗೆಟ್ಟ ವಾನರಾಧಮನೆ! ನೀನು ಮೊದಲು ನನ್ನನ್ನು ಜಯಿಸದೆ ರಾವಣ ರಕ್ಷಿತವಾದ ಈ ಪಟ್ಟಣವನ್ನು ಹೊಕ್ಕು ನೋಡಿ ಬರಬೇಕೆಂದರೆ ಸಾಧ್ಯವೆ?" ಎಂದಳು. ಆಗ ಹನುಮಂತನು ಆ ರಾಕ್ಷಸಿಯನ್ನು ಕುರಿತು ಪುನಃ ಮೃದುವಾಕ್ಯದಿಂದ, "ಎಲೆ ಭದ್ರೆ! ಈ ಪಟ್ಟಣವನ್ನು ಒಂದಾವರ್ತಿ ಚೆನ್ನಾಗಿ ನೋಡಿ, ಆ ಮೇಲೆ ನಾನು ಬಂದ ದಾರಿಯನ್ನು ಹಿಡಿದು ಹಿಂತಿರುಗಿ ಹೋಗುವೆನು" ಎಂದನು. ಇದನ್ನು ಕೇಳಿ ಆ ಲಂಕೆಯ ಕೋಪವು ಮಿತಿಮೀರಿಹೋಯಿತು. ಆಗಲೇ ಭಯಂಕರವಾಗಿ ಕೂಗುತ್ತ ಮದದಿಂದ ಮುಂದೆ ಬಂದು, ತನ್ನ ಅಂಗೈಯಿಂದ ಹನುಮಂತನನ್ನು ಬಲವಾಗಿ ಹೊಡೆದಳು. ಲಂಕೆಯು ತನ್ನನ್ನು ಹೊಡೆದೊಡನೆ ಹನುಮಂತನು ಕುಪಿತನಾಗಿ, ಮಹಾಧ್ವನಿಯಿಂದ ಗರ್ಜಿಸುತ್ತ ತನ್ನ ಎಡದ ಕೈಯ್ಯ ಬೆರಳುಗಳನ್ನು ಸೇರಿಸಿ ಹಿಡಿದು ಆ ಮುಷ್ಟಿಯಿಂದ ಅಕೆಯನ್ನು ಹೊಡೆದನು. ಆಗ ಕೋಪದಿಂದ ಅವನಿಗೆ ಮೈತಿಳಿಯದಂತಾಗಿದ್ದರೂ, ಸ್ತ್ರೀಯನ್ನು ಕೊಲ್ಲಬಾರದೆಂಬ ಬುದ್ಧಿಯಿಂದ ಆ ಕೋಪವನ್ನು, ಸಂಪೂರ್ಣವಾಗಿ ತೋರಿಸಲಾರದೆ ಹೋದನು. ಹಾಗಿದ್ದರೂ ಅವನ ಎಡದ ಕೈಯ್ಯ ಆ ಮುಷ್ಟಿಪ್ರಹಾರವನ್ನೂ ಆ ರಾಕ್ಷಸಿಯು ತಡೆಯಲಾರದೆ, ಜರ್ಝರಿತವಾದ ದೇಹವುಳ್ಳವಳಾಗಿ ತನ್ನ ವಿಕಾರಸ್ವರೂಪದೊಡನೆಯೇ ನೆಲದಲ್ಲಿ ಬಿದ್ದಳು. ಪ್ರಾಜ್ಞನಾದ ಹನುಮಂತನು ಹೀಗೆ ಅವಳು ನೆಲದಲ್ಲಿ ಬಿದ್ದುದನ್ನು ನೋಡಿ, ಹೆಂಗಸೆಂಬುದಕ್ಕಾಗಿ ಅವಳಲ್ಲಿ ಮರುಕಗೊಂಡು ಅಕೆಯನ್ನು ಅಷ್ಟರಲ್ಲಿಯೇ ಬಿಟ್ಟು ಬಿಟ್ಟನು. ಹನುಮಂತನ ಪ್ರಹಾರದಿಂದ ಬಹಳವಾಗಿ ನೊಂದ ಆ ಲಂಕೆಯು ಆಗಲೇ ಕೊಬ್ಬಡಗಿ, ಗದ್ಗದಸ್ವರದಿಂದ ಆ ಹನುಮಂತನನ್ನು ಕುರಿತು, ವಿನಯಪೂರ್ವಕವಾಗಿ, "ಎಲೈ ಮಹಾಬಾಹುವಾದ ವಾನರೋತ್ತ

ಮನೆ! ಪ್ರಸನ್ನನಾಗು! ನನ್ನನ್ನು ಪ್ರಾಣದೊಡನೆ ಬಿಡು! ಎಲೆ ಸೌಮ್ಯನೆ! ನಿನ್ನಂತಹ ಸಾತ್ವಿಕರು ಮಹಾಬಲಾಢ್ಯರಾದರೂ ಧರ್ಮವನ್ನು ತಪ್ಪಿ ಹೋಗುವವರಲ್ಲ! ಎಲೆ ವೀರನೆ! ನಾನೇ ಲಂಕಾನಗರಿಯೆಂದು ತಿಳಿ! ಈಗ ನೀನು ನಿನ್ನ ಪರಾಕ್ರಮದಿಂದ ನನ್ನನ್ನು ಜಯಿಸಿದಂತಾಯಿತು. ಈಗ ನಿನಗೊಂದು ಸಾರವಾದ ರಹಸ್ಯವನ್ನು ತಿಳಿಸುವೆನು ಕೇಳು. 1 ಪೂರ್ವದಲ್ಲಿ ಸ್ವಯಂಭುವಾದ ಬ್ರಹ್ಮನು ನನಗೆ ಒಂದು ವರವನ್ನು ಕೊಟ್ಟಿರುವನು. ಆಗ ಅವನು ನನ್ನನ್ನು ನೋಡಿ "ಯಾವಾಗ ಒಬ್ಬ ವಾನರನು ಬಂದು ತನ್ನ ಪರಾಕ್ರಮದಿಂದ ನಿನ್ನನ್ನು ವಶಪಡಿಸಿಕೊಳ್ಳುವನೋ, ಆಗಲೇ ಇಲ್ಲಿನ ರಾಕ್ಷಸರಿಗೆ ವಿಪತ್ಕಾಲವು ಬಂದುದಾಗಿ ತಿಳಿಯಬೇಕು" ಎಂದು ಸೂಚಿಸಿರುವನು. ಎಲೆ ಸೌಮ್ಯನೆ! ಈಗ ನಿನ್ನ ದರ್ಶನದಿಂದ ಆ ಬ್ರಹ್ಮನು ನನಗೆ ಹೇಳಿದ್ದ ಕಾಲವು ಪ್ರಾಪ್ತವಾಯಿತು. ಬ್ರಹ್ಮನ ಬಾಯಿಯಿಂದ ಬಂದ ಮಾತು ತಪ್ಪುವುದೆಂದರೆನು? ಸೀತೆಯ ನಿಮಿತ್ತದಿಂದಲೇ ದುರಾತ್ಮನಾದ ಇಲ್ಲಿನ ರಾಕ್ಷಸರಾಜನಿಗೂ ಸಮಸ್ತರಾಕ್ಷಸರಿಗೂ ಕೊನೆಗಾಲವು ಸಂಭವಿಸಿತು. ಆದುದರಿಂದ ಎಲೈ ವಾನರೋತ್ತಮನೆ! ನೀನು ಇನ್ನು ಮೇಲೆ ರಾವಣರಕ್ಷಿತವಾದ ಈ ಲಂಕೆಯನ್ನು ಯಥೇಷ್ಟವಾಗಿ ಪ್ರವೇಶಿಸು. ನೀನು ಇಲ್ಲಿ ಯಾವ ಯಾವ ಕಾರ್ಯವನ್ನು ನಡೆಸಬೇಕೆಂದೆಣಿಸಿರುವೆಯೋ ಅವೆಲ್ಲವನ್ನೂ ಸ್ವೇಚ್ಛೆಯಿಂದ ನಡೆಸು. ಎಲೈ ವಾನರಶ್ರೇಷ್ಠನೆ! ನಂದಿಕೇಶ್ವರನೇ ಮೊದಲಾದವರ ಶಾಪಕ್ಕೆಡಾಗಿ, ರಾಕ್ಷಸರಾಜನಾದ ರಾವಣನಿಂದ ಪಾಲಿತವಾದ ಈ ನಗರಿಯನ್ನು ಪ್ರವೇಶಿಸಿ, ನಿನಗೆ ಇಷ್ಟಬಂದ ಕಡೆಯಲ್ಲಿ ಯಥೇಚ್ಛವಾಗಿ ತಿರುಗುತ್ತ, ಜನಕಪುತ್ರಿಯಾದ ಸೀತೆಯನ್ನು ಹುಡುಕಿದಾ!" ಎಂದಳು.

ಇಲ್ಲಿಗೆ ಮೂರನೆಯ ಸರ್ಗವು.

---

1. ರಾವಣನು ದಿಗ್ವಿಜಯಕಾಲದಲ್ಲಿ ನಡೆಸಿದ ಅಕೃತ್ಯಗಳಿಗೆ ಕೋಪಿಸಿ ಪೂರ್ವದಲ್ಲಿ ನಂದಿ ಮೊದಲಾದವರು ಲಂಕೆಗೆ ಅಗಲೇ ನಾಶವುಂಟಾಗುವಂತೆ ಶಪಿಸಿಬಿಟ್ಟರು. ಆಗ ಲಂಕೆಯು ಬ್ರಹ್ಮನಲ್ಲಿ ಹೋಗಿ ಮೊರೆಯಿಟ್ಟು, ತನಗೆ ಎಂದಿಗೂ ನಾಶವಿಲ್ಲದಂತೆ ವರವನ್ನು ಕೊಡಬೇಕೆಂದು ಪ್ರಾರ್ಥಿಸಿದಳು. ಆಗ ಬ್ರಹ್ಮನು ಆ ಲಂಕೆಯ ಕೋರಿಕೆಯಂತೆಯೇ ನಡೆಸಿದ್ದರೂ "ಮುಂದೆ ಒಬ್ಬ ವಾನರನು ಬಂದು ನಿನ್ನನ್ನು ಯಾವಾಗ ಜಯಿಸುವನೋ ಆಗ ನಿನಗೆ ನಾಶವುಂಟಾಗಲಿ" ಎಂದು ವರವನ್ನು ಕೊಟ್ಟು ಕಳುಹಿಸಿದನು. ಈ ಕಥಾ ಸಂದರ್ಭವನ್ನು ಇಲ್ಲಿಗೆ ಅನುಸಂಧಿಸಿಕೊಳ್ಳಬೇಕು.

ಹನುಮಂತನು ಪ್ರಾಕಾರವನ್ನು ದಾಟಿ ಲಂಕೆಯನ್ನು ಪ್ರವೇಶಿಸಿ, ಅಲ್ಲಿ ರಾಕ್ಷಸರ ಹರ್ಮ್ಯಗಳನ್ನೂ ರಾವಣನ ಮೂಲಬಲವನ್ನೂ ನೋಡಿದುದು.

ಹೀಗೆ ಹನುಮಂತನು ಕಾಮರೂಪಿಣಿಯಾದ ಆ ಲಂಕೆಯನ್ನು ತನ್ನ ಪರಾಕ್ರಮದಿಂದ ಜಯಿಸಿದ ಮೇಲೆ, ಆ ಲಂಕೆಯೊಳಗೆ ಪ್ರವೇಶಿಸುವುದಕ್ಕೆ ಸಿದ್ಧನಾದನು. ಇವನು ಬಹಳ ಶಕ್ತಿಯುಳ್ಳವನಾಗಿಯೂ ಮಹಾಬಾಹುವಾಗಿಯೂ ಇದ್ದುದರಿಂದ, [1] ಆ ಪ್ರಾಕಾರದ ಬಾಗಿಲಲ್ಲಿ ಪ್ರವೇಶಿಸದೆ ಅದರ ಗೋಡೆಯನ್ನು ಹಾರಿ ಒಳಕ್ಕಿಳಿದನು. ತನ್ನ ಪ್ರಭುವಾದ ಸುಗ್ರೀವನಿಗೆ ಶ್ರೇಯಸ್ಸನ್ನೂ, † ರಾವಣನಿಗೆ ಕೇಡನ್ನೂ ಕೋರುವ ಈ ಹನುಮಂತನು, ಶತ್ರುವಿನ ತಲೆಯನ್ನು ಮೆಟ್ಟುವ ರೀತಿಯಲ್ಲಿ, ತನ್ನ ಎಡದ ಕಾಲನ್ನೇ ಮೊದಲು ಆ ಲಂಕೆಯ ನೆಲದ ಮೇಲೆ ಊರಿದನು. ಹೀಗೆ ಬಲಾಢ್ಯನಾದ ಮಾರುತಿಯು ಆ ರಾತ್ರಿಯಲ್ಲಿಯೇ ಲಂಕೆಯನ್ನು ಪ್ರವೇಶಿಸಿ, ಮುತ್ತಿನ ಮಣಿಗಳಿಂದಲೂ, ಬಿಡುಹೂಗಳ ಸಮೂಹದಿಂದಲೂ ಶೋಭಿತವಾದ ಅಲ್ಲಿನ ರಾಜಮಾರ್ಗವನ್ನು ಹಿಡಿದು ಮುಂದೆ ಹೊರಟನು. ಆ ಪಟ್ಟಣದ ಬೀದಿಗಳಲ್ಲಿ ಎಲ್ಲಿ ನೋಡಿದರೂ ನೃತ್ತಗೀತಾದಿ ವಾದ್ಯಧ್ವನಿಗಳೂ, ಅಟ್ಟಹಾಸದಿಂದ ನಗುವ ಶಬ್ದಗಳೂ ಕೇಳಿಸುತ್ತಿದ್ದುವು. ಮತ್ತು ಆ ನಗರಿಯು ಮೇಘಗಳಿಂದ ತುಂಬಿದ ಆಕಾಶದಂತೆ ವಜ್ರಾಲಂಕೃತಗಳಾಗಿಯೂ ಐರಾವತದಂತೆ

---

1. ಅಲ್ಲಿ ಹನುಮಂತನು ಲಂಕೆಗೆ ಪ್ರವೇಶಿಸುವಾಗ ಬಾಗಿಲನ್ನು ಬಿಟ್ಟು ಪ್ರಾಕಾರದ ಗೋಡೆಯನ್ನೇರಿ ಇಳಿದುದೇಕೆಂದರೆ:—"ಗ್ರಾಮಂ ವಾ ನಗರಂ ವಾಪಿ ಪಟ್ಟಣಂ ವಾ ಪರಸ್ಯ ಹಿ। ವಿಶೇಷಾತ್ಸಮಯೇ ಸೌಮ್ಯ ನ ದ್ವಾರೇಣ ವಿಶೇನ್ನೃಪ" ಎಂಬ ಶಾಸ್ತ್ರಾನುಸಾರವಾಗಿ ಶತ್ರುವಿನ ಗ್ರಾಮವನ್ನಾಗಲಿ, ನಗರವನ್ನಾಗಲಿ ಪ್ರವೇಶಿಸುವಾಗ ದ್ವಾರಪ್ರದೇಶದಿಂದ ಹೋಗಕೂಡದೆಂದೂ, ಅದರಲ್ಲಿಯೂ ಮುಖ್ಯವಾಗಿ ಶತ್ರುಜಯವನ್ನು ಬೇಡಿ ಬರುವವನು ಹಾಗೆ ಪ್ರವೇಶಿಸಲೇಕೂಡದೆಂದೂ ವಿಧಿಯುಂಟು. ಈ ವಿಧಿಯನ್ನನುಸರಿಸಿಯೇ ಹನುಮಂತನು ಗೋಡೆಯನ್ನು ಹತ್ತಿಳಿದನೆಂದು ಗ್ರಾಹ್ಯವು.

† ಅಲ್ಲಿ ಹನುಮಂತನು ಮೊದಲು ತನ್ನ ಎಡದ ಕಾಲನ್ನೂರಿದುದೇಕೆಂದರೆ:— "ಪ್ರಯಾಣಕಾಲೇ ಚ ಗೃಹಪ್ರವೇಶೇ ವಿವಾಹಕಾಲೇಽಪಿ ಚ ದಕ್ಷಿಣಾಂಘ್ರಿಮ್। ಶತ್ರೋಶ್ಚ ಶತ್ರುಪುರಪ್ರವೇಶೇ ವಾಮಂ ಪದಧ್ಯಾತ್ಸುರತೋ ನೃಪಾಲ" ಪ್ರಯಾಣಕಾಲಗಳಲ್ಲಿಯೂ ನೂತನ ಗೃಹಪ್ರವೇಶಕಾಲದಲ್ಲಿಯೂ, ವಿವಾಹಕಾಲದಲ್ಲಿಯೂ ಮೊದಲು ಬಲಪಾದವನ್ನಿಡಬೇಕು. ಶತ್ರುಪುರಪ್ರವೇಶಕಾಲದಲ್ಲಿ ಮೊದಲು ಎಡಗಾಲನ್ನಿಡಬೇಕು" ಎಂಬ ಬೃಹಸ್ಪತಿವಚನಾನುಸಾರವಾಗಿ, ಶತ್ರುವಿನ ಕೇಡನ್ನು ಕೋರತಕ್ಕ ಆಂಜನೇಯನು ಮೊದಲು ತನ್ನ ಎಡದ ಕಾಲನಿಟ್ಟುವಾಗಿ ಗ್ರಾಹ್ಯವು.

ಬಿಳುಪಾಗಿಯೂ ಇರುವ ಉತ್ತಮಗೃಹಗಳಿಂದ ಅತಿ ಮನೋಹರವಾಗಿದ್ದಿತು. ಮತ್ತು ಅಲ್ಲಿ ಮಂಗಳಾಲಂಕಾರಗಳುಳ್ಳ ಅನೇಕ ರಾಕ್ಷಸಗೃಹಗಳಿದ್ದುವು. ಶರನ್ಮೇಘಗಳಂತೆ ಬಿಳುಪಾಗಿಯೂ ವಿಚಿತ್ರಗಳಾಗಿಯೂ, [1] ಪದ್ಮ, ಸ್ವಸ್ತಿಕ, ವರ್ಧಮಾನಗಳೆಂಬ ಬೇರೆ ಬೇರೆ ತರದ ಸನ್ನಿವೇಶವುಳ್ಳವುಗಳಾಗಿಯೂ ಇರುವ ಅನೇಕರಾಜಗೃಹಗಳೂ ತುಂಬಿದ್ದುದರಿಂದ, ಆ ಪಟ್ಟಣವು ತನ್ನ ದಿವ್ಯಕಾಂತಿಯಿಂದ ಜ್ವಲಿಸುತ್ತಿರುವುದೋ ಎಂಬಂತೆ ಕಾಣುತಿತ್ತು. ಸುಗ್ರೀವನಿಗೆ ಹಿತಕಾಂಕ್ಷಿಯಾದ ಹನುಮಂತನು ರಾಮಕಾರ್ಯಾರ್ಥವಾಗಿ ಅಲ್ಲಲ್ಲಿ ಸುತ್ತುತ್ತ, ಪುಷ್ಪಾಭರಣಗಳಿಂದಲಂಕೃತವಾದ ಆ ಪಟ್ಟಣದ ಅಂದವೆಲ್ಲವನ್ನೂ ನೋಡಿದನು. ಅಷ್ಟು ದುರ್ಗಮವಾದ ಲಂಕೆಗೆ ತಾನು ನಿರಾಯಾಸವಾಗಿ ಪ್ರವೇಶಿಸಿಬಿಟ್ಟದ್ದೇ ರಾವಣನ ಕಾರ್ಯಸಿದ್ಧಿಗೆ ಸೂಚಕವೆಂದೂ ಹಿಗ್ಗುತಿದ್ದನು. ಹಾಗೆಯೇ ಅವನು ಮನೆಮನೆಗೆ ನುಗ್ಗುತ್ತ, ಅಲ್ಲಲ್ಲಿ ಬೇರೆಬೇರೆ ವಿಧವಾದ ಕಟ್ಟಡಗಳುಳ್ಳ ಮನೆಗಳ ಸನ್ನಿವೇಶವನ್ನು ನೋಡುತ್ತ ಬಂದನು. ಮತ್ತು ಅಲ್ಲಲ್ಲಿ ಯೌವನಮದದಿಂದ ಮದಿಸಿದ ಪುರಸ್ತ್ರೀಯರು, ಎದೆ, ಕೊರಲು, ಶಿರಸ್ಸುಗಳೆಂಬ ಮೂರು ಸ್ಥಾನಗಳಿಂದ ಹುಟ್ಟಿಬರುವ ಮಂದ್ರ, ಮಧ್ಯಮ, ತಾರಗಳೆಂಬ ಸ್ಥಾಯಿಗಳೊಡನೆ ಕೂಡಿ ದೇವಲೋಕದ ಅಪ್ಸರಸ್ತ್ರೀಯರಂತೆ ಕಿವಿಗಿಂಪಾಗಿ ಹಾಡುವ ಹಾಡುಗಳನ್ನು ಕೇಳಿದನು. ಮತ್ತು ಅಲ್ಲಲ್ಲಿ ಸಂಚರಿಸುವ ಸ್ತ್ರೀಯರ ಕಾಂಚೀಧ್ವನಿ, ಕಾಲಂದುಗೆಗಳ ಧ್ವನಿ, ಧನಿಕರ ಮನೆಗಳಿಂದ ಕೇಳಿಬರುವ ಸೋಪಾನಧ್ವನಿ ಇವೆಲ್ಲವೂ ಇವನ ಕಿವಿಗೆ ಬೀಳುತಿದ್ದುವು. ಅಲ್ಲಲ್ಲಿ ವೀರಭಟರು ಉತ್ಸಾಹದಿಂದ ತಮ್ಮ ತಮ್ಮ ಧ್ವಜಗಳನ್ನು ತಟ್ಟಿ ಸಿಂಹನಾದಮಾಡುವ ಶಬ್ದಗಳನ್ನೂ ಅಲ್ಲಲ್ಲಿ ರಾಕ್ಷಸರ ವಾಸಗೃಹಗಳಲ್ಲಿ ಜಪಮಾಡುವವರ ಮಂತ್ರಧ್ವನಿಗಳನ್ನೂ ಕೇಳಿದನು. ಮತ್ತು ಅಲ್ಲಲ್ಲಿ ವೇದಾಧ್ಯಯನಪರರಾದ ಬ್ರಹ್ಮರಾಕ್ಷಸರನ್ನೂ, ಅಲ್ಲಲ್ಲಿ ಉತ್ಸಾಹಗರ್ಜನಗಳೊಡನೆ ರಾವಣನನ್ನು ಸ್ತೋತ್ರಮಾಡುತಿದ್ದ ರಾಕ್ಷಸಭಟರನ್ನೂ ಕಂಡನು. ಅಲ್ಲಲ್ಲಿ ರಾಜಮಾರ್ಗಗಳನ್ನಾವರಿಸಿ ನಿಂತಿರುವ ರಾವಣನ ಮೂಲಬಲವನ್ನೂ ಆ ಮೂಲಬಲದ ನಡುನಡುವೆ ಕಾರ್ಯಾತುರದಿಂದ ಓಡಾಡುತಿದ್ದ ಅನೇಕದೂತರನ್ನೂ ನೋಡಿದನು. ಮತ್ತು ಆ ರಾಕ್ಷಸರಲ್ಲಿ ದೀಕ್ಷೆಬಿಟ್ಟವರು ಕೆಲವರು! ಜಟಾಧಾರಿಗಳು ಕೆಲವರು! ಮುಂಡನಮಾಡಿದ ತಲೆಯುಳ್ಳವರು ಕೆಲವರು!

---

1. "ಚತುರ್ದ್ವಾರಾ ಚತುರ್ದ್ವಾರಾ ಸರ್ವತೋ ಭದ್ರಸಂಜ್ಞಿತಾ। ಪಶ್ಚಿಮದ್ವಾರರಹಿತಾ ಮುಖ್ಯಾವಸ್ತ್ರಾ ಹಯಾನನಾ। ದಕ್ಷಿಣದ್ವಾರರಹಿತಾ ವರ್ಧಮಾನಾ ಧನಪ್ರದಾ। ಪ್ರಾಗ್ದ್ವಾರರಹಿತಾ ಸ್ವಸ್ತಿಕಾಖ್ಯಾ ಪುತ್ರಧನಪ್ರದಾ॥ ಎಂದು ಗೃಹಲಕ್ಷಣವು.

ಗೋಚರ್ಮವನ್ನುಟ್ಟು ನಿಂತವರು ಕೆಲವರು! ದಿಗಂಬರರು ಕೆಲವರು. ಅನಿಷ್ಟ ಪರಿಹಾರಕ್ಕಾಗಿ ಆಯುಧಗಳಂತೆ ಕೈಯಲ್ಲಿ ದರ್ಭೆಯ ಮುಷ್ಟಿಗಳನ್ನು ಹಿಡಿದವರು ಕೆಲವರು. ಶತ್ರುಗಳನ್ನು ಶೂನ್ಯಮಾಡಿ ಕೊಲ್ಲಬೇಕೆಂದು ಅಗ್ನಿಕುಂಡವನ್ನು ಬೆಳೆಸಿಟ್ಟುಕೊಂಡಿರುವವರು ಕೆಲವರು. ಕೂಟ, ಮುದ್ಗರ, ದಂಡ ಮೊದಲಾದ ಆಯುಧಗಳನ್ನೆತ್ತಿ ಹಿಡಿದು ನಿಂತವರು ಕೆಲವರು ಕೆಲವರಿಗೆ ಒಂದೇ ಕಣ್ಣು! ಕೆಲವರಿಗೆ ಒಂದೇ ಕಿವಿ! ಕೆಲವರಿಗೆ ಜೋಲುವ ಹೊಟ್ಟೆ! ಕೆಲವರಿಗೆ ಜೋಲುವ ಮೊಲೆಗಳು! ಅತಿಘೋರರೂಪವುಳ್ಳವರು ಕೆಲವರು! ವಕ್ರಮುಖವುಳ್ಳವರು ಕೆಲವರು. ವಕ್ರದೇಹವುಳ್ಳವರು ಕೆಲವರು. ಗಿಡ್ಡಮೈಯುಳ್ಳವರು ಕೆಲವರು. ಕೆಲವರ ಕೈಯಲ್ಲಿ ಬಿಲ್ಲು! ಕೆಲವರ ಕೈಯಲ್ಲಿ ಕತ್ತಿ! ಕೆಲವರ ಕೈಯಲ್ಲಿ ನೂರು ಮುಳ್ಳುಗಳುಳ್ಳ ಕಬ್ಬಿಣದ ಒನಕೆ! ಕೆಲವರ ಕೈಯಲ್ಲಿ ದೊಡ್ಡ ಲಾಳಮಿಂಡಿಗೆ! ಕೆಲವರ ಮೈಮೇಲೆ ಚಿಕ್ಕವಿಚಿತ್ರಗಳಾದ ಕವಚಗಳು! ಹೀಗೆ ಅನೇಕ ರಾಕ್ಷಸ ವೀರಭಟರನ್ನು ಕಂಡನು. ಮತ್ತು ಅಲ್ಲಿನ ರಾಕ್ಷಸರಲ್ಲಿ ಅತಿಸ್ಥೂಲವೂ ಅಲ್ಲದೆ, ಅತಿಕೃಶವೂ ಅಲ್ಲದೆ, ಬಹಳ ಉದ್ದವೂ ಅಲ್ಲದೆ, ಬಹಳ ಹ್ರಸ್ವವೂ ಅಲ್ಲದೆ, ಬಹಳ ಬಿಳಿದೂ ಅಲ್ಲದೆ, ಬಹಳಕರಿದೂ ಅಲ್ಲದೆ, ಬಹಳ ಗೂನೂ ಅಲ್ಲದೆ ಬಹಳಗಿಡ್ಡವೂ ಅಲ್ಲದೆ ಸಹಜರೀತಿಯಿಂದಿರುವ ಮೈಯುಳ್ಳವರನ್ನೂ ಕಂಡನು. ಹೀಗೆ ವಿಕಾರರೂಪವುಳ್ಳವರೂ, ವಿಚಿತ್ರರೂಪವುಳ್ಳವರೂ, ಅಂದವಾದ ಸೌಂದರ್ಯವುಳ್ಳವರೂ ಒಳ್ಳೇ ವರ್ಚಸ್ಸುಳ್ಳವರೂ ಅಲ್ಲಲ್ಲಿ ಗೋಚರಿಸುತಿದ್ದರು. ಮತ್ತು ಅಲ್ಲಲ್ಲಿ ಧ್ವಜದಂಡಗಳನ್ನು ಹೊತ್ತುನಿಂತವರು ಕೆಲವರು! ಪತಾಕೆಗಳನ್ನು ಹಿಡಿದವರು ಕೆಲವರು! ಬಗೆ ಬಗೆಯ ಆಯುಧಗಳನ್ನು ಹಿಡಿದವರು ಕೆಲವರು! ಮತ್ತು ಶಕ್ತಿಯನ್ನು ಆಯುಧವಾಗಿ ಹಿಡಿದಿದ್ದವರು ಕೆಲವರು! ಮರಗಳನ್ನು ಆಯುಧವಾಗಿ ಹಿಡಿದವರು ಕೆಲವರು! ಹಾಗೆಯೇ ಪಟ್ಟಸ, ವಜ್ರ, ಬಲಿ, ಹಗ್ಗ ಮುಂತಾದ ಬೇರೆಬೇರೆ ಆಯುಧಗಳನ್ನು ಕೈಯಲ್ಲಿ ಹಿಡಿದವರೂ ಎಷ್ಟೋಮಂದಿಯಿದ್ದರು. ಮತ್ತು ಅಲ್ಲಿ ಗಂಧ ಪುಷ್ಪಾಲಂಕೃತರನ್ನೂ, ಸರ್ವಾಭರಣಭೂಷಿತರನ್ನೂ, ಇನ್ನೂ ಬೇರೆಬೇರೆ ಅಲಂಕಾರಗಳಿಂದ ಕೂಡಿ ಸ್ವೇಚ್ಛೆಯಿಂದ ವಿಹರಿಸುತಿದ್ದವರನ್ನೂ ಕಂಡನು. ಮತ್ತು ಅಲ್ಲಲ್ಲಿ ತೀಕ್ಷ್ಣಶೂಲಗಳನ್ನೂ, ವಜ್ರವನ್ನೂ ಆಯುಧವಾಗಿ ಹಿಡಿದ ಬಲಾಢ್ಯರೂ ಎಷ್ಟೋಮಂದಿಯಿದ್ದರು. ಹೀಗೆ ಆ ಪಟ್ಟಣದ ನಡುವೆ ರಾವಣನ ಆಜ್ಞೆಯಿಂದ ಎಚ್ಚರಿಕೆಯೊಡನೆ ಕಾವಲಿರುವ ಲಕ್ಷಸೈನಿಕರುಳ್ಳ ಮಧ್ಯಮಗುಲ್ಮವೆಂಬ ಮೂಲಬಲವನ್ನು ಕಂಡನು. ಆ ಪ್ರದೇಶವನ್ನು ನೋಡಿದಮೇಲೆ ಆಂಜನೇಯನು ಮುಂದೆ ಸುವರ್ಣಮಯವಾದ ದೊಡ್ಡ ಹೊರಬಾಗಿಲುಳ್ಳದಾಗಿಯೂ, ಲೋಕವಿಖ್ಯಾತ

ವಾಗಿಯೂ ಪರ್ವತಾಗ್ರದಲ್ಲಿ ಪ್ರತಿಷ್ಠಿತವಾಗಿಯೂ, ಕಮಲಗಳೆಂಬ ಶಿರೋಭೂಷಣಗಳುಳ್ಳ ಅಗುಳುಗಳಿಂದ ಅಲಂಕೃತವಾಗಿಯೂ, ದೊಡ್ಡ ಪ್ರಾಕಾರದಿಂದ ಆವೃತವಾಗಿಯೂ ಇರುವ ಮತ್ತೊಂದು ಅರಮನೆಯನ್ನು ಕಂಡನು. ಇಂದ್ರಲೋಕಕ್ಕೆಣೆಯಾಗಿ ದಿವ್ಯಸೌಭಾಗ್ಯದಿಂದ ಕೂಡಿದುದಾಗಿ, ದಿವ್ಯಧ್ವನಿಗಳಿಂದ ತುಂಬಿದುದಾಗಿದ್ದ ಆ ಅರಮನೆಯಲ್ಲಿ ಒಂದುಕಡೆಯಿಂದ ಕುದುರೆಗಳ ಹೇಷಾಧ್ವನಿಗಳೂ, ಮತ್ತೊಂದುಕಡೆಯಿಂದ ಸ್ತ್ರೀಯರ ಆಭರಣಧ್ವನಿಗಳೂ ಎಡೆಬಿಡದೆ ಕೇಳಿಸುತ್ತಿದ್ದುವು. ಎಲ್ಲಿ ನೋಡಿದರೂ ರಥಗಳೂ, ವಾಹನಗಳೂ, ವಿಮಾನಗಳೂ ಅನೆಕುದುರೆಗಳೂ ಕಿಕ್ಕಿರಿದು ತುಂಬಿದ್ದುವು. ಅಲ್ಲಲ್ಲಿ ಬಿಳೀಮೇಘಗಳ ಸಾಲಿನಂತಿರುವ ನಾಲ್ಕು ಕೊಂಬುಳ್ಳ ಐರಾವತಜಾತಿಯ ಅನೆಗಳು ತಿರುಗುತ್ತಿದ್ದುವು. ಮತ್ತು ಸ್ವಭಾವದಿಂದಲೇ ಅತಿರಮ್ಯವಾದ ಅದರ ಬಾಗಿಲಲ್ಲಿ, ಅಲಂಕಾರಾರ್ಥವಾಗಿ ಸಾಕಿಟ್ಟ ಮೃಗಪಕ್ಷಿಗಳು ಜೋರಾಗಿ ಕೊಬ್ಬಿ ಬೆಳೆದು ಆ ಪ್ರದೇಶಕ್ಕೆ ಮತ್ತಿಷ್ಟು ಅಂದವನ್ನು ಕೊಡುತ್ತಿದ್ದುವು ಮಹಾವೀರ್ಯವುಳ್ಳ ಸಾವಿರಾರುಮಂದಿ ರಾಕ್ಷಸರು ದ್ವಾರಪಾಲಕರಾಗಿ ಎಚ್ಚರಿಕೆಯಿಂದ ಕಾದಿದ್ದರು. ಹೀಗಿರಲಕ್ಕ ಆ ರಾಕ್ಷಸೇಂದ್ರನ ಅರಮನೆಯ ಸಮೀಪಕ್ಕೆ ಬಂದನು. ಹೀಗೆ ಹನುಮಂತನು ಬೇರೆಬೇರೆ ಜಾತಿಯ ಸುವರ್ಣಗಳಿಂದ ರಚಿತವಾದ ಪ್ರಾಕಾರವುಳ್ಳುದಾಗಿಯೂ, ಬೆಲೆಯುಳ್ಳ ಮುತ್ತಿನ ಮಣಿಗಳಿಂದ ಭೂಷಿತವಾದ ಹೊರಭಾಗವುಳ್ಳುದಾಗಿಯೂ, ಶರ್ವೋತ್ತಮವಾದ ಅಗರುಚಂದನಾದಿಗಳಿಂದ ಲೇಪಿತವಾಗಿಯೂ ಇದ್ದ ಅಲ್ಲಿನ ಪ್ರಾಕಾರದೊಳಗೂ ಪ್ರವೇಶಿಸಿದನು.

ಇಲ್ಲಿಗೆ ನಾಲ್ಕನೆಯ ಸರ್ಗವು.

ಚಂದ್ರಿಕಾವರ್ಣನವು. ಹನುಮಂತನು ಬಹಳಹೊತ್ತಿನವರೆಗೆ ಸೀತೆಯನ್ನು ಕಾಣದುದಕ್ಕಾಗಿ ಶೋಕಿಸುತಿದ್ದುದು.

ಹೀಗೆ ಧೀಮಂತನಾದ ಆ ಹನುಮಂತನು ರಾವಣನ ಅರಮನೆಯನ್ನು ಪ್ರವೇಶಿಸುವಷ್ಟರಲ್ಲಿ ಅರ್ಧರಾತ್ರಿಯು ಸಮಯವಾಯಿತು. ಆ ಕಾಲಕ್ಕೆ ಸರಿಯಾಗಿ ಚಂದ್ರನು ವಿಶೇಷಕಾಂತಿವಿಶಿಷ್ಟನಾಗಿ, ನಕ್ಷತ್ರಗಳಿಂದ ಪರಿವೃತನಾಗಿ, ಮಂದೆಯಲ್ಲಿ ತಿರುಗುತ್ತಿರುವ ಕೊಬ್ಬಿದ ಗೂಳಿಯಂತೆ ಆಕಾಶಮಧ್ಯಗತನಾಗಿ, ನಾಲ್ಕು ಕಡೆಗಳಿಗೂ ತನ್ನ ತಂಪಾದ ಕಿರಣಗಳನ್ನು ಹರಡುತಿದ್ದನು. ಹೀಗೆ ತನ್ನ ಕಿರಣಗಳಿಂದ ಸಮಸ್ತಜನರ ದುಃಖವನ್ನೂ ನೀಗಿಸುತ್ತ, ಮಹಾಸಾಗರವನ್ನೂ ವೃದ್ಧಿಗೊಂದಿಸುತ್ತ, ಪ್ರಾಣಿಗಳಿಗೂ ಉತ್ಸಾಹವನ್ನುಂಟುಮಾಡುತ್ತ, ಮುಂದೆ ಸಾಗಿ ಬರುತ್ತಿರುವ ಚಂದ್ರನನ್ನು ಹನುಮಂತನು ಕಂಡನು. ಭೂಲೋಕದಲ್ಲಿ ಮಂದರ ಪರ್ವತಕ್ಕೂ, ಪ್ರದೋಷಕಾಲಗಳಲ್ಲಿ ಸಮುದ್ರಕ್ಕೂ, ತಾವರೆಕೊಳಗಳಲ್ಲಿ ಕಮಲಗಳಿಗೂ ಯಾವ ಕಾಂತಿವಿಶೇಷವುಂಟೋ ಅವೆಲ್ಲವೂ ಆಗ ಆ ಚಂದ್ರಬಿಂಬವೊಂದರಲ್ಲಿಯೇ ಅಡಗಿರುವಂತೆ ತೋರುತಿತ್ತು. ಬೆಳ್ಳಿಯ ಪಂಜರದಲ್ಲಿ ಅಡಗಿದ ಹಂಸದಂತೆಯೂ, ಮಂದರಪರ್ವತದ ಗುಹೆಯಲ್ಲಿ ಸೇರಿರುವ ಸಿಂಹದಂತೆಯೂ, ಮದದಿಂದ ಕೊಬ್ಬಿದ ಆನೆಯನ್ನೇರಿರುವ ವೀರನಂತೆಯೂ ಚಂದ್ರನು ಆಕಾಶಮಧ್ಯಗತನಾಗಿ ಪ್ರಕಾಶಿಸುತಿದ್ದನು. ತುಂಬಿದ ಕಳೆಗಳುಳ್ಳ ಆಗಿನ ಚಂದ್ರನು ತೀಕ್ಷ್ಣವಾದ ಕೊಂಬುಗಳುಳ್ಳ ಮಹಾವೃಷಭದಂತೆಯೂ, ಎತ್ತರವಾದ ಶಿಖರಗಳುಳ್ಳ ಶ್ವೇತ ಪರ್ವತದಂತೆಯೂ, ಚಿನ್ನದ ಕಟ್ಟುಗಳುಳ್ಳ ಕೊಂಬುಗಳಿಂದ ಶೋಭಿಸುವ ಮದದಾನೆಯಂತೆಯೂ ಶೋಭಿಸುತಿದ್ದನು. ಮತ್ತು ಮಹಾಪ್ರಭಾವವುಳ್ಳ ಚಂದ್ರನು ಇಬ್ಬನಿ, ಮಂಜು, ಮುಂತಾದ ದೋಷಗಳನ್ನು ತಗ್ಗಿಸಿ, ಸೂರ್ಯಕಿರಣಸಂಬಂಧದಿಂದ ಕತ್ತಲೆಯನ್ನೂ ಅಡಗಿಸಿ, ತನ್ನ ಬಿಂಬದ ಪ್ರಕಾಶದಿಂದಲೇ ತನ್ನೊಳಗಿನ ಕಳಂಕದ ಕಾಂತಿಯನ್ನು ಮತ್ತಷ್ಟು ವ್ಯಕ್ತಪಡಿಸುತ್ತ, ಪ್ರಕಾಶಿಸುತಿದ್ದನು. ಪರ್ವತಶಿಲೆಯನ್ನೇರಿ ನಿಂತ ಸಿಂಹದಂತೆಯೂ, ರಣರಂಗದಲ್ಲಿ ಬಂದು ನಿಂತ ಮದದಾನೆಯಂತೆಯೂ, ರಾಜಪೀಠವನ್ನೇರಿದ ರಾಜನಂತೆಯೂ, ಆಗ ಆಕಾಶಮಧ್ಯಗತನಾದ ಚಂದ್ರನು ಉಲ್ಲಾಸವಿಶಿಷ್ಟವಾದ ಒಂದು ವಿಶೇಷಕಾಂತಿಯಿಂದ ಕೂಡಿ ಶೋಭಿಸುತಿದ್ದನು. ಪ್ರಕಾಶಮಾನವಾದ ಆ ಚಂದ್ರಿಕೆಯಿಂದ ನೀಗಿದ ಕತ್ತಲೆಯು ಹಗಲಾಗಿಯೂ, ರಾಕ್ಷಸರ ಮತ್ತು ಪಿಶಾಚಿಗಳ ಹಾವಳಿಯನ್ನು ಹೆಚ್ಚಿಸತಕ್ಕುದಾಗಿಯೂ, ನಾಯಿಕಾನಾಯಕರ ಪ್ರಣಯಕೋಪವನ್ನು ಹಗಿಸಿ ಅವರ ವಿನಸ್ಸನ್ನು ಕ್ಷಣಮಾತ್ರದಲ್ಲಿ ತಿಳಿವಾಗಿಸತಕ್ಕುದಾಗಿಯೂ ಇದ್ದ ಪೂಜ್ಯವಾದ ಆ ರಾತ್ರಿಯು

ಸಮಸ್ತಜನರಿಗೂ ಸ್ವರ್ಗಭೋಗವನ್ನುಂಟುಮಾಡುವಂತಿತ್ತು. ಆಗ ಆ ಪಟ್ಟಣದ ಶಾಲುಕಡೆಗಳಿಂದಲೂ, ವೀಣೆ ಮೊದಲಾದ ತಂತ್ರೀವಾದ್ಯಗಳು ಕಿವಿಗಿಂಪಾಗುವಂತೆ ಕೇಳಿಸುತ್ತಿದ್ದುವು. ಸಚ್ಚರಿತ್ರವುಳ್ಳ ಸ್ತ್ರೀಯರು ತಮ್ಮ ತಮ್ಮ ಪತಿಗಳೊಡಗೂಡಿ ಸುಖನಿದ್ರೆಯನ್ನು ಮಾಡುತ್ತಿದ್ದರು. ಹಾಗೆಯೇ ರಾತ್ರಿಸಂಚಾರಿಗಳಾದ ಗೂಬೆಗಳೂ, ಭೂತಬೇತಾಳಾದಿಗಳೂ, ರಾಕ್ಷಸರೂ, ಉತ್ಸಾಹದಿಂದ ಹೊರಕ್ಕೆ ಬಂದು, ಅತಿಭಯಂಕರವಾಗಿಯೂ ಆಶ್ಚರ್ಯಕರವಾಗಿಯೂ ಇರುವ ಕ್ರೂರಕೃತ್ಯಗಳಿಂದ ಕ್ರೀಡಿಸುವುದಕ್ಕೆ ತೊಡಗಿದರು. ಮತ್ತು ಹನುಮಂತನು ಅಲ್ಲಲ್ಲಿ ಮದ್ಯಪಾನದಿಂದ ಮದವೇರಿ ಮೈಮರೆತಿರುವವರನ್ನೂ, ಅನೇಕ ಜನಸಮೂಹದಿಂದಲೂ ಬಂಡಿಗಳಿಂದಲೂ, ಕುದುರೆಗಳಿಂದಲೂ, ಭದ್ರಗಜಗಳಿಂದಲೂ, ಭದ್ರಾಸನಗಳಿಂದಲೂ ತುಂಬಿ, ವೀರಲಕ್ಷ್ಮಿಗಾಶ್ರಯವಾದ ಮನೆಗಳ ಶಾಲನ್ನೂ ಕಂಡನು. ಮತ್ತು ಅಲ್ಲಿ ಒಬ್ಬರನ್ನೊಬ್ಬರು ನೋಡಿ ಹಾಸ್ಯಮಾಡಿ ನಗುವವರು ಕೆಲವರು, ಒಬ್ಬರಮೇಲೊಬ್ಬರು ತೋಳು ಹಾಕಿಕೊಂಡು ಉಲ್ಲಾಸದಿಂದ ನಡೆಯುವವರು ಕೆಲವರು! ಮದದಿಂದ ಮೈಮರೆತು ಹುಚ್ಚುಹುಚ್ಚಾಗಿ ಕೂಗುತ್ತಿರುವವರು ಕೆಲವರು. ಕೊಬ್ಬಿನಿಂದ ಒಬ್ಬರನ್ನೊಬ್ಬರು ಹೆದರಿಸುತ್ತಿರುವವರು ಕೆಲವರು. ತಮ್ಮ ತಮ್ಮ ಉಬ್ಬಿದ ಎದೆಗಳನ್ನು ತೆರೆದಿಟ್ಟುಕೊಂಡು ಬರುವವರು ಕೆಲವರು. ತಮ್ಮ ತಮ್ಮ ನಾಯಿಕೆಯರ ಮೇಲೆ ಕೈಹಾಕಿಕೊಂಡು ಬರುವವರು ಕೆಲವರು. ತಮ್ಮ ಪ್ರಾಯಾಬಲದಿಂದ ಕ್ಷಣಕ್ಷಣಕ್ಕೂ ವಿಚಿತ್ರರೂಪಗಳನ್ನು ಧರಿಸಿ ಬರುತ್ತಿರುವವರು ಕೆಲವರು. ತಮ್ಮ ದೃಢವಾದ ಬಿಲ್ಲನ್ನು ಮಿಡಿಯುತ್ತ ಬರುವವರು ಕೆಲವರು. ಇಂತಹ ರಾಕ್ಷಸರನ್ನೂ ಕಂಡನು. ಹಾಗೆಯೇ ರಾಕ್ಷಸಸ್ತ್ರೀಯರಲ್ಲಿಯೂ ಗಂಧಾನುಲೇಪನಗಳಿಂದಲಂಕರಿಸಿಕೊಳ್ಳುತ್ತಿರುವವರು ಕೆಲವರು. ಸುಖನಿದ್ರೆಯಿಂದ ಮಲಗಿರುವವರು ಕೆಲವರು. ನಗೆಮೊಗದಿಂದ ಉಲ್ಲಾಸಗೊಂಡು ನಗುತ್ತಿರುವವರು ಕೆಲವರು. ಪ್ರಣಯಕೋಪದಿಂದ ಕೊರಗಿ ನಿಟ್ಟುಸಿರು ಬಿಡುತ್ತಿರುವವರು ಕೆಲವರು. ಹೀಗೆ ನಾನಾಬಗೆಯ ಚೇಷ್ಟೆಗಳುಳ್ಳ ಸ್ತ್ರೀಯರನ್ನೂ ಕಂಡನು. ಅಲ್ಲಲ್ಲಿ ಮದದಿಂದ ಗರ್ಜಿಸುತ್ತಿರುವ ಮದದಾನೆಗಳನ್ನೂ, ಜನರಿಂದ ಗೌರವಿಸಲ್ಪಡುವ ಸತ್ಪುರುಷಶ್ರೇಷ್ಠರನ್ನೂ ಕಂಡನು. ಮತ್ತು ಆ ಲಂಕಾನಗರಿಯು ಕೋಪದಿಂದ ಬುಸುಗುಟ್ಟುವ ಸರ್ಪಗಳಿಂದ ತುಂಬಿದ ಮಡುವಿನಂತೆ, ತಮ್ಮೊರನೆ ಯುದ್ಧಕ್ಕೆ ಶಕ್ಯ ವೀರರಿಲ್ಲದುದಕ್ಕಾಗಿ ಚಿಂತೆಯಿಂದ ನಿಟ್ಟುಸಿರು ಬಿಡುತ್ತಿರುವುದನ್ನೂ ಕಂಡನು. ಮತ್ತು ಬುದ್ಧಿಯಲ್ಲಿ ಶ್ರೇಷ್ಠರಾಗಿಯೂ, ಕಾಲಕ್ಕೆ ತಕ್ಕ ನಡೆವಳಿಕೆಯನ್ನು ತಿಳಿದವರಾಗಿಯೂ, ಆಸ್ತಿಕರಾಗಿಯೂ, ಪ್ರಜೆಗಳಲ್ಲಿ

ಪ್ರಮುಖರಾಗಿಯೂ, ಬಗೆಬಗೆಯ ವೇಷವುಳ್ಳವರಾಗಿಯೂ, ರನ್ನವಾದ ಹೆಸರುಗಳುಳ್ಳವರಾಗಿಯೂ ಇದ್ದ ಕೆಲವು ರಾಕ್ಷಸಪ್ರಧಾನರನ್ನೂ ಕಂಡನು. ಮತ್ತು ಅಲ್ಲಿ ಉತ್ತಮವಾದ ರೂಪವುಳ್ಳವರಾಗಿಯೂ, ಆ ರೂಪಕ್ಕನುಗುಣವಾದ ಸಮಸ್ತ ಸದ್ಗುಣಗಳಿಂದ ತುಂಬಿದವರಾಗಿಯೂ, ಆ ಗುಣಗಳಿಗೆ ತಕ್ಕ ನಡೆವಳಿಕೆಯುಳ್ಳವರಾಗಿಯೂ ಇರುವ ಕೆಲವು ರಾಕ್ಷಸರನ್ನೂ ಕಂಡು ಆನಂದಿಸಿದನು. ಆದರಂತೆಯೇ ದುರ್ಗುಣಗಳಿಗೆ ತಕ್ಕಂತೆ ವಿಕಾರರೂಪವುಳ್ಳ ಕೆಲವು ರಾಕ್ಷಸರನ್ನೂ ನೋಡಿದನು. ಮತ್ತು ಅಲ್ಲಿ ಮಂಜುಲವಸ್ತ್ರಾಭರಣಗಳಿಂದಲೂ, ಅವುಗಳಿಗೆ ತಕ್ಕಸೌಂದರ್ಯ ಲಾವಣ್ಯಾದಿಗಳಿಂದಲೂ ಶೋಭಿಸುತ್ತ, ತಮ್ಮ ತಮ್ಮ ಪ್ರಿಯರಲ್ಲಿ ಶುದ್ಧವಾದ ಪ್ರೇಮವನ್ನಿಟ್ಟು, ತಮ್ಮ ಪಾತಿವ್ರತ್ಯಧರ್ಮದಿಂದಲೂ, ತಮ್ಮ ಕಟಾಕ್ಷ ಭ್ರೂವಿಕ್ಷೇಪಾದಿಗಳಿಂದಲೂ, ಆ ಪ್ರಿಯರ ಮನಸ್ಸನ್ನಾಕರ್ಷಿಸುತ್ತ, ತಮ್ಮ ಪ್ರಿಯರಲ್ಲಿಯೂ ಮಧುಪಾನಗಳಲ್ಲಿಯೂ ಅತ್ಯಾಸಕ್ತರಾಗಿ, ವಿಶೇಷವೈಭವಗಳಿಂದ ಕೂಡಿ, ನಕ್ಷತ್ರಗಳಂತೆ ಶೋಭಾವಿಶಿಷ್ಟರಾದ ರಾಕ್ಷಸಸ್ತ್ರೀಯರನ್ನೂ ಕಂಡನು. ಮತ್ತು ಆ ಅರ್ಧರಾತ್ರಿಯಲ್ಲಿ ತಮ್ಮ ತಮ್ಮ ನಾಯಕರಿಂದ ಗಾಢಾಲಿಂಗಿತರಾಗಿ, ಸೌಂದರ್ಯ ಲಕ್ಷ್ಮಿಗೆ ಮುಖ್ಯಾಶ್ರಯರಾಗಿ ಆನಂದಸಾಗರದಲ್ಲಿ ಮುಳುಗಿ, ಹೂಗಳಲ್ಲಿ ಓಲಾಡುವ ಷಟ್ಪದುಂಬಿಗಳಂತೆ ಆನಂದಪರವಶರಾದ ಮತ್ತೆ ಕೆಲವು ಸುಂದರಾಂಗಿಯರನ್ನೂ ಕಂಡನು. ಮತ್ತು ಅಲ್ಲಿನ ಪ್ರಸ್ತ್ರೀಯರಲ್ಲಿ ಉಪ್ಪರಿಗೆಯ ಮೇಲೆ ತಮ್ಮ ತಮ್ಮ ಪಾತಿವ್ರತ್ಯವನ್ನು ಬಿಡದೆ ಪತಿಯ ಪ್ರೇಮಕ್ಕೆ ಪಾತ್ರರಾಗಿ, ಅದಕ್ಕೆ ತಕ್ಕಂತೆ ತಾವೂ ಅವರಲ್ಲಿ ಮೋಹವನ್ನಿಟ್ಟು ಮನ್ಮಥಾನೇಶಪರವಶರಾಗಿರುವವರು ಕೆಲವರು. ರಹಸ್ಯ ಸ್ಥಳಗಳಲ್ಲಿ ತಮ್ಮ ತಮ್ಮ ಪ್ರಿಯರೊಡನೆ ರತಿಕೇಳಿಯನ್ನು ನಡೆಸಿ, ಆಯಾಸದಿಂದ ಮೈಮರೆತುಮೇಲು ಹೊದ್ದಿಕೆಯೂ ಇಲ್ಲದೆ, ಬಂಗಾರದಂತೆ ಹೊಳೆಯುವ ಮೈಯನ್ನು ತೆರೆದು ಮಲಗಿರುವವರು ಕೆಲವರು. ಚಂದ್ರನಂತೆ ಬಿಳುಪಾದ ಕಾಂತಿಯುಳ್ಳವರು ಕೆಲವರು. ಮನೋಹರವಾದ ಮೈಬಣ್ಣವುಳ್ಳವರಾದರೂ ಪತಿವಿರಹದುಃಖದಿಂದ ಬಾಡಿದ ಬಣ್ಣವುಳ್ಳವರು ಕೆಲವರು. ಮತ್ತು ಆ ರಾತ್ರಿಯ ಚಂದ್ರಿಕೆಯಲ್ಲಿ ತಮ್ಮ ತಮ್ಮ ಮನಸ್ಸಿಗೊಪ್ಪಿದ ನಾಯಕರ ಬಳಿಗೆ ಹೊರಟು, ಆನಂದದಿಂದ ಅವರೊಡನೆ ಕ್ರೀಡಿಸುತಿದ್ದ ಅಭಿಸಾರಿಕೆಯರು ಕೆಲವರು. ತಮ್ಮ ತಮ್ಮ ಮನೆಗಳಲ್ಲಿಯೇ ತಮ್ಮ ಪತಿಗಳೊಡನೆ ಕ್ರೀಡಿಸುತ್ತ, ತೃಪ್ತರಾಗಿ ಸಂತೋಷದಿಂದಿರುವ ಕುಲಸ್ತ್ರೀಯರು ಕೆಲವರು. ಹೀಗೆ ಅನೇಕ ಸ್ತ್ರೀಯರನ್ನು ನೋಡುತ್ತ ಬಂದನು. ಮತ್ತು ಧೀಮಂತನಾದ ಆ ಕಪಿವೀರನು, ರಾಕ್ಷಸಸ್ತ್ರೀಯರಾರೋ ಮನುಷ್ಯಸ್ತ್ರೀಯರಾರೋ ಎಂಬುದನ್ನು ತಿಳಿಯುವುದಕ್ಕಾಗಿ ಆಯಾ ಸ್ತ್ರೀಯರ

ಚಂದ್ರಬಿಂಬಸಮಾನಗಳಾದ ಮುಖಬಿಂಬಗಳನ್ನೂ, ಬಾಗಿದ ಕಣ್ಣೆವೆಗಳುಳ್ಳ ಅವರವರ ನೋಟಗಳನ್ನೂ ಚೆನ್ನಾಗಿ ಗಮನಿಸಿ ನೋಡುತಿದ್ದನು. ಮತ್ತು ಹಿಂದೆ ರಾಮನು ಹೇಳಿದ್ದ ಸೀತೆಯ ಆಭರಣಗಳ ಗುರುತುಗಳೇನಾದರೂ ಕಾಣಬಹುದೋ ಎಂಬ ಆಸೆಯಿಂದ, ಮಿಂಚುಗಳಂತೆ ಹೊಳೆಯುವ ಆವರ ಆಭರಣಗಳನ್ನೆಲ್ಲಾ ಗಮನಿಸಿ ನೋಡುತ್ತ ಬಂದನು. ಎಷ್ಟು ನೋಡಿದರೇನು? ಸುಂದರಾಂಗಿಯಾಗಿ, ಸತ್ಕುಲಪ್ರಸೂತೆಯಾಗಿ, ಅರಳಿದ ಬಳ್ಳಿಯಂತೆ ಅಂದವಾದ ರೂಪವುಳ್ಳವಳಾಗಿ, ಮನಸ್ಸಂಕಲ್ಪದಿಂದಲೇ ಹುಟ್ಟಿದ ಆಯೋನಿಜೆಯೆನಿಸಿರುವ ಸೀತಾದೇವಿಯು ಮಾತ್ರ ಈತನ ಕಣ್ಣಿಗೆ ಗೋಚರಿಸಲಿಲ್ಲ. ಆಕೆಯಾದರೋ ಪಾತಿವ್ರತ್ಯವೆಂಬ ಉತ್ತಮ ಧರ್ಮವೊಂದರಲ್ಲಿಯೇ ನಿತ್ಯಾಸಕ್ತಳಾಗಿರತಕ್ಕವಳು. ರಾಮನೊಬ್ಬನನ್ನೇ ಕಣ್ಣೆತ್ತಿ ಕಾದಿರತಕ್ಕವಳು. ಆತನೊಬ್ಬನಲ್ಲಿಯೇ ಮೋಹಗೊಂಡು ಮೈಮರೆತಿರುವನವಳು. ಸದ್ಗುಣಸಂಪತ್ತುಳ್ಳ ಶ್ರೀರಾಮನ ಮನಸ್ಸನ್ನೂ ತನ್ನ ಕಡೆಗಾಕರ್ಷಿಸಿ, ತಾನೂ ಅದರಲ್ಲಿ ನಿತ್ಯವಾಸಮಾಡತಕ್ಕವಳು. ಉತ್ತಮಸ್ತ್ರೀಯರಲ್ಲಿಯೂ ಉತ್ತಮೆಯೆನಿಸಿಕೊಂಡವಳು. ರಾಮವಿರಹತಾಪದಿಂದ ಎಡೆಬಿಡದೆ ಸಂಕಟಪಡುತ್ತಿರುವನವಳು. ಮೊದಲು ರಾಮನೊಡಗೂಡಿದ ಕಾಲದಲ್ಲಿ ರತ್ನಹಾರಗಳಿಂದಲಂಕೃತವಾದ ತನ್ನ ಕಂಠವನ್ನು, ಈಗ ಎಡೆಬಿಡದೆ ಸುರಿಯುವ ಬಾಷ್ಪಧಾರೆಯಿಂದ ಕಂದಿಸುತ್ತಿರುವವಳು. ಅಂದವಾದ ಕಣ್ಣೆವೆಗಳಿಂದಲೂ, ಇಂಪಾದ ಕಂಠಸ್ವರದಿಂದಲೂ ಕೂಡಿ, ಕಾಡಿನಲ್ಲಿ ಕುಣಿಯುವ ನವಿಲಿನಂತೆ ಸೊಗಸುಬೀರುವ ಸೌಂದರ್ಯವುಳ್ಳವಳು. ಆಸ್ಪಷ್ಟವಾದ ಕಲೆಯುಳ್ಳ ಚಂದ್ರರೇಖೆಯಂತೆಯೂ, ಕೊಳೆಮುಚ್ಚಿದ ಚಿನ್ನದ ಪಲಿಗೆಯಂತೆಯೂ, ಗಾಯದಲ್ಲಿ ಹುದುಗಿ ಮರೆಸಿಕೊಂಡಿರುವ ಬಾಣದಲಗಿನಂತೆಯೂ, ಗಾಳಿಯಿಂದ ಹರಿದ ಮೇಘಲೇಖೆಯಂತೆಯೂ ಈಗ ರಾಮವಿರಹದಿಂದ ತನ್ನ ಸ್ವಾಭಾವಿಕಸ್ಥಿತಿಯನ್ನು ಬಿಟ್ಟು ಕಂದಿದ ಸ್ವರೂಪವುಳ್ಳವಳು. ಇಂತಹ ಸ್ತ್ರೀರತ್ನವು ಮಾತ್ರ ಈ ಆಂಜನೇಯನ ಕಣ್ಣಿಗೆ ಬೀಳಲಿಲ್ಲ. ಹೀಗೆ ಎಲ್ಲೆಲ್ಲಿ ಹುಡುಕಿದರೂ ತನಗೆ ರಾಜೇಂದ್ರನಾದ ಆ ಶ್ರೀರಾಮನ ಧರ್ಮಪತ್ನಿಯು ಕಣ್ಣಿಗೆ ಬೀಳದುದನ್ನು ನೋಡಿ, ಹನುಮಂತನು ದುಃಖದಲ್ಲಿ ಮುಳುಗಿದವನಾಗಿ, ಸ್ವಲ್ಪಕಾಲದವರೆಗೆ ಏನೂ ತೋರದ ಮೂಢನಂತೆ ಮೈಮರೆತಿದ್ದನು.

ಇಲ್ಲಿಗೆ ಐದನೆಯ ಸರ್ಗವು.

ಹನುಮಂತನು ರಾವಣನ ಅಂತಃಪುರವನ್ನು ನೋಡಿದುದು.

ಆ ಹನುಮಂತನು ಅಲ್ಲಿದ್ದ ರಾಜಗೃಹಗಳೆಲ್ಲವನ್ನೂ ಚೆನ್ನಾಗಿ ಹುಡುಕಿಯೂ, ವಿದೇಹಪುತ್ರಿಯನ್ನು ಕಾಣದುದಕ್ಕಾಗಿ ಮನಸ್ಸಿನಲ್ಲಿ ಕೊರಗುತ್ತ, ತಿರುಗಿ ಪಟ್ಟಣವನ್ನೆಲ್ಲಾ ಸುತ್ತಿಬರಬೇಕೆಂದು ಜೊರಟು, ಅಯೋಸಾದರ್ಥಗಳಿಗೆ ತಕ್ಕರೂಪವನ್ನು ಧರಿಸಿ, ಅತಿವೇಗದಿಂದ ಆ ಪುರವೆಲ್ಲವನ್ನೂ ಸುತ್ತಿಬಂದನು. ಕೊನೆಗೆ ಹಿಂತಿರುಗಿ ರಾಕ್ಷಸೇಂದ್ರನಾದ ಆ ರಾವಣನ ಅರಮನೆಯನ್ನೇ ಚೆನ್ನಾಗಿ ಒಳಹೊಕ್ಕು ಹುಡುಕಿ ನೋಡಬೇಕೆಂದು ನಿಶ್ಚಯಿಸಿಕೊಂಡು, ಹಿಂತಿರುಗಿ ಆ ರಾವಣನ ಮನೆಯ ಸಮೀಪಕ್ಕೆ ಬಂದನು. ಸೂರ್ಯಕಾಂತಿಯಿಂದ ಹೊಳಪೇರಿದ ಚಿನ್ನದ ಕೋಟೆಯಿಂದ ಪರಿವೃತವಾಗಿಯೂ, ಸಿಂಹಗಳಿಂದ ರಕ್ಷಿತವಾದ ಕಾಡಿನಂತೆ ಘೋರರಾಕ್ಷಸರಿಂದ ರಕ್ಷಿತವಾಗಿಯೂ ಇರುವ ಆ ಮನೆಯನ್ನು ನೋಡಿ ನೋಡಿ ಈ ಆಂಜನೇಯನು ಆಶ್ಚರ್ಯದಿಂದುಕ್ಕುತಿದ್ದನು. ಆ ಪ್ರಾಕಾರದ ಕಾಂತಿಯು ಇವನ ದೇಹದ ಮೇಲೆ ಬಿದ್ದು ಇವನ ದೇಹಕಾಂತಿಯನ್ನು ಮತ್ತಷ್ಟು ಹೆಚ್ಚಿಸುತಿತ್ತು. ಆ ಮನೆಯಾದರೋ ಚಿನ್ನದ ಚಿತ್ರಕಾರ್ಯಗಳುಳ್ಳ ಬೆಳ್ಳಿಯ ಹೊರಬಾಗಿಲುಗಳಿಂದಲೂ, ಚಿತ್ರವಿಚಿತ್ರಗಳಾದ ಕೊತ್ತಳಗಳಿಂದಲೂ, ಅತಿ ಮನೋಹರಗಳಾದ ಒಳಬಾಗಿಲುಗಳಿಂದಲೂ ಶೋಭಿಸುತ್ತಿರುವುದು. ಅಲ್ಲಲ್ಲಿ ಪ್ರಮುಖರಾದ ರಾಜಪುರುಷರು ಅನೇಗಳನ್ನೇರಿ ಸುತ್ತಲೂ ಕಾವಲಾಗಿ ಸಂಚರಿಸುತ್ತಿರುವರು. ಯಾವ ಅಸಾಧ್ಯ ಕಾರ್ಯವನ್ನಾದರೂ ನಿರಾಯಾಸವಾಗಿ ನಿರ್ವಹಿಸತಕ್ಕ ಮಹಾಶೂರರೂ ಸುತ್ತುತ್ತಿರುವರು. ಎಂತಹ ವೀರರಿಗೂ ಅವಶ್ಯಗಳಾದ ಎಷ್ಟೋ ರಥಾಶ್ವಗಳು ತುಂಬಿರುವುವು. ದಂತಗಳಿಂದಲೂ ಬೆಳ್ಳಿಬಂಗಾರಗಳಿಂದಲೂ ನಿರ್ಮಿತಗಳಾಗಿ, ಸಿಂಹ ವ್ಯಾಘ್ರಗಳ ಚರ್ಮಗಳಿಂದ ಮಾಡಲ್ಪಟ್ಟ ಮೇಲು ಹೊದ್ದಿಕೆಗಳುಳ್ಳ ಚಿತ್ರವಿಚಿತ್ರಗಳಾದ ರಥಗಳು ಎಡೆಬಿಡದೆ ತಿರುಗುತ್ತಿರುವುವು. ಯಾವ ಕಡೆಯಲ್ಲಿ ನೋಡಿದರೂ ಅದು ಅಮೂಲ್ಯಗಳಾದ ರಾಜಪೀಠಗಳಿಂದಲೂ, ಪಾತ್ರಸಾಮಗ್ರಿಗಳಿಂದಲೂ ತುಂಬಿರುವುದು. ಅನೇಕ ಮಹಾರಥರಿಗೆ ವಾಸಸ್ಥಾನವಾಗಿರುವುದು. ದೊಡ್ಡದೊಡ್ಡ ರಥಗಳೂ ಸಿಂಹಾಸನಗಳೂ, ಶೋಭಿಸುತ್ತಿರುವುವು. ಚೆನ್ನಾಗಿ ಕೊಬ್ಬಿಬೆಳೆದು ನೇತ್ರಾನಂದಕರಗಳಾದ ಬಗೆಬಗೆಯ ಮೃಗಪಕ್ಷಿಗಳು ಅಲ್ಲಿ ಸಾವಿರಾರು ಸಂಖ್ಯೆಯಿಂದ ಸುತ್ತುತ್ತಿರುವುವು. ಶಸ್ತ್ರವಿದ್ಯೆಯಲ್ಲಿ ಸುಶಿಕ್ಷಿತರಾದ ಅನೇಕ ರಾಕ್ಷಸರು ಅದರ ಹೊರಗೆ ಕಾವಲಾಗಿರುವರು. ಅಲ್ಲಲ್ಲಿ ಬಹಳ ಸೌಂದರ್ಯದಿಂದಲೂ, ಉಲ್ಲಾಸದಿಂದಲೂ ಕೂಡಿದ ಉತ್ತಮ ಸ್ತ್ರೀಯರು ತುಂಬಿ ನೆರೆದಿರುವರು.

ಅಲ್ಲಿ ಸುತ್ತುತ್ತಿರುವ ಸ್ತ್ರೀಪುರುಷರ ಆಭರಣಧ್ವನಿಗಳೇ ಸಮುದ್ರಘೋಷದಂತೆ ಮೊಳಗುತ್ತಿರುವುವು. ಮತ್ತು ಅಲ್ಲಿ ರಾಜಚಿಹ್ನಗಳಾದ ಛತ್ರಚಾಮರಾದಿಗಳು ಅಸಂಖ್ಯಾತವಾಗಿರುವುವು. ಮೇಲಾದ ಅಗರು ಚಂದನಾದಿಗಳ ವಾಸನೆಯು ಭೂಮಿಯನ್ನು ಭೇದಿಸುತ್ತಿರುವುದು. ಸಿಂಹಗಳಿಂದ ತುಂಬಿದ ಮಹಾರಣ್ಯದಂತೆ ಅಲ್ಲಲ್ಲಿ ಅನೇಕ ಪ್ರಧಾನಪುರುಷರು ತುಂಬಿರುವರು. ಮತ್ತು ಅಲ್ಲಿ ಭೇರಿ, ಮದ್ದಲೆ, ವೀಣೆ, ಶಂಖ, ಮೊದಲಾದ ಮಂಗಳವಾದ್ಯಧ್ವನಿಗಳು ಎಡೆಬಿಡದೆ ಕೇಳಿಸುತ್ತಿರುವುವು. ಆ ರಾಜಗೃಹವು ಯಾವಾಗಲೂ ಗಂಧಪುಷ್ಪಾದಿಗಳಿಂದ ಅಲಂಕೃತವಾಗಿರುವುದು. ಆ ಹಿತಾಗ್ನಿಯಾದ ರಾವಣನು ಆಗಾಗ ಪರ್ವಕಾಲಗಳಲ್ಲಿ ಸೂಡತಕ್ಕ ಹೋಮಾಗ್ನಿಯು ಜ್ವಲಿಸುತ್ತಿರುವುದು. ರಾಕ್ಷಸರೆಲ್ಲರೂ ಎಡೆಬಿಡದೆ ಅದನ್ನು ಪೂಜಿಸುತ್ತಿರುವರು. ಸಮುದ್ರದಂತೆ ಅತಿಗಂಭೀರವಾಗಿಯೂ, ಸಮುದ್ರದಂತೆಯೇ ನಿತ್ಯ ಘೋಷವುಳ್ಳದಾಗಿಯೂ, ರತ್ನಮಯವಾಗಿಯೂ ಉತ್ತಮವಸ್ತುಗಳಿಂದ ತುಂಬಿದುದಾಗಿಯೂ ಇದ್ದ ರಾವಣನ ಈ ಮನೆಯನ್ನು ಆಂಜನೇಯನು ಪ್ರವೇಶಿಸಿ, ರಥಗಜ ತುರಗಾದಿಗಳಿಂದ ನಿಬಿಡವಾಗಿ, ಪ್ರಕಾಶಮಾನವಾದ ರೂಪದಿಂದ ಕೂಡಿದ ಆ ಮನೆಯನ್ನೆಲ್ಲ ಸುತ್ತಿಸುತ್ತಿ ನೋಡುತ್ತ, ತನ್ನ ಮನಸ್ಸಿನಲ್ಲಿ "ಈ ಲಂಕೆಗೆ ಇದೇ ಒಂದಾಭರಣವು" ಎಂದೆಣಿಸಿ, ಅದರ ಸುತ್ತಲೂ ಸೀತೆಯನ್ನು ಹುಡುಕಲಾರಂಭಿಸಿದನು. ಅಲ್ಲಿದ್ದ ಒಂದೊಂದು ರಾಕ್ಷಸಗೃಹವನ್ನೂ ನುಗ್ಗಿನುಗ್ಗಿ ಅಲ್ಲಲ್ಲಿನ ಉದ್ಯಾನಗಳನ್ನೂ, ಉಪ್ಪರಿಗೆಗಳನ್ನೂ, ನಿರ್ಭಯವಾಗಿ ಪ್ರವೇಶಿಸಿ ನೋಡುತ್ತ ತಿರುಗುತಿದ್ದನು. ಆಮೇಲೆ ಮಹಾವೀರ್ಯವುಳ್ಳ ಆ ಹನುಮಂತನು ವೇಗದಿಂದ ಹಾರಿ ಪ್ರಹಸ್ತನ ಮನೆಯನ್ನು ಪ್ರವೇಶಿಸಿದನು. ಅಲ್ಲಿಂದಿಳಿದು ಮಹಾಪಾರ್ಶ್ವನ ಮನೆಗೆ ಬಂದನು. ಆ ಮೇಲೆ ನೇಭದಂತೆ ಮಹತ್ತಾದ ಕುಂಭಕರ್ಣನ ಮನೆಗೆ ನುಗ್ಗಿದನು. ಹಾಗೆಯೇ ವಿಭೀಷಣನ ಮನೆಗೂ ಪ್ರವೇಶಿಸಿದನು. ಅಲ್ಲಿಂದ ಮಹೋದರನ ಮನೆಗೆ ಬಂದನು. ಅಲ್ಲಿಂದ ಹೊರಟು ಕ್ರಮವಾಗಿ, ವಿರೂಪಾಕ್ಷ, ವಿದ್ಯುಜ್ಜಿಹ್ವ, ವಿದ್ಯುನ್ಮಾಲಿಗಳೆಂಬ ರಾಕ್ಷಸರ ಮನೆಗಳನ್ನು ನೋಡಿಬಂದನು. ಅಲ್ಲಿಂದ ವಜ್ರದಂಷ್ಟ್ರನ ಮನೆಗೆ ಹೋದನು. ಹಾಗೆಯೇ ಮಹಾತೇಜಸ್ವಿಗಳಾದ ಶುಕಸಾರಣರು, ರಾವಣನ ಪ್ರಧಾನಾದ ಇಂದ್ರಜಿತ್ತು, ಜಂಬುಮಾಲಿ, ಸುಮಾಲಿ, ರಶ್ಮಿಕೇತು, ಸೂರ್ಯಶತ್ರು, ವಜ್ರಕಾಯ, ಮುಂತಾದ ರಾಕ್ಷಸರು ವಾಸಮಾಡುತಿದ್ದ ಒಂದೊಂದು ಮನೆಯನ್ನೂ ನುಗ್ಗಿ ನೋಡುತ್ತ ಬಂದನು. ಅಲ್ಲಿಂದ ಮುಂದೆ ಹೊರಟು, ಧೂಮ್ರಾಕ್ಷ, ಸಂಪಾತಿ, ವಿದ್ಯುದ್ರೂಪ, ಭೀನ, ವಿಭೀನ, ಶುಕನಾಸ, ವಕ್ರಶಠ, ಬ್ರಹ್ಮಕರ್ಣ, ದಂಷ್ಟ್ರ, ಯುದ್ಧೋನ್ಮತ್ತ, ಮತ್ತ, ಧ್ವಜಗ್ರೀವ, ನಾದಿ,

ಮೊದಲಾದ ರಾಕ್ಷಸರ ಮನೆಗಳಿಗೂ ಹೋಗಿ ನೋಡಿದನು. ಮತ್ತು ವಿದ್ಯುಜ್ಜಿಹ್ವ, ಇಂದ್ರಜಿಹ್ವ, ಹಸ್ತಿಮುಖ, ಕರಾಳ, ಪಿಶಾಚ, ಶೋಣಿತಾಕ್ಷರೆಂಬ ರಾಕ್ಷಸರ ನಿವಾಸಗಳಿಗೂ ಹೋಗಿ ನೋಡಿದನು. ಹೀಗೆ ವಾಯುಪ್ರತ್ಯನಾದ ಹನುಮಂತನು ಒಂದೊಂದು ಮನೆಯನ್ನೂ ದಾಟಿ ಹೋಗುತ್ತ, ಮಹಾರ್ಹಗಳಾದ ಆಯಾಮನೆಗಳಲ್ಲಿ ಅವರವರು ಅನುಭವಿಸುತ್ತಿರುವ ಐಶ್ವರ್ಯಸಮೃದ್ಧಿಗಳೆಲ್ಲವನ್ನೂ ನೋಡಿದನು. ಮಹಾಯಶಸ್ವಿಯಾದ ಆ ಕಪೀಶ್ವರನು ಸುತ್ತಲೂ ಇದ್ದ ಈ ರಾಕ್ಷಸರ ಮನೆಗಳೆಲ್ಲವನ್ನೂ ಸುತ್ತಿ ನೋಡಿದ ಮೇಲೆ, ರಾಕ್ಷಸಚಕ್ರವರ್ತಿಯಾದ ರಾವಣನ ಮನೆಯೊಳಗೂ ಪ್ರವೇಶಿಸಿದನು. ಅದರ - ನಾಲ್ಕುಕಡೆಗಳನ್ನೂ ಸುತ್ತಿ ನೋಡುತ್ತ ರಾವಣನು ತನ್ನ ಅಂತಃಪುರಸ್ತ್ರೀಯರನ್ನಿರಿಸತಕ್ಕ ಒಂದು ಪ್ರಧಾನಗೃಹವನ್ನು ನೋಡಿ ಆ ಸ್ಥಳಕ್ಕೆ ಬಂದನು. ಅದರ ಸುತ್ತಲೂ ಶೂಲಗಳನ್ನೂ, ಮುದ್ಗರಗಳನ್ನೂ, ಶಕ್ತ್ಯಾಯುಧಗಳನ್ನೂ, ತೋಮರಗಳನ್ನೂ ಹಿಡಿದು ಎಚ್ಚರಿಕೆಯಿಂದ ಮಲಗಿರುವ ವಿಕಾರನೇತ್ರೆಯರಾದ ಕೆಲವು ರಾಕ್ಷಸಸ್ತ್ರೀಯರನ್ನೂ, ಆ ಮನೆಗೆ ಕಾವಲಾಗಿದ್ದ ಇನ್ನೂ ನಾನಾವಿಧ ರಾಕ್ಷಸ ಸೈನ್ಯಗಳನ್ನೂ ಕಂಡನು. ಆ ಸೈನ್ಯದಲ್ಲಿ ಬಗೆಬಗೆಯ ಆಯುಧಗಳನ್ನು ಹಿಡಿದ ಮಹಾಕಾಯವುಳ್ಳ ರಾಕ್ಷಸರನ್ನೂ, ಕೆಂಪು, ಬೆಳುಪು, ಕಪ್ಪು, ಮುಂತಾದ ವಿವಿಧವರ್ಣಗಳುಳ್ಳ ವೇಗಶಾಲಿಗಳಾದ ಕುದುರೆಗಳನ್ನೂ, ಉತ್ತಮಜಾತಿಯಲ್ಲಿ ಹುಟ್ಟಿ ಅಂದವಾದ ರೂಪವುಳ್ಳವುಗಳಾಗಿ, ಚೆನ್ನಾಗಿ ಶಿಕ್ಷಿತಗಳಾಗಿದ್ದರಿಂದ ಯುದ್ಧದಲ್ಲಿ ಐರಾವತಕ್ಕೆ ಸಮಾನಗಳಾಗಿರುವ ಉತ್ತಮಗಜಗಳನ್ನೂ ಕಂಡನು. ಆ ಆನೆಗಳೆಲ್ಲವೂ ಒಂದೇ ಬಡಿತಕ್ಕೆ ಶತ್ರು ಸೈನ್ಯಗಳನ್ನು ಧ್ವಂಸಮಾಡತಕ್ಕ ಮಹಾದೇಹವುಳ್ಳವುಗಳಾಗಿ, ಮಳೆಯನ್ನು ಸುರಿಯುವ ಮೇಘದಂತೆಯೂ, ಗಿರಿನದಿಗಳನ್ನು ಸ್ರವಿಸುವ ಬೆಟ್ಟಗಳಂತೆಯೂ ಎಡೆಬಿಡದೆ ಮದಜಲವನ್ನು ಸುರಿಸುತ್ತ, ಮೇಘಧ್ವನಿಯಂತೆ ಗಂಭೀರಗರ್ಜನವುಳ್ಳವುಗಳಾಗಿ, ಶತ್ರುಗಳಿಂದಿದಿರಿಸಲಾಗದ ಶಕ್ತಿಯುಳ್ಳವುಗಳಾಗಿದ್ದುವು. ಮತ್ತು ಅಲ್ಲಿ ಹನುಮಂತನು ಜಾಂಬೂನದವೆಂಬ ಮೇಲಾದ ಸುವರ್ಣದಿಂದಲೂ, ಬೇಡಿ ಬಟ್ಟೆಯ ಬಂಗಾರಗಳಿಂದಲೂ ಅಲಂಕೃತರಾಗಿ, ಬಾಲಸೂರ್ಯಬಿಂಬಕ್ಕೆಣೆಯಾದ ತೇಜಸ್ಸುಳ್ಳವರಾಗಿದ್ದ ಸಾವಿರಾರುಮಂದಿ ಕಾಲಾಳುಗಳನ್ನೂ ಕಂಡನು. ಮತ್ತು ಅಲ್ಲಿ ಆ ವಾಯುಪುತ್ರನು ವಿವಿಧಾಕಾರಗಳುಳ್ಳ ಪಲ್ಲಕ್ಕಿಗಳನ್ನೂ, ಚಿತ್ರವಿಚಿತ್ರಗಳಾದ ಬಳ್ಳವನಗಳನ್ನೂ, ಚಿತ್ರಶಾಲೆಗಳನ್ನೂ, ಕ್ರೀಡಾಗೃಹಗಳನ್ನೂ, ಕ್ರೀಡಾರ್ಥವಾಗಿ ಮರದಿಂದ ಮಾಡಿದ ಕೃತ್ರಿಮಪರ್ವತಗಳನ್ನೂ, ಅಂದವಾದ ರತಿಗೃಹಗಳನ್ನೂ, ಹಗಲಿನಲ್ಲಿ ವಿಹಾರಕ್ಕಾಗಿ ಕಟ್ಟಿರುವ ಮನೆಗಳನ್ನೂ ನೋಡಿದನು.

ಹನುಮಂತನು ಈ ಸನ್ನಿವೇಶಗಳೆಲ್ಲವನ್ನೂ ನೋಡುತ್ತ ಮುಂದೆ ಮುಂದೆ ಹೋದಾಗ, ಅಲ್ಲಿ ಇದುವರೆಗೆ ನೋಡಿದ ಸಮಸ್ತಗೃಹಗಳಿಗಿಂತಲೂ ಉತ್ತಮವಾಗಿ ಮಂದರಪರ್ವತದಂತಿರುವ ಮತ್ತೊಂದು ಭವನವು ಕಾಣಿಸಿತು. ಆ ದಿವ್ಯಭವನದಲ್ಲಿ ನವಿಲುಗಳ ವಿಹಾರಕ್ಕಾಗಿ ನಿರ್ಮಿತಗಳಾದ ಅನೇಕ ಕ್ರೀಡಾಸ್ಥಾನಗಳು ಕಾಣುತ್ತಿರುವುವು. ಮತ್ತು ಅದು ಸುತ್ತಲೂ ಧ್ವಜಾಲಂಕೃತವಾಗಿ, ನವರತ್ನಗಳಿಂದ ಚಿತ್ರಿತವಾಗಿ ಶೋಭಿಸುತ್ತಿರುವುದು. ನವನಿಧಿಗಳೂ ಅಲ್ಲಿ ತುಂಬಿರುವುವು. ಚತುರರಾದ ಅನೇಕ ಶಿಲ್ಪಿಗಳು ಸೇರಿ, ಅವರವರ ಶಿಲ್ಪಚಾತುರ್ಯವೆಲ್ಲವನ್ನೂ ಉಪಯೋಗಿಸಿ ನಿರ್ಮಿಸಿದಂತಿರುವುದು. ಪರಮೇಶ್ವರನಿಗೆ ವಾಸಭೂತವಾದ ಕೈಲಾಸದ ಸೊಬಗನ್ನನುಕರಿಸುತ್ತಿರುವುದು. ರತ್ನಗಳ ಕಾಂತಿಯಿಂದಲೂ, ರಾವಣನ ತೇಜಸ್ಸಿನಿಂದಲೂ ತುಂಬಿದ ಆ ರಾಜಗೃಹವು ಸಹಸ್ರಕಿರಣಗಳಿಂದ ಜ್ವಲಿಸುವ ಸೂರ್ಯನಂತೆಯೇ ಹೊಳೆಯುತ್ತಿರುವುದು. ಅಲ್ಲದ್ದ ಶಯನಾಸನಾದಿಗಳೆಲ್ಲವೂ ಕೇವಲಸ್ವರ್ಣಮಯಗಳು! ಮತ್ತು ಆ ಮನೆಯ ಅಂಗಳವೆಲ್ಲವೂ ಅಲ್ಲಲ್ಲಿ ಚೆಲ್ಲಿದ ಜೇನಿನಂತಿರುವ ಮದ್ಯರಸದಿಂದಲೂ ರತ್ನಖಚಿತಗಳಾದ ಮಧುಪಾತ್ರೆಗಳಿಂದಲೂ ನಿಬಿಡವಾಗಿ ಅತಿರಮಣೀಯವಾಗಿಯೂ ವಿಶಾಲವಾಗಿಯೂ ಇರುವುವು. ಆ ದಿವ್ಯಭವನವು ಸಾಕ್ಷಾತ್ತು ವೈರಭವನದಂತೆಯೇ ತೋರುತ್ತಿರುವುದು. ಕಾಂಚೀನೂಪುರಾದ್ಯಾಭರಣಧ್ವನಿಗಳೂ, ತಾಳಮೃದಂಗಾದಿ ವಾದ್ಯಧ್ವನಿಗಳೂ ಅಲ್ಲಿಂದ ಎಡೆಬಿಡದೆ ಹೊರಟುಬರುತಿದ್ದುವು. ಅನೇಕ ಪ್ರಾಸಾದಗಳಿಂದಲೂ ಅಸಂಖ್ಯಾತವಾದ ಸ್ತ್ರೀರತ್ನಗಳಿಂದಲೂ, ಅತಿವಿಶಾಲಗಳಾದ ತೊಟ್ಟಿಗಳಿಂದಲೂ ಶೋಭಿಸುತ್ತಿದ್ದ ಆ ಮನೆಯ ಪ್ರಾಕಾರವನ್ನು ಹನುಮಂತನು ಪ್ರವೇಶಿಸಿದನು.

ಇಲ್ಲಿಗೆ ಆರನೆಯ ಸರ್ಗವು

ಹನುಮಂತನು ರಾವಣನ ಅಂತಃಪುರದೊಳಗಿರುವ
ಗೃಹಗಳ ಸಾಲನ್ನೂ, ಅಲ್ಲಿದ್ದ ಪುಷ್ಪಕವಿಮಾನವನ್ನೂ
ನೋಡಿದುದು.

ಬಲಾಢ್ಯನಾದ ಹನುಮಂತನು ಆ ನಿವೇಶನದ ಸುತ್ತಲೂ ಇನ್ನೂ ಅನೇಕ ಗೃಹಸಮೂಹಗಳನ್ನು ಕಂಡನು. ಅವೆಲ್ಲವೂ ವೈಡೂರ್ಯಾದಿಮಣಿಗಳಿಂದ ಖಚಿತಗಳಾದ ಚಿನ್ನದ ಕಿಟಕಿಗಳಿಂದಲೂ, ಗೃಹಪಕ್ಷಿಗಳಿಂದಲೂ ಶೋಭಿಸುತ್ತ, ವರ್ಷಾಕಾಲದಲ್ಲಿ ಮಿಂಚಿನಿಂದಲೂ, ಜಾತಕಪಕ್ಷಿಗಳಿಂದಲೂ ಕೂಡಿದ ಮಹಾಮೇಘಗಳಂತೆ ತೋರುವುವು. ಅಯೂ ಮಹಾಭವನಗಳೊಳಗೆ ಶಂಖ, ಕತ್ತಿ, ಬಿಲ್ಲು ಮುಂತಾದ ಆಯುಧಗಳಿಂದ ತುಂಬಿದ ಕಿರುಮನೆಗಳೂ, ಅಲ್ಲಿನ ಉಪ್ಪರಿಗೆಗಳಮೇಲೆ ಅಂದವಾಗಿಯೂ, ವಿಶಾಲಗಳಾಗಿಯೂ ಇರುವ ಚಂದ್ರಶಾಲೆಗಳೂ ಶೋಭಿಸುವುವು. ಮತ್ತು ನಾನಾರತ್ನಸಮೂಹಗಳಿಂದ ಬೆಳಗುತ್ತ, ದೇವಾಸುರರಿಂದಲೂ ಪೂಜಿತಗಳಾಗಿ, ಶಿಲ್ಪಶಾಸ್ತ್ರಕ್ರಮದಿಂದ ನಿರ್ದೋಷವಾಗಿ, ರಾವಣನ ಭುಜಬಲಾರ್ಜಿತಗಳಾಗಿ, ಸರ್ವಸೌಭಾಗ್ಯಗಳಿಂದ ತುಂಬಿದುದಾಗಿದ್ದ ಆದರಸುತ್ತಿನ ಮನೆಗಳೆಲ್ಲವನ್ನೂ ಹನುಮಂತನು ನೋಡಿದನು. ಹೀಗೆ ಎಷ್ಟೋ ಪ್ರಯತ್ನದಿಂದ ನಿರ್ಮಿತಗಳಾದ ಸಂಸ್ಥಾನವಿಶೇಷಗಳಳ್ಳುದಾಗಿಯೂ, ಸಾಕ್ಷಾನ್ಮಯನು ತನಗಾಗಿಯೇ ಕಟ್ಟಿಟ್ಟುಕೊಂಡಂತೆ ಭೂಮಿಯಲ್ಲಿರುವ ಸಮಸ್ತಗೃಹಗಳಿಗಿಂತಲೂ ಸಮಸ್ತಭಾಗಗಳಲ್ಲಿಯೂ ಮೇಲೆನಿಸಿಕೊಂಡ ಆ ಗೃಹಗಳನ್ನೆಲ್ಲಾ ನೋಡುತ್ತ ಬಂದು, ಕೊನೆಗೆ ಆ ವುಗಳ ನಡುವೆ ಮಹೋನ್ನತವಾಗಿ ಮೇಘದಂತಿರುವ ಪುಷ್ಪಕವಿಮಾನವನ್ನು ಕಂಡನು ಆ ವಿಮಾನವಾದರೋ ಅತಿಮನೋಹರವಾಗಿ, ಕೇವಲಸುವರ್ಣಮಯವಾಗಿ, ಆ ರಾಕ್ಷಸಚಕ್ರವರ್ತಿಯ ಬಲಕ್ಕನುರೂಪವಾಗಿ, ಒಂದು ದೊಡ್ಡಮನೆಯಂತೆ ಅತಿವಿಸ್ತಾರವಾಗಿ, ಎಣೆಯಿಲ್ಲದ ಸೌಂದರ್ಯದಿಂದ ಶೋಭಿಸುವುದು. ಮತ್ತು ಭೂಮಿಗಿಳಿದು ಬಂದ ಸ್ವರ್ಗವೋ ಎಂಬಂತೆ ಕಾಂತಿಯಿಂದ ಜ್ವಲಿಸುತ್ತಿರುವುದು. ನವರತ್ನಖಚಿತವಾಗಿ, ಬಗೆಬಗೆಯ ಮರಗಳ ಹೂಗಳಿಂದ ಹೊದಿಸಲ್ಪಟ್ಟು, ಮಹೋನ್ನತವಾಗಿಯೂ ಇದ್ದುದರಿಂದ ಧೂಳಿಯಿಂದ ಮುಚ್ಚಿದ ದೊಡ್ಡ ಪರ್ವತದಂತೆ ಶೋಭಿಸುವುದು. ಕುಡಿಮಿಂಚುಗಳಿಂದ ಕೂಡಿದ ಮೇಘವೋ ಎಂಬಂತೆ ಅನೇಕಸ್ತ್ರೀಯರಿಂದ ಕೂಡಿರುವುದು. ಸಮಸ್ತಲೋಕಗಳಿಂದಲೂ ಪೂಜಿತವಾದ ಆ ವಿಮಾನವು ಆಕಾಶದಲ್ಲಿ ಹಂಸಶ್ರೇಷ್ಠಗಳಿಂದುಯ್ಯಲ್ಪಡುವ ಪ್ರಜಾಪತ್ಯರ ವಿಮಾನದಂತೆ ಕಾಂತಿವಿಶಿಷ್ಟವಾಗಿ ಶೋಭಿಸುತಿತ್ತು. ಮತ್ತು ರತ್ನಖಚಿತವಾದ ಆ ವಿಮಾನವು, ಬಣ್ಣಬಣ್ಣದ ಧಾತುಗಳಿಂದ ಚಿತ್ರಿತ

ವಾದ ಪರ್ವತಶಿಖರದಂತೆಯೂ, ಚಂದ್ರಾದಿಗ್ರಹಗಳಿಂದ ತುಂಬಿದ ಆಕಾಶ ದಂತೆಯೂ, ಹಲವುಬಣ್ಣ ಗಳಿಂದ ಗುಂಪ್ರಗೂಡಿರುವ ಮೇಘಗಳಂತೆಯೂ ವಿಚಿತ್ರ ವರ್ಣವುಳ್ಳದಾಗಿತ್ತು. ಆ ವಿಮಾನದಲ್ಲಿ ಈ ಸಮಸ್ತಭೂಮಿಯೂ, ಅದರ ಮೇಲಿನ ಸಮಸ್ತ ಪರ್ವತಸಮೂಹಗಳೊಡನೆ ಚಿತ್ರರೂಪದಿಂದ ಕಾಣಿಸಲ್ಪಟ್ಟದ್ದು ವಲ್ಲವೆ, ಆ ಪರ್ವತಗಳ ಮೇಲೆ ಬಗೆಬಗೆಯ ವೃಕ್ಷಗಳೂ, ಆ ವೃಕ್ಷಗಳಲ್ಲಿರಬೇಕಾದ ಹೂಗಳೂ, ಹೂಗಳಲ್ಲಿರಬೇಕಾದ ಎಸಳುಗಳೂ, ಅವುಗಳ ನಡುನಡುವೆ ಕೇಸರಗಳೇ ಮುಂತಾದ ಸೂಕ್ಷ್ಮಾವಯವಗಳೂ ಚಿತ್ರದಿಂದಲೇ ಸ್ಪಷ್ಟವಾಗಿ ಬಿಡಿಸಲ್ಪಟ್ಟಿದ್ದುವು. ಮತ್ತು ಆ ಚಿತ್ರದಲ್ಲಿ ಸುಧಾಧವಳಗಳಾದ ಉಪ್ಪರಿಗೆಮನೆಗಳೂ, ಅಂದವಾದ ನೀರು ಹೂಗಳುಳ್ಳ ಮಡುಗಳೂ, ಅವುಗಳಲ್ಲಿ ಕೇಸರಗಳಿಂದ ತುಂಬಿದ ಕಮಲಗಳೂ, ಇನ್ನೂ ಚಿತ್ರವಿಚಿತ್ರಗಳಾದ ವನಗಳೂ ಕಾಣಿಸಲ್ಪಟ್ಟಿದ್ದುವು. ಹೀಗೆ ಮೇಲೆ ಮೇಲೆ ಅತಿಶಯಿಸಿ ಹೋಗುತ್ತಿರುವ ಅನೇಕ ರತ್ನಪ್ರಭೆಗಳಿಂದ ಶೋಭಿತವಾಗಿ, ಉಪ್ಪರಿಗೆಮನೆಗಳಿಗಿಂತಲೂ ಮಹೋನ್ನತವಾಗಿ ಪ್ರಕಾಶಿಸುತ್ತಿದ್ದ ಪುಷ್ಪಕವೆಂಬ ಆ ದೊಡ್ಡವಿಮಾನವನ್ನೆಲ್ಲಾ ಆಂಜನೇಯನು ಕಣ್ಣಿಟ್ಟುನೋಡುತ್ತಿದ್ದನು. ಮತ್ತು ಆ ದಿವ್ಯವಿಮಾನದಲ್ಲಿ ವೈಡೂರ್ಯದಿಂದಲೂ, ಬೆಳ್ಳಿಯಿಂದಲೂ, ಹವಳದಿಂದಲೂ ರಚಿಸಲ್ಪಟ್ಟ ಬೇರೆಬೇರೆ ಪಕ್ಷಿಜಾತಿಗಳೂ, ವಿಚಿತ್ರರತ್ನ ಗಳಿಂದ ಕೆತ್ತಿದ ಸರ್ಪ ಗಳೂ, ಉತ್ತಮಜಾತಿಗೆ ತಕ್ಕಂತೆ ಅಂದವಾದ ರೂಪವುಳ್ಳ ಕುದುರೆಗಳೂ ಚಿತ್ರಿಸಲ್ಪಟ್ಟಿದ್ದುವು. ಅವರಲ್ಲಿ ಚಿತ್ರಿಸಿದ ಪಕ್ಷಿಜಾತಿಗಳೆಲ್ಲವೂ ಬಗ್ಗಿದ ರೆಕ್ಕೆಗಳಿಂದಲೂ, ಅಂದವಾದ ಮುಖಭಾವದಿಂದಲೂ, ಸೊಗಸಾದ ಗರಿಗಳಿಂದಲೂ ಬಹಳ ರಮ್ಯವಾಗಿ ಕಾಣುತ್ತಿದ್ದುವಲ್ಲವೆ, ಆ ಗರಿಗಳಮೇಲೆ ಹವಳದಿಂದಲೂ ಚಿನ್ನದಿಂದಲೂ ಸಣ್ಣಸಣ್ಣಹೂಗಳನ್ನು ಬಿಡಿಸಿದ್ದುದರಿಂದ ಅವೆಲ್ಲವೂ ಕಾಮದೇವನ ಕ್ರೀಡಾರ್ಥವಾದ ಪಕ್ಷಿಗಳಂತೆಯೇ ತೋರುತ್ತಿದ್ದುವು. ಮತ್ತು ಅದು ಮಹೋನ್ನತವಾದುದರಿಂದ ಆಕಾಶಮಧ್ಯದಲ್ಲಿರುವ ಮೇಘದಂತೆ ಕಾಣುತ್ತಿತ್ತು. ಕೇವಲಶುದ್ಧವರ್ಣಮಯವಾಗಿ, ಎಣೆಯಿಲ್ಲದ ಅಂದವುಳ್ಳದಾಗಿ ರಾವಣನ ಭುಜಬಲಕ್ಕನುರೂಪವಾಗಿ, ಮನಸ್ಸಿಗೆಯಂತೆ ವಿಸ್ತಾರವಾದ ಆ ಪುಷ್ಪಕವಿಮಾನವನ್ನು ಹನುಮಂತನು ಕಂಡನು. ಮತ್ತು ಅದರಲ್ಲಿ ತಾವರೆಕೊಳಗಳೂ, ಅವುಗಳಲ್ಲಿ ಪದ್ಮಹಸ್ತಿಯಾದ ಗಜಲಕ್ಷ್ಮಿಯೂ, ಆ ಲಕ್ಷ್ಮೀದೇವಿಯು ಎರಡು ಪಕ್ಕಗಳಲ್ಲಿಯೂ ತಮ್ಮ ತನ್ನ ಅಂದವಾದ ಸುಂಡಿಲುಗಳಿಂದ ತಾವರೆನ್ನೆದಿಲೆ ಮೊದಲಾದ ಹೂಗಳನ್ನೆತ್ತಿ ಹಿಡಿದು, ಕಮಲಧೂಳಿಯಿಂದ ತುಂಬಿದ ಮೈಯುಳ್ಳವುಗಳಾಗಿ ನಿಂತಿರುವ ಆನೆಗಳೂ ಚಿತ್ರಿಸಲ್ಪಟ್ಟಿದ್ದುವು. ರಮಣೀಯವಾಗಿಯೂ ಮಂಗಳಕರ

ವಾಗಿಯೂ, ದೊಡ್ಡ ಪರ್ವತಕ್ಕೆಣೆಯಾಗಿಯೂ ಇದ್ದ ಆ ಅರಮನೆಯಲ್ಲಿ ಹನುಮಂತನು ಯಾವಯಾವಕಡೆಯನ್ನು ಶೋಧಿಸಿದರೂ ರಾವಣನಾಗಲಿ, ಅವನ ಸ್ತ್ರೀಯರಾಗಲಿ ಇರುವ ಸ್ಥಲವನ್ನು ಕಾಣದೆ ಆಶ್ಚರ್ಯದಿಂದ ಬೆರಗಾಗಿದ್ದನು. ವಸಂತಕಾಲದಲ್ಲಿ ಚೆನ್ನಾಗಿ ಪುಷ್ಪಿಸಿ ಸುವಾಸನೆಯನ್ನು ಹೊರಡಿಸುತ್ತಿರುವ ವೃಕ್ಷಗಳಿಂದ ತುಂಬಿದ ದೊಡ್ಡ ಪರ್ವತಗುಹೆಗಳೋ ಎಂಬಂತಿರುವ ಆ ಮನೆಗಳನ್ನು ನೋಡಿದಷ್ಟೂ ಹನುಮಂತನಿಗೆ ಮೇಲಿಮೇಲೆ ಆಶ್ಚರ್ಯವು ಹೆಚ್ಚುತ್ತಿತ್ತು. ಹೀಗೆ ಹನುಮಂತನು ಸಮಸ್ತಪ್ರಾಣಿಗಳಿಂದ ಪೂಜಿತವಾಗಿಯೂ, ರಾವಣನಿಂದ ಸುರಕ್ಷಿತವಾಗಿಯೂ ಇದ್ದ ಆ ಲಂಕಾಪುರಿಯನ್ನು ಪ್ರವೇಶಿಸಿ, ಎಲ್ಲೆಲ್ಲಿ ತಿರುಗಿದರೂ, ಪೂಜ್ಯಳಾಗಿಯೂ, ಪ್ರಾಣಪತಿಯೂದ ರಾಮನ ಗುಣಗಳಿಗೆ ವಶವಾದ ಮನಸ್ಸುಳ್ಳವಳಾಗಿಯೂ ಇದ್ದ ಜನಕಪುತ್ರಿಯನ್ನು ಕಾಣದುದಕ್ಕಾಗಿ ದುಃಖಾಕ್ರಾಂತನಾಗಿದ್ದನು. ಹೀಗೆ ಆ ಹನುಮಂತನು ಎಷ್ಟೆಷ್ಟೋ ಉಪಾಯಗಳನ್ನು ಮನಸ್ಸಿನಲ್ಲಿ ಚಿಂತಿಸುತ್ತ, ತನ್ನ ನೀತಿಮಾರ್ಗವನ್ನು ಮಾತ್ರ ಬಿಡದೆ, ಅತಿಸೂಕ್ಷ್ಮದೃಷ್ಟಿಯಿಂದಲೂ, ಮಹಾಧೈರ್ಯದಿಂದಲೂ ಸಂಚರಿಸುತಿದ್ದರೂ, ಸೀತಾದೇವಿಯನ್ನು ಕಾಣಲಾರದೆ, ಚಿಂತಾಕ್ರಾಂತನಾಗಿಯೇ ಇದ್ದನು.

ಇಲ್ಲಿಗೆ ಏಳನೆಯ ಸರ್ಗವು.

ಹನುಮಂತನು ತಿರುಗಿ ಆ ಪುಷ್ಪಕವಿಮಾನವನ್ನೇ ವಿವರವಾಗಿ ನೋಡಿದುದು.

ವಾಯುಪುತ್ರನಾದ ಆ ಕಪಿವೀರನು, ಆ ಅರಮನೆಯ ಮಧ್ಯದಲ್ಲಿ ನಿಂತು ವಜ್ರಾದಿರತ್ನಗಳಿಂದಲೂ ಉತ್ತಮವಾದ ಬಂಗಾರದ ಕುಸುರಿಗಳಿಂದಲೂ, ಚಿತ್ರಿತವಾದ ಆ ದೊಡ್ಡ ಪುಷ್ಪಕವಿಮಾನವನ್ನೇ ನೋಡುತಿದ್ದನು. ಅದರ ನಿರ್ಮಾಣವೈಚಿತ್ರ್ಯವನ್ನು ಅಷ್ಟಿಷ್ಟೆಂದು ನಿರ್ಣಯಿಸುವುದಕ್ಕೂ ಸಾಧ್ಯವಲ್ಲ. ಅದಕ್ಕೆ ಸಾಟಿಯಾದುದು ಮತ್ತೊಂದಿಲ್ಲ. ಅದರಲ್ಲಿ ತಿದ್ದಿ ಸರಿಮಾಡಬೇಕಾದ ಭಾಗವು ಒಂದಾದರೂ ಇಲ್ಲ. ಅದನ್ನು ರಚಿಸಿದ ವಿಶ್ವಕರ್ಮನು ಅದರ ಅಂದವನ್ನು ತಾನೇ ಮೆಚ್ಚಿ "ಭಲೆ! ಶಹಬಾಸ್!" ಎಂದು ತನಗೆ ತಾನೇ ಕೊಂಡಾಡಿರುವನು. ಅದು ಆಕಾಶವನ್ನು ಭೇದಿಸುವಂತೆ ಮಹೋನ್ನತವಾಗಿರುವುದು. ಭೂಸ್ಪರ್ಶವಿಲ್ಲದೆ ಅಂತರಿಕ್ಷಮಾರ್ಗವನ್ನೇ ಹಿಡಿದು ಮೇಲೆ ನಿಂತಿರುವುದು.

ಪ್ರೌನ್ನತ್ಯದಿಂದ ಸೂರ್ಯನ ದಾರಿಯನ್ನು ತೋರಿಸುವುದಕ್ಕೆ ಇನ್ನೊಂದು ಗುರುತೋ ಎಂಬಂತೆ ಕಾಣುವುದು. ಆ ವಿಮಾನದಲ್ಲಿ ಅತಿಪ್ರಯತ್ನವಿಲ್ಲದೆ ನಿರ್ಮಿಸಿದ ಭಾಗವೊಂದಾದರೂ ಇಲ್ಲ. ಅದರಲ್ಲಿ ಬೆಲೆಯಿಲ್ಲದ ರತ್ನಗಳೊಂದಾದರೂ ಇಲ್ಲ. ಅದರೊಳಗಿನ ವಿಶೇಷಗಳು ದೇವಗೃಹಗಳಲ್ಲಿಯೂ ಇಲ್ಲ. ಅದರಲ್ಲಿ ನೋಟಕ್ಕೆ ಅತಿಶಯವಾಗಿ ತೋರದ ಒಂದು ವಸ್ತುವಾದರೂ ಇಲ್ಲ. ಮತ್ತು ಅದು ಎಷ್ಟೋ ಮಹಾತಪಸ್ಸುಗಳಿಂದಲೂ, ಅಸಾಧ್ಯಪರಾಕ್ರಮದಿಂದಲೂ ರಾವಣನು ಸಂಪಾದಿಸಿಟ್ಟ ದಿವ್ಯವಿಮಾನವೇ ಹೊರತು ಸಾಮಾನ್ಯವಾದುದಲ್ಲ. ಅದು ತನ್ನನ್ನೇರಿದವರು ತಮ್ಮ ಮನಸ್ಸಿನಲ್ಲಿ ಕೋರಿದ ಸ್ಥಳಗಳಿಗೆ ಆ ಕ್ಷಣವೇ ತಂದುಬಿಡುವ ಮಹಾಮಹಿಮೆಯುಳ್ಳದು. ಅದರಲ್ಲಿ ವಿಮಾನಗೋಪುರಾದಿ ನಾನಾವಿಧ ನಿವೇಶಗಳು ಕಂಗೊಳಿಸುತ್ತಿರುವುವು. ಅದರೊಳಗಿನ ನಿರ್ಮಾಣವೈಚಿತ್ರ್ಯಗಳೆಲ್ಲವೂ ಸಮವಾಗಿಯೂ ಅಲ್ಲಲ್ಲಿಗೆ ಅನುರೂಪವಾಗಿಯೂ ಇರುವುವು. ಮತ್ತು ಅದು ಯಜಮಾನನ ಮನೋಭಾವವನ್ನು ತಾನಾಗಿಯೇ ತಿಳಿದುಕೊಂಡು ಆಯಾ ಕ್ಷಣವೇ ವಾಯುವೇಗದಿಂದ ಅಲ್ಲಲ್ಲಿಗೆ ತಂದುಬಿಡತಕ್ಕ ಅದ್ಭುತಶಕ್ತಿಯುಳ್ಳದು. ಅದನ್ನಿದಿರಿಸುವುದು ಯಾರಿಗೂ ಸಾಧ್ಯವಲ್ಲ. ಮಹಾತ್ಮರಾಗಿಯೂ, ಪುಣ್ಯಶಾಲಿಗಳಾಗಿಯೂ, ಭಾಗ್ಯಶಂಪನ್ನರಾಗಿಯೂ, ಯಶಸ್ವಿಗಳಾಗಿಯೂ, ಉತ್ತಮ ಗುಣವುಳ್ಳವರಾಗಿಯೂ ಇರುವ ಇಂದ್ರಾದಿದೇವತೆಗಳಿಗೆ ವಾಸಭೂಮಿಯಾದ ಸ್ವರ್ಗದಂತೆಯೇ ತೋರುತ್ತಿರುವುದು. ಮತ್ತು ಅದು ಬೆಲೆಯುಳ್ಳ ರತ್ನಗಳೇ ಮೊದಲಾದ ವಸ್ತುಗಳನ್ನು ಸೇರಿಸಿ, ಸರ್ವೋತ್ತಮವಾದ ಶಿಲ್ಪಚಾತುರ್ಯದಿಂದ ನಿರ್ಮಿತವಾಗಿರುವುದು. ಚಿತ್ರವಿಚಿತ್ರಗಳಾದ ಅನೇಕ ಶಿಖರಗಳಿಂದಲೂ, ಬಗೆ ಬಗೆಯ ಅವಾಂತರ ಶಿಖರಗಳಿಂದಲೂ ಕೂಡಿರುವ ಮಹಾಪರ್ವತದಂತೆ ಮನೋಹರವಾಗಿರುವುದು. ಶರಚ್ಚಂದ್ರನಂತೆ ಶುಭ್ರವಾಗಿ ಒಪ್ಪುತ್ತಿರುವುದು. ಮತ್ತು ಕುಂಡಲಾಲಂಕೃತಗಳಾದ ಮುಖಗಳಿಂದಲೂ, ದುಂಡಗೆ ಬಾಗಿದ ವಿಶಾಲನೇತ್ರಗಳಿಂದಲೂ, ದೊಡ್ಡದೇಹದಿಂದಲೂ ಕೂಡಿ, ಅತಿವೇಗದಿಂದ ಆಕಾಶದಲ್ಲಿ ಹಾರಿಬರುವಂತೆ ತೋರುವ ಅನೇಕ ಭೂತಪ್ರತಿಮೆಗಳು ಗೋಪುರದ ಬೊಂಬೆಯ ಆಕಾರಕ್ಕೆ ಆ ವಿಮಾನವನ್ನು ಹೊತ್ತು ನಿಂತಿರುವಂತೆ ಅದರಮತ್ತಲೂ ಚಿತ್ರಿಸಲ್ಪಟ್ಟಿರುವುದು. ಹೀಗೆ ವಸಂತಪುಷ್ಪಗಳಂತೆ ಮನೋಹರವಾಗಿಯೂ ವಸಂತಋತುವಿಗಿಂತಲೂ ಹೆಚ್ಚುರಮಣೀಯವಾಗಿಯೂ ತೋರುತಿದ್ದ ಅಂತಹ ವಿಮಾನರತ್ನವನ್ನು ಹನುಮಂತನು ನೋಡಿದನು.

ಇಲ್ಲಿಗೆ ಎಂಟನೆಯ ಸರ್ಗವು.

ಪುಷ್ಪಕವಿಮಾನ ವರ್ಣನವು.

ಆಮೇಲೆ ಹನುಮಂತನು ಆ ವಿಮಾನದ ಮಧ್ಯದಲ್ಲಿಯೂ ಕೂಡ ವಿಸ್ತಾರವಾಗಿಯೂ ಉದ್ದವಾಗಿಯೂ ಇದ್ದ ಒಂದು ಮನೆಯನ್ನು ಕಂಡನು. ಅನೇಕವಾದ ಅಂಕಸ್ತಂಭಗಳಿಂದ ತುಂಬಿದ ಆ ಗೃಹವು ಅರ್ಧಯೋಜನ ವಿಸ್ತಾರವಾಗಿಯೂ ಒಂದು ಯೋಜನದುದ್ದವಾಗಿಯೂ ಇತ್ತು. ಶತ್ರುಸೂದನನಾದ ಹನುಮಂತನು ಆಯತಾಕ್ಷಿಯಾದ ಸೀತೆಯನ್ನು ಹುಡುಕುತ್ತ, ಮೊದಲು ಅದರ ಸುತ್ತಲೂ ತಿರುಗಿ ಅಲ್ಲಲ್ಲಿದ್ದ ರಾಕ್ಷಸರ ಮನೆಗಳೆಲ್ಲವನ್ನೂ ನೋಡುತ್ತ ಬಂದು, ಕೊನೆಗೆ ಅಲ್ಲಿ ರಾಕ್ಷಸೇಂದ್ರನಾದ ರಾವಣನಿಗೆ ನಿವಾಸವಾಗಿದ್ದ ಬೇರೊಂದು ಮನೆಯ ಬಳಿಗೆ ಬಂದನು. [1] ನಾಲ್ಕು ಕೊಂಬಿನ ಆನೆಗಳೂ, ಮೂರುಕೊಂಬಿನ ಆನೆಗಳೂ, ಒಂದೆರಡು ಕೊಂಬಿನ ಆನೆಗಳೂ, ಅನೇಕವಾಗಿ ಅದರ ಸುತ್ತಲೂ ಕಾವಲಾಗಿ ಸುತ್ತುತಿದ್ದುವು. ಅತಿವಿಸ್ತಾರವಾದ ಆ ಮನೆಯ ಸುತ್ತಲೂ ಆಯುಧಪಾಣಿಗಳಾದ ಅನೇಕ ರಾಕ್ಷಸಭಟರೂ ಕಾವಲಿರುತಿದ್ದರು. ಅಲ್ಲಿ ರಾವಣಪತ್ನಿಯರಾದ ಅನೇಕ ರಾಕ್ಷಸಸ್ತ್ರೀಯರೂ, ಆ ರಾವಣನು ಅಲ್ಲಲ್ಲಿ ದಿಗ್ವಿಜಯಕ್ಕಾಗಿ ಹೊರಟಾಗ ಪರಾಕ್ರಮದಿಂದ ತಂದಿಟ್ಟ ರಾಜಕನ್ಯಕೆಯರೂ ತುಂಬಿ ನೆರೆದಿದ್ದರು. ಹೀಗೆ ಆಯುಧಧಾರಿಗಳಿಂದಲೂ, ಸ್ತ್ರೀಯರಿಂದಲೂ ಪೂರ್ಣವಾದ ಆ ಗೃಹವು ಮೊಸಳೆಗಳಿಂದಲೂ ತಿಮಿಂಗಿಲಗಳಿಂದಲೂ, ಬಗೆಬಗೆಯ ವಿಷಾನುಗಳಿಂದಲೂ ವ್ಯಾಕುಲವಾಗಿ, ಸರ್ಪಗಳಿಂದ ತುಂಬಿ, ಮಹಾವಾತದ ವೇಗದಿಂದಾಡುತ್ತಿರುವ ಸಾಗರದಂತೆಯೇ ತೋರುತಿತ್ತು. ಕುಬೇರನಲ್ಲಿ ಯಾವ ಐಶ್ವರ್ಯಸಮೃದ್ಧಿಯುಂಟೋ, ಹರಿಹಯನಾದ ಇಂದ್ರನಲ್ಲಿ ಯಾವ ಭಾಗ್ಯಸಮೃದ್ಧಿಯುಂಟೋ ಅವೆಲ್ಲವೂ ಯಾವಾಗಲೂ ಎಡೆಬಿಡದೆ ಆ ರಾವಣಗೃಹದಲ್ಲಿ ಸ್ಥಿರವಾಗಿ ನಿಂತಿತ್ತು. ಲೋಕರಂಜಕನಾದ ಕುಬೇರನಿಗೆ ಯಾವ ಧನಸಮೃದ್ಧಿಯುಂಟೋ, ಯಮನಲ್ಲಿ ಯಾವ ಸಿರಿಯುಂಟೋ, ವರುಣನಿಗೆ ಯಾವ ಸಂಪತ್ತುಂಟೋ ಆ ಸಮೃದ್ಧಿಯೊಂದೊಂದೂ ಅಲ್ಲಿಗಿಂತಲೂ ವಿಶೇಷವಾಗಿ ಇಲ್ಲಿನ ಒಂದೊಂದು ರಾಕ್ಷಸಗೃಹಗಳಲ್ಲಿಯೂ ಕಾಣುತ್ತಿರುವುವು. ಆಮೇಲೆ ಆಂಜನೇಯನು ರಾವಣನ ಪಶ್ಚಿಮಮಧ್ಯದಲ್ಲಿ ಬೇರೊಂದು ಮನೆಯಂತೆ ವಿಶಾಲವಾಗಿದ್ದ ಪುಷ್ಪಕವೆಂಬ ಆ ವಿಮಾನಪಕಡೆಗೆ ಬಂದನು. ಅಂದವಾದ ರಚನೆಯುಳ್ಳದಾಗಿಯೂ, ಅನೇಕ ನಿರ್ಯೂಹಗಳಿಂದ ಶೋಭಿಸುವಾಗಿಯೂ, ನವರತ್ನಖಚಿತವಾಗಿಯೂ ಇರುವ ಆ ವಿಮಾನವನ್ನು ಪೂರ್ತಿ

1. ಇದು ಪುಷ್ಪಕವಿಮಾನಮಧ್ಯದಲ್ಲಿರುವ ಮುಖ್ಯವಾದ ಮನೆಗಿಂತಲೂ ಬೇರೆಯಾದುದು.

ದಲ್ಲಿ ವಿಶ್ವಕರ್ಮನು ಬ್ರಹ್ಮನಿಗಾಗಿ ಸ್ವರ್ಗದಲ್ಲಿ ನಿರ್ಮಿಸಿಟ್ಟನು. ಕುಬೇರನು ದೊಡ್ಡ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ಅವನಿಂದ ಅದನ್ನು ಪಡೆದನು. ಕೊನೆಗೆ ರಾವಣನು ತನ್ನ ವೀರ್ಯದಿಂದ ಕುಬೇರನನ್ನು ಜಯಿಸಿ ಆ ವಿಮಾನವನ್ನು ತನಗೆ ವಶಮಾಡಿಕೊಂಡನು. ಆ ವಿಮಾನದಲ್ಲಿ ನಡುನಡುವೆ ತೋಳದ ಪ್ರತಿಮೆಗಳಿಂದ ಕೆತ್ತಿದ ಅಂದವಾದ ಚಿನ್ನ ಬೆಳ್ಳಿಯ ಕಂಬಗಳು ಸುತ್ತಲೂ ದೇದೀಪ್ಯಮಾನವಾದ ಕಾಂತಿಯಿಂದ ಹೊಳೆಯುತ್ತಿರುವುವು. ಅದರ ಮೇಲಿನ ಅಂತಸ್ತುಗಳೆಲ್ಲವೂ ಅತಿರಮ್ಯಾಕೃತಿಯುಳ್ಳವುಗಳಾಗಿ ಮೇರುಮಂದರಗಿರಿಗಳಂತೆ ಮಹೋನ್ನತಗಳಾಗಿ ಆಕಾಶವನ್ನು ಚುಚ್ಚುವಂತಿರುವುವು. ವಿಶ್ವಕರ್ಮನಿಂದ ಸುನಿರ್ಮಿತವಾದ ಆ ವಿಮಾನವು ಸೂರ್ಯಾಗ್ನಿಗಳಂತೆ ಜ್ವಲಿಸುತ್ತ, ಬಂಗಾರದ ಮತ್ತು ಸ್ಫಟಿಕದ ಮೆಟ್ಟಿಲುಗಳುಳ್ಳುದಾಗಿ, ಗೋಡೆಗಳಮೇಲೆ ಅಲಂಕಾರಾರ್ಥವಾಗಿ ಸ್ವಸ್ತಿಕಾದ್ಯಾಕಾರಗಳಿಂದ ಮಾಡಿದ ಜಾಲಗಳೆಂಬ ಕಿಟಕಿಗಳಿಂದಲೂ, ಗಾಳಿಬರುವ ಗವಾಕ್ಷಗಳಿಂದಲೂ ಶೋಭಿಸುತ್ತಿರುವುದು. [1] ಹಾಲಿನಲ್ಲಿ ಹಾಕಿದೊಡನೆ ಆ ಹಾಲನ್ನು ನೀಲವರ್ಣವಾಗಿ ಮಾಡತಕ್ಕ ಉತ್ತಮಜಾತಿಯ ಇಂದ್ರನೀಲಮಣಿಗಳಿಂದಲೂ, ಸಿಂಹಳದ್ವೀಪಜನ್ಯಗಳಾದ ಮಯಾನೀಲವೆಂಬ ಪಚ್ಚೆಗಲ್ಲುಗಳಿಂದಲೂ, ಚಿತ್ರಿತವಾಗಿರುವುದು. ಚಿತ್ರವಿಚಿತ್ರಗಳಾದ ಹವಳಗಳಿಂದಲೂ, ಬೆಲೆಯುಳ್ಳ ರತ್ನಗಳಿಂದಲೂ, ಎಣೆಯಿಲ್ಲದ ಮುತ್ತಿನ ಮಣಿಗಳಿಂದಲೂ ಅಂದವಾದ ನೆಲಗಟ್ಟುಳ್ಳುದಾಗಿಯೂ, ಬಂಗಾರವರ್ಣವುಳ್ಳ ರಕ್ತಚಂದನ ಗಂಧದಿಂದ ಸುವಾಸಿತವಾಗಿಯೂ ಇರುವುದು. ಹೀಗೆ ಮಧ್ಯಾಹ್ನ ಸೂರ್ಯನಂತೆ ಕಾಂತಿಯಿಂದ ಜ್ವಲಿಸುತ್ತ, ವಿಚಿತ್ರಾಕೃತಿಗಳುಳ್ಳ ಮೇಲುಮನೆಗಳಿಂದೊಪ್ಪುತ್ತಿದ್ದ ಆ ಪುಷ್ಪಕ ವಿಮಾನವನ್ನು ನೋಡಿ, ಹನುಮಂತನು ಅದರಮೇಲೆಯೂ ಏರಿದನು. ಆಗಲೇ ಹನುಮಂತನು ಉತ್ತಮವಾದ ಮದ್ಯದ ಪರಿಮಳದಿಂದಲೂ, ಭಕ್ಷ್ಯಗಳ ಸುವಾಸನೆಯಿಂದಲೂ, ಮೃಷ್ಟಾನ್ನಗಳ ಗಂಧದಿಂದಲೂ ರೂಪುಗೊಂಡಂತೆ ಆ ವಿಮಾನಮಧ್ಯದಿಂದ ಹೊರಟುಬರುತ್ತಿದ್ದ ಸುಗಂಧವಾಯುವನ್ನಾಘ್ರಾಣಿಸಿದನು. ಬಂಧುವು ತನ್ನ ಪ್ರಿಯಬಂಧುವನ್ನು ಎದುರುಗೊಂಡು ಬರುವಂತೆ, ಸರ್ವೋತ್ತಮವಾದ ಆ ಸುಗಂಧವು, ಈ ಆಂಜನೇಯನನ್ನು ಎದುರುಗೊಂಡು "ಇದೋ ಇತ್ತಬರಬೇಕೆಂದು" ಅತ್ಯಾದರದಿಂದ ರಾವಣನಿರುವ ಸ್ಥಳಕ್ಕೆ ಕರೆದೊಯ್ಯುತ್ತಿರುವಂತೆ ತೋರಿತು. ಆ ಸುಗಂಧದ ದಾರಿಯನ್ನೇ ಹಿಡಿದು ಹನುಮಂತನು ರಾವಣನಿದ್ದ ನಿವೇಶನಕ್ಕೆ ಬಂದು, ಅತಿ

---

1. "ಕ್ಷೀರಪುಷ್ಪೇ ಕ್ಷಿಪೇನ್ನೀಲಂ ಕ್ಷೀರಂಚೇನ್ನೀಲತಾಂ ವ್ರಜೇತ್। ಇಂದ್ರನೀಲಮಿತಿಖ್ಯಾತಮಿತಿ ಚಾಗಸ್ತ್ಯಭಾಷಿತಮ್" ಎಂದು ರತ್ನಪರೀಕ್ಷಾಶಾಸ್ತ್ರವು.

ವಿಸ್ತಾರವಾಗಿಯೂ, ಮಂಗಳಕರವಾಗಿಯೂ, ಉತ್ತಮಕಾಂತೆಯಂತೆ ರಾವಣನಿಗೆ ವಿಶೇಷಪ್ರೀತಿಪಾತ್ರವಾಗಿಯೂ ಇದ್ದ ಅದರ ಅಂದವನ್ನೇ ನೋಡುತಿದ್ದನು. ಅದಕ್ಕಾದರೋ ರತ್ನದ ಸೋಪಾನಗಳು! ಚಿನ್ನದ ಕಿಟಕಿಗಳು! ಸ್ಫಟಿಕದ ನೆಲಗಟ್ಟುಗಳು! ನಡುನಡುವೆ ದಂತದ ಹಲಗೆಗಳು! ಸುತ್ತಲೂ ಮುತ್ತು, ಹವಳ, ಬೆಳ್ಳಿ, ಚಿನ್ನ, ಮುಂತಾದುವುಗಳಿಂದ ಚಿತ್ರಿತಗಳಾದ ಅನೇಕ ರತ್ನಸ್ತಂಭಗಳು! ಇವೆಲ್ಲವೂ ವಿಶೇಷಶೋಭೆಯನ್ನುಂಟುಮಾಡುತಿದ್ದುವು. ಕಂಬಗಳೆಲ್ಲವೂ ಸಮ ಪ್ರಮಾಣವುಳ್ಳವುಗಳಾಗಿಯೂ, ಋಜುಗಳಾಗಿಯೂ, ಉನ್ನತಗಳಾಗಿಯೂ ಇದ್ದುವು. ಮೇಲೆ ಬಾಗಿದ ಆವುಗಳ ಮೋತೆಗಳು ರೆಕ್ಕೆಗಳಂತೆ ಕಾಣುತಿದ್ದುದರಿಂದ ಆ ರೆಕ್ಕೆಗಳಿಂದಲೇ ಆ ಮನೆಯು ಮೇಲೆ ಹಾರುತ್ತಿರುವುದೋ ಎಂಬಂತೆ ತೋರುತಿತ್ತು. ಮತ್ತು ಆ ವಿಮಾನದ ನಡುವೆ ಸಮುದ್ರಪರ್ವತಾರಣ್ಯಗಳೇ ಮೊದಲಾದ ಸಮಸ್ತಲಕ್ಷಣಗಳಿಂದ ಚಿತ್ರಿಸಲ್ಪಟ್ಟ ಭೂಮ್ಯಾಕಾರವುಳ್ಳ ರತ್ನಗಂಬಳಿಯನ್ನು ಹಾಸಿದ್ದುದರಿಂದ ಆ ವಿಮಾನವು ಅನೇಕ ರಾಷ್ಟ್ರಗಳಿಂದಲೂ ಮನೆಗಳಿಂದಲೂ ತುಂಬಿದ ಭೂಮಿಯಂತೆಯೇ ಅತಿವಿಶಾಲವಾಗಿರುವುದು. ಅಲ್ಲಲ್ಲಿ ಮದಿಸಿದ ಪಕ್ಷಿಗಳು ಧ್ವನಿಮಾಡುತ್ತಿರುವುವು. ಮತ್ತು ಅದು ದಿವ್ಯಗಂಧದಿಂದ ಸುವಾಸಿತವಾಗಿ ಘಮಘಮಿಸುತ್ತಿರುವುದು. ಅಲ್ಲಿ ಅಮೂಲ್ಯಗಳಾದ ಆಸನಗಳು ಶೋಭಿಸುತ್ತಿರುವುವು. ರಾಕ್ಷಸಚಕ್ರವರ್ತಿಯಾದ ರಾವಣನಿಗೂ ಅದು ಅತ್ಯಾದರಣೀಯವಾದ ಸ್ಥಾನವಾಗಿರುವುದು. ಮತ್ತು ಅದು ಅಗರುಧೂಪದ ಹೊಗೆಯಿಂದ ಧೂಮ್ರವರ್ಣವಾಗಿಯೂ, ನಿರ್ಮಲವಾಗಿಯೂ, ಹಂಸದಂತೆ ಬಿಳುಪಾಗಿಯೂ ಇರುವುದು. ವಿಚಿತ್ರ ಕಾಂತಿಯಿಂದ ಶೋಭಿಸುವ ಶಬಲೆಯೆಂಬ ವಸಿಷ್ಠಧೇನುವಿನಂತೆ, ಮೇಲೆ ಚೆಲ್ಲಿದ ಪುಷ್ಪೋಪಹಾರಗಳಿಂದ ಚಿತ್ರವರ್ಣವುಳ್ಳದಾಗಿ ಶೋಭಿಸುವುದು. ನೋಡಿದಾಗಲೇ ಒಂದುಬಗೆಯ ಉಲ್ಲಾಸವನ್ನುಂಟುಮಾಡುತ್ತಿರುವುದು. ತನ್ನ ಕಾಂತಿಯಿಂದ ಬಣ್ಣಗಳಿಗೂ ಬಣ್ಣವೇರಿಸುವಂತಿರುವುದು. ನೋಡಿದಾಗಲೇ ಅವರವರ ಮನಸ್ಸಿನಲ್ಲಿರುವ ಮುಖವನ್ನೆಲ್ಲಾ ನೀಗಿಸತಕ್ಕುದಾಗಿರುವುದು. ಸಮುಕ್ತ ಭಾಗ್ಯಗಳಿಗೂ ತಾನೇ ತೌರುಮನೆಯಂತಿರುವುದು. ರಾವಣನಿಂದ ಸಾಕ್ಷಾತ್ಕಾಗಿಯೇ ರಕ್ಷಿತವಾದ ಇಂತಹ ನಿವೇಶನವು, ತಾಯಿಯು ಮಕ್ಕಳಿಗೆ ಹೇಗೋ ಹಾಗೆ, ಹನುಮಂತನ ಪಂಚೇಂದ್ರಿಯಗಳನ್ನೂ ತನ್ನೊಳಗಿನ ಸರ್ವೋತ್ತಮಗಳಾದ ರೂಪ ರಸ ಗಂಧ ಸ್ಪರ್ಶ ಶಬ್ದಗಳೆಂಬ ಐದುವಿಷಯಗಳಿಂದ ಸಂಪೂರ್ಣವಾಗಿ ತೃಪ್ತಿಹೊಂದಿಸುತಿತ್ತು. ಹನುಮಂತನು ಅದನ್ನು ನೋಡಿ ತನ್ನ ಮನಸ್ಸಿನಲ್ಲಿ "ಇದೇ ಸ್ವರ್ಗವೋ! ಇದೇ ದೇವಲೋಕವೋ! ಇಂದ್ರನಿಗೆ ಸ್ಥಾನವಾದ ಅಮರಾ

ವತಿಯು ಇದೇ ಆಗಿರಬೇಕು! ಅಥವಾ ಸಿದ್ಧರೂಪವಾದ ಪರಬ್ರಹ್ಮನ ಸ್ಥಾನವಾಗಿಯೂ ಇರಬಹುದು!" ಎಂದು ಅತ್ಯಾಶ್ಚರ್ಯದಿಂದ ಚಿಂತಿಸುತಿದ್ದನು. ಜೂಜಿನಲ್ಲಿ ಇತರರಿಗೆ ಹಣವನ್ನು ಸೋತವನು, ಚಿಂತೆಯಿಂದ ಕೊರಗುತ್ತ, ನಿಶ್ಚಲನಾಗಿ ನಿಂತು ಧ್ಯಾನಿಸುವಂತೆ, ಅಲ್ಲಿ ಅಲ್ಲಾಡದೆ ನಿಂತು ಉರಿಯುತ್ತಿರುವ ಅನೇಕ ಸ್ವರ್ಣ ಪ್ರದೀಪಗಳನ್ನು ಕಂಡನು. ಆ ದೀಪಗಳ ಪ್ರಕಾಶದಿಂದಲೂ, ರಾವಣನ ತೇಜಸ್ಸಿನಿಂದಲೂ, ಸ್ತ್ರೀಯರ ಆಭರಣ ಕಾಂತಿಗಳಿಂದಲೂ ಆ ನಿವೇಶನವೆಲ್ಲವೂ ದೇದೀಪ್ಯಮಾನವಾಗಿ ಉರಿಯುವಂತೆಯೇ ತೋರುತಿತ್ತು. ಅಲ್ಲಿ ನಾನಾವರ್ಣದ ಬಟ್ಟೆಗಳನ್ನೂ, ನಾನಾಬಣ್ಣದ ಪುಷ್ಪಮಾಲೆಗಳನ್ನೂ ಧರಿಸಿ, ನಾನಾವೇಷಗಳಿಂದಲಂಕೃತರಾದ ಸಾವಿರಾರುಮಂದಿ ವಾರಸ್ತ್ರೀಯರು, ಅಲ್ಲಿನ ಕುಥಾಸ್ತರಣದಮೇಲೆ ಮಲಗಿರುವುದನ್ನು ಕಂಡನು. ಆ ಸ್ತ್ರೀಸಮೂಹವೆಲ್ಲವೂ ಆ ರಾತ್ರಿಯಲ್ಲಿ ಬಹಳಹೊತ್ತಿನವರೆಗೆ ಕ್ರೀಡಿಸುತಿದ್ದು, ಅರ್ಧರಾತ್ರಿಯಾದಮೇಲೆ, ಪಾನಮದದಿಂದಲೂ ನಿದ್ರೆಯಿಂದಲೂ ಮೈಮರೆತು, ಭೂಷಣಾದಿಧ್ವನಿಗಳೂ ಇಲ್ಲದೆ ನಿಶ್ಶಬ್ದವಾಗಿ ಮಲಗಿರಲು, ಆ ನಿವೇಶನವು, ಸದ್ದಿಲ್ಲದೆ ಮೌನದಿಂದ ಮಲಗಿರುವ ಹಂಸಭ್ರಮರಗಳುಳ್ಳ ದೊಡ್ಡ ತಾವರೆಗೊಳದಂತಿತ್ತು. ಹೀಗೆ ಬಿಚ್ಚಿದ ಹಲ್ಲುಗಳಿಂದಲೂ, ಮುಚ್ಚಿದ ಕಣ್ಣುಗಳಿಂದಲೂಕೂಡಿ ಕಮಲಗಂಧವನ್ನು ಹೊರಡಿಸುತಿದ್ದ ಆ ಸ್ತ್ರೀಯರ ಮುಖಗಳೆಲ್ಲವನ್ನೂ ಆಂಜನೇಯನು ನೋಡಿದನು. ಆ ಮುಖಗಳೆಲ್ಲವೂ ಹನುಮಂತನಿಗೆ ಬೆಳಗಾದಮೇಲೆ ಅರಳಿ ರಾತ್ರಿಕಾಲಗಳಲ್ಲಿ ಮುಚ್ಚಿಕೊಳ್ಳುವ ಸ್ವಭಾವವುಳ್ಳ ಕಮಲಗಳಂತೆಯೇ ತೋರಿದುವು. ಆಗ ಅವನು ಮನಸ್ಸಿನಲ್ಲಿ "ಆಹಾ! ಅರಳಿದ ಕಮಲಗಳಂತೆಯೇ ಈ ಮುಖಕಮಲಗಳೂ ಕೂಡ ಭ್ರಮರಗಳಿಗೆ ತಮ್ಮ ವಾಸನೆಯಿಂದ ಆಸೆಯನ್ನು ಹುಟ್ಟಿಸುತ್ತಿರುವವು. ಯಾವ ಗುಣಗಳಲ್ಲಿ ನೋಡಿದರೂ ಇವು ಕಮಲಗಳೊಡನೆ ಹೋಲುವುವು," ಎಂದು ವಿಸ್ಮಯಪಡುತ್ತ ನಿಂತಿದ್ದನು. ಸ್ತ್ರೀಯರಿಂದ ತುಂಬಿದ ಆ ಮನೆಯು ತಾರೆಗಳಿಂದ ಶೋಭಿಸುವ ಶರತ್ಕಾಲದ ರಾತ್ರಿಯಂತೆ ಕಾಣುತಿತ್ತು. ಸ್ತ್ರೀಯರಿಂದ ಪರಿವೃತನಾಗಿ ಮಲಗಿದ್ದ ರಾಕ್ಷಸ ಚಕ್ರವರ್ತಿಯೂ ಕೂಡ ನಕ್ಷತ್ರಗಳಿಂದ ಪರಿವೃತನಾಗಿ ಮೆರೆಯುವ ಚಂದ್ರನಂತೆ ತೋರುತಿದ್ದನು. ಆಗ ಹನುಮಂತನು ಅಲ್ಲಿದ್ದ ಸ್ತ್ರೀಯರ ಸೌಂದರ್ಯವನ್ನು ನೋಡಿ ಆಶ್ಚರ್ಯಭರಿತನಾಗಿ "ಆಹಾ! ಪುಣ್ಯಶೇಷವಿರುವಾಗಲೇ ಆಕಾಶದಿಂದ ಕೆಳಗೆ ಬಿದ್ದ ನಕ್ಷತ್ರಗಳೆಲ್ಲವೂ ಒಂದಾಗಿ ಕಲೆತು ಇಲ್ಲಿ ಸ್ತ್ರೀರೂಪದಿಂದ ಬಂದು ಸೇರಿರುವಂತಿದೆ," ಎಂದೆಣಿಸುತಿದ್ದನು. ಆ ಸ್ತ್ರೀಯರ ದೇಹಕಾಂತಿ ರೂಪಸೌಂದರ್ಯಾದಿಗಳೆಲ್ಲವೂ ನಕ್ಷತ್ರಗಳ ಕಾಂತಿಲಾವಣ್ಯಾದಿಗಳನ್ನೇ ಹೋಲುತಿದ್ದುವು. ಆ ಸ್ತ್ರೀಯರು ಮದ್ಯವನ್ನು

ಕುಡಿದು ರತಿಕ್ರೀಡೆಯನ್ನು ಮಾಡುವಾಗ ಕದಲಿದ ಪುಷ್ಪಾಭರಣಗಳುಳ್ಳವರಾಗಿ ಹಾಗೆಯೇ ನಿದ್ರೆಯಿಂದ ಮೈಮರೆತು ಪ್ರಜ್ಞೆಯಿಲ್ಲದಂತೆ ಮಲಗಿದ್ದರು. ಅವರಲ್ಲಿ ಕದಲಿದ ತಿಲಕವುಳ್ಳವರು ಕೆಲವರು, ಜಾರಿದ ಕಾಲಂದುಗೆಯುಳ್ಳವರು ಕೆಲವರು ಪಕ್ಕದಲ್ಲಿ ಜಾರಿಬಿದ್ದ ಹಾರವುಳ್ಳವರು ಕೆಲವರು, ತೊಡರಿ ಸುತ್ತಿಕೊಂಡ ಮುತ್ತಿನ ಹಾರವುಳ್ಳವರು ಕೆಲವರು. ಸಡಿಲಿದ ಬಟ್ಟೆಯುಳ್ಳವರು ಕೆಲವರು. ಕಿತ್ತು ಹೋದ ನಡುವಿನ ಪಟ್ಟೆಯುಳ್ಳವರು ಕೆಲವರು. ಹೀಗೆ ಆ ಸ್ತ್ರೀಯರೆಲ್ಲರೂ ದೊಡ್ಡ ಭಾರವನ್ನು ಹೊತ್ತುತಂದ ಬಳಲಿಕೆಯನ್ನಾರಿಸುವುದಕ್ಕಾಗಿ, ನೆಲದ ಧೂಳಿಯಲ್ಲಿ ಬಿದ್ದು ಹೊರಳುವ ಕುದುರೆಯ ಮರಿಗಳಂತೆ ಕಾಣುತಿದ್ದರು. ಮತ್ತು ಆಲ್ಲಿ ಉತ್ತಮವಾದ ಕುಂಡಲಗಳನ್ನು ಧರಿಸಿ, ಕದಲಿದ ಪುಷ್ಪಮಾಲಿಕೆಯುಳ್ಳ ಕೆಲವು ಸ್ತ್ರೀಯರು, ಕಾಡಿನಲ್ಲಿ ಅನೆಯಿಂದ ಕಿತ್ತುಹಾಕಲ್ಪಟ್ಟ ಆರಳಿದ ಬಳ್ಳಿಗಳಂತೆ ಕಾಣುತಿದ್ದರು. ಮತ್ತೆ ಕೆಲವು ಸ್ತ್ರೀಯರ ಸ್ತನ ಮಧ್ಯಗಳಲ್ಲಿ ಚಂದ್ರಸೂರ್ಯರ ಕಾಂತಿಯಿಂದ ಹೊಳೆಯುತಿದ್ದ ದೊಡ್ಡ ದೊಡ್ಡ ಮುತ್ತಿನ ಹಾರಗಳು, ಅಲ್ಲಲ್ಲಿ ನಿದ್ರಿಸುತ್ತಿರುವ ಹಂಸಗಳಂತಿದ್ದುವು. ಹಾಗೆಯೇ ಕೆಲವರ ವೈಡೂರ್ಯಾಭರಣಗಳು ಕಲಹಂಸಗಳಂತೆಯೂ, ಕೆಲವರ ಎದೆಕಟ್ಟುಗಳು ಚಕ್ರವಾಕಗಳಂತೆಯೂ, ಕೆಲವರ ಜಘನಗಳು ಮಳಲುದಿಣ್ಣೆಗಳಂತೆಯೂ ಶೋಭಿಸುತಿದ್ದುದರಿಂದ, ಆ ಸ್ತ್ರೀಯರೆಲ್ಲರೂ ಹಂಸಕಾರಂಡವ ಚಕ್ರವಾಕಾದಿ ಪಕ್ಷಿಗಳಿಂದ ತುಂಬಿದ ನದಿಗಳಂತೆಯೇ ಕಾಣಿಸುತಿದ್ದರು. ಮತ್ತು ಆ ಸ್ತ್ರೀಯರ ಕಿರುಗೆಜ್ಜೆಗಳು ಮೊಗ್ಗುಗಳಂತೆಯೂ, ಸ್ವರ್ಣಾಭರಣಗಳು ಅರಳಿದ ಕಮಲಗಳಂತೆಯೂ, ನಿದ್ರಾವಸ್ಥೆಯಲ್ಲಿಯೂ ಅವರು ನಟಿಸುವ ಶೃಂಗಾರಜೇಷ್ಟೆಗಳು ಅಡುವ ಮೊಸಳೆಗಳಂತೆಯೂ, ಅವರಿಗೆ ವಿಶೇಷ ಕೀರ್ತಿಹೇತುವಾದ ಅವರ ದೇಹಪ್ರಭೆಯು, ಪಕ್ಕದ ತೀರಗಳಂತೆಯೂ ಕಾಣುತ್ತಿರಲು, ಅವರೆಲ್ಲರೂ ಮಲಗಿದ ನದಿಗಳಂತೆ ಪ್ರಕಾಶಿಸುತಿದ್ದರು. ಮತ್ತು ಆಲ್ಲಿ ಕೆಲವು ಸ್ತ್ರೀಯರ ಸ್ತನಾಗ್ರಗಳಲ್ಲಿಯೂ, ಅತಿ ಮೃದುವಾದ ಇತರಾವಯವಗಳಲ್ಲಿಯೂ ಅಭರಣಗಳ ಒತ್ತಿನಿಂದುಂಟಾದ ರೇಖೆಗಳು, ಅಲ್ಲಲ್ಲಿಟ್ಟ ಭೂಷಣಗಳಂತೆಯೇ ಕಾಣುತಿದ್ದುವು. ಕೆಲವರ ಸೀರೆಯ ನೆರಿಗೆಗಳು ಅವರ ಉಸಿರಿನ ಗಾಳಿಯಿಂದ ಬಾರಿಬಾರಿಗೂ ಹಾರಿಹಾರಿ ಅವರ ಮುಖದಮೇಲೆ ಬಿದ್ದು ಕುಣಿಯುತಿದ್ದುವು. ಹೀಗೆ ಆಡುತಿದ್ದ ಚಿತ್ರವಿಚಿತ್ರಗಳಾದ ಬಟ್ಟೆಗಳೆಲ್ಲವೂ, ಆ ಸ್ತ್ರೀಯರ ಮುಖಗಳಮೇಲೆ ಗಾಳಿಯಿಂದಾಡುವ ಬಗೆಬಗೆಯ ಬಣ್ಣದ ಧ್ವಜಪತಾಕೆಗಳಂತೆ ಕಾಣುತಿದ್ದುವು. ಮತ್ತು ಕೆಲವು ಉತ್ತಮಸ್ತ್ರೀಯರ ಕಿವಿಯೋಲೆಗಳೂಕೂಡ ಅವರವರ ನಿಟ್ಟುಸಿರಿನ ಗಾಳಿಯಿಂದ ಮೆಲ್ಲಗೆ ಅಲುಗುವಂತಿದ್ದುವು.ಇದು ಸಹಜವಾಗಿಯೇ

ಸುವಾಸನೆಯುಳ್ಳದಾಗಿ, ಅದರಮೇಲೆ ಆ ಸ್ತ್ರೀಯರು ರಾತ್ರಿಯಲ್ಲಿ ಪಾನಮಾಡಿರುವ ಸಕ್ಕರೆಯೊಡಗೂಡಿದ ಮದ್ಯದ ವಾಸನೆಯಿಂದಲೂ ಕಲೆತು, ಸುಖಕರವಾಗಿ ಬೀಸುತ್ತಿದ್ದ ಅವರ ಉಸಿರಿನ ಗಾಳಿಯು ರಾವಣನಪ್ಪುನ್ನು ಬಾರಿಬಾರಿಗೂ ಅತ್ಯಾನಂದ ಪಡಿಸುತಿತ್ತು. ಅಲ್ಲಿದ್ದ ಕೆಲವು ರಾವಣ ಪತ್ನಿಯರು ನಡುನಡುವೆ ಎಚ್ಚರಗೊಂಡು, ಪಕ್ಕದಲ್ಲಿ ಮಲಗಿದ್ದ ತಮ್ಮ ಸವತಿಯರ ಮುಖವನ್ನೇ ರಾವಣನ ಮುಖವೆಂದು ತಿಳಿದು, ಅದಕ್ಕೆ ಬಾರಿಬಾರಿಗೂ ಮುತ್ತಿಕ್ಕುತಿದ್ದರು. ಮದಪಾನದಿಂದ ಮೈಮರೆತು ಜ್ಞಾನವಿಲ್ಲದೆ ಬಿದ್ದಿದ್ದ ಆ ಸವತಿಯರೂ ಕೂಡ, ರಾವಣನೇ ತಮ್ಮನ್ನು ಚುಂಬಿಸುವನೆಂದು ತಿಳಿದು ಪ್ರತಿಚುಂಬನದಿಂದ ಆ ಸವತಿಯರನ್ನು ಸಂತೋಷಪಡಿಸುತಿದ್ದರು. ಆಲ್ಲಿ ಕಟಕಾದಿಗಳಿಂದಲಂಕೃತವಾದ ತಮ್ಮ ತೋಳುಗಳನ್ನೇ ತಲೆದಿಂಬಾಗಿ ಮಾಡಿ ಮಲಗಿದ್ದವರು ಕೆಲವರು. ಉಟ್ಟ ಬಟ್ಟೆಯನ್ನೇ ಸುತ್ತಿ ತಲೆಗಿಟ್ಟುಕೊಂಡು ಮಲಗಿದ್ದವರು ಕೆಲವರು. ಇದಲ್ಲದೆ, ಒಬ್ಬಳ ಎದೆಯಮೇಲೆ ಮತ್ತೊಬ್ಬಳು, ಅವಳ ಭುಜದಮೇಲೆ ಇನ್ನೊಬ್ಬಳು, ಅವಳ ತೊಡೆಯಲ್ಲಿ ಬೇರೊಬ್ಬಳು, ಅವಳ ತೋಳಿನಮೇಲೆ ಮತ್ತೊಬ್ಬಳು, ಹೀಗೆ ತಲೆಯನ್ನಿಟ್ಟುಕೊಂಡು ಸಾಲಾಗಿ ಕೆಲವರು ಮಲಗಿದ್ದರು. ಅಲ್ಲಿದ್ದ ಸ್ತ್ರೀಯರೆಲ್ಲರೂ ಹೀಗೆ ಒಬ್ಬರಿಗೊಬ್ಬರು, ಎದೆ, ತೋಳು, ತೊಡೆ ಮುಂತಾದ ಅವಯವಗಳನ್ನೇ ತಲೆದಿಂಬಾಗಿ ಮಾಡಿಕೊಂಡು, ಒಬ್ಬರ ಮೇಲೊಬ್ಬರು ಕೈಕಾಲುಗಳನ್ನು ಬೀಸಿ ಮೈಮರೆತು ಮಲಗಿದ್ದರು. ಆ ಸವತಿಯರಲ್ಲಿ ಒಬ್ಬರಿಗೊಬ್ಬರಿಗೆ ಅಸಹನವೆಂಬುದೇ ಸ್ವಾಭಾವಿಕವಾಗಿದ್ದರೂ, ಮದಪಾನದಿಂದ ಮೈಮರೆತು ಮಲಗಿದ್ದಾಗ, ಅನೇಕ ಭ್ರಮರಗಳಿಗಾಶ್ರಯವಾಗಿ, ದಾರದಲ್ಲಿ ಪೋಣಿಸಲ್ಪಟ್ಟ ಪುಷ್ಪಮಾಲಿಕೆಯಂತೆ ಕಾಣುತ್ತಿದ್ದರು. ಸುಗಂಧನಿಶ್ವಾಸವೆಂಬ ವಸಂತದ ಗಾಳಿಯಿಂದ ಉಲ್ಲಾಸಹೊಂದಿದುದಾಗಿಯೂ, ಒಂದಕ್ಕೊಂದು ಹೆಣೆದಂತೆ ಸೇರಿದುದಾಗಿಯೂ, ನೀವಿ (ನಡುಗಂಟು) ಗಳೆಂಬ ಪುಷ್ಪಸಮೂಹವುಳ್ಳದಾಗಿಯೂ, ಒಂದಕ್ಕೊಂದು ಸೇರಿದ ಸ್ಕಂಧ (ಹೆಗಲು) ವುಳ್ಳದಾಗಿಯೂ, ಮುಂಗುರುಳುಗಳೆಂಬ ಭ್ರಮರಗಳಿಂದ ತುಂಬಿದುದಾಗಿಯೂ ಇದ್ದ ಆ ಸ್ತ್ರೀಯರ ಸಾಲು, ಒಂದು ದೊಡ್ಡ ಹೂ ಬಳ್ಳಿಯ ತೋಟದಂತೆ ಕಾಣುತಿತ್ತು. ಆಯಾ ಸ್ತ್ರೀಯರು ಧರಿಸಿದ್ದ ಪುಷ್ಪಾಭರಣಾದಿಗಳೂ ಅವರ ಅವಯವಗಳೂ ಬೇರೆಯಾಗಿದ್ದರೂ, ಅವರೆಲ್ಲರೂ ಸೇರಿದಂತೆ ಮಾಲಾಕಾರವಾಗಿ ಮಲಗಿದ್ದುದರಿಂದ, ಇದೇ ಇವರವರ ದೇಹವೆಂದು ಪ್ರತ್ಯೇಕಿಸಿ ತಿಳಿಯವುದೇ ಅಸಾಧ್ಯವಾಗಿತ್ತು. ರಾವಣನು ಎಚ್ಚರಗೊಂಡಿರುವಾಗ ಅಜೇತನಗಳಿಗೂ ಅವನ ಪತ್ನಿಯರನ್ನು ಕಣ್ಣಿಟ್ಟು ನೋಡುವುದು ಅಸಾಧ್ಯವೆಂಬುದನ್ನು ತಿಳಿದು, ಅಲ್ಲಿನ ಸುವರ್ಣಸ್ತಂಭಗಳಲ್ಲಿದ್ದ ದೀಪಗಳೂಕೂಡ

ಈಗ ರಾವಣನು ಮೈಮರೆತು ಮಲಗಿರುವಾಗಲೇ ಆ ಸ್ತ್ರೀಯರನ್ನು ಎವೆಮುಚ್ಚದೆ ನಿಶ್ಚಲವಾಗಿ ನೋಡುವಂತೆ ಕಾಣಿಸಿದುವು. ಅಲ್ಲಿ ತಾವೇ ರಾವಣನಲ್ಲಿ ಕಾಮ ಮೋಹಿತರಾಗಿಬಂದ ಎಷ್ಟೋಮಂದಿ ರಾಜಕನ್ಯಕೆಯರೂ, ಪಿತೃದೇವತಾಸ್ತ್ರೀಯರೂ, ದೈತ್ಯಾಂಗನೆಯರೂ, ಗಂಧರ್ವ ರಾಕ್ಷಸಕನ್ಯಕೆಯರೂ ಸೇರಿದ್ದರು. ಮತ್ತೆ ಕೆಲವರನ್ನು ರಾವಣನು ತನ್ನ ಭುಜಬಲದಿಂದಲೂ ಜಯಿಸಿ ತಂದಿಟ್ಟಿದ್ದನು. ಆ ರಾವಣನಿಗೆ ತಾನಾಗಿ ಆಸೆಪಟ್ಟು ಮೋಹಿಸಿ ಹಿಡಿದು ತರಬೇಕಾದ ಸ್ತ್ರೀಯರೊಬ್ಬರೂ ಇಲ್ಲದಿದ್ದರೂ, ಈ ನೆಪದಿಂದಲಾದರೂ ಆ ಸ್ತ್ರೀಯರ ಬಂಧುಗಳೊಡನೆ ತನಗೆ ಯುದ್ಧವು ಲಭಿಸಬಹುದೆಂಬ ಆಸೆಯಿಂದಲೇ ಆ ಸ್ತ್ರೀಯರನ್ನು ಸೆರೆಹಿಡಿದು ತಂದಿದ್ದನು. ಅಲ್ಲಿದ್ದ ಯುವತಿಯರೆಲ್ಲರೂ ತಾವಾಗಿಯೇ ರಾವಣನಲ್ಲಿ ಮೋಹಗೊಂಡು ಬಂದು ಸೇರಿದ್ದವರೇ ಹೊರತು, ಜನಕಪುತ್ರಿಯಾದ ಸೀತೆಯು ಹೊರತು ಬೇರೊಬ್ಬರಲ್ಲಿಯೂ ರಾವಣನು ಮೋಹಗೊಂಡು ತಾನಾಗಿ ಬಲಾತ್ಕರಿಸಿ ತಂದವನಲ್ಲ. ಅಲ್ಲಿ ಯಾವಳೊಬ್ಬಳಾಗಲಿ ರಾವಣನನ್ನು ಬಿಟ್ಟು ಬೇರೊಬ್ಬ ಪುರುಷನನ್ನು ಕಾಮಿಸುವವಳಲ್ಲ. ರಾವಣನಿಗೆ ಮೊದಲು ಬೇರೊಬ್ಬ ಪುರುಷನನ್ನು ವರಿಸಿದವಳೂ ಅಲ್ಲಿ ಯಾರೂ ಇಲ್ಲ. ಇಷ್ಟೇ ಅಲ್ಲದೆ ಅಲ್ಲಿದ್ದ ಸ್ತ್ರೀಯರಲ್ಲಿ ಕುಲಹೀನೆಯಾಗಲಿ, ಅಸಮರ್ಥೆಯಾಗಲಿ, ಉಪಚಾರಹೀನೆಯಾಗಲಿ, ಸತ್ವವಿಲ್ಲದವಳಾಗಲಿ, ರಾವಣನಿಗೆ ಮೋಹಪಾತ್ರಳಲ್ಲದವಳಾಗಲಿ ಯಾವಳೊಬ್ಬಳೂ ಇರಲಿಲ್ಲ. ಶತ್ರುಗಳಲ್ಲಿಯೂ ಸಾಧುಬುದ್ಧಿಯುಳ್ಳ ಆ ಹನುಮಂತನು ಆ ಸ್ತ್ರೀಸಮೂಹವನ್ನು ನೋಡಿ ತನ್ನ ಮನಸ್ಸಿನಲ್ಲಿ [1] ಅಹಾ! ಈ ರಾಕ್ಷಸಪತ್ನಿಯರಂತೆಯೇ ರಾಮನ ಧರ್ಮಪತ್ನಿಯಾದ ಸೀತೆಯೂ, ತನ್ನ ಪತಿಯಾದ ರಾಮನೊಡಗೂಡಿ ಸುಖದಿಂದಿದ್ದಪಕ್ಷದಲ್ಲಿ, ಆಗ ಈ ರಾವಣನ ಬದುಕೂ ಎಷ್ಟೋ ಮೇಲಾಗಿರುತ್ತಿತ್ತು" ಎಂದು ಚಿಂತಿಸುತ್ತ, ತಿರುಗಿ ತನ್ನಲ್ಲಿ ತಾನು "ಛೀ! ಹಾಗೆ ಹೋಲಿಸಬಾರದು! ಈ ರಾಕ್ಷಸಿಯರೆಲ್ಲಿ? ಆ ಸೀತೆಯ ಗುಣಗಳೆಲ್ಲಿ? ಅಯ್ಯೋ!

---

1. ಇಲ್ಲಿ "ಬಭೂವ ಬುದ್ಧಿಸ್ತು ಹರೀಶ್ವರಸ್ಯ ಯದೀದೃಶೀ ರಾಘವಧರ್ಮಪತ್ನೀ। ಇಮಾ ಯಥಾ ರಾಕ್ಷಸರಾಜಭಾರ್ಯಾಸ್ತಥಾಸಪತ್ನ್ಯೇತಿ ಹಿ ಸಾಧುಬುದ್ಧೇಃ॥ ಪುನಶ್ಚ ಸೋಚಾಕಲಯದ್ವಾರ್ತರೂಪೋ ಧ್ರುವಂ ವಿಶಿಷ್ಟಾ ಗುಣತೋ ಹಿ ಸೀತಾ। ಅಥಾಯಮಸ್ಯಾಂ ಕೃತವಾನ್ಹಿ ಹಾರ್ದಂ ಲಙ್ಕೇಶ್ವರಃ ಕಷ್ಟಮನಾರ್ಯಕರ್ಮ॥" ಎಂದು ಮೂಲವು. ಇದಕ್ಕೆ ವ್ಯಾಖ್ಯಾನಗಳಲ್ಲಿ ಬೇರೆ ವಿಧವಾಗಿ ಅನೇಕಾರ್ಥಗಳನ್ನು ವಿವರಿಸಿದ್ದರೂ, ಅವುಗಳಲ್ಲಿ ಮೇಲೆ ಕಾಣಿಸಿರುವ ಅರ್ಥವೇ ಸಮಂಜಸವಾಗಿಯೂ, ಸಮಯೋಚಿತವಾಗಿಯೂ, ಸುಸಂಬದ್ಧವಾಗಿಯೂ ಇರುವುದರಿಂದ ಉಳಿದ ಅರ್ಥಭೇದಗಳೆಲ್ಲವನ್ನೂ ಇಲ್ಲಿ ಕಾಣಿಸಿಲ್ಲ.

ರಾವಣನು ಇಷ್ಟು ಮಹಾವೈಭವವುಳ್ಳವನಾಗಿದ್ದರೂ, ಆ ಸೀತೆಯನ್ನು ಕದ್ದುತಂದು ಇಂತಹ ದುಷ್ಕಾರ್ಯವನ್ನು ಮಾಡಿದನು! ಅಯ್ಯೋ! ಏನು ಕಷ್ಟವು!" ಎಂದು ಮನಸ್ಸಿನಲ್ಲಿ ಕೊರಗುತಿದ್ದನು.

ಇಲ್ಲಿಗೆ ಒಂಬತ್ತನೆಯ ಸರ್ಗವು.

ಹನುಮಂತನು ರಾವಣಾಂತಃಪುರದಲ್ಲಿ ನಾನಾರೀತಿಯಿಂದ ನಿದ್ರಿಸುತಿದ್ದ ಸ್ತ್ರೀಯರನ್ನೂ, ಮಂಡೋದರಿಯನ್ನೂ ಕಂಡು, ಅವಳನ್ನೇ ಸೀತೆಯೆಂದು ಭ್ರಮಿಸಿದುದು.

ಹೀಗೆ ಹನುಮಂತನು ಅಲ್ಲಲ್ಲಿ ನೋಡುತ್ತಿರುವಾಗ, ಮುಂದೆ ನವರತ್ನಖಚಿತವಾಗಿ ಸಾಕ್ಷಾದ್ದೇವೇಂದ್ರನ ಶಯನಗೃಹಕ್ಕೆಣೆಯಾದ ಸ್ಫಟಿಕದ ಶಯನಮಂಟಪವನ್ನು ಕಂಡನು. ಆ ಮಂಟಪಕ್ಕಾದರೋ, ಸುತ್ತಲೂ ಅಂಚಿನಲ್ಲಿ ಚಿತ್ರದ ಕೆಲಸ ಮಾಡಲ್ಪಟ್ಟ ದಂತದ ಕಟ್ಟುಗಳು! ಅದರಿಂದಾಚೆಗೆ ಚಿನ್ನದ ಕುಸುರಿಗಳು! ಅದರಮೇಲೆ ಬೆಲೆಯುಳ್ಳ ಮೇಲಾದ ಹಾಸಿಗೆಗಳು! ಹೀಗೆ ಸರ್ವೋತ್ತಮಸೌಭಾಗ್ಯವುಳ್ಳ ಆ ಮಂಟಪಕ್ಕೆ, ಒಂದು ಕಡೆಯಲ್ಲಿ ಮುತ್ತಿನ ಕುಚ್ಚುಗಳಿಂದಲಂಕೃತವಾಗಿ ಚಂದ್ರಬಿಂಬದಂತಿದ್ದ ಶ್ವೇತಛತ್ರವು ಎತ್ತಿ ಕಟ್ಟಲ್ಪಟ್ಟಿರುವುದು. ಸೂರ್ಯನಂತೆ ದೇದೀಪ್ಯಮಾನವಾದ ಆ ಮಂಟಪದ ಸುತ್ತಲೂ ರಕ್ತಾಶೋಕಪುಷ್ಪಗಳ ಹೂದಂಡೆಗಳು ತೂಗಾಡುವುವು. ಅದರ ನಾಲ್ಕುಕಡೆಗಳಲ್ಲಿಯೂ ಕೀಲುಬೊಂಬೆಗಳು ಎಡೆಬಿಡದೆ ಚಾಮರವನ್ನು ಹಾಕುತ್ತಿರುವುವು. ಆ ಮಂಟಪದಿಂದ ಹಲವು ಬಗೆಯ ಸುಗಂಧಪರಿಮಳವೂ, ಧೂಪದ ವಾಸನೆಯೂ ಘಮಘಮಿಸಿ ಹೊರಟು ಬರುತ್ತಿರುವುದು. ಮೇಲಾದ ದುಪ್ಪಟಿಯೂ, ಉಣ್ಣೆಯ ಚರ್ಮವೂ ಅದರಮೇಲೆ ಹಾಸಲ್ಪಟ್ಟಿರುವುವು. ಸುತ್ತಲೂ ಹೂವಿನ ಕುಚ್ಚುಗಳು ತೂಗಾಡುತ್ತಿರುವುವು. ಹನುಮಂತನು ಈ ಶಯನಮಂಟಪದ ಸೊಗಸನ್ನು ನೋಡುತ್ತಿರುವಾಗಲೇ, ಆ ಮಂಟಪದ ನಡುವೆ ಹಾಸಿಗೆಯಲ್ಲಿ ಮಲಗಿದ್ದ ಒಂದು ದೊಡ್ಡ ರಾಕ್ಷಸಾಕೃತಿಯನ್ನು ಕಂಡನು. ಆ ರಾಕ್ಷಸನಿಗಾದರೋ ಮೇಘದಂತೆ ಕಪ್ಪಾದ ಮೈ! ಕಿವಿಯಲ್ಲಿ ದೇದೀಪ್ಯಮಾನವಾಗಿ ಜ್ವಲಿಸುವ ಕುಂಡಲಗಳು! ಕೆಂಪಾದ ಕಣ್ಣುರಿಪ್ಪೆಗಳು! ಹಾಸಿಗೆಯಮೇಲೆ ಉದ್ದಕ್ಕೆ ನೀಡಿದ ದೊಡ್ಡ ತೋಳುಗಳು! ನಡುವಿನಲ್ಲಿ ಚಿನ್ನದ ಸರಿಗೆಯ ಪಟ್ಟಿಮಡಿ! ಮೈಮೇಲೆ ಸುಗಂಧದಿಂದ ಘಮಘಮಿಸುತ್ತಿರುವ ರಕ್ತ

ಚಂದನದಪಟ್ಟೆ! ಹೀಗೆ ಮಹಾದ್ಭುತರೂಪವುಳ್ಳವನಾಗಿ, ಮೈಯುದ್ದಕ್ಕೂ ಸ್ವರ್ಣಾಭರಣಗಳನ್ನು ತೊಟ್ಟು, ಹಾಸಿಗೆಯಲ್ಲಿ ಮಲಗಿದ್ದ ಆ ರಾಕ್ಷಸನು, ಮಿಂಚಿನಿಂದ ಕೂಡಿ ಸಂಧ್ಯಾರಾಗದಿಂದ ರಂಜಿಸುವ ಕಾಳಮೇಘದಂತೆ ಕಾಣಿಸುತಿದ್ದನು. ದಿವ್ಯಾಭರಣಗಳಿಂದ ಸ್ಫುರದ್ರೂಪಿಯಾಗಿಯೂ, ಕಾಮರೂಪಿಯಾಗಿಯೂ, ರಾಕ್ಷಸಕನ್ಯೆಯರಿಗೆ ಪ್ರಿಯನಾಗಿಯೂ, ಸಮಸ್ತರಾಕ್ಷಸಕುಲವನ್ನೂ ಕ್ಷೇಮದಿಂದ ಪೋಷಿಸತಕ್ಕವನಾಗಿಯೂ ಇರುವ ಆ ರಾಕ್ಷಸನು, ಆ ರಾತ್ರಿಯ ಮದ್ಯಸ್ಥಕ್ರೀಡೆಗಳಿಂದಲೂ, ಮದ್ಯಪಾನದಿಂದಲೂ ಮೈಮರೆತು, ಕೈಕಾಲುಗಳನ್ನು ನೀಡಿ ಮಲಗಿರಲು, ಸಮುದ್ರಮಥನವಾದ ಮೇಲೆ ಆಯಾಸದಿಂದ ಬಳಲಿ, ಗಡುಬಳ್ಳಿಗಳೊಡನೆ ಮಲಗಿರುವ ಮಂದರಪರ್ವತದಂತಿದ್ದನು. ಬುಸುಗುಟ್ಟುವ ಮಹಾಸರ್ಪದಂತೆ ನಿಶ್ವಸಿಸುತ್ತ, ಮೇಲಾದ ಹಾಸಿಗೆಯಲ್ಲಿ ಮಲಗಿದ್ದ ಆ ರಾಕ್ಷಸನನ್ನು ಕಂಡು ಹನುಮಂತನು ಮುಂದೆ ಹೋಗಿ ಅವನೇ ರಾವಣನಿರಬಹುದೆಂದೆಣಿಸಿ "ಛೀ! ಈ ಪಾಪಿಯ ಬಳಿಯಲ್ಲಿಯೇ ನಿಲ್ಲಬಾರದು!" ಎಂದು ಹಾಗೆಯೇ ಬೆಚ್ಚಿಬಿದ್ದವನಂತೆ ಹಿಂದಕ್ಕೆ ಸರಿದನು. ಅಮೇಲೆ ಸೋಪಾನಮಾರ್ಗವಾಗಿ ಬೇರೊಂದು ವೇದಿಕೆಯನ್ನೇರಿ ಕುಳಿತು, ಆ ರಾಕ್ಷಸನು ಮಲಗಿದ ರೀತಿಯನ್ನು ನಟ್ಟಕಣ್ಣಿನಿಂದ ನೋಡುತಿದ್ದನು. ಅವನು ಮಲಗಿದ್ದ ಹಾಸಿಗೆಯು ಮದದಾನೆಯಿಂದಾವರಿಸಲ್ಪಟ್ಟ ದೊಡ್ಡಗಿರಿನದಿಯಂತೆ ತೋರುತಿತ್ತು. ಚಿನ್ನದ ತೋಳ್ಬಳೆಗಳಿಂದಲಂಕೃತಗಳಾಗಿ ಹಾಸಿಗೆಯಲ್ಲಿ ಜಾಚಿದ್ದ ಅವನ ತೋಳುಗಳೆರಡೂ, [1] ಎರಡು ಇಂದ್ರಧ್ವಜಗಳಂತೆ ಶೋಭಿಸುತಿದ್ದವು. ಆ ತೋಳುಗಳಮೇಲೆ ಒಂದುಕಡೆಯಲ್ಲಿ ಐರಾವತದ ಕೊಂಬಿನ ತಿವಿತದಿಂದುಂಟಾದ ರೇಖೆಗಳು! ಮತ್ತೊಂದುಕಡೆಯಲ್ಲಿ ಇಂದ್ರನ ವಜ್ರಪ್ರಹಾರದಿಂದುಂಟಾದ ಗುರುತುಗಳು! ಬೇರೊಂದು ಕಡೆಯಲ್ಲಿ ವಿಷ್ಣುಚಕ್ರಾಹತಿಯಿಂದುಂಟಾದ ಗಾಯಗಳು! ಇವೆಲ್ಲವೂ ಸ್ಪಷ್ಟವಾಗಿ ಕಾಣಿಸುತಿದ್ದುವು. ಮತ್ತು ಆ ತೋಳುಗಳೆರಡೂ ಮಾಂಸಪುಂಜದಪ್ಪನಾಗಿಯೂ, ಒಂದಕ್ಕೊಂದು ಸಮವಾಗಿ ಉಬ್ಬಿದ ಹೆಗಲುಗಳಿಂದ ಅಂದವಾಗಿಯೂ, ಮೈಯಳತೆಗೆ ತಕ್ಕ ಪ್ರಮಾಣವುಳ್ಳವುಗಳಾಗಿಯೂ, ಬಲಪೂರ್ಣಗಳಾಗಿಯೂ ಇದ್ದುವು. ಉಗುರುಗಳೂ ಹೆಬ್ಬೆರಳುಗಳೂ ಶುಭಲಕ್ಷಣಗಳಿಂದೊಪ್ಪುತಿದ್ದವು. ಎಸಳಾದ ಬೆರಳುಗಳು ಅದಕ್ಕೆ ಇನ್ನೂ ಅಂದ

---

1. ರಾವಣನಿಗೆ ಇಪ್ಪತ್ತು ತೋಳುಗಳೂ, ಹತ್ತು ತಲೆಗಳೂ ಇರಬೇಕಾದರೂ, ಇಲ್ಲಿ ಎರಡೇ ತೋಳುಗಳನ್ನು ಹೇಳಿದುದು ಹೇಗೆಂದರೆ; ಅವನು ಕಾಮರೂಪಿಯಾದುದರಿಂದ ಆ ರಾತ್ರಿಯಲ್ಲಿ ರತಿಕ್ರೀಡೆಯ ಸೌಕರ್ಯಕ್ಕಾಗಿ ಎರಡು ತೋಳುಗಳಿಂದಲೇ ಕೂಡಿದ್ದನೆಂದು ಗ್ರಾಹ್ಯವು.

ವನ್ನು ಕೊಡುತಿದ್ದುವುವು. ಒಂದೊಂದು ತೋಳೂ ಒಂದೊಂದು ಬಾಗಿಲಗಳಿಯಂತೆಯೂ, ಮದದಾನೆಯ ಸುಂಡಿಲಿನಂತೆಯೂ ತೋರುತಿತ್ತು. ಅಂದವಾದ ಬಿರಳುಗಳಿಂದ ಕೂಡಿ, ಶುಭ್ರವಾದ ಹಾಸಿಗೆಯ ಮೇಲೆ ಚಾಚಿದ ಆ ತೋಳುಗಳೆರಡು, ಐದು ಹೆಡೆಯುಳ್ಳ ಎರಡು ಮಹಾಸರ್ಪಗಳಂತಿದ್ದುವು. ಆ ತೋಳುಗಳೆರಡೂ, ಮೊಲದ ರಕ್ತದಂತೆ ಕೆಂಪಾಗಿಯೂ, ಸುಗಂಧಶೀತಲವಾಗಿಯೂ ಇದ್ದ ದಿವ್ಯ ಚಂದನದಿಂದ ಲೇಪಿಸಲ್ಪಟ್ಟು, ದಿವ್ಯಾಲಂಕಾರಗಳಿಂದ ಶೋಭಿಸುತಿದ್ದುವು. ಆಗಾಗ ದಿವ್ಯ ಸ್ತ್ರೀಯರಿಂದೊತ್ತಲ್ಪಟ್ಟು ದಿವ್ಯ ಪರಿಮಳಯುಕ್ತವಾಗಿದ್ದ ಆ ತೋಳುಗಳು ಇದುವರೆಗೆ, ಎಷ್ಟೋಮಂದಿ ಯಕ್ಷರನ್ನೂ, ಪನ್ನಗರನ್ನೂ, ಗಂಧರ್ವರನ್ನೂ, ದೇವದಾನವರನ್ನೂ ಗೋಳಾಡಿಸಿರುವುವು. ಹೀಗೆ ಮಂದರಪರ್ವತದಮೇಲೆ ಕೋಪಗೊಂಡು ಮಲಗಿರುವ ಮಹಾಸರ್ಪಗಳಂತೆ, ಹಾಸಿಗೆಯಮೇಲೆ ನೀಡಿದ ರಾವಣನ ತೋಳುಗಳನ್ನು ಅಂಜನೇಯನು ನೋಡಿದನು. ಮಾಂಸತುಂಬಿದ ಆ ತೋಳುಗಳಿಂದ ರಾವಣನು ಎರಡು ಶಿಖರಗಳಿಂದ ಕೂಡಿದ ಒಂದು ದೊಡ್ಡ ಬೆಟ್ಟದಂತೆ ಕಾಣುತಿದ್ದನು. ಆ ರಾಕ್ಷಸನು ಉಸಿರುಬಿಡುವಾಗ ಅವನ ಬಾಯಿಯಿಂದ ವಿಶೇಷವಾದ ಮದ್ಯಗಂಧವೂ, ಅದರೊಡನೆ, ಮಾವು, ಹೊನ್ನೆ, ಪಗಡೆ ಮುಂತಾದ ಹೂಗಳ ಪರಿಮಳವೂ, ಮೃಷ್ಟಾನ್ನರಸದ ಸುವಾಸನೆಯೂ, ಹೊರಟುಬರುತಿತ್ತು. ಅವನ ಉಸಿರಿನ ಗಾಳಿಯೇ ಆ ಮನೆಯ ಅಂಗಳವೆಲ್ಲವನ್ನೂ ತುಂಬಿರುವಂತೆ ತೋರುತಿತ್ತು. ಆ ರಾಕ್ಷಸನ ತಲೆಯಮೇಲೆ ನಿದ್ರೆಯ ಹೊರಳಾಟದಿಂದ ಸ್ವಲ್ಪವಾಗಿ ಕದಲಿದ ರತ್ನಖಚಿತವಾದ ಸುವರ್ಣಕಿರೀಟವೂ, ಕಿವಿಯಲ್ಲಿ ಕಾಂತಿಯಿಂದ ದೇದೀಪ್ಯಮಾನವಾದ ಕರ್ಣಕುಂಡಲಗಳೂ, ನಡುವಿನಲ್ಲಿ ಪಟ್ಟೆಮಡಿಯ ದುಕೂಲವೂ, ಮೈಮೇಲೆ ಬೆಲೆಯುಳ್ಳ ಪೀತಾಂಬರವೂ, ಅಗಲವಾಗಿ ಉಬ್ಬಿದ ಅವನ ಎದೆಯಲ್ಲಿ ರಕ್ತಚಂದನದ ಗುರುತುಳ್ಳ ಮುತ್ತಿನಹಾರಗಳೂ, ಅವನ ರಾಜತೇಜಸ್ಸಿಗೆ ಮತ್ತಷ್ಟು ಕಳೆಯೇರಿಸುವಂತಿದ್ದುವು. ರಕ್ತದಂತೆ ಕೆಂಪೇರಿದ ಅವನ ಕಣ್ಣುಗಳೂ, ಉದ್ದಿನ ರಾಶಿಯಂತೆ ಕಪ್ಪಾದ ಅವನ ದೇಹವೂ, ಬುಸುಗುಟ್ಟುವಂತೆ ಅವನ ಮೂಗಿನ ರಂಧ್ರಗಳಿಂದ ಹೊರಟು ಬರುವ ನಿಶ್ವಾಸವೂ, ನೋಡುವವರಿಗೆ ಭಯವನ್ನುಂಟುಮಾಡುವಂತಿದ್ದುವು. ಹಾಸಿಗೆಯಲ್ಲಿ ಮಲಗಿದ ಆ ರಾಕ್ಷಸನು ಗಂಗಾಪ್ರವಾಹದಲ್ಲಿ ಮಲಗಿದ ಒಂದು ಮದದಾನೆಯಂತಿದ್ದನು. ಆ ಮಂಟಪದ ನಾಲ್ಕು ಕಡೆಗಳಲ್ಲಿಯೂ ಸುವರ್ಣಮಯವಾದ ದೀಪಸ್ತಂಭಗಳು ನಾಲ್ಕು ದಿಕ್ಕುಗಳನ್ನೂ ಬೆಳಗುವಂತೆ ಉರಿಯುತ್ತಿರಲು, ಆ ದೀಪಪ್ರಭೆಯಲ್ಲಿ ಮಿಂಚಿನಲ್ಲಿ ಕಾಣುವ ಮೇಘದಂತೆ ಈ ರಾವಣನ ಅವಯವಗಳೆಲ್ಲವೂ ಕಾಣುತ್ತಿದ್ದುವು. ಅಲ್ಲಿ ಅಂಜನೇಯನು

ಮಹಾದೇಹವುಳ್ಳ ಆ ರಾವಣನ ಕಾಲಿನ ಕಡೆಯಲ್ಲಿ ಸಾಲಾಗಿ ಮಲಗಿದ್ದ ರಾಕ್ಷಸ ಪತ್ನಿಯರನ್ನೂ ಕಂಡನು. ಅವರೊಬ್ಬೊಬ್ಬರೂ ಚಂದ್ರನಂತೆ ಪ್ರಕಾಶಮಾನವಾದ ಮುಖವುಳ್ಳವರಾಗಿಯೂ, ಅಂದವಾದ ಕುಂಡಲವುಳ್ಳವರಾಗಿಯೂ, ಬಾಡದ ಪುಷ್ಪಾಭರಣವುಳ್ಳವರಾಗಿಯೂ ನಿದ್ರಿಸುತಿದ್ದರು. ಇದಲ್ಲದೆ ನೃತ್ತಗೀತವಾದ್ಯಗಳಲ್ಲಿ ಕುಶಲರಾಗಿಯೂ, ಅವಶ್ಯವಿದ್ದಾಗ ರಾವಣನ ಭೋಗಕ್ಕೂ ಯೋಗ್ಯರಾಗಿಯೂ, ಇದ್ದ ಕೆಲವು ರೂಪವತಿಯರು ಉತ್ತಮಾಭರಣಗಳನ್ನು ಧರಿಸಿ ಅಲ್ಲಲ್ಲಿ ಮಲಗಿರುವುದನ್ನೂ ಕಂಡನು. ಅಲ್ಲಿದ್ದ ಒಬ್ಬೊಬ್ಬ ಹೆಂಗಸಿನ ಕಿವಿಗಳಲ್ಲಿಯೂ ವಜ್ರವೈಡೂರ್ಯಗಳಿಂದ ಕೆತ್ತಲ್ಪಟ್ಟ ಸುವರ್ಣಕುಂಡಲಗಳೂ, ಒಬ್ಬೊಬ್ಬರ ಭುಜಗಳಲ್ಲಿಯೂ ರತ್ನಖಚಿತಗಳಾದ ತೋಳ್ಬಳೆಗಳೂ ಒಪ್ಪುತಿದ್ದುವು. ಆ ಸ್ತ್ರೀಯರು ತಲೆಗೆ ಕೈಯಿಟ್ಟು ಮಲಗಿದ್ದಾಗ ಕೈಬಳೆಗಳ ಮತ್ತು ಕಿವಿಯೋಲೆಗಳ ಕಾಂತಿಯೆರಡೂ ಒಂದಾಗಿ ಕಲೆತು ದೇದೀಪ್ಯಮಾನವಾಗಿ ಜ್ವಲಿಸುತಿದ್ದುವು. ಕುಂಡಲಾಲಂಕೃತಗಳಾಗಿ ಚಂದ್ರನಿಗೆಣೆಯಾದ ಅವಳ ಮುಖಗಳಿಂದ, ಆ ಶಯನಮಂಟಪವು ನಕ್ಷತ್ರಗಳಿಂದ ತುಂಬಿದ ಆಕಾಶದಂತೆ ಪ್ರಕಾಶಿಸುತಿತ್ತು. ಆ ರಾಕ್ಷಸಸ್ತ್ರೀಯರೆಲ್ಲರೂ ರಾತ್ರಿಯಲ್ಲಿ ಮದ್ಯಪಾನದಿಂದಲೂ, ಮನ್ಮಥಕ್ರೀಡೆಯಿಂದಲೂ ಬಳಲಿದವರಾಗಿ, ಅಲ್ಲಲ್ಲಿ ತಮತಮಗೆ ಸಿಕ್ಕಿದ ಸ್ಥಳಗಳಲ್ಲಿ ಮೈಮರೆತು ಮಲಗಿದ್ದ ರೀತಿಯನ್ನು ಹನುಮಂತನು ನೋಡುತ್ತ ಬಂದನು. ನೃತ್ಯದಲ್ಲಿ ವಿಶೇಷಪರಿಚಯವುಳ್ಳವಳೊಬ್ಬಳು ತನ್ನ ಗಾಢನಿದ್ರೆಯಲ್ಲಿಯೂ ಆ ವಾಸನೆಯನ್ನು ಬಿಡದೆ, ಭರತಶಾಸ್ತ್ರಾನುಸಾರವಾಗಿಯೇ ಕೈಕಾಲುಗಳನ್ನೊದರುತಿದ್ದಳು. ಹಾಗೆಯೇ ಆ ಸ್ತ್ರೀಯರಲ್ಲಿ, ನದೀಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವ ಕಮಲದಬಳ್ಳಿಯು, ನಡುದಾರಿಯಲ್ಲಿ ಸಿಕ್ಕಿದ ದೋಣಿಗೆ ಸುತ್ತಿಕೊಂಡಂತೆ ವೀಣೆಯನ್ನಪ್ಪಿಕೊಂಡು ಮಲಗಿದ್ದವಳೊಬ್ಬಳು! ಕೈಗೂಸನ್ನು ಕಂಕುಳಲ್ಲಿ ಎತ್ತಿಕೊಂಡಂತೆ, ಡವಣೆಯನ್ನು ಕಕ್ಷದಲ್ಲಿಟ್ಟು ಮಲಗಿದವಳೊಬ್ಬಳು! ಬಹುಕಾಲದಿಂದಗಲಿ ಬಂದನಾಯಕನನ್ನಪ್ಪಿದವಳಂತೆ ತಮಟೆಯನ್ನಪ್ಪಿ ಮಲಗಿದವಳೊಬ್ಬಳು! ಏಕಾಂತದಲ್ಲಿ ತನ್ನ ಪ್ರಿಯನನ್ನಪ್ಪಿಕೊಂಡು ಮಲಗಿದ ಕಾಮಿನಿಯಂತೆ ಕೊಳಲನ್ನು ಕಟ್ಟಿಕೊಂಡು ಮಲಗಿದವಳೊಬ್ಬಳು! ಪತಿಯ ಪಾರ್ಶ್ವದಲ್ಲಿ ಮಲಗಿದವಳಂತೆ ಏಳುತಂತಿಯ ವೀಣೆಯನ್ನು ಪಕ್ಕದಲ್ಲಿಟ್ಟು ಮಲಗಿದವಳೊಬ್ಬಳು! ಹಾಗೆಯೇ ಹೊಂಬಣ್ಣವುಳ್ಳ ಕೋಮಲವಾದ ತನ್ನ ಮೈಯಿಂದ ಮದ್ದಲೆಯನ್ನಪ್ಪಿ ಮೈಮರೆತು ಮಲಗಿದವಳೊಬ್ಬಳು! ಪಣವವೆಂಬ ತನ್ನ ವಾದ್ಯವನ್ನು ಕಕ್ಷದಲ್ಲಿಟ್ಟು ಮದದಿಂದ ಮೈಮರೆತು ಮಲಗಿದವಳೊಬ್ಬಳು! ಒಂದುಕಡೆಯಲ್ಲಿ ಪತಿಯನ್ನೂ, ಮತ್ತೊಂದುಕಡೆಯಲ್ಲಿ ತನ್ನ ಮಗುವನ್ನೂ ಮಲಗಿಸಿ ತಟ್ಟುವಂತೆ, ತನ್ನ ಎರಡು

ಕೈಗಳಿಂದಲೂ ಎರಡು ಡಿಂಡಿಮವಾದ್ಯಗಳನ್ನು ಹಿಡಿದು ಮಲಗಿದವಳೊಬ್ಬಳು! ತಾನು ರಾತ್ರಿಯಲ್ಲಿ ನುಡಿಸುತಿದ್ದ ಆಡಂಬರವೆಂಬ ವಾದ್ಯವನ್ನು ಸ್ತನದ ಮೇಲಿಟ್ಟು ಪಾನಮದದಿಂದ ಮೈಮರೆತು ಮಲಗಿದವಳೊಬ್ಬಳು! ನಿದ್ರೆಯಲ್ಲಿ ಮೈಮರೆತು ಕೈಯಲ್ಲಿ ಹಿಡಿದಿದ್ದ ಜಲಕುಂಭವನ್ನು ಮೇಲೆ ಕವುಚಿಕೊಂಡು, ಅದರಿಂದ ಕದಲಿದ ಕುಂಕುಮಾನುಲೇಪನವುಳ್ಳವಳಾಗಿ, ವಸಂತಕಾಲದಲ್ಲಿ ವಿಚಿತ್ರ ವರ್ಣವುಳ್ಳ ಪುಷ್ಪಗಳಿಂದ ತುಂಬಿದ ಲತೆಗೆ ನೀರೆರೆದಂತೆ ಮಲಗಿದ್ದವಳೊಬ್ಬಳು! ಸುವರ್ಣಕುಂಭಗಳಿಗೆ ಸಮಾನವಾದ ತನ್ನ ಸ್ತನಗಳನ್ನು ತನ್ನ ಕೈಯಿಂದಲೇ ಅಪ್ಪಿ ಮಲಗಿದ್ದವಳೊಬ್ಬಳು! ಸವಿಾಪದಲ್ಲಿದ್ದ ತನ್ನ ಸಖಿಯನ್ನೇ ಆಲಿಂಗಿಸಿ ಮದದಿಂದ ಮೈತಿಳಿಯದೆ ಮಲಗಿದ್ದವಳೊಬ್ಬಳು! ಹೀಗೆ ಅಲ್ಲಿ ಅನೇಕ ಸ್ತ್ರೀಯರು ಕಾಮುಕರನ್ನಪ್ಪಿದ ಕಾಮಿನಿಯರಂತೆ, ತಮ್ಮ ತಮ್ಮ ವಿಚಿತ್ರವಾದ್ಯಗಳನ್ನು ತಮ್ಮ ಸ್ತನಾಗ್ರದ ಮೇಲಿಟ್ಟು ಮಲಗಿದ್ದರು. ಆಂಜನೇಯನು ಈ ಸ್ತ್ರೀಯರೆಲ್ಲರನ್ನೂ ನೋಡುತ್ತಿರುವಾಗ, ಆ ಮಂಟಪದ ಒಂದುಕಡೆಯಲ್ಲಿ ಪ್ರತ್ಯೇಕವಾದ ಹಾಸಿಗೆಯ ಮೇಲೆ ಏಕಾಂತಸ್ಥಳದಲ್ಲಿ ಮಲಗಿದ್ದ ದಿವ್ಯರೂಪವುಳ್ಳ ಒಂದು ಸ್ತ್ರೀವ್ಯಕ್ತಿಯನ್ನು ಕಂಡನು. ಅವಳು ತನ್ನ ದೇಹಕಾಂತಿಯಿಂದಲೇ ಆ ವಿಮಾನಕ್ಕೆ ಒಂದು ಅಸಾಧಾರಣಕಾಂತಿಯನ್ನು ಉಂಟುಮಾಡುವಂತಿದ್ದಳು. ಗೌರವರ್ಣವುಳ್ಳ ಆಕೆಯ ದೇಹಕಾಂತಿಯು ಸುವರ್ಣಚ್ಛಾಯೆಯಿಂದ ಹೊಳೆಯುತಿತ್ತು. ರಾವಣನಿಗೆ ಆಕೆಯೇ ಪ್ರಾಣಪ್ರಿಯೆಯಂತೆಯೂ, ಆ ಅಂತಃಪುರಕ್ಕೆ ಆಕೆಯೇ ಅಧಿದೇವತೆಯಂತೆಯೂ ತೋರುತಿದ್ದಳು. ಸಣ್ಣನಡುವಿನಿಂದಲೂ, ಅಂದವಾದ ರೂಪದಿಂದಲೂ ಕೂಡಿ ಸರ್ವಾಲಂಕಾರಭೂಷಿತೆಯಾಗಿ ಹಾಸಿಗೆಯಮೇಲೆ ಮಲಗಿದ್ದ ಆ ಸ್ತ್ರೀಯ ರೂಪವನ್ನೂ, ಯೌವನದ ಮೇಲ್ಮೆಯನ್ನೂ ನೋಡಿದಾಗ, ಹನುಮಂತನಿಗೆ ಅವಳೇ ಸೀತೆಯೆಂಬ ಶಂಕೆಯುಂಟಾಯಿತು. ಅವನ ಮನಸ್ಸಿನಲ್ಲಿ ಮಿತಿಮೀರಿದ ಸಂತೋಷವೂ ಹುಟ್ಟಿತು. ಅವನಿಗೆ ಮೈತಿಳಿಯದಷ್ಟು ಆನಂದವುಂಟಾಯಿತು. ಆಗ ಅವನಿಗುಂಟಾದ ಆ ಆನಂದಕ್ಕೆ ಪಾರವೇ ಇರಲಿಲ್ಲ. ಹಾಗೆ ಹರ್ಷಪರವಶನಾದ ಆಂಜನೇಯನು, ಒಮ್ಮೆ ಕೈತಟ್ಟುವನು! ಒಮ್ಮೆ ತನ್ನ ಬಾಲವನ್ನೆತ್ತಿ ಮುತ್ತಿಕ್ಕುವನು! ತನ್ನಲ್ಲಿಯೇ ತಾನು ಹಿಗ್ಗುವನು! ಒಮ್ಮೆ ಹಾಡುವನು! ಒಮ್ಮೆ ಕುಣಿಯುವನು! ನಿಂತಕಡೆಯಲ್ಲಿ ನಿಲ್ಲದೆ ಸುತ್ತುವನು! ಆಲ್ಲಿನ ಕಂಬಗಳನ್ನೇರಿ ಧುಮುಕುವನು! ಹೀಗೆ ಹನುಮಂತನು ಸಂತೋಷಪರವಶನಾಗಿ, ತನ್ನ ಜಾತಿಸ್ವಭಾವಕ್ಕೆ ತಕ್ಕ ಕಪಿಚೇಷ್ಟೆಗಳೆಲ್ಲವನ್ನೂ ಕ್ಷಣಮಾತ್ರದಲ್ಲಿ ಚೆನ್ನಾಗಿ ತೋರಿಸಿಬಿಟ್ಟನು.

ಇಲ್ಲಿಗೆ ಹತ್ತನೆಯ ಸರ್ಗವು.

ಹನುಮಂತನು ಅಲ್ಲಿದ್ದ ಮಂಡೋದರಿಯನ್ನು ಸೀತೆಯಲ್ಲವೆಂದು
ನಿಶ್ಚಯಿಸಿ, ಸವಿೂಪದಲ್ಲಿದ್ದ ಪಾನಭೂಮಿಯಲ್ಲಿ ಹುಡುಕಿದುದು.
ಅಲ್ಲಿಂದ ಪುನಃ ಅಂತಃಪುರಕ್ಕೆ ಬಂದುದು.
ಪಾನಭೂಮಿ ವರ್ಣನವು.

ಆಮೇಲೆ ಹನುಮಂತನು ತನ್ನಲ್ಲಿ ತಾನು ಜೆನ್ನಾಗಿ ಚಿಂತಿಸಿ, ಛೀ! ಇವಳನ್ನು ಸೀತೆಯೆಂದೆಣಿಸುವುದೇ ಅನುಚಿತವು! ಆ ಸೀತೆಯ ಗುಣವೆಲ್ಲಿ! ಇವ ಳೆಲ್ಲಿ!" ಎಂದು ಆ ಭ್ರಾಂತಿಯನ್ನು ಬಿಟ್ಟು, ಮನಸ್ಸಿಗೆ ನಿರ್ಧರಮಾಡಿ ಕೊಂಡನು. ಸೂಕ್ಷ್ಮಬುದ್ಧಿಯುಳ್ಳ ಈ ಹನುಮಂತನಿಗೆ ಆ ಸೀತೆಯ ವಿಷಯ ವಾಗಿ ಬೇರೆ ಚಿಂತೆಯುಂಟಾಯಿತು. ಅವನು ಆ ಸೀತಾದೇವಿಯ ಗುಣವನ್ನೇ ಮನಸ್ಸಿನಲ್ಲಿ ಭಾವಿಸುತ್ತ, "ಮಹಾಪತಿವ್ರತೆಯಾದ ಆ ಸೀತೆಯು ಪತಿ ಯಾದ ರಾಮನನ್ನಗಲಿರುವಾಗಲೂ ಹೀಗೆ ಸುಖವಾಗಿ ನಿದ್ರಿಸುವಳೆ! ಎಂದಿಗೂ ಇರದು! ಮೊದಲು ಆಹಾರವನ್ನೇ ಬಿಟ್ಟುಬಿಡುವಳು. ಹೀಗೆ ಅಲಂಕರಿಸಿ ಕೊಳ್ಳುವುದೆಂದರೇನು? ಆ ವಳಿಗೆ ಮದ್ಯಪಾನವೆಂದರೇನು? ರಾಮನನ್ನು ಹೊರತು ದೇವೇಂದ್ರನನ್ನಾದರೂ ಅವಳು ಸೇವಿಸತಕ್ಕವಳಲ್ಲ. ದೇವತೆಗಳಲ್ಲಿಯೂ ರಾಮನಿಗೆಣೆಯಾದ ಬೇರೊಬ್ಬ ಪುರುಷನಿಲ್ಲ. ಎಂದಿಗೂ ಇವಳು ಸೀತೆಯಲ್ಲ! ಇವಳು ಯಾರೋ ಬೇರೆಯಾಗಿರಬೇಕು," ಎಂದು ನಿಶ್ಚಯಿಸಿಕೊಂಡು, ಆಗಲೇ ಆ ಹನುಮಂತನು ಅಂತಃಪುರವನ್ನು ಬಿಟ್ಟುಹೊರಟು, ಅದರ ಸವಿೂಪ ದಲ್ಲಿದ್ದ ಪಾನಭೂಮಿಗೆ ಬಂದು, ಅಲ್ಲಿ ಸುತ್ತ ನೋಡಿದನು. ಅಲ್ಲಿಯೂ ಕೆಲವು ಸ್ತ್ರೀಯರು ಮಲಗಿದ್ದುದನ್ನು ಕಂಡನು. ಅವರಲ್ಲಿಯೂ ಮನ್ಮಥಕ್ರೀಡೆಯಿಂದ ಬಳಲಿದವರು ಕೆಲವರು; ಮದ್ಯಪಾನದಿಂದ ಮೈಮರೆತು ಮಲಗಿದ್ದವರು ಕೆಲವರು. ಹಾಡಿಹಾಡಿ ಶ್ರಮಪಟ್ಟು ನಿದ್ರಿಸಿದವರು ಕೆಲವರು. ಮೈತಿಳಿ ಯದೆ ರಾತ್ರಿಯೆಲ್ಲವೂ ಕುಣಿದಾಡಿ ಆಯಾಸಪಟ್ಟು ಮಲಗಿದ್ದವರು ಕೆಲವರು. ಹಾಗೆಯೇ ತಾವು ಹಿಡಿದಿದ್ದ ಮದ್ದಲೆಗಳನ್ನೂ, ಮೃದಂಗಗಳನ್ನೂ, ತಾವು ಕುಳಿತಿದ್ದ ಪೀಠಗಳನ್ನೂ ತಲೆಗಿಟ್ಟು ಮಲಗಿದವರು ಕೆಲವರು. ಕ್ರಮವಾಗಿ ಹಾಸಿಗೆಯನ್ನು ಹಾಸಿ ಮಲಗಿದ್ದವರು ಕೆಲವರು. ಹೀಗೆ ನಾನಾರೀತಿಯಲ್ಲಿ ನಿದ್ರಾವಶರಾದ ಸ್ತ್ರೀಯರಿಂದ ತುಂಬಿದ ಆ ಪಾನಭೂಮಿಯನ್ನು ಹನುಮಂತನು ಒಂದಾವರ್ತಿ ಆಪಾತದಿಂದ ಕಣ್ಣಿಟ್ಟುನೋಡಿ, ಅಲ್ಲಿಯೂ ಸೀತೆಯನ್ನು ಕಾಣದೆ, ಅಲ್ಲಿಂದ ಹಿಂತಿರುಗಿ ಪುನಃ ರಾವಣನ ಶಯನಗೃಹಕ್ಕೇ ಬಂದನು. ಅಲ್ಲಿ ರಾವ ಣನ ಸುತ್ತಲೂ ಉತ್ತಮಸ್ತ್ರೀಯರು ಸಾವಿರಾರುಸಂಖ್ಯೆಯಿಂದ ಮಲಗಿರುವುದನ್ನು

ಕಂಡು, ಆ ಸ್ತ್ರೀಯರಲ್ಲಿ ಒಬ್ಬೊಬ್ಬರನ್ನೂ ಚೆನ್ನಾಗಿ ಗಮನಿಸಿ ನೋಡತೊಡಗಿದನು. ಅವರಲ್ಲಿ ಒಬ್ಬೊಬ್ಬರೂ ಸರ್ವಾಭರಣಭೂಷಿತರು! ಒಬ್ಬೊಬ್ಬರೂ ತಮ್ಮ ಪ್ರಿಯನಾದ ರಾವಣನ ರೂಪಸಂಪತ್ತಿಯನ್ನೇ ಹೇಳಿಕೇಳಿ ಹಿಗ್ಗುವ ಸ್ವಭಾವವುಳ್ಳವರು! ಒಬ್ಬೊಬ್ಬರೂ ಭರತಶಾಸ್ತ್ರಾನುಸಾರವಾಗಿ ಗಾನಗಳ ಅರ್ಥವನ್ನು ವಿವರಿಸುವ ಬುದ್ಧಿಚಾತುರ್ಯವುಳ್ಳವರು! ಒಬ್ಬೊಬ್ಬರೂ ದೇಶಕಾಲಗಳನ್ನು ಬಲ್ಲವರು. ಒಬ್ಬೊಬ್ಬರೂ ಕಾಲೋಚಿತನಾಗಿ ಮೂಡತಕ್ಕವರು. ಇಂತಹ ಸ್ತ್ರೀಯರೊಡನೆ ರಾವಣನು ಯಥೇಚ್ಛವಾಗಿ ಬಾಹ್ಯಸುರತಗಳಿಂದಲೂ, ಬಂಧನವೈಚಿತ್ರ್ಯಗಳಿಂದಲೂ ರಮಿಸಿ, ಆಯಾಸದಿಂದ ಅವರ ನಡುವೆ ಮಲಗಿರುವುದನ್ನೂ ಕಂಡನು. ಈ ಸ್ತ್ರೀಯರನಡುವೆ ಮಲಗಿದ್ದ ಮಹಾಬಾಹುವಾದ ರಾವಣನು, ದನಗಳ ಮಂದೆಯ ನಡುವೆ ಶೋಭಿಸುವ ದೊಡ್ಡ ಗೂಳಿಯಂತಿದ್ದನು. ಮತ್ತು ಆ ಸ್ತ್ರೀಯರಿಂದ ಪರಿವೃತನಾದ ರಾಕ್ಷಸೇಶ್ವರನು, ಕಾಡಿನಲ್ಲಿ ಹೆಣ್ಣಾನೆಗಳ ಗುಂಪಿನಲ್ಲಿರುವ ಅನೆಯ ಸಲಗದಂತೆ ಕಾಣುತ್ತಿದ್ದನು. ಹನುಮಂತನು ಎಷ್ಟಾವರ್ತಿ ನೋಡಿದರೇನು? ಅವನಿಗೆ ಸೀತೆಯು ಗೋಚರಿಸಲಿಲ್ಲ. ಅಲ್ಲಿಂದ ಹಿಂತಿರುಗಿ ಪುನಃ ಪಾನಭೂಮಿಗೆ ಬಂದು ಅಲ್ಲಿಯೂ ಚೆನ್ನಾಗಿ ಹುಡುಕುವ ದಿಕ್ಕಾರಂಭಿಸಿದನು. ಆ ಪ್ರದೇಶವಾದರೋ ರಾಕ್ಷಸರಿಗೆ ಬೇಕಾದ ಸಮಸ್ತ ವಸ್ತುಗಳಿಂದಲೂ ತುಂಬಿರುವುದು. ಒಂದು ಕಡೆಯಲ್ಲಿ ಜಿಂಕೆಗಳ ಮಾಂಸವೂ, ಮತ್ತೊಂದು ಕಡೆಯಲ್ಲಿ ಎಮ್ಮೆಗಳ ಮಾಂಸವೂ, ಮತ್ತೊಂದು ಕಡೆಯಲ್ಲಿ ಹಂದಿಗಳ ಮಾಂಸವೂ, ಬೇರೆಬೇರೆ ರಾಶಿಹಾಕಲ್ಪಟ್ಟಿರುವುವು. ಅಲ್ಲಲ್ಲಿ ವಿಸ್ತಾರವಾದ ಚಿನ್ನದ ತಟ್ಟೆಗಳಲ್ಲಿ ಅರ್ಧಕಚ್ಚಿ ಮಡಗಿದ ನವಿಲುಗಳೂ, ಕೋಳಿಗಳೂ ಕಾಣುತ್ತಿರುವುವು. ಒಂದು ಕಡೆಯಲ್ಲಿ ಹಂದಿಗಳನ್ನೂ, [1] ವಾರ್ಧ್ರಾಣಸನೆಂಬ

1. ವಾರ್ಧ್ರಾಣಸವೆಂದರೆ "ಕೃಷ್ಣಗ್ರೀವೋ ರಕ್ತಶಿರಾಶ್ಚೈತಪಕ್ಷೋ ವಿಹಂಗಮಃ" ಎಂಬಂತೆ ಕಪ್ಪಾದ ಕಂಠದಿಂದಲೂ, ಕೆಂಪಾದ ತಲೆಯಿಂದಲೂ, ಬಿಳೀ ರೆಕ್ಕೆಗಳಿಂದಲೂ ಕೂಡಿದ ಒಂದು ಜಗೆಯ ಹಕ್ಕಿಯೆಂದು ವಿಷ್ಣುಧರ್ಮದಲ್ಲಿ ಹೇಳಲ್ಪಟ್ಟಿರುವುದು. ಅಥವಾ "ತ್ರಿಪಿಬಂ ತ್ರಿಂದ್ರಿಯಕ್ಷೀಣಂ ಶ್ವೇತಂ ವೃದ್ಧಪುರಾಣಕಂ। ವಾರ್ಧ್ರಾಣಸಂ ಜ್ಞಂ ಪ್ರಾಹುರ್ವಾಜ್ಞಿಕಾಶ್ಚಾದ್ಧಕರ್ಮಜ್ಞಾ" ಎಂಬುದಾಗಿ ಬಾಯಿ, ಕಿವಿ, ಮೂಗು ಈ ಮೂರವಯವಗಳಿಂದ ಪಾನಮಾಡುವ ಸ್ವಭಾವವುಳ್ಳುದಾಗಿ, ಇಂದ್ರಿಯಕ್ಷೀಣವಾಗಿರುವ ಬೀಳಬಣ್ಣದ ಮುದುಮೇಕೆಯೆಂದು ಯಜ್ಞಶಾಸ್ತ್ರಜ್ಞರು ಹೇಳುವರು. ಮೇಲೆ ಹೇಳಿದ ಲಕ್ಷಣಗಳಿಂದಲೇ ಕೂಡಿ, ಯೂಷದ ಬಳಿಗೆ ಬಂದ ಕೆಂಪುಬಣ್ಣದ ಮೇಕೆಯೆಂದು ಮತ್ತೆ ಕೆಲವರು ಹೇಳುವರು. ಹಲಾಯುಧ : ನಿಘಂಟುವಿನಲ್ಲಿ "ವಾರ್ಧ್ರಾಣಸಃ ಖಡ್ಗಮೃಗಃ" ಎಂಬುದಾಗಿ ಹೇಳಿರುವಂತೆ ಖಡ್ಗಮೃಗವೆಂಬ ಅರ್ಥವನ್ನೂ ಗ್ರಹಿಸಬಹುದು.

ಜಂತುಗಳನ್ನೂ ಪಕ್ವಮಾಡಿ ಉಪ್ಪುಹಾಕಿದ ಮೊಸರಿನಲ್ಲಿ ನೆನೆಸಿದ ಉಪ್ಪೇರಿಗಳು! ಮತ್ತೊಂದು ಕಡೆಯಲ್ಲಿ ಮುಳ್ಳು ಹಂದಿಯ ಮಾಂಸಗಳು! ಬೇರೊಂದು ಕಡೆಯಲ್ಲಿ ಜಿಂಕೆಯ ಮಾಂಸಗಳು! ಇನ್ನೊಂದು ಕಡೆಯಲ್ಲಿ ನವಿಲಿನ ಮಾಂಸಗಳು! ಇವೆಲ್ಲವನ್ನೂ ನೋಡುತ್ತ ಬಂದನು. ಮತ್ತು ಅಲ್ಲಲ್ಲಿ ಚೆನ್ನಾಗಿ ಪಕ್ವಮಾಡಿ ಸಿದ್ಧಪಡಿಸಿದ ಕ್ರಕರಪಕ್ಷಿಯ ಮಾಂಸಗಳನ್ನೂ, ಅರ್ಧಭಕ್ಷಿತಗಳಾದ ಚಕೋರಗಳನ್ನೂ, ಚೆನ್ನಾಗಿ ಬೇಯಿಸಿದ ಎಮ್ಮೆಯ ಮಾಂಸಗಳನ್ನೂ, ಮಾನುಗಳನ್ನೂ, ಮೇಕೆಯ ಮಾಂಸಗಳನ್ನೂ ಕಂಡನು. ಇದಲ್ಲದೆ ಅಲ್ಲಲ್ಲಿ ಉತ್ತಮವಾದ ಲೇಹ್ಯವಸ್ತುಗಳನ್ನೂ, ಪಾನದ್ರವ್ಯಗಳನ್ನೂ, ಬಗೆಬಗೆಯ ಭೋಜನಪದಾರ್ಥಗಳನ್ನೂ ಕಂಡನು. ಉಪ್ಪುಹುಳಿಗಳನ್ನು ಮಾತ್ರ ಚೆನ್ನಾಗಿ ಎತ್ತಿ ತೋರಿಸುವಂತೆ ಪಕ್ವಮಾಡಿದ [1] ರಾಗಷಾಡಬಗಳೆಂಬ ಷಡ್ರಸೋಪೇತಗಳಾದ ಭಕ್ಷ್ಯವಿಶೇಷಗಳನ್ನು ಕಂಡನು. ಆ ಪಾನಭೂಮಿಯು ರಕ್ತಮಾಂಸಗಳಿಂದ ಭಯಂಕರವಾಗಿದ್ದರೂ, ಅಲ್ಲಲ್ಲಿ ಕಿತ್ತುಬಿದ್ದ ರಾಕ್ಷಸ ಸ್ತ್ರೀಯರ ಕಂಠಾಭರಣಗಳಿಂದಲೂ, ಕಾಲಂದುಗೆಗಳಿಂದಲೂ, ತೋಳ್ಬಳೆಗಳಿಂದಲೂ, ಪಾನಪಾತ್ರೆಗಳಿಂದಲೂ, ಬಗೆಬಗೆಯ ಹಣ್ಣುಗಳಿಂದಲೂ, ಅಲ್ಲಲ್ಲಿ ಜೆಲ್ಲಿದ ಹೂಗಳಿಂದಲೂ, ಒಂದು ವಿಶೇಷ ಕಾಂತಿಯಿಂದ ಕೂಡಿದಂತೆ ಪ್ರಕಾಶಿಸುತ್ತಿತ್ತು. ಅಲ್ಲಲ್ಲಿ ಚದರಿದ ರತ್ನಮಯಗಳಾದ ಶಯನಾಸನಗಳಿಂದ ಆ ಪಾನಭೂಮಿಯು ಬೆಂಕಿಯಿಲ್ಲದೆಯೇ ಉರಿಯುವಂತೆ ಕಾಣುತಿತ್ತು. ಮತ್ತು ಅಲ್ಲಿ ಚತುರರಾದ ಆಡಿಗೆಯವರಿಂದ ಬೇರೆಬೇರೆ ವಿಧದಲ್ಲಿ ಸಂಸ್ಕರಿಸಿಡಲ್ಪಟ್ಟ ಬಗೆಬಗೆಯ ಮಾಂಸಗಳು ರಾಶಿಹಾಕಲ್ಪಟ್ಟಿದ್ದುವು. ಹನುಮಂತನು ಇವೆಲ್ಲವನ್ನೂ ನೋಡುತ್ತ ಬಂದು, ಮುಂದೆ ಬಗೆಬಗೆಯ ಮದ್ಯವಿಶೇಷಗಳಿಂದ ತುಂಬಿದ ಪಾತ್ರೆಗಳ ಸಾಲನ್ನು ಕಂಡನು. ಆ ಮದ್ಯಗಳಲ್ಲಿ ಅಮೃತಮಥನ ಕಾಲದಿಂದಲೂ ಸಂಗ್ರಹಿಸಲ್ಪಟ್ಟ ದೇವಯೋಗ್ಯವಾದ ಮದ್ಯಗಳು ಕೆಲವು. ಸಕ್ಕರೆಯಿಂದ ತೆಗೆದ

---

1. ರಾಗವೆಂದರೆ ಬೀಜಸಾಸುವೆಯೆಂದೂ, ಷಾಡಬವೆಂದರೆ ಷಡ್ರಸಮಿಶ್ರವಾದ ಒಂದು ಬಗೆಯ ಭಕ್ಷ್ಯವೆಂದೂ ಸೂಪಶಾಸ್ತ್ರವು. ಆದರೆ ಪ್ರದೀಪವೆಂಬ ಗ್ರಂಥದಲ್ಲಿ "ಸಿತಾ ಮಧ್ವಾದಿ ಮಧುರಾ ರಾಗಾಸ್ತೇ ಸ್ವಚ್ಛತಾಂ ಗತಾಃ। ತೇ ಸಾನ್ವಾ ಷ್ಟಾಡಬಾ ಲೇಹ್ಯಾಸ್ತೇ ವಸ್ತ್ರಗಳಿತಾ ಇತಿ॥ ಸಿತಾಮಧ್ವಾದಿಮಧುರೋ ದ್ರಾಕ್ಷಾ ದಾಡಿಮಜೋ ರಸಃ। ವಿರಳಶ್ಚೇತ್ಕೃತೋ ರಾಗಸಾನ್ದ್ರಶ್ಚೇತ್ ಷಾಡಬಸ್ತ್ವಯಂ॥" ಎಂಬುದಾಗಿ, ಸಕ್ಕರೆ, ಜೇನು, ದ್ರಾಕ್ಷೆ, ದಾಳಿಂಬ, ಇವುಗಳ ರಸದಿಂದ ಮಾಡಿದ ಪಾಕವು ರಾಗವೆಂದೂ, ಅದನ್ನೇ ಬಟ್ಟಿಯಲ್ಲಿ ತೋಧಿಸಿದ ರಸವು ಷಾಡಬವೆಂದೂ ಕರೆಯಲ್ಪಡುವುದಾಗಿ ಹೇಳಿದೆ.

ಮದ್ಯಗಳು ಕೆಲವು. ಜೇನಿನಿಂದ ಮಾಡಿದ ಮದ್ಯಗಳು ಕೆಲವು ಪುಷ್ಪರಸದಿಂದ ತೆಗೆದ ಮದ್ಯಗಳು ಕೆಲವು. ಹಣ್ಣುಗಳ ರಸದಿಂದ ತೆಗೆದ ಮದ್ಯಗಳು ಕೆಲವು. ಹೀಗೆ ನಾನಾಬಗೆಯ ಮದ್ಯಗಳನ್ನು ಕಂಡನು. ಮತ್ತು ಈ ಮದ್ಯ ಮಾಂಸಗಳ ಮೇಲೆ ವಾಸನಾರ್ಥವಾಗಿ ಜೆಲ್ಲಿದ ಸಾಂಬಾರದ ಪುಡಿಗಳನ್ನೂ ಕಂಡನು. ಹೀಗೆ ಬೇರೆಬೇರೆ ವಿಧದಿಂದ ಸಂಸ್ಕರಿಸಿಡಲ್ಪಟ್ಟ ಮದ್ಯಮಾಂಸಗಳಿಂದಲೂ, ಚಿತ್ರವಿಚಿತ್ರಗಳಾದ ಪುಷ್ಪಮಾಲಿಕೆಗಳಿಂದಲೂ, ಬಂಗಾರದ ಗಿಂಡಿಗಳಿಂದಲೂ, ಅತಿಮನೋಹರವಾಗಿದ್ದ ಆ ಪಾನಭೂಮಿಯೆಲ್ಲವನ್ನೂ ಅಂಜನೇಯನು ಸುತ್ತಿನೋಡಿದನು. ನಡುನಡುವೆ ಬೆಳ್ಳಿಬಂಗಾರದ ಪಾತ್ರೆಗಳಲ್ಲಿ ಪೂರ್ಣವಾಗಿ ತುಂಬಿಟ್ಟ ಮೇಲಾದ ರಸಾಯನಗಳನ್ನೂ, ಮತ್ತು ಅಲ್ಲಲ್ಲಿ ಇನ್ನೂ ಬೇರೆಬೇರೆ ರಸದ್ರವ್ಯಗಳಿಂದ ತುಂಬಿದ ಬೆಳ್ಳಿ ಬಂಗಾರದ ಪಾತ್ರೆಗಳನ್ನೂ, ರತ್ನಮಯವಾದ ಪಾತ್ರೆಗಳನ್ನೂ ಕಂಡನು. ಅವುಗಳಲ್ಲಿ ಅರ್ಧಕುಡಿದು ಮಿಗಿಸಿದ ಪಾತ್ರೆಗಳು ಕೆಲವು. ನಿಶ್ಶೇಷವಾಗಿ ಕುಡಿದಿಟ್ಟ ಬರೀಪಾತ್ರೆಗಳು ಕೆಲವು. ಕುಡಿಯದೆ ತುಂಬಿಟ್ಟಿದ್ದ ಪಾತ್ರೆಗಳು ಕೆಲವು! ಇವೆಲ್ಲವನ್ನೂ ನೋಡುತ್ತ ಬಂದನು. ಹೀಗೆ ಒಂದು ಕಡೆಯಲ್ಲಿ ಬಗೆಬಗೆಯ ಭಕ್ಷ್ಯದ ಸಾಲುಗಳನ್ನೂ, ಮತ್ತೊಂದು ಕಡೆಯಲ್ಲಿ ಅವರವರಿಗಾಗಿ ವಿಭಾಗಿಸಿಡಲ್ಪಟ್ಟ ಮದ್ಯಗಳನ್ನೂ, ಬೇರೊಂದು ಕಡೆಯಲ್ಲಿ ಅರ್ಧತಿಂದು ಮಿಗಿಸಿದ ಅನ್ನದ ಸಾಲುಗಳನ್ನೂ ನೋಡುತ್ತ ಬಂದನು. ಮತ್ತು ಅಲ್ಲಲ್ಲಿ ಒಡೆದು ಬಿದ್ದ ಕರಗಗಳನ್ನೂ, ಉರುಳಾಡುತಿದ್ದ ಗಡಿಗೆಗಳನ್ನೂ, ಕಿತ್ತೆಸೆದ ಪುಷ್ಪಹಾರಗಳನ್ನೂ, ಉದಿರಿದ ಹಣ್ಣುಗಳನ್ನೂ, ನಾನಾರೀತಿಯಲ್ಲಿ ಕೆದರಿದ ಹಾಸಿಗೆಗಳನ್ನೂ, ಅಲ್ಲಲ್ಲಿ ಜೆಲ್ಲಿದ ಮದ್ಯಗಳನ್ನೂ ನೋಡಿದನು. ಆಲ್ಲಿನ ಸ್ತ್ರೀಯರಲ್ಲಿ ಒಬ್ಬರನ್ನೊಬ್ಬರು ಆಲಿಂಗಿಸಿ ಮಲಗಿದ್ದವರು ಕೆಲವರು! ನಿದ್ರೆಯಲ್ಲಿ ಮೈತಿಳಿಯದೆ ಮತ್ತೊಬ್ಬರ ಸೀರೆಯನ್ನು ಸೆಳೆದು ತಮ್ಮ ಮೈಗೆ ಸುತ್ತಿಕೊಂಡು ಮಲಗಿದ್ದವರು ಕೆಲವರು! ಈ ಬಗೆಯ ವೈಚಿತ್ರ್ಯಗಳನ್ನೂ ನೋಡುತ್ತ ಬಂದನು. ಅವರ ಉಸಿರಿನ ಗಾಳಿಯಿಂದ ಅವರ ಮೇಲೆ ಹಾಕಿದ್ದ ಬಟ್ಟೆಯೂ, ಧರಿಸಿದ್ದ ಪುಷ್ಪಹಾರವೂ, ಮಂದ ಮಾರುತದಿಂದ ಅಲುಗುವಂತೆ ಮೆಲ್ಲಗೆ ಅಲುಗುತಿದ್ದುವು. ಅಲ್ಲಲ್ಲಿ ಶೀತಲವಾದ ಚಂದನವನ್ನೂ, ರುಚಿಯಾದ ಮದ್ಯವನ್ನೂ, ಬಗೆಬಗೆಯ ಪುಷ್ಪಮಾಲಿಕೆಗಳನ್ನೂ, ಅನೇಕವಿಧದ ಧೂಪಗಳನ್ನೂ, ನಾನಾರಸಾದಿಗಳನ್ನೂ, ಸ್ನಾನಾರ್ಹಗಳಾದ ಚಂದನಗಳನ್ನೂ, ಕಲೆಗೆ ಕಾಯಿಸುವ ಉತ್ತಮವಿಧೂಪಗಳನ್ನೂ ಸ್ಪರ್ಶಿಸಿ, ಅವುಗಳ ಗಂಧವನ್ನು ಹೊತ್ತು ಬೀಸುತಿದ್ದ ಸುಗಂಧವಾಯುವು ಆ ಪುಷ್ಪಕವಿಮಾನ

ವನ್ನೆಲ್ಲಾ ತುಂಬುವಂತೆ ವ್ಯಾಪಿಸಿತು. ಅಲ್ಲಿದ್ದ ಸ್ತ್ರೀಯರಲ್ಲಿ ಶ್ಯಾಮವರ್ಣವುಳ್ಳವರು ಕೆಲವರು. ಬಿಳುಪಾದ ದೇಹಕಾಂತಿಯುಳ್ಳವರು ಕೆಲವರು. ಕಪ್ಪುಮೈಯುಳ್ಳವರು ಕೆಲವರು. ಹೊಂಬಣ್ಣದ ಮೈಯುಳ್ಳವರು ಕೆಲವರು. ಹೀಗೆ ಆ ನಿವೇಶನದಲ್ಲಿ ಮಲಗಿದ್ದ ನಾನಾಬಣ್ಣದ ಸ್ತ್ರೀಯರನ್ನೂ ಕಂಡನು. ನಿದ್ರೆಯಿಂದಲೂ, ಮದ್ಯಪಾನದಿಂದಲೂ ಮತ್ತೇರಿ ಮಲಗಿದ್ದ ಆ ಸ್ತ್ರೀಯರು ರಾತ್ರಿಯಲ್ಲಿ ಮುಕುಳಿತವಾಗಿ ಮಲಗಿದಂತಿದ್ದ ಕಮಲದ ಬಳ್ಳಿಗಳಂತೆ ತೋರುತಿದ್ದರು. ಮಹಾತೇಜಸ್ವಿಯಾದ ಆ ಕಪಿವೀರನು, ಹೀಗೆ ರಾವಣನ ಅಂತಃಪುರಪ್ರದೇಶವೆಲ್ಲವನ್ನೂ ಚೆನ್ನಾಗಿ ಸುತ್ತಿ ನೋಡಿದರೂ ಎಲ್ಲಿಯೂ ಸೀತೆಯನ್ನು ಕಾಣಲಿಲ್ಲ. ಆಲ್ಲಿ ಮಲಗಿದ್ದ ಸ್ತ್ರೀಯರನ್ನು ನೋಡಿದಮೇಲೆ ಅವನಿಗೆ ಪರಸ್ತ್ರೀಯರನ್ನು ನೋಡುವುದರಿಂದ ಧರ್ಮಕ್ಕೆ ಹಾನಿಯುಂಟಾಗುವುದೆಂಬ ಭಯವು ಮನಸ್ಸಿನಲ್ಲಿ ನೆಲೆಗೊಂಡಿತು. ಅದರಿಂದ ಅವನಿಗೆ ಮಿತಿಮೀರಿದ ಚಿಂತೆಯೂ ಉಂಟಾಯಿತು. ಆದರಿಂದ ಅವನು ಮನಸ್ಸಿನಲ್ಲಿ ಕಳವಳಿಸುತ್ತ "ಆಃ! ಹೀಗೆ ಅಂತಃಪುರದಲ್ಲಿ ಮಲಗಿರುವ ಪರಸ್ತ್ರೀಯರನ್ನು ನೋಡುವುದು ಕೇವಲ ಧರ್ಮವಿರುದ್ಧವು. ನಾನು ಇದುವರೆಗೆ ಎಂದಿಗೂ ಪರಸ್ತ್ರೀಯರನ್ನು ಕಣ್ಣೆಟ್ಟು ನೋಡಿದವನಲ್ಲ. ಛೀ! ಈಗ ನಾನು ಮಾಡಿದುದೇನೋ ಬಹಳ ತಪ್ಪು ಕೆಲಸವು. ಹೀಗೆ ಪರಸ್ತ್ರೀಯರನ್ನು ನೋಡಿದ ಮಹಾದೋಷಕ್ಕೆ ಪಾತ್ರನಾದೆನಲ್ಲಾ!" ಎಂದು ಚಿಂತಾಕ್ರಾಂತನಾಗಿ ಕೊರಗುತ್ತಿದ್ದನು. ಆ ಹನುಮಂತನ ಮನಸ್ಸಾದರೋ ಬಹಳ ಉದಾರವಾದುದು. ಯಾವಾಗಲೂ, ಯಾವ ಕಾರಣದಿಂದಲೂ ವಿಕಾರವನ್ನು ಹೊಂದದೆ ಸ್ಥಿರವಾಗಿರುವುದು. ಆದುದರಿಂದ ಆಗಲೂ ಅವನಿಗೆ ಮುಂದಿನ ಕಾರ್ಯಕ್ಕೆ ಉತ್ಸಾಹವನ್ನು ತಗ್ಗಿಸದಂತೆ ಒಂದಾಲೋಚನೆಯು ತೋರಿತು. "ಇಲ್ಲಿಗೆ ಪರಪುರುಷರ ಪ್ರವೇಶಕ್ಕೆ ಸ್ವಲ್ಪವೂ ಅವಕಾಶವಿಲ್ಲವೆಂಬ ದೃಢವಾದ ನಂಬಿಕೆಯಿಂದಲೇ ಈ ರಾವಣಸ್ತ್ರೀಯರೆಲ್ಲರೂ ನಿರ್ಲಜ್ಜರಾಗಿ ಮೈಮರೆತು ನಿದ್ರಿಸುತ್ತಿರುವರು. ಈ ಸ್ಥಿತಿಯಲ್ಲಿ ಇವರನ್ನು ನಾನು ನೋಡುತ್ತಿರುವುದು ತಪ್ಪು! ಅದರೇನು! ಹೀಗೆ ನಿರ್ವಾಣದಲ್ಲಿರುವ ಸ್ತ್ರೀಯರನ್ನು ನೋಡಿದರೂ, ನನ್ನ ಮನಸ್ಸಿಗೆ ಸ್ವಲ್ಪವಾದರೂ ವಿಕಾರವುಂಟಾಗಿಲ್ಲ. ನೋಡಿದರೂ ಇದರಿಂದ ನನಗೆ ಯಾವ ದೋಷವೂ ಇರದು. ಎಲ್ಲಾ ಇಂದ್ರಿಯಗಳ ಪ್ರವರ್ತನೆಗೂ ಮನಸ್ಸೇ ಕಾರಣವು. ಸದ್ವಿಷಯಗಳಿಗಾಗಲಿ, ದುರ್ವಿಷಯಗಳಿಗಾಗಲಿ, ಮನಸ್ಸೇ ಮಾರ್ಗದರ್ಶಿಯಾಗಿರುವುದು. ಆ ಮನಸ್ಸೇ ನನ್ನ ಅಧೀನವಾಗಿ ಸ್ಥಿರವಾಗಿರುವಾಗ ಇನ್ನು ಬೇರೆ ದೋಷಗಳಿಗೆ ಅವಕಾಶವೇನುಂಟು? ಅದರೆ ಈಗ ನಾನು ಸೀತೆಯನ್ನು ಕಾಣುವುದೆಲ್ಲಿ? ಆ ಸೀತೆಯನ್ನು ಬೇರೆ ಕಡೆಯಲ್ಲಿ ಹುಡುಕುವುದರಿಂದ ಪ್ರಯೋ

ಜನವಿಲ್ಲ. ಹೆಂಗಸು ಹೆಂಗಸರ ಗುಂಪಿನಲ್ಲಿಯೇ ಇರಬೇಕೆಂಬುದು ಸಿದ್ಧವು. ಅದು ದರಿಂದ ಈ ಗುಂಪಿನಲ್ಲಿಯೇ ಆ ಸೀತೆಯನ್ನು ಕಂಡುಹಿಡಿಯಬೇಕೇ ಹೊರತು ಬೇರೆ ದಾರಿಯಿಲ್ಲ. ಯಾವಜಂತುವು ಯಾವಜಾತಿಗೆ ಸೇರಿದುದೋ ಆ ಜಾತಿಯನ್ನು ಬಿಟ್ಟುಬೇರೆ ಕಡೆಗಳಲ್ಲಿ ಸುತ್ತುವುದರಿಂದ ಫಲವಿಲ್ಲ. ನಷ್ಟವಾದ ಹೆಂಗಸನ್ನು ಮೃಗಗಳ ಗುಂಪಿನಲ್ಲಿ ಹುಡುಕುವುದರಿಂದ ಫಲವೇನು? ಹಾಗೆಮಾಡಿ ಪ್ರಯೋಜನವಿಲ್ಲ. ನಾನಾದರೋ ಶುದ್ಧವಾದ ಮನಸ್ಸಿನಿಂದ ಈ ರಾವಣಾಂತಃಪುರವೆಲ್ಲವನ್ನೂ ಹುಡುಕಿದೆನು. ತಥಾಪಿ ಸೀತೆಯನ್ನು ಕಾಣಲಿಲ್ಲ. ಇನ್ನೇನು ಮಾಡಲಿ?' ಎಂದು ಬಹಳವಾಗಿ ಚಿಂತಿಸುತಿದ್ದನು. ಅಸಾಧಾರಣವೀರ್ಯವುಳ್ಳ ಆ ಹನುಮಂತನು ರಾವಣಾಂತಃಪುರದಲ್ಲಿ ಎಷ್ಟೋ ದೇವಕನ್ಯೆಯರನ್ನೂ, ನಾಗಕನ್ಯೆಯರನ್ನೂ, ಗಂಧರ್ವಕನ್ಯೆಯರನ್ನೂ ಕಂಡನು. ಸೀತೆಯನ್ನು ಮಾತ್ರ ಕಾಣಲಿಲ್ಲ. ಹಾಗೆಯೇ ಆ ಕಪಿವೀರನು ಸುತ್ತಿಸುತ್ತಿ ಬಂದು, ಅಲ್ಲಿದ್ದ ಸ್ತ್ರೀಯರಲ್ಲಿ ಒಬ್ಬೊಬ್ಬರನ್ನೂ ನೋಡಿ, ಸೀತೆಯನ್ನು ಕಾಣದೆ, ಅಲ್ಲಿಂದ ಹಿಂತಿರುಗಿ, ತನ್ನಲ್ಲಿ ತಾನು ನಾನಾವಿಧವಾಗಿ ಚಿಂತಿಸುತಿದ್ದನು. ಪಾನಭೂಮಿಯೆಲ್ಲವನ್ನೂ ಚೆನ್ನಾಗಿ ನೋಡಿ, ಪುನಃ ಅಂತಃಪುರಕ್ಕೆ ಬಂದು ಅಲ್ಲಿಯೇ ತಿರುಗಿ ಹುಡುಕುವುದಕ್ಕಾರಂಭಿಸಿದನು.

ಇಲ್ಲಿಗೆ ಹನ್ನೊಂದನೆಯ ಸರ್ಗವು.

ಹನುಮಂತನು ಸೀತೆಯನ್ನು ಕಾಣದುದಕ್ಕಾಗಿ
ಶೋಕಿಸುತ್ತ, ತಿರುಗಿ ರಾವಣಾಂತಃಪುರಕ್ಕೆ
ಬಂದು ಹುಡುಕಿದುದು.

ಆ ಮೇಲೆ ವಾಯುಪುತ್ರನಾದ ಅಂಜನೇಯನು ಆ ರಾಕ್ಷಸಸ್ತ್ರೀಯರ ನಡುವೆ ಅಲಂಕಾರಾರ್ಥವಾಗಿ ರಚಿಸಿದ ಬಳ್ಳಿವನಗಳನ್ನೂ, ಚಿತ್ರಶಾಲೆಗಳನ್ನೂ, ಚಂದ್ರಶಾಲೆಗಳನ್ನೂ ಸುತ್ತಿನೋಡಿ, ಎಲ್ಲೆಯೂ ಸೀತೆಯನ್ನು ಕಾಣದೆ ಚಿಂತೆಯಿಂದ ಕಳವಳಿಸುತಿದ್ದನು. ಪ್ರಿಯದರ್ಶನೆಯಾದ ಆ ಸೀತೆಯನ್ನು ಕಾಣಬೇಕೆಂಬ ಆತುರವು ಈತನಿಗೆ ಮೇಲೆಮೇಲೆ ಬೆಚ್ಚಿತು. ಇವನ ಮನಸ್ಸಿನಲ್ಲಿ ನಾನಾವಿಧವಾದ ಚಿಂತೆಯುಂಟಾಯಿತು. ಆಗ ತನ್ನಲ್ಲಿ ತಾನು "ಅಃ! ನಾನು ಎಷ್ಟು ಹುಡುಕಿದರೂ ರಾಮನ ಪ್ರಿಯಪತ್ನಿಯಾದ ಸೀತೆಯು ಸಿಕ್ಕಲಿಲ್ಲವಲ್ಲಾ! ಇದರಿಂದ ಆ ಸೀತೆಯು ನಿಶ್ಚಯವಾಗಿ ಮೃಣವನ್ನೇ ಹೊಂದಿರಬೇಕು. ಜನಕಪುತ್ರಿಯಾದ ಆ ಸೀತೆಯು

ಪಾತಿವ್ರತ್ಯವೆಂಬ ತನ್ನ ಉತ್ತಮಧರ್ಮವನ್ನೂ, ಸದಾಚಾರವನ್ನೂ ಎಂದಿಗೂ ತಪ್ಪುವವಳಲ್ಲ. ಈ ಪ್ರಯತ್ನದಲ್ಲಿ ರಾವಣನ ಕೋಪಕ್ಕೆ ಪಾತ್ರಳಾಗಿ, ಆ ನೀಚನ ದುರ್ವ್ಯಾಕ್ಯಕ್ಕೆ ಕಿವಿಗುಡದೆ ಆತನಿಂದ ಸಂಹೃತಳಾಗಿರಬಹುದೆ? ಅಯ್ಯೋ! ನೀಚನಾದ ಆ ರಾವಣನಾದರೋ ದುಷ್ಕಾರ್ಯಗಳನ್ನು ನಡೆಸತಕ್ಕ ವಿಷಯದಲ್ಲಿ ಹಿಂದು ಮುಂದು ನೋಡುವವನಲ್ಲ. ಹಾಗಿಲ್ಲವೇ ಒಂದುವೇಳೆ ಸೀತೆಯು ಇಲ್ಲಿನ ರಾಕ್ಷಸ ಸ್ತ್ರೀಯರ ಘೋರಾಕೃತಿಗಳನ್ನು ನೋಡಿ ಭಯದಿಂದ ತಾನಾಗಿಯೇ ಪ್ರಾಣವನ್ನು ಬಿಟ್ಟಿರಬೇಕು! ಇಲ್ಲಿನ ರಾಕ್ಷಸ ಸ್ತ್ರೀಯರೋ ಅತಿಘೋರವಾದ ರೂಪವುಳ್ಳವರು. ಮುಖದಲ್ಲಿ ಸ್ವಲ್ಪವಾದರೂ ವರ್ಚಸ್ಸಿಲ್ಲದವರು! ಅವರ ವೇಷವೂ ಅತಿವಿಕಾರವಾಗಿರುವುದು. ಇವರ ದೊಡ್ಡ ಮೂತಿಗಳನ್ನೂ, ಇವರ ಬಿಚ್ಚಿದ ಕಣ್ಣುಗಳನ್ನೂ ನೋಡಿದಮಾತ್ರಕ್ಕೆ ಭಯದಿಂದ ಎದೆಯೊಡೆದು ಸಾಯುವಂತಿರುವುದು ಸಹಜವಾಗಿಯೇ ಭೀರುಸ್ವಭಾವವುಳ್ಳ ಸೀತೆಯು ಇವರನ್ನು ನೋಡಿ ಹೇಗೆ ಸಹಿಸಬಲ್ಲಳು! ಅಯ್ಯೋ! ನಾನು ಇಲ್ಲಿಗೆ ಬಂದು ಸೀತೆಯನ್ನೂ ನೋಡದೆ, ನನ್ನ ಪರಾಕ್ರಮವನ್ನೂ ತೋರಿಸದೆ, ನನ್ನ ಮಿತ್ರರಾದ ವಾನರರೊಡನೆ ವ್ಯರ್ಥವಾಗಿ ಬಹುಕಾಲವನ್ನೂ ಕಳೆದು, ಹೇಗೆ ಹಿಂತಿರುಗಿ ಸುಗ್ರೀವನಬಳಿಗೆ ಹೋಗಲಿ? ನಾನು ಅಲ್ಲಿಗೆ ಹೋದರೂ ಸುಗ್ರೀವನು ನನ್ನನ್ನು ಸುಮ್ಮನೆ ಬಿಡಲಾರನು. ಆತನೋ ಬಹಳಕ್ರೂರವಾಗಿ ದಂಡಿಸತಕ್ಕವನು. ಬಹಳ ಬಲಾಢ್ಯನು. ಅವನು ನನ್ನನ್ನು ಕೊಲ್ಲುವುದೇ ನಿಜವು. ಇಲ್ಲಿನ ಅಂತಃಪುರವೆಲ್ಲವನ್ನೂ ನೋಡಿದೆನು. ರಾವಣಪತ್ನಿಯರೆಲ್ಲರನ್ನೂ ನೋಡಿದುದಾಯಿತು. ಪತಿವ್ರತೆಯಾದ ಸೀತೆಯುಮಾತ್ರ ನನ್ನ ಕಣ್ಣಿಗೆ ಬೀಳಲಿಲ್ಲ. ಅಯ್ಯೋ! ನಾನು ಇಷ್ಟು ಶ್ರಮಪಟ್ಟುದೂ ವ್ಯರ್ಥವಾಯಿತಲ್ಲಾ! ನಾನು ಸುಮ್ಮನೆ ಹಿಂತಿರುಗಿಹೋದರೆ ಮಹೇಂದ್ರಪರ್ವತದಲ್ಲಿ ನನಗಾಗಿ ಕಾದಿರುವ ವಾನರರಾದರೂ ನನ್ನನ್ನು ಏನೆಂದು ಹೇಳುವರು? ನಾನು ಅವಶ್ಯಮುಂದೆ ನಿಂತೊಡನೆಯೇ, ಅವರೆಲ್ಲರೂ ಆತುರದಿಂದ ಒಟ್ಟಾಗಿ ಬಂದು "ನೀನು ಲಂಕೆಗೆ ಹೋಗಿ ಏನುಮಾಡಿಬಂದೆ? ಬೇಗನೆ ಹೇಳು" ಎಂದು ಕೇಳುವರಲ್ಲವೆ! ಜನಕಪ್ರತ್ರಿಯನ್ನು ಕಾಣದೆ ಅಲ್ಲಿಗೆ ನಾನು ಹೋದರೆ ಅವರಿಗೆ ಯಾವ ಪ್ರಶ್ನೋತ್ತರವನ್ನು ಕೊಡಲಿ? ಸುಗ್ರೀವನು ನಿರ್ಣಯಿಸಿದ್ದ ಕಾಲವೂ ಮೀರಿಹೋಯಿತು! ಆಗಲೇ ಅಂಗದಾದಿಗಳೆಲ್ಲರೂ ಭಯಪಟ್ಟು ಪ್ರಾಯೋಪವೇಶಕ್ಕೆ ಪ್ರಯತ್ನಿಸಿದ್ದರು. ನಾನು ಇನ್ನೂ ಇಲ್ಲಿಯೇ ಸಾವಕಾಶ ಮಾಡಿನಿಂತರೆ ಅವರು ಮೊದಲಿನಂತೆಯೇ ಪ್ರಾಯೋಪವೇಶದಿಂದ ಸಾಯುವುದರಲ್ಲಿ ಸಂದೇಹವಿಲ್ಲ! ನಾನು ಅಲ್ಲಿಗೆ ಹೋದರೆ, ವೃದ್ಧನಾದ ಜಾಂಬವಂತನೂ, ಯುವರಾಜನಾದ ಅಂಗದನೂ, ನನ್ನನ್ನು ಕುರಿತು ಏನೆಂದು ಹೇಳುವರು? ಇಷ್ಟು

ಪ್ರಯತ್ನಮಾಡಿ ಸಮುದ್ರವನ್ನು ದಾಟಿ, ಕೊನೆಗೂ ಸೀತೆಯನ್ನು ಕಾಣದೆ ಬಂದ ನನ್ನನ್ನು ಅವರೆಲ್ಲರೂ ಸೇರಿ ಹೀಗಳೆಯದೆ ಬಿಡುವರೆ? ಛೇ! ಹೀಗೆ ಧೈರ್ಯಗೆಡಬಾರದು! ಉತ್ಸಾಹವೇ ಸಮಸ್ತಸಂಪತ್ತಿಗೂ ಮೂಲವು. ಉತ್ಸಾಹವೇ ಮೇಲಾದ ಸುಖವು. ಉತ್ಸಾಹವೆಂಬುದೇ ಯಾವಾಗಲೂ ಸಮಸ್ತ ಕಾರ್ಯಗಳನ್ನೂ ನಡೆಸುವುದು. ಉತ್ಸಾಹವಲ್ಲದಿದ್ದರೆ ಯಾವ ಕೆಲಸವೂ ನಡೆಯದು. ಯಾವಕಾರ್ಯವನ್ನು ಹಿಡಿದರೂ ಉತ್ಸಾಹವೇ ಅದನ್ನು ಕೊನೆಮುಟ್ಟಿಸುವುದು. ಅದುದರಿಂದ ನಾನೂ ಈಗ ಅಧೈರ್ಯವನ್ನು ಬಿಟ್ಟು ಉತ್ಸಾಹವನ್ನೇ ಅವಲಂಬಿಸಿ, ಆ ಉತ್ಸಾಹದಿಂದಲೇ ಮತ್ತೊಮ್ಮೆ ಸೀತೆಯನ್ನು ಹುಡುಕುವುದಕ್ಕೆ ಪ್ರಯತ್ನಿಸುವೆನು. ಇಲ್ಲಿ ರಾವಣನ ಆಳ್ವಿಕೆಗೊಳಪಟ್ಟ ಸಮಸ್ತ ಭಾಗಗಳನ್ನೂ ಹುಡುಕಿಬರುವೆನು. ಇದುವರೆಗೆ ಪಾನಭೂಮಿಯನ್ನು ಹುಡುಕಿದುದಾಯಿತು. ಪ್ರಷ್ಪಗೃಹಗಳನ್ನು ನೋಡಿದುದಾಯಿತು. ಚಿತ್ರಶಾಲೆಗಳನ್ನೂ ಹುಡುಕಿದೆನು. ಕ್ರೀಡಾಗೃಹಗಳನ್ನೂ ಸುತ್ತಿಬಂದೆನು. ಗೃಹೋದ್ಯಾನಗಳಲ್ಲಿರುವ ಬೀದಿಗಳನ್ನೂ ಹುಡುಕಿದೆನು. ವಿಮಾನಗಳನ್ನೂ ಒಳಹೊಕ್ಕು ನೋಡಿದೆನು. ಎಲ್ಲವನ್ನೂ ಎಲ್ಲಾ ವಿಧದಿಂದಲೂ ಹುಡುಕಿದುದಾಯಿತಲ್ಲಾ! ಇನ್ನು ನೋಡಬೇಕಾದ ಸ್ಥಳವಾವುದು? ಆದರೇನು? ಮತ್ತೊಂದಾವರ್ತಿ ಅವುಗಳನ್ನೇ ನೋಡಿಬರುವೆನು" ಎಂದು ನಿಶ್ಚಯಿಸಿಕೊಂಡನು. ಹೀಗೆ ನಿಶ್ಚಯಿಸಿಕೊಂಡು ಹೊರಟು, ತಿರುಗಿ ಆ ಪಟ್ಟಣಪ್ರದೇಶಗಳನ್ನೆಲ್ಲಾ ಹುಡುಕುವುದಕ್ಕಾರಂಭಿಸಿದನು. ಅಲ್ಲಲ್ಲಿ ನೆಲಮಾಳಿಗೆಗಳನ್ನೂ, ನಾಲ್ಕುಬೀದಿಗಳ ಜೌಕದಲ್ಲಿರುವ ಮಂಟಪಗಳನ್ನೂ, ಮನೆಗಳನ್ನೂ, ತೋಟದ ಮನೆಗಳನ್ನೂ ಹುಡುಕಲಾರಂಭಿಸಿದನು. ಇವನು ಹೀಗೆ ಹುಡುಕುತ್ತಬರುವಾಗ ಹಾರುವ ಕಡೆಗಳಲ್ಲಿ ಹಾರುವನು! ಧುಮುಕುವ ಕಡೆಗಳಲ್ಲಿ ಧುಮುಕುವನು! ನಿಲ್ಲಬೇಕಾದ ಕಡೆಗಳಲ್ಲಿ ನಿಲ್ಲುವನು. ನಡೆಯಬೇಕಾದ ಕಡೆಗಳಲ್ಲಿ ನಡೆಯುವನು. ಮುಚ್ಚಿದ ಬಾಗಿಲುಗಳನ್ನು ತೆಗೆಯುವನು. ಕದಗಳನ್ನು ಕಿತ್ತೆಸೆಯುವನು. ಒಂದೊಂದು ಮನೆಗೂ ಪ್ರವೇಶಿಸುವನು. ಅಲ್ಲಲ್ಲಿ ನೋಡಿ ಹಿಂತಿರುಗಿ ಬರುವನು. ಹೀಗೆ ಆ ಮಹಾವೀರನು ಆ ಪಟ್ಟಣದ ಒಂದೊಂದು ಮೂಲೆಯನ್ನೂ ಸುತ್ತಿನೋಡಿದನು. ಆ ರಾವಣಾಂತಃಪುರದಲ್ಲಿ ಈತನು ಹೋಗಿ ನೋಡದ ಒಂದು ಸ್ಥಳವಾದರೂ ಇರಲಿಲ್ಲ. ಅಲ್ಲಿ ನಾಲ್ಕಂಗುಲಗಳ ಸ್ಥಳಮಾತ್ರವಾದರೂ ಉಳಿಯದ ಹಾಗೆ ನೋಡಿಬಂದನು. ಅಲ್ಲಲ್ಲಿ ಪ್ರಾಕಾರದೊಳಗಿನ ಬೀದಿಗಳನ್ನೂ, ಚತುಷ್ಪಥಮಂಟಪದ ವೇದಿಕೆಗಳನ್ನೂ, ನಡೆಬಾವಿಗಳನ್ನೂ, ಪುಷ್ಕರಿಣಿಗಳನ್ನೂ, ಸಾಕಲ್ಯವಾಗಿ

ಹುಡುಕಿಬಿಟ್ಟನು. ಎಲ್ಲಿ ನೋಡಿದರೂ ಇವನ ಕಣ್ಣಿಗೆ ವಿಕಾರರೂಪವುಳ್ಳ ಬಗೆಬಗೆಯ ರಾಕ್ಷಸಸ್ತ್ರೀಯರು ಗೋಚರಿಸುತಿದ್ದರೇ ಹೊರತು ಸೀತೆಯು ಸಿಕ್ಕಲಿಲ್ಲ. ಅಲ್ಲಲ್ಲಿ ಎಣೆಯಿಲ್ಲದ ರೂಪವುಳ್ಳ ವಿದ್ಯಾಧರಸ್ತ್ರೀಯರನ್ನು ಕಂಡನೇ ಹೊರತು ಸೀತೆಯನ್ನು ಕಾಣಲಿಲ್ಲ! ಅಲ್ಲಿ ರಾವಣನು ಬಲಾತ್ಕಾರದಿಂದ ಸೆರೆಹಿಡಿದು ತಂದ ಅನೇಕ ನಾಗಕನ್ನಿಕೆಯರನ್ನು ಕಂಡನು. ತಾನಾಗಿಯೇ ಮೋಹಿಸಿ ಬಂದು ರಾವಣನನ್ನು ಕೈಹಿಡಿದ ಇನ್ನೂ ಎಷ್ಟೋಮಂದಿ ನಾಗಕನ್ನೆಯರನ್ನೂ ಕಂಡನು. ಚಂದ್ರಾನನೆಯಾಗಿಯೂ, ಜನಕಪುತ್ರಿಯಾಗಿಯೂ ಇರುವ ಆ ಸೀತೆಯನ್ನು ಮಾತ್ರ ಕಾಣಲಿಲ್ಲ. ಮಹಾಬಾಹುವಾದ ಆ ಕಪಿವೀರನು, ಬೇರೆ ಎಷ್ಟೋಸುಂದರಿ ಸ್ತ್ರೀಯರನ್ನು ಕಂಡರೂ ಸೀತೆಯನ್ನು ಮಾತ್ರ ಕಾಣದೆ ಬಹಳವಾಗಿ ಕೊರಗುತಿದ್ದನು. ಇದುವರೆಗೆ ಮಾಡಿದ ವಾನರರ ಪ್ರಯತ್ನವೂ, ತಾನು ಆ ಮಹಾಸಮುದ್ರವನ್ನು ದಾಟಿ ಬಂದುದೂ ವ್ಯರ್ಥವಾಯಿತೆಂಬ ದುಃಖದಿಂದ, ಹಿಂದುಮುಂದುತೋರದೆ ಕಳವಳಿಸುತ್ತ ಅಗಲೇ ಆ ವಿಮಾನದಿಂದಿಳಿದು ಚಿಂತಾಕ್ರಾಂತನಾಗಿ ನಿಂತಿದ್ದನು.

ಇಲ್ಲಿಗೆ ಹನ್ನೆರಡನೆಯ ಸರ್ಗವು.

ಹನುಮಂತನು ಅಶೋಕವನದ ಪ್ರಾಕಾರವನ್ನೇರಿದುದು. ಸೀತೆಯನ್ನೂ, ರಾವಣಾದಿಗಳನ್ನೂ ಕುರಿತು ನಾನಾವಿಧದಲ್ಲಿ ಚಿಂತಿಸಿ, ಅಶೋಕವನವನ್ನು ಹುಡುಕಬೇಕೆಂದು ಪ್ರಯತ್ನಿಸಿ, ಅದಕ್ಕಾಗಿ ಮೊದಲು ದೇವತೆಗಳಿಗೆ ನಮಸ್ಕರಿಸಿದುದು.

ಅನಂತರ ವಾನರೋತ್ತಮನಾದ ಹನುಮಂತನು ಅಗಲೇ ವಿಮಾನದಿಂದ ಕೆಳಕ್ಕಿಳಿದು ಪ್ರಾಕಾರಕ್ಕೆ ಬಂದನು. ಮೇಘದಿಂದ ಬರುವ ಮಿಂಚಿನಂತೆ ಅತಿವೇಗವನ್ನವಲಂಬಿಸಿ ಹೊರಟು, ಆ ರಾವಣನ ಮನೆಯ ಒಂದೊಂದು ಪ್ರಾಕಾರವನ್ನೂ ಸುತ್ತಿಸುತ್ತಿ ಬಂದರೂ, ಸೀತೆಯನ್ನು ಕಾಣದುದಕ್ಕಾಗಿ ಬಹಳ ಚಿಂತೆಗೊಂಡು, ತನ್ನಲ್ಲಿ ತಾನು "ರಾಮನಿಗೆ ಪ್ರಿಯವನ್ನು ಕೋರಿ, ನಾನು ಈ ಲಂಕೆಯೆಲ್ಲವನ್ನೂ ಸಂಪೂರ್ಣವಾಗಿ ಹುಡುಕಿದೆನು. ಎಲ್ಲೆಲ್ಲಿ ಹುಡುಕಿದರೂ ಪದ್ಮಾಂಗಸುಂದರಿಯಾದ ಸೀತೆಯು ಸಿಕ್ಕಲಿಲ್ಲ. ಇಲ್ಲಿನ ಮಡುಗಳನ್ನೂ, ಕೆರೆಗಳನ್ನೂ, ಕೊಳಗಳನ್ನೂ, ಮಹಾನದಿಗಳನ್ನೂ, ಸಣ್ಣಹೊಳೆಗಳನ್ನೂ, ಜಲ

ಪ್ರಾಯಪ್ರದೇಶಗಳನ್ನೂ, ಅರಣ್ಯಗಳನ್ನೂ, ದುರ್ಗಮವಾಗಳಾದ ಪರ್ವತಗಳನ್ನೂ, ಸುತ್ತಿಸುತ್ತಿ ಬಂದೆನು! ಈ ಸಮಸ್ತಭೂಮಿಯನ್ನೂ ಹುಡುಕಿದುದಾಯಿತು. ಇಷ್ಟಾದರೂ ಜನಕಪುತ್ರಿಯನ್ನು ಕಾಣಲಿಲ್ಲ. ಗೃಧ್ರರಾಜನಾದ ಸಂಪಾತಿಯು ಈ ರಾವಣನ ಮನೆಯಲ್ಲಿಯೇ ಸೀತೆಯಿರುವಳೆಂದು ಎಷ್ಟೋ ದೃಢವಾಗಿ ಹೇಳಿದನು. ಎಷ್ಟು ಹುಡುಕಿದರೂ ಸೀತೆಯು ಕಣ್ಣಿಗೆ ಬೀಳಲಿಲ್ಲವಲ್ಲಾ! ಆ ಸೀತೆಯಲ್ಲಿಯೋ, ಸ್ವಲ್ಪವಾದರೂ ದೋಷವನ್ನೆಣಿಸುವುದಕ್ಕಿಲ್ಲ. ಲೋಕಪೂಜ್ಯವಾದ ವಿದೇಹದೇಶದಲ್ಲಿ ಹುಟ್ಟಿ ಬೆಳೆದವಳು! ಅದರಲ್ಲಿಯೂ ಸತ್ಪುರುಷರಿಗೆ ನಿತ್ಯನಿವಾಸವಾದ ಮಿಥಿಲಾನಗರದಲ್ಲಿದ್ದವಳು! ಕರ್ಮನಿಷ್ಠನೆಂದು ಖ್ಯಾತಿಹೊಂದಿದ ಜನಕರಾಜನಿಗೆ ಮಗಳೆನಿಸಿಕೊಂಡಿರುವಳು! ಅಯೋನಿಜೆಯಾಗಿ ಹುಟ್ಟಿರುವಳು! ಇಂತಹ ಸತ್ಕುಲಪ್ರಸೂತೆಯಾದ ಸೀತಾದೇವಿಯೂಕೂಡ ತನ್ನ ಶೀಲವನ್ನು ತಪ್ಪಿ ದುಶ್ಚರಿತನಾದ ರಾವಣನಲ್ಲಿ ಸ್ನೇಹವನ್ನು ತೋರಿಸುವಳೆ? ಛಿ! ಎಷ್ಟುಮಾತ್ರಕ್ಕೂ ಇರದು! ಹಾಗೆಣಿಸುವುದೇ ಮಹಾಪಾತಕವು! ಒಂದು ವೇಳೆ ರಾವಣನು ಸೀತೆಯನ್ನೆತ್ತಿಕೊಂಡು ರಾಮಬಾಣಕ್ಕೆ ಭಯಪಟ್ಟು ವೆಡುಗುತ್ತ, ಓಡಿಬರುವಾಗ ಅವನ ಕೈಸಡಿಲಿ, ಆಕೆಯು ಕೆಳಗೆ ಬಿದ್ದು ಪ್ರಾಣವನ್ನು ಬಿಟ್ಟಿರುವೇಕು! ಹಾಗಿಲ್ಲದಿದ್ದಲ್ಲಿ, ಆ ರಾಕ್ಷಸನು ಅಂತರಿಕ್ಷದಲ್ಲಿ ಸೀತೆಯನ್ನೆತ್ತಿಕೊಂಡು ಹೋಗುವಾಗ, ಅವಳು ತನ್ನ ಕೆಳಗಿದ್ದ ಮಹಾಸಾಗರವನ್ನು ನೋಡಿ ಅಗಲೇ ಭಯದಿಂದ ಎದೆಯೊಡೆದು ಸತ್ತಿರಬೇಕು! ಅದೂ ಇಲ್ಲದಿದ್ದರೆ ರಾವಣನು ಸೀತೆಯನ್ನು ಕೆಳಗೆ ಬೀಳದಂತೆ ತನ್ನ ಭುಜಗಳಿಂದ ಬಿಗಿಯಾಗಿ ಹಿಡಿದು, ಎತ್ತಿಕೊಂಡು ಹೋಗುವಾಗ ಪೂಜ್ಯಳಾದ ಆ ಸೀತೆಯು, ಆ ರಾಕ್ಷಸನ ಮುಷ್ಟಿಯ ಹಿಡಿತಕ್ಕೂ, ತೊಡೆಗಳ ವೇಗಕ್ಕೂ ತಡೆಯಲಾರದೆ ಪ್ರಾಣವನ್ನು ಬಿಟ್ಟಿರಬೇಕು! ಇಲ್ಲವೇ, ರಾವಣನು ಸಮುದ್ರದಮೇಲೆ ಆಕಾಶದಲ್ಲಿ ಹೋಗುವಾಗ, ಸೀತೆಯು ಅವನ ಕೈಯಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಕೈತಪ್ಪಿ ಸಮುದ್ರದಲ್ಲಿ ಬಿದ್ದಿರಬೇಕು! ಅಥವಾ ಕ್ಷುದ್ರಬುದ್ಧಿಯುಳ್ಳ ಆ ರಾವಣನು, ಸೀತೆಯು ತನ್ನ ದಾರಿಗೆ ಬಾರದಿರುವುದನ್ನು ನೋಡಿ ಕೋಪಗೊಂಡು, ದಿಕ್ಕಿಲ್ಲದ ಆಕೆಯನ್ನು ಭಕ್ಷಿಸಿ ಬಿಟ್ಟಿರಬಹುದೆ? ಹಾಗಿಲ್ಲದಿದ್ದರೆ ರಾಕ್ಷಸನ ಪತ್ನಿಯರು ಸೀತೆಯಲ್ಲಿ ಸವತಿ ತನವನ್ನು ಭಾವಿಸಿ, ದುರ್ಬುದ್ಧಿಯಿಂದ ನಿರ್ದೋಷಿಯಾದ ಆಕೆಯನ್ನು ಭಕ್ಷಿಸಿ ಬಿಟ್ಟಿರಬಹುದೆ? ಅಥವಾ ಚಂದ್ರಮುಖಿಯಾದ ಸೀತೆಯು ಪೂರ್ಣಚಂದ್ರನಿಗೆಣೆಯಾಗಿಯೂ, ಕಮಲದಳದಂತಿರುವ ಕಣ್ಣುಗಳಿಂದ ಶೋಭಿತವಾಗಿಯೂ ಇರುವ ತನ್ನ ಪ್ರಿಯಪತಿಯಾದ ರಾಮನ ಮುಖವನ್ನೇ ಧ್ಯಾನಿಸುತ್ತ, ಅದೇ

ಚಿಂತೆಯಿಂದ ಕೊರಗಿ ಪ್ರಾಣವನ್ನು ಬಿಟ್ಟರಬಹುದೆ? ಆ ಸೀತೆಯು ಒಂದು ವೇಳೆ ಪ್ರಾಣವನ್ನು ಬಿಟ್ಟಿದ್ದರೂ ಆಗಲೂ "ಹಾ ರಾಮಾ! ಹಾ ಲಕ್ಷ್ಮಣಾ! ಹಾ ಅಯೋಧ್ಯೇ!" ಎಂದು ಬಾರಿಬಾರಿಗೂ ಪ್ರಲಾಪಿಸಿ, ದಿಕ್ಕುಗಾಣದೆ, ಸಂಕಟ ಪಟ್ಟುಕೊರಗಿಯೇ ಸುಮ್ಮನಾಗಿರಬಹುದು. ಒಂದುವೇಳೆ ಸೀತೆಯು ಈಗಲೂ ರಾವಣನ ಮನೆಯಲ್ಲಿ ಪಂಜರದಲ್ಲಿರುವ ಗಿಳಿಯಂತೆ ಪ್ರೇಮದಿಂದ ಪೋಷಿಸಲ್ಪಡುತಿದ್ದರೂ ಇರಬಹುದು. ಹಾಗಿದ್ದರೂ ಅವಳು ರಾಮನನ್ನು ಹಂಬಲಿಸಿ ಎಷ್ಟು ಮಟ್ಟಿಗೆ ಗೋಳಾಡುತ್ತಿರುವಳೋ? ಅಕೆಯೋ ಸಾಮಾನ್ಯಸ್ತ್ರೀಯಲ್ಲ! ಜನಕ ರಾಜನ ಮಗಳು! ಸೀತೆಯೆಂದು ಪ್ರಸಿದ್ಧಳಾದ ಅಯೋನಿಜೆಯು! ಶ್ರೀರಾಮನ ಕೈಹಿಡಿದ ಪತ್ನಿಯು! ಹೀಗೆ ಲೋಕೋತ್ತರವಾದ ಪಾರಿಶುದ್ಧ್ಯವನ್ನು ಹೊಂದಿದ ಅಕೆಯು, ರಾವಣನು ಎಷ್ಟೇ ನಿರ್ಬಂಧಿಸಿದರೂ ಅವನಿಗೆ ಕೈವಶಳಾಗುವಳೆ? ಎಂದಿಗೂ ಆಗಳು! ಇಷ್ಟು ಚಿಂತೆಯೇಕೆ? ಇಲ್ಲಿಂದ ಹೋಗಿ ಇದ್ದ ಸ್ಥಿತಿಯನ್ನು ರಾಮನಿಗೆ ತಿಳಿಸಿಬಿಡಲೆ? ಆ ರಾಮನೋ ಸೀತೆಯನ್ನೇ ಪ್ರಾಣದಂತೆ ಭಾವಿಸಿರುವನು. ಆ ಸೀತೆಯು ಈಗ ರಕಸ್ಯಪ್ರದೇಶದಲ್ಲಿ ಬಚ್ಚಿಡಲ್ಪಟ್ಟಿರುವಳೋ! ಅಥವಾ ರಾಮವಿರಹವನ್ನು ಸಹಿಸಲಾರದೆ ತಾನೇ ಪ್ರಾಣತ್ಯಾಗವನ್ನು ಮಾಡಿಕೊಂಡಿರುವಳೋ! ಹೇಗಿದ್ದರೂ ಈ ವಿಷಯವನ್ನು ರಾಮನಿಗೆ ತಿಳಿಸುವುದೇ ಯುಕ್ತವಲ್ಲ. ತಿಳಿಸಿದರೂ ಕಷ್ಟವೆ. ತಿಳಿಸದಿದ್ದರೂ ಕಷ್ಟವು. ಸೀತೆಯು ಸಿಕ್ಕಲಿಲ್ಲವೆಂದು ಹೇಳಿದೊಡನೆಯೇ ರಾಮನು ಪ್ರಾಣವನ್ನು ಬಿಡುವನು. ಆಗ ರಾಮನನ್ನು ಕೊಂದ ಪಾಪಕ್ಕೆ ನಾನೇ ಭಾಗಿಯಾಗಬೇಕಾಗುವುದು. ಹಾಗಿಲ್ಲದೆ ನಾನು ಸುಮ್ಮನಿದ್ದುಬಿಟ್ಟರೂ ಸ್ವಾಮಿಯನ್ನು ವಂಚಿಸಿದ ದೋಷವು ಮೇಲೆ ಬೀಳುವುದು. ಈಗ ಮಾಡಬೇಕಾದುದೇನು? ಧರ್ಮಸಂಕಟವು ಬಂದೊದಗಿರುವುದಲ್ಲಾ! ಇನ್ನೇನುಮಾಡಲಿ!" ಎಂದು ಸುಮ್ಮನೆ ಕೊರಗುತಿದ್ದನು. ಹೀಗೆ ನಾನಾ ವಿಧದಲ್ಲಿ ಕದಲಿದ ಮನಸ್ಸುಳ್ಳ ಆ ಹನುಮಂತನಿಗೆ, ಇನ್ನೂ ಬೇರೆಬೇರೆ ಚಿಂತೆಯು ಹುಟ್ಟಿತು. ತಿರುಗಿ ಅವನು ತನ್ನಲ್ಲಿ ತಾನು "ಇಲ್ಲಿಂದ ನಾನು ಹೀಗೆಯೇ ಹಿಂತಿರುಗಿ ಕಿಷ್ಕಿಂಧೆಗೆ ಹೋದರೂ ಏನು ಮಾಡಿದಂತಾಯಿತು! ಯಾವ ಪುರುಷಾರ್ಥವು ಸಿದ್ಧಿಸಿದಂತಾಗುವುದು! ನಾನು ಇಷ್ಟು ಶ್ರಮಪಟ್ಟು ಈ ಮಹಾಸಮುದ್ರವನ್ನು ದಾಟಿ ಬಂದುದಕ್ಕೂ ಫಲವಿಲ್ಲದೆ ಹೋಯಿತು! ದುರ್ಗಮವಾದ ಈ ಲಂಕೆಗೆ ಪ್ರವೇಶಿಸಿದುದೂ ವ್ಯರ್ಥವಾಯಿತು. ಮನೆಮನೆಗೂ ನುಗ್ಗಿ ರಾಕ್ಷಸರನ್ನು ನೋಡಿ ಬಂದುದೂ ನಿರರ್ಥಕವಾಯಿತು. ನಾನು ಸೀತೆಯನ್ನು ನೋಡದೆ ಕಿಷ್ಕಿಂಧೆಗೆ ಹೋದರೆ ನನ್ನನ್ನು ನೋಡಿ ಸುಗ್ರೀವನು ಏನು ಹೇಳುವನು! ವಾನರರೆಲ್ಲರೂ

ಸೇರಿ ನನ್ನನ್ನು ಏನೆಂದು ಹೇಳುವರು! ದಶರಥಪುತ್ರರಾದ ರಾಮಲಕ್ಷ್ಮಣರಾದರೂ ನನ್ನನ್ನು ನೋಡಿ ಏನು ಹೇಳುವರು! ಅವರಿಗೆ ನಾನು ಏನುತ್ತರವನ್ನು ಕೊಡಲಿ? ನಾನು ಅಲ್ಲಿಗೆ ಹೋಗಿ ರಾಮನೊಡನೆ ಸೀತೆಯು ಸಿಕ್ಕಲಿಲ್ಲವೆಂಬ ಅಪ್ರಿಯವಾದ ಮಾತನ್ನು ಹೇಳಿದೊಡನೆ, ಆ ರಾಮನು ಪ್ರಾಣವನ್ನೇ ಬಿಟ್ಟು ಬಿಡುವನು. ಕರ್ಣಕಠೋರವಾಗಿಯೂ, ಕ್ರೂರವಾಗಿಯೂ, ಅಸಹ್ಯವಾಗಿಯೂ, ಇಂದ್ರಿಯಗಳನ್ನೇ ಕಲಗಿಸತಕ್ಕುದಾಗಿಯೂ ಇರುವ ಆ ಮಾತನ್ನು ಕೇಳಿದಮೇಲೆ ರಾಮನು ಬದುಕುವುದೆಂದರೇನು? ರಾಮನು ಹಾಗೆ ಮನಸ್ಸಿನಲ್ಲಿ ಸಂಕಟಪಟ್ಟು ಮರಣಕ್ಕೆ ನಿಶ್ಚಯಿಸಿದುದನ್ನು ನೋಡಿದಾಗಲೇ, ಅತನಲ್ಲಿ ಅಸಾಧಾರಣ ಸ್ನೇಹವುಳ್ಳ ಲಕ್ಷ್ಮಣನೂ ಆ ಕ್ಷಣವೇ ಪ್ರಾಣವನ್ನು ಬಿಟ್ಟುಬಿಡುವನು. ಹೀಗೆ ತನ್ನ ಒಡಹುಟ್ಟಿದವರಾದ ರಾಮಲಕ್ಷ್ಮಣರಿಬ್ಬರೂ ಸತ್ಯಸಂಧ್ಯನನ್ನು ಕೇಳಿದ ಕ್ಷಣವೇ ಭರತನೂ ಪ್ರಾಣತ್ಯಾಗವನ್ನು ಮಾಡುವನು. ಆ ಭರತನ ಸಾವನ್ನು ನೋಡಿದಮೇಲೆ ಶತ್ರುಘ್ನನೂ ಬದುಕಲಾರನು. ಲೋಕೈಕವೀರರಾದ ಈ ನಾಲ್ಕುಪುಕ್ಕಳೂ ಸತ್ತುದನ್ನು ನೋಡಿದರೆ, ಇವರ ಜನನಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೇಯಿಯೆಂಬವರು ಪ್ರಾಣವಿಂದಿರುವರೆ? ಎಂದಿಗೂ ಬದುಕಲಾರರು! ಇದರಲ್ಲಿ ಸಂದೇಹವಿಲ್ಲ. ಆ ಅಯೋಧ್ಯೆಯ ಜನರ್ಥಗಳೂ ಹಾಗಿರಲಿ! ನಮ್ಮ ವಾನರರಿಂಗೂ ಉಳಿಗಾಲವಿಲ್ಲ! ರಾಮನು ಸತ್ತುದನ್ನು ಕೇಳಿದೊಡನೆ ಅವನಲ್ಲಿ ವಿಶೇಷ ಕೃತಜ್ಞತೆಯುಳ್ಳವನಾಗಿಯೂ, ಸತ್ಯಸಂಧನಾಗಿಯೂ, ಇರುವ ನಮ್ಮರಾಜನಾದ ಸುಗ್ರೀವನು, ರಾಮನು ತನಗೆ ಮಾಡಿದ ಉಪಕಾರಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡಲಾರದುದಕ್ಕಾಗಿ ಸಂಕಟಪಟ್ಟು ಕೊರಗಿ ಪ್ರಾಣವನ್ನು ಬಿಡುವನು. ಪತಿಯಾದ ಸುಗ್ರೀವನು ಮರಣಹೊಂದಿದುದನ್ನು ನೋಡಿದಮೇಲೆ ಅತನಲ್ಲಿ ಪರಮಪ್ರೇಮವುಳ್ಳ ರುಮೆಯೂ, ಅವನ ದುಃಖದಿಂದಲೇ ಸಾಯುವಳು. ತಾರೆಯಾದರೋ ಮೊದಲೇ ವಾಲಿಯ ಮರಣದಿಂದ ಕೊರಗಿಕೊರಗಿ ಕೃಶಳಾಗಿ ಪ್ರಾಣವನ್ನು ನೂತ್ರ ಧರಿಸಿಕೊಂಡಿರುವಳು. ಈಗ ಸುಗ್ರೀವನೂ ಮೃತನಾದುದನ್ನೂ ನೋಡಿದರೆ, ಆ ದುಃಖವನ್ನು ತಡೆಯಲಾರದೆ ಆಗಲೇ ಸಾಯುವಳು. ತಂದೆ ತಾಯಿಗಳಿಬ್ಬರೂ ಹೋದಮೇಲೆ ಅಂಗದನು ಪ್ರಾಣವನ್ನಿಟ್ಟುಕೊಂಡಿರುವನೆ? ಅವನೂ ಸಾಯುವನು. ಇದಲ್ಲದೆ ಸುಗ್ರೀವನು ಮೃತಿಹೊಂದಿದುದನ್ನು ಕೇಳಿದೊಡನೆ, ವಾನರೆಲ್ಲರೂ ದುಃಖದಿಂದ ಕೊರಗಿ ಸಾಯುವರು. ಕೀರ್ತಿಮಂತನಾದ ಸುಗ್ರೀವರಾಜನು ಸಮಸ್ತವಾನರರನ್ನೂ, ಸಾಮದಿಂದಲೂ, ದಾನದಿಂದಲೂ, ಗೌರವದಿಂದಲೂ ಮನ್ನಿಸುತ್ತ, ಎಷ್ಟೋಪ್ರೀತಿಯಿಂದ ಕಾಪಾಡುತ್ತಿರುವನು. ಅಂತಹ ಪ್ರಭುವೇ

ಸತ್ತಮೇಲೆ ವಾನರರು ಆ ದುಃಖವನ್ನು ಸಹಿಸಬಲ್ಲರೆ? ಅವರಿಲ್ಲರೂ ತಲೆಯೊಡೆದು ಕೊಂಡು ಪ್ರಾಣವನ್ನು ಬಿಡುವುದೇ ನಿಜವು. ಇನ್ನು ಮೇಲೆ ನಮ್ಮ ವಾನರರು ಕಾಡಿನಲ್ಲಿಯಾಗಲಿ, ಬೆಟ್ಟಗುಡ್ಡಗಳಲ್ಲಿಯಾಗಲಿ, ಒಟ್ಟಾಗಿ ಸೇರಿ, ವಿನೋದದಿಂದ ಕ್ರೀಡಿಸುವ ಆಸೆಯೇ ಹೋಯಿತು. ಸುಗ್ರೀವನ ಮರಣವಾರ್ತೆಯಿಂದ ಪೀಡಿತವಾದ ವಾನರರು, ಆ ದುಃಖವನ್ನು ಸಹಿಸಲಾರದೆ, ಕುಟುಂಬಸಹಿತವಾಗಿ, ತಮ್ಮ ಹೆಂಡಿರು ಮಕ್ಕಳೊಡನೆ ಹೊರಟು, ಬೆಟ್ಟದಿಂದ ಬಿದ್ದು ಪ್ರಾಣವನ್ನು ಬಿಡುವುದೇ ನಿಜವು. ಹಾಗೆಯೇ ನಮ್ಮ ಜಾತಿಯ ಒಬ್ಬೊಬ್ಬ ವಾನರನೂ, ವಿಷವನ್ನು ಕುಡಿದೋ, ನೇಣುಹಾಕಿಕೊಂಡೋ, ಬೆಂಕಿಯಲ್ಲಿ ಬಿದ್ದೋ, ಪ್ರಾಯೋಪವೇಶವನ್ನು ಮಾಡಿಯೋ, ಆಯುಧಗಳಿಂದ ಛೇದಿಸಿಕೊಂಡೋ ಪ್ರಾಣವನ್ನು ಬಿಡುವರು. ನಾನು ಕಿಷ್ಕಿಂಧೆಗೆ ಕಾಲಿಟ್ಟೊಡನೆ, ಎಲ್ಲಿ ನೋಡಿದರೂ ಭಯಂಕರವಾದ ರೋದನ ಧ್ವನಿಗಳುಂಟಾಗುವುವಲ್ಲವೆ. ಇಕ್ಷ್ವಾಕುವಂಶಕ್ಕೂ ವಾನರವಂಶಕ್ಕೂ, ಅದೇ ಮೂಲ ನಾಶವೆಂದೂ ನನಗೆ ತೋರುವುದು. ನಾನು ಇಲ್ಲಿಂದ ಹೋದಮಾತ್ರದಲ್ಲಿಯೇ ಇಷ್ಟು ಮಹಾನರ್ಥಗಳನ್ನೂ ಕಂಡಿಟ್ಟಂತಾಗುವುದು. ಆದುದರಿಂದ ನಾನು ಇಲ್ಲಿಂದ ಕಿಷ್ಕಿಂಧೆಗೆ ಹೋಗುವುದೇ ಇಲ್ಲ! ಸೀತೆಯನ್ನು ನೋಡದಮೇಲೆ ಸುಗ್ರೀವನನ್ನು ನೋಡುವುದೂ ನನ್ನಿಂದ ಸಾಧ್ಯವಲ್ಲ. ನಾನು ಎಲ್ಲಗೂ ಕದಲದೆ ಇಲ್ಲಿಯೇ ಇದ್ದು ಬಿಟ್ಟರೆ, ಧರ್ಮಾತ್ಮರಾಗಿಯೂ, ಮಹಾರಥರಾಗಿಯೂ ಇರುವ ಆ ರಾಮಲಕ್ಷ್ಮಣರು ನಾನು ಸೀತೆಯನ್ನು ನೋಡಿ ಬರುವೆನೆಂಬ ಆಸೆಯಿಂದಲಾದರೂ ಪ್ರಾಣವನ್ನು ಳಿಸಿಕೊಂಡಿರುವರು. ಹಾಗೆಯೇ ಅವರಲ್ಲಿ ಸೌಹಾರ್ದವುಳ್ಳ ನಮ್ಮ ವಾನರರೂ ಈ ಅಶೋತ್ತರದಿಂದಲೇ ಪ್ರಾಣವನ್ನು ಧರಿಸಿಕೊಂಡಿರಬಹುದು. ಆದುದರಿಂದ ನಾನು ಇಲ್ಲಿಯೇ ಇದ್ದು, ಕೈಗೆ ಬಂದುದನ್ನೂ, ಬಾಯಿಗೆ ಬಿದ್ದುದನ್ನೂ ತಿಂದು ತೃಪ್ತಿಪಡುತ್ತ, ಒಂದು ಮರದಡಿಯನ್ನಾಶ್ರಯಿಸಿ, ನಿಯತಾಹಾರನಾಗಿ, ಜಾನಪ್ರಸ್ಥ ಧರ್ಮವನ್ನು ಹಿಡಿದು ಕಾಲವನ್ನು ಕಳೆದುಬಿಡುವೆನು. ಸೀತೆಯನ್ನು ಕಾಣದ ಮೇಲೆ ನಾನು ಅಲ್ಲಿಗೆ ಹೋಗಲಾರೆನು. ಹಾಗಿಲ್ಲವೇ, ಇದೋ! ಸಮೃದ್ಧವಾದ ನೀರಿನಿಂದಲೂ, ಫಲಮೂಲಗಳಿಂದಲೂ ತುಂಬಿದ, ಈ ಸಮುದ್ರತೀರದ ಜೌಗು ಪ್ರದೇಶದಲ್ಲಿಯೇ, ಈಗಲೇ ಒಂದು ಚಿತೆಯನ್ನೊಡ್ಡಿ, ಅರಣಿಯನ್ನುಜ್ಜಿ, ಅಗ್ನಿಯನ್ನು ಹುಟ್ಟಿಸಿ, ಆ ಚಿತೆಗಿಟ್ಟು, ಅದರಮೇಲೆ ಮಲಗಿಬಿಡುವೆನು. ಹಾಗೂ ಇಲ್ಲದಿದ್ದರೆ ಅನ್ನಪಾನಾದಿಗಳನ್ನು ಬಿಟ್ಟು ಪ್ರಾಯೋಪವೇಶನವನ್ನು ಮಾಡಿ ಜೀವವನ್ನು ಬಿಡುವೆನು. ಆಗ ನನ್ನ ಈ ದೇಹವನ್ನು ನರಿಕಾಗೆಗಳಾದರೂ ಸಂತೋಷದಿಂದ ತಿಂದು ತೃಪ್ತಿಪಡುವುವು. ಹೀಗೆ ನಿರರ್ಥಕವಾಗಿ ಹೋದ ನನ್ನ

ದೇಹವಾದರೂ ಅದೊಂದುವಿಧದಿಂದ ಸಾರ್ಥಕವಾಗುವುದು. ಹೀಗೆ ಆತ್ಮತ್ಯಾಗವನ್ನು ಮಾಡುವುದರಿಂದ ದೋಷವೇನೂ ಇಲ್ಲ. ಈ ಪ್ರಾಯೋಪವೇಶವನ್ನು ಮಹರ್ಷಿಗಳೂ ಅನುಮೋದಿಸಿರುವಂತಿದೆ. ಮುಖ್ಯವಾಗಿ ನಾನುಮಾತ್ರ ಸೀತೆಯನ್ನು ಕಾಣದಿದ್ದರೆ ನೀರಿನಲ್ಲಿಯಾದರೂ ಬಿದ್ದು ಪ್ರಾಣವನ್ನು ಬಿಡುವುದೇ ನಿಜವು" ಎಂದು ನಿಶ್ಚಯಿಸಿಕೊಂಡನು. ಅಷ್ಟರಲ್ಲಿಯೇ ಅವನಿಗೆ ಈ ಉದ್ದೇಶವನ್ನು ಶಪ್ತಿಸುವಂತೆ ಬೇರೊಂದು ಚಿಂತೆಯು ಹುಟ್ಟಿತು. ಅದರಿಂದ ಅವನು ಪುನಃ ತನ್ನ ಮನಸ್ಸಿನಲ್ಲಿ "ಆಃ ಇದೇನಾಶ್ಚರ್ಯವು! ನಾನು ಇಲ್ಲಿಗೆ ಬಂದಾಗ ಈ ರಾತ್ರಿಯು ನನಗೆ ಶುಭಾರಂಭವಾಗಿಯೇ ತೋರಿತು. ಶುಭ ನಿಮಿತ್ತಗಳೇ ತೋರಿದುವು. ನಾನು ಬಂದಾಗ ಮೊದಲು ಲಂಕಾಧಿದೇವತೆಯೇ ತಾನಾಗಿ ಬಂದು ನನ್ನನ್ನು ತಡೆದರೂ ಅವಳನ್ನೂ ನಿಮಿಷಮಾತ್ರದಲ್ಲಿ ಜಯಿಸಿ ಬಂದೆನು. ಸೀತೆಯನ್ನು ಎಲ್ಲಿದ್ದರೂ ತೋರಿಸಿಕೊಡುವಂತೆ ಈಗಲೂ ಅತಿಪ್ರಕಾಶದೊಡನೆ ಬೆಳದಿಂಗಳು ಕಾಯುತ್ತಿರುವುದರಿಂದ, ನನಸ್ಸಿಗೆ ಒಂದು ಉಲ್ಲಾಸವನ್ನೂ ಹುಟ್ಟಿಸುತ್ತಿರುವುದು. ಈ ರಾತ್ರಿಯು ತಾನಾಗಿಯೇ ನನ್ನ ಕೀರ್ತಿಮಯವಾದ ಮಾಲಿಕೆಯನ್ನು ತಳೆದಂತೆ ಸ್ವಚ್ಛವಾಗಿ, ನನ್ನ ಲಂಕಾಪ್ರವೇಶಕ್ಕೂ ಅನುಕೂಲಿಸಿದುದರಿಂದ ಯಶಸ್ವಿನಿಯೆಂಬ ಖ್ಯಾತಿಗೆ ಇದೇ ಪಾತ್ರವಾಗಿರುವುದು. ಏನಾದರೇನು! ಜಾಗರಣದಿಂದ ಅತಿ ದೀರ್ಘವಾಗಿ ಕಂಡುಬಂದ ಈ ರಾತ್ರಿಯೂ ಕೂಡ ಈಗ ವ್ಯರ್ಥವಾಗಿ ಕಳೆದು ಹೋಗುತ್ತಿರುವುದು. ಹೇಗಾದರೂ ಆಗಲಿ! ಸಾಯುವುದಕ್ಕಿಂತಲೂ ಬದುಕಿರುವುದೇ ಮೇಲು! ಅದುದರಿಂದ, ನಾನು ನಿಯೆಮವನ್ನವಲಂಬಿಸಿ, ತಾಪಸವೃತ್ತಿಯಿಂದ ಒಂದು ಮರದಡಿಯಲ್ಲಿದ್ದು ಬಿಡುವೆನು. ಸೀತೆಯನ್ನು ಕಾಣದೆ ಇಲ್ಲಿಂದ ಹಿಂತಿರುಗಿ ಹೋಗುವುದೇನೋ ಯುಕ್ತವಲ್ಲ. ಒಂದುವೇಳೆ ನಾನು ಸುಗ್ರೀವನಬಳಿಗೆ ಹೋಗದೆ, ನನಗಾಗಿ ಮಹೇಂದ್ರಪರ್ವತದಲ್ಲಿ ಕಾದಿರುವ ಅಂಗದಾದಿಗಳ ಬಳಿಗೆ ಹೋದರೂ ಆಗಲೂ ಅನರ್ಥಗಳುಂಟು. ಸೀತೆಯು ಸಿಕ್ಕಲಿಲ್ಲವೆಂಬ ಮಾತನ್ನು ಕೇಳಿದರೆ, ಅಂಗದನೂ, ಇತರವಾನರರೂ ಆ ಕ್ಷಣವೇ ಪ್ರಾಣವನ್ನು ಬಿಡುವರು. ಹೇಗಾದರೂ ಇದಕ್ಕಾಗಿ ಇಲ್ಲಿ ನಾನು ಪ್ರಾಣವನ್ನು ಬಿಡುವುದುಚಿತವಲ್ಲ. ಆತ್ಮಹತ್ಯೆಯಲ್ಲಿ ಅನೇಕದೋಷಗಳುಂಟು! ಬದುಕಿದ್ದವನು ಎಂದಾದರೂ ಒಮ್ಮೆ ಶುಭವನ್ನು ಕಾಣಬಹುದು. ಅದುದರಿಂದ ನಾನು ಹೇಗಾದರೂ ಪ್ರಾಣದೊಡನೆ ಬದುಕಿರುವೆನು! ಪ್ರಾಣದಿಂದಿದ್ದರೆ ನಿಶ್ಚಯವಾಗಿ ಎಂದಾದರೂ ಶ್ರೇಯಸ್ಸುಂಟಾಗದಿರದು" ಎಂದು ನಿರ್ಧರಿಸಿಕೊಂಡನು. ಹೀಗೆ ಹನುಮಂತನು ನಾನಾವಿಧದಿಂದ ದುಃಖಿಸಿಕೊರಗುತ್ತ, ಎಷ್ಟುಹೊತ್ತಾದರೂ ಮನಸ್ಸಿಗೆ ನೆಮ್ಮದಿಯಿಲ್ಲದೆ, ತಿರುಗಿ ತನ್ನಲ್ಲಿ

ತಾನು. "ಒಂದುವೇಳೆ ಸೀತೆಯು ಸಿಕ್ಕದಿದ್ದಮಾತ್ರಕ್ಕೆ ಸುಮ್ಮನೆಹೋಗಬಹುದೆ? ಯಾವುದಾದರೂ ಒಂದುವಿಧದಿಂದ ರಾವಣನಲ್ಲಿ ಹಗೆತೀರಿಸಿಕೊಳ್ಳದೆ ಬಿಡಬಾರದು! ಕೊನೆಗೆ ಆ ರಾವಣನನ್ನಾದರೂ ಕೊಲ್ಲದೆ ಬಿಡುವುದಿಲ್ಲ. ಆ ರಾವಣನು ಎಷ್ಟು ಬಲಾಢ್ಯನಾದರೇನು? ನಾನಂತೂ ಅವನನ್ನು ಕೊಲ್ಲದೆ ಬಿಡುವವನಲ್ಲ. ಸೀತೆಯು ಸಿಕ್ಕದಿದ್ದರೂ ಹೋಗಲಿ! ಅವನು ಮಾಡಿದ ದುಷ್ಕೃತ್ಯಕ್ಕೆ ತಕ್ಕ ಫಲವನ್ನು ತೋರಿಸಿಯೇ ಬಿಡಬೇಕು. ಇಲ್ಲವೇ ಆ ರಾವಣನನ್ನೇ ಹಿಂಗಟ್ಟುಕಟ್ಟಿ ಎತ್ತಿ ಕೊಂಡು ನಾನು ಬಂದಂತೆಯೇ ಸಮುದ್ರದ ಮೇಲೆ ಹಾರಿ ಹೋಗಿ ಯಾಗದಲ್ಲಿ ಅಗ್ನಿ ಹೋತ್ರನಿಗೆ ಪಶುವನ್ನೊಪ್ಪಿಸುವಂತೆ ಅವನನ್ನು ರಾಮನ ಪಾದಗಳಿಗೊಪ್ಪಿಸಿ ಬಿಡುವೆನು" ಎಂದು ಚಿಂತಿಸುತ್ತ ಸೀತೆಯನ್ನು ಕಾಣದುದಕ್ಕಾಗಿ ಬಹಳದುಃಖಿತ ನಾಗಿ ಇನ್ನೂ ನಾನಾವಿಧದಿಂದ ಕೊರಗುತಿದ್ದನು. ಆಗಲೂ ಅವನ ಚಿಂತೆಯು ಮುಗಿಯಲಿಲ್ಲ. ಅವನಿಗೆ ಬೇರೊಂದಾಲೋಚನೆಯು ತೋರಿತು. "ಈಗ ನಾನು ಇಷ್ಟರಲ್ಲಿಯೇ ಬಿಡುವುದೂ ಉಚಿತವಲ್ಲ. ಯಶಸ್ವಿನಿಯಾದ ಆ ಸೀತೆಯ ಕಣ್ಣಿಗೆ ಬೀಳುವವರೆಗೂ ಈ ಪಟ್ಟಣವನ್ನು ತಿರುತಿರುಗಿ ಸುತ್ತುತ್ತಲೇ ಇರುವೆನು. ಇಲ್ಲಿ ನನಗೆ ಸೀತೆಯು ಸಿಕ್ಕದಿಹೋದರೂ, ಸಂಪಾತಿಯ ಮಾತಿನಲ್ಲಿಯೇ ನಂಬಿಕೆಯಿಟ್ಟು ರಾಮನನ್ನೇ ನನ್ನೊಡನೆ ಇಲ್ಲಿಗೆ ಕರೆತಂದಪಕ್ಷದಲ್ಲಿ, ಇಲ್ಲಿ ತನ್ನ ಪತ್ನಿಯನ್ನು ಕಾಣದುದಕ್ಕಾಗಿ ರಾಮನು ಕೋಪಗೊಂಡು ಸಮಸ್ತವಾನರರನ್ನೂ ತನ್ನ ಬಾಣ ದಿಂದ ಸುಟ್ಟುಬಿಡುವನು. ಅದುದರಿಂದ ನಾನು ಇಲ್ಲಿಂದ ಹಿಂತಿರುಗುವುದೇ ನ್ಯಾಯವಲ್ಲ! ಅಹಾರನಿಯಮದಿಂದ ಇಂದ್ರಿಯಗಳನ್ನು ನಿಗ್ರಹಿಸಿ ಇಲ್ಲಿಯೇ ಇದ್ದು ಬಿಡುವೆನು. ನನಗೊಬ್ಬನಿಗಾಗಿ ಆ ವಾನರರೆಲ್ಲರೂ ಸಾಯುವುದೇಕೆ! ಅವರಾದರೂ ಬದುಕಿಕೊಳ್ಳಲಿ! ಓಹೋ! ಇದೊಂದು ವಿಷಯವನ್ನು ಮರೆತೆನು. ಅಯ್ಯೋ! ಅಲ್ಲಿ ಗಿಡಗಳಿಂದ ದಟ್ಟವಾಗಿ ತುಂಬಿದ ಅಶೋಕವನವು ಕಾಣುವುದು. ಅಲ್ಲಿಯೂ ಹೋಗಿ ನೋಡಬೇಕು. ಅದನ್ನುಮಾತ್ರ ಇದುವರೆಗೆ ನಾನು ನೋಡಿರಲಿಲ್ಲ. ಅದೊಂದು ಸ್ಥಳಮಾತ್ರವೇ ಉಳಿದಿರುವುದು. ದೇವತಾನುಗ್ರಹದಿಂದ ಅಲ್ಲಿಯಾದರೂ ಸೀತೆಯು ಸಿಕ್ಕುವಳೋ ನೋಡುವೆನು. ಹೊರಡುವುದಕ್ಕೆ ಮೊದಲೇ ಅಷ್ಟವಸು ಗಳಿಗೂ, ಏಕಾದಶರುದ್ರರಿಗೂ, ದ್ವಾದಶಾದಿತ್ಯರಿಗೂ, ಅಶ್ವಿನೀದೇವತೆಗಳಿಗೂ ಸಿದ್ಧರಿಗೂ ನಮಸ್ಕರಿಸುವೆನು. ತಪಸ್ಸಿಗೆ ತಪಃಫಲವು ಸಿದ್ಧವಾಗಿ ಲಭಿಸುವಂತೆ, ಈಗಲಾದರೂ ನಾನು ರಾಕ್ಷಸರೆಲ್ಲರನ್ನೂ ಜಯಿಸಿ ಇಕ್ಷ್ವಾಕುಕುಲವರ್ಧನೆಯಾದ ಸೀತೆಯು ರಾಮನಿಗೆ ಲಭಿಸುವಂತೆ ಮಾಡಬೇಕು." ಎಂದು ಮನಸ್ಸಿನಲ್ಲಿ ಒಂದು ಮುಹೂರ್ತಕಾಲದವರೆಗೆ ಧ್ಯಾನಿಸಿ, ಆಮೇಲೆ ತಟ್ಟನೆ ಅಲ್ಲಿಂದೆದ್ದು ಹೊರಡುವು

ದಕ್ಕೆ ನಿದ್ದನಾದನು. ಆಗಲೇ ಆ ಹನುಮಂತನು ಬದ್ಧಾಂಜಲಿಯಾಗಿ ನಿಂತು "ಇದೋ ಲಕ್ಷ್ಮಣಸಹಿತನಾದ ರಾಮನಿಗೆ ನಮಸ್ಕಾರವು. ಇದೋ! ಜನಕಪುತ್ರಿಯಾದ ಸೀತೆಗೆ ನಮಸ್ಕಾರವು. ರುದ್ರನಿಗೂ, ಇಂದ್ರನಿಗೂ, ಯಮನಿಗೂ, ವಾಯುದೇವನಿಗೂ ನಮಸ್ಕಾರವು. ಚಂದ್ರಸೂರ್ಯರಿಗೂ, ಮರುದ್ಗಣಗಳಿಗೂ ನಮಸ್ಕಾರವು." ಎಂದು ಆ ದೇವತೆಗಳೆಲ್ಲರಿಗೂ ನಮಸ್ಕರಿಸಿ, ತನ್ನ ಪ್ರಭುವಾದ ಸುಗ್ರೀವನಿಗೂ ಕೈಮುಗಿದು ನಾಲ್ಕುದಿಕ್ಕುಗಳನ್ನೂ ನೋಡಿ, ತನಗೆ ಇಷ್ಟಸಿದ್ಧಿಕರವಾದ ಅಶೋಕವನವನ್ನು ಮನಸ್ಸಿನಲ್ಲಿ ನೆನೆಸಿಕೊಂಡು, ಅಮೇಲೆ ತಾನು ಅಲ್ಲಿಗೆ ಹೋಗಿ ಮಾಡಬೇಕಾದ ಕಾರ್ಯವೇನೆಂಬುದನ್ನು ಕುರಿತು ಯೋಚಿಸತೊಡಗಿದನು. "ಆ ಅಶೋಕವನದಲ್ಲಿಯೂ ಬಹಳಮಂದಿ ರಾಕ್ಷಸರಿರುವುದರಲ್ಲಿ ಸಂದೇಹವಿಲ್ಲ! ಅನೇಕವನಗಳಿಂದ ಕೂಡಿದ ಆ ತೋಟವು ಸರ್ವವಿಧವಾದ ಸಂಸ್ಕಾರಗಳಿಂದಲೂ ಶೋಭಿಸುತ್ತಿರಬೇಕು. ಅದನ್ನೂ ಚೆನ್ನಾಗಿ ಹುಡುಕಿ ಬರಬೇಕಾದುದೇ ಅವಶ್ಯವು. ಅಲ್ಲಿನ ವೃಕ್ಷಗಳೆಲ್ಲವನ್ನೂ ಬಹಳ ಎಚ್ಚರಿಕೆಯಿಂದ ಎಷ್ಟೋಮಂದಿ ಕಾವಲುಗಾರರು ಕಾಯುತ್ತಿರುವರು. ವಾಯುವೂ ಕೂಡ ರಾವಣನ ಭಯಕ್ಕಾಗಿ ಅಲ್ಲಿನ ಗಿಡಗಳಮೇಲೆ ವೇಗದಿಂದ ಬೀಸಲಾರನು. ನಾನು ಮೊದಲೇ ರಾಮನ ಕಾರ್ಯಸಿದ್ಧಿಗಾಗಿಯೂ, ರಾವಣನನ್ನು ವಂಚಿಸುವುದಕ್ಕಾಗಿಯೂ, ಈ ಸೂಕ್ಷ್ಮಾಕಾರವನ್ನು ತಾಳಿರುವೆನು. ಇದುವರೆಗೆ ನನ್ನಿಂದ ಸಾಧ್ಯವಾದಷ್ಟು ಪ್ರಯತ್ನಮಾಡಿದೆನು. ಇನ್ನು ಮೇಲೆ ದೇವತೆಗಳೂ, ಋಷಿಗಣಗಳೂ, ನನ್ನ ಕಾರ್ಯವು ಕೈಗೂಡುವಂತೆ ಅನುಗ್ರಹಿಸಬೇಕೇ ಹೊರತು ಬೇರೆಯಲ್ಲ. ಪೂಜ್ಯವಾದ ಸ್ವಯಂಭುವಾದ ಬ್ರಹ್ಮನೂ, ಇತರದೇವತೆಗಳೂ, ಅಗ್ನಿಯೂ, ವಾಯುವೂ, ವಜ್ರಧರನಾದ ಇಂದ್ರನೂ, ಪಾಶಹಸ್ತನಾದವರುಣನೂ, ಚಂದ್ರಾದಿತ್ಯರೂ, ಮಹಾತ್ಮರಾದ ಅಶ್ವನಿದೇವತೆಗಳೂ, ಸಪ್ತಮರುತ್ತುಗಳೂ, ರುದ್ರನೂ, ನನಗೆ ಕಾರ್ಯಸಿದ್ಧಿಯನ್ನುಂಟುಮಾಡಲಿ! ಸಮಸ್ತಭೂತಗಳೂ, ನನಗೆ ಕಾರ್ಯಸಿದ್ಧಿಯಾಗುವಂತೆ ಅನುಗ್ರಹಿಸಲಿ! ಸಮಸ್ತಭೂತಗಳಿಗೂ ಪ್ರಭುವಾದ ಶ್ರೀಮಹಾವಿಷ್ಣುವು ನನಗೆ ಕಾರ್ಯಸಿದ್ಧಿಯನ್ನು ಕೊಡಲಿ! ಇನ್ನೂ ಕಣ್ಣಿಗೆ ಅಗೋಚರರಾಗಿರುವವರೂ, ದಾರಿಯಲ್ಲಿ ಗೋಚರಿಸುವವರೂ ನನಗೆ ಕಾರ್ಯಸಿದ್ಧಿಯನ್ನನುಗ್ರಹಿಸಲಿ! ಆಹಾ! ಉಬ್ಬಿ ಎಸಳಾದ ಮೂಗಿನಿಂದಲೂ, ಬಿಳುಪಾದ ಹಲ್ಲುಗಳಿಂದಲೂ, ಶುಭ್ರವಾದ ಮಂದಹಾಸದಿಂದಲೂ, ಕಮಲದಳಗಳಂತಿರುವ ಕಣ್ಣುಗಳಿಂದಲೂ ಕೂಡಿ, ಚಂದ್ರನಿಗೆಣೆಯಾದ ಕಾಂತಿಯುಳ್ಳ ಆ ಸೀತೆಯ ಮುಖವನ್ನು ನಾನು ಇನ್ನೆಂದಿಗೆ ನೋಡುವೆನು? ಅಯ್ಯೋ! ಅತಿನೀಚನಾಗಿ, ಮಹಾಪಾಪಿಯಾಗಿ, ಘಾತುಕನಾಗಿ,

ಘೋರವೇಷವುಳ್ಳವನಾದ ಆ ರಾವಣನು ಬಲಾತ್ಕಾರದಿಂದ ಕದ್ದು ತಂದಿಟ್ಟಿರುವ ಅಬಲೆಯಾದ ಆ ಸೀತೆಯು ತನ್ನ ಕಣ್ಣಿಗೆ ಬೀಳುವ ಬಗೆಯೇನು?" ಎಂದು ನಾನಾವಿಧದಿಂದ ಚಿಂತಿಸುತಿದ್ದನು.

ಇಲ್ಲಿಗೆ ಹದಿಮೂರನೆಯ ಸರ್ಗವು.

ಹನುಮಂತನು ಅಶೋಕವನವನ್ನು ಪ್ರವೇಶಿಸಿ ಶಿಂಶುಪಾವೃಕ್ಷವನ್ನು ನೋಡಿದುದು.

ಮಹಾತೇಜಸ್ವಿಯಾದ ಹನುಮಂತನು ಹೀಗೆ ಮುಹೂರ್ತಕಾಲದವರೆಗೆ ಧ್ಯಾನಿಸುತಿದ್ದು, ಅಶೋಕವನಕ್ಕೆ ಹೋಗಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ಅಗಲೇ ಆ ಅರಮನೆಯ ಪ್ರಾಕಾರದಿಂದಿಳಿದು ಅಶೋಕವನಪ್ರಾಕಾರಕ್ಕೆ ಹಾರಿ ಕುಳಿತನು. ಆ ಪ್ರಾಕಾರದ ಮೇಲೆ ಕುಳಿತಹಾಗೆಯೇ, ಆ ತೋಟದಮೇಲೆ ಕಣ್ಣಿಟ್ಟು, [1] ವಸಂತಕಾಲವು ಪ್ರಾರಂಭವಾದುದರಿಂದ, ಚೆನ್ನಾಗಿ ಪುಷ್ಪಿಸಿದ ಅಲ್ಲಿನ ನಾನಾಬಗೆಯ ಗಿಡಗಳನ್ನು ನೋಡಿದನು. ಅಲ್ಲಿ ಪುಷ್ಪಭರಿತಗಳಾದ ಸಾಲೆ, ಅಸುಗೆ, ಉದ್ದಾಟಕಿ, ನಾಗಕೇಸರ, ಮಾವು, ಮರ್ಕಟಕ, ಮೊದಲಾದ ವೃಕ್ಷಗಳಿಲ್ಲವನ್ನೂ ಕಂಡನು. ಅವುಗಳನ್ನು ನೋಡಿದೊಡನೆ, ಅವನು ನಾಣಿನಿಂದ ಹೊರಟ ಬಾಣದಂತೆ, ಅತಿವೇಗದಿಂದ ಹಾರಿಬಂದು, ಅನೇಕ ಲತೆಗಳಿಂದ ತುಂಬಿದುದಾಗಿಯೂ, ಮಾವಿನ ತೋಪುಗಳಿಂದ ನಿಬಿಡವಾಗಿಯೂ ಇದ್ದ ಒಂದು ಮರದ ಗುಂಪಿನಲ್ಲಿಳಿದನು. ಆ ತೋಟದಲ್ಲಿಯೋ ಚಿತ್ರವಿಚಿತ್ರಗಳಾದ ಗಿಡಗಳು ರೇಖೆಕಟ್ಟಿದಂತೆ ಬೆಳೆದಿರುವುವು. ಅಲ್ಲಲ್ಲಿ ಪಕ್ಷಿಗಳು ಕಿವಿಗಿಂಪಾಗಿ ಕೂಗುತ್ತಿರುವುವು. ಬೆಳ್ಳಿಯಂತೆಯೂ, ಬಂಗಾರದಂತೆಯೂ ಬಣ್ಣವುಳ್ಳ ನಾನಾಜಾತಿಯ ವೃಕ್ಷಗಳು ತುಂಬಿರುವುವು. ಪಕ್ಷಿಗಳಿಂದಲೂ, ಮೃಗಸಮೂಹಗಳಿಂದಲೂ ವಿಚಿತ್ರವಾದ ಆ ತೋಪಿನಲ್ಲಿ ಬೇರೆಬೇರೆ ಜಾತಿಯ ಗಿಡಗಳುಳ್ಳ ಸಣ್ಣ ತೋಟಗಳೂ ಅನೇಕವಾಗಿರುವುವು. ಈ ವೃಕ್ಷಸಮೂಹಗಳಿಂದ ಚಿತ್ರಿತವಾದ ಆ ತೋಟವು ಉದಯಕಾಲದ ಸೂರ್ಯನಂತೆಯೇ ಪ್ರಕಾಶಿಸುವುದು. ಬಗೆಬಗೆಯ ಹೂಗಿಡಗಳೂ, ಹಣ್ಣು

1. ಇಲ್ಲಿ ವಸಂತಪ್ರಾರಂಭವೆಂದರೆ "ಪೌರ್ಣಮಾಸ್ಯಾ ಮಾಸಾನ್ ಸಂಪ್ರಾದ್ಯ" ಎಂಬಂತೆ, ಹುಣ್ಣಿಮೆಯಿಂದ ಮಾಸವನ್ನೆಣಿಸುವ ಪಕ್ಷವನ್ನನುಸರಿಸಿ, ಫಾಲ್ಗುಣಪೂರ್ಣಿಮೆಗೆ ಮೊನ್ನೆಯದಿನವೆಂದು ಗ್ರಾಹ್ಯವು.

ಗಿಡಗಳೂ, ಸುತ್ತಲೂ ಹಬ್ಬಿಬೆಳೆದಿರುವುವು. ವಿಸಿದ ಕೋಗಿಲೆಗಳೂ, ಭ್ರಮರಗಳೂ ಎಡೆಬಿಡದೆ ಆದನ್ನಾಶ್ರಯಿಸಿರುವುವು. ಸಮಸ್ತಜನಗಳಿಗೂ ಸಂತೋಷಕರವಾಗಿ, ಅನೇಕ ಮೃಗಪಕ್ಷಿಗಳನ್ನು ಉಲ್ಲಾಸಗೊಳಿಸುತ್ತಿರುವ ಆ ವಸಂತಕಾಲದಲ್ಲಿ, ಅಂಜನೇಯನು ಆ ತೋಟಕ್ಕೆ ಪ್ರವೇಶಿಸಿ, ಸೀತೆಯನ್ನು ಹುಡುಕುವುದಕ್ಕಾಗಿ ಅಲ್ಲಲ್ಲಿ ಸುತ್ತಿ ಬರುತಿದ್ದನು. ಎಲ್ಲಿ ನೋಡಿದರೂ ಮದಿಸಿದ ನವಿಲುಗಳು ಕೇಕಾಧ್ವನಿಯಿಂದ ಕೂಗುತಿದ್ದುವು. ನಾನಾಜಾತಿಯ ಪಕ್ಷಿಸಮೂಹಗಳು ಅಸಂಖ್ಯಾತವಾಗಿ ತಿರುಗುತಿದ್ದುವು. ಹನುಮಂತನು ಅಲ್ಲಿ ರಾಜಪುತ್ರಿಯಾದ ಸೀತೆಯನ್ನು ಹುಡುಕುತ್ತಿರುವಾಗ, ಅವನ ಸಂಜ್ಞೆಯಿಂದಲೇ ಅಲ್ಲಿನ ಮರಗಳು ಕದಲುತಿದ್ದುದರಿಂದ, ಆ ಮರಗಳಮೇಲೆ ಅಲ್ಲಲ್ಲಿ ಸುಖವಾಗಿ ನಿದ್ರಿಸುತಿದ್ದ ಹಕ್ಕಿಗಳು ತಟ್ಟನೆ ಎಚ್ಚರಗೊಂಡು ಮೇಲೆ ಹಾರುತಿದ್ದುವು. ಆ ಹಕ್ಕಿಗಳ ಹಾರಾಟದಲ್ಲಿ ಅವುಗಳ ರೆಕ್ಕೆಯ ಗಾಳಿಗೆ ಅಲ್ಲಿನ ಗಿಡಗಳು ಬಹಳವಾಗಿ ಅಲುಗಿ ನಾನಾಬಣ್ಣದ ಹೂಗಳನ್ನು ಚೆಲ್ಲುತಿದ್ದುವು ಹೀಗೆ ಮರಗಳಿಂದುದಿರಿದ ಪುಷ್ಪವರ್ಷದಿಂದ ಮುಚ್ಚಿದ ಮೈಯುಳ್ಳ ಹನುಮಂತನು, ಆ ಅಶೋಕವನಮಧ್ಯದಲ್ಲಿ ಅಲಂಕಾರಾರ್ಥವಾಗಿ ಮಾಡಿಟ್ಟಿರುವ ಒಂದು ಹೂವಿನ ಬೆಟ್ಟದಂತೆ ಕಾಣುತಿದ್ದನು. ಮರಗಳ ನಡುವೆ ನುಗ್ಗಿನುಗ್ಗಿ ಸಮಸ್ತದಿಕ್ಕುಗಳನ್ನೂ ಸುತ್ತಿ ಬರುತಿದ್ದ ಈ ಅಂಜನೇಯನನ್ನು ನೋಡಿ ಸಮಸ್ತಭೂತಗಳೂ, ಆ ವನವನ್ನು ಪ್ರವೇಶಿಸಿರುವ ಮೂರ್ತಿಮಂತನಾದ ವಸಂತನೆಂದೇ ಭಾವಿಸಿದವು. ಮರಗಳಿಂದುದಿರಿದ್ದ ಬಗೆಬಗೆಯ ಹೂಗಳಿಂದ ವ್ಯಾಪ್ತವಾದ ಆ ವನಭೂಮಿಯು, ವಿಚಿತ್ರಾಭರಣಭೂಷಿತೆಯಾದ ಒಂದುಸ್ತ್ರೀಯಂತೆ ಕಾಣುತಿತ್ತು. ಮಹಾಬಲಾಢ್ಯನಾದ ಹನುಮಂತನು, ಅಲ್ಲಲ್ಲಿ ವೃಕ್ಷಗಳನ್ನು ಕೈಯಿಂದ ಹಿಡಿದಾಡಿಸುತ್ತಿರಲು, ಆ ಗಿಡಗಳಲ್ಲಿ ಒಂದೆಲೆಯೂಗಲಿ, ಒಂದುಹೂವಾಗಲಿ, ಒಂದುಹಣ್ಣಾಗಲಿ ಇಲ್ಲದೆ, ಅವೆಲ್ಲವೂ ಬೋಟುಮರಗಳಂತಾಗಿ, ಜೂಜಿನಲ್ಲಿ ತಮ್ಮ ಬಟ್ಟೆಬರೆಗಳನ್ನೂ, ಒಡವೆವಸ್ತುಗಳನ್ನೂ ಸೋತು ನಿಂತಿರುವ ಧೂರ್ತರಂತೆ ಕಾಣುತಿದ್ದುವು. ಮಹಾವೇಗಶಾಲಿಯಾದ ಹನುಮಂತನಿಂದ ಕದಲಿಸಲ್ಪಟ್ಟ ಗಿಡಗಳೆಲ್ಲವೂ, ಹಣ್ಣು, ಕೂ, ಎಲೆ, ಮುಂತಾದುವುಗಳೊಂದೂ ಇಲ್ಲದೆ ಒಣಗಿದ ಮರಗಳಂತಾದುವು. ಮತ್ತು ಅವು ಬೆರಗಾಳಿಯ ಬಡಿತಕ್ಕೆ ಸಿಕ್ಕಿದಂತೆ ಕೇವಲಸ್ಕಂಧಮಾತ್ರವನ್ನೇ ನೆಮ್ಮಿ ನಿಂತಿದ್ದುವು. ಮೇಲಿದ್ದ ಪಕ್ಷಿಗಳೆಲ್ಲವೂ ಬಲ್ಲಾಚದರಾಗಿ ಹಾರಿದುವು. ಈ ಅಂಜನೇಯನು ಮುಟ್ಟಿದ ಒಂದೊಂದು ಮರವೂ ಯಾವ ಕೆಲಸಕ್ಕೂ ಬಾರದಂತಾಯಿತು. ಹೀಗೆ ಹನುಮಂತನು ತನ್ನ ಬಾಲದಿಂದಲೂ, ಕೈಗಳಿಂದಲೂ,

ಕಾಲುಗಳಿಂದಲೂ ಅಲ್ಲಲ್ಲಿ ಮರಗಳನ್ನು ಹಿಡಿದು ಕದಲಿಸುತ್ತಿರಲು, ಮುರಿದು ಬಿದ್ದ ಆಮರದ ತುಂಡುಗಳಿಂದ ಆಶೋಕವನಿಕೆಯು, ರತಿಕ್ರೀಡೆಯ ಸಂಭ್ರಮದಲ್ಲಿ ಬಿಚ್ಚಿದ ತಲೆಕೂದಲುಗಳಿಂದಲೂ ಕದಲಿದ ಕುಂಕುಮದಿಂದಲೂ, ಕಂದಿದ ತುಟಿಯಿಂದಲೂ, ಉಗುರಿನ ಗಾಯಗಳಿಂದಲೂ, ಹಲ್ಲಿನ ಗುರುತುಗಳಿಂದಲೂ ಕೂಡಿ ಶೋಭಿಸುವ ಯೌವನಸ್ತ್ರೀಯಂತೆ ಕಾಣುತಿತ್ತು. ವಿಂಧ್ಯಪರ್ವತದಮೇಲೆ ಮಲಗಿದ ಮೇಘಸಮೂಹವನ್ನು ಮಳೆಗಾಳಿಯು ಅಪ್ಪಳಿಸಿ ಚದರಿಸುವಂತೆ ಹನುಮಂತನು ತನ್ನ ಬಲದಿಂದ ಆವನದ ಗಿಡಬಳ್ಳಿಗಳೆಲ್ಲವನ್ನೂ ಕಿತ್ತಿಸೆಯುತಿದ್ದನು. ಮತ್ತು ಆವನದ ನಡುನಡುವೆ ಹನುಮಂತನು ಅಲ್ಲಲ್ಲಿ ರತ್ನದ ನೆಲಗಟ್ಟುಗಳನ್ನೂ, ಜೆನ್ನಬೆಳ್ಳಿಯ ಮೈದಾನಗಳನ್ನೂ, ವಿವಿಧಾಕಾರವುಳ್ಳ ಬಾವಿಗಳನ್ನೂ ಕಂಡನು. ಅವೆಲ್ಲವೂ ತಿಳಿನೀರಿನಿಂದ ತುಂಬಿ ಅತಿರಮಣೀಯವಾಗಿದ್ದುವಲ್ಲದೆ ಒಂದೊಂದುಬಾವಿಯೂ, ರತ್ನದ ಸೋಪಾನಗಳಿಂದಲೂ, ಮುತ್ತು ಹವಳಗಳ ಮಳಲುದಿಣ್ಣೆಗಳಿಂದಲೂ, ಸ್ಫಟಿಕದ ನೆಲಗಟ್ಟುಗಳಿಂದಲೂ, ಚಿತ್ರವಿಚಿತ್ರಗಳಾದ ಬಂಗಾರದ ತೀರವೃಕ್ಷಗಳಿಂದಲೂ ಶೋಭಿಸುತಿದ್ದುವು. ಆ ಬಾವಿಗಳೆಲ್ಲವೂ ಅರಳಿದ ತಾವರೆಗಳಿಂದಲೂ, ನೈದಿಲೆಗಳಿಂದಲೂ ತುಂಬಿದ್ದುವು. ಚಕ್ರವಾಕಗಳೂ, ನೀಕೋಳಿಗಳೂ, ಹಂಸಸಾರಸಾದಿಪಕ್ಷಿಗಳೂ, ಕಿವಿಗಿಂಪಾಗಿ ಕೂಗುತಿದ್ದುವು. ಅಲ್ಲಲ್ಲಿ ಅನೇಕತೀರವೃಕ್ಷಗಳಿಂದ ತುಂಬಿ, ವಿಸ್ತಾರವಾಗಿ ಪ್ರವಹಿಸುತಿದ್ದ ನದಿಗಳು ಕಾಣುತಿದ್ದುವು. ಅಲ್ಲಿನ ಒಂದೊಂದು ನದಿಯೂ ಅಮೃತದಂತೆ ರುಚಿಯಾದ ನೀರಿನಿಂದ ತುಂಬಿ ನೂರಾರುಲತೆಗಳಿಂದ ಪರಿವೃತವಾಗಿರುವುದು. ಒಂದೊಂದು ನದಿಯೂ, ಕಲ್ಪವೃಕ್ಷದ ಹೂಗಳಿಂದ ಹೊದಿಸಲ್ಪಟ್ಟಿರುವುದು. ಅವುಗಳ ಸುತ್ತಲೂ ಬಗೆಬಗೆಯ ಪೊದೆಗಳು ದಟ್ಟವಾಗಿ ತುಂಬಿ ಬೆಳೆದಿರುವುವು. ನಡುನಡುವೆ ಕಣಿಗಿಲೆಗಿಡಗಳು ಪುಷ್ಪಭರಿತಗಳಾಗಿ ಶೋಭಿಸುವುವು. ಇವೆಲ್ಲವನ್ನೂ ನೋಡುತ್ತ ಆಂಜನೇಯನು ಮುಂದೆ ಬಂದಾಗ ಉನ್ನತವಾದ ಶಿಖರವುಳ್ಳುದಾಗಿ, ಮೇಘಕ್ಕೆ ಸಮಾನವಾಗಿ, ಅತಿರಮಣೀಯವಾಗಿದ್ದ ಜಗತಿಪರ್ವತವೆಂಬ ಒಂದು ಮಣ್ಣಿನ ಬೆಟ್ಟವನ್ನು ಕಂಡನು. ಆ ಪರ್ವತಶಿಖರವೋ ಮಹೋನ್ನತವಾಗಿ, ಅತಿವಿಚಿತ್ರವಾಗಿ, ನಾಲ್ಕುಕಡೆಗೂ ಹಬ್ಬಿ ಬೆಳೆದಿರುವುದು. ಅಲ್ಲಲ್ಲಿ ಕಲ್ಲಿನ ಮುಂಟೆಪಗಳೂ ಬಗೆಬಗೆಯ ವೃಕ್ಷಗಳೂ, ಕಾಣುತ್ತಿರುವುವು. ಆಂಜನೇಯನು ಆ ಪರ್ವತದ ಸೊಗಸನ್ನು ಸುತ್ತಲೂ ಕಣ್ಣಿಟ್ಟು ನೋಡುವಾಗ, ಪ್ರಣಯಕಲಹದಲ್ಲಿ ನಾಯಕನ ತೊಡೆಯಿಂದ ನೂಕಲ್ಪಡುವ ಯುವತಿಯಂತೆ ಆ ಬೆಟ್ಟದಿಂದಿಳಿಯುವ ಒಂದು ನದಿಯನ್ನು ನೋಡಿದನು. ಹಣ್ಣುಗಳ

ಭಾರದಿಂದ ಆ ನದಿಯ ನೀರನ್ನು ಮುಟ್ಟುವಂತೆ ಬಗ್ಗಿದ ಕೊಂಬೆಗಳುಳ್ಳ ಅಲ್ಲಿನ ತೀರವೃಕ್ಷಗಳೆಲ್ಲವೂ, ಪ್ರಣಯಕುಪಿತೆಯಾಗಿ ನಾಯಕನನ್ನು ಧಿಕ್ಕರಿಸಿ ವೇಗದಿಂದ ಹೋಗುತ್ತಿರುವ ಯುವತಿಯನ್ನು ಅಕೆಯ ಪ್ರಿಯಬಂಧುಗಳು ಕೈಯಿಡ್ಡಗಟ್ಟಿ ಸಮಾಧಾನಪಡಿಸುವಂತೆ ಕಾಣುತಿದ್ದುವು. ಹಾಗೆಯೇ ಆ ನದೀ ಪ್ರವಾಹವೂ ಆ ಕೊಂಬೆಗಳಿಗೆ ಬಡಿದು, ಸ್ವಲ್ಪವಾಗಿ ಹಿಂದಕ್ಕೆ ಸರಿಯುತ್ತಿರಲು, ಬಂಧುಗಳ ಮಾತನ್ನು ಮೀರಲಾರದೆ ಕೋಪವನ್ನು ಬಿಟ್ಟು, ಸಮಾಧಾನಹೊಂದಿ ತನ್ನ ಪ್ರಿಯನ ಸವಿೀಪಕ್ಕೆ ಹಿಂತಿರುಗುವ ನಾಯಕಿಯಂತೆ ಕಾಣುತಿತ್ತು. ಮತ್ತು ಹನುಮಂತನು ಅಲ್ಲಲ್ಲಿ ಅನೇಕಪಕ್ಷಿಗಳಿಂದ ತುಂಬಿದ ತಾವರೆಕೊಳಗಳನ್ನೂ, ತಿಳಿನೀರಿನಿಂದ ತುಂಬಿದ ಕೃತ್ರಿಮಸರೋವರಗಳನ್ನೂ ನೋಡಿದನು. ಆ ಕೊಳಗಳೆಲ್ಲವೂ ಮುತ್ತಿನ ಮರಗಳಿಂದಲೂ, ರತ್ನದ ಸೋಪಾನಗಳಿಂದಲೂ ಶೋಭಿಸುತಿದ್ದುವು. ಆ ಪ್ರದೇಶಗಳೆಲ್ಲವೂ ಅನೇಕ ಮೃಗಸಮೂಹಗಳಿಂದಲೂ, ವಿಚಿತ್ರವನಗಳಿಂದಲೂ, ಅತಿಮನೋಹರವಾಗಿದ್ದುವು. ವಿಶ್ವಕರ್ಮನಿರ್ಮಿತಗಳಾದ ಮಹೋನ್ನತ ಸೌಧಗಳಿಂದಲೂ, ಕೃತ್ರಿಮವನಗಳಿಂದಲೂ, ಆ ಅಶೋಕವನವು ಸುತ್ತಲೂ ಅಲಂಕರಿಸಲ್ಪಟ್ಟಂತೆ ಕಾಣುತಿತ್ತು. ಅಲ್ಲಿ ಯಾವ ಹೂಗಿಡಗಳಾಗಲಿ, ಹಣ್ಣುಗಿಡಗಳಾಗಲಿ, ಅಂದವಾದ ಮೇಲ್ಕಟ್ಟುಗಳಿಂದಲೂ, ವಿಸ್ತಾರವಾದ ಜಗುಲಿಗಳಿಂದಲೂ, ಆ ಜಗುಲಿಯನ್ನು ಹತ್ತುವುದಕ್ಕೆ ತಕ್ಕ ಸುವರ್ಣಸೋಪಾನಗಳಿಂದಲೂ ಶೋಭಿಸುತಿದ್ದುವು. ಹೀಗೆ ಸರ್ವೋತ್ತಮ ಸೌಭಾಗ್ಯವುಳ್ಳ ಆ ವನದ ಸೊಬಗನ್ನು ಆಂಜನೇಯನು ಸುತ್ತಿಸುತ್ತಿನೋಡುತ್ತ, ಮುಂದೆ ಬರುವಾಗ, ಅನೇಕ ಲತೆಗಳಿಂದ ಪರಿವೃತವಾಗಿಯೂ, ಎಲೆಗಳಿಂದ ನಿಬಿಡವಾಗಿಯೂ, ಸುತ್ತಲೂ ಚಿನ್ನದ ಜಗತಿಕಟ್ಟನಿಂದ ಶೋಭಿತವಾಗಿಯೂ ಇದ್ದ ಸುವರ್ಣಮಯವಾದ ಒಂದು ಶಿಂಶುಪಾವೃಕ್ಷವನ್ನು ಕಂಡನು. ಮತ್ತು ಆ ಮರದಸುತ್ತಲೂ ಚಿತ್ರವಿಚಿತ್ರವಾಗಿ ಮಾಡಿದ ನೆಲಗಟ್ಟುಗಳನ್ನೂ, ತೊಟ್ಟಿಗಳನ್ನೂ, ನೀರುಕಟ್ಟುವ ಕಾಲುವೆಗಳನ್ನೂ, ಅಗ್ನಿಯಂತೆ ಧಗಧಗಿಸುವ ಇನ್ನೂ ಕೆಲವುಬೇರೆ ಸುವರ್ಣವೃಕ್ಷಗಳನ್ನೂ ಕಂಡನು. ಸುಮೇರುಪರ್ವತದ ಕಾಂತಿಯಿಂದ ತುಂಬಿದ ಸೂರ್ಯನಂತೆ, ಆ ಸುವರ್ಣವೃಕ್ಷಗಳ ಕಾಂತಿಯಿಂದ ಮುಚ್ಚಿದ ಮೈಯುಳ್ಳ ಈತನು, ತನ್ನನ್ನೇ ತಾನು ನೋಡಿಕೊಳ್ಳುತ್ತ, 'ಛಲೆ! ಈಗ ಹಾನೊಂದು ಚಿನ್ನದ ಕಪಿಯಾದೆನು!" ಎಂದು ಹರ್ಷಿಸುತಿದ್ದನು. ಹೀಗೆ ಅನೇಕ ಸುವರ್ಣಲತೆಗಳಿಂದ ಪರಿವೃತವಾಗಿಯೂ ಮುಂದಮಾರುತದಿಂದ ಚಾಲಿತವಾಗಿಯೂ, ಅಲ್ಲಲ್ಲಿ ಕಟ್ಟಿದ ಕಿರುಗೆಜ್ಜೆಗಳ ಧ್ವನಿಯಿಂದ ಶೋಭಿತವಾಗಿಯೂ ಇದ್ದ

ಶಿಂಶುಪಾವೃಕ್ಷವನ್ನು ನೋಡಿನೋಡಿ ವಿಸ್ಮಯಪಡುತ್ತ, ಪುಷ್ಪಿಸಿದ ಕೊನೆಗಳಿಂದಲೂ, ಎಳೇ ಚಿಗುರುಗಳಿಂದಲೂ, ಅಂದವಾದ ಎಲೆಗಳಿಂದಲೂ ತುಂಬಿ, ಅತಿ ಮನೋಹರವಾದ ಆ ಶಿಂಶುಪಾವೃಕ್ಷದ ಒಂದು ಶಾಖೆಯಮೇಲೆ ಹತ್ತಿಕುಳಿತು, ತನ್ನಲ್ಲಿ ತಾನು "ನಾನು ಇಲ್ಲಿಯೇ ಕುಳಿತು ಸೀತೆಯನ್ನು ಹುಡುಕುವೆನು. ಆ ಸೀತೆಯಿಂತೂ ರಾಮನನ್ನು ಕಾಣದೆ ಕುದಿಯುತ್ತಿರುವಳು. ಆ ದುಃಖೋದಶಮು ನಾರ್ಥವಾಗಿ ಇಲ್ಲಿಗೆ ಬಂದು ಅತ್ತಿತ್ತ ಸಂಚರಿಸಬಹುದು. ಸೀತೆಯನ್ನು ಕಂಡು ಹಿಡಿಯಬೇಕಾದರೆ ಇದೇ ಸರಿಯಾದ ಸ್ಥಳವು. ದುರಾತ್ಮನಾದ ರಾವಣನಿಗೆ ಸೇರಿದ್ದರೂ ಈ ತೋಟವು ರಮ್ಯವಾಗಿಯೇ ಇರುವುದು. ಅಲ್ಲಲ್ಲಿ ಸಂಪಗೆಗಿಡಗಳೂ, ಚಂದನ ವೃಕ್ಷಗಳೂ, ವಕುಳವೃಕ್ಷಗಳೂ, ಈ ವನಕ್ಕೆ ಅಲಂಕಾರಪ್ರಾಯವಾಗಿರುವುವು. ಅನೇಕಪಕ್ಷಿಗಳಿಗಾಶ್ರಯವಾದ ಈ ತಾವರೆಕೊಳವು ಕೂಡ ಅತಿಮನೋಹರವಾಗಿರುವುದು. ಸೀತೆಯು ದುಃಖಶಾಂತಿಗಾಗಿ ಇಲ್ಲಿಗೆ ಬಂದೇಬರುವಳು. ಅಕೆಗೆ ವನವನ್ನು ಸುತ್ತಿ ಬಳಕೆಯುಂಟು. ಅದುದರಿಂದ ರಾಮನ ಪ್ರಿಯಪತ್ನಿಯಾದ ಆ ಜನಕಪುತ್ರಿಯೆಯು ಇಲ್ಲಿಗೆ ಬಾರದಿರಳು. ಹಾಗಿಲ್ಲವೇ ಜಿಂಕೆಯ ಕಣ್ಣಿನಂತೆ ಕಣ್ಣುಳ್ಳ, ಅತಿಚತುರಳಾದ, ಮತ್ತು ಲೋಕಪೂಜ್ಯಳಾದ ಆ ಸೀತೆಯು, ರಾಮ ವಿಯೋಗದಿಂದುಂಟಾದ ದುಃಖವನ್ನು ತಡೆಯಲಾರದೆ ಈ ಸಮೀಪದ ವನಕ್ಕಾದರೂ ಬರಬಹುದು. ಅಕೆಗೆ ವನವಾಸದಲ್ಲಿಯೂ ವಿಶೇಷಪ್ರೀತಿಯುಂಟು. ವನದಲ್ಲಿಯೂ ಸುತ್ತಿಬಳಕೆಯುಳ್ಳವಳು. ಅದುದರಿಂದ ರಾಮವಿಷಯವಾದ ದುಃಖದಿಂದ ಶಪಿಸುತ್ತಿರುವ ಆಕೆಯು ಇಲ್ಲಿಗಾದರೂ ಅವಶ್ಯವಾಗಿ ಬಾರದೆ ಬಿಡಳು. ರಾಮನಿಗೆ ಪ್ರಿಯಪತ್ನಿಯಾಗಿಯೂ, ಜನಕಪುತ್ರಿಯಾಗಿಯೂ, ಪತಿವ್ರತೆಯಾಗಿಯೂ ಇರುವ ಆ ಸೀತೆಯು, ವನಮೃಗಗಳಲ್ಲಿ ಬಹಳ ಆಸೆಯುಳ್ಳವಳು. ಅವುಗಳ ಕ್ಷೇಮವನ್ನು ವಿಚಾರಿಸುವುದಕ್ಕಾದರೂ ಇಲ್ಲಿಗೆ ಬರಬಹುದು. ಮತ್ತು ಅಕೆಯು ಸಂಧ್ಯೋಪಾಸನೆಯಲ್ಲಿಯೂ ಬಹಳ ಶ್ರದ್ಧೆಯುಳ್ಳವಳಾದುದರಿಂದ, ಆ ಕಾರ್ಯಕ್ಕಾದರೂ ಈ ನದಿಗೆ ಬಂದೇಬರುವಳು. ಇದರಲ್ಲಿ ಸಂದೇಹವಿಲ್ಲ. ಈ ಅಶೋಕವನವು ಅವಳ ಗುಣಕ್ಕೂ ಸೌಭಾಗ್ಯಕ್ಕೂ ಅನುರೂಪವಾಗಿರುವುದು. ರಾಜಾಧಿರಾಜನಾದ ಶ್ರೀರಾಮನ ಪತ್ನಿಯಾಗಿಯೂ, ಚಂದ್ರನಂತೆ ಪ್ರಸನ್ನ ಮುಖವುಳ್ಳವಳಾಗಿಯೂ ಇರುವ ಆ ಸೀತೆಯು ಬದುಕಿರುವುದೇ ನಿಜವಾದರೆ, ಪುಣ್ಯಜಲವುಳ್ಳ ಈ ನದಿಗೆಂತೂ ಅವಶ್ಯವಾಗಿ ಬಂದೇಬರಬೇಕು." ಎಂದು ಮಹಾತ್ಮನಾದ ಆ ಕಪಿವುಮಂತನು ಅನುಮಾನದಿಂದ ಶಿಷ್ಯನುಮಾಡಿಕೊಂಡು, ಆ ಸೀತೆಯನ್ನೇ ನೋಕ್ಷಿಸುತ್ತ, ಸುತ್ತಲೂ ಚೆನ್ನಾಗಿ ಪುಷ್ಪಿಸಿದ ಆ ಶಿಂಶುಪಾವೃಕ್ಷದ

ಇನ್ನೂ ಮೇಲೆಮೇಲೆ ಸಂಕಟಪಡಿಸುವುದು ನಿನಗೆ ತರವಲ್ಲ !" ಎಂದು ಹೇಳುತ್ತಿರುವಾಗಲೇ ಅವಳಿಗೆ ಆ ಶಂಕೆಯು ತಗ್ಗಲು, ತಿರುಗಿ ಸೌಮ್ಯವಾಕ್ಯದಿಂದ ಆ ಹನುಮಂತನನ್ನು ಕುರಿತು "ಎಲೆ ಕಪಿಶ್ರೇಷ್ಠನೆ ! ನಿನ್ನನ್ನು ನಾನು ಮೊದಲು ನೋಡಿದಾಗಲೇ ನಿನ್ನಲ್ಲಿ ನನಗೆ ಒಂದು ವಿಧವಾದ ಪ್ರೀತಿಯು ಹುಟ್ಟಿರುವುದರಿಂದ, ನಿನ್ನಲ್ಲಿ ನನಗಿರುವ ರಾವಣನೆಂಬ ಶಂಕೆಯು ನಿಜವಾಗಿರದು ! ಹೇಗಾದರೂ ಆಗಲಿ! ಎಲೆ ಭದ್ರನೆ! ನೀನು ನಿಜವಾಗಿ ರಾಮದೂತನಾಗಿಯೇ ಬಂದಿರುವ ಪಕ್ಷದಲ್ಲಿ ನಿನಗೆ ಮಂಗಳವಾಗಲಿ ! ಹಾಗಿದ್ದರೆ ಮೊದಲು ನಾನು ನಿನ್ನಲ್ಲಿ ಒಂದು ವಿಷಯವನ್ನು ಕೇಳಿಕೊಳ್ಳುವೆನು ! ರಾಮಕಥೆಯನ್ನು ಕೇಳುತ್ತಿರುವುದರಲ್ಲಿ ನನಗೆ ಬಹಳಪ್ರಿಯವು. ಮತ್ತೊಮ್ಮೆ ನೀನು ನನ್ನ ಪ್ರಿಯನಾದ ಆ ರಾಮನ ಗುಣಗಳನ್ನು ಹೇಳುವೆಯಾ! ಎಲೆ ಸೌಮ್ಯನೆ ! ಪ್ರವಾಹವೇಗವು ನದಿಯ ದಡವನ್ನು ಹೇಗೋ ಹಾಗೆ ನಿನ್ನ ಸಾಧುಸ್ವಭಾವವೇ ನನ್ನ ಮನಸ್ಸನ್ನೆಳೆಯುತ್ತಿರುವುದು !" ಎಂದು ಹೇಳುತ್ತಿರುವಷ್ಟರಲ್ಲಿಯೇ ಅವಳಿಗೆ ತಿರುಗಿ ಸಂದೇಹವು ತೋರಿ "ಆಹಾ ! ಇದೇನು ? ನಾನು ಹೀಗೆ ದುಸ್ಸ್ವಪ್ನವನ್ನು ಕಾಣುತ್ತಿರುವೆನು? ನನ್ನ ಪ್ರಿಯಪತಿಯಾದ ರಾಮನು ನನ್ನಲ್ಲಿಗೆ ಯಾವುದೋ ಒಂದು ಕಪಿಯನ್ನು ಕಳುಹಿಸಿದಂತೆಯೂ, ಆದರಿಂದ ನಾನು ರಾಮನ ಕಥೆಯನ್ನು ಕೇಳುವಂತೆಯೂ, ಏನೇನೋ ಆಸೆಯನ್ನು ಹುಟ್ಟಿಸಿ, ಈ ಸ್ವಪ್ನವು ಬಹಳಹೊತ್ತಿನಿಂದ ನನ್ನನ್ನು ಮರುಳುಮಾಡಿಬಿಟ್ಟಿತಲ್ಲಾ ! ಇದು ದುಸ್ಸ್ವಪ್ನವಾದರೂ ಚಿಂತೆಯಿಲ್ಲ. ಈ ಸ್ವಪ್ನದಲ್ಲಿಯಾದರೂ ವೀರನಾದ ಆ ರಾಮನನ್ನು ಲಕ್ಷ್ಮಣಸಹಿತನನ್ನಾಗಿ ನೋಡಿದ್ದಪಕ್ಷದಲ್ಲಿ ಸ್ವಲ್ಪವಾದರೂ ತೃಪ್ತಿಯಾಗುತ್ತಿತ್ತು, ಅಯ್ಯೋ ! ಆ ಸ್ವಪ್ನಕ್ಕೂ ನನ್ನಲ್ಲಿ ವೈರಬುದ್ಧಿಯೆ ? ಆದರೆ ಇದನ್ನು ಸ್ವಪ್ನವೆಂದೂ ಹೇಳುವುದಕ್ಕಿಲ್ಲ. ಸ್ವಪ್ನದಲ್ಲಿ ಕಪಿಯನ್ನು ಕಂಡಮೇಲೆ ಸಂತೋಷವೆಂದರೇನು ? ನನಗಾದರೋ ಈಗ ಮೇಲೆ ಮೇಲೆ ಸಂತೋಷಸೂಚನೆಗಳು ತಲೆದೋರುವುವು. ಇದೇನು ನನ್ನ ಬುದ್ಧಿಭ್ರಮವೆ ? ಅಥವಾ ವಾಯುಜೇಷ್ಠೆಯೋ ? ನಿರಂತರವೂ ರಾಘವನ ಕ್ಷೇಮವಾರ್ತೆಯನ್ನು ಕೇಳಬೇಕೆಂದು ತವಕದಿಂದಿರುವ ನನಗೆ ಆ ಚಿಂತೆಯೇ ಹೀಗೆ ಭ್ರಮೆಯನ್ನುಂಟುಮಾಡಿರಬಹುದೇ ? ಉಪವಾಸದಿಂದ ನನ್ನ ಧಾತುಬಲವು ಕೆಟ್ಟಿರುವುದರಿಂದ, ದೇಹದಲ್ಲಿ ಪ್ರಬಲಿಸಿದ ವಾಯುಜೇಷ್ಠೆಯಿಂದ ಹೀಗೆ ತೋರುತ್ತಿರಬಹುದೆ ? ಅಥವಾ ಇದು ಉನ್ಮಾದದಿಂದುಂಟಾದ ಚಿತ್ತಭ್ರಮವೋ ? ಅಥವಾ ಬಿಸಿಲ್ಕೊರೆಯಂತೆ ಇದು ನನ್ನನ್ನು ಮೋಸಗೊಳಿಸುತ್ತಿರುವುದೋ ? ಇದನ್ನು ಉನ್ಮಾದವೆಂದೂ ಹೇಳುವುದಕ್ಕಿಲ್ಲ ! ಏಕೆಂದರೆ, ನನ್ನ ದೇಹದ ಮೇಲೆ ನನಗೆ ಚೆನ್ನಾಗಿ ಪ್ರಜ್ಞೆಯಿರುವುದು ! ಮುಂದಿರುವ ಈ ವಾನರನನ್ನೂ

ನಾನು ಚೆನ್ನಾಗಿ ತಿಳಿಯುತ್ತಿರುವೆನು. ಅದುದರಿಂದ ಇದು ಉನ್ಮಾದಾವಸ್ಥೆಯೂ ಅಲ್ಲ" ಎಂದು ನಾನಾವಿಧವಾಗಿ ಚಿಂತಿಸುತ್ತ, ತನ್ನ ಮುಂದೆ ನಡೆಯುತ್ತಿರುವು ದೆಲ್ಲವೂ ನಿಜವೋ, ಅಲ್ಲವೋ ಎಂಬುದನ್ನು ಕುರಿತೇ ಬಹಳ ಹೊತ್ತಿನವರೆಗೆ ಬಲಾ ಬಲಗಳನ್ನು ಪರ್ಯಾಲೋಚಿಸುತ್ತಿದ್ದಳು. ಕೊನೆಗೂ ಆಕೆಯು ರಾಕ್ಷಸರು ಕಾಮ ರೂಪಿಗಳೆಂಬುದನ್ನು ಸ್ಮರಿಸಿಕೊಂಡು, ನಿಂತಿದ್ದ ಆ ವಾನರೋತ್ತಮನನ್ನು ರಾವಣ ನೆಂದೇ ನಿಶ್ಚಯಿಸಿಬಿಟ್ಟಳು. ಜನಕಪುತ್ರಿಯಾದ ಸೀತೆಗೆ ಈ ನಿಶ್ಚಯವು ಹುಟ್ಟಿದ ಮೇಲೆ, ಅವಳು ಆ ವಾನರನ ಯಾವ ಮಾತಿಗೂ ಪ್ರತ್ಯುತ್ತರವನ್ನು ಕೊಡದೆ ಸುಮ್ಮನಿದ್ದುಬಿಟ್ಟಳು. ಹೀಗೆ ಸೀತೆಯು ಮಾತಾಡದೆ ಮೌನದಿಂದಿರುವುದನ್ನೂ, ಅವಳ ಭಯವನ್ನೂ ನೋಡಿ, ಹನುಮಂತನು ಆಕೆಯ ಮನೋಭಾವವನ್ನು ತಿಳಿದು ಕೊಂಡು, ತಿರುಗಿ ಅವಳ ಮನಸ್ಸನ್ನಾಕರ್ಷಿಸುವುದಕ್ಕಾಗಿ, ಕಿವಿಗಿಂಪಾದ ವಾಕ್ಯ ಗಳಿಂದ ಶ್ರೀರಾಮನ ಗುಣಗಳನ್ನೇ ಎತ್ತಿ ಹೇಳುವುದಕ್ಕೆ ತೊಡಗಿದನು. "ಅಹಾ! ಆ ಶ್ರೀರಾಮನ ಗುಣವನ್ನು ನಾನೇನೆಂದು ಹೇಳಲಿ! ಸೂರ್ಯನಂತೆ ಮಹಾ ತೇಜಸ್ವಿಯು. ಚಂದ್ರನಂತೆ ಸಮಸ್ತಲೋಕಗಳನ್ನೂ ಆಹ್ಲಾದಪಡಿಸಶಕ್ಯವನು. ಕುಬೇರನಂತೆ ಸಮಸ್ತಲೋಕಕ್ಕೂ ರಾಜಾಧಿರಾಜನೆನಿಸಿಕೊಂಡಿರುವನು. ವಿಷ್ಣು ವಿನಂತೆ ಲೋಕವಿಖ್ಯಾತವಾದ ಅಸಾಧಾರಣಪರಾಕ್ರಮವುಳ್ಳವನು. ಸತ್ಯಸಂಧನು. ಬೃಹಸ್ಪತಿಯಂತೆ ಮಧುರವಾಕ್ಯವುಳ್ಳವನು. ಮೂರ್ತಿಮಂತನಾದ ಮನ್ಮಥನಂತೆ ಸರ್ವೋತ್ತಮವಾದ ರೂಪಸಂಪತ್ತಿಯುಳ್ಳವನು. ಮನೋಹರವಾದ ಕಾಂತಿವಿಶೇಷ ವುಳ್ಳವನು, ಉಚಿತವಿಷಯಗಳಲ್ಲಿ ಮಾತ್ರವೇ ಕೋಪವನ್ನು ತೋರಿಸಶಕ್ಯವನು. ಕೋಪಪಾತ್ರರಾದವರನ್ನು ಕೊಂದುಬಿಡುವನೇ ಹೊರತು, ಅವನ ಕೋಪವು ವ್ಯರ್ಥವಾಗತಕ್ಕುದಲ್ಲ. ಸಮಸ್ತಲೋಕಗಳಿಗೂ ತಾನೇ ಶ್ರೇಷ್ಠನೆನಿಸಿಕೊಂ ಡಿರುವನು. ಮಹಾತ್ಮನಾದ ಆತನ ಭುಜದ ನೆರವನ್ನಾಶ್ರಯಿಸಿಯೇ ಸಮಸ್ತ ಲೋಕವೂ ಸುಖವಿಂದಿರುವುದು. ಎಲೆಭದ್ರೆ! ಅಂತಹ ಮಹಾತ್ಮನಾದ ರಾಮನನ್ನು ಮಾಯಾಮ್ಮಗರೂಪದಿಂದ ಅಶ್ರಮವನ್ನು ಬಿಟ್ಟುಕೊರಡಿಸಿ, ಅವನಿಲ್ಲದ ವೇಳೆ ಯಲ್ಲಿ ನಿನ್ನನ್ನು ಕದ್ದು ತಂದಿರುವ ಈ ರಾವಣನು, ಅದಕ್ಕೆ ತಕ್ಕ ಫಲವನ್ನು ಅನುಭವಿಸದಿರಲಾರನು. ಅದನ್ನು ನಿನ್ನ ಕಣ್ಣಾರೆ ನೀನೇ ನೋಡುವೆ. ಇನ್ನು ಶೀಘ್ರಕಾಲದಲ್ಲಿಯೇ, ಯಾವ ಮಹಾವೀರನು ಉರಿಯುವ ಬೆಂಕಿಯಂತಿರುವ ತನ್ನ ಬಾಣಗಳಿಂದ ಯುದ್ಧದಲ್ಲಿ ನೀಚನಾದ ರಾವಣನನ್ನು ಕೊಲ್ಲುವನೋ, ಆ ರಾಮನಿಗೆ ದೂತನಾಗಿಯೇ ನಾನು ನಿನ್ನಲ್ಲಿಗೆ ಬಂದಿರುವೆನು. ಅತ್ತಲಾಗಿ ರಾಮನೂ ನಿನ್ನ ವಿರಹದಿಂದ ಕೊರಗಿ ಸಂಕಟಪಡುತ್ತಿರುವನು. ನಿನ್ನ ಕ್ಷೇಮ

ವನ್ನು ವಿಚಾರಿಸಿ ಬರುವಂತೆಯೂ ಹೇಳಿ ಕಳುಹಿಸಿರುವನು. ಮಹಾತೇಜಸ್ವಿಯಾಗಿಯೂ, ಮಹಾಬಾಹುವಾಗಿಯೂ ಇರುವ ಸುಮಿತ್ರಾನಂದನನಾದ ಲಕ್ಷ್ಮಣನೂ ನಿನ್ನ ಪಾದಗಳಿಗೆ ನಮಸ್ಕರಿಸಿ ನಿನ್ನ ಕ್ಷೇಮವನ್ನು ವಿಚಾರಿಸಿರುವನು. ಎಲೆ ದೇವಿ! ಸಮಸ್ತವಾನರರಿಗೂ ಪ್ರಭುವಾಗಿ, ಈಗ ನಿನ್ನ ಪತಿಯಾದ ರಾಮನಿಗೆ ಪ್ರಿಯಮಿತ್ರನಾದ ಸುಗ್ರೀವನೆಂಬ ವಾನರನೂಕೂಡ ನಿನ್ನ ಕ್ಷೇಮವನ್ನು ವಿಚಾರಿಸುವಂತೆ ಹೇಳಿರುವನು. ಆ ರಾಮನೂ, ಲಕ್ಷ್ಮಣನೂ, ಸುಗ್ರೀವನೂ, ಯಾವಾಗಲೂ ನಿನ್ನನ್ನೇ ಸ್ಮರಿಸುತ್ತಿರುವರು. ಅಮ್ಮಾ! ನೀನು ಹೀಗೆ ರಾಕ್ಷಸಿಯರ ಕೈಗೆ ಸಿಕ್ಕಿಯೂ ಬದುಕಿರುವುದು ಭಾಗ್ಯವಶವೇ ಹೊರತು ಬೇರೆಯಲ್ಲ! ರಾಮನನ್ನೂ, ಮಹಾಬಲಾಢ್ಯನಾದ ಲಕ್ಷ್ಮಣನನ್ನೂ, ತೇಜಸ್ವಿಯಾದ ಸುಗ್ರೀವನನ್ನೂ ಅನೇಕಕೋಟಿವಾನರರ ಮಧ್ಯದಲ್ಲಿರುವಾಗ ಶೀಘ್ರದಲ್ಲಿಯೇ ನೀನು ನೋಡುವೆ! ನಾನು ಸುಗ್ರೀವನ ಮಂತ್ರಿಯು! ನನಗೆ ಹನುಮಂತನೆಂದು ಹೆಸರು. ಮಹಾಸಮುದ್ರವನ್ನು ದಾಟಿ ಈ ಲಂಕೆಗೆ ಬಂದಿರುವೆನು. ದುರಾತ್ಮನಾದ ಈ ರಾವಣನ ತಲೆಯನ್ನು ಕಾಲಿನಿಂದ ಮೆಟ್ಟಿ ನಿನ್ನನ್ನು ನೋಡಿಹೋಗಬೇಕೆಂದೇ ಬಂದೆನು. ನೀನು ನನ್ನನ್ನು ಕುರಿತು ಯಾವವಿಧವಾಗಿ ಭ್ರಮಿಸುವೆಯೋ ನಾನು ಅಂತವನಲ್ಲ. ಈ ಶಂಕೆಯನ್ನು ಬಿಡು. ನನ್ನ ಮಾತಿನಲ್ಲಿ ನಂಬಿಕೆಯನ್ನಿಡು" ಎಂದನು.

ಇಲ್ಲಿಗೆ ಮೂವತ್ತೈದನೆಯ ಸರ್ಗವು.

ಸೀತೆಯು ತನಗೆ ನಂಬಿಕೆ ಹುಟ್ಟುವುದಕ್ಕಾಗಿ
ಹನುಮಂತನನ್ನು ಕುರಿತು ರಾಮನ ಗುಣಲಕ್ಷಣಾದಿಗಳನ್ನು
ಕೇಳಿದುದು. ಹನುಮಂತನು ಅವೆಲ್ಲವನ್ನೂ ತಿಳಿಸಿ
ಸೀತೆಯನ್ನು ಸಮಾಧಾನಪಡಿಸಿದುದು.

ಹೀಗೆ ವಾನರೋತ್ತಮನಾದ ಹನುಮಂತನ ಮುಖದಿಂದ ಹೊರಟ ರಾಮಕಥೆಯನ್ನು ಕೇಳಿದೊಡನೆ, ಸೀತೆಗೆ ಮೊದಲಿದ್ದ ಶಂಕೆಯು ಸ್ವಲ್ಪವಾಗಿ ತಗ್ಗಿತು. ಆಗ ಅವಳು ಹನುಮಂತನನ್ನು ಕುರಿತು, ಮಧುರಸ್ವರದಿಂದ ಬಹಳ ಸಾಂತ್ವ ಪೂರ್ವಕವಾಗಿ ಹೇಳುವಳು. "ಎಲೈ ವಾನರೋತ್ತಮನೇ! ನೀನು ಆ ರಾಮನನ್ನು ಕಂಡುದೆಲ್ಲಿ? ನೀನು ಆ ಲಕ್ಷ್ಮಣನನ್ನು ಹೇಗೆ ಬಲ್ಲೆ? ಕಪಿಗಳಿಗೂ ಮನುಷ್ಯರಿಗೂ ಈ ಸಂಬಂಧವು ಹೇಗೆ ಘಟಿಸಿತು? ರಾಮನಿಗೆ ಯಾವ ಗುರುತುಗಳುಂಟೋ,

ಲಕ್ಷ್ಮಣನಿಗೆ ಯಾವ ಚಿಹ್ನಗಳುಂಟೋ ಅವೆಲ್ಲವನ್ನೂ ನನಗೆ ಹೇಳು? ಅವುಗಳನ್ನು ಕೇಳುತ್ತಿರುವುದರಿಂದ ನನ್ನ ದುಃಖವೂ ಶಾಂತವಾಗುವುದಲ್ಲದೆ ನನಗಿರುವ ಸಂದೇಹವೂ ನೀಗುವುದು. ಆ ರಾಮನ ಮೈಕಟ್ಟಿನ ರೀತಿಯು ಹೇಗೆ? ಅವನ ತೋಳುಗಳು ಹೇಗಿರುವುವು? ಹಾಗೆಯೇ ಲಕ್ಷ್ಮಣನ ಅವಯವಲಕ್ಷಣಗಳನ್ನೂ ತಿಳಿಸು!" ಎಂದಳು. ಸೀತೆಯ ಈ ಮಾತನ್ನು ಕೇಳಿ, ಹನುಮಂತನು ರಾಮನ ರೂಪಗುಣಾದಿಗಳನ್ನು ಯಥಾನಿಷ್ಠವಾಗಿ ಹೇಳತೊಡಗಿದನು. "ಎಲೆ ಕಮಲಾಕ್ಷಿ! ನಾನು ರಾಮದೂತನೆಂಬುದನ್ನು ಇದುವರೆಗೇ ತಿಳಿದಿದ್ದರೂ, ಈಗ ನನ್ನನ್ನು ಕೇಳುವುದು ನನ್ನ ಭಾಗ್ಯವಶವೇ ಹೊರತು ಬೇರೆಯಲ್ಲ. ಆಃ! ರಾಮಲಕ್ಷ್ಮಣರನ್ನು ಕೀರ್ತಿಸುವ ಪುಣ್ಯವು ನನಗೆ ಲಭಿಸಿತು. ಎಲೆ ಸೀತೆ! ನೀನು ಆ ರಾಮನಲ್ಲಿಯೂ ಲಕ್ಷ್ಮಣನಲ್ಲಿಯೂ ಯಾವಯಾವ ಚಿಹ್ನಗಳನ್ನು ನೋಡಿರುವೆಯೋ ಅವುಗಳನ್ನೇ ಹೇಳುವೆನು ಕೇಳು! 1 ಆ ರಾಮನು ಕಮಲದಳದಂತೆ ಕಣ್ಣುಳ್ಳವನು! ಸಮಸ್ತ ಪ್ರಾಣಿಗಳ ಮನಸ್ಸನ್ನೂ ಅಪಹರಿಸತಕ್ಕ ಸೌಂದರ್ಯವುಳ್ಳವನು. ಸೌಂದರ್ಯದಿಂದಲೂ, ದಾಕ್ಷಿಣ್ಯಾದಿಗುಣಗಳಿಂದಲೂ ತುಂಬಿದವನು. ಅತನು ಈ ಸಮಸ್ತಗುಣಗಳೊಡ

---

1. ಇಲ್ಲಿ "ರಾಮಃ ಕಮಲಪತ್ರಾಕ್ಷಸ್ಸರ್ವಸತ್ವಮನೋಹರಃ। ರೂಪದಾಕ್ಷಿಣ್ಯಸಂಪನ್ನಃ ಪ್ರಸೂತೋ ಜನಕಾತ್ಮಜೇ" ಎಂದು ಮೂಲವು. ವಿಶೇಷಾರ್ಥವು. (ರಾಮಃ) "ರಮಯತೀತಿರಾಮಃ" ಎಂಬಂತೆ ಸರ್ವಾಂಗಸುಂದರನು, ಇದರಮೇಲೆ (ಕಮಲಪತ್ರಾಕ್ಷಃ) ಮಹಾ ಪ್ರವಾಹದಲ್ಲಿ ವೇಗದಿಂದ ತೇಲಿಬರುವ ವಸ್ತುವನ್ನು ಅಪ್ರವಾಹದೊಳಗಿನ ಸುಳಿಯು ಅತ್ತ ಕೊಚ್ಚಿಬಿಡದೆ ತನ್ನಲ್ಲಿ ಮುಳುಗಿಸಿಕೊಳ್ಳುವಂತೆ, ಆತನ ದೇಹಸೌಂದರ್ಯಪ್ರವಾಹದಿಂದ ಸೆಳೆಯಲ್ಪಡುವ ಜನರ ಕಣ್ಣಾನಗಳನ್ನು ತನ್ನಲ್ಲಿ ನಿಲ್ಲಿಸಿಬಿಡತಕ್ಕ ದೇಹಸೌಂದರ್ಯವುಳ್ಳವನು. (ಸರ್ವಸತ್ವಮನೋಹರಃ) ಮನುಷ್ಯರಿಗೆ ಮಾತ್ರವೇ ಅಲ್ಲದೆ ಕಾಡುಕಪಿಗಳಾದ ನಮ್ಮಂತಹ ತಿರ್ಯಗ್ಜಂತುಗಳ ಮನಸ್ಸನ್ನೂ ಆಕರ್ಷಿಸತಕ್ಕ ದಿವ್ಯಸೌಂದರ್ಯವುಳ್ಳವನು. (ರೂಪದಾಕ್ಷಿಣ್ಯಸಂಪನ್ನಃ) ದೇಹಲಕ್ಷಣಗಳಾದ ಸೌಂದರ್ಯಾದಿಗಳೇ ಅಲ್ಲದೆ, ಅತ್ಯಗುಣಗಳಾದ ದಾಕ್ಷಿಣ್ಯಾದಿಗಳಿಂದಲೂ ಪೂರ್ಣನಾದವನು. (ಪ್ರಸೂತಃ) ಹುಟ್ಟುವಾಗಲೇ ಈ ವಿಧಗಳಾದ ಸಮಸ್ತಗುಣಗಳಿಂದಲೂ ಜನಿಸಿದವನು. "ಇಂತಹ ಗುಣಸಂಪನ್ನನು ಬೇರೆಲ್ಲಿಯೂ ಹುಟ್ಟಿಲ್ಲವೆ" ಎಂದರೆ (ಜನಕಾತ್ಮಜೇ) ಜನಕಪುತ್ರಿಯಾದ ಸೀತೆಯೊಬ್ಬಳು ಹೊರತು ಇಷ್ಟುಗುಣಾಢ್ಯರಾಗಿ ಹುಟ್ಟಿದವರು ಬೇರೊಬ್ಬರೂ ಇಲ್ಲವೆಂದು ಭಾವ.

ಳೆಯೇ ಹುಟ್ಟಿದವನು. ಅವನು ತೇಜಸ್ಸಿನಲ್ಲಿ ಸೂರ್ಯನಿಗೆ ಸಮಾನನು. ಕ್ಷಮೆಯಲ್ಲಿ ಭೂಮಿಗೆ ಸಮಾನನು. ಬುದ್ಧಿಯಲ್ಲಿ ಬೃಹಸ್ಪತಿಗೆಣೆಯಾದವನು. ಯಶಸ್ಸಿನಲ್ಲಿ ಇಂದ್ರನನ್ನು ಹೋಲುವವನು. ಸಮಸ್ತ ಪ್ರಾಣಿಲೋಕಗಳನ್ನೂ ಪ್ರೀತಿಯಿಂದ ಪೋಷಿಸತಕ್ಕವನು. ಆದರಲ್ಲಿಯೂ ಸ್ವಜನವನ್ನು ಹೆಚ್ಚಾಗಿ ರಕ್ಷಿಸತಕ್ಕವನು. ತನ್ನ ಕ್ಷತ್ರಿಯಜಾತಿಗೆ ತಕ್ಕ ವೃತ್ತಿಯನ್ನೂ, ಧರ್ಮವನ್ನೂ ತಪ್ಪದೆ ರಕ್ಷಿಸುವವನು. ಪರಂತಪನು. ಲೋಕದಲ್ಲಿರುವ ಚತುರ್ವರ್ಣಗಳನ್ನೂ ರಕ್ಷಿಸತಕ್ಕವನು. ಲೋಕಮರ್ಯಾದೆಯನ್ನು ತಾನಾಗಿ ಅನುಷ್ಠಿಸುವನಲ್ಲದೆ ಪ್ರಜೆಗಳಿಂದಲೂ ಅವುಗಳನ್ನು ಕ್ರಮವಾಗಿ ನಡೆಯಿಸತಕ್ಕವನು. ಮಹಾತೇಜಸ್ವಿಯು. ಸಜ್ಜನರಿಗೆಲ್ಲಾ ಪೂಜ್ಯನು. [1] ಬ್ರಹ್ಮಚರ್ಯವ್ರತದಲ್ಲಿಯೇ ಸ್ಥಿರವಾಗಿರುವನು. ಸಾಧುಗಳಿಗೆ ಮಾಡಬೇಕಾದ ಉಪಕಾರಗಳನ್ನು ಚೆನ್ನಾಗಿ ತಿಳಿದವನು. ಮತ್ತು ಆತನು ಅನ್ವೀಕ್ಷಕಿ ತ್ರಯೀ, ವಾರ್ತೆ, ದಂಡನೀತಿಗಳೆಂಬ ನಾಲ್ಕು ರಾಜವಿದ್ಯೆಗಳಲ್ಲಿಯೂ ಚೆನ್ನಾಗಿ ಶಿಕ್ಷಿತನು. ಬ್ರಾಹ್ಮಣರನ್ನು ಚೆನ್ನಾಗಿ ಸೇವಿಸುವವನು. ಸಮಸ್ತ ವಿದ್ಯೆಗಳನ್ನೂ ಕೇಳಿ ತಿಳಿದವನು. ಸದಾಚಾರಸಂಪನ್ನನು. ಗುರುಗಳಲ್ಲಿ ವಿಧೇಯತೆಯುಳ್ಳವನು. ಯಾವ ಶತ್ರುಗಳನ್ನಾದರೂ ಧ್ವಂಸಮಾಡತಕ್ಕವನು. ಯಜುರ್ವೇದದಲ್ಲಿ ಚೆನ್ನಾಗಿ ಶಿಕ್ಷಿತನು. ವೇದವಿತ್ತುಗಳಿಗೂ ಪೂಜಾರ್ಹನು. ಋಗ್ವೇದದಲ್ಲಿಯೂ, ಇತರ ವೇದಗಳಲ್ಲಿಯೂ, ಶಿಕ್ಷೆ ಮೊದಲಾದ ಆರು ವೇದಾಂಗಗಳಲ್ಲಿಯೂ ಪಂಡಿತನು. ಎಲೆ ದೇವಿ! ಆ ರಾಮನ ಅವಯವಲಕ್ಷಣಗಳನ್ನೂ ಹೇಳುವೆನು ಕೇಳು. ವಿಸ್ತಾರವಾದ ಹೆಗಲುಳ್ಳವನು. ನೀಡಿದ ತೋಳುಗಳುಳ್ಳವನು. ಅವನ ಕಂಠವು ಶಂಖದಂತಿರುವುದು. ಅವನ ಮುಖದಲ್ಲಿ ಶುಭವಾದ ಒಂದು ಕಳೆಯಿರುವುದು. ಮತ್ತು ಅವನು ಮಾಂಸಪುಷ್ಟವಾದ ಭುಜದ ಕೀಲುಳ್ಳವನು. ಚಕ್ರವರ್ತಿಲಕ್ಷಣವನ್ನು ಸೂಚಿಸುವಂತೆ ಕೆಂಪಾದ ಕಣ್ಣುಳ್ಳವನು. ಲೋಕದಲ್ಲಿ ರಾಮನೆಂಬ ಅವನ ಹೆಸರನ್ನು ಕೇಳಿ ತಿಳಿಯದವರೇ ಇಲ್ಲ. ಭೇರೀಧ್ವನಿಯಂತೆ ಕಂಠಸ್ವರವುಳ್ಳವನು.

---

1. ಬ್ರಹ್ಮಚರ್ಯವೆಂದರೆ "ಷೋಡಶಶರ್ತುನಿಶಾಸ್ತ್ರೀಣಾಂ ತಸ್ಮಿನ್ ಯುಗ್ಮಾಸು ಸಂವಿಶೇತ್। ಬ್ರಹ್ಮಚಾರ್ಯೇವ ಪರ್ವಾಣ್ಯಾಶ್ಚತಸ್ರಶ್ಚ ವಿವರ್ಜಯೇತ್" ಎಂಬಂತೆ ಬ್ರಹ್ಮಚರ್ಯೆಯಲ್ಲಿರುವವನು ಸ್ತ್ರೀಯರಿಗೆ ನಿರ್ದೇಶಗಳಾದ ಹದಿನಾರುಋತುದಿನಗಳಲ್ಲಿ ಸಮದಿವಸಗಳಲ್ಲಿ ಮೊತ್ತಮೊದಲೇ ಪ್ರವೇಶಿಸಬೇಕು. ನಾಲ್ಕುಪರ್ವದಿನಗಳಲ್ಲಿ ಸೇರಬಾರದು. ಋತುದಿನಗಳು ಹೊರತು ಬೇರೆದಿನಗಳಲ್ಲಿ ಸ್ತ್ರೀಸಂಗಮವನ್ನು ಮಾಡಬಾರದು. ಎಂದೀ ವಿಧಿಯನ್ನನುಸರಿಸಿರುವುದೇ ಗೃಹಸ್ಥರು ನಡೆಸತಕ್ಕ ಬ್ರಹ್ಮಚರ್ಯೆಯೆನಿಸುವುದು.

ನುಣುಪಾಗಿ ಹೊಳೆಯುವ ಮೈಬಣ್ಣವುಳ್ಳವನು. ಮೇಲಾದ ಪರಾಕ್ರಮವುಳ್ಳವನು. ಸಮುಚ್ಚ್ರಮಾಣವಿಂದಿರುವ ಆಕಾರವುಳ್ಳವನು. ಅವನ ಸರ್ವಾವಯವಗಳೂ ಒಂದಕ್ಕೊಂದಕ್ಕೆ ಹೆಚ್ಚುಕಡಿಮೆಯಿಲ್ಲದೆ ಅನುರೂಪವಾಗಿರುವುವು. ಶ್ಯಾಮವರ್ಣದಿಂದ ಕೂಡಿದ ಮೈಯುಳ್ಳವನು. [1] ಸಾಮುದ್ರಿಕಲಕ್ಷಣವನ್ನನುಸರಿಸಿ ಅವನ [1] ಎದೆ, ಮಣಿಕಟ್ಟು, ಮುಷ್ಟಿ, ಇವು ಮೂರೂ ಸ್ಥಿರವಾಗಿರುವುವು. [2] ಅವನಹುಬ್ಬುಗಳೂ, ಅಂಡಕೋಶಗಳೂ, ತೋಳುಗಳೂ ಇವು ಮೂರೂ ಉದ್ದವಾಗಿ ತೊಂಗುತ್ತಿರುವುವು. [3] ಅವನ ಕೇಶಾಗ್ರಗಳೂ, ವೃಷಣಗಳೂ, ಮೊಳ

---

* ಇಲ್ಲಿಂದ "ತ್ರಿಸ್ಥಿರಸ್ತ್ರಿಪ್ರಲಂಬಶ್ಚ ತ್ರಿಸಮಸ್ತ್ರಿಷುಚೋನ್ನತಃ / ತ್ರಿತಾಮ್ರಸ್ತ್ರಿಷು ಚಸ್ನಿಗ್ಧೋ ಗಂಭೀರಸ್ತ್ರಿಷು ನಿಸ್ವನಃ ॥ ತ್ರಿವಲೀವಾನ್ತ್ರಿಧನಕಶ್ಚತುರ್ವ್ಯಂಗಸ್ತ್ರಿಶೀರ್ಷವಾನ್ / ಚತುಷ್ಕಲಶ್ಚತುರ್ಲೇಖಶ್ಚತುಷ್ಕಿಷ್ಕುಶ್ಚತುಸ್ಸಮಃ ॥ ಚತುರ್ದಶ ಸಮುದ್ದಿಷ್ಟಶ್ಚತುರ್ದಂಷ್ಟ್ರಶ್ಚತುರ್ಗತಿಃ / ಮಹೋಷ್ಠಹನುನಾಸಶ್ಚ ಪಂಚಸ್ನಿಗ್ಧೋಷ್ಣವಂಶವಾನ್ ॥ ದಶಪದ್ಮೋದಶಬ್ಯಹ್ಯಭಿಜ್ಞಾಪ್ಯೋ ದ್ವಿಶುಕ್ಲವಾನ್ / ಷಡುನ್ನತೋನವತನುಸ್ತ್ರಿಭಿರ್ವ್ಯಾಪ್ತೋತಿ ರಾಘವಃ" ಎಂದು ಮೂಲವು. ಇವುಗಳಿಂದ ಶ್ರೀರಾಮನಲ್ಲಿ ಸಾಮುದ್ರಿಕಶಾಸ್ತ್ರೋಕ್ತವಾದ ಅವಯವಲಕ್ಷಣಗಳೆಲ್ಲವೂ ಹೇಳಲ್ಪಡುವುವು. ಹೇಗೆಂದರೆ.

1. (ತ್ರಿಸ್ಥಿರಃ) "ಉರಶ್ಚಮಜಬಂಧಸ್ಯ ಮುಷ್ಕಿಶ್ಚ ಸ್ಥಪತೇಃ ಸ್ಥಿರಾಃ" ಅರಸರಿಗೆ ಎದೆ, ಮಣಿಕಟ್ಟು, ಮುಷ್ಕಿ ಇವು ಮೂರೂ ಸ್ಥಿರವಾದುವುಗಳೆಂದು ಸಾಮುದ್ರಿಕವು.

2. (ತ್ರಿಪ್ರಲಂಬಃ) "ದೀರ್ಘಭ್ರೂಬಾಹುಮುಷ್ಕಸ್ಯ ಚಿರಜೀವೀ ಧನೀ ನರಃ" ಹುಬ್ಬುಗಳೂ, ತೋಳುಗಳೂ, ವೃಷಣಗಳೂ ಯಾವನಿಗೆ ಉದ್ದವಾಗಿರುವುವೋ, ಅವನು ಸ್ಥಾನು ಚಿರಜೀವಿಯೂ ಧನಿಕನೂ ಆಗುವನೆಂದು ಸಾಮುದ್ರಿಕವಿಧಿಯು. ಇದೇ ವಿಷಯವಾಗಿ "ತ್ರಯಶ್ಚ ಯಸ್ಯ ವಿಜ್ಞೇಯಾಃ ಪ್ರಲಂಬಾ ಮೇಢ್ರಬಾಹವಃ" ಯಾವನಿಗೆ ಮೇಢ್ರವೂ, ತೋಳುಗಳೂ ಉದ್ದವಾಗಿರುವುವೋ, ಅವನು ಭಾಗ್ಯಶಾಲಿಯೆಂದು ಬೇರೆ ಪ್ರಮಾಣವೂ ಉಂಟು.

3. (ತ್ರಿಸಮಃ) ಇಲ್ಲಿ "ಕೇಶಾಗ್ರಂ ವೃಷಣಂ ಜಾನು ಸಮಾಯಸ್ಯ ಸಭೂಪತಿಃ" ಕೇಶಗಳ ಕೊನೆಯೂ, ಎರಡು ವೃಷಣಗಳೂ, ಮೊಳಕಾಲುಗಳೂ ಹೆಚ್ಚುಕಡಿಮೆಯಿಲ್ಲದೆ ಒಂದೇ ಅಳತೆಯಲ್ಲಿದ್ದರೆ ಅಂತವನು ರಾಜನೆನಿಸುವನು.

ಕಾಲುಗಳೂ ಸಮಪ್ರಮಾಣದಿಂದಿರುವುವು. 1 ಅವನ ಹೊಟ್ಟೆ, ಹೊಕ್ಕುಳು, ಎದೆ, ಇವು ಮೂರೂ ಮೇಲಕ್ಕೆ ಉಬ್ಬಿರುವುವು. 2 ಅವನ ಕಡೆಗಣ್ಣು, ಉಗುರು, ಅಂಗೈ, ಅಂಗಾಲುಗಳೆಂಬಿವು ಮೂರೂ ಕೆಂಪಾಗಿರುವುವು. 3 ಅವನ ಪಾದರೇಖೆ, ಕೂದಲು, ಲಿಂಗವೆಂಬಿವು ಮೂರೂ ನುಣುಪಾಗಿರುವುವು. 4 ಅವನ ಕಂಠಧ್ವನಿ, ನಡೆ, ಹೊಕ್ಕುಳು, ಇವು ಮೂರೂ ಗಂಭೀರವಾಗಿರುವುವು 5 ಅವನ ಉದರೇಶ ಪ್ರದೇಶಗಳೆರಡೂ ಸ್ಪಷ್ಟವಾದ ತ್ರಿವಳಿರೇಖೆಗಳಿಂದ ಶೋಭಿಸುತ್ತಿರುವುವು. 6 ಅವನ ಸ್ತನ, ಸ್ತನಾಗ್ರ, ಪಾದರೇಖೆಗಳೆಂಬಿವು ಮೂರೂ ಅಳಕ್ಕೆಯಿರುವುವು.

---

1. (ತ್ರಿಷು ಜೋನ್ನತಃ) "ನಾಭ್ಯಂತಃ ಕುಕ್ಷಿರಕ್ಷೋಭಿಮುನ್ನತಃ ಕ್ಷಿತಿಪೋಭವೇತ್" ಎಂಬಂತೆ ಹೊಕ್ಕಳು, ಹೊಟ್ಟೆ, ಎದೆ, ಇವು ಮೂರೂ ಮೇಲುನುಬ್ಬಾಗಿ ಉಬ್ಬಿದ್ದರೆ ರಾಜನಾಗುವನೆಂದು ಸಾಮುದ್ರಿಕವಚನವು. ಮತ್ತು "ಉನ್ನತಕುಕ್ಷಿಃ ಕ್ಷಿತಿಪಃ ಪರಿಮಂಡಲೋನ್ನತನಾಭಯಃ ಕ್ಷಿತಿಪಾಃ। ಹೃದಯಂ ಚ ನೇಪಸಂ ಕೃಶಂ ಸವೋನ್ನತಂ ಮೂಂಸಲಂಚ ನೃಪತೀನಾಂ" ಎಂದು ಈ ವಿಷಯದಲ್ಲಿ ವರಾಹಮಿಹಿರವಾಕ್ಯವೂ ಉಂಟು.

2. (ತ್ರಿತಾಮ್ರಃ) ಇಲ್ಲಿ "ನೇತ್ರಾಂತ ನಖ ಪಾಣ್ಯಂಘ್ರಿತಲೈಸ್ತಾಮ್ರೈಸ್ತ್ರಿಭಿರುನ್ನತಃ" ಎಂದೂ, "ಶ್ಲಿಷ್ಟಾಂಗುಲೀ ರುಚಿರತಾಮ್ರನಖೌ ಸುಪಾಣ್ಯೀ ನಾದೌ ಕರಾವಪಿ ಸುರಕ್ತನಖಾತ್ಪರೇಷಾಂ" ಎಂದೂ ವಚನಗಳುಂಟು.

3. (ತ್ರಿಸೂಕ್ಷ್ಮಸ್ನಿಗ್ಧಃ) ಇಲ್ಲಿ "ಸ್ನಿಗ್ಧಾಭವಂತಿ ಯೇಷಾಂ ಪಾದರೇಖಾಸ್ತ್ರಿರೋರುಣಾಃ। ತಥಾ ಲಿಂಗವಿಧಸ್ತೇಷಾಂ ಮಹಾಭಾಗ್ಯಂ ವಿನಿರ್ದಿಶೇತ್" ಎಂದು ಸಾಮುದ್ರಿಕವಚನವು.

4. (ಗಂಭೀರಸ್ತ್ರಿಷು) ಇಲ್ಲಿ "ಸ್ವರಸ್ಸತ್ತ್ವಂಚ ನಾಭಿಶ್ಚ ಗಂಭೀರಶ್ಯಸ್ಯತೇ ಬುಧೈಃ" ಎಂದು ವರರುಚಿವಚನವು. ಮತ್ತು "ಸ್ವರೇ ಗತೌಚ ನಾಭ್ಯೌಚ ಗಂಭೀರಸ್ತ್ರಿಷು ಶಸ್ಯತೇ" ಎಂದು ಬೃಹತ್ಸಂಹಿತೆಯಲ್ಲಿಯೂ ಹೇಳಲ್ಪಟ್ಟಿದೆ.

5. (ತ್ರಿವಳೀವಾನ್) "ಸ್ಥಿರಾ ತ್ರಿರೇಖಾ ಸುಭಗೋದರಸ್ಯಾಸ್ನಿಗ್ಧಾಸುವರ್ಣಾಂಕಿತರಶ್ಮಿಜಾಲಾ ಸುವೃತ್ತಾ। ನಚಾತಿದೀರ್ಘಾ ಜಘನಾಂಗುಲಾಚ ಸ್ತ್ರೀವಾಸುದೀರ್ಘಾಭವತೀವಧನಾ" ಎಂಬಂತೆ ಉದರಕಂಠನೇತ್ರಗಳಲ್ಲಿ ತ್ರಿವಳಿಗಳಿದ್ದರೆ ಭಾಗ್ಯಸೂಚಕವೆಂದು ಸಾಮುದ್ರಿಕವಚನವು

6. (ತ್ರ್ಯಂಗುಲಃ) "ಪೀನೋನ್ನತಚ್ಛಾಯಸಮೈಃ ಕ್ಷಿತಿಪಸ್ಯಾಶ್ಚಾಪಚಕ್ರಸ್ಯ ಸುಪಾಣಿನಃ। ಸ್ನಿಗ್ಧಾ ಸಮಾ ರೇಖಾ ಧನಿನೋ ಶಸ್ಯತ್ಯಂಗುಲೇನ ನಿಷ್ಪನ್ನಾಂ" ಎಂಬ ಮಿಹಿರವಚನದಂತೆ, ಸ್ತನದ ತೊಟ್ಟುಗಳು ಹತ್ತಿಕ್ಕಿದಿದ್ದರೆ ರಾಜನಾಗುವನೆಂದೂ, ಸ್ತನ

1 ಅವನ ಕೊರಲು, ಲಿಂಗ, ಬೆನ್ನು, ಮೊಳಕಾಲು, ಇವು ನಾಲ್ಕೂ ಹ್ರಸ್ವವಾಗಿರುವುವು. 2 ಅವನ ತಲೆಯಲ್ಲಿ ಶುಭಲಕ್ಷಣಸೂಚಕಗಳಾದ ಮೂರು ಸುಳಿಗಳಿರುವುವು. ಮತ್ತು ಅವನ ತಲೆಯು ದುಂಡಗೆ, ಸಮವಾಗಿ, ಛತ್ರದಂತೆ ವಿಶಾಲವಾಗಿ, ಈ ಲಕ್ಷಣತ್ರಯದಿಂದ ಶೋಭಿಸುವುದು. ಅವನ ಅಂಗುಷ್ಠಮೂಲದಲ್ಲಿ ನಾಲ್ಕು ವೇದರೇಖೆಗಳುಂಟು. 4 ಮತ್ತು ಅವನ ಹಣೆ, ಅಂಗೈ, ಅಂಗಾಲು, ಇವುಗಳಲ್ಲಿ

ಗಳು ನಿಮ್ನವಾಗಿದ್ದರೆ ಸುಖಿಗಳೆಂದೂ, ಹ್ರಸ್ವವಾಗಿರುವ ರೇಖೆಗಳುಳ್ಳವರು ಧನಾಢ್ಯರೆಂದೂ, ಇದಕ್ಕೆ ವ್ಯತ್ಯಸ್ತವಾಗಿದ್ದರೆ ದರಿದ್ರರಾಗುವರೆಂದೂ ಸಾಮುದ್ರಿಕವು.

1. (ಚತುರ್ಭ್ಯಂಗ್ಯಃ) ಇಲ್ಲಿ "ಗ್ರೀವಾ ಪ್ರಜನನಂ ಪೃಷ್ಠಂ ಹ್ರಸ್ವಂ ಜಂಘಾಚ್ಚ ಪೂಜ್ಯತೇ" ಎಂದು ವರರುಚಿವಚನವು. ಅಥವಾ ಇಲ್ಲಿ "ಶಾಸ್ತ್ರೈಃ ಪ್ರಸ್ತೇದರಹಿತೈಃ ಸಿರಾಹೀನೈಶ್ಚ ಪಾರ್ಥಿವಃ। ಏಕರೋಮಾ ಭವೇದ್ರಾಜಾ ದ್ವಿರೋಮಾ ಪಂಡಿತೋ ಭವೇತ್। ತ್ರಿರೋಮಾ ಚತುರೋಮಾಚ ಭವೇದ್ಭಾಗ್ಯ ವಿವರ್ಜಿತಃ। ಸನುಪಾದೋಷವಿಪ್ರಸ್ಯ ಗುಲ್ಫಂ ಸ್ಪೃಶತಿ ಮೋಹನಂ। ಯಸ್ಯೇಶ್ವರಂ ತಂ ಜಾನೀಯಾತ್ಸುಖಿನಂ ಚೈವ ಮಾನವಂ! ಏರ್ಷಾಂ ಸಸ್ಯಂಪತೋವಸ್ತಿರ್ಯೇಷಾಂ ತೇಸುಖಭಾಗಿನಃ" ಎಂಬ ನಾರದವಚನದಂತೆ ವ್ಯಂಗ್ಯವೆಂದರೆ ವಿಕಲ್ಪ (ಶೂನ್ಯ)ವೆಂಬ ಅರ್ಥಾಂತರವನ್ನೂ ಗ್ರಹಿಸಬಹುದು.

2. (ತ್ರಿಶೀರ್ಷವಾ) ಮೂರುಲಕ್ಷಣ (ಸುಳಿ)ಗಳಿಂದ ಕೂಡಿದ ತಲೆಯುಳ್ಳವನು. "ಅವರ್ತತ್ರಯಯುಕ್ತೇನ ಯಸ್ಯ ಶಿರಸ್ಸ್ವತಿಬಿಭ್ರತಾ ನೇತಾ" ಎಂದು ಸಾಮುದ್ರಿಕವಚನವು. ಅಥವಾ "ಸಮಾವೃತ್ತ ಶಿರಾಶ್ಚೈವ ಛತ್ರಾಕಾರಶಿರಾಸ್ತಥಾ। ಏಕಛತ್ರಾಂ ಮಹೀಂ ಭುಂಕ್ತೇ ದೀರ್ಘಮಾಯುಶ್ಚ ವಿಂದತಿ" ಎಂಬಂತೆ ದುಂಡಗೆ ಸಮವಾಗಿ ಕೊಡೆಯಂತಿರುವ ತಲೆಯುಳ್ಳವನೆಂದೂ ಗ್ರಹಿಸಬಹುದು.

3 (ಚತುಷ್ಕಲಃ) ನಾಲ್ಕುವೇದರೇಖೆಯುಳ್ಳವನು "ಮೂರ್ಧ್ನಲೇಂಗುಷ್ಠಸ್ಯವೇದಾನಾಂ ಚತುಸ್ಸ್ಥಿತಸ್ಯ ನಿವಸಾ। ಏಕಂ ದ್ವೇವಾ ಯಥಾಯೋಗಂ ರೇಖಾಜ್ಞೇಯಾದ್ವಿಜನ್ಮನಾಮ್" ಎಂಬ ಪ್ರಮಾಣವನ್ನನುಸರಿಸಿ ಹೆಬ್ಬೆರಳಿನ ಕೆಳಗೆ ವೇದಸೂಚಕಗಳಾದ ರೇಖೆಗಳು ನಾಲ್ಕಾಗಲಿ, ಮೂರಾಗಲಿ, ಎರಡಾಗಲಿ, ಒಂದೇ ಆಗಲಿ ವಿರಾಜಿಸಿರುವುದುಂಟು.

4. (ಚತುರ್ಲೇಖಃ) "ಲಲಾಟೇ ಯಸ್ಯ ದೃಶ್ಯಂತೇ ಚತುಸ್ತ್ರೈರೇಖಕರೇಖಿಕಾಃ। ಶತದ್ವಯಂ ಶತಂ ಸಪ್ತಿಸ್ತಸ್ಯಾಯುರ್ವಿಂಶತಿಸ್ತಥಾ" ಎಂಬ ಕಾತ್ಯಾಯನವಚನದಂತೆ ಹಣೆಯಲ್ಲಿ ನಾಲ್ಕು, ಮೂರು, ಎರಡು ಅಥವಾ ಒಂದೇ ರೇಖೆಯುಳ್ಳವರು ಕ್ರಮವಾಗಿ ಇನ್ನೂರು, ನೂರು, ಅರವತ್ತು, ಇಪ್ಪತ್ತು ವರ್ಷಗಳವರೆಗೆ ಬದುಕಿರುವರೆಂದು ಗ್ರಾಹ್ಯವು. ಮತ್ತು "ಯಸ್ಯ ಪಾದತಲೇ ವಜ್ರಧ್ವಜಶಂಖಾಂಕುಶೋಪಮಾ। ರೇಖಾಸ್ತಸ್ಯಾಕ್ರಾಕಾಂತೇ ಮನುಜೇಂದ್ರಂ ಶತಾದಿಶೇತ್" ಎಂಬ ನಾರದವಚನದಂತೆ, ಅಂಗಾಲಿನಲ್ಲಿ ವಜ್ರ, ಧ್ವಜ, ಶಂಖ, ಅಂಕುಶಗಳೆಂಬ ಈ ನಾಲ್ಕು ರೇಖೆಯುಳ್ಳವರು ರಾಜಪದವಿಯಲ್ಲಿರುವರೆಂದೂ "ಪಾಣೌಚತುಸ್ರೋ ರೇಖಾಶ್ಚ ಯಸ್ಯ ತಿಷ್ಠಂತ್ಯಧಂಗುರಾ" ಎಂಬ ಬ್ರಹ್ಮವಚನದಂತೆ ಅಂಗೈಯಲ್ಲಿ ಈ ನಾಲ್ಕು ರೇಖೆಯನ್ನುಳ್ಳವರು ರಾಜರಾಗುವರೆಂದೂ ಗ್ರಾಹ್ಯವು.

ಅವನ ಆಯುಸ್ಸೂಚಕಗಳಾದ ನಾಲ್ಕು ರೇಖೆಗಳುಂಟು. 1 ಅವನ ದೇಹವು ನಾಲ್ಕುಕಿಷ್ಕು (ತೊಂಬತ್ತಾರಂಗುಲ) ಗಳ ಪ್ರಮಾಣವುಳ್ಳದಾಗಿರುವುದು. 2 ಅವನ ತೋಳು, ತೊಡೆ, ಮೊಳಕಾಲು, ಕೆನ್ನೆ. ಇವು ನಾಲ್ಕೂ ಸಮವಾಗಿರುವುವು. 3 ಅವನ ಹುಬ್ಬು, ಮೂಗಿನ ರಂಧ್ರಗಳು, ಕಣ್ಣು, ಕಿವಿ, ತುಟಿ, ಸ್ತನಾಗ್ರ, ಮೊಳಕೈ, ಮಣಿಕಟ್ಟು, ಮೊಳಕಾಲು, ಅಂಡಗಳು, ಕಟಿಸ್ಥಲಗಳು, ಕೈ, ಕಾಲು, ಪಕ್ಕೆ, ಈ ಹದಿನಾಲ್ಕು ದ್ವಂದ್ವಾವಯವಗಳೂ ಒಂದಕ್ಕೊಂದು ಸಮಪ್ರಮಾಣದಿಂದಿರುವುವು. 4 ಅವನಿಗೆ ಕೋರೆದಾಡೆಗಳಂತಿರುವ ನಾಲ್ಕು ಹಲ್ಲುಗಳುಟು. 5 ಅವನ ನಡೆಯು, ಸಿಂಹದ ನಡೆಯಂತೆಯೂ, ಹುಲಿಯ ನಡೆಯಂತೆಯೂ, ಆನೆಯ ನಡೆಯಂತೆಯೂ, ವೃಷಭದ ನಡೆಯಂತೆಯೂ ನಾಲ್ಕು ತರದ

---

1. (ಚತುಃಕಿಷ್ಕುಃ) ಕಿಷ್ಕುವೆಂದರೆ ಇಪ್ಪತ್ತುನಾಲ್ಕಂಗುಲಗಳು. ನಾಲ್ಕುಕಿಷ್ಕು ಪ್ರಮಾಣವೆಂದರೆ ತೊಂಭತ್ತಾರಂಗುಲಗಳು; ಇಲ್ಲಿ "ಷಣ್ಣವತ್ಯಂಗುಲೋತ್ಸೇಧೋಯಃ ಪುಮಾನ್ ಸ ದಿವಾಕಸಃ" ಎಂದು ಬ್ರಾಹ್ಮಪುರಾಣವಚನವು.

2. (ಚತುಸ್ಸಮಃ) ಇಲ್ಲಿ "ಬಾಹುಜಾನೂರುಗಂಡಾಶ್ಚ ಚತ್ವಾರ್ಯೆತಸಮಾನಿಚ" ಎಂದು ಸಾಮುದ್ರಿಕವಚನವು.

3. (ಚತುರ್ದಶಸಮದ್ವಂದ್ವಃ) ಮೇಲೆ ಹೇಳಿದ ಹದಿನಾಲ್ಕು ದ್ವಂದ್ವಾವಯವಗಳೆಂದರೆ ಎಡಬಲದ ಅವಯವಗಳೆರಡೂ ಒಂದಕ್ಕೊಂದು ಸಮವಾಗಿರಬೇಕಾದುದು ಶುಭಲಕ್ಷಣವೆನಿಸುವುದು. ಇದಕ್ಕೆ "ಭ್ರುವೌ ನಾಸಾಪುಟೇ ನೇತ್ರೇ ಕರ್ಣೌವೋಷ್ಠೌ ಚ ಜತ್ರುಣೀ। ಕೂರ್ಪರೌ ಮಣಿಬಂಧೌಚ ಜಾನುನೀ ವೃಷಣೌಕಟೀ। ಕರೌಪಾದೌ ಸ್ಫಿಜೌ ಯಸ್ಯ ಸಮೌಜ್ಞೇಯಸ್ಸಭೂಪತಿಃ" ಈ ದ್ವಂದ್ವಾವಯವಗಳು ಸಮವಾಗಿದ್ದರೆ ಅರಸರಾಗುವರೆಂದು ಸಾಮುದ್ರಿಕವು.

4. ಚತುರ್ದಂಷ್ಟ್ರಃ:—ಇಲ್ಲಿ "ಸ್ನಿಗ್ಧಾಶ್ಚಾಶ್ಚ ದಶನಾಸ್ತೀಕ್ಷ್ಣಾ ದಂಷ್ಟ್ರಾಸ್ಸಮಾಶ್ಚಶುಭಾಃ" ಎಂದು ವಿಹಿರವಾಕ್ಯವು. ಹಲ್ಲುಗಳಲ್ಲಿ ಮೇಲಿನ ಮತ್ತು ಕೆಳಗಿನ ಸಾಲುಗಳೆರಡರಲ್ಲಿಯೂ, ಮಧ್ಯಭಾಗದ ನಾಲ್ಕು ಹಲ್ಲುಗಳಿಗೆ ಪಕ್ಕಗಳಲ್ಲಿರುವ ಎರಡೆರಡು ಹಲ್ಲುಗಳಾಗಲಿ, ಅಥವಾ ಆ ಎರಡುಸಾಲುಗಳಲ್ಲಿ ದವಡೆಯ ಒತ್ತಿಗಿರುವ ಎರಡೆರಡು ಹಲ್ಲುಗಳಾಗಲಿ ದಂಷ್ಟ್ರಗಳೆನಿಸುವುವು.

5. ಚತುರ್ಗತಿಃ:—ಗಜ ಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ" ಎಂದು ಬಾಲಕಾಂಡದಲ್ಲಿ ಹೇಳಿದಂತೆ, ಆನೆ, ಹುಲಿ, ಸಿಂಹ, ಎತ್ತು, ಈ ನಾಲ್ಕು ಮೃಗಗಳಂತೆ ನಡೆಯುಳ್ಳವನೆಂದು ಭಾವ.

ಗಾಂಭೀರ್ಯದಿಂದ ಕೂಡಿರುವುದು. 1 ಅವನ ತುಟಿ, ಮುಸುಡಿ, (ಹನು) ಮೂಗು, ಇವು ಮೂರೂ ಉಬ್ಬಿರುವುವು. 2 ಅವನ ಕಣ್ಣು, ಹಲ್ಲುಗಳಸಾಲು, ಮೈಮೇಲಿನ ತೊಗಲು, ಕಾಲುಕೂಪಲು, ಇವ್ವೆದೂ ನುಣುಪಾಗಿ ಮಿರುಗುತ್ತಿರುವುವು. 3 ಅವನ ಬೆನ್ನೆಲುಬು, ಮೈ, ಬೆರಳುಗಳು, ಕೈ, ಮೂಗು, ಕಣ್ಣು, ಕಿವಿ, ಮೇಢ್ರ, ಇವೆಂಟೂ ನೀಡಿರುವುವು. 4 ಅವನ ಮುಖ, ಕಣ್ಣು, ಬಾಯಿ, ನಾಲಗೆ, ತುಟಿ, ದವಡೆ, ಮೊಲೆ, ಉಗುರು, ಕೈ, ಕಾಲು, ಈ ಹತ್ತವಯವಗಳೂ ಪದ್ಮಾಕಾರದಿಂದ ದೊಪ್ಪುವುವು. 5 ಅವನ ಎದೆ, ತಲೆ, ಹಣೆ, ಕೂಪಲು, ತೋಳು, ಹೊಕ್ಕುಳು,

---

1. ಮುಹೋಷ್ಮಹನುನಾಸಶ್ಚ:— ಅಲ್ಲಿ "ಬಂಧುಜೀವಸುಸುನೋಷ್ಠಪೋಧರೋ। ಮಾಂಸಲೋರುಚಿತ ಬಿಂಬಸನ್ನಿಭಶ್ಚ। ಪೂರ್ಣಮಾಂಸಲಹನುಸ್ತು ಭೂಮಿಪ। ಸ್ಯಾಂಗತುಂ ಡರುಚಿರಾಕೃತಿಸ್ತಥಾ" ಎಂಬ ಸಂಹಿತಾವಾಕ್ಯದಂತೆ ತುಟಿಯು ದಾಸವಾಳದ ಹೂವಿನಂತೆಯೂ, ತೊಂಡೆಯು ಹಣ್ಣಿನಂತೆಯೂ, ಕೆಂಪಗೆ ಉಬ್ಬಿರಬೇಕೆಂದೂ, ಪವಡೆಯು ಮಾಂಸ ತುಂಬಿರಬೇಕೆಂದೂ, ಮೂಗು ಉಬ್ಬವಾಗಿರಬೇಕೆಂದೂ ಭಾವವು.

2. ಪಂಚಸ್ನಿಗ್ಧ:—ಮಾತು, ಉಗುರು, ಕೂಪಲು, ಚರ್ಮ, ಈ ಐದರಲ್ಲಿಯಾಗಲಿ, ಕೂಪಲು, ಕಣ್ಣು, ಹಲ್ಲು, ಚರ್ಮ, ಅಂಗಾಲು ಇವ್ವೆದರಲ್ಲಿಯೊಗಲಿ ಸ್ನಿಗ್ಧತೆಯೆಂದರೆ ನುಣುಪಿರಬೇಕೆಂದರ್ಥವು. ಇಲ್ಲಿ "ಚಕ್ಷುಸ್ನೇಹೇನ ಸೌಭಾಗ್ಯಂ ದಂತಸ್ನೇಹೇನ ಭೋಜನಂ। ತ್ವಚಸ್ನೇಹೇನ ಶಯನಂ ದಾಸಸ್ನೇಹೇನ ವಾಹನಂ" ಎಂದು ವರರುಚಿವಾಕ್ಯವೂ, "ಸ್ನಿಗ್ಧನೀಲ ಮೃದುಕುಂಚಿತಾಸ್ಥಾ ಮೂರ್ಧಜಾಸ್ಸುಖಕರಾ ಸಮಂತಿರಃ" ಎಂದು ವಿಹಿರವಾಕ್ಯವೂ ಪ್ರಮಾಣಗಳು. ಮೊದಲು "ತ್ರಿಷು ಸ್ನಿಗ್ಧಃ" ಎಂದು ಹೇಳಿರುವಾಗಲೂ ಇಲ್ಲಿ ಪುನಃ "ಪಂಚಸ್ನಿಗ್ಧಃ" ಎಂದು ಹೇಳಿದುದು ಮತಭೇದವೆಂದು ಗ್ರಾಹ್ಯವು.

3. ಅಷ್ಟವಂಶವಾ:—ಇಲ್ಲಿ "ಪೃಷ್ಠ:ವಂಶಶ್ಚರೀರಂಚ ಹಸ್ತಾಸಾದಾಂಗುಲೀಕರಾ। ನಾಸಿಕಾ ಚಕ್ಷುಷೀ ಕರ್ಣೌಪ್ರಜನೋಯಸ್ಯಚಾಯತಾ" ಎಂದು ಸಾಮುದ್ರಿಕವು. ಮೇಢ್ರಕ್ಕೆ ಆಯತತ್ವವೆಂದರೆ ಇಲ್ಲಿ ಬಹುತ್ವವೆಂದು ಗ್ರಾಹ್ಯವು.

4. ದಶಪದ್ಮ:—ಇಲ್ಲಿ "ಮುಖನೇತ್ರಾಸ್ಯಜಿಹ್ವೋಷ್ಠ ತಾಲುಸ್ತನನಖಾ: ಕರಾ। ಪಾದೌಚದಶಪದ್ಮಾನಿ ಪದ್ಮಾಕಾರಾಜಿಯಸ್ಯಚ" ಎಂದು ಸಾಮುದ್ರಿಕಪ್ರಮಾಣವು.

5. (ದಶಬೃಹತ್) "ಉರಶ್ಶಿರೋ ಲಲಾಟಂಚ ಗ್ರೀವಾ ಬಾಸ್ಯಂಸನಾಭಯಃ। ಪಾರ್ಶ್ವ, ಪೃಷ್ಠಸ್ಥರಾಶ್ಚೇತಿ ವಿಶಾಲಾಸ್ತೇ ಶುಭಪ್ರದಾಃ" ಎಂದು ಸಾಮುದ್ರಿಕವಚನವೂ, "ತಿರೋಲಲಾಟೇ ಶ್ರವಣೌಗ್ರೀವಾ ವಕ್ಷಶ್ಚ ಹೃತ್ಪಾಣಿ। ಉದರಂ ಪಾಯುಪಾದೌಚ ಪೃಷ್ಠಂ ದಶಬೃಹಂತಿಚ" ಎಂದು ಬಾಹ್ಯದೈಪ್ಪಯೂ ಪ್ರಮಾಣವಿರುವುದರಿಂದ ಈ ಹತ್ತವಯವಗಳು ದೊಡ್ಡವಾಗಿರಬೇಕೆಂದು ಭಾವವು.

ಅಳ್ಳೆ, ಬೆನ್ನು, ಕಂಠಧ್ವನಿ, ಇವು ಹತ್ತೂ ಉಬ್ಬಿ ದೊಡ್ಡದಾಗಿರುವುವು. 1 ಅವನು ತೇಜಸ್ಸಿನಿಂದಲೂ, ಯಶಸ್ಸಿನಿಂದಲೂ, ಭಾಗ್ಯದಿಂದಲೂ ಲೋಕವಿಖ್ಯಾತನು. 2 ಅವನ ದಂತಪಙ್ಕ್ತಿ, ಕಣ್ಣು, ಇವೆರಡೂ ಬಹಳ ಶುಭ್ರವಾಗಿರುವುವು. 3 ಅವನ ಕೌಂಕುಳು, ಕುಕ್ಷಿ, ಎದೆ, ಮೂಗು, ಹೆಗಲು, ಹಣೆ, ಇವಾರೂ ಉನ್ನತವಾಗಿರುವುವು. 4 ಅವನ ತಲೆಕೂದಲು, ಮೀಸೆ, ಉಗುರು, ಬೆರಳಿನ ಗಿಣ್ಣು, ಮೈಕೂದಲು, ಲಿಂಗ, ದೃಷ್ಟಿ, ಬುದ್ಧಿ, ಇವೊಂಭತ್ತೂ ಸೂಕ್ಷ್ಮಗಳಾಗಿರುವುವು. 5 ರಘು ವಂಶೋತ್ತಮನಾದ ಆ ರಾಮನು, ಪೂರ್ವಾಹ್ಣ, ಮಧ್ಯಾಹ್ನ, ಅಪರಾಹ್ಣಗಳೆಂಬೀ ಮೂರುಕಾಲಗಳಲ್ಲಿಯೂ ಕ್ರಮವಾಗಿ, ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗಗಳನ್ನು ಸಾಧಿಸುತ್ತಿರುವನು. ಸತ್ಯದಲ್ಲಿಯೂ, ಧರ್ಮದಲ್ಲಿಯೂ, ನಿತ್ಯಾಗ್ನಿಕ್ರಿ

---

1. (ತ್ರಿಭಿರ್ವ್ಯಾಪ್ತಃ) "ತ್ರಿಭಿರ್ವ್ಯಾಪ್ತಿಶ್ಚ ಯಸ್ಯಾಸ್ತ್ಯೇಜಸಾಯಶಸಾಶ್ರಿಯಾ" ಎಂಬ ಬಾಹ್ಯವಚನದಂತೆ, ತೇಜಸ್ಸು, ಯಶಸ್ಸು, ಸಂಪತ್ತು, ಇವು ಮೂರೂ ಲೋಕವಿಖ್ಯಾತಗಳಾಗಿರಬೇಕೆಂದು ಭಾವವು.

2. (ದ್ವಿಶುಕ್ಲವಾಕ್) ಹಲ್ಲು, ಕಣ್ಣು, ಇವೆರಡೂ ಬಿಳುಪಾಗಿರುವುವೆಂದಾಗಲಿ ಮಾತೃಪಿತೃವಂಶಗಳೆರಡೂ ಶುದ್ಧವಾಗಿರುವುವೆಂದಾಗಲಿ ಗ್ರಹಿಸಬಹುದು.

3. (ಷಡುನ್ನತಃ) ಇಲ್ಲಿ "ಕಕ್ಷಃ ಕುಕ್ಷಿಶ್ಚ ವಕ್ಷಶ್ಚ ಘ್ರಾಣಂ ಸ್ಕಂಧೋ ಲಲಾಟಕಾ। ಸರ್ವಭೂತೇಷು ನಿರ್ದಿಷ್ಟಾ ಉನ್ನತಾಸ್ತು ಶುಭಪ್ರದಾಃ" ಎಂದು ವರರುಚಿವಾಕ್ಯವು. ಇಲ್ಲಿ ಕೆಲವು ವಿಷಯಗಳು ಪುನರುಕ್ತಿಯಂತೆ ತೋರಿಬಂದರೂ, ಮತಭೇದದಿಂದ ಇದನ್ನು ಹೇಳಿರುವುದಾಗಿ ಗ್ರಹಿಸಿ, ರಾಮನಲ್ಲಿ ಸರ್ವಶಾಸ್ತ್ರೋಕ್ತಮಹಾಪುರುಷಲಕ್ಷಣಗಳೂ ಪೂರ್ಣವಾಗಿರುವುವೆಂದು ಸೂಚಿಸುವುದಕ್ಕಾಗಿಯೇ ಹೀಗೆ ಹೇಳಿರುವುದಾಗಿ ಗ್ರಾಹ್ಯವು.

4. (ನವತನುಃ) ಇಲ್ಲಿ "ಸೂಕ್ಷ್ಮಾಙ್ಗುಲಿಸವರ್ಣಜ ಕೇಶಲೋಮನಖತ್ವಚಃ। ಶೇಷಶ್ಚಯೇಷಾಂ ಸೂಕ್ಷ್ಮಾಣಿ ತೇ ನರಾ ದೀರ್ಘಜೀವಿನಃ" ಎಂಬ ವರರುಚಿವಾಕ್ಯದಂತೆ, ಮೇಲೆಕಂಡ ಒಂಬತ್ತವಯವಗಳೂ ಸೂಕ್ಷ್ಮಗಳಾಗಿದ್ದರೆ, ಆ ಮನುಷ್ಯರು ಚಿರಜೀವಿಗಳಾಗಿರುವರೆಂದು ಗ್ರಾಹ್ಯವು. ಮತ್ತು ಇಲ್ಲಿ "ಅಸ್ಖಲಿತಾಗ್ರಂ ಸೂಕ್ಷ್ಮಂ ಶ್ಲಕ್ಷ್ಣಂ ಶುಭಂ ಮೃದುಜ ಸನ್ತತಂ ಸ್ನಿಗ್ಧಂ" "ಸೂಕ್ಷ್ಮದೃಕ್ಸೂಕ್ಷ್ಮಬುದ್ಧಿಶ್ಚ ಯೋ ನರಸ್ಸುಖೀ ಭವೇತ್" ಎಂದೀ ಪ್ರಮಾಣಗಳೂ ಅನುಸಂಧೇಯವು.

5. (ತ್ರಿಭಿರ್ಧರ್ಮೋಪಗತಃ) ಇಲ್ಲಿ "ಧರ್ಮಾರ್ಥಕಾಮಾನಾಂ ಕಾಲೇಷು ತ್ರಿಷು ಯಸ್ಯಸ್ಯ ಸುಸ್ಥಿತಾಃ" ಎಂದು ಬಾಹ್ಯವಾಕ್ಯವು.

ಯುಳ್ಳವನು. ಶ್ರೀಮಂತನು. ಯಾವಾಗಲೂ ಧನಾದಿಗಳನ್ನಾರ್ಜಿಸುತ್ತ ಅದನ್ನು ಯಾಚಕರಿಗೆ ಕೊಟ್ಟು ಪೋಷಿಸುತ್ತಿರುವನು. ಅವನು ದೇಶಕಾಲ ಭೇದಗಳನ್ನು ಚೆನ್ನಾಗಿ ತಿಳಿದವನು. ಸಮಸ್ತಜನಗಳಲ್ಲಿಯೂ ಪ್ರಿಯವನ್ನು ನುಡಿಯತಕ್ಕವನು. ಆ ರಾಮನಿಗೆ [1] ಸವತಿತಾಯಿಯ (ಇಬ್ಬರು ಮಾತೆಯರಿಗೆ) ಮಗನಾದ ಮತ್ತು ಯಾರಿಂದಲೂ ಪರಾಜಯವನ್ನು ಹೊಂದದ ಲಕ್ಷ್ಮಣನೂ ಕೂಡ ಅನುರಾಗದಿಂದಲೂ, ರೂಪದಿಂದಲೂ, ಇತರ ಗುಣಗಳಿಂದಲೂ ಆ ರಾಮನನ್ನೇ ಹೋಲುತ್ತಿರುವನು. ಪುರುಷಸಿಂಹರಾದ ಆ ರಾಮಲಕ್ಷ್ಮಣರಿಬ್ಬರೂ ಅತ್ಯಾತುರದಿಂದ ನಿನ್ನನ್ನು ಹುಡುಕುವುದಕ್ಕಾಗಿ ಈ ಸಮಸ್ತಭೂಮಿಯನ್ನೂ ಸುತ್ತಿಬರುವಾಗ, ನಮಗೂ ಅವರಿಗೂ ಸಮಾಗಮವುಂಟಾಯಿತು. ಅವರಿಬ್ಬರೂ ನಿನ್ನನ್ನು ಹುಡುಕುತ್ತ ಬರುವಾಗಲೇ, ನಮ್ಮೊಡೆಯನಾವ ಸುಗ್ರೀವನೆಂಬ ವಾನರಾಧಿಪತಿಯನ್ನು ಕಂಡರು ಆ ಸುಗ್ರೀವನು ತನ್ನಣ್ಣನಾದ ವಾಲಿಯಿಂದೋಡಿಸಲ್ಪಟ್ಟು ರಾಜ್ಯಭ್ರಷ್ಟನಾಗಿ, ಅವನ ಭಯದಿಂದ ಋಷ್ಯಮೂಕಪರ್ವತದಮೇಲೆ ಅನೇಕ ವೃಕ್ಷಗಳಿಂದ ನಿಬಿಡವಾದ ಒಂದು ತಪ್ಪಲಲ್ಲಿರುತ್ತಿದ್ದನು. ಹೀಗೆ ಅಣ್ಣನಿಂದೋಡಿಸಲ್ಪಟ್ಟು ಪರ್ವತಾಗ್ರದಲ್ಲಿದ್ದ ಸತ್ಯಸಂಧನಾದ ಆ ವಾನರಶ್ರೇಷ್ಠನಿಗೆ, ನಾವು ಬೆಂಬಲವಾಗಿ ಸೇವೆಯನ್ನು ಮಾಡುತಿದ್ದೆವು. ಇಷ್ಟರಲ್ಲಿಯೇ ವಲ್ಕಲಧಾರಿಗಳಾಗಿಯೂ, ಉತ್ತಮಧನುಸ್ಸನ್ನು ಕೈಯಲ್ಲಿ ಹಿಡಿದವರಾಗಿಯೂ ಇದ್ದ ರಾಮಲಕ್ಷ್ಮಣರಿಬ್ಬರೂ ಋಷ್ಯಮೂಕಪರ್ವತದಲ್ಲಿ ನಾವಿದ್ದ ಆ ರಮ್ಯಸ್ಥಳಕ್ಕೆ ಬಂದು ಸೇರಿದರು. ನಮ್ಮೊಡೆಯನಾದ ಸುಗ್ರೀವನು, ಧನುರ್ಧಾರಿಗಳಾದ ಆ ಪುರುಷಶ್ರೇಷ್ಠರಿಬ್ಬರನ್ನೂ ನೋಡಿ ಭಯಪಟ್ಟು ಯಾವುದೊಂದೂ ತೋರದೆ ವಾಲಿಯು ತನ್ನನ್ನು ಕೊಲ್ಲುವುದಕ್ಕಾಗಿಯೇ ಅವರನ್ನು ಕಳುಹಿಸಿರಬಹುದೆಂದೆಣಿಸಿ, ಆ ಕ್ಷಣವೇ ಆ ಪರ್ವತಶಿಖರಕ್ಕೆ ಹಾರಿಬಿಟ್ಟನು. ಆ ಸುಗ್ರೀವನು ಪರ್ವತ ಶಿಖರದಲ್ಲಿದ್ದ ಹಾಗೆಯೇ ನನ್ನನ್ನು ಕರೆದು, ಆ ರಾಮಲಕ್ಷ್ಮಣರ ನಿಜಸ್ಥಿತಿಯನ್ನು ತಿಳಿದು ಬರುವುದಕ್ಕಾಗಿ ಅವರ ಬಳಿಗೆ ಕಳುಹಿಸಿದನು. ನಾನು ಆ ಸುಗ್ರೀವಾಜ್ಞೆಯಂತೆ ಪುರುಷಸಿಂಹರಾಗಿಯೂ, ರೂಪಲಕ್ಷಣಸಂಪನ್ನರಾಗಿಯೂ ಇದ್ದ ಆ ರಾಜಕುಮಾರರ ಬಳಿಗೆ ಬಂದು, ಅವರ ಮುಂದೆ ಕೈಮುಗಿದು ನಿಂತೆನು. ಅವರ ಪೂರ್ವ

---

1. ಸುಮಿತ್ರಾಪುತ್ರನಾದ ಲಕ್ಷ್ಮಣನು ಹುಟ್ಟಿದುದು ಮೊದಲು, ರಾಮನಿಗೆ ಸಮಾನವಾಗಿ ಕೌಸಲ್ಯೆಯಿಂದಲೂ ರಕ್ಷಿಸಲ್ಪಟ್ಟವನಾದುದರಿಂದ, ಇಲ್ಲಿ (ದ್ವೈಮಾತೃಕ) ಎಂದರೆ ಇಬ್ಬರು ಮಾತೆಯರಿಗೆ ಮಗನೆಂದು ಹೇಳಿದುದಾಗಿಯೂ ಗ್ರಹಿಸಬಹುದು.

ವೃತ್ತಾಂತಗಳೆಲ್ಲವನ್ನೂ ವಿಚಾರಿಸಿ ತಿಳಿದುಕೊಂಡೆನು. ಅವರಿಗೂ ಬಹಳ ಸಂತೋಷವುಂಟಾಯಿತು. ನಮ್ಮಿಬ್ಬರಿಗೂ ಒಬ್ಬರಿಗೊಬ್ಬರಿಗೆ ನಂಬಿಕೆಯೂ ಹುಟ್ಟಿತು. ಆಮೇಲೆ ಅವರಿಬ್ಬರನ್ನೂ ನಾನು ನನ್ನ ಭುಜದಮೇಲೇರಿಸಿಕೊಂಡು, ಸುಗ್ರೀವನಿದ್ದ ಸ್ಥಳಕ್ಕೆ ಕರೆತಂದೆನು. ಆ ರಾಮಲಕ್ಷ್ಮಣರ ಸಂಗತಿಯೆಲ್ಲವನ್ನೂ ಯಥಾಸ್ಥಿತವಾಗಿ ಸುಗ್ರೀವನಿಗೂ ತಿಳಿಸಿದೆನು. ರಾಮಸುಗ್ರೀವರಿಬ್ಬರೂ ಪರಸ್ಪರಸಲ್ಲಾಪಗಳನ್ನು ಮಾಡಿಕೊಂಡರು. ಕೊನೆಗೆ ಅವರಿಬ್ಬರಿಗೂ ಪರಸ್ಪರಪ್ರೇಮವೂ ಹೆಚ್ಚಿತು. ಹೀಗೆ ಅವರಿಬ್ಬರೂ ಪರಸ್ಪರಪ್ರೀತಿಯನ್ನು ಹೊಂದಿ, ತಮ್ಮತಮ್ಮಗೆ, ಅದುವರೆಗೂ ಸಂಭವಿಸಿದ ಕಷ್ಟಗಳೆಲ್ಲವನ್ನೂ ಒಬ್ಬರಿಗೊಬ್ಬರು ವಿಸ್ತರಿಸಿ ಹೇಳಿಕೊಂಡು, ತಮಗೆ ತಾವೇ ಸಮಾಧಾನವನ್ನು ಹೊಂದಿದರು. ಸುಗ್ರೀವನು ಸ್ತ್ರೀನಿಮಿತ್ತವಾಗಿ ತನ್ನ ಅಣ್ಣನಾದ ವಾಲಿಯಿಂದ ಅವಮಾನಿತನಾಗಿರುವುದನ್ನು ನೋಡಿ, ಲಕ್ಷ್ಮಣಾಗ್ರಜನಾದ ರಾಮನು ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿಕೊಟ್ಟು ಅವನನ್ನು ಸಮಾಧಾನಪಡಿಸಿದನು. ಆಮೇಲೆ ಲಕ್ಷ್ಮಣನು ನಿನ್ನನ್ನಗಲಿದುದರಿಂದ ರಾಮನಿಗುಂಟಾಗಿರುವ ಮಹಾದುಃಖವನ್ನು ವಾನರೇಂದ್ರನಾದ ಸುಗ್ರೀವನಿಗೆ ತಿಳಿಸಿದನು. ಲಕ್ಷ್ಮಣನು ಹೇಳಿದ ಮಾತನ್ನು ಕೇಳಿದೊಡನೆ ಸುಗ್ರೀವನಿಗೆ, ತನ್ನ ಮಿತ್ರನಾದ ರಾಮನ ದುಃಖವನ್ನು ಕೇಳಿ ಬಹಳ ವ್ಯಸನವುಂಟಾಯಿತು. ರಾಹುಗ್ರಸ್ತನಾದ ಸೂರ್ಯನಂತೆ ಅವನ ಮುಖವು ಕಳೆಗುಂದಿತು. [1] ಆಮೇಲೆ ಅಲ್ಲಿದ್ದ ವಾನರರು, ರಾಕ್ಷಸನು ನಿನ್ನನ್ನು ಕೊಂಡುಹೋಗುತಿದ್ದಾಗ ನೀನು ನಿನ್ನ ಮೈಯಿಂದ ತೆಗೆದು ಕೆಳಕ್ಕೆ ಬಿಸುಟ ಪರ್ವಾಭರಣಗಳನ್ನೂ ತಂದು ಸಂತೋಷದಿಂದ ರಾಮನಿಗೆ ತೋರಿಸಿದರು. ಆದರೆ ನೀನಿರುವ ಸ್ಥಳವು ವಾನರ್ಯಾರಿಗೂ ತಿಳಿಯದು. [2] ರಾವಣನು ಅಜ್ಞಾನವಶನಾಗಿರುವಾಗ ಆಕಾಶದಿಂದ

---

1. "ಮೊದಲು ಸುಗ್ರೀವನೇ ಈ ಆಭರಣಗಳನ್ನು ತಂದುಕೊಟ್ಟುದಾಗಿ ಹೇಳಿರುವಾಗ, ಈಗ ಅವುಗಳನ್ನು ವಾನರಯೂಥಪತಿಗಳು ತಂದುಕೊಟ್ಟುದಾಗಿ ಹೇಳುವುದಕ್ಕೆ ಕಾರಣವೇನು? ಎಂದರೆ, ಸುಗ್ರೀವನು ವಾನರಯೂಥಪತಿಗಳ ಮೂಲಕವಾಗಿಯೇ ಅವುಗಳನ್ನು ತರಿಸಿ ತನ್ನ ಕೈಯಿಂದ ರಾಮನಿಗೆ ಕೊಟ್ಟುದಾಗಿ ತಿಳಿಯಬೇಕು.

2. ಇಲ್ಲಿ "ತಾನಿ ರಾಮಾಯ ದತ್ತಾನಿ ಮಯ್ಯೇವೋಪಹೃತಾನಿಚ। ಸ್ವನವಂತ್ಯವಕೀರ್ಣಾನಿ ತಸ್ಮಿನ್ ವಿಗತಚೇತಸಿ" ಎಂದು ಮೂಲವು. ಇದಕ್ಕೆ "ರಾಮನಿಗೆ ಆ ಒಡವೆಗಳನ್ನು ಕೊಟ್ಟಮೇಲೆ, ಅವನು ಅವುಗಳನ್ನು ನೋಡಿ ಪ್ರಜ್ಞೆತಪ್ಪಿ ಮೂರ್ಛೆಬೀಳಲು, ಅವೆಲ್ಲವೂ ಅವನ ಕೈಗಳಿಂದ ಜಾರಿ ಘಲ್ಲೆಲನೆ ಕೆಳಗೆ ಬಿದ್ದುವು. ಆಗ ನಾನೇ ಅವುಗಳನ್ನೆತ್ತಿ ತಂದಿಟ್ಟೆನು" ಎಂದೂ ಅರ್ಥಾಂತರವನ್ನು ಹೇಳುವರು.

ಫಲ್ಗುಲನೆ ಉದುರಿಬಿದ್ದ ಆಭರಣಗಳೆಲ್ಲವನ್ನೂ ನಾನೇ ನನ್ನ ಕೈಯಿಂದ ರಾಮನ ಮುಂದೆ ತಂದಿರಿಸಿದೆನು. ಅದನ್ನು ಸುಗ್ರೀವನು ತೆಗೆದು ರಾಮನ ಕೈಗೆ ಕೊಟ್ಟನು. ರಾಮನಾದರೋ ಆ ಆಭರಣಗಳನ್ನು ನೋಡಿದೊಡನೆ ದುಃಖದಿಂದ ಪ್ರಜ್ಞೆತಪ್ಪಿ ಮೂರ್ಛೆಬಿದ್ದನು. ದೇವಸಮಾನನಾದ ಆ ನಿನ್ನ ಪತಿಯು, ಅಂದವಾದ ಆ ಒಡವೆಗಳೆಲ್ಲವನ್ನೂ ತೆಗೆದು ತನ್ನ ತೊಡೆಯಲ್ಲಿರಿಸಿಕೊಂಡು, ಬಹುವಿಧದಿಂದ ವಿಲಪಿಸುತ್ತಿದ್ದನು. ಆಗ ಆ ರಾಮನ ಸಂಕಟವನ್ನು ನಾನೇನು ಹೇಳಲಿ! ಆ ಒಡವೆಗಳನ್ನು ಬಾರಿಬಾರಿಗೂ ತೆಗೆದು ನೋಡುವನು! ಅವುಗಳನ್ನು ನೋಡಿನೋಡಿ ಅಳುವನು! ಮನಸ್ಸಿನಲ್ಲಿಯೇ ಸಂಕಟದಿಂದ ಕುದಿಯುತ್ತಿರುವನು! ಹೀಗೆ ಆ ನಿನ್ನ ಆಭರಣಗಳು ರಾಮನ ದುಃಖಾಗ್ನಿಯನ್ನು ಮತ್ತಷ್ಟು ಉರುಬಿ ಹತ್ತಿಸಿದಂತೆ ಉತ್ತೇಜನಗೊಳಿಸಿತು. ಆ ಮಹಾತ್ಮನು ಬಹಳ ಹೊತ್ತಿನವರೆಗೆ ಆ ದುಃಖದಿಂದ ಮೂರ್ಛೆಬಿದ್ದು ಮೈಮರೆತು ಮಲಗಿದ್ದುದನ್ನು ನೋಡಿ, ಲಕ್ಷ್ಮಣನೂ, ಸುಗ್ರೀವನೂ, ನಾನೂ, ಅವನನ್ನು ಅನೇಕವಿಧದಿಂದ ಸಮಾಧಾನಗೊಳಿಸಿದೆವು. ಕೊನೆಗೆ ರಾಮನು ಎಷ್ಟೋ ಕಷ್ಟದಿಂದ ಚೇತರಿಸಿಕೊಂಡಿದ್ದನು. ಮಹಾಬಾಹುವಾದ ರಾಮನೂ, ಲಕ್ಷ್ಮಣನೂ, ಕ್ಷಣಕ್ಷಣಕ್ಕೂ ಆ ಒಡವೆಗಳನ್ನೆತ್ತಿ ನೋಡುತ್ತ, ಸುಗ್ರೀವನಿಗೂ ತೋರಿಸಿ, ಕೊನೆಗೆ ಅವನ ಕೈಗೇ ಕೊಟ್ಟುಬಿಟ್ಟರು. ಎಲೆ ಆರ್ಯೆ? ನಾನೇನು ಹೇಳಲಿ! ಆ ರಾಮನು ನಿನ್ನನ್ನು ಕಾಣದಂದಿನಿಂದ, ದೊಡ್ಡ ಬೆಂಕಿಯುರಿಯಿಂದಾವೃತವಾದ [1] ಅಗ್ನಿಪರ್ವತದಂತೆ, ಎಡೆಬಿಡದೆ ತಪಿಸುತ್ತಿರುವನು. ನಿನ್ನ ನಿಮಿತ್ತವಾಗಿ ಹಗಲುರಾತ್ರಿಯೂ ನಿದ್ರೆಯಿಲ್ಲದುದೊಂದು, ದುಃಖವೊಂದು, ಚಿಂತೆಯೊಂದು, ಇವು ಮೂರರಿಂದ ರಾಮನು, ಪಂಚಾಗ್ನಿಗಳಿಂದ ಕೂಡಿದ ಅಗ್ನಿಜ್ವಾಲೆಯಂತೆ ಕುದಿಯುತ್ತಿರುವನು. ನಿನ್ನನ್ನು ಕಾಣಬದಕ್ಕಾಗಿ ಅತನು ಭೂಕಂಪದಿಂದ ನಡುಗುವ ಬೆಟ್ಟದಂತೆ ನಡುಗುತ್ತಿರುವನು. ಎಲೆ ರಾಜಕುಮಾರಿ! ನಿನ್ನನ್ನು ಕಾಣದೆ ರಾಮನು ಮನೋಹರಗಳಾದ ವನಗಳಲ್ಲಿಯಾಗಲಿ, ನದಿಗಳಲ್ಲಿಯಾಗಲಿ,

---

1. ಅಗ್ನಿಪರ್ವತವೆಂಬುದು ಮೇರುಶಿಖರದಲ್ಲಿರುವ ಒಂದು ಪರ್ವತವು. ಇದೇ ಭಾರತದಲ್ಲಿ 'ಅತ್ರಮಾಲ್ಯವತಶ್ಶೃಂಗೇ ದೃಶ್ಯತೇ ಹವ್ಯವಾಟ್ಸದಾ। ನಾನ್ಯಾ ಸಂವರ್ತಕೋ ನಾಮ ಕಾಲಾಗ್ನಿರ್ಭರತರ್ಷಭ'' ಎಂದು ಸೂಚಿಸಲ್ಪಟ್ಟಿದೆ.

ಗಿರಿನದಿಗಳಲ್ಲಿಯಾಗಲಿ, ಎಲ್ಲೆಲ್ಲಿ ಸುತ್ತಿದರೂ ಎಷ್ಟುಮಾತ್ರವೂ ಮನಸ್ಸಿಗೆ ನೆಮ್ಮದಿಯಿಲ್ಲದೆ ಕೊರಗುತ್ತಿರುವನು. ಎಲೆ ಜನಕಪುತ್ರಿ! ಇನ್ನು ನೀನು ದುಃಖಿಸಬೇಡ! ಪುರುಷೋತ್ತಮನಾದ ಆ ರಾಮನು ಶೀಘ್ರದಲ್ಲಿಯೇ ಇಲ್ಲಿಗೆ ಬಂದು, ಈ ರಾವಣನನ್ನು, ಅವನ ಬಂಧುಮಿತ್ರಪರಿವಾರಗಳಿಂದನೆ ಕೊಂದು, ನಿನ್ನನ್ನು ಪಡೆಯುವನು. ರಾಮಸುಗ್ರೀವರಿಬ್ಬರೂ ಸೇರಿದಾಗಲೇ ಸುಗ್ರೀವನಿಗಾಗಿ ರಾಮನು ವಾಲಿಯನ್ನು ಕೊಲ್ಲುವುದಾಗಿಯೂ, ರಾಮನಿಗಾಗಿ ಸುಗ್ರೀವನು ನಿನ್ನನ್ನು ಹುಡುಕಿಕೊಡುವುದಾಗಿಯೂ, ಪರಸ್ಪರಪ್ರತಿಜ್ಞೆಯನ್ನು ಮಾಡಿಕೊಂಡಿರುವರು. ಅದರಂತೆಯೇ ಸುಗ್ರೀವನು ವೀರರಾದ ಆ ಇಬ್ಬರು ರಾಜಕುಮಾರರೊಡನೆ ಕಿಷ್ಕಿಂಧೆಗೆ ಬಂದು ವಾಲಿಯನ್ನು ಕೊಲ್ಲಿಸಿದನು. ಒಡನೆಯೇ ರಾಮನು ಸಮಸ್ತವಾನರಭಲ್ಲೂಕಸಮೂಹಗಳಿಗೂ ಸುಗ್ರೀವನನ್ನು ರಾಜನನ್ನಾಗಿಯೂ ಮಾಡಿಬಿಟ್ಟನು. ಎಲೆ ದೇವಿ! ಇದೀಗ ರಾಮಸುಗ್ರೀವರಿಬ್ಬರಿಗೂ ಸ್ನೇಹವುಂಟಾಗುವುದಕ್ಕೆ ಕಾರಣವು. ನನ್ನನ್ನು ಹನುಮಂತನೆನ್ನುವರು. ಅವರಿಬ್ಬರ ಆಜ್ಞೆಯ ಮೇರೆಯೇ ನಾನು ದೂತನಾಗಿ ಇಲ್ಲಿಗೆ ಬಂದಿರುವೆನು! ಸುಗ್ರೀವನು ತನ್ನ ರಾಜ್ಯವನ್ನು ಕೈಸೇರಿಸಿಕೊಂಡೊಡನೆ ತನ್ನ ಕಡೆಯ ಕಪಿವೀರರನ್ನು ಕರೆಸಿ, ನಿನ್ನನ್ನು ಹುಡುಕುವುದಕ್ಕಾಗಿ ಅವರನ್ನು ಪೂರ್ವದಿಕ್ಕುಗಳಿಗೂ ಕಳುಹಿಸಿದನು. ಮಹಾತೇಜಸ್ವಿಯೆನಿಸಿದ ವಾನರೇಂದ್ರನಾದ ಆ ಸುಗ್ರೀವನ ಆಜ್ಞೆಯಿಂದ, ಬೆಟ್ಟದಂತೆ ಮಹಾದೇಹವುಳ್ಳ ಅನೇಕ ವಾನರವೀರರು ನಿನ್ನನ್ನು ಹುಡುಕುವುದಕ್ಕಾಗಿ ನಾನಾದಿಕ್ಕುಗಳಿಗೂ ಹೊರಟರು. ಆ ಸುಗ್ರೀವಾಜ್ಞೆಗೆ ಭಯಪಟ್ಟು, ನಾವೂ, ಇನ್ನೂ ಕೆಲವು ವಾನರರೂ ನಿನ್ನನ್ನು ಹುಡುಕುತ್ತ ಭೂಮಿಯೆಲ್ಲವನ್ನೂ ಸುತ್ತುವುದಕ್ಕೆ ಹೊರಟೆವು. ಆ ವಾನರವೀರರಲ್ಲಿ ಶ್ರೀಮಂತನಾಗಿಯೂ ಮಹಾಬಲಾಢ್ಯನಾಗಿಯೂ ಕಪಿಶ್ರೇಷ್ಠನಾಗಿಯೂ ಇರುವ ವಾಲಿಪುತ್ರನಾದ ಅಂಗದನೆಂಬವನು, ಸುಗ್ರೀವರಾಜನಿಗೆ ಸೇರಿದ ವಾನರಸೈನ್ಯದಲ್ಲಿ ಮೂರರಲ್ಲೊಂದು ಪಾಲು ಸೈನ್ಯವನ್ನು ಸಂಗಡ ಕರೆದುಕೊಂಡು ಹೊರಟನು. ನಾನೂ ಆ ಗುಂಪಿನಲ್ಲಿ ಸೇರಿದೆನು. ಹೀಗೆ ನಾವೆಲ್ಲರೂ ನಿನ್ನನ್ನು ಹುಡುಕಿಕೊಂಡು ಬರುವಾಗ, ವಿಂಧ್ಯಪರ್ವತದ ಒಂದಾನೊಂದು ಗುಹೆಯಲ್ಲಿ, ಯಾರಿಗೂ ಕಾಣದಂತೆ ಸಿಕ್ಕಿಬಿದ್ದು, ಹಿಂತಿರುಗಿ

ಬರುವುದಕ್ಕೂ ದಾರಿತೋರದೆ ದುಃಖಾಕ್ರಾಂತರಾಗಿ ಎಷ್ಟೋ ಹಗಲಿರುಳುಗಳನ್ನು ಕಳೆದೆವು. ನಮಗೆ ಮುಂದಿನ ಕಾರ್ಯದಾಸೆಯೂ ತಪ್ಪಿತು. ಸುಗ್ರೀವನು ನಮಗೆ ನಿರ್ಣಯಿಸಿ ಕೊಟ್ಟಿದ್ದ ಕಾಲಾವಧಿಯೂ ಮಿಂಚಿಹೋಯಿತು! ಮಾಡುವುದೇನು? ಆಗ ನಾವು ಹಿಂತಿರುಗಿ ಕಿಷ್ಕಿಂಧೆಗೆ ಹೋದರೂ, ಸುಗ್ರೀವನಿಂದ ಕ್ರೂರ ಶಿಕ್ಷೆಯನ್ನು ನಾವು ಅನುಭವಿಸಬೇಕಾಗುವುದೆಂದೆಣಿಸಿ, ಆ ಭಯಕ್ಕಾಗಿ ಅಲ್ಲಿಯೇ ಪ್ರಾಣವನ್ನು ಬಿಡುವುದಾಗಿಯೂ ನಿಶ್ಚಯಿಸಿಬಿಟ್ಟೆವು. ನಾವು ಅದುವರೆಗೆ ಎಷ್ಟೋ ಅರಣ್ಯಗಳನ್ನೆಲ್ಲಾ ಹುಡುಕಿದೆವು. ಎಷ್ಟೋ ದುರ್ಗಗಳನ್ನು ನೋಡಿ ಬಂದೆವು. ಎಷ್ಟೋ ಬೆಟ್ಟಗುಡ್ಡಗಳನ್ನೆಲ್ಲಾ ತಿರುಗಿದೆವು. ಕಂಡಕಂಡ ನದಿಗಳನ್ನೆಲ್ಲಾ ಇಳಿದು ನೋಡಿದೆವು. ನೀನಿರುವ ಸ್ಥಳವೇ ಗೊತ್ತಾಗಲಿಲ್ಲ. ಹೀಗೆ ನಾವು ನಿನ್ನನ್ನೂ ಕಾಣದೆ, ಕ್ಲುಪ್ತಕಾಲಕ್ಕೂ ಹಿಂತಿರುಗದಿದ್ದುದನ್ನು ನೋಡಿದರೆ, ಸುಗ್ರೀವನಾದರೂ ನಮಗೆ ಮರಣಶಿಕ್ಷೆಯನ್ನೇ ವಿಧಿಸುವನೆಂದೆಣಿಸಿ, ಅಲ್ಲಿ ನಾವೇ ಪ್ರಾಣವನ್ನು ಬಿಡುವುದಾಗಿ ನಿಶ್ಚಯಿಸಿಬಿಟ್ಟೆವು. ಎಲೆ ದೇವಿ! ಈ ನಿಶ್ಚಯದಿಂದ ಪ್ರಾಯೋಪವೇಶಮಾಡಿ ಮಲಗಿದ್ದ ಸಮಸ್ತ ವಾನರರನ್ನೂ ನೋಡಿ, ನಮ್ಮ ಯುವರಾಜನಾದ ಅಂಗದನು, ದುಃಖವೆಂಬ ಮಹಾಸಾಗರದಲ್ಲಿ ಮುಳುಗಿದಂತಾಗಿ, ಗಟ್ಟಿಯಾಗಿ ಅಳುವುದಕ್ಕೆ ತೊಡಗಿದನು, ಆಗ ಅಂಗದನಾದರೋ ನೀನು ಅಪಹೃತಳಾದುದೊಂದು; ತನ್ನ ತಂದೆಯಾದ ವಾಲಿಯು ಹತನಾದುದೊಂದು; ವಾನರರೆಲ್ಲರೂ ಪ್ರಾಯೋಪವೇಶದಲ್ಲಿ ಸಾಯುವುದಕ್ಕೆ ಸಿದ್ಧವಾಗಿರುವುದೊಂದು; ಜಟಾಯುವಿನ ಮರಣವೊಂದು; ಇವೆಲ್ಲವನ್ನೂ ಕ್ರಮವಾಗಿ ಜ್ಞಾಪಿಸಿಕೊಂಡು, ಅದನ್ನೇ ಬಾಯಿಂದಾಡುತ್ತ ವಿಲಪಿಸುತ್ತಿದ್ದನು. ನಮಗೆ ಸುಗ್ರೀವನು ಒಂದುತಿಂಗಳ ಅವಧಿಯನ್ನು ಮಾತ್ರಕೊಟ್ಟು, ಅದಕ್ಕೆ ಮೇಲೆ ಕಾಲವನ್ನು ಮೀರಿ ಬಂದವರನ್ನು ಕೊಂದುಬಿಡುವುದಾಗಿಯೇ ದೃಢಶಾಸನವನ್ನು ಮಾಡಿದ್ದುದರಿಂದ, ಪ್ರಾಣದಮೇಲೆ ಆಸೆಯನ್ನು ಬಿಟ್ಟು ಸಾಯುವುದಕ್ಕೆ ಸಿದ್ಧರಾಗಿದ್ದ ನಮಗೆ ಕಾರ್ಯಸಿದ್ಧಿಯೇ ಕಣ್ಣೆದಿರಿಗೆ ಬಂದಂತೆ, ವೀರ್ಯಶಾಲಿಯಾದ ಒಂದು ದೊಡ್ಡ ಪಕ್ಷಿಯು ಅಲ್ಲಿಗೆ ಬಂದು ಸೇರಿತು. ಅದು ಸಾಮಾನ್ಯಪಕ್ಷಿಯಲ್ಲ! ಅವನಿಗೆ ಸಂಪಾತಿಯೆಂದು ಹೆಸರು. ಗೃಧ್ರರಾಜನಾದ ಜಟಾಯುವಿಗೆ ಒಡಹುಟ್ಟಿದ ಅಣ್ಣನು. ಅಂಗದನು ಹೇಳುತಿದ್ದ ಈ ಜಟಾಯುವಿನ ಮರಣವಾರ್ತೆಯನ್ನು ಕೇಳಿದೊಡನೆ, ಆ ಸಂಪಾತಿಯು ಬೆಜ್ಜರಗೊಂಡು, ನಮ್ಮನ್ನು ನೋಡಿ "ಎಲೆ ವಾನರೋತ್ತಮರೆ! ಎನ್ನ ತಮ್ಮನಾದ ಜಟಾಯುವನ್ನು ಕೊಂದಪಾಪಿ ಯಾರು? ಅವನನ್ನು ಕೊಂದುದೆಲ್ಲಿ? ಈ ಸಂಗತಿಯನ್ನು ನನಗೆ ಹೇಳಬೇಕು" ಎಂದು ಕೇಳಿದನು. ಆಗ ಅಂಗದನು ಜನಸ್ಥಾನದಲ್ಲಿ ನಿನಗಾಗಿ

ಆ ಜಟಾಯುವಿಗೆ ಘೋರ ರಾಕ್ಷಸನಿಂದ ಸಂಭವಿಸಿದ ದೊಡ್ಡ ಕೊಲೆಯನ್ನು ಯಥಾಸ್ಥಿತವಾಗಿ ವಿವರಿಸಿದನು. ಈ ಜಟಾಯುವಧವನ್ನು ಕೇಳಿ ಅರುಣಪ್ರತ್ಯನಾದ ಆ ಸಂಪಾತಿಯು, ಬಹಳ ದುಃಖಿತನಾಗಿ ಕೊನೆಗೆ ನೀನು ಈ ರಾವಣನ ಮನೆಯಲ್ಲಿರುವ ಸಂಗತಿಯನ್ನು ತಿಳಿಸಿಬಿಟ್ಟನು. ಅಂಗದನು ಮುಂತಾಗಿ ನಾವೆಲ್ಲರೂ ಕರ್ಣಾನಂದಕರವಾದ ಆ ಸಂಪಾತಿಯ ಮಾತನ್ನು ಕೇಳಿದೊಡನೆ ವೇಗದಿಂದ ಹೊರಟುಬಿಟ್ಟೆವು. ಆ ವಿಂಧ್ಯಪರ್ವತದಿಂದ ಸಮುದ್ರದ ಉತ್ತರತೀರಕ್ಕೆ ಬಂದೆವು. ನನ್ನ ಕಡೆಯ ವಾನರರೆಲ್ಲರೂ ನಿನ್ನನ್ನು ನೋಡುವ ಕುತೂಹಲದಿಂದ ಎಷ್ಟೋ ಉತ್ಸಾಹಗೊಂಡವರಾಗಿ, ಸಮುದ್ರತೀರದವರೆಗೂ ಓಡಿಬಂದರು. ಆ ಮಹಾಸಮುದ್ರವನ್ನು ನೋಡಿದ ಮೇಲೆ ಅವರೆಲ್ಲರಿಗೂ ಭಯವು ಹುಟ್ಟಿತು. ಅದನ್ನು ದಾಟುವ ಬಗೆಯನೆಂದು ಹಿಂದುಮುಂದು ತೋರದೆ ಚಿಂತಿಸುತ್ತಿರುವ ವಾನರಸೈನ್ಯವನ್ನು ನೋಡಿ, ನಾನು ಅವರನ್ನು ಸಮಾಧಾನಪಡಿಸಿ, ಅವರ ಭಯವನ್ನು ನೀಗಿಸಿ, ಅಗಲೇ ನೂರು ಯೋಜನದೂರವುಳ್ಳ ಈ ಸಮುದ್ರವನ್ನು ಹಾರಿಬಿಟ್ಟೆನು. ಆ ರಾತ್ರಿಯಲ್ಲಿಯೇ ನಾನು ರಾಕ್ಷಸರಿಂದ ನಿಬಿಡವಾದ ಈ ಲಂಕೆಯನ್ನು ಪ್ರವೇಶಿಸಿ ರಾವಣನನ್ನೂ ನೋಡಿದೆನು. ಇಲ್ಲಿ ದುಃಖಿತೆಯಾದ ನಿನ್ನನ್ನೂ ನೋಡಿದೆನು. ಎಲೆ ದೇವಿ! ಇದುವರೆಗೆ ನಡೆದಸಂಗತಿಯನ್ನು ನಿನಗೆ ಯಥಾಸ್ಥಿತವಾಗಿ ತಿಳಿಸಿರುವೆನು. ನಾನು ಅನ್ಯನಲ್ಲ. ರಾಮಾಜ್ಞೆಯಿಂದ ಬಂದ ದೂತನು. ಅದುದರಿಂದ ನನ್ನೊಡನೆ ವಿಶ್ವಾಸವಿಟ್ಟು ಮಾತಾಡು! ನಿನ್ನ ನಿಮಿತ್ತವಾಗಿಯೇ ನಾನು ರಾವಣನಿಂದ ಕಳುಹಿಸಲ್ಪಟ್ಟ ದೂತನೆಂದು ತಿಳಿ! ನಾನು ಸುಗ್ರೀವನ ಮಂತ್ರಿಯು! ವಾಯುವಿನ ಮಗನು! ಶಸ್ತ್ರಧಾರಿಗಳೆಲ್ಲರಿಗೂ ಮೇಲೆನಿಸಿಕೊಂಡ ನಿನ್ನ ಪತಿಯಾದ ರಾಮನು ಕ್ಷೇಮದಿಂದಿರುವನು. ಅಜ್ಞಾನ ಸೇನೆಯಲ್ಲಿ ನಿರತನಾದ ಶುಭಲಕ್ಷಣಗಳುಳ್ಳ ಲಕ್ಷ್ಮಣನೂ ಸುಖದಿಂದಿರುವನು. ವೀರ್ಯವಂತನಾದ ನಿನ್ನ ಪತಿಯ ಹಿತಕ್ಕಾಗಿಯೇ ಸುಗ್ರೀವಾಜ್ಞೆಯಿಂದ ನಾನೊಬ್ಬನು ಮಾತ್ರ ಇಲ್ಲಿಗೆ ಬಂದಿರುವೆನು. ನಾನೊಬ್ಬನೇ ಅಸಹಾಯನಾಗಿ ನಿನ್ನ ವಾರ್ತೆಯನ್ನು ಹುಡುಕುತ್ತ ಕಾಮರೂಪಿಯಾಗಿ ಈ ದಕ್ಷಿಣದಿಕ್ಕನ್ನು ಸೇರಿದೆನು. ಈಗಲೂ ನಿನ್ನನ್ನು ಕಾಣದೆ ದುಃಖಿಸುತ್ತಿರುವ ವಾನರಸೈನ್ಯಕ್ಕೆ ಈ ಶುಭವೃತ್ತಾಂತವನ್ನು ತಿಳಿಸಿ, ಅವರ ದುಃಖವನ್ನು ಹೋಗಲಾಡಿಸುವ ಭಾಗ್ಯಕ್ಕೆ ಈಗ ನಾನೊಬ್ಬನೇ ಭಾಗಿಯಾದೆನು. ನಾನು ಸಮುದ್ರವನ್ನು ದಾಟಿ ಇಷ್ಟು ದೂರಕ್ಕೆ ಬಂದುದೂ ಈಗ ನನ್ನ ಭಾಗ್ಯವಶದಿಂದ ಸಾರ್ಥಕವಾಯಿತು. ನನ್ನ ಭಾಗ್ಯವಶದಿಂದಲೇ ನಿನ್ನನ್ನು ನೋಡುವ ಮಹಾಕೀರ್ತಿಗೂ ನಾನು ಭಾಗಿಯಾದೆನು. ವೀರ್ಯವಂತನಾದ ಶ್ರೀರಾಮನೂಕೂಡ ಶೀಘ್ರದಲ್ಲಿಯೇ ರಾವಣನನ್ನು ಅವನ ಬಂಧು

ಮಿತ್ರರೊಡನೆ ಕೊಂದು ನಿನ್ನನ್ನು ಪಡೆಯುವನು. ಎಲೆ ದೇವಿ! ಇನ್ನು ನನ್ನ ಜನ್ಮವೃತ್ತಾಂತವನ್ನೂ ನಿನಗೆ ತಿಳಿಸುವೆನು ಕೇಳು. ಪರ್ವತಗಳಲ್ಲಿ ಮೇಲೆನಿಸಿ ಕೊಂಡ ಮಾಲ್ಯವಂತವೆಂಬ ಬೆಟ್ಟವೊಂದುಟು. ಅಲ್ಲಿದ್ದ ಕೇಸರಿಯೆಂಬ ವಾನರನು ಒಮ್ಮೆ ಅಲ್ಲಿಂದ ಗೋಕರ್ಣಪರ್ವತಕ್ಕೆ ಹೋದನು ಆ ಮಹಾಕಪಿಯೇ ನನ್ನ ತಂದೆಯು ಅವನು ಅಲ್ಲಿ ದೇವರ್ಷಿಗಳ ಆಜ್ಞೆಯಿಂದ ಪವಿತ್ರವಾದ ಒಂದು ಸಮುದ್ರ ತೀರಪ್ರದೇಶದಲ್ಲಿ ಶಂಬುಸಾದನನೆಂಬ ರಾಕ್ಷಸನೊಬ್ಬನನ್ನು ಕೊಂದನು. ಹೀಗೆ ಕೇಸರಿಯು ಗೋಕರ್ಣಕ್ಕೆ ಹೋಗಿದ್ದಾಗ, ನಾನು ಅವನ ಪತ್ನಿಯಲ್ಲಿ ವಾಯು ದೇವನ ಅನುಗ್ರಹದಿಂದ ಹುಟ್ಟಿದೆನು. ನಾನು ಹುಟ್ಟಿದಾಗ ನಡೆಸಿದ ಒಂದು ಕಾರ್ಯಕ್ಕೆ ಗುರುತಾಗಿಯೇ ನನಗೆ ಲೋಕದಲ್ಲಿ ಹನುಮಂತನೆಂಬ ಹೆಸರುಂಟಾಯಿತು. ಎಲೆ ವೈದೇಹಿ! ನಿನ್ನ ನಂಬಿಕೆಗಾಗಿ ನಾನು ನಿನ್ನ ಪತಿಯಾದ ರಾಮನ ಗುಣಗಳನ್ನು ಹೇಳಿದೆನಷ್ಟೆ? ಶೀಘ್ರದಲ್ಲಿಯೇ ಆ ರಾಮನು ನಿನ್ನನ್ನು ಇಲ್ಲಿಂದ ಕರೆದುಕೊಂಡು ಹೋಗುವನು!" ಎಂದನು. ಹೀಗೆ ಹನುಮಂತನು ದುಃಖಿತೆಯಾದ ಸೀತೆಗೆ ತಕ್ಕ ಕಾರಣಗಳಿಂದ ನಂಬಿಕೆಯನ್ನು ಹುಟ್ಟಿಸಲು, ಅವನು ಹೇಳಿದ ಗುರುತುಗಳಲ್ಲಿ ಸೀತೆಗೂ ನಂಬಿಕೆಯು ತೋರಿತು. ಅವನು ರಾಮದೂತನೆಂದೇ ನಿಶ್ಚಯಿಸಿಕೊಂಡಳು. ಅವಳ ಹರ್ಷಕ್ಕೆ ಪಾರವೇ ಇಲ್ಲದಂತಾಯಿತು. ಅವಳ ಕಣ್ಣುಗಳಿಂದ ಆನಂದಬಾಷ್ಪವು ತುಳುಕುತಿತ್ತು. ಆಂದವಾದ ವಿಶಾಲನಯನಗಳಿಂದ ಕೂಡಿದ ಅವಳ ಮುಖವು ರಾಹುವಿನಿಂದ ಬಿಡಲ್ಪಟ್ಟ ಚಂದ್ರನಂತೆ ಕಳೆಗೊಂಡಿತು. ಆ ಹನುಮಂತನು ನಿಜವಾಗಿ ರಾಮದೂತನಾಗಿ ಬಂದ ಕಪಿಯೇ ಹೊರತು ಬೇರೆಯಲ್ಲವೆಂದೇ ನಿಶ್ಚಯಿಸಿಕೊಂಡಳು. ಆಗ ಹನುಮಂತನು ಹರ್ಷದಿಂದರಳಿದ ಮುಖವುಳ್ಳ ಆ ಸೀತೆಯನ್ನು ನೋಡಿ "ಎಲೆ ದೇವಿ! ಇದ್ದ ಸಂಗತಿಯೆಲ್ಲವನ್ನೂ ತಿಳಿಸಿಬಿಟ್ಟೆನು. ಇನ್ನಾದರೂ ನೀನು ದುಃಖವನ್ನು ಬಿಟ್ಟು ಸಮಾಧಾನವನ್ನು ಹೊಂದು! ಮುಂದೆ ನಾನು ಮಾಡಬೇಕಾದುದೇನು? ನಿನ್ನ ಇಷ್ಟವು ಹೇಗೆ? ಬೇಗನೆ ಆಜ್ಞೆಯನ್ನು ಕೊಡು! ನಾನು ಹಿಂತಿರುಗಿ ಹೋಗಬೇಕಾಗಿರುವುದು. ಎಲೆ ದೇವಿ! ನನ್ನನ್ನು ಸಾಮಾನ್ಯನೆಂದು ತಿಳಿಯಬೇಡ!

---

1. ಇಲ್ಲಿ "ಕಾರಂಜಂನಾಮ ವೈದೇಹಿ" ಎಂದೂ, "ಮಾಲ್ಯವಾನ್ನಾಮ ವೈದೇಹಿ" ಎಂದೂ ಎರಡು ಪಾಠಗಳುಂಟು. ಮೊದಲನೆಯ ಪಾಠದಿಂದ ಕಾರಂಜ ಪರ್ವತವೊಂದುಂಟೆಂದು ಗ್ರಾಹ್ಯವು.

ಮಹರ್ಷಿಗಳ ಪ್ರೇರಣೆಯಿಂದ ನನ್ನ ತಂದೆಯಾದ ಕೇಸರಿಯು ಯುದ್ಧದಲ್ಲಿ ಶಂಬಾಸುರನೆಂಬ ರಾಕ್ಷಸನನ್ನು ಕೊಲ್ಲಲು, ಆ ಉಪಕಾರಕ್ಕೆ ಪ್ರತಿಫಲರೂಪವಾಗಿಯೇ ನಾನು ವಾಯುವಿನ ಅನುಗ್ರಹದಿಂದ ಜನಿಸಿಗೆ ಹುಟ್ಟಿ, ಆ ವಾಯುವಿಗೆ ಸಮಾನವಾದ ಪ್ರಭಾವದಿಂದಲೇ ಕೂಡಿರುವೆನು.' ಎಂದನು.

ಇಲ್ಲಿಗೆ ಮೂವತ್ತೈದನೆಯ ಸರ್ಗವು.

ಹನುಮಂತನು ಸೀತೆಗೆ ರಾಮನ ಉಂಗುರವನ್ನು ಕೊಟ್ಟುದು. ಸೀತೆಯು ತನ್ನನ್ನು ರಾಮನು ಇದುವರೆಗೂ ಬಿಡಿಸಿಕೊಂಡು ಹೋಗದುದಕ್ಕೆ ಕಾರಣವೇನೆಂದು ಕೇಳಲು, ಹನುಮಂತನು ಅದಕ್ಕೆ ತಕ್ಕ ಕಾರಣವನ್ನು ಹೇಳಿದುದು.

ಮಹಾತೇಜಸ್ವಿಯಾಗಿಯೂ ವಾಯುಪುತ್ರನಾಗಿಯೂ ಇದ್ದ ಹನುಮಂತನು ಸೀತೆಗೆ ಇನ್ನೂ ಚೆನ್ನಾಗಿ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ ತರುಗಿ ಅಕೆಯನ್ನು ಕುರಿತು ವಿನಯವಾಕ್ಯದಿಂದ "ಎಲೆ ಮಹಾಭಾಗೆ! ನಾನು ಮಹಾಬುದ್ಧಿಮಂತನಾದ ಆ ರಾಮನಿಗೆ ದೂತನಾದ ವಾನರನು. ಇಗೋ! ಇಲ್ಲಿ ರಾಮನ ಹೆಸರನ್ನು ಕೆತ್ತಿದ ಈ ಉಂಗುರವನ್ನು ನೋಡು! ನಿನ್ನ ನಂಬಿಕೆಗಾಗಿಯೇ ಮಹಾತ್ಮನಾದ ರಾಮನು ಇದನ್ನು ನನ್ನ ಕೈಗೆ ಕೊಟ್ಟು ಕಳುಹಿಸಿರುವನು. ಇನ್ನು ಸಮಾಧಾನಹೊಂದು! ನಿನಗೆ ಮಂಗಳವಾಗಲಿ! ಇನ್ನು ನಿನ್ನ ದುಃಖ ಫಲವು ತೀರಿತು!" ಎಂದನು. ಆಗ ಸೀತೆಯು ತನ್ನ ಪ್ರಾಣೇಶ್ವರನಿಗೆ ಹಸ್ತ ಭೂಷಣವಾಗಿದ್ದ ಉಂಗುರವನ್ನು ಕೈಗೆ ತೆಗೆದುಕೊಂಡು, ಬಾರಿಬಾರಿಗೂ ಅದನ್ನು ನೋಡುತ್ತಾ, ಆ ರಾಮನನ್ನೇ ತನ್ನ ಕೈಯಿಂದಾಲಿಂಗಿಸಿದಂತೆ ಪರಮಸಂತೋಷವನ್ನು ಹೊಂದಿದಳು. ಬಿಳುಪು ಮತ್ತು ಕೆಂಪುಬಣ್ಣವುಳ್ಳ ವಿಸ್ತಾರವಾದ ಕಣ್ಣುಗಳಿಂದ ಕೂಡಿದ ಅಂದವಾದ ಆ ವಿಶಾಲಾಕ್ಷಿಯ ಮುಖವು, ರಾಹುವಿನಿಂದ

ಬಿಡಲ್ಪಟ್ಟ ಚಂದ್ರನಂತೆ ಪ್ರಕಾಶಿಸಿತು. ಹೀಗೆ ತನ್ನ ಪತಿಯು ಹೇಳಿ ಕಳುಹಿಸಿದ ಕ್ಷೇಮವಾರ್ತೆಯನ್ನು ಕೇಳಿ ಸಂತೋಷಭರಿತಳಾದ ಆಕೆಯು, ಸ್ವಲ್ಪ ಲಜ್ಜಿತಳಾಗಿ, ಆ ಆಂಜನೇಯನನ್ನು ಪ್ರಿಯವಾಕ್ಯದಿಂದ ಮನ್ನಿಸುತ್ತ, ಅತನನ್ನು ಪ್ರಶಂಸೆ ಮಾಡತೊಡಗಿದಳು. "ಎಲೆ ವಾನರೋತ್ತಮನೆ! ಲೋಕದಲ್ಲಿ ನೀನೊಬ್ಬನೇ ಪರಾಕ್ರಮಶಾಲಿಯು! ನೀನೊಬ್ಬನೇ ಸಮರ್ಥನು! ನೀನೊಬ್ಬನೇ ಪ್ರಾಜ್ಞನು! ಇಂತಹ ಮಹಾಘೋರರಾಕ್ಷಸರಿಗೆಡೆಯಾದ ಈ ಲಂಕೆಯನ್ನು, ಯಾರನ್ನೂ ಲಕ್ಷ್ಯಮಾಡದೆ ನೀನೊಬ್ಬನೇ ಪ್ರವೇಶಿಸಿ ಬಂದಮೇಲೆ ನಿನ್ನ ಶಕ್ತಿಯನ್ನು ಹೇಳಬೇಕಾದುದೇನು? ಕ್ರೂರಮಕರಗಳಿಗಾಶ್ರಯವಾಗಿ, ನೂರುಯೋಜನದಗಲವುಳ್ಳ ಈ ಮಹಾಸಮುದ್ರವನ್ನೂ ಕೂಡ, ಒಂದು ಗೋಷ್ಪದದಂತೆಣಿಸಿ, ನಿರ್ಲಕ್ಷ್ಯವಾಗಿ ದಾಟಿಬಂದಿಯಲ್ಲಾ! ಲೋಕದಲ್ಲಿ ನಿನ್ನ ಪರಾಕ್ರಮವು ಪರಮಶ್ಲಾಘ್ಯವೆಂಬುದನ್ನು ಹೇಳಬೇಕೆ? ಆ ರಾವಣನ ವಿಷಯದಲ್ಲಿಯೂ ಸ್ವಲ್ಪವಾದರೂ ಭಯವನ್ನಾಗಲಿ, ಬೆಜ್ಜರವನ್ನಾಗಲಿ ತೋರಿಸದೆ, ಧೈರ್ಯದಿಂದಿರುವ ನಿನ್ನನ್ನು ನೋಡಿದರೆ ಸಾಮಾನ್ಯಕಪಿಯೆಂದು ನನಗೆ ತೋರಲಿಲ್ಲ! ಎಲೆ ಕಪಿಶ್ರೇಷ್ಠನೆ! ನೀನು ರಾಮನ ಸ್ವಮಾತಿನಮೇಲೆಯೇ ನನ್ನಲ್ಲಿಗೆ ಬಂದವನಾದಮೇಲೆ, ಧಾರಾಳವಾಗಿ ನಿನ್ನೊಡನೆ ಮಾತಾಡಬಹುದಲ್ಲವೆ? ನನಗೂ ನಿನ್ನಲ್ಲಿ ಸಂಪೂರ್ಣವಾದ ನಂಬಿಕೆಯು ಹುಟ್ಟಿರುವುದು. ಆ ರಾಮನು ಸಾಮಾನ್ಯನಲ್ಲ! ಮಹಾಧೀಮಂತನು! ಅತನು ಯಾವನನ್ನಾಗಲಿ ಪರೀಕ್ಷಿಸದೆಯೂ ಅವನ ಪರಾಕ್ರಮವನ್ನು ಚೆನ್ನಾಗಿ ತಿಳಿದುಕೊಳ್ಳದೆಯೂ, ದೂತ್ಯಕಾರ್ಯದಲ್ಲಿ ನಿಯಮಿಸಲಾರನು. ಅದರಲ್ಲಿಯೂ ವಿಶೇಷವಾಗಿ ನನ್ನಲ್ಲಿಗೆ ಸಾಮಾನ್ಯಜನರನ್ನು ಕಳುಹಿಸಲೇ ಅರನು. ಅಂತಹ ರಾಮನೇ ನಿನ್ನನ್ನು ಕಳುಹಿಸಿರುವುದರಿಂದ ನೀನು ಸಾಮಾನ್ಯನಲ್ಲವೆಂದೇ ತೋರುವುದು. ಧರ್ಮಾತ್ಮನಾಗಿಯೂ, ಸತ್ಯಸಂಧನಾಗಿಯೂ ಇರುವ ಆ ರಾಮನು, ಮಹಾ

---

1. ಇಲ್ಲಿ "ಕುಶಲೀಯದಿ ಕಾಕುತ್ಸ್ಥಃ ಕಿಂನು ಸಾಗರಮೇಖಲಾಮ್। ಮಹೀಂ ದಹತಿ ಕೋಪೇನ ಯುಗಾನ್ತಾಗ್ನಿರಿವೋತ್ಥಿತಃ" ಎಂದು ಮೂಲವು. ವಿಶೇಷಾರ್ಥವು. (ಕಾಕುತ್ಸ್ಥಃ) ಬೇರೆಯವರಿಗುಂಟಾದ ಪರಿಭವವನ್ನು ಸಹಿಸಲಾರದ ಕಕುತ್ಸ್ಥಕುಲದಲ್ಲಿ ಹುಟ್ಟಿದಮಾತ್ರಕ್ಕೆ ಆ ರಾಮನಿಗೆ, ಬೇರೆಯವರ ಪರಿಭವವನ್ನು ಮಾತ್ರವೇ ಪರಿಹರಿಸಬೇಕೇಹೊರತು ತನ್ನ ಪರಿಭವವನ್ನು ತಾನು ಪರಿಹರಿಸಿಕೊಳ್ಳಬಾರದೆಂಬ ನಿಯಮ

ತೇಜಸ್ವಿಯೆನಿಸಿಕೊಂಡ ಸುಮಿತ್ರಾನಂದವರ್ಧನನಾದ ಲಕ್ಷ್ಮಣನೊಡಗೂಡಿ ಕ್ಷೇಮದಿಂದಿರುವುದೂ ನನ್ನ ಭಾಗ್ಯವೇ ಹೊರತು ಬೇರೆಯಲ್ಲ. ಎಲೆ ವಾನರೋತ್ತಮನೆ! ಕಕುತ್ಸ್ಥವಂಶಶಿಖಾಮಣಿಯಾದ ರಾಮನು ಹಾಗೆ ಕ್ಷೇಮದಿಂದಿದ್ದ ಪಕ್ಷದಲ್ಲಿ ರಾಕ್ಷಸನು ನನ್ನನ್ನು ಕದ್ದು ತಂದುದಕ್ಕಾಗಿ ಇದುವರೆಗೂ ಕೋಪಗೊಳ್ಳದಿರುವುದೇಕೆ? ಪ್ರಳಯಕಾಲಾಗ್ನಿಯಂತೆ ಕ್ರುದ್ಧನಾಗಿ, ಸಮುದ್ರಪರ್ಯಂತವಾದ ಈ ಸಮಸ್ತಭೂಮಿಯನ್ನೂ ದಹಿಸದೆ ಬಿಟ್ಟಿರುವುದೇಕೆ? ಎಲೆ ಕಪೀಂದ್ರನೆ! ರಾಮಲಕ್ಷ್ಮಣರೆಂಬ ಆ ಅಣ್ಣತಮ್ಮಂದಿರಿಬ್ಬರೂ ದೇವತೆಗಳನ್ನಾದರೂ ನಿಗ್ರಹಿಸುವುದಕ್ಕೆ ಶಕ್ತರೆಂಬುದರಲ್ಲಿ ಸಂದೇಹವಿಲ್ಲ. ಆದರೆ ನನ್ನ ದುಃಖಕ್ಕೆಮಾತ್ರ ಇನ್ನೂ ಪರಿಣಾಮಕಾಲವು ಬಂದೊದಗಲಿಲ್ಲವೆಂದೇ ಎಣಿಸಬೇಕಾಗಿದೆ. ಎಲೈ ಹನುಮಂತನೆ! ಅವೆಲ್ಲವೂ ಹಾಗಿರಲಿ! ನನ್ನ ವಿರಹದುಃಖದಿಂದ ರಾಮನು ಅಷ್ಟಾಗಿ ಕೃಶನಾಗಿಲ್ಲವಷ್ಟೆ? ನನಗಾಗಿ ವಿಶೇಷ ಸಂಕಟಪಡುವುದಿಲ್ಲವಷ್ಟೆ? ಪುರುಷೋತ್ತಮನಾದ ಆತನು ನನ್ನನ್ನು ಕರೆಸಿಕೊಳ್ಳುವುದಕ್ಕಾಗಿ ನಡೆಸಬೇಕಾದ ಮುಂದಿನ ಕಾರ್ಯಗಳನ್ನೂ ನಡೆಸುತ್ತಿರುವನಷ್ಟೆ? ಆ ರಾಜಕುಮಾರನು ನನ್ನ ವಿಷಯದಲ್ಲಿ ಅಷ್ಟಾಗಿ ದೈನ್ಯದಿಂದ ತತ್ತಳಿಸುವುದಿಲ್ಲವಷ್ಟೆ? ಆಗಾಗ ನಡೆಸಬೇಕಾದ ಕಾರ್ಯಗಳಲ್ಲಿಯೂ ಎಚ್ಚರಿಕೆಯನ್ನು ಬಿಟ್ಟಿಲ್ಲವಷ್ಟೆ? ಆಗಾಗ ನಡೆಸಬೇಕಾದ ಪುರುಷಪ್ರಯತ್ನಗಳನ್ನೂ ನಡೆಸುತ್ತಿರುವನಷ್ಟೆ? ಪರಂತಪನಾದ ಆ ರಾಮನು ಈಗಲೂ [1] ತನ್ನ ಮಿತ್ರರಲ್ಲಿ ಸೌಹಾರ್ದವುಳ್ಳವನಾಗಿ, ಅವರಲ್ಲಿ ಸಾಮದಾನಗಳೆಂಬ ಎರಡು

ವುಂಟೇನು? (ಸಾಗರಮೇಖಲಾಂ ಮಹೀಂ) ಆ ರಾಮನು "ದ್ರವದ್ರವ್ಯರೂಪವಾದ ಸಮುದ್ರವನ್ನೂ, ಕಠಿನದ್ರವ್ಯರೂಪವಾದ ಭೂಮಿಯನ್ನೂ ಕೆಡಿಸುವುದಕ್ಕಾಗಿ ಬೇರೆಬೇರೆ ಎರಡು ಬಾಣಗಳನ್ನೂ ಬಿಡಬೇಕಾಯಿತಲ್ಲಾ" ಎಂದು ಚಿಂತಿಸುವನೇ ಏನು? ಸವುದ್ರ ಜಲವನ್ನೇ ತೈಲವನ್ನಾಗಿಮಾಡಿ ಅದರಲ್ಲಿಯೇ ಭೂಮಿಯನ್ನು ಹುರಿದುಬಿಡುವುದಕ್ಕೂ ಸಮರ್ಥನಲ್ಲವೆ? ಅಥವಾ ರಾಮನು ನನ್ನನ್ನಂತೂ ಹೀಗೆ ಅಲಕ್ಷ್ಯಮಾಡಿಬಿಟ್ಟಿರುವನು. ಭೂದೇವಿಯೂ ಆತನಿಗೆ ಪತ್ನಿಯಾದುದರಿಂದ, ಸಮುದ್ರರೂಪವಾದ ಅವಳ ಬಟ್ಟೆಯನ್ನಾದರೂ ಉರಿಸಿ ಕಾಪಾಡುತ್ತಿರುವನೋ ಅಥವಾ ಅವಳನ್ನೂ ದಹಿಸಿಬಿಡುವನೇನೋ?" ಆದರೆ ಭೂಮಿಗೆ ಅನಾದಿಯಾಗಿ ಬಂದ ಈ ಮರ್ಯಾದೆಯನ್ನು ತಪ್ಪಿಸುವುದಕೆ ಅವನಿಂದತಾನೇ ಸಾಧ್ಯವೆ?" ಎಂದರೆ, (ಯುಗಾಂತಾಗ್ನಿರಿವೋತ್ಥಿತಃ) ಆತನ ಕೋಪವು ಪ್ರಳಯಕಾಲಾಗ್ನಿಯೇ ಹೊರತು ಬೇರೆಯಲ್ಲ! ಭೂಮಿಗೆ ಅನಾದಿಸಿದ್ಧವಾದ ಮರ್ಯಾದೆಯನ್ನೂ ಕಾಲಾಗ್ನಿಯು ಕೆಡಿಸುವಂತೆ ಅವನಿಗೆ ಯಾವುದೂ ತಡೆಯಿಲ್ಲವೆಂದು ಭಾವವು.

1. ಇದರಿಂದ ಮಿತ್ರರಲ್ಲಿ ಭೇದದಂಡಗಳನ್ನೂ, ಶತ್ರುಗಳಲ್ಲಿ ಸಾಮವನ್ನೂ ಯಾವಾಗಲೂ ಪ್ರಯೋಗಿಸಬಾರದೆಂದು ಸೂಚಿತವು.

ಪಾಯಗಳನ್ನೂ ಕ್ರಮವಾಗಿ ನಡೆಸುತ್ತಿರುವನಷ್ಟೆ? ಶತ್ರುಗಳ ವಿಷಯದಲ್ಲಿ ದಾನಭೇದದಂಡಗಳೆಂಬ ಮೂರುಪಾಯಗಳನ್ನೂ ಕಾಲೋಚಿತವಾಗಿ ಪ್ರಯೋಗಿಸುವನಷ್ಟೆ? ಮಿತ್ರರಿಗೆ ಆಗಾಗ ಉಪಕರಿಸುತ್ತಿರುವನಷ್ಟೆ? ಅಯಾಮಿತ್ರರಿಗೆ ತಕ್ಕಂತೆ ಸೌಹಾರ್ದವನ್ನು ತೋರಿಸುತ್ತಿರುವನಷ್ಟೆ? ಆಗಾಗ ತಕ್ಕ ಮಿತ್ರರನ್ನು ಹೊಸದಾಗಿಯೂ ಸಂಪಾದಿಸುತ್ತಿರುವನಷ್ಟೆ? ತನ್ನ ಮಿತ್ರರಿಂದ ತಾನು ಪರಸ್ಪರ ಸಲ್ಲಡುವನಷ್ಟೆ? ತಕ್ಕ ಮಿತ್ರರನ್ನೇ ತನ್ನ ಸಹಾಯಕ್ಕಿಟ್ಟುಕೊಂಡಿರುವನಷ್ಟೆ? ಆ ರಾಜಕುಮಾರನು ದೇವತಾನುಗ್ರಹವನ್ನು ಸಂಪಾದಿಸುವುದಕ್ಕಾಗಿ ಇಷ್ಟ ದೇವತಾಪ್ರಾರ್ಥನೆಯನ್ನೂ ಮಾಡುತ್ತಿರುವನಷ್ಟೆ? ಪುರುಷಪ್ರಯತ್ನವನ್ನೂ ದೈವಾನುಕೂಲ್ಯವನ್ನೂ ಅನುಸರಿಸಿ ನಡೆಯುತ್ತಿರುವನಷ್ಟೆ? ಬಹುದಿನದಿಂದಗಲಿದ ನನ್ನಲ್ಲಿ ಇನ್ನೂ ಅತನಿಗೆ ಸ್ನೇಹವು ತಪ್ಪಿಲ್ಲವಷ್ಟೆ? ಎಲೆ ವಾನರೋತ್ತಮನೆ! ಇನ್ನು ಮೇಲಾದರೂ ಅತನು ನನ್ನನ್ನು ಈ ದುಃಖದಿಂದ ಬಿಡಿಸಬಹುದಷ್ಟೆ? ಆ ರಾಮನಾದರೋ ಯಾವಾಗಲೂ ಸುಖಾನುಭವಕ್ಕೇ ಅರ್ಹನಾದವನು! ಎಂದಿಗೂ ದುಃಖವನ್ನನುಭವಿಸುವದಕ್ಕೆ ತಕ್ಕವನಲ್ಲ. ಅಂತಹ ರಾಮನಿಗೂ ಈಗ ಈ ಮಹಾ ದುಃಖವು ಬಂದೊದಗಿತು. ಇದಕ್ಕಾಗಿ ಅತನು ಬಹಳವಾಗಿ ಕೃಶಿಸಿಲ್ಲವಷ್ಟೆ? ಆಗಾಗ ನನ್ನ ಪ್ರಿಯನು, ತನ್ನ ತಾಯಿಯಾದ ಕೌಸಲ್ಯೆಯ ಕ್ಷೇಮವನ್ನೂ ಸುಮಿತ್ರೆಯ ಕುಶಲವನ್ನೂ, ಭರತನ ಶ್ರೇಯಸ್ಸನ್ನೂ ಕೇಳಿ ತಿಳಿಯುತ್ತಿರುವನಷ್ಟೆ? ನನ್ನ ವಿಷಯವಾಗಿ ದುಃಖಿಸುವುದರಿಂದ ಅತನು ಮಾನ್ಯನಾಗಿರುವನಷ್ಟೆ? ಕಾರ್ಯವನ್ನೇ ಮರೆತು, ಕಾರ್ಯಾಂತರದಲ್ಲಿ ನಿರತನಾಗಿಲ್ಲವಷ್ಟೆ? ನನ್ನನ್ನು ಅತನು ಈ ಸಮಸ್ತವಿಪತ್ತಿನಿಂದ ತಪ್ಪಿಸಬಹುದಷ್ಟೆ? ನನ್ನ ಪ್ರಿಯನಿಗುಂಟಾದ ಈಗಿನ ಕಷ್ಟದಶೆಯನ್ನು ನೋಡಿ ಭರತನು ತನ್ನ ಅಣ್ಣನಾದ ರಾಮನಲ್ಲಿ ಸಹೋದರವಾತ್ಸಲ್ಯವನ್ನಿಟ್ಟು, ತನ್ನಲ್ಲಿರುವ ಸೈನ್ಯಗಳಲ್ಲಿ ಒಂದು ಕ್ಷೋಹಿಣೀಸೈನ್ಯವನಾದರೂ, ಸಮರ್ಥರಾದ ಮಂತ್ರಿಗಳ ರಕ್ಷಣೆಯಲ್ಲಿ ನನಗಾಗಿ ಇಲ್ಲಿಗೆ ಕಳುಹಿಸಿಕೊಡಬಹುದಷ್ಟೆ? ವಾನರಾಧಿಪತಿಯಾದ ಶ್ರೀಮಂತನಾದ ಸುಗ್ರೀವನಾದರೂ, ದಂತನಖಗಳನ್ನೇ ಆಯುಧವಾಗಿ ಉಳ್ಳ ಕೆಲವು ಕಪಿವೀರರೊಡನೆ ಸೇರಿ, ನನಗಾಗಿ ಇಲ್ಲಿಗೆ ಬರಬಹುದಷ್ಟೆ? ಶೂರನಾಗಿಯೂ, ಸಮಸ್ತಶಸ್ತ್ರಾಸ್ತ್ರಗಳನ್ನು ತಿಳಿದವನಾಗಿಯೂ ಇರುವ ಸುಮಿತ್ರಾನಂದವರ್ಧನನಾದ ಆ ಲಕ್ಷ್ಮಣನೂ, ನನಗಾಗಿ ಇಲ್ಲಿಗೆ ಬಂದು ತನ್ನ ಬಾಣಸಮೂಹ

ಗಳಿಂದ ಇಬ್ಬಿನ ರಾಕ್ಷಸರನ್ನು ಧ್ವಂಸಮಾಡಬಹುದಷ್ಟೆ? ಎಲೈ ಆಂಜನೇಯನೆ! ಭಯಂಕರವಾಗಿ ಜ್ವಲಿಸುತ್ತಿರುವ ಆ ರಾಮನ ದಿವ್ಯಾಸ್ತ್ರದಿಂದ, ರಾವಣನು ಯುದ್ಧದಲ್ಲಿ ತನ್ನ ಮಿತ್ರಬಂಧುಗಳೊಡನೆ ಹತನಾಗಿ ಬಿದ್ದಿರುವುದನ್ನು ನೀನು ಬಲ್ಲೆಯೇ? ನಿನ್ನ ಕಣ್ಣಾರೆ ನಾನು ನೋಡಬಹುದಷ್ಟೆ? ಬಂಗಾರದ ಬಣ್ಣವುಳ್ಳ ದಾಗಿಯೂ, ಕಮಲದಂತೆ ಸುವಾಸನೆಯುಳ್ಳದಾಗಿಯೂ ಇರುವ ಆ ರಾಮನ ಮುಖವು. ಕೊಳದಲ್ಲಿ ನೀರೊಣಗಿದ ಮೇಲೆ ಬಿಸಿಲಿನಿಂದ ಕಂದಿದ ತಾವರೆಯಂತೆ ನನ್ನ ವಿರಹದುಃಖದಿಂದ, ಬಹಳವಾಗಿ ಬಾಡಿಹೋಗಿದೆಯಷ್ಟೆ? [1] ಯಾವನು ಮೊದಲು ಧರ್ಮವನ್ನು ಪ್ರೀತಿಸಿ ಕೈಗೆ ಬಂದ ರಾಜ್ಯವನ್ನು ತೊರೆದಾಗಲೂ, ಕಾಡಿನಲ್ಲಿ ಅಲೆಯುವಾಗಲೂ, ಅತಿ ಕೋಮಲವಾದ ಮೈಯುಳ್ಳ ನನ್ನನ್ನು ಕಾಲುನಡೆಯಿಂದಲೇ ಸುತ್ತಿಸುವಾಗಲೂ ಸ್ವಲ್ಪವಾದರೂ ಚಿಂತೆಯನ್ನಾಗಲಿ, ಭಯವನ್ನಾಗಲಿ, ದುಃಖವನ್ನಾಗಲಿ, ತೋರಿಸದೆ ಧೈರ್ಯದಿಂದಿದ್ದನೋ ಅಂತಹ ಮಹಾಧೀರನಾದ ರಾಮನು ಈಗ ನನ್ನನ್ನಗಲಿದಮಾತ್ರಕ್ಕೆ ತನ್ನ ಧೈರ್ಯವನ್ನು ಬಿಟ್ಟಿಹನಷ್ಟೆ? ಎಲೈ ರಾಮದೂತನೆ! ಆ ನನ್ನ ಪ್ರಾಣಪ್ರಿಯನಾದ ರಾಮನನ್ನಗಲಿಯೂ, ನಾನು ಹೀಗೆ ಪ್ರಾಣವನ್ನಿಟ್ಟಿರುವೆನೆಂದು ನನ್ನಲ್ಲಿ ನೀನು ತಪ್ಪೆಣಿಸಬೇಡ? [2] ರಾಮನಿಗೆ ಅವನ ತಾಯಿಯಲ್ಲಿಯಾಗಲಿ, ಅವನ ತಂದೆಯಲ್ಲಿಯಾಗಲಿ, ಬೇರೆ ಯಾವ ಬಂಧುಗಳಲ್ಲಿಯಾಗಲಿ, ನನ್ನಲ್ಲಿರುವ ಪ್ರೀತಿಗಿಂತಲೂ ಹೆಚ್ಚು ಪ್ರೀತಿಯಿರದು! ಕೊನೆಗೆ ನನ್ನಲ್ಲಿರುವ ಸ್ನೇಹದಷ್ಟಾದರೂ ಸ್ನೇಹವನ್ನು ಅತನಿಗೆ ಬೇರೊಬ್ಬರಲ್ಲಿರದು. ಅವನ ಸಮಸ್ತಪ್ರೀತಿಗೂ ನಾನೇ ಮುಖ್ಯಾಶ್ರಯವಾಗಿರುವೆನು. ಆದುದರಿಂದ ಅವನಿಗೆ ಇಷ್ಟು ಪ್ರೇಮಾಸ್ಪದಳಾಗಿರುವ ನಾನು ಇಲ್ಲಿ ಪ್ರಾಣವನ್ನು ಬಿಟ್ಟರೆ, ಆ ರಾಮನು ಎಷ್ಟುಮಾತ್ರವೂ ಜೀವಿಸಲಾರನು. ಆದುದರಿಂದ ಆ ನನ್ನ ಪ್ರಿಯನು ನನ್ನನ್ನು ಕರೆಸಿಕೊಳ್ಳುವುದಕ್ಕಾಗಿ ಉದ್ಯೋಗಿಸುತ್ತಿರುವ ಪ್ರಯತ್ನಾರ್ಥವು ನನಗೆ ತಿಳಿಯುವ

---

1. ಇಲ್ಲಿ ಕೃಷವಾಗಿ ರಾಜ್ಯತ್ಯಾಗದಿಂದ ಬಂತೆ, ಅರಣ್ಯಸಂಚಾರದಿಂದ ಭೀತಿ, ತಾನು ಕಾಲ್ನಡೆಯಿಂದ ಬರುವಾಗ ನನ್ನಿಂದ ದುಃಖವೆಂದೂ ತಿಳಿಯಬೇಕು.

2. ಇಲ್ಲಿ "ನಚಾಸ್ಯಮಾತಾನಪಿತಾಚ ನಾನ್ಯಸ್ಸ್ನೇಹಾದ್ವಿಶೇಷೋಸ್ತಿ ಮಯಾಸಹೋವಾ। ತಾವತ್ಪ್ರಿಯಂ ದೂತ ವಿಜೀವಿತೇಚ್ಛೇತ್ ಯಾವತ್ಪ್ರವೃತ್ತಿಂ ಶೃಣುಯಾತ್ ಪ್ರಿಯಸ್ಯ॥" ಎಂದು ಮೂಲವು. ವಿಶೇಷಾರ್ಥವು. ಈ ಶ್ಲೋಕದಲ್ಲಿ ಸೀತೆಯು ಶ್ರೀರಾಮನ ರೋಷದಿಂದ ಮೇಳಿಸಂತೆ ಒಂದರ್ಥವೂ, ಶ್ರೀರಾಮನೋಷವಿಲ್ಲದೆ ಸೌಜನ್ಯದಿಂದ ಹೀಗೆಯಂತೆ ಬೇರೊಂದರ್ಥವೂ ಸೂಚಿತವಾಗಿರುವುದು. ಶ್ರೀರಾಮರೋಷಪಕ್ಷದಲ್ಲಿ:—(ದೂತ)

ವರೆಗೂ ಬದುಕಿರಬೇಕೆಂಬುದೇ ನನ್ನ ಕೋರಿಕೆ" ಎಂದಳು. [1] ಹೀಗೆ ಸೀತೆಯು ಅವಾನರೇಂದ್ರನೊಡನೆ ಅರ್ಥವತ್ತಾಗಿಯೂ, ಮಧುರವಾಗಿಯೂ ಇರುವ ಮಾತುಗಳನ್ನಾಡಿ, ತಿರುಗಿ ಆ ಆಂಜನೇಯನ ಮುಖದಿಂದ, ಶ್ರೀರಾಮನೃತ್ತಾಂತವನ್ನೊಡಗೂಡಿದ ಕಿವಿಗಿಂಪಾದ ಪ್ರತ್ಯುತ್ತರವನ್ನು ಕೇಳಬೇಕೆಂದು ತನ್ನ ಮಾತನ್ನು ನಿಲ್ಲಿಸಿ ಸುಮ್ಮನಿದ್ದಳು. ಭಯಂಕರಪರಾಕ್ರಮವುಳ್ಳ ಆಂಜನೇಯನು, ಸೀತೆಯು ಮಾತನ್ನು ಕೇಳಿ ಅವಳ ಮುಂದೆ ತಲೆಯ ಮೇಲೆ ಕೈಜೋಡಿಸಿ ನಿಂತು, ಅವಳಿಗೆ ಪ್ರತ್ಯುತ್ತರವನ್ನು ಕೊಡುವನು. "ಎಲೆ ಕಮಲಾಕ್ಷಿ! ಇನ್ನೂ ಆ ರಾಮನು ನೀನಿಲ್ಲಿರುವುದನ್ನು ಕಾಣನು. ಆದರಿಂದಲೇ ಆತನು ಇದುವರೆಗೆ ಸುಮ್ಮನಿರುವನು.

ಇದುವರೆಗೆ ಸೀತೆಯು "ವಾನರಾ" ಎಂದು ಸಂಬೋಧಿಸುತ್ತಿದ್ದು, ಈಗ ದೂತಶಬ್ದದಿಂದ ಸಂಬೋಧಿಸಿದುದರಿಂದಲೇ, ಆಕೆಗೆ ರಾಮನ ಮೇಲಿರುವ ಪ್ರಣಯರೋಷವು ಅವನ ದೂತನವರೆಗೂ ವ್ಯಾಪಿಸಿರುವುದಾಗಿ ಸೂಚಿತವು. ಇದರಿಂದ ಸೀತೆಯು ಆ ಹನುಮಂತನನ್ನು ಕುರಿತು, "ರಾಮನಿಂದ ಕಳುಹಿಸಲ್ಪಟ್ಟ ದೂತನಾದುದರಿಂದಲೇ ನೀನು ಅವನಿಗನುಕೂಲವಾಗಿ ಮಾತಾಡುತ್ತಿರುವೆ" ಎಂದು ಹೇಳುವುದಾಗಿ ಭಾವವು. "ಎಲ್ಲೆ ರಾಮದೂತನೆ! ನಿನ್ನ ಪ್ರಭುವಾದ ಆ ರಾಮನಿಗೆ ತಾಯಾಗಲಿ, ತಂದೆಯಾಗಲಿ, ಬೇರೆಯಾವ ಬಂಧುವೇ ಆಗಲಿ ಪ್ರೀತಿಗೆ ಪಾತ್ರರಲ್ಲ! ಕೊನೆಗೆ ನನ್ನನ್ನು ನೋಡುವಂತೆಯೂ ಬೇರೆ ಬಂಧುಗಳನ್ನು ದಾಕ್ಷಿಣ್ಯಬುದ್ಧಿಯಿಂದ ನೋಡುವವನಲ್ಲ. ನನ್ನನ್ನೇ ಹೀಗೆ ಗೋಳಾಡಿಸುವ ದಕ್ಕಾಗಿ ರಾಜ್ಯವನ್ನು ಬಿಟ್ಟುಬಂದಿರುವಾಗ ಯಾವ ಬಂಧುಗಳಲ್ಲಿಯೂ ಸ್ವಲ್ಪವಾದರೂ ದಾಕ್ಷಿಣ್ಯಬುದ್ಧಿಯಿಲ್ಲದ, ಆ ರಾಮನು, ಪಿತೃವಚನಪರಿಪಾಲನಾರ್ಥವಾಗಿಯೇ ಕಾಡಿಗೆ ಹೊರಟುಬಂದನೆಂಬುದು ಸುಳ್ಳು! ಹೇಗಾದರೂ ಆಗಲಿ! ನಾನು ಅವನಿಗೆ ಪರತಂತ್ರಳಾಗಿರುವುದರಿಂದ ನನ್ನ ಈ ದೇಹವೂ ಅವನಿಗೆ ಸೇರಿದುದು. ಅದನ್ನು ಬಿಡುವುದಕ್ಕೆ ನಾನು ಸ್ವತಂತ್ರಳಲ್ಲ. ಅವನು ಬರುವವರೆಗೂ ನಾನು ಈ ದೇಹವನ್ನು ಕಾಪಾಡಿಟ್ಟಿರಬೇಕು. ಆದುದರಿಂದಲೇ ನಾನು ಈಗಲೂ ಈ ದೇಹವನ್ನು ಧರಿಸಿರುವೆನೇ ಹೊರತು ಬೇರೆಯಲ್ಲ. ಅವನು ಬಂದು ನನ್ನನ್ನು ಕರೆದುಕೊಂಡು ಹೋಗುವನೆಂಬ ಸುದ್ದಿಯನ್ನು ಕೇಳುವವರೆಗಾದರೂ ನಾನು ಬದುಕಿರಲಪೇಕ್ಷಿಸುವೆನು" ಎಂದು ಭಾವವು. ಪ್ರಣಯರೋಷಭಾವಪಕ್ಷದಲ್ಲಿ ಮೇಲೆ ಸೂಚಿಸಲ್ಪಟ್ಟಿರುವ ಅರ್ಥವೇ ಗ್ರಾಹ್ಯವು.

1. ಇಲ್ಲಿ "ಇತೀವ ದೇವೀ ವಚನಂ ಮಹಾರ್ಥಂ ತಂ ವಾನರೇಂದ್ರಂ ಮಧುರಾರ್ಥಮುಕ್ತ್ವಾ। ಶ್ರೋತುಂ ಪುನಸ್ತಸ್ಯ ವಚೋಽಥರಾಮಂ ರಾಮಾರ್ಥಯುಕ್ತಂ ವಿರರಾಮ

ಪೂರ್ವದಲ್ಲಿ ಇಂದ್ರನು ಹ್ಲಾದನೆಂಬ ರಾಕ್ಷಸನ ಸೆರೆಯಲ್ಲಿ ಸಿಕ್ಕಿದ ಶಚಿಯನ್ನು ಕಾಣದುದಕ್ಕಾಗಿ, ಬಹುದಿನಗಳವರೆಗೆ ಸುಮ್ಮನೆ ಕಾದಿದ್ದಂತೆ, ರಾಮನು ನೀನಿರುವ ಸ್ಥಳವನ್ನು ತಿಳಿಯದುದಕ್ಕಾಗಿಯೇ ಸುಮ್ಮನಿರುವನು. ನಿನ್ನನ್ನು ಇದುವರೆಗೂ ಕರೆಸಿಕೊಳ್ಳದಿರುವುದಕ್ಕೆ ಇದೇ ಕಾರಣವು. ನನ್ನಿಂದ ನಿನ್ನ ವೃತ್ತಾಂತವನ್ನು ಕೇಳಿದಕ್ಷಣವೇ, ಆ ರಾಮನು, ಅನೇಕ ವಾನರಭಲ್ಲೂಕವೀರರಿಂದ ತುಂಬಿದ ದೊಡ್ಡ ಸೇನೆಯೊಡನೆ ಅಕ್ಷೋಭ್ಯವಾದ ಈ ಮಹಾಸಾಗರವನ್ನೂ ತನ್ನ ಕ್ರೂರಬಾಣಗಳಿಂದ ಬಂಧಿಸಿ, ಈ ಲಂಕೆಗೆ ಬಂದು, ಇಲ್ಲಿ ರಾಕ್ಷಸರ ಹೆಸರೇ ಇಲ್ಲದಂತೆ ಮಾಡಿಬಿಡುವನು. ಈ ನಡುವೆ ರಾಮನಿಗೆ ಮೃತ್ಯುವಾಗಲಿ, ದೇವತೆಗಳಾಗಲಿ, ಅಸುರರಾಗಲಿ ಅಡ್ಡಲಾಗಿ ಬಂದು ತಡೆದರೂ ಅವರನ್ನೂ ಹುಟ್ಟಡಗಿಸಿಬಿಡುವನೆಂದು ತಿಳಿ! ಎಲೆ ಪೂಜ್ಯಳೆ! ರಾಮನು ನಿನ್ನನ್ನು ಕಾಣದುದಕ್ಕಾಗಿ ದುಃಖಸಮುದ್ರದಲ್ಲಿಯೇ ಮುಳುಗಿ ಹೋಗಿರುವನೆ. ಸಿಹ್ನದಿಂದ ಪೀಡಿತವಾದ ಆನೆಯಂತೆ ಸುಖವೆಂಬುದನ್ನೇ ಕಾಣನು ಎಲೆ ದೇವಿ! ನೀನು ಶೀಘ್ರದಲ್ಲಿಯೇ ಆಂದವಾದ ಕಣ್ಣುಗಳುಳ್ಳವಳಾಗಿಯೂ, ತೊಂಡೆಯ ಹಣ್ಣಿನಂತೆ ತುಟಿಯುಳ್ಳ

ರಾಮಾ॥" ಎಂದು ಮೂಲವು. ವಿಶೇಷಾರ್ಥವು:—(ಇತೀವ) ಇಲ್ಲಿ ವಾಲ್ಮೀಕಿಯು ಮೊದಲು ಪ್ರಣಯಕೋಪದಿಂದ ಸೀತೆಯು ಹೇಳಿದ ಕೆಲವು ವಾಕ್ಯಗಳನ್ನು ಸ್ಪಷ್ಟವಾಗಿ ಹೇಳಿ, ಈಗ ಪ್ರಣಯಧಾರಾಸೂಕ್ಷ್ಮಕ್ಕೆ ಪರಿಚಿತನಲ್ಲವಾದುದರಿಂದ, ಅದನ್ನು ಹೇಳಲು ಶಕ್ತನಾಗಿ, (ಇತೀವ) ಹೀಗೆಯೇ" ಎಂದು ಅದನ್ನು ಸಾಮಾನ್ಯವಾಗಿ ಸೂಚಿಸಿ ಅಪ್ಪರಲ್ಲಿಯೇ ಬಿಟ್ಟುದಾಗಿ ಭಾವವು. ಇದಕ್ಕಾಗಿಯೇ (ದೇವಿ) ಅಂತಃಪುರದವಳು, ಆ ವೃತ್ತಾಂತವು ಇತರರಿಗೆ ತಿಳಿಯಲು ಶಕ್ಯವಲ್ಲವಲ್ಲವೇ? (ವಚನಂ ಮಹಾರ್ಥಂ) ಅಂತರಂಗರಾದವರಿಗೂ ತಿಳಿಯಲಸಾಧ್ಯವಾದ ಮಾತೆಂದು ಭಾವವು. (ವಾನರೇಂದ್ರಂ) ವಾನರೋತ್ತಮನಾದ ಹನುಮಂತನನ್ನು ಕುರಿತು. ಇಲ್ಲಿ ರಾಮವಿಷಯವಾಗಿ ಹನುಮಂತನಂತೆ ಕಾರ್ಯನಿರ್ವಾಹಕನು ಬೇರೊಬ್ಬನೂ ಇಲ್ಲವೆಂಬುದಕ್ಕಾಗಿ ವಾನರೇಂದ್ರನೆಂಬ ಶಬ್ದವು. ಅಥವಾ ಸುಗ್ರೀವನು ಶೇಷತ್ವಕಾಷ್ಠೆಯುಳ್ಳವನಾಗಿದ್ದರೂ, ಪಾರತಂತ್ರ್ಯಕಾಷ್ಠೆಯಲ್ಲಿ ಹನುಮಂತನು ಅವನಿಗಿಂತಲೂ ಪ್ರಧಾನನಾದುದರಿಂದ ವಾನರೇಂದ್ರಶಬ್ದವು. (ಮಧುರಾರ್ಥಂ) ಅದರಿಂದ ನಡೆಸುವುದಕ್ಕೆ ಯೋಗ್ಯವಾದ ವಿಷಯವುಳ್ಳ ಮಾತನ್ನು (ಉಕ್ತ್ವಾ) ಹೇಳಿ. (ಕ್ರೋತುಂ ಪುನಸ್ತಸ್ಯ ವಚೋಭಿರಾಮಂ) ಸತ್ಪುರುಷನನ್ನು ಬದುಕಿಸುವಂತಿರುವ ಅತನ ಇಂಪಾದ ಮಾತನ್ನು ಪುನಃ ಕೇಳಬೇಕೆಂಬ ಉದ್ದೇಶದಿಂದ, (ವಿರರಾಮ) ಸುಮ್ಮನಾದಳು. ಸ್ವಾಮಿವಾರ್ತೆಯನ್ನು ಹೇಳುವಾಗ ಅಡ್ಡಮಾತುಗಳನ್ನಾಡುವುದು ಯುಕ್ತವಲ್ಲದುದರಿಂದ ತಾನು ಸುಮ್ಮನಾಗಿ, ಹನುಮಂತನು ಹೇಳುವ ವಾರ್ತೆಗೆ ಅವಕಾಶವನ್ನು ಕೊಟ್ಟಳೆಂದು ಭಾವವು.

ದಾಗಿಯೂ ಮನೋಹರಗಳಾದ ಕುಂಡಲಗಳಿಂದ ಶೋಭಿತವಾಗಿಯೂ, ಪೂರ್ಣ ಚಂದ್ರನಿಗೆಣೆಯಾಗಿಯೂ ಇರುವ ಆ ಶ್ರೀರಾಮನ ಮುಖವನ್ನು ನೋಡುವುದರಲ್ಲಿ ಸಂದೇಹವಿಲ್ಲ! ಈ ವಿಷಯದಲ್ಲಿ ನಾನು ಇದೋ! ನನಗೆ ಜೀವನಾಧಾರವಾದ ಮಲಯಪರ್ವತದಮೇಲೆಯೂ, ವಿಂಧ್ಯಪರ್ವತದಮೇಲೆಯೂ, ಮೇರು ಮಂದರದ ರ್ದುರಪರ್ವತಗಳಮೇಲೆಯೂ, ನನಗೆ ಆಹಾರವಾದ ಕಂದಮೂಲಫಲಗಳ ಮೇಲೆಯೂ ಆಣೆಯಿಟ್ಟು ಹೇಳುವೆನು, ಎಲೆ ವೈದೇಹಿ! ಇನ್ನು ಶೀಘ್ರದಲ್ಲಿಯೇ ನೀನು [1] ನಾಕಪೃಷ್ಠದಮೇಲಿರುವ ದೇವೇಂದ್ರನಂತೆ ಈ ಪ್ರಸ್ರವಣಪರ್ವತದ ಮೇಲೆ ಕುಳಿತ ರಾಮನನ್ನು ನೋಡುವೆ! ಎಲೆ ದೇವಿ! ರಾಮನು ನಿನ್ನನ್ನಗಲಿದಂದಿನಿಂದ ಮಹಾವ್ಯಸನಪೀಡಿತನಾಗಿ ಮಾಂಸವನ್ನೂ ಭುಜಿಸನು. ಮದ್ಯವನ್ನೂ ಸೇವಿಸನು. ಅತನು ಪ್ರತಿದಿನವೂ ಸಾಯಂಕಾಲದಲ್ಲಿ ಕಾಡಿನಲ್ಲಿ ಬೆಳೆಯುವ ವಾನಪ್ರಸ್ಥಯೋಗ್ಯವಾದ ಫಲಮೂಲಗಳನ್ನು ಸಂಗ್ರಹಿಸಿ, ಶರೀರ ಧಾರಣಕ್ಕೆ ಬೇಕಾದಷ್ಟನ್ನು ಮಾತ್ರವೇ ಭುಜಿಸುತ್ತಿರುವನು. ಆ ರಾಮನ ಮನಸ್ಸೆಲ್ಲವೂ ನಿನ್ನಲ್ಲಿಯೇ ಲಯಿಸಿಹೋಗಿರುವುದು. ಆದುದರಿಂದ ಆತನು ತನ್ನ ಮೈಮೇಲೆ ಬಂದುಬೀಳುವ ಕಾಡುನೊಣಗಳನ್ನಾಗಲಿ, ಸೊಳ್ಳೆಗಳನ್ನಾಗಲಿ, ಇತರ ಕೀಟಗಳನ್ನಾಗಲಿ, ಕೊನೆಗೆ ಪಾವುಗಳನ್ನಾಗಲಿ ಅಟ್ಟಲಿ ದುಃಖಪರವಶನಾಗಿರುವನು ಯಾವಾಗಲೂ ನಿನ್ನನ್ನೇ ಧ್ಯಾನಿಸುತ್ತಿರುವನು. ಯಾವಾಗಲೂ ನಿನ್ನ ವಿರಹದುಃಖದಲ್ಲಿಯೇ ತತ್ಪರನಾಗಿರುವನು. ನಿನ್ನ ವಿಷಯವಾಗಿ ಕಾಮವಶನಾದ ಆತನು, ನಿನ್ನನ್ನು ಹೊರತು ಬೇರೆಯಾವ ವಿಷಯವನ್ನೂ ಸ್ವಲ್ಪಮಾತ್ರವೂ ಚಿಂತಿಸುವನಲ್ಲ. ನಿನ್ನನ್ನಗಲಿದಂದಿನಿಂದ ಆತನಿಗೆ ನಿದ್ರೆಯೆಂಬುದೇ ಇಲ್ಲ. ಅಕಸ್ಮಿಕವಾಗಿ ನಿದ್ರೆಹೋದರೂ ಆಗಾಗ "ಹಾ ಸೀತೇ" ಎಂದು ಕನವರಿಸುತ್ತ ಎಚ್ಚರಗೊಳ್ಳುವನು. ಆತನು ಫಲವನ್ನಾಗಲಿ, ಪುಷ್ಪವನ್ನಾಗಲಿ, ಮನೋಹರವಾದ ಬೇರೆಯಾವವಸ್ತುವನ್ನಾಗಲಿ ನೋಡಿದಪಕ್ಷದಲ್ಲಿ, ಆಗಲೇ ನಿನ್ನನ್ನು ಸ್ಮರಿಸಿಕೊಂಡು "ಹಾ ಪ್ರಿಯೇ" ಎಂದು ಬಹುವಿಧದಿಂದ ಏಲಪಿಸುತ್ತ ನಿಟ್ಟುಸಿರನ್ನು ಬಿಟ್ಟು ತಪಿಸುತ್ತಿರುವನು. ಎಲೆ ದೇವಿ! ಪಿತಾಜ್ಞೆಯಿಂದ ವನವಾಸವ್ರತವನ್ನು ಹಿಡಿದಿರುವ ಆ ರಾಮಕುಮಾರನು, ಅನವರತವೂ ನಿನ್ನನ್ನೇ ಸ್ಮರಿಸಿ, ಸಂಕಟಪಡುತ್ತಿರುವನು. ಯಾವಾಗಲೂ "ಹಾ ಸೀತೇ" ಎಂದು ನಿನ್ನನ್ನೇ ಕೂಗುತ್ತಿರುವನು. ನಿನಗಾಗಿಯೇ ಯಾವಾಗಲೂ ಪ್ರಯತ್ನಿಸುತ್ತಿರುವನು" ಎಂದನು. ಹೀಗೆ ಹನು

---

1. ನಾಕಪೃಷ್ಠವೆಂದರೆ ಇಂದ್ರನಿಗೆ ಅಸಾಧಾರಣವಾದ ಒಂದು ಸ್ವರ್ಗಸ್ಥಾನ ವಿಶೇಷವು.

ಮಂತನು ಹೇಳಿದ ರಾಮವಾರ್ತೆಯನ್ನು ಕೇಳಿ ಸೀತೆಗೆ ಸ್ವಲ್ಪಸಮಾಧಾನವುಂಟಾದರೂ, ಆ ರಾಮನು ತನಗಾಗಿ ಅನುಭವಿಸುತ್ತಿರುವ ವಿರಹದುಃಖವನ್ನು ಕೇಳಿ, ಅದರಿಂದ ಆಕೆಯು ಅತನೊಡನೆ ಸಮಾನ ದುಃಖವುಳ್ಳವಳಾಗಿ, ಶರತ್ಕಾಲಾರಂಭದಲ್ಲಿ ಮೇಘದಿಂದ ಸ್ವಲ್ಪವಾಗಿ ಮರೆಯಲ್ಪಟ್ಟ ಚಂದ್ರನಿಂದ ಕೂಡಿದ ರಾತ್ರಿಯಂತೆ, ಸ್ಪಷ್ಟಾಸ್ಪಷ್ಟವಾದ ಮುಖವಿಕಾಸವುಳ್ಳವಳಾಗಿದ್ದಳು.

ಇಲ್ಲಿಗೆ ಮೂವತ್ತಾರನೆಯ ಸರ್ಗವು.

ಸೀತೆಯು ತನಗೆ ರಾವಣನು ಹೇಳಿರುವ ಎರಡು ತಿಂಗಳ ಗಡುವನ್ನು ಹನುಮಂತನಿಗೆ ತಿಳಿಸಿದುದು. ಹನುಮಂತನು ತನ್ನ ಭುಜದಮೇಲೇರಿ ರಾಮನ ಬಳಿಗೆ ಬರುವಂತೆ ಸೀತೆಯನ್ನು ಕೇಳಲು, ಸೀತೆಯು ರಾಮನೇ ಇಲ್ಲಿಗೆ ಬಂದು ರಾವಣನನ್ನು ಕೊಂದು, ತನ್ನನ್ನು ಕರೆದುಕೊಂಡು ಹೋಗುವುದುಚಿತವೆಂದು ಹೇಳಿದುದು.

ಪೂರ್ಣಚಂದ್ರಮುಖಿಯಾದ ಸೀತೆಯು, ಹನುಮಂತನ ವಾಕ್ಯವನ್ನು ಕೇಳಿ, ಸಾರವತ್ತಾಗಿಯೂ, ಧರ್ಮಯುಕ್ತವಾಗಿಯೂ ಇರುವ ಮಾತಿನಿಂದ ಅತನನ್ನು ಕುರಿತು "ಎಲೈ ವಾನರೋತ್ತಮನೆ! ರಾಮನು ಯಾವಾಗಲೂ ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿರುವನೆಂಬ ಸಂತೋಷವಾರ್ತೆಯೊಡನೆ ಆತನು ನನ್ನ ವಿಷಯವಾಗಿ ದುಃಖಪೀಡಿತನಾಗಿರುವನೆಂಬ ದುಃಖವಾರ್ತೆಯನ್ನೂ ನೀನು ಹೇಳಿರುವುದರಿಂದ, ನಿನ್ನ ಮಾತು ನನಗೆ ವಿಷಸಂಬಂಧವುಳ್ಳ ಅಮೃತದಂತಾಗಿರುವುದು. ವಿಸ್ತಾರವಾದ ಐಶ್ವರ್ಯದಲ್ಲಿಯಾಗಲಿ, ಭಯಂಕರವಾದ ವ್ಯಸನದಲ್ಲಿಯಾಗಲಿ, ದೈವವೇ ಮನುಷ್ಯನನ್ನು ಹಗ್ಗದಿಂದ ಬಿಗಿದೆಳೆಯುವಂತೆ ಎಳೆಯುತ್ತಿರುವುದೇ ಹೊರತು, ಮನುಷ್ಯನಿಗೆ ಯಾವವಿಧದಲ್ಲಿಯೂ ಸ್ವಾತಂತ್ರ್ಯವಿಲ್ಲ. ಯಾವ ಪ್ರಾಣಿಗಳಿಗೂ ದೈವವನ್ನು ಹಿಡಿದಿಡುವುದು ಸಾಧ್ಯವೇ ಅಲ್ಲ. ಎಲ್ಲೆ ಕಪಿಸತ್ತಮನೆ! ನಮ್ಮ ಅವಸ್ಥೆಯನ್ನು ನೋಡು! ಸುಮಿತ್ರಾಪುತ್ರನಾದ ಆ ಲಕ್ಷ್ಮಣನೂ, ನಾನೂ, ನನ್ನ ಪ್ರಿಯಪತಿಯಾದ ರಾಮನೂ, ಈಗ ಅನುಭವಿಸುತ್ತಿರುವ ಕಷ್ಟಪರಂಪರೆಗಳನ್ನು ನೋಡಿದೆಯೊ! ಮಹಾಸಮುದ್ರಮಧ್ಯದಲ್ಲಿ ಪ್ರವಾಹವೇಗಕ್ಕೆ ಸಿಕ್ಕಿ ಸಡಿಲಿಹೋದ ಹಡಗು, ದೈವಗತಿಯಿಂದ ದಡವನ್ನು ಮುಟ್ಟುವಂತೆ, ಆ

ನನ್ನ ಪ್ರಿಯನು. ಈ ಮಹಾದುಃಖಸಾಗರವನ್ನು ಇನ್ನೆಂದಿಗೆ ದಾಟುವನೋ! ನನ್ನ ಪತಿಯಾದ ರಾಮನು ಇಲ್ಲಿಗೆ ಬಂದು, ಇಲ್ಲಿನ ರಾಕ್ಷಸರೆಲ್ಲರನ್ನೂ ವಧಿಸಿ, ರಾವಣನನ್ನೂ ಕೊಂದು, ಈ ಲಂಕೆಯನ್ನೂ ನಿರ್ಮೂಲಮಾಡಿ, ತನ್ನ ಕಣ್ಣಾರೆ ನನ್ನನ್ನು ಇನ್ನೆಂದಿಗೆ ನೋಡುವನೋ ಕಾಣೆನು! ಅಯ್ಯಾ ವಾನರೇಂದ್ರನೆ! ನೀನು ಮಾತ್ರ ಶೀಘ್ರದಲ್ಲಿಯೇ ಹೋಗಿ ಆ ನನ್ನ ಪ್ರಿಯನನ್ನು ತ್ವರೆಪಡಿಸಬೇಕು! ಕ್ರೂರನಾದ ರಾವಣನು ನನಗಾಗಿ ನಿರ್ಣಯಿಸಿರುವ ಒಂದು ಸಂವತ್ಸರದ ಗಡುವಿನಲ್ಲಿ ಇನ್ನೆರಡು ತಿಂಗಳು ಮಾತ್ರವೇ ಉಳಿದಿರುವುವು. ಈಗ ಹತ್ತನೆಯ ತಿಂಗಳು ನಡೆಯುತ್ತಿರುವುದು. ಈ ಗಡುವು ಮುಗಿಯುವುದರೊಳಗಾಗಿಯೇ ಆತನನ್ನು ಇಲ್ಲಿಗೆ ಕರೆತರಬೇಕು! ಆ ರಾವಣನ ತಮ್ಮನಾದ ವಿಭೀಷಣನೂ ಕೂಡ, ನನ್ನನ್ನು ರಾಮನಬಳಿಗೆ ಹಿಂತಿರುಗಿ ಕಳುಹಿಸಿಬಿಡಬೇಕೆಂದು ತನ್ನಣ್ಣನಿಗೆ ಎಷ್ಟೋ ಹಿತನಾದಗಳನ್ನು ಹೇಳಿದನು. ಅವನು ಎಷ್ಟೆಷ್ಟೋ ಪ್ರಯತ್ನದಿಂದ ಸಮಾಧಾನ ಹೇಳಿದರೂ, ಮೂರ್ಖನಾದ ರಾವಣನು ನನ್ನನ್ನು ಕಳುಹಿಸಿಬಿಡುವುದಕ್ಕಿಷ್ಟಪಡಲಿಲ್ಲ ರಾವಣನಿಗೆ ಆ ಬುದ್ಧಿಯೇ ಹುಟ್ಟಲಿಲ್ಲ. ಮುಖ್ಯವಾಗಿ ರಾವಣನು ಕಾಲವಶನಾಗಿರುವುದರಿಂದ, ಮೃತ್ಯುದೇವತೆಯು ಯುದ್ಧದಲ್ಲಿ ಅತನಮೇಲೆ ಕಣ್ಣಿಟ್ಟಿರಬಹುದು. ಎಲೆ ಕಪಿಯೆಂದ್ರನೆ! ವಿಭೀಷಣನಿಗೆ ಹಿರಿಯಮಗಳಾದ ಅನಲೆಯೆಂಬವಳು ತನ್ನ ತಾಯಿಯ ಮಾತಿನಮೇಲೆ ನನ್ನಲ್ಲಿಗೆ ಬಂದು, ಈ ವಿಷಯಗಳನ್ನೆಲ್ಲಾ ಸೂಚಿಸಿರುವಳು. ಇದಲ್ಲದೆ ಇಲ್ಲಿ ಆ ವಿಂಧ್ಯನೆಂಬ ವೃದ್ಧನಾದ ರಾಕ್ಷಸ ಪ್ರಧಾನನೊಬ್ಬನುಂಟು! ಅವನು ಬಹಳ ಮೇಧಾವಿಯು, ವಿದ್ವಾಂಸನು. ಅವನು ರಾಕ್ಷಸನಾದರೂ ಅವನ ಮುಖದಲ್ಲಿ ಒಂದು ಶುಭಕಳೆಯುಂಟು! ಸದಾಚಾರಸಂಪನ್ನನು! ರಾವಣನಿಗೆ ಬಹಳ ಇಷ್ಟನಾಗಿಯೂ ಇರುವನು. ಅತನು ರಾಮನಿರುವ ಇಲ್ಲಿನ ರಾಕ್ಷಸರಿಗುಂಟಾಗಬಹುದಾದ ಹಾನಿಯನ್ನು ತಿಳಿಸಿ, ರಾವಣನಿಗೆ ಎಷ್ಟೋ ಹಿತವಾದಗಳನ್ನು ಹೇಳಿದನು. ದುಷ್ಟಾತ್ಮನಾದ ರಾವಣನು ಅವನ ಮಾತನ್ನು ಕೇಳಲಿಲ್ಲ. ಅದರೇನು! ಎಲೈ ಕಪಿಶ್ರೇಷ್ಠನೆ! ಮುಖ್ಯವಾಗಿ ನನ್ನ ಅಂತರಾತ್ಮವು ಬಹಳ ನಿಷ್ಕಲ್ಮಷವಾಗಿರುವುದರಿಂದ ಶೀಘ್ರದಲ್ಲಿಯೇ ಆ ನನ್ನ ಪ್ರಿಯನು ನನ್ನನ್ನು ಬಿಡಿಯುವುದರಲ್ಲಿ ಸಂದೇಹವಿಲ್ಲ. ಕಾರ್ಯೋತ್ಸಾಹವೂ, ಪೌರುಷವೂ, ಬಲವೂ, ದಯಾಸ್ವಭಾವವೂ, ಕೃತಜ್ಞತೆಯೂ, ಪರಾಕ್ರಮವೂ, ಅಸಾಧಾರಣವಾದ ಮಹಿಮೆಯೂ ಆ ನನ್ನ ಪ್ರಿಯನಲ್ಲಿ ಪೂರ್ಣವಾಗಿ ತುಂಬಿರುವುವು. ಜನಸ್ಥಾನದಲ್ಲಿ ತನ್ನ ತಮ್ಮನ ಸಹಾಯವನ್ನೂ ಅಪೇಕ್ಷಿಸದೆ, ತಾನೊಬ್ಬನೇ ನಿಂತು ಹದಿನಾಲ್ಕು ಸಹಸ್ರರಾಕ್ಷಸಸೈನ್ಯವನ್ನೂ ಧ್ವಂಸಮಾಡಿದ ಆ ಮಹಾಧೀರ

ನಿಗೆ ಬೇರೆ ಯಾವಶತ್ರುವು ತಾನೇ ಅಂಜದಿರುವನು? ಪುರುಷೋತ್ತಮನಾದ ರಾಮನು ಎಂತಹ ಕಷ್ಟದಶೆಗೆ ಸಿಕ್ಕಿದರೂ ಸ್ವಲ್ಪಮಾತ್ರವೂ ಧೈರ್ಯಗೆಡುವವನಲ್ಲ. ದೇವೇಂದ್ರನ ಮಹಿಮೆಯನ್ನು ಶಚೀದೇವಿಯು ಹೇಗೋ ಹಾಗೆ ಆತನ ಮಹಿಮೆಯನ್ನು ನಾನು ಚೆನ್ನಾಗಿ ಬಲ್ಲೆನು. ಎಲೈ ಕಪಿವೀರನೆ! ಆ ರಾಮನೆಂಬ ಸೂರ್ಯನು, ತನ್ನ ಬಾಣಗಳೆಂಬ ಕಿರಣಗಳಿಂದ, ತನಗೆ ಶತ್ರುಗಳಾದ ಇಲ್ಲಿನ ರಾಕ್ಷಸಸಮೂಹವೆಂಬ ಪೀರನ್ನು ಕ್ಷಣಮಾತ್ರದಲ್ಲಿ ಹೀರಿಬಿಡುವನು" ಎಂದಳು. ಹೀಗೆ ಮಾತಾಡುತ್ತಿರುವಾಗಲೇ ಆಕೆಯು ರಾಮನನ್ನು ಸ್ಮರಿಸಿಕೊಂಡು ದುಃಖದಿಂದ ಕೊರಗಿ ಕಣ್ಣೀರನ್ನು ತುಂಬಿಕೊಂಡಳು. ತಿರುಗಿ ಹನುಮಂತನು ಆ ಸೀತೆಯನ್ನು ನೋಡಿ "ಅಮ್ಮಾ! ನೀನೇಕೆ ಚಿಂತಿಸುವೆ? ನಾನು ಇಲ್ಲಿಂದ ಹೋಗಿ ನಿನ್ನ ವೃತ್ತಾಂತವನ್ನು ತಿಳಿಸಿದ ಕ್ಷಣವೇ ರಾಮನು ಅನೇಕ ವಾನರಭೆಲ್ಲೂಕ ಸೈನ್ಯಗಳೊಡನೆ ಇಲ್ಲಿಗೆ ಬಂದುಬಿಡುವುದರಲ್ಲಿ ತಡೆಯಿಲ್ಲ. ಅಥವಾ ನೀನು ಅದುವರೆಗೆ ಕಾದಿರಬೇಕಾದುದೂ ಇಲ್ಲ. ನಾನೇ ಈಗ ನಿನ್ನ ಈ ದುಃಖವನ್ನು ಬಿಡಿಸಬಲ್ಲೆನು. ಇದೋ! ಈ ನನ್ನ ಹೆಗಲನ್ನೇರಿ ಕುಳ್ಳಿರು! ನಿನ್ನನ್ನು ಈ ಹೆಗಲಿನ ಮೇಲೇರಿಸಿಕೊಂಡೇ ಈ ಸಮುದ್ರವನ್ನು ದಾಟಿ ರಾಮನ ಬಳಿಗೆ ಹೋಗುವೆನು! ಕೊನೆಗೆ ರಾವಣಸಹಿತವಾಗಿ ಈ ಲಂಕಾನಗರಿಯನ್ನೇ ಹೊತ್ತುಕೊಂಡು ಸಮುದ್ರವನ್ನು ಹಾರಿಹೋಗುವುದಕ್ಕೂ ನನಗೆ ಶಕ್ತಿಯುಂಟೆಂದು ತಿಳಿ! ಎಲೆ ಸೀತೆ! ಹುತವಾದ ಹವಿಸ್ಸನ್ನು ಅಗ್ನಿಹೋತ್ರನು ಇಂದ್ರನಿಗೆ ತಂದೊಪ್ಪಿಸುವಂತೆ, ನಿನ್ನನ್ನು ನಾನು ಈಗಲೇ ಎತ್ತಿಕೊಂಡುಹೋಗಿ ಪ್ರಸ್ರವಣಪರ್ವತದಲ್ಲಿರುವ ರಾಮನಿಗೊಪ್ಪಿಸಿಬಿಡುವೆನು. ಎಲೆ ದೇವಿ! ದೈತ್ಯವಧಕ್ಕೆ ಪ್ರಯತ್ನಿಸುವ ವಿಷ್ಣುವಿನಂತೆ, ರಾಕ್ಷಸವಧಕ್ಕಾಗಿ ಉದ್ಯೋಗಿಸುತ್ತಿರುವ ಲಕ್ಷ್ಮಣಸಹಿತನಾದ ಆ ರಾಮನನ್ನು ಶೀಘ್ರದಲ್ಲಿಯೇ ನೀನು ನೋಡುವೆ! ನಿನ್ನನ್ನು ನೋಡುವ ಪ್ರಯತ್ನದಿಂದಲೇ ತಪಕಪಡುತ್ತ, ನಾಕಪೃಷ್ಠದಲ್ಲಿರುವ ದೇವೇಂದ್ರನಂತೆ ಅಶ್ರಮದಲ್ಲಿರುವ ಮಹಾಬಲಾಢ್ಯನಾದ ರಾಮನನ್ನು ಈಗಲೇ ನೀನು ನೋಡಬಹುದು. ಎಲೆ ಕಲ್ಯಾಣಿ! ನನ್ನ ಭುಜವನ್ನೇರು! ನನ್ನ ಮಾತನ್ನು ಹೇಳ್ಪಿಸಬೇಡ! ರೋಹಿಣಿಯು ಚಂದ್ರನನ್ನು ಸೇರುವಂತೆ, ನೀನು ಶೀಘ್ರದಲ್ಲಿಯೇ ರಾಮನೊಡನೆ ಸೇರುವುದಕ್ಕೆ ಸಮ್ಮತಿಸು! ಈಗ ನೀನು ನನ್ನ ಭುಜದಮೇಲೆ ಕುಳಿತು ಚಂದ್ರನೊಡನೆಯೂ, ಮಹಾದೀಪ್ತಿಮಂತನಾದ ಸೂರ್ಯನೊಡನೆಯೂ ಮಾತಾಡಿಬರುವಂತೆ ಆಕಾಶಮಾರ್ಗದಿಂದಲೇ ವಿಸ್ತಾರವಾದ ಈ ಸಮುದ್ರಾಕಾಶಗಳೆರಡನ್ನೂ ದಾಟಿಬಿಡು! ಅಮ್ಮಾ! ನಾನು ನಿನ್ನನ್ನು ಅಂತರಿಕ್ಷಮಾರ್ಗದಿಂದೆತ್ತಿಕೊಂಡು ಹೋಗುವಾಗ, ಇಲ್ಲಿನ

ರಾಕ್ಷಸರಾದರೂ ಒಂದುವೇಳೆ ಅಡ್ಡಗಟ್ಟಿ ನನ್ನನ್ನು ಹಿಡಿಯಬಹುದೆಂದು ನೀನು ಶಂಕಿಸಬೇಡ! ನಾನು ಆಕಾಶದಲ್ಲಿ ವೇಗದಿಂದ ಹಾರುವಾಗ, ಈ ಲಂಕೆಯಲ್ಲಿರುವ ಯಾವನೊಬ್ಬ ರಾಕ್ಷಸನಾಗಲಿ ನನ್ನನ್ನು ಬೆನ್ನಟ್ಟಿ ಬರಲಾರನು. ಎಲೆ ವೈದೇಹಿ! ನಾನು ಯಾವ ವೇಗದಿಂದ ಸಮುದ್ರವನ್ನು ಹಾರಿ ಇಲ್ಲಿಗೆ ಬಂದೆನೋ, ಅದೇ ವೇಗದಿಂದಲೇ ನಿನ್ನನ್ನೂ ಎತ್ತಿಕೊಂಡು ಆಕಾಶದಲ್ಲಿ ಹಾರಿ ಹಿಂತಿರುಗಿ ಹೋಗುವೆನು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ" ಎಂದನು. ಕಪಿಶ್ರೇಷ್ಠನಾದ ಆ ಆಂಜನೇಯನ ಪರಾಕ್ರಮವಾಕ್ಯವನ್ನು ಕೇಳಿದೊಡನೆ, ಸೀತೆಗೆ ಆತ್ಯಾಶ್ಚರ್ಯವೂ ಸಂತೋಷವೂ ಹುಟ್ಟಿತು. ಈ ಸಂತೋಷಾಶ್ಚರ್ಯಗಳಿಂದ ರೋಮಾಂಚಿತವಾದ ಮೈಯುಳ್ಳವಳಾಗಿ ಸೀತೆಯು ತಿರುಗಿ ಆಂಜನೇಯನನ್ನು ಕುರಿತು, "ಹನುಮಂತಾ! ಇದೀಗ ಬಹಳ ಚೆನ್ನಾಯಿತು! ನೀನು ನನ್ನನ್ನೂ ಎತ್ತಿಕೊಂಡು ಅಷ್ಟುದೂರಕ್ಕೆ ಹಾರಬೇಕೆಂದೆಣಿಸಿರುವೆಯಲ್ಲಾ! ಈ ಚಪಲಸ್ವಭಾವದಿಂದಲೇ ನಿನಗೆ ಕಪಿತ್ವವುಂಟಾಯಿತೆಂದು ತೋರುವುದು! ಇಷ್ಟು ಸಣ್ಣ ಮೈಯುಳ್ಳ ನೀನು, ನನ್ನನ್ನೂ ಎತ್ತಿಕೊಂಡು ಆಕಾಶದಲ್ಲಿ ಹಾರಿ, ನನ್ನ ಪ್ರಿಯನಾದ ಆ ರಾಜೇಂದ್ರನ ಬಳಿಗೆ ಸೇರಿಸುವಲ್ಲೆಯಾ?" ಎಂದಳು. ವಾಯುಪ್ರಶ್ನನಾದ ಹನುಮಂತನು ಸೀತೆಯು ಜೋಳಿದ ಈ ಪರಿಹಾಸವಾಕ್ಯವನ್ನು ಕೇಳಿ, ಅದರಿಂದ ತನಗೆ ಹಿಂದೆ ಯಾವಾಗಲೂ ಇಲ್ಲದ ಪರಾಭವವುಂಟಾದುದನ್ನು ಕುರಿತು, ತನ್ನಲ್ಲಿ ತಾನು ಚಿಂತಿಸುವನು. "ಈ ಸೀತೆಯು ನನ್ನ ಶಕ್ತಿಯನ್ನಾಗಲಿ, ನನ್ನ ಪ್ರಭಾವವನ್ನಾಗಲಿ ತಿಳಿಯದೆ, ಹೀಗೆ ನನ್ನನ್ನು ಹಾಸ್ಯಮಾಡುತ್ತಿರುವಳಲ್ಲಾ! ಇರಲಿ! ನನ್ನ ಈ ಸೂಕ್ಷ್ಮರೂಪವನ್ನು ನೋಡಿ ಈಕೆಯು ಹಾಸ್ಯಮಾಡಿರಬಹುದು. ಈಗಲೇ ಇವಳಿಗೆ ನನ್ನ ನಿಜರೂಪವನ್ನು ತೋರಿಸುವೆನು" ಎಂದು ನಿಶ್ಚಯಿಸಿಕೊಂಡನು. ವಾನರೋತ್ತಮನಾದ ಹನುಮಂತನು ಹೀಗೆಂದು ಚಿಂತಿಸಿ, ಸೀತೆಯ ನಂಬಿಕೆಗಾಗಿ ತನ್ನ ನಿಜಸ್ವರೂಪವನ್ನು ತೋರಿಸಲಾರಂಭಿಸಿದನು. ಬಹಳ ಧೀಮಂತನಾದ ಅತನು, ತನ್ನ ಮೈಯನ್ನು ವಿಸ್ತಾರವಾಗಿ ಬೆಳೆಸುವುದಕ್ಕೆ ತಕ್ಕಂತೆ 1 ಆ ಮರದ ಕೊನೆಯನ್ನು ಬಿಟ್ಟು

---

1. ಇಲ್ಲಿ ತನ್ನ ಮೈಯನ್ನು ಬೆಳೆಸುವುಕ್ಕಾಗಿ ಆಗಲೇ ಮರದಿಂದ ಕೆಳಕ್ಕಿಳಿದು ಬಾಗಿಯೂ, ಹಿಂದೆಯೇ ಮರದಿಂದ ಕೆಳಕ್ಕಿಳಿದವನಾಗಿ ಹೇಳಿದ್ದರೂ, ಅಲ್ಲಿ ಮರದ ತುದಿಯಿಂದ ಸೀತೆಗೆ ಸವಿಾಪವಾಗಿದ್ದ ಕೆಳಗಿನ ಕೊಂಬೆಗೆ ಇಳಿದುದಾಗಿಯೂ ಅರ್ಥಮಾಡಬೇಕೆಂದು ಗೋವಿಂದರಾಜವ್ಯಾಖ್ಯಾನವು. ಮರದ ಕೆಳಗಿದ್ದಾಗಲೇ ಮೈಯನ್ನು ಬೆಳೆಸಿದರೆ, ಅದರ ವೇಗಕ್ಕೆ ಆ ಮರದ ಕೊಂಬೆಗಳು ಮುರಿಯಬಹುದಾದುದರಿಂದ ಅದರಿಂದ ತಾನಿರುವ ಸಂಗತಿಯು ರಾಕ್ಷಸರಿಗೆ ತಿಳಿದು ಹೋಗದಿರಲೆಂದೆಣಿಸಿ ದೂರಕ್ಕೆ ಹೋದುದಾಗಿ ಮಹೇಶ್ವರತೀರ್ಥವ್ಯಾಖ್ಯಾನವು

ದೂರವಾಗಿ ನಿಂತು ತನ್ನ ಪ್ರಭಾವವನ್ನು ಬಿಟ್ಟಿಸುವುದಕ್ಕೆ ತೊಡಗಿದನು. ಕ್ಷಣ ಮಾತ್ರದಲ್ಲಿಯೇ ಅವನ ದೇಹವು ಮೇರುಮಂದರಪರ್ವತಗಳಿಗೆ ಸಮಾನವಾಗಿ ಬೆಳೆಯಿತು. ಅವನ ತೇಜಸ್ಸು ಉರಿಯುವ ಬೆಂಕಿಗೆ ಸಮಾನವಾಗಿ ತೋರಿತು. ಈ ಸ್ವರೂಪದಿಂದಲೇ ಅವನು ಸೀತೆಯಮುಂದೆ ನಿಂತಿದ್ದನು. ಆಗ ಆ ಅಂಜನೇಯನಿಗುಂಟಾದ ಮಹಾದ್ಭುತರೂಪವನ್ನು ಕೇಳಬೇಕೆ? ಪರ್ವತಾಕಾರವಾದ ಮೈ! ರಕ್ತದಂತೆ ಕೆಂಪಾದ ಮುಸುಡಿ! ವಜ್ರದಂತೆ ಕಠಿನವಾದ ಕೋರೆದಾಡೆಗಳು! ತೀಕ್ಷ್ಣವಾದ ನಖಗಳು! ಈ ಘೋರಸ್ವರೂಪದಿಂದ ಮುಂದೆ ನಿಂತು ಹನುಮಂತನು, ಪ್ರಥಮಃ ಸೀತೆಯನ್ನು ಕುರಿತು, "ಅಮ್ಮಾ! ಈಗಲಾದರೂ ನಿನಗೆ ನನ್ನ ಶಕ್ತಿಯಲ್ಲಿ ನಂಬಿಕೆ ಹುಟ್ಟಿತೆ? ಎಲೆ ದೇವಿ! ನಾನು ಸಮಸ್ತಪರ್ವತಾರಣ್ಯಗಳಿಂದಲೂ, ಅಟ್ಟಲಿಗಳಿಂದಲೂ, ಪ್ರಾಕಾರಗಳಿಂದಲೂ, ಪುರದ್ವಾರಗಳಿಂದಲೂ, ಕೂಡಿದ ಈ ಲಂಕಾನಗರಿಯನ್ನೇ ಇಲ್ಲಿನ ಪ್ರಭುವಾದ ರಾವಣನೊಡನೆ ಎತ್ತಿಕೊಂಡು ಹೋಗಿ, ರಾಮನಿಗೆ ಸಮರ್ಪಿಸಬಲ್ಲೆನೆಂದು ತಿಳಿ! ಇನ್ನಾದರೂ ನಿನ್ನ ಭಯವನ್ನು ಬಿಟ್ಟು ನಿನ್ನ ಮನಸ್ಸನ್ನು ದೃಢಪಡಿಸು! ನನ್ನ ಮಾತನ್ನು ತಿರಸ್ಕರಿಸಬೇಡ! ರಾಮಲಕ್ಷ್ಮಣರಿಬ್ಬರನ್ನೂ ವ್ಯಸನರಹಿತರನ್ನಾಗಿ ಮಾಡು" ಎಂದನು. ಕಮಲಾಕ್ಷಿಯಾದ ಆ ಜನಕಪುತ್ರಿಯು ಭಯಂಕರ ಸ್ವರೂಪದಿಂದ ಮುಂದೆ ನಿಂತಿರುವ ಆ ವಾಯುಪುತ್ರನನ್ನು ನೋಡಿ "ಎಲೆ ಮಹಾಕಪೀ! ಈಗ ನಿನ್ನ ಧೈರ್ಯವೂ, ನಿನ್ನ ಬಲವೂ, ನನಗೆ ಚೆನ್ನಾಗಿ ವ್ಯಕ್ತವಾಯಿತು. ನಿಜವಾಗಿ ನೀನು ವೇಗದಲ್ಲಿ ವಾಯುವಿಗೆ ಸಮಾನನು! ಅಗ್ನಿಯಂತೆ ಅದ್ಭುತವಾದ ತೇಜಸ್ಸುಳ್ಳವನು. ಹಾಗಿಲ್ಲದಿದ್ದರೆ ಸಾಮಾನ್ಯನಾದ ಬೇರೊಬ್ಬ ವಾನರನು ಈ ಪ್ರದೇಶಕ್ಕೆ ಬರುವುದೆಂದರೇನು? ಅಪಾರವಾದ ಈ ಮಹಾಸಮುದ್ರವನ್ನು ದಾಟುವುದೆಂದರೇನು? ನೀನು ಇಲ್ಲಿನ ರಾಕ್ಷಸರಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಗಬಲ್ಲೆಯೆಂಬುದೂ ನಿಜವು. ನೀನು ನನ್ನನ್ನೂ ಎತ್ತಿಕೊಂಡು ಈ ಸಮುದ್ರವನ್ನು ದಾಟಿ ರಾಮನ ಬಳಿಗೆ ಸೇರಿಸಬಲ್ಲೆಯೆಂಬುದರಲ್ಲಿಯೂ ಸಂದೇಹವಿಲ್ಲ. ಆದರೆ ಮಹಾತ್ಮನಾದ ಆ ರಾಮನು ನಡೆಸಬೇಕಾದ ಕಾರ್ಯಗಳು ಇನ್ನೂ ಅನೇಕವಾಗಿರುವುವು. ಅದಕ್ಕೆ ವಿಘ್ನ ಬಾರದಂತೆ ನಾವು ಕಾರ್ಯವನ್ನಾಲೋಚಿಸಬೇಕಲ್ಲವೆ? ಎಲೈ ಕಪಿವೀರನೆ! ನಾನು ನಿನ್ನೊಡನೆಯೇ ಇಲ್ಲಿಂದ ಹೊರಟು ಬರುವುದು ಎಷ್ಟುಮಾತ್ರಕ್ಕೂ ಯುಕ್ತವಲ್ಲ. ಏಕೆಂದರೆ, ನಿನ್ನ ವೇಗವೋ ವಾಯುವೇಗಕ್ಕೆ ಸಮಾನವಾದುದು. ನಿನ್ನ ವೇಗವನ್ನು ನೋಡಿದಾಗಲೇ ನನಗೆ ಸ್ಮರಣೆ ತಪ್ಪುವಂತಿರುವುದು. ನೀನು ನನ್ನನ್ನು ಭುಜದಮೇಲೇರಿಸಿಕೊಂಡು ಸಮುದ್ರವೇಲೆ

ಆಕಾಶಮಾರ್ಗವಾಗಿ ವೇಗದಿಂದ ಹೋಗುತ್ತಿರುವಾಗ, ನಾನು ಕೆಳಗೆ ಕಾಣುವ ಮಹಾಸಾಗರವನ್ನು ನೋಡಿದ ಮಾತ್ರಕ್ಕೆ, ಭಯದಿಂದ ಪ್ರಜ್ಞೆತಪ್ಪಿ ಸಮುದ್ರದಲ್ಲಿ ಬಿದ್ದು ಮುಳುಗಿಹೋದರೂ ಹೋಗಬಹುದು. ತಿಮಿತಿಮಿಂಗಿಲಾದಿಗಳಿಗೂ, ಮೊಸಳೆಗಳಿಗೂ ನಿತ್ಯಾಶ್ರಯವಾದ ಈ ಸಮುದ್ರದಲ್ಲಿ ಬಿದ್ದೊಡನೆ, ಅಲ್ಲಿನ ಜಲಜಂತುಗಳ ಬಾಯಿಗೆ ತುತ್ತಾಗಬೇಕಲ್ಲವೆ! ಆದುದರಿಂದಲೇ ನಾನು ನಿನ್ನೊಡನೆ ಬರಲಾರೆನು. ನೀನು ಯಾವ ಶತ್ರುಗಳನ್ನಾದರೂ ಧ್ವಂಸಮಾಡಬಲ್ಲವನೆಂಬುದರಲ್ಲಿ ಸಂದೇಹವಿಲ್ಲ. ಆದರೂ ಈಗ ನೀನು ನನ್ನನ್ನು ಕರೆದುಕೊಂಡು ಹೋಗುವುದು ಸರಿಯಲ್ಲ. ಲೋಕದಲ್ಲಿ ಒಂಟಿಯಾಗಿದ್ದವರಿಗೆ ಎಂದಿಗೂ ಯಾವಭಯವೂ ಇರುವುದಿಲ್ಲ. ರಕ್ಷಿಸಬೇಕಾದ ಬೇರೊಂದು ವಸ್ತುವನ್ನು ತನ್ನಲ್ಲಿಟ್ಟು ಸಾಗಿಸುವವನಿಗೆ, ಬೇರೆಯವರಿಂದ ಯಾವಾಗಲೂ ಭಯವುಸಿದ್ಧವು. ಆ ರಕ್ಷ್ಯವಸ್ತುವಿನ ಜೊತೆಯಿಂದಲೇ ಅವನಿಗೂ ವಿಪತ್ತುಗಳು ಬರಬಹುದೆಂದೂ ಸಂದೇಹಿಸಬೇಕಾಗುವುದು. ಆದುದರಿಂದ ನೀನು ಏಕಾಕಿಯಾಗಿಲ್ಲದೆ, ನನ್ನನ್ನೂ ರಕ್ಷಿಸಿಕೊಂಡು ಇಲ್ಲಿಂದ ಹೊರಡುವುವಾದರೆ, ನಿನಗೂ, ನಡುನೆ ವಿಪತ್ತುಗಳು ಸಂಭವಿಸಬಹುದೆಂಬ ಶಂಕೆಯುಂಟಾಗುವುದು. ನೀನು ನನ್ನನ್ನೆತ್ತಿಕೊಂಡು ಹಾರಿ ಹೋಗುವುದನ್ನು ನೋಡಿದರೆ, ದುರಾತ್ಮನಾದ ರಾವಣನಿಂದ ಪ್ರೇರಿತರಾದ ಇಲ್ಲಿನ ಘೋರರಾಕ್ಷಸರು ನಿನ್ನನ್ನು ಬೆನ್ನಟ್ಟಿ ಬರುವರು. ಇಲ್ಲಿನ ರಾಕ್ಷಸರೋ ಮಹಾಶೂರರು! ಅಂತಹ ರಾಕ್ಷಸರು ಭಯಂಕರವಾದ ಶೂಲಗಳನ್ನೂ ಮುದ್ಗರಗಳನ್ನೂ ಕೈಯಲ್ಲಿ ಹಿಡಿದು, ನಿನ್ನ ಸುತ್ತಲೂ ಮುತ್ತಿಸಿಂತರೆ, ನೀನು ಮಾಡುವುದೇನು? ನೀನೊಬ್ಬನೇ ಆಗಿದ್ದ ಪಕ್ಷದಲ್ಲಿ ನಿನ್ನ ದೇಹವನ್ನಾದರೂ ನೀನು ರಕ್ಷಿಸಿಕೊಳ್ಳಬಹುದು. ಹಾಗಿಲ್ಲದೆ ರಕ್ಷ್ಯವಸ್ತುವಾದ ನನ್ನನ್ನೂ ನೀನು ಕಾಪಾಡಿಕೊಳ್ಳಬೇಕಾದರೆ ಸಾಧ್ಯವೆ? ಆದರಿಂದ ನಿನಗೂ ವಿಪತ್ತುಗಳು ಸಂಭವಿಸಬಹುದೆಂದೇ ಸಂದೇಹಿಸಬೇಕಾಗುವುದಲ್ಲವೆ? ಇದಲ್ಲದೆ ಆಕಾಶದಲ್ಲಿ ಅನೇಕರಾಕ್ಷಸರು ಆಯುಧಧಾರಿಗಳಾಗಿ ಸಂಚರಿಸುವರು. ನೀನೋ ಏಕಾಕಿಯು! ಇವರಮೇಲೆ ನಿರಾಯುಧನು! ಈ ಸ್ಥಿತಿಯಲ್ಲಿ ನಿನ್ನ ದೇಹವನ್ನು ನೀನು ರಕ್ಷಿಸಿಕೊಂಡು ಹೋಗುವುದೇ ಕಷ್ಟವಾಗಿರುವಾಗ, ಅವರೊಡನೆ ಸಂಯಾಗಿ ಸಿಂತು ಹೋರಾಡುವುದಕ್ಕೂ, ನನ್ನನ್ನು ರಕ್ಷಿಸುವುದಕ್ಕೂ ಹೇಗೆ ಸಾಧ್ಯವು? ಒಂದುವೇಳೆ ನೀನು ಪ್ರಯತ್ನಪಟ್ಟು ಅವರೊಡನೆ ಯುದ್ಧಕ್ಕೆ ನಿಂತರೂ ಆ ಘೋರಯುದ್ಧವನ್ನು ನೋಡಿದೊಡನೆ ನಾನು ಭಯದಿಂದ ಪ್ರಜ್ಞೆತಪ್ಪಿ ಕೆಳಕ್ಕೆ ಬಿದ್ದುಬಿಡಬಹುದು. ಎಲೈ ವಾನರೇಂದ್ರನೆ! ನಾನು ಬೀಳುವುದೂ ಹಾಗಿರಲಿ. ಈ ರಾಕ್ಷಸರೋ

ಮಹಾಭಯಂಕರಸ್ವರೂಪವುಳ್ಳವರು! ದೊಡ್ಡ ದೇಹವುಳ್ಳವರು! ಬಹಳ ಬಲಾಢ್ಯರು! ಅಂತಹ ರಾಕ್ಷಸರೆಲ್ಲರೂ ಒಟ್ಟಾಗಿ ಕೇದರೆ, ಒಂದುವೇಳೆ ಹೇಗೋ ಅವರು ನಿನ್ನನ್ನೇ ಜಯಿಸಿದರೂ ಜಯಿಸಬಹುದು! ಅಥವಾ ನಿನಗೆ ಅಪಜಯವುಂಟಾಗದಿದ್ದರೂ, ಆ ರಾಕ್ಷಸರೊಡನೆ ನೀನು ಯುದ್ಧಮಾಡುವಾಗ, ಆ ಯುದ್ಧಾತುರದಲ್ಲಿ ನಿನಗೂ ತಿಳಿಯದಂತೆ ನಾನು ನಿನ್ನ ಬೆನ್ನಿನಿಂದ ಜಾರಿಬಿದ್ದರೆ, ಆಗ ಮಾಯಾವಿಗಳಾದ ಕೆಲವು ರಾಕ್ಷಸರು, ಹಿಂದಿನಿಂದ ನನ್ನನ್ನು ಎತ್ತಿಕೊಂಡು ಹೋದರೂ ಹೋಗಬಹುದು. ಎಂತವರಿಗಾದರೂ ಯುದ್ಧದಲ್ಲಿ ಜಯಾಪಜಯಗಳನ್ನು ನಿಶ್ಚಯಿಸಿ ತಿಳಿಯುವುದಕ್ಕಿಲ್ಲವಷ್ಟೆ! ಆದುದರಿಂದ ನಿನಗೇ ಪರಾಜಯವುಂಟಾದರೂ ಆಗಬಹುದು. ಆಗ ರಾಕ್ಷಸರು ನಿನ್ನ ಕೈಯಿಂದ ನನ್ನನ್ನೆಳೆದುಕೊಂಡು ಹೋದರೂ ಹೋಗಬಹುದು. ಕೊನೆಗೆ ಕೋಪದಿಂದ ನನ್ನನ್ನು ಕೆಲವರಾದರೂ ಕೊಲ್ಲಬಹುದು. ನಿನ್ನ ಜಯಪರಾಜಯಗಳೂ ಹಾಗಿರಲಿ! ಆ ರಾಕ್ಷಸರ ಭಯಂಕರವಾದ ಗರ್ಜನೆಗಳನ್ನು ಕೇಳಿದಾಗಲೇ ನಾನು ಭಯದಿಂದ ಪ್ರಾಣವನ್ನು ಬಿಟ್ಟರೂ ಬಿಡಬಹುದು. ಆಗ ನೀನು ಇದುವರೆಗೆ ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾಗಿ ಹೋಗುವುದಲ್ಲವೆ? ನೀನೊಬ್ಬನೇ ಇಲ್ಲಿನ ಸಮಸ್ತ ರಾಕ್ಷಸರನ್ನೂ ಕೊಲ್ಲುವುದಕ್ಕೆ ಶಕ್ತನೆಂಬುದರಲ್ಲಿ ಸಂದೇಹವಿದ್ದು! ಆದರೆ, ನೀನು ನಿನ್ನ ಕೈಯಿಂದಲೇ ಇಲ್ಲಿನ ರಾಕ್ಷಸರನ್ನು ಕೊಂದರೆ, ಅದರಿಂದ ರಾಮನ ಕೀರ್ತಿಗೂ ಕೊರತೆಯಲ್ಲವೆ? ಇದಲ್ಲದೆ ಇಲ್ಲಿನ ರಾಕ್ಷಸರು ನಿನ್ನ ಸಾಮರ್ಥ್ಯವನ್ನು ತಿಳಿದು, ಹೇಗೋ ಒಂದು ವಿಧದಿಂದ ನಿನ್ನನ್ನು ವಂಚಿಸಿ, ನನ್ನನ್ನೆತ್ತಿಕೊಂಡು ಹೋಗಿ, ವಾನರರಿಗಾಗಲಿ, ರಾಮಲಕ್ಷ್ಮಣರಿಗಾಗಲಿ ತಿಳಿಯದಂತೆ, ರಹಸ್ಯಸ್ಥಳದಲ್ಲಿ ಬಚ್ಚಿಟ್ಟುಬಿಟ್ಟರೆ, ಆಗಲೂ ನೀನು ಇದುವರೆಗೆ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವೇ ಆಗುವುವು. ಇವೆಲ್ಲವನ್ನೂ ಪರ್ಯಾಲೋಚಿಸಿದರೆ, ಈಗಲೇ ನೀನು ಹೋಗಿ ಆ ರಾಮನನ್ನೇ ಇಲ್ಲಿಗೆ ಕರೆತರುವುದರಲ್ಲಿ ಬಹಳ ಗುಣವುಂಟು. ಮಹಾತ್ಮನಾದ ಆ ರಾಮನ ಪ್ರಾಣಗಳೂ, ಆತನ ತಮ್ಮಂದಿರ ಪ್ರಾಣಗಳೂ, ಈಗ ನನ್ನನ್ನಾಶ್ರಯಿಸಿರುವುವು. ನಿನ್ನ ಪ್ರಭುವಾದ ಸುಗ್ರೀವನ ಮತ್ತು ಅವನ ಬಂಧುಗಳ ಪ್ರಾಣಗಳೂ ನನ್ನನ್ನಾಶ್ರಯಿಸಿಯೇ ನಿಂತಿರುವುವು. ಈ ಸ್ಥಿತಿಯಲ್ಲಿ ನನಗೇನಾದರೂ ಪ್ರಾಣಭಯವುಂಟಾದ ಕ್ಷಣದಲ್ಲಿ, ಅವರೆಲ್ಲರೂ ಒಟ್ಟಾಗಿ ಪ್ರಾಣವನ್ನು ಕಳೆದುಕೊಳ್ಳುವುದೇ ನಿಶ್ಚಯವು! ಆ ರಾಮಲಕ್ಷ್ಮಣರಿಬ್ಬರೂ ಇದುವರೆಗೆ ನನ್ನನ್ನು ಕುರಿತು ದುಃಖದಿಂದ ಕೊಂಗಿ ಕೃಶರಾಗಿರುವರು. ಇನ್ನು ನನಗೆ ಏನಾದರೂ ಅಪಾಯವು ಸಂಭವಿಸಿರುವುದನ್ನೂ ಕೇಳಿದ ಕ್ಷಣದಲ್ಲಿ, ನಿರಾಶರಾಗಿ ಸಮಸ್ತವಾನರಭಲ್ಲೂಕಸಮೂಹಗಳೊಡನೆ ಪ್ರಾಣವನ್ನೇ ಬಿಡುವರು.

ಎಲ್ಲಿ ವಾನರೇಂದ್ರನೆ! ಇದಲ್ಲದೆ ಪತಿಭಕ್ತಿಯನ್ನೇ ನಾನು ಪುರಸ್ಕರಿಸಿ ನಡೆಯುವ ಬಳಾದುದರಿಂದ, ರಾವಣನ ಹೊರತು ಬೇರೊಬ್ಬ ಪುರುಷನ ಮೈಯ್ಯನ್ನು ಸ್ಪರ್ಶಿಸಲಾರೆನು. "ಅದರಿಂ ರಾವಣನು ನಿನ್ನನ್ನೆತ್ತಿಕೊಂಡು ಬರುವಾಗಲಾದರೂ ಅವನ ದೇಹವನ್ನು ನೀನು ಸ್ಪರ್ಶಿಸಲಿಲ್ಲವೆ?" ಎಂದು ಶಂಕಿಸಬೇಡ. ಆದನ್ನು ನಾನು ಮನಃಪೂರ್ವಕವಾಗಿ ಮಾಡಿದವಳಲ್ಲ. ಆಗ ನನಗೆ ಯಾವುದನ್ನು ಮಾಡುವುದಕ್ಕೂ ಶಕ್ತಿಯಿಲ್ಲದೆ ಹೋಯಿತು. ನಾನು ಅನಾಥೆಯಾಗಿದ್ದೆನು. ದುಃಖದಿಂದ ನನ್ನ ಮೈವೇದನೆಯೇ ನನಗೆ ಪ್ರಜ್ಞೆಯಿರಲಿಲ್ಲ. ಈ ಸ್ಥಿತಿಯಲ್ಲಿ ದುರಾತ್ಮನಾದ ರಾವಣನು ಬಲಾತ್ಕಾರದಿಂದ ನನ್ನನ್ನು ಮುಟ್ಟಿದರೆ ನಾನು ಮಾಡುವುದೇನು? ಆ ರಾಮನು ಕಾನಾಗಿಯೇ ಇಲ್ಲಿಗೆ ಬಂದು ರಾವಣನನ್ನೂ, ಅವನ ಬಂಧುಗಳನ್ನೂ ಕೊಂದು, ಇಲ್ಲಿಂದ ನನ್ನನ್ನು ಕರೆದುಕೊಂಡು ಹೋಗುವುದೇ ಯುಕ್ತವು. ಯುದ್ಧದಲ್ಲಿ ಎಂತಹ ಶತ್ರುಗಳನ್ನಾದರೂ ಹುಟ್ಟಡಗಿಸತಕ್ಕ ಮಹಾಧೀರನಾದ ಆ ರಾವಣನ ಪರಾಕ್ರಮಗಳನ್ನು ನಾನು ಬಹಳವಾಗಿ ಕೇಳಿರುವೆನು, ಕಣ್ಣಾರೆ ನೋಡಿಯೂ ಇರುವೆನು. ದೇವಗಂಧರ್ವಯಕ್ಷರಾಕ್ಷಸರಲ್ಲಿ ಯಾರೂ ಯುದ್ಧರಂಗದಲ್ಲಿ ಅತನಿಗಿದಿರಲ್ಲ. ಮಹಾಬಲಾಢ್ಯನಾದ ಆ ರಾಮನು ಪರಾಕ್ರಮದಲ್ಲಿ ಇಂದ್ರನನ್ನೇ ಹೋಲುವನು. ಧನುರ್ವಿದ್ಯೆಯ ಚಿಕ್ಕಗಿಟಿಗಳೆಲ್ಲವನ್ನೂ ತಿಳಿದವನು. ಅಂತಹ ರಾಮನು ವಾಯುವಿನ ಸಹಾಯದಿಂದ ಜ್ವಲಿಸುತ ಅಗ್ನಿಯಂತೆ, ಲಕ್ಷ್ಮಣಸಹಿತನಾಗಿ ಯುದ್ಧಕ್ಕೆ ನಿಂತರೆ, ಅವನ ವೀರ್ಯವನ್ನು ತಡೆಯಬಲ್ಲವನಾವನು? ಎಲೆ ವಾನರೋತ್ತಮನೆ! ಮದಿಸಿದ ದಿಗ್ಗಜದಂತೆ ಯುದ್ಧದಲ್ಲಿ ನಿಂತು, ಪ್ರಳಯಕಾಲಸೂರ್ಯನಂತೆ ಜ್ವಲಿಸುತ್ತ ಶತ್ರುಗಳ ಗರ್ವವನ್ನಡಗಿಸತಕ್ಕ ಆ ರಾಮನು, ಲಕ್ಷ್ಮಣಸಹಿತನಾಗಿ ಬಂದು, ಸೂರ್ಯಕಿರಣಗಳಂತಿರುವ ತನ್ನ ತೀಕ್ಷ್ಣಬಾಣಗಳನ್ನು ಬಿಡುತ್ತಿದ್ದರೆ, ಆ ಬಾಣಗಳ ಜ್ವಾಲೆಯನ್ನು ತಡೆಯುವವನಾವನು? ಎಲೈ ಕಪಿವೀರನೆ! ನೀನು ಬೇಗನೆ ಹೊರಡು! ನನ್ನ ಪತಿಯಾದ ರಾಮನನ್ನೂ, ಲಕ್ಷ್ಮಣನನ್ನೂ, ವಾನರಯೂಥಪತಿಗಳೆಲ್ಲರನ್ನೂ ಶೀಘ್ರದಲ್ಲಿಯೇ ಇಲ್ಲಿಗೆ ಕರೆದುಕೊಂಡು ಬಾ! ಬಹುಕಾಲದಿಂದ ಆ ರಾಮನನ್ನು ಕುರಿತು ದುಃಖದಿಂದ ಕಂದಿ, ಕುಂದಿ, ಕೃಶಳಾಗಿರುವ ನನಗೆ ಸಂತೋಷನನ್ನುಂಟು ಮಾಡು" ಎಂದಳು.

[1] ಇಲ್ಲಿಗೆ ಮೂವತ್ತೇಳನೆಯ ಸರ್ಗವು.

---

1. ಈ ಸರ್ಗದಲ್ಲಿ ಇದುವರೆಗೆ, "ಭಕ್ತಿಯುಳ್ಳವರಿಗೆ ಭಗವತ್ಪ್ರಾಪ್ತಿಗಾದರೂ ಉಪಾಯಾಂತರವನ್ನುಪದೇಶಿಸುವುದು ಸ್ವರೂಪವಿರುದ್ಧವೆಂದೂ, ಭಗವಂತನೇ ಅದಕ್ಕೂ ಉಪಾಯ"ವೆಂದೂ ಸೀತೆಯು ತಿಳಿಸಿದುದಾಗಿ ತತ್ಪಾರ್ಥವು.

— { ರಾವಣನ ನಂದಿಕೆಗಾಗಿ ಒಂದು ಗುರುತನ್ನು ಕೊಡಬೇಕೆಂದು ಹನುಮಂತನು ಸೀತೆಯನ್ನು ಕೇಳಿದುದು. ಸೀತೆಯು ಕಾಕಾಸುರ ವೃತ್ತಾಂತವನ್ನು ಹೇಳಿ, ಚೂಡಾಮಣಿಯನ್ನು ಕೊಟ್ಟುದು. } —

ವಾಕ್ಯವಿಶಾರದನಾದ ಹನುಮಂತನು, ಸೀತೆಯ ಮಾತನ್ನು ಕೇಳಿ, ಧೈರ್ಯಯುಕ್ತವಾದ ಆಕೆಯ ಮಾತಿಗೆ ಬಹಳ ಸಂತುಷ್ಟನಾಗಿ ಆಕೆಯನ್ನು ಕುರಿತು, "ಎಲೆ ದೇವಿ! ನೀನು ಹೇಳಿದುದೇನೋ ಯುಕ್ತವಾಗಿಯೆ! ಇರುವುದು. ನಿನ್ನ ಮಾತು ಸ್ತ್ರೀಯರ ಸ್ವಭಾವಕ್ಕೂ, ಪತಿವ್ರತೆಯರ ವಿನಯಕ್ಕೂ ಅನುರೂಪವಾಗಿರುವುದು. 1 ವಿಶೇಷವಾಗಿ ಉಬ್ಬಿ ಬೆಳೆದ ಈ ನಿನ್ನ ಭುಜವಸ್ಥೈರ್ಯವಾದರೂ, ನೂರುಯೋಜನದಗಲವುಳ್ಳ ಈ ಮಹಾಸಾಗರವನ್ನು ದಾಟುವುದು ಹೆಂಗಸಿಗೆ ಸಾಧ್ಯವಲ್ಲವೆಂಬುದೂ ನಿಜವು. ಇದಲ್ಲದೆ ರಾಮನು ಹೊರತು ಬೇರೊಬ್ಬ ಪುರುಷನು ನಿನ್ನನ್ನು ಮುಟ್ಟಬಾರದೆಂದು ನೀನು ಎರಡನೆಯ ಕಾರಣವನ್ನು ಹೇಳಿದೆಯಲ್ಲವೆ? ಆ ಮಹಾತ್ಮನ ಪತ್ನಿಯಾದ ನಿನಗೆ ಅವನಾಡುವ ಉಚಿತವಾಗಿಯೇ ಇರುವುದು. ಇಂತಹ ಪರಮಪಥ್ಯವಾದ ಮಾತನ್ನು ನೀನಲ್ಲದೆ ಬೇರೆ ಯಾವಳು ತಾನೇ ಹೇಳುವಳು? ನಿನ್ನ ಮುಂದೆ ನೀನು ರಾಮವಿರಹವನ್ನು ಸಹಿಸಲಾರದೆ ಆತ್ಮಹತ್ಯೆಗೆ ಪ್ರಯತ್ನಿಸಿದುದೇ ಮೊದಲಾದ ನಿನ್ನ ಸಮಸ್ತವ್ಯಾಪಾರಗಳನ್ನೂ, ನೀನು ರಾವಣನನ್ನು ತೃಣೀಕರಿಸಿ ಹೇಳಿದ ಮಾತುಗಳನ್ನೂ ನಾನು ಸಾಕಲ್ಯವಾಗಿ ರಾಮನಿಗೆ ತಿಳಿಸುವೆನು. ಎಲೆ ದೇವಿ! ನಾನೇ ನಿನ್ನನ್ನೆತ್ತಿಕೊಂಡು ಹೋಗಿ ರಾಮನಿಗೊಪ್ಪಿಸುವುದಾಗಿ ನಾನು ಸ್ವತಂತ್ರಿಸಿ ಹೇಳಿದ ಆ ಮಾತಿಗಾಗಿ ನೀನು ನನ್ನನ್ನು ಸನ್ನಿಸಬೇಕು! ನಾನು ಆ ಮಾತನ್ನಾಡುವುದಕ್ಕೆ ಶೆಲವು ಕಾರಣಗಳುಂಟು! ರಾಮನಲ್ಲಿ ಸ್ನೇಹಪರವಶನಾದ ನಾನು ಹೇಗಾದರೂ ಅತನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಆತುರದಿಂದ ಈ ಮಾತನ್ನು ಹೇಳಿದೇ ಹೊರತು ಬೇರೆಯಲ್ಲ. ದುರ್ಗಮವಾದ ಈ ಲಂಕೆಯನ್ನು ಪ್ರವೇಶಿಸುವುದಕ್ಕೂ, ಈ ಮಹಾಸಮುದ್ರವನ್ನು ದಾಟಿಬರುವುದಕ್ಕೂ ಬೇರೆ ಯಾರಿಗೆ ಸಾಧ್ಯವಲ್ಲವೆಂದೂ, ನನಗೆ ಮಾತ್ರ ಆ ಸಾಮರ್ಥ್ಯವಿರುವುದೆಂದೂ, ತೋರಿಸುವುದಕ್ಕಾಗಿ ನಾನು ಹೀಗೆ ಸ್ವತಂತ್ರಿಸಿ, ಈ ಮಾತನ್ನಾಡಿಬಿಟ್ಟೆನು.

---

1. "ಸ್ತ್ರೀತ್ವಂ ನಶು ಸಮರ್ಥಂ ಹಿ ಸಾಗರಂ ವ್ಯತಿವರ್ತಿತುಂ। ವಾಮಮೂರ್ವಿಷ್ಠಾಯಾ ವಿಸ್ತೀರ್ಣಂ ಶತಯೋಜನವಾಯತಂ॥" ಎಂದು ಮೂಲವು ಇವಕ್ಕೆ ಸಮಾನಪ್ರಮಾಣದಂತೆ ನೂರುಯೋಜನಗಳ ವಿಸ್ತಾರವುಳ್ಳ ನಿನ್ನ ದೇಹವನ್ನೇರಿಯೂ ನಿನಗೆ ಸ್ತ್ರೀಸ್ವಭಾವಸಿದ್ಧವಾದ ಭೀತಿಯು ತಪ್ಪಲಾರದೆಂದು ಅರ್ಥಾಂತರವನ್ನೂ ಹೇಳಬಹುದು.

ಇದಲ್ಲದೆ ನನಗೆ ಆ ರಾಮನಲ್ಲಿರುವ ಅಸಾಧಾರಣಸ್ನೇಹವೂ, ಅವನಲ್ಲಿ ನನಗಿರುವ ಅಪಾರಭಕ್ತಿಯೂ, ನಿನ್ನನ್ನು ಈ ಕ್ಷಣವೇ ರಾಮನಬಳಿಗೆ ಸೇರಿಸಬೇಕೆಂಬ ಆತುರವನ್ನುಂಟುಮಾಡಿತು. ಆದರಿಂದ ನಾನು ಹೀಗೆ ಹೇಳಬಿಟ್ಟೆನು. ಎಲೆ ದೇವಿ! ನನ್ನೊಡನೆ ಬರುವುದು ನಿನಗೆ ಸಮ್ಮತವಲ್ಲದಿದ್ದಪಕ್ಷದಲ್ಲಿ, ನಾನು ನಿನ್ನನ್ನು ನೋಡಿ ಬಂದ ವಿಷಯದಲ್ಲಿ ರಾಮನಿಗೆ ನಂಬಿಕೆ ಹುಟ್ಟುವಂತೆ ಏನಾದರೂ ಒಂದು ಗುರುತನ್ನು ಕೊಡು!" ಎಂದನು. ಹೀಗೆ ಹನುಮಂತನು ರಾಮನಿಗಾಗಿ ಗುರುತನ್ನು ಕೇಳಿದೊಡನೆ, ಸೀತೆಗೆ ರಾಮನೊಡನೆ ತಾನು ಏಕಾಂತದಲ್ಲಿದ್ದಾಗ ನಡೆದ ಒಂದು ವೃತ್ತಾಂತವು ಸ್ಮರಣೆಗೆ ಬಂದು, ಆಕೆಯ ಕಣ್ಣುಗಳಲ್ಲಿ ಪಳಪಳನೆ ನೀರು ಸುರಿಯಿತು. ಆ ವ್ಯಸನದಿಂದ ತಡವರಿಸುವ ನುಡಿಯುಳ್ಳವಳಾಗಿ, ಆಕೆಯು ಬಹಳ ಗದ್ಗದ ಸ್ವರದಿಂದ ಹನುಮಂತನನ್ನು ಕುರಿತು "ಎಲೆ ಭದ್ರನೆ! ಚಿತ್ರಕೂಟಪರ್ವತಕ್ಕೆ ಸೇರಿದ ಒಂದಾನೊಂದು ಉಪಪರ್ವತದಲ್ಲಿ, ಈಶಾನ್ಯದಕಡೆಗೆ ಮಂದಾಕಿನೀ ನದಿಗೆ ಸಮೀಪವಾಗಿ, ಫಲಮೂಲಗಳಿಂದ ತುಂಬಿ ಜನಭರಿತವಾದ ಸಿದ್ಧಾಶ್ರಮ ಪ್ರದೇಶವೊಂದುಂಟು. ನಾನು ಅಲ್ಲಿನ ಋಷ್ಯಾಶ್ರಮದಲ್ಲಿರುವಾಗ ಒಂದು ಸಂಗತಿಯು ನಡೆಯಿತು. ಈಗ ನಾನು ಆ ವೃತ್ತಾಂತವನ್ನು ನಿನಗೆ ತಿಳಿಸುವೆನು! ಇದನ್ನೇ ನೀನು ರಾಮನಿಗೆ ಗುರುತಾಗಿ ನನ್ನ ಮಾತಿನಿಂದ ತಿಳಿಸು! "ಎಲೈ ಪ್ರಿಯನೆ! ನಾನಾವಿಧಪುಷ್ಪಗಂಧವುಳ್ಳ ಆಶ್ರಮೋಪವನಗಳಲ್ಲಿ ನಾನು ವಿಹರಿಸುತ್ತಿದ್ದು, ಆಯಾಸದಿಂದ ಬೆನರೇರಿ ನಿನ್ನ ತೊಡೆಯಮೇಲೆ ಕುಳಿತಿದ್ದೆನಷ್ಟೆ! ಆಗ ಒಂದು ಕಾಗೆಯು ಮಾಂಸಾಶೆಯಿಂದ ಬಂದು ನನ್ನ ಎದೆಯನ್ನು ಕುಕ್ಕಿತು. ಆಗ ನಾನು ಒಂದು ಮಣ್ಣುಹೆಂಟೆಯನ್ನೆಸೆದು ಆ ಕಾಗೆಯನ್ನು ಹೆದರಿಸಿ ಓಡಿಸುವುದಕ್ಕೆ ಹೋದೆನು. ಎಷ್ಟೆಷ್ಟು ಹೆದರಿಸಿದರೂ ಆ ಕಾಗೆಯು ಅಲ್ಲಿಂದ ಬಿಟ್ಟುಹೋಗದೆ, ಅಲ್ಲಲ್ಲಿಯೇ ಅಡಗಿಕೊಳ್ಳುತ್ತ, ಆಗಾಗ ಬಂದು ನನ್ನನ್ನು ಕುಕ್ಕುತ್ತಲೇ ಇತ್ತು. ಮತ್ತು ಅದು ಆಹಾರಾರ್ಥಿಯಾಗಿ ಆ ಸ್ಥಳವನ್ನು ಬಿಟ್ಟು ಕದಲದೆ, ನನ್ನ ಸ್ತನಮಾಂಸದಲ್ಲಿಯೇ ಅತ್ಯಾತುರದಿಂದ ಕಣ್ಣಿಟ್ಟು ಕಾದಿತ್ತು. ಆ ಕಾಗೆಯು ತಿರುತಿರುಗಿ ಬಂದು ನನ್ನ ಬಟ್ಟೆಯನ್ನೆಳೆದು ಹಿಂಸಿಸುತ್ತಿರಲು, ಅದನ್ನೋಡಿಸುವುದಕ್ಕಾಗಿ ನಾನು ನನ್ನ ಸೀರೆಯನ್ನೆಳೆದು ಬಿಗಿಯಾಗಿ ಕಟ್ಟಿಕೊಂಡು, ಕೋಪದಿಂದಿರುವಾಗ ನೀನು ನನ್ನನ್ನು ನೋಡಿದೆ! ನಾನು ಹಾಗೆ ಕೋಪಗೊಂಡು ಮೇಲಕ್ಕೆದ್ದು ನಿಂತು, ಆ ಕಾಗೆಯನ್ನಟ್ಟುವುದಕ್ಕಾಗಿ ಎಷ್ಟೆಷ್ಟು ಪ್ರಯತ್ನಪಟ್ಟರೂ, ಅದನ್ನು ತಡೆಯಲಾರದೆ ಹೋಗಲು, ನೀನು ನನ್ನನ್ನು ನೋಡಿ ಹಾಸ್ಯಮಾಡಿದೆ. ಆದಕ್ಕಾಗಿ ನಾನು ಲಜ್ಜೆಗೊಂಡು, ಆ ಕಾಗೆಯು ಮಾಂಸಾಶೆಯಿಂದ ನನ್ನನ್ನು ಕುಕ್ಕು

ತಿದ್ದರೂ, ಅದನ್ನೋಡಿಸಲಾರದೆ, ಹಿಂತಿರುಗಿ ಬಂದು ಮೊದಲಿನಂತೆ ನಿನ್ನ ತೊಡೆಯಮೇಲೆ ಕುಳಿತೆನು. ನಿನ್ನ ಹಾಸ್ಯವನ್ನು ನೋಡಿ ನನಗೆ ಇನ್ನೂ ಕೋಪವು ಹೆಚ್ಚಿತು. ನನ್ನ ಕಣ್ಣುಗಳಲ್ಲಿ ನೀರು ತುಳುಕುತ್ತಿತ್ತು. ಅದನ್ನು ನೋಡಿ ನೀನು ನಗುತ್ತ ಬಂದು ನನ್ನನ್ನು ಸಮಾಧಾನಪಡಿಸಿದೆ. ಎಲೆ ನಾಥನೆ! ನಾನು ಹಾಗೆ ಕಾಗೆಯಮೇಲೆ ಕೋಪಿಸಿ ಕಣ್ಣೀರನ್ನೊರಸಿಕೊಳ್ಳುತಿದ್ದುದನ್ನು ನೀನೂ ನೋಡುತಿದ್ದೆಯಲ್ಲವೆ?" ಎಂದು ನಾನು ಈ ಗುರುತನ್ನು ತಿಳಿಸಿದುದಾಗಿ ನನ್ನ ಪ್ರಿಯನಿಗೆ ಹೇಳು. ಎಲೈ ಹನುಮಂತನೆ! ಮುಂದೆ ನಡೆದ ವಿಷಯವನ್ನೂ ಹೇಳುವೆನು ಕೇಳು. ಹೀಗೆ [1] ನಾನು ಕಾಗೆಯನ್ನೋಡಿಸಿ ಬಹಳವಾಗಿ ಬಳಲಿದ್ದುದರಿಂದ ಆ ನನ್ನ ಪ್ರಿಯನ ತೊಡೆಯಮೇಲೆ ಹಾಗೆಯೇ ಮಲಗಿ, ಬಹಳ ಹೊತ್ತಿನವರೆಗೆ ನಿದ್ರೆ ಮಾಡಿದೆನು. ನಾನು ನಿದ್ರೆಯಿಂದೆದ್ದಮೇಲೆ ನನ್ನ ತೊಡೆಯಮೇಲೆ ರಾಮನು ಮಲಗಿ ನಿದ್ರಿಸುತ್ತಿದ್ದನು. ಆ ಕಾಗೆಯೇ ಪುನಃ ಆ ಸ್ಥಳಕ್ಕೆ ಬಂದಿತು ನಾನು ಎಚ್ಚರಗೊಂಡು ರಾಮನ ತೊಡೆಯಿಂದೆದ್ದುದನ್ನು ಕಂಡು, ಆ ಕಾಗೆಯು ಮೊದಲಿನಂತೆಯೇ ತಟ್ಟನೆ ನನ್ನಮೇಲೆ ಬಿದ್ದು, ನನ್ನ ಸ್ತನಾಂತರಗಳನ್ನು ಕುಕ್ಕಿತು. ನನ್ನ ಪ್ರಿಯನಿಗೆ ನಿದ್ರೆಯನ್ನು ಕೆಡಿಸಬಾರದೆಂಬುದಕ್ಕಾಗಿ, ನಾನು ಹಾಗೆಯೇ ಸುಮ್ಮನೆ ಕುಳಿತಿದ್ದೆನು. ಆ ಕಾಗೆಯು ಬಾರಿಬಾರಿಗೂ ಹಾರಿಬಂದು ನನ್ನ ಎದೆಯನ್ನು ಕುಕ್ಕಿ ಗಾಯಮಾಡಿತು. ಆ ಗಾಯದಿಂದ ಹೊರಟು ಕೆಲವು ರಕ್ತಬಿಂದುಗಳು ನನ್ನ ತೊಡೆಯಲ್ಲಿ ಮಲಗಿದ್ದ ರಾಮನಮೇಲೆ ಬಿದ್ದುವು. ಹೀಗೆ ಆ ಕಾಗೆಯು ಬಹಳವಾಗಿ ನನ್ನನ್ನು ಬಾಧಿಸುತ್ತಿರಲು, ನನಗೆ [2] ಬೇರೆ ದಾರಿಯೇ ತೋರದೆ, ನನ್ನ ತೊಡೆಯಮೇಲೆ ಸುಖನಿದ್ರೆಯನ್ನು ಮಾಡುತಿದ್ದ ಪರಂತಪನಾದ ನನ್ನ ಪ್ರಿಯನನ್ನೇ ಎಚ್ಚರಗೊಳಿಸಿದೆನು. ಆಗ ನನ್ನ ಪ್ರಿಯನು ನನ್ನ ಸ್ತನಗಳಲ್ಲಿರುವ ಗಾಯವನ್ನು ನೋಡಿ, ಕಾಲಸರ್ಪದಂತೆ ಕೋಪಗೊಂಡವನಾಗಿ ನಿಟ್ಟುಸಿರನ್ನು ಬಿಡುತ್ತ "ಓಹೋ! ಪ್ರಿಯೇ! ಇದೇನು? ಹೀಗೆ ನಿನ್ನ ಸ್ತನಾಂತರವನ್ನು

---

1. ಇಲ್ಲಿ "ತಾವಾಗಿಯೇ ಸ್ವರಕ್ಷಣಕ್ಕಾಗಿ ಪ್ರಯತ್ನಿಸಿದವರನ್ನು ಈಶ್ವರನು ಉಪೇಕ್ಷಿಸುವನೆಂದೂ, ಯಾವ ಪ್ರಯತ್ನವನ್ನೂ ಮಾಡದೆ ಭಗವಂತನಲ್ಲಿಯೇ ಸರ್ವಭರನ್ಯಾಸ ಮಾಡಿ ಸುಮ್ಮನಿದ್ದ ಪಕ್ಷದಲ್ಲಿ, ಅಂತವರನ್ನು ಅತನು ತಾನಾಗಿಯೇ ರಕ್ಷಿಸುವನೆಂದೂ ಸೂಚಿತವಾಗುವುದು.

2. ಇಲ್ಲಿ "ಸವಾಯಾ ಬೋಧಿತಶ್ಚೈವಾ ಸುಖಸುಪ್ತಃ ಪರಂತಪಃ" ಎಂದು ಪಾಠವಿರುವುದು. ವಿಶೇಷಾರ್ಥವು:—(ಸಃ) ಸರ್ವಲೋಕವಿದಿತವಾದ ನಿರತಿಶಯಸೌಂದರ್ಯದಿಂದ ಪ್ರಸಿದ್ಧನಾದ ಅತನು. (ಮಯಾ ಬೋಧಿತಃ) ನನ್ನಿಂದಲೇ ಎಚ್ಚರಗೊಳಿಸಲ್ಪಟ್ಟವನಾಗಿ,

ಗಾಯ ಮಾಡಿದವನಾವನು? ಕೋಪಗೊಂಡ ಐದುಹೆಡೆಯುಳ್ಳ ಹಾವಿನೋಡನೆ ಆಟವಾಡುವಂತೆ ಈ ಕೃತ್ಯವನ್ನು ಮಾಡಿದವನಾವನು? ಬೇಗನೆ ಹೇಳು" ಎಂದು ಕೇಳುತ್ತ ನಾಲ್ಕುಕಡೆಗಳಿಗೂ ಕಣ್ಣಿಟ್ಟು ನೋಡಿದನು. ರಕ್ತದಿಂದ ತೊಯ್ದ ತೀಕ್ಷ್ಣವಾದ ಉಗುರುಗಳುಳ್ಳ ಒಂದು ಕಾಗೆಯು ತನಗಿದಿರಾಗಿ ಕಾದಿರುವುದನ್ನು ಕಂಡನು. 1 ಇಂದ್ರನ ಮಗನೇ ಹಾಗೆ ವಾಯಸರೂಪದಿಂದ ಪಕ್ಷಿಗಳಲ್ಲಿ ಮೇಲೆನಿಸಿ ಕೊಂಡು ವಿನೋದಾರ್ಥವಾಗಿ ಈ ಭೂಮಿಗೆ ಬಂದಿದ್ದನಂತೆ! ಆ ವಾಯುಸನ್ನೋ ತೀಕ್ಷ್ಣಗತಿಯಲ್ಲಿ ವಾಯುದೇವನನ್ನೇ ಹೋಲುತಿತ್ತು. ಆ ವಾಯುಪವನ್ನು ಕಂಡೊಡನೆ, ಮಹಾಬಾಹುವಾದ ತನ್ನ ಪ್ರಿಯನನು ಕೋಪದಿಂದ ತಿರುಗುವ ಕಣ್ಣುಳ್ಳವನಾಗಿ, ಅಗಲೇ ಅವನ್ನು ಕೊಲ್ಲಬೇಕೆಂದು ನಿಶ್ಚಯಿಸಿಬಿಟ್ಟನು. ಈ ನಿಶ್ಚಯದಿಂದ ಅವನು ತಾನು ಕುಳಿತಿದ್ದ ದರ್ಭಾಸನದಲ್ಲಿಯೇ ಒಂದು ಹುಲ್ಲನ್ನೆಳೆದುಕೊಂಡು, ಅದನ್ನು ಬ್ರಹ್ಮಾಸ್ತ್ರಮಂತ್ರದಿಂದ ಅಭಿಮಂತ್ರಿಸಿ, ಆ ಕಾಗೆಯ ಮೇಲೆ ಪ್ರಯೋಗಿಸಿಬಿಟ್ಟನು. ಅಗಲೇ ಆ ದರ್ಭವು ಉರಿಯುವ ಪ್ರಳಯಕಾಲಾಗ್ನಿಯಂತೆ ಜ್ವಲಿಸುತಿತ್ತು. ಹೀಗೆ, ಅಸ್ತ್ರಪ್ರಭಾವದಿಂದುರಿಯುವ ಆ ದರ್ಭೆಯನ್ನು ಕಾಗೆಯಮೇಲೆ ಪ್ರಯೋಗಿಸಿದೊಡನೆ, ಅದು ಆಕಾಶದಲ್ಲಿದ್ದ ವಾಯುಸವನ್ನು ಬೆನ್ನಟ್ಟಿಹೋಯಿತು. ಹೀಗೆ ಬ್ರಹ್ಮಾಸ್ತ್ರವು ಬೆನ್ನಟ್ಟಿಬರುವುದನ್ನು ಕಂಡು ಆ ಕಾಗೆಯು, ತನ್ನ ಪ್ರಾಣರಕ್ಷಣೆಗಾಗಿ ನಿಂತ ಕಡೆಯಲ್ಲಿ ನಿಲ್ಲದೆ ವಿಚಿತ್ರಗತಿಯಿಂದ ಹೊರಟು, ತನಗೆ ರಕ್ಷಕರನ್ನು ಹುಡುಕುತ್ತ ಈ ಲೋಕವೆಲ್ಲವನ್ನೂ ಸುತ್ತಿತು. ಎಲ್ಲಿ ಹೋದರೇನು? ಆ ಕಾಗೆಯನ್ನು ಈ ಪ್ರಪಂಚದಲ್ಲಿ ಯಾವನೊಬ್ಬ

ಎಂದರೆ ಆತನು ನಿದ್ರಿಸುತಿದ್ದಾಗ ಅವನ ಶೋಭಾವಿಶೇಷವನ್ನನುಭವಿಸುವ ಭಾಗ್ಯವನ್ನು ನನಗೆ ನಾನೇ ತಿರಸ್ಕರಿಸಿಕೊಂಡಂತಾಯಿತೆಂದು ಭಾವ. (ಶ್ರೀವರ್ಮಾ ಸುಖಸುಪ್ತಃ) ಕಾಂತಿವಿಶೇಷನಾಗಿಯೇ ಸುಖನಿದ್ರೆಯೆನ್ನನುಭವಿಸುತಿದ್ದವನು. ಲೋಕದಲ್ಲಿ ಯಾವ ಮನುಷ್ಯನೇ ಆಗಲಿ, ಎಚ್ಚತ್ತಿರುವಾಗ ಲಕ್ಷಣವಿಶೇಷನಾಗಿ ಕಾಣುವನೇ ಹೊರತು, "ಅಭ್ಯಕ್ತಮಿವ ಸ್ನಾತಕ್ಕುಟಶುಚಿಮಿವ ಪಬುದ್ಧ ಇವ ಸುಪ್ತವಾ" ಎಂಬಂತೆ ನಿದ್ರಿಸುವಾಗ ಅವನ ದುರ್ಲಕ್ಷಣಾವಿದೋಷಗಳೆಲ್ಲವೂ ಹೊರಗೆ ಕಾಣುವವು. ಈ ರಾಮನು ಮಾತ್ರ ಹಾಗಿಲ್ಲದೆ ನಿದ್ರಿಸುವಾಗಲೂ ನಿರತಿಶಯಶೋಭಾವಿಶೇಷನೆಂದು ಭಾವ. (ಪರಂತಪಃ) ನಿದ್ರಾವಸ್ಥೆಯಲ್ಲಿಯಾ ತನ್ನನ್ನು ನೋಡಿದ ಶತ್ರುಗಳಿಗೆ ಭಯವನ್ನುಂಟುಮಾಡಶಕ್ತನವನು. ಇನ್ನು ಆತನು ಎಚ್ಚರಗೊಂಡರೆ ಹೇಳಬೇಕಾದುದೇನೆಂದೂ ಭಾವ.

1. ಇಲ್ಲಿ ಇಂದ್ರಪುತ್ರನಾದ ಜಯಂತನೇ ವಾಯಸರೂಪದಿಂದ ಬಂದುದಾಗಿ ಕೆಲವರು ಹೇಳುವರು. ಬೇರೆ ಕೆಲವರು ಈತನು ಜಯಂತನಲ್ಲವೆಂದೂ, ಇಂದ್ರನಿಗೆ ಬೇರೊಬ್ಬ ಪುತ್ರನೆಂದೂ ಹೇಳುವರು. ರಾಮನು ಅವನನ್ನು ರಕ್ಷಿಸಿದಮೇಲೆ ಆತನು ಇಂದ್ರಪುತ್ರ

ನೂ ರಕ್ಷಿಸಲಾರದೆ ಹೋದನು. 1 ತಂದೆಯಾದ ಇಂದ್ರನೂ ಕೈಬಿಟ್ಟನು. ದೇವತೆ

ನೆಂಬುದನ್ನು ಸೀತೆಗೂ ತಿಳಿಸಿದುದರಿಂದ ಆ ವಿಷಯವನ್ನೇ ಆಕೆಯು ಇಲ್ಲಿ ಹನುಮಂತನಿಗೆ ತಿಳಿಸಿದುದಾಗಿ ಗ್ರಾಹ್ಯವು.

1. ಇಲ್ಲಿ "ಸ ಪಿತ್ರಾಜ ಪರಿತ್ಯಕ್ತಸ್ಸುರೈಶ್ಚ ಸಮಹರ್ಷಿಭಿಃ। ಕ್ಷೀಣ ಲೋಕಾ ಸಂಪರಿಕ್ರಮ್ಯ ತಮೇವ ಶರಣಂಗತಃ" ಎಂದು ಮೂಲವು. ವಿಶೇಷಾರ್ಥವು:—ಈ ಶ್ಲೋಕಾರ್ಧದಿಂದ ಭಗವದ್ವ್ಯತಿರಿಕ್ತರಾದ ಇತರ ಬಂಧುಗಳಾರೂ ಯಾವವಿಧದಲ್ಲಿಯೂ ರಕ್ಷಕರಲ್ಲವೆಂದು ಸೂಚಿತವಾಗುವುದು. (ಸಃ) ಅಂತಹ ಮಹಾಪರಾಧಿಯು ಎಂದರೆ, ಸಾಕ್ಷಾತ್ತಾಗಿ ಭಗವಂತನಲ್ಲಿಯೇ ಅಪರಾಧವೂಡಿದವರನ್ನೂ ಕೂಡ ತನ್ನ ಪುರುಷಕಾರದಿಂದ ಮನ್ನಿಸಿ ಕಾಪಾಡತಕ್ಕ ಲಕ್ಷ್ಮೀದೇವಿಯಲ್ಲಿಯೇ ಅಪರಾಧವೂಡಿದವನು (ಸಃ) ನಪ್ಯೈ ಸ್ವರುಧಿರ್ಯೈ" ಎಂಬಂತೆ ಇನ್ನೂ ಅರ್ಥಾಪರಾಧವುಳ್ಳವನು. (ಸಃ) ಒಂದುವೇಳೆ ತನ್ನಲ್ಲಿ ಅಪರಾಧಿಯಾದರೂ ಕ್ಷಮಿಸುವನೇ ಹೊರತು, ತನ್ನ ಕಡೆಯವರಲ್ಲಿ ತಪ್ಪುಮಾಡಿದವರನ್ನು "ನ ಕ್ಷಮಾಮಿ-ಸಹಿಸುವವನಲ್ಲ" ಎಂದು ಶಪಥಮಾಡಿರುವ ರಾಮನ ಪ್ರತಿಜ್ಞೆಗೆ ವಿರುದ್ಧವಾಗಿ ನಡೆದವನು. (ಸಃ) "ಬಂಧುಶ್ಚ ಪಿತಾ ಚ ಮಮ ರಾಘವಃ" ಎಂಬಂತೆ ಪರುಷಾಧಿಕಬಂಧುವೆನಿಸಿದ ಈಶ್ವರನಿಂದಲೇ ಕೈಬಿಡಲ್ಪಟ್ಟವನು. ಇಂತಹ ಕಾಕಾಸುರನು (ಪಿತ್ರಾಜ ಪರಿತ್ಯಕ್ತಃ) ತನ್ನ ಹೆತ್ತತಂದೆಯಿಂದಲೂ ತ್ಯಜಿಸಲ್ಪಟ್ಟನು. (ಸುರೈಶ್ಚ ಸಮಹರ್ಷಿಭಿಃ ತಂದೆ, ತಾಯಿ, ಮೊದಲಾದ ಸ್ವಕುಟುಂಬದವರಿಂದಲೇ ಅಲ್ಲದೆ ಹೊರಗಿನವರಿಂದಲೂ ಕೈಬಿಡಲ್ಪಟ್ಟನು. (ಪಿತ್ರಾಜ) ದೇವೇಂದ್ರನೇ ತಂದೆಯಾದರೂ ಆ ದೇವೇಂದ್ರನಿಂದಲೂ ತ್ಯಜಿಸಲ್ಪಟ್ಟವನು. "ಇಂದ್ರೋಮಹೇಂದ್ರಸ್ಸುರನಾಯಕೋ ವಾ ತ್ರಾತುಂ ನ ಶಕ್ತಾ ಯುಧಿ ರಾಮ ಪಕ್ಷಮ್" ಎಂಬಂತೆ, ತಾನು ದೇವೇಂದ್ರನೆನಿಸಿದ್ದರೂ ರಾಮನ ವಿಷಯದಲ್ಲಿ ತನಗಿರುವ ಅಸಾಮರ್ಥ್ಯವನ್ನು ತಿಳಿದ ಅವನೂ ಕೈಬಿಟ್ಟನೆಂದು ಭಾವವು. (ಪಿತ್ರಾಜ ಪರಿತ್ಯಕ್ತಃ). ಹೊಟ್ಟೆಯಲ್ಲಿ ಹುಟ್ಟಿದ ಮಗನು ಎಷ್ಟೇ ದೊಡ್ಡತಪ್ಪನ್ನು ನಡೆಸಿದರೂ, ತಂದೆತಾಯಿಗಳು ಅದನ್ನು ಮರೆಸಿಟ್ಟು ರಕ್ಷಿಸುವುದು ಲೋಕಸ್ವಭಾವವಾಗಿದ್ದರೂ, ಈತನು ಮಾಡಿರುವ ಮಹಾಪರಾಧಕ್ಕೆ ಇವನಿಗೆ ಸಥವೇ ತಕ್ಕ ಶಿಕ್ಷೆಯೆಂದೆಣಿಸಿ ತಂದೆಯೂ ಕೈಬಿಡುವಂತಾಯಿತೆಂದೂ ಭಾವವು. ಅಥವಾ (ಪಿತ್ರಾಜ ಪರಿತ್ಯಕ್ತಃ) "ಸರ್ವೇಷಾಮೇವ ಲೋಕಾನಾಂ ಪಿತಾ" ಎಂದೂ, "ದೇವದೇವೋ ಹರಿಃ ಪಿತಾ" ಎಂದೂ, ಸರ್ವಲೋಕಪಿತೆನೆನಿಸಿದ ಸರ್ವೇಶ್ವರನೇ ಕೈಬಿಟ್ಟಿರುವಾಗ, ನನ್ನದೇನೆಂದು ಹೆತ್ತತಂದೆಯೂ ಕೈಬಿಟ್ಟುದಾಗಿ ಭಾವವು. (ಪರಿತ್ಯಕ್ತಃ) ಸುಮ್ಮನೆ ಹೆದರಿಸಬೇಕೆಂದು ಪರೀಕ್ಷಾರ್ಥವಾಗಿ ಕೈಬಿಟ್ಟುದಲ್ಲ. ಬುದ್ಧಿಪೂರ್ವಕವಾಗಿಯೇ ತ್ಯಜಿಸಲ್ಪಟ್ಟವನು ಎಂದರೆ, "ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್"

ಗಳೂ ಕೈಬಿಟ್ಟರು. ಮಹರ್ಷಿಗಳೂ ಅದನ್ನು ರಕ್ಷಿಸಲಾರದೆ ಹೋದರು. ಹೀಗೆ ಮೂರುಲೋಕಗಳನ್ನೂ ಸುತ್ತಿ, ಎಲ್ಲಿಯೂ ರಕ್ಷಕರನ್ನು ಕಾಣದೆ, ಕೊನೆಗೆ ಆ ನನ್ನ

ಎಂಬ ನ್ಯಾಯದಿಂದ ಮನಃಪೂರ್ವಕವಾಗಿಯೇ ಕೈಬಿಡಲ್ಪಟ್ಟವನೆಂದು ಭಾವವು.(ಪರಿತ್ಯಕ್ತಃ) ಅವನೊಬ್ಬನು ಮಾತ್ರವೇ ಅಲ್ಲದೆ, ಭಾರ್ಯಾಪುತ್ರಾದಿಪರಿವಾರಗಳೊಡನೆ ತ್ಯಜಿಸಲ್ಪಟ್ಟವನು. ತಾಯಿಯಾದರೂ ಕಾಪಾಡಲಿಲ್ಲವೆ? ಎಂದರೆ (ಪಿಶಾಚ) ಇಲ್ಲಿನ ಚಕಾರದಿಂದ ತಾಯಿಯೂ ಕೈಬಿಟ್ಟುದಾಗಿ ಸೂಚಿತವು. "ಸೀತಾ ನಾರೀಜನಸ್ಯಾಸ್ಯ ಯೋಗಕ್ಷೇಮಂ ವಿಧಾಸ್ಯತಿ" ಎಂದೂ, "ತ್ವಂ ಮಾತಾ ಸರ್ವಲೋಕಾನಾಂ" ಎಂದೂ, ಸಮಸ್ತ ಸ್ತ್ರೀಜನಕ್ಕೂ ಹಿತಕಾರಿಣಿಯಾಗಿ, ಸರ್ವಲೋಕಜನನಿಯಾದ ಸೀತೆಯೇ ಅಪಸಂಬಂಧಿಯಾದ ಅತನಿಗೆ ಹೆತ್ತ ತಾಯಿಯಾಗಿದ್ದೂ ಕೈಬಿಟ್ಟಳೆಂದು ಭಾವವು. ತಂದೆತಾಯಿಗಳು ಕೈಬಿಟ್ಟರೂ ಅವನ ಸಜಾತೀಯರಾದ ದೇವತೆಗಳಾದರೂ ಕಾಪಾಡಲಿಲ್ಲವೆ? ಎಂದರೆ (ಸುರೈಶ್ಚ) "ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ" ಎಂಬಂತೆ, ರಾಮನ ಕೋಪಕ್ಕೆ ದೇವತೆಗಳೂ ಹೆದರುವುದರಿಂದ, ಸಜಾತೀಯರಾದ ದೇವತೆಗಳೂ ಕೈಬಿಟ್ಟರೆಂದು ಭಾವವು. ಇಷ್ಟಿಯೂ ಸಮುಚ್ಚಯದಿಂದ. ಹಿಂದಿನರೂಪದಲ್ಲಿ ಸಜಾತೀಯರಾದ ದೇವತೆಗಳು ಮಾತ್ರವೇ ಅಲ್ಲದೆ, ಪ್ರಕೃತರೂಪದಲ್ಲಿ ಸಜಾತೀಯಗಳಾದ ಪಕ್ಷಿಜಾತಿಗಳೂ ಕೈಬಿಟ್ಟುವೆಂದು ಸೂಚಿತವು. ಇವರೆಲ್ಲರೂ ಕೈಬಿಟ್ಟರೂ ಅನ್ಯಶಂಸ್ಯವೇ ಪ್ರಧಾನಧರ್ಮವಾಗಿ ಉಳ್ಳ ಮಹರ್ಷಿಗಳಿಗಾದರೂ ಅವನಲ್ಲಿ ಮರುಕವಿಲ್ಲದೆ ಹೋಯಿತೆ? ಎಂದರೆ (ಸಮಹರ್ಷಿಭಿಃ) ಮಹರ್ಷಿಗಳೂ ಅವನನ್ನು ರಕ್ಷಿಸದೆ ತ್ಯಜಿಸಿಬಿಟ್ಟರು. ಋಷಿಗಳೆಂದರೆ ಬಹಳ ದೂರದರ್ಶಿಗಳೆಂದರ್ಥವು. ತಮ್ಮ ಅನ್ಯಶಂಸ್ಯಕ್ಕೆ ಏರ್ಪಟ್ಟಿರುವ ಎಲ್ಲೆಯು ಎಷ್ಟುಮಾತ್ರವೆಂಬುದನ್ನು ತಿಳಿದು ಕೊಂಡು, ತಾವೂ ಅವನನ್ನು ಕೈಬಿಟ್ಟರೆ, ದೇರೆ ದಿಕ್ಕಿಲ್ಲದುದಕ್ಕಾಗಿ ಅವನು ರಾಮನಲ್ಲಿಯೇ ಮರೆಹೊಕ್ಕು ಅವನಿಂದುದ್ಧೃತನಾಗಬಹುದೆಂದು ದೂರದೃಷ್ಟಿಯಿಂದ ಪರ್ಯಾಲೋಚಿಸಿ, ಋಷಿಗಳೂ ಕೈಬಿಟ್ಟುದಾಗಿ ಭಾವವು. ಆ ಋಷಿಗಳು ಇವನನ್ನು ಸಮೀಪಕ್ಕಾದರೂ ಬರಮಾಡಿಕೊಂಡು ಅವನ ಕಷ್ಟಸುಖಗಳನ್ನು ವಿಚಾರಿಸಿ ಕಳುಹಿಸಿದರೆ? ಎಂದರೆ (ಪರಿತ್ಯಕ್ತಃ) ಅವನನ್ನು ಸಮೀಪಕ್ಕೂ ಬರಮಾಡಿಕೊಳ್ಳದೆ ಹೊರಡಿಸಿದರೆಂದರ್ಥವು.ಏಕೆಂದರೆ "ಯಃ ಪುತ್ರಃ ಪಿತರಂ ದ್ವೇಷ್ಟಿ ತಂ ವಿದ್ಯಾದನೃತೇಷಮ್। ಯಸ್ತು ನಾರಾಯಣಂ ದ್ವೇಷ್ಟಿ ತಂ ವಿದ್ಯಾದಂತ್ಯರೇತಸಮ್" ಎಂಬಂತೆಯೂ, "ಚಾಂಡಾಲಃ ಪಕ್ಷಿಜಾಂ ಕಾಕಃ" ಎಂಬಂತೆಯೂ, ವಿಷ್ಣುದ್ವೇಷರೂಪವಾದ ಕರ್ಮದಿಂದಲೂ, ಜಾತಿಯಿಂದಲೂ ಚಂಡಾಲನೆನಿಸಿಕೊಂಡ ಆ ಕಾಗೆಯನ್ನು ತಮ್ಮ ಆಶ್ರಮದ ಬಾಗಿಲಿಗೂ ಬರಗೊಡಿಸದೆ ಓಡಿಸಿದರೆಂದು ಭಾವವು. ಇದರಿಂದ ಅತನು (ತ್ರೀಣ್ ಲೋಕಾನ್ ಸಂಪರಿಕ್ರಮ್ಯ) ಭೂಮ್ಯಂತರಿಕ್ಷಸ್ವರ್ಗಗಳೆಂಬ ಮೂರು ಲೋಕ

ಪ್ರಿಯನಾದ ರಾಮನನ್ನೇ ಮರೆಹೊಕ್ಕಿತು. [1] ಲೋಕಶರಣ್ಯನಾದ ಆ ರಾಮನಾದರೋ ಹೀಗೆ ತನ್ನಲ್ಲಿ ಮರೆಹೊಕ್ಕು, ತನ್ನ ಮುಂದೆ ನೆಲದಮೇಲೆ ಬಿದ್ದು ಹೊರಳುತ್ತಿದ್ದ ಆ ಕಾಗೆಯನ್ನು ನೋಡಿ, ಅವನು ವಧಾರ್ಹನಾಗಿದ್ದರೂ ಅವನಲ್ಲಿ ಮರುಕಗೊಂಡು ಕೃಪೆಯಿಂದ ರಕ್ಷಿಸಿಬಿಟ್ಟನು. ಆ ವಾಯಸವು ಯಾವಯಾವ ಲೋಕಗಳನ್ನು ತಿರುಗಿದರೂ, ರಾಮನುಪ್ರಯೋಗಿಸಿದ ಹುಲ್ಲಿನಿಂದ ತಪ್ಪಿಸಿಕೊಳ್ಳಲಾರದೆ ಆತನಲ್ಲಿಯೇ ಮರೆಹುಗಬೇಕಾಯಿತು. ಹೀಗೆ ಭಯದಿಂದಲೂ, ದುಃಖದಿಂದಲೂ ಬಂದು ತನ್ನಲ್ಲಿ ಶರಣಾಗತನಾದ ಆ ಕಾಗೆಯನ್ನು ನೋಡಿ, ನನ್ನ ಪ್ರಿಯನಾದ ರಾಮನು, ಆತನಲ್ಲಿ ದಯಾದೃಷ್ಟಿಯಿಂದ "ಎಲೈ ವಾಯಸನೆ! ಈಗ ನಾನು

ಗಳನ್ನೂ ತಿರುಗಿಬಂದು, ಭೂಮಿಯಲ್ಲಿ ಮಹರ್ಷಿಗಳಿಂದಲೂ, ಅಂತರಿಕ್ಷದಲ್ಲಿ ಸಜಾತೀಯ ಪಕ್ಷಿಗಳಿಂದಲೂ, ಸ್ವರ್ಗದಲ್ಲಿ ದೇವತೆಗಳಿಂದಲೂ ತಿರಸ್ಕೃತನಾಗಿ, (ಸಂಪರಿಕ್ರಮ್ಯ) ಒಂದಾವರ್ತಿಯಲ್ಲ! ಎರಡಾವರ್ತಿಯಲ್ಲ! ಅನೇಕಾವರ್ತಿ ಸುತ್ತಿಸುತ್ತಿ ಬಂದು, ತಿಕೊನೆಗೆ (ತಮೇವ ಶರಣಂಗತಃ) ಆ ರಾಮನನ್ನೇ ಮರೆಹೊಕ್ಕನು. "ಸಗಡಹುವನೆಡಹನೆನ್ನೇಹವಾಡುವ ಪಕ್ಕಿಂತಲೂ ಗಂಧದದನೆಡನೆ ಗುದ್ದಾಡುವುದೇ ಲೇಸು" ಎಂಬ್ಲಿನಾಮತಿಯಂತೆ, ತನಗೆ ರಕ್ಷಕರಾಗಿ ಬರುವ ಬೇರೆ ದೇವತಾದಿಗಳಿಗಿಂತಲೂ, ತನ್ನನ್ನು ಕೊಲ್ಲುವುದಕ್ಕಾಗಿ ಬಂದ ಆ ರಾಮನ ಮುಖವೇ ಅಪ್ಯಾಯನಕರವೆಂಬ್ಭಾವದಿಂದ, ಅವನಲ್ಲಿಯೇ ಮರೆಹೊಕ್ಕನೆಂದೂ ಭಾವವು. ಮತ್ತು (ತಮೇವ) ಯಾವನು "ಯದಿ ವಾ ರಾವಣಸ್ವಯಮ್" ಎಂದಾಗಿ ತನ್ನಲ್ಲಿ ಮಹಾಪರಾಧಿಯಾದ ರಾವಣನನ್ನೂ ರಕ್ಷಿಸುವುದಾಗಿದ್ದನೋ ಅತನನ್ನೇ ಮರೆಹೊಕ್ಕನು. (ತಮೇವ) "ದೋಷೋ ಯದ್ಯಪಿ[ತಸ್ಯ ಸ್ಯಾತ್, ನ ಹೃಜೇಯಂ" ಅವನಲ್ಲಿ ಯಾವ ದೋಷವಿದ್ದರೂ ಇರಲಿ! ನಾನು ಕೈಬಿಡುವವನಲ್ಲ" ಎಂದು ಹೇಳಿದ ಪರಮಪ್ರಯೋಜನಾದ ಆ ರಾಮನಲ್ಲಿಯೇ ಮರೆಹೊಕ್ಕನು. (ಶರಣಂ ಗತಃ) ಉಪಾಯಬುದ್ಧಿಯಿಂದ ಸೇರಿದವನಲ್ಲ. "ನಿವಾಸವೃಕ್ಷಸ್ಸಾಧೂನಾಮ್" ಎಂಬಂತಿರುವ ಆತನನ್ನೇ ಆಶ್ರಯಸ್ಥಾನವನ್ನಾಗಿಯೂ ಸೇರಿದನೆಂದು ಭಾವವು. ಈ ಶ್ಲೋಕಾರ್ಥದಿಂದ ಭಗವಂತನಲ್ಲಿ ರಕ್ಷಣೆಯನ್ನು ಬೇಡುವುದಕ್ಕೆ, ಅಪರಾಧಭೂಯಿಷ್ಠತ್ವವೂ, ಅನನ್ಯಗತಿತ್ವವೂ ಸಾಧನಗಳಾಗಿ ಹೇಳಲ್ಪಟ್ಟಿರುವುವಲ್ಲದೆ, ತನ್ನಲ್ಲಿ ಎಷ್ಟೇ ಮಹಾಪರಾಧಿಗಳಾಗಿದ್ದರೂ ಕೂಡ, ಬೇರೆ ಗತಿಯಿಲ್ಲದೆ, ತನ್ನನ್ನೇ ದಿಕ್ಕಾಗಿ ಹೊಂದಿದರೆ ಈಶ್ವರನು ತಾನೇ ರಕ್ಷಿಸುವನೆಂದೂ ಸೂಚಿತವು.

1. ಇಲ್ಲಿ "ಸ ತಂ ನಿಪತಿತಂ ಭೂಮೌ ಶರಣ್ಯಶ್ಶರಣಾಗತಮ್ | ವಧಾರ್ಹಮಪಿ ತಾಕ್ಷುಷ್ಯಃ ಕೃಪಯಾ ಪರ್ಯಪಾಲಯತ್" ಎಂಬ ಮೂಲವು. ವಿಶೇಷಾರ್ಥವು:—(ಸಃ) ಅತಿಶಯರಕ್ಷಣಾಪೂರ್ವಕವೇ ಸ್ವಭಾವವಾಗಿ ಉಳ್ಳ ಆತನು(ತಂ) ದಾಕ್ಷಿಣ್ಯವೇ ಸ್ವಭಾವವಾಗಿಉಳ್ಳ ಆ ಕಾಕಾಸುರವನ್ನು, (ಭೂಮೌ ನಿಪತಿತಂ) ದೇವತಾತಿಯವನಾದುದರಿಂದ ಭೂಮಿಯನ್ನು

ಪ್ರಯೋಗಿಸಿರುವ ಈ ಬ್ರಹ್ಮಾಸ್ತ್ರವಾದರೋ, ಹೇಗೂ ನಿರರ್ಥಕವಾಗಿ ಹೋಗತಕ್ಕುದಲ್ಲ. ಇದಕ್ಕೆ ನಾನು ಮಾಡಬೇಕಾದುದೇನು? ಈ ನನ್ನ ಬ್ರಹ್ಮಾಸ್ತ್ರವೂ ವ್ಯರ್ಥವಾಗದೆ, ನಿನ್ನ ಪ್ರಾಣವೂ ಉಳಿಯುವುದಕ್ಕೆ ಉಪಾಯವೇನು?" ಎಂದನು. ಆಗ ವಾಯಸವು, ತನ್ನ ಪ್ರಿಯನನ್ನು ಕುರಿತು "ರಾಮಾ! ಹಾಗಿದ್ದರೆ, ಈ ನಿನ್ನ ಬಾಣವು ನನ್ನ ಬಲದ ಕಣ್ಣನ್ನು ಕೆಡಿಸಲಿ" ಎಂದಿತು. ಆಗ ರಾಮನು ಆ ಬ್ರಹ್ಮಾಸ್ತ್ರದಿಂದ ಆ ಕಾಗೆಯ ಬಲದ ಕಣ್ಣನ್ನು ಕೆಡಿಸಿಬಿಟ್ಟನು. ಹೀಗೆ ಆ ವಾಯಸವು ತನ್ನ ಬಲದ ಕಣ್ಣನ್ನು ಮಾತ್ರ ಬ್ರಹ್ಮಾಸ್ತ್ರಕ್ಕೆ ಗುರಿಮಾಡಿ ತನ್ನ ಪ್ರಾಣವನ್ನುಳಿಸಿಕೊಂಡಿತು. ಅಮೇಲೆ ವಾಯಸವು ನನ್ನ ಪ್ರಿಯನಾದ ರಾಮನಿಗೂ, ಸ್ವರ್ಗದಲ್ಲಿ ತನಗೆ ಸಖನಾದ ದಶರಥಮಹಾರಾಜನಿಗೂ ನಮಸ್ಕರಿಸಿ, ಆ ರಾಮನಿಂದ ಅನುಜ್ಞೆಯನ್ನು ಪಡೆದು, ತನ್ನ ನಿವಾಸಕ್ಕೆ ಹೊರಟುಹೋಯಿತು. ಎಲೈ ಹನುಮಂತನೆ! ಈ ನಮ್ಮ ಸಂಕೇತ ವೃತ್ತಾಂತಗಳೆಲ್ಲವನ್ನೂ ನನ್ನ ಪ್ರಿಯನಾದ ರಾಮನಿಗೂ ತಿಳಿಸು! ಮತ್ತು ನೀನು ಆ ರಾಮನಲ್ಲಿಗೆ ಹೋಗಿ ನಾನು ಹೇಳಿದುದಾಗಿ ಈ ಮಾತುಗಳನ್ನೂ ಹೇಳು. "ಎಲೆ ನಾಥನೆ! ಮೊದಲು ನೀನು ನನಗಾಗಿ ಅತ್ಯಲ್ಪಜಂತುವಾದ ಒಂದು ಕಾಗೆಯಲ್ಲಿಯೂ ಕೂಡ ಅಷ್ಟು ದೊಡ್ಡ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದೆಯಲ್ಲವೆ? ಈಗ ನಿನ್ನನ್ನೇ ನಂಬಿಸಿ, ನನ್ನನ್ನು ಕದ್ದುತಂದ ಮಹಾಪರಾಧಿಯಾದ ಈ ರಾವಣನ ವಿಷಯದಲ್ಲಿ ಕ್ಷಮೆಯನ್ನು ತೋರಿಸುವೆಯಾ? [1] ಎಲೈ ಪುರುಷಶ್ರೇಷ್ಠನೆ! ನೀನು ದಯಾನಿಧಿಯೆಂದು ಲೋಕಪ್ರಸಿದ್ಧನಾದವನಲ್ಲವೆ?

ಸ್ಪರ್ಶಿಸಲಾರದಾಗಿದ್ದರೂ, ಅದನ್ನೂ ಎಡೆಸದೆ ನೆಲದಲ್ಲಿ ಬಿದ್ದಿರುವವನು. (ಭೂಮೌನಿಪತಿತಂ) ತಂದೆಯು ಮಗನನ್ನು ಶಿಕ್ಷಿಸುವಾಗ, ಆ ಮಗನು ತಾಯಿಯ ಪಾದದಲ್ಲಿ ಬೀಳುವಂತೆ, ಜಗತ್ಪತಿಯಾದ ರಾಮನ ಕ್ರೋಧಕ್ಕೊಳಪಟ್ಟು, ಅವನ ಪತ್ನಿಯಾದ ಭೂಮಿಯನ್ನು ಮರೆಹೊಕ್ಕಂತಿರುವವನು. ಇಂತಹ ಕಾಕಾಸುರನನ್ನು (ಶರಣ್ಯಃ) ಸರ್ವಾವಸ್ಥೆಗಳಲ್ಲಿಯೂ ಶರಣುಹೊಂದುವುದಕ್ಕೆ ತಕ್ಕವನಾದ (ಕಾಕುತ್ಸ್ಥಃ) ಶರಣಾಗತರಕ್ಷಣವೇ ಕುಲಧರ್ಮವಾಗಿ ಉಳ್ಳ ರಾಮನು (ವಧಾರ್ಹಮಪಿ) ತನಗೇ ಕೊಲ್ಲಬೇಕೆಂದು ತೋರಿದ್ದರೂ, (ಕೃಪಯಾ ಪರ್ಯಪಾಲಯತ್) ತನ್ನ ಕೃಪೆಗೇ ತಾನು ವಶನಾಗಿ ರಕ್ಷಿಸಿಬಿಟ್ಟನು. ಎಂದರೆ, ನಮ್ಮಂತವರು ಪ್ರಯತ್ನಿಸಿದ ಯಾವಕಾರ್ಯವೂಕೂಡ ಪ್ರಬಲಕರ್ಮದಿಂದ ನಿಂತು ಹೋಗುವಂತೆ. ಇಲ್ಲಿ ಈಶ್ವರಪ್ರಯತ್ನವೂ ಕೃಪಾಧೀನವಾಗಿ ಪೂರ್ತಿಹೊಂದದೆ ನಿಂತಿತೆಂದು ಭಾವವು.

1. ಇಲ್ಲಿ "ಸ ಕುರುಷ್ವ ಮಹೋತ್ಸಾಹಃ ಕೃಪಾಂ ಮಯಿ ನರರ್ಷಭ" ಎಂದು ಮೂಲವು. ವಿಶೇಷಾರ್ಥವು:—(ಸಃ) ಇಕರರ ದುಃಖವನ್ನು ನೋಡಿ "ನ ಸಹಾಮಹೇ" ನಾವು ಸ್ವಲ್ಪವೂ ಸಹಿಸಲಾರೆವು" ಎಂದು ಹೇಳಿದಂತವನು, ಮತ್ತು (ಮಹೋತ್ಸಾಹಃ) ಹಾಗೆ ಬಾಯಿಂದ ಹೇಳಿದುದು ಮಾತ್ರವೇ ಅಲ್ಲದೆ, ಅದನ್ನು ಅನುಷ್ಠಾನಪರ್ಯಂತವಾಗಿಯೂ ನಡೆಸತಕ್ಕವನು,

ಆ ದಯೆಯನ್ನು ನನ್ನಲ್ಲಿ ತೋರಿಸಬೇಡವೆ? ನಿನ್ನ ಮಹೋತ್ಸಾಹಗಳೆಲ್ಲವನ್ನೂ ಉಪಯೋಗಿಸಿ ನನ್ನನ್ನು ರಕ್ಷಿಸಬೇಡವೆ? ನೀನು ನನಗೆ ನಾಥನಾಗಿರುವಾಗಲೂ, ನನ್ನನ್ನು ಅನಾಥೆಯನ್ನಾಗಿ ಬಿಟ್ಟಿರುವೆಯಲ್ಲಾ! ಇದು ನಿನಗೆ ನ್ಯಾಯವೆ? ದಯಾಗುಣವೇ ಪರಮಧರ್ಮವೆಂಬುದನ್ನು ನಿನ್ನ ಬಾಯಿಂದಲೇ ನಾನು ಕೇಳಿರುವೆನು. ಹೀಗೆ ಹೇಳುತಿದ್ದ ನೀನೇ ಈಗ ನನ್ನ ವಿಷಯದಲ್ಲಿ ದಯಾಶೂನ್ಯನಾಗಿರಬಹುದೆ? ನೀನು ಮಹಾವೀರ್ಯವುಳ್ಳವನೆಂಬುದನ್ನೂ, ನಿನ್ನ ಮಹೋತ್ಸಾಹವನ್ನೂ, ನಿನ್ನ ಮಹಾಬಲವನ್ನೂ ನಾನು ಚೆನ್ನಾಗಿ ಬಲ್ಲೆನು. ಮತ್ತು ನಿನ್ನ ಕಲ್ಯಾಣಗುಣಗಳಿಗೆ ಕೊನೆಮೊದಲಿಲ್ಲವೆಂಬುದನ್ನೂ ತಿಳಿದಿರುವೆನು. ಎಂತಹ ಕಷ್ಟಗಳಲ್ಲಿಯೂ ನಿನ್ನ ಮನಸ್ಸು ಕದಲದೆಂಬುದನ್ನೂ ಬಲ್ಲೆನು. ಸಮುದ್ರದಂತೆ ನೀನು ಗಂಭೀರಸ್ವಭಾವನೆಂಬುದನ್ನೂ ಬಲ್ಲೆನು! ಸಮುದ್ರಮೇಖಲೆಯಾದ ಈ ಸಮಸ್ತಭೂಮಿಗೂ ನೀನೇ ಪ್ರಭುವೆಂಬುದನ್ನೂ, ಪರಾಕ್ರಮದಲ್ಲಿ ಇಂದ್ರನಿಗೆಣೆಯೆಂಬುದನ್ನೂ ನಾನು ಚೆನ್ನಾಗಿ ಬಲ್ಲೆನು. ಹೀಗಿದ್ದರೂ, ನೀನು ನನ್ನಲ್ಲಿ ದಯೆಯಿಲ್ಲದಿರಬಹುದೆ?'' ಎಂದು ನಾನು ಹೇಳಿದುದಾಗಿ ನನ್ನ ಪ್ರಿಯನಿಗೆ ತಿಳಿಸು. ಎಲೈ ಕಪಿವೀರನೆ! ನನ್ನ ಪ್ರಿಯನಾದ ಆ ರಾಮನು, ಅಸ್ತ್ರವಿದ್ಯೆಗಳಲ್ಲಿ ಮೇಲೆನಿಸಿಕೊಂಡು, ಸತ್ಯವಂತನಾಗಿ, ಬಲಾಢ್ಯನಾಗಿದ್ದರೂ, ಹೀಗೆ ಇಲ್ಲಿ ನನ್ನನ್ನು ಬಾಧಿಸುತ್ತಿರುವ ಈ ರಾಕ್ಷಸನಮೇಲೆ ತನ್ನ ದಿವ್ಯಾಸ್ತ್ರವನ್ನು ಪ್ರಯೋಗಿಸದಿರುವುದೇಕೆ! ನಾಗರಾಗಲಿ, ಗಂಧರ್ವರಾಗಲಿ, ದೇವತೆಗಳಾಗಲಿ, ದಾನವರಾಗಲಿ ಯುದ್ಧದಲ್ಲಿ ರಾಮನ ವೇಗವನ್ನು ತಡೆಯುವುದಕ್ಕೆ ಶಕ್ತರಲ್ಲ. ಇಂತಹ ಮಹಾವೀರ್ಯವುಳ್ಳ ಆ ರಾಮನಿಗೆ ನನ್ನನ್ನು ಕರೆಸಿಕೊಳ್ಳಬೇಕೆಂಬ ಅತುರವು ಸ್ವಲ್ಪಮಾತ್ರವಾದರೂ ಇದ್ದಪಕ್ಷದಲ್ಲಿ, ಇಲ್ಲಿನ ರಾಕ್ಷಸರೆಲ್ಲರನ್ನೂ ತನ್ನ ತೀಕ್ಷ್ಣಬಾಣಗಳಿಂದ ನಾಶಹೊಂದಿಸದಿರುವುದೇಕೆ? ಆ ಲಕ್ಷ್ಮಣನೋ ಅಸಾಧಾರಣ ಪರಾಕ್ರಮವುಳ್ಳವನು. [1] ಅವನಿಗೂ ಯಾವ ಶತ್ರುಗಳನ್ನಾದರೂ ಜಯಿಸುವ ಶಕ್ತಿಯುಂಟು. ಅತನಾದರೂ ತನ್ನಣ್ಣನಾಜ್ಞೆಯನ್ನು ಪಡೆದು ಇಲ್ಲಿಗೆ ಬಂದು ಘನ್ನನ್ನೇಕೆ ರಕ್ಷಿಸಬಾರದು? ವಾಯ್ವಗ್ನಿಗಳಂತೆ ಮಹಾತೇಜಸ್ವಿಗಳಾಗಿ, ದೇವತೆಗಳಿಗೂ ದುರ್ಜಯರಾದ ಆ ಪುರುಷಶ್ರೇಷ್ಠರಿಬ್ಬರೂ ಸೇರಿರುವಾಗಲೂ, ನನ್ನನ್ನು

ಇಂತಹ ನೀನು (ಮಯಿ) ಹೀಗೆ ಪುಃಖಿತೆಯಾದ ನನ್ನಲ್ಲಿ (ಕೃಪಾಂ) ಪರದುಃಖ ಸಹಿಷ್ಣುತ್ವವೆಂಬ ಧರ್ಮವನ್ನು (ಕುರುಷ್ವ) ಪ್ರಕಾಶಪಡಿಸು. (ನರರ್ಷಭ) ನೀನು ಹಾಗೆ ಮಾಡದಿದ್ದಪಕ್ಷದಲ್ಲಿ ನಿನ್ನ ಪುರುಷೋತ್ತಮತ್ವಕ್ಕೆ ಹಾನಿಯುಂಟಾಗುವುದು. ಅದುದರಿಂದ ನೀನು ಬಾಯಿಂದಾಡಿರುವ ಮಾತನ್ನೇ ಅನುಷ್ಠಾನಪರ್ಯಂತವಾಗಿ ನಡೆಸಿ, ನನ್ನನ್ನೂ ಬದುಕಿಸಿ, ನಿನಗಿರುವ ಪುರುಷೋತ್ತಮತ್ವವನ್ನೂ ಕಾಪಾಡಿಕೊಳ್ಳುವುದೆಂದು ಭಾವವು.

ಹೀಗೆ ಉಪೇಕ್ಷಿಸಿ ಬಿಟ್ಟಿರುವುದೇಕೆ? ಎಲೈ ಕಪಿಶ್ರೇಷ್ಠನೆ! ಇನ್ನೆಷ್ಟು ಹೇಳಿದರೇನು? ಆ ರಾಮಲಕ್ಷ್ಮಣರಿಬ್ಬರೂ ಇಷ್ಟು ಸಮರ್ಥರಾಗಿದ್ದರೂ, ನನ್ನ ಕಷ್ಟವನ್ನು ಬಿಡಿಸದೆ ಉದಾಸೀನರಾಗಿರುವುದನ್ನು ನೋಡಿದರೆ, ನಾನು ಮಾಡಿದ ಮಹಾಪಾಪವೇ ಇದಕ್ಕೆ ಕಾರಣವೆಂದೆಣಿಸಬೇಕಾಗಿದೆ. ನಾನು ಯಾರೂ ಮಾಡದ ಯಾವುದೋ ಒಂದು ಮಹಾಪಾಪವನ್ನು ನಡೆಸಿರಬೇಕು. ಇದರಲ್ಲಿ ಸಂದೇಹವಿಲ್ಲ. ನನ್ನ ಪಾಪವೇ ಹೀಗೆ ನನ್ನನ್ನು ಪೀಡಿಸಬಹುದು" ಎಂದಳು. ಹೀಗೆ ಸೀತೆಯು ಕಣ್ಣೀರುಬಿಡುತ್ತ, ಕರುಣೆಹುಟ್ಟುವಂತೆ ಹೇಳಿದ ಮಾತನ್ನು ಕೇಳಿ, ತಿರುಗಿ ಹನುಮಂತನು ಆಕೆಯನ್ನು ಕುರಿತು "ಎಲೆ ದೇವಿ! ರಾಮನು ನಿನ್ನ ವಿಷಯವಾದ ದುಃಖದಿಂದ ಪರವಶನಾಗಿ, ಸಮಸ್ತವಿಷಯಗಳಲ್ಲಿಯೂ ವಿಮುಖನಾಗಿರುವನು. ಬೇಕಾದರೆ ಈ ವಿಷಯದಲ್ಲಿ ನಾನು ಸತ್ಯದಮೇಲೆ ಆಣೆಯಿಟ್ಟು ಹೇಳುವೆನು. ಆ ರಾಮನು ಮಾತ್ರವೇ ಅಲ್ಲ. ಆತನ ದುಃಖವನ್ನು ನೋಡಿದಾಗ ಲಕ್ಷ್ಮಣನೂ ಸಂಕಟದಿಂದ ತಪಿಸುವನು. ಎಲೆ ದೇವಿ! ಅವೆಲ್ಲವೂ ಹಾಗಿರಲಿ! ನಾನು ಎಷ್ಟೋ ಪ್ರಯತ್ನದಿಂದ ನಿನ್ನನ್ನು ನೋಡುವಂತಾಯಿತಲ್ಲವೆ? ಇದಕ್ಕಾಗಿ ಈಗ ನೀನು ಸಂತೋಷಿಸುತ್ತಿರಬೇಕೇ ಹೊರತು ದುಃಖಿಸಬಾರದು. ಇನ್ನೇಕೆ ಚಿಂತಿಸುವೆ? ಇನ್ನು ಈ ಮುಹೂರ್ತದೊಳಗಾಗಿಯೇ ನಿನ್ನ ದುಃಖಕ್ಕೆ ಕೊನೆಯನ್ನು ಕಾಣುವೆ! ಪುರುಷಸಿಂಹರಾದ ಆ ರಾಜಕುಮಾರರಿಬ್ಬರೂ ನಿನ್ನನ್ನು ನೋಡಬೇಕೆಂಬ ಆತುರದಿಂದಲೇ ಇರುವುದರಿಂದ ಶೀಘ್ರದಲ್ಲಿಯೇ ಅವರಿಬ್ಬರೂ ಇಲ್ಲಿಗೆ ಬಂದು ಲಂಕೆಯನ್ನು ಭಸ್ಮಮಾಡುವರು. ಎಲೆ ವಿಶಾಲಾಕ್ಷಿ! ಶೀಘ್ರದಲ್ಲಿಯೇ ಶ್ರೀರಾಮನು ರಾವಣನನ್ನು ಅವನ ಪರಿವಾರಗಳೊಡನೆ ಯುದ್ಧದಲ್ಲಿ ಕೊಂದು ನಿನ್ನನ್ನು ತನ್ನ ನಗರಿಗೆ ಕರೆದುಕೊಂಡು ಹೋಗುವನು. ಮುಖ್ಯವಾಗಿ ಈಗ ನೀನು ನಿನ್ನ ಪ್ರಿಯನಾದ ರಾಮನಿಗೂ, ಮಹಾಬಲಾಢ್ಯನಾದ ಲಕ್ಷ್ಮಣನಿಗೂ, ತೇಜಸ್ವಿಯಾದ ಸುಗ್ರೀವನಿಗೂ, ಅಲ್ಲಿ ನೆರೆದಿರತಕ್ಕ ಇತರ ವಾನರರಿಗೂ, ಫನ್ನೊಡನೆ ಹೇಳಿ ಕಳುಹಿಸಬೇಕಾದ ಮಾತುಗಳೇನಾದರೂ ಇದ್ದರೆ ಅದನ್ನು ಹೇಳು!" ಎಂದನು. ಹನುಮಂತನು ಹೇಳಿದ ಈ ಮಾತನ್ನು ಕೇಳಿ ದೇವಕನ್ಯೆಯಂತಿರುವ ಸೀತೆಯು, ವ್ಯಸನದಿಂದ ತಪಿಸುತ್ತ, ಆ ಹನುಮಂತನನ್ನು ಕುರಿತು, "ಎಲೆ ಭದ್ರನೆ! ಈಗ ನಾನು ಆ ರಾಮನಿಗೆ ಹೇಳಿ ಕಳುಹಿಸಬೇಕಾದ ಮಾತು ಬೇರೇನಿರುವುದು? [1] ಉದಾರಮನಸ್ಸುಳ್ಳ ಕೌಸಲ್ಯೆಯು ಲೋಕರಕ್ಷ

1. ಇಲ್ಲಿ "ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮನಸ್ವಿನೀ ತಂ ಮಮಾರ್ಥೇ ಶುಭಂ ಪೃಚ್ಛ ಶಿರಸಾಜಾಘ್ರವಾದಯ" ಎಂದು ಮೂಲವು. ವಿಶೇಷಾರ್ಥವು:—ಲೋಕ

ಣಾರ್ಥವಾಗಿಯೇ ಯಾವನನ್ನು ಹಡೆದಿರುವಳೋ, ಆಪ್ತರುಜೋತ್ತಮನನ್ನು ನನ್ನ ಮಾತಿನಿಂದ ನೀನು ಕ್ಷೇಮವನ್ನು ವಿಚಾರಿಸು! ನನಗಾಗಿ ನೀನು ಆತನಿಗೆ ತಲೆ

ದಲ್ಲಿ ಸ್ತ್ರೀಯರು ಇಹಪರಲೋಕಗಳಲ್ಲಿ ತಮಗೆ ರಕ್ಷಣೆಯನ್ನು ಕೋರಿಯೇ ಮಕ್ಕಳನ್ನು ಬಯಸುವರು. ಕೌಸಲ್ಯೆಯಾದರೋ ಹಾಗಲ್ಲವು. (ಮನಸ್ವಿನೀ) ಉದಾರ ಮನಸುಳ್ಳವಳು. ಅದುದರಿಂದಲೇ ಆಕೆಯು ಸ್ವಪ್ರಯೋಜನದಲ್ಲಿ ದೃಷ್ಟಿಯಿಡದೆ ಇತರರ ಶ್ರೇಯಸ್ಸನ್ನೇ ಬಯಸಿದವಳಾಗಿ, (ಲೋಕಭರ್ತ್ತಾರಂ ಸುಷುವೇ) ಸಮಸ್ತಲೋಕವನ್ನೂ ಸುಖದಿಂದ ಪೋಷಿಸಿ ಭರಿಸಶಕ್ತ ಪುತ್ರನೇ ತನಗಾಗಬೇಕೆಂದು ಸಂಕಲ್ಪಿಸಿ, ಅದಕ್ಕಾಗಿ ಎಷ್ಟೋ ವ್ರತಗಳನ್ನನುಷ್ಠಿಸಿ, ಲೋಕೋಪಕಾರಾರ್ಥವಾಗಿಯೇ ಈ ಪುತ್ರನನ್ನು ಪಡೆದಿರುವಳು. ಆ ಕೌಸಲ್ಯೆಯ ಸಂಕಲ್ಪವು ಸಾರ್ಥಕವಾಗಿದ್ದಪಕ್ಷದಲ್ಲಿ ಲೋಕರಕ್ಷಣೆಗಾಗಿ ಅವತರಿಸಿದ ರಾಮನು ನನ್ನನ್ನೇಕೆ ರಕ್ಷಿಸಬಾರದು? ನಾನೂ ಲೋಕದ ಜನರಲ್ಲಿ ಸೇರಿದವಳಲ್ಲವೆ'' ಎಂದು ಭಾವವು. (ತಂ ಮಮಾರ್ತ್ಥೇ ಸುಖಂ ಪೃಚ್ಛ) ನನಗಾಗಿ ನೀನು ಆತನ ಕ್ಷೇಮವನ್ನು ಕೇಳು, ನನ್ನನ್ನು ರಕ್ಷಿಸಬೇಕೆಂದು ನಾನು ಕೇಳಿಕೊಳ್ಳಲಾರೆನು. ಆ ಚಿಂತೆಯು ಅವನಿಗೇ ಸೇರಿದುದು. ಅವನು ಸುಖದಿಂದಿದ್ದ ಪಕ್ಷದಲ್ಲಿ ನನ್ನ ರಕ್ಷಣೆಗೆ ಯಾವ ಕೊರತೆಯೂ ಇರದೆಂದು ಭಾವವು. (ಶಿರಸಾಚಾಭಿವಾದಯ) ಅವನು ಅಗ್ನಿಸಾಕ್ಷಿಕವಾಗಿ ನನ್ನನ್ನು ಗ್ರಹಿಸಿದ ಹಸ್ತದಿಂದಲೇ ನನ್ನನ್ನು ರಕ್ಷಿಸಬೇಕಾಗಿತ್ತು. ಹಾಗಿದ್ದರೂ ಅವನು ನನ್ನನ್ನು ಹಾಗೆ ರಕ್ಷಿಸದೆ ಹೋದನು. ಇನ್ನು ನಾನೂ ಅತನಲ್ಲಿ ಪ್ರಿಯಪತ್ನಿಯೆಂಬ ಸಲುಗೆಯನ್ನು ಬಿಟ್ಟು, ಸಾಮಾನ್ಯಜನರಂತೆಯೇ ತಲೆಬಗ್ಗಿ ನಮಸ್ಕರಿಸಿದೆನೆಂದು ಹೇಳು. ಲೋಕರಕ್ಷಕನಾದ ಅತನು ನನ್ನನ್ನು ಲೋಕಸಾಮಾನ್ಯವಾಗಿಯಾದರೂ ಭಾವಿಸಿ ರಕ್ಷಿಸಲಿ'' ಎಂದು ಭಾವವು. ಇಲ್ಲಿ ''ನಾಯಿಕೆಯು ನಾಯಕನಿಗೆ ಶಿರಸಾಪ್ರಣಾಮವನ್ನು ಮಾಡಿದುದುಚಿತವೆ? ಇದಕ್ಕೆ ಪ್ರಮಾಣವೇನು?'' ಎಂದರೆ, ಆಚಾರಪ್ರಧಾನವಾದ ಜನಕಕುಲದಲ್ಲಿ ಹುಟ್ಟಿದ ಸೀತೆಯೇ ಅನುಷ್ಠಿಸಿರುವಾಗ ಇದಕ್ಕೆ ಬೇರೆ ಪ್ರಮಾಣವೇಕೆ? ಅವಳ ಆಚಾರವೇ ಲೋಕಕ್ಕೂ ಪ್ರಮಾಣವೆಂದು ಗ್ರಾಹ್ಯವು. ಅದರೆ ಪತ್ನಿಯು ಪತಿಗೆ ಶಿರಸಾವಂದನ ಮಾಡಬಾರದೆಂದೂ, ಇಲ್ಲಿ ಸೀತೆಯು ಪ್ರಣಯರೋಷದಿಂದ ಹೀಗೆ ಮಾಡಿರಬಹುದೆಂದೂ ಕೆಲವರು ಸಮಾಧಾನಹೇಳುವರು. ಆದರೆ ಹನುಮಂತನ ವಾಕ್ಯಗಳಿಂದ ಆಗಲೇ ಸೀತೆಗೆ ಕೋಪವು ಶಾಂತವಾಗಿರುವುದರಿಂದ ಅದನ್ನು ಪ್ರಣಯರೋಷವಾಕ್ಯವೆಂದೆಣಿಸುವುದಕ್ಕಿಲ್ಲ. ಅಥವಾ ಇದ್ದ ''ಮಮಾರ್ತ್ಥೇ ಶಿರಸಾಚಾಭಿವಾದಯ'' ಎಂಬುದಕ್ಕೆ ''ನನ್ನ ಕಾರ್ಯಸಿದ್ಧಿಗಾಗಿ ನೀನೇ ನಮಸ್ಕರಿಸು'' ಎಂದು ಹೇಳಿದುದಾಗಿ ಗ್ರಹಿಸಬಾರದೆ? ಎಂದರೆ (ಸುಖಂಪೃಚ್ಛ) ಎಂಬುದರೊಡನೆ ಅನ್ವಯಿಸುವಂತೆಯೇ ಶಿರಃಪ್ರಣಾಮಕ್ಕೂ ಅನ್ವಯಿಸಬೇಕಾದುದರಿಂದ, ತನ್ನ ಮಾತಿನಿಂದಲೇ ಕ್ಷೇಮವನ್ನು ವಿಚಾರಿಸಬೇಕಾದುದು ಅತ್ಯವಶ್ಯವಾಗಿರುವಾಗ, ಇಲ್ಲಿ ಬೇರೆ ಅರ್ಥವನ್ನು ಹೇಳುವುದೂ ಅಷ್ಟಾಗಿ ಸುರಸವಲ್ಲ. ಅದುದರಿಂದ ಸೀತೆಯು ತಾನಾಗಿ ಶಿರಃಪ್ರಣಾಮಮಾಡಿದಂತೆ ಹೇಳಿಕಳುಹಿಸಿದುದಾಗಿಯೇ ಗ್ರಾಹ್ಯವು.

ಬಗ್ಗಿ ನಮಸ್ಕರಿಸು! ಮತ್ತು ಮೇಲಾದ ಪುಷ್ಪಹಾರಗಳೂ, ಇನ್ನೂ ಉತ್ತಮವಾದ ಭೋಗದ್ರವ್ಯಗಳೂ, ಸಮಸ್ತರತ್ನಗಳೂ, ಉತ್ತಮನಾಯಿಕೆಯರೂ, ವಿಸ್ತಾರವಾದ ಈ ಭೂಮಿಯಲ್ಲಿ ಬೇರೊಬ್ಬರಿಗೆ ದುರ್ಲಭವಾದ ಐಶ್ವರ್ಯವೂ ತನಗೆ ವಶವಾಗಿದ್ದರೂ, ಅವೆಲ್ಲವನ್ನೂ ತೊರೆದು, ತಂದೆತಾಯಿಗಳನ್ನು ಮನ್ನಿಸಿ ಅವರನ್ನೂ ಪ್ರಸನ್ನರನ್ನಾಗಿ ಮಾಡಿಕೊಂಡು, ಯಾವನು ತನ್ನಣ್ಣನಾದ ರಾಮನನ್ನು ಹಿಂಬಾಲಿಸಿ ವನಕ್ಕೆ ಹೊರಟನೋ, ಯಾವನಿಂದ ಸುಮಿತ್ರಾದೇವಿಯು ಸುಪುತ್ರವತಿಯೆನಿಸಿಕೊಂಡಳೋ, ಆ ಲಕ್ಷ್ಮಣನ ಗುಣಗಳನ್ನು ಎಷ್ಟುಹೇಳಿದರೂ ಸಾಲದು! ಅತನು ವಿಶೇಷವಾಗಿ ಧರ್ಮಬುದ್ಧಿಯುಳ್ಳವನಾದುದರಿಂದ, ಸರ್ವೋತ್ತಮವಾದ ರಾಜ್ಯಸುಖವನ್ನೂ ತೊರೆದು, ಅಣ್ಣನಲ್ಲಿ ಭಕ್ತಿಯಿಂದ, ಕಾಡಿನಲ್ಲಿಯೂ ಅತನನ್ನು ಹಿಂಬಾಲಿಸುತ್ತ ಅವನಿಗೆ ಬೆಂಬಲವಾಗಿರುವನಲ್ಲವೆ? ಸಿಂಹದಂತೆ ಹೆಗಲುಳ್ಳವನಾಗಿಯೂ, ಮಹಾಬಾಹುವಾಗಿಯೂ, ಉದಾರವಾದ ಕಣ್ಣುಳ್ಳವನಾಗಿಯೂ, ಪ್ರಿಯದರ್ಶನನಾಗಿಯೂ ಇರುವ ಆ ಲಕ್ಷ್ಮಣನು ರಾಮನನ್ನೇ ತಂದೆಯಂತೆ ಭಾವಿಸಿ ನಡೆಯುತ್ತಿರುವನು. ನನ್ನಲ್ಲಿಯೂ ಮಾತೃಭಕ್ತಿಯನ್ನಿಟ್ಟಿರುವನು. ನನ್ನನ್ನು ದುರಾತ್ಮನಾದ ಆ ರಾವಣನು ಕದ್ದುತಂದುದನ್ನು ಮಾತ್ರ ಅವನು ಕಾಣದೆ ಹೋದನು. ಅವನಿಗೆ ಆ ಸೂಚನೆಯು ಸ್ವಲ್ಪಮಾತ್ರವಾದರೂ ತಿಳಿದಿದ್ದರೆ ಆಗಲೇ ಆ ರಾಕ್ಷಸನನ್ನು ಕೊಂದು ನನ್ನನ್ನು ಬಿಡಿಸಿಕೊಳ್ಳುತ್ತಿದ್ದನು ಅವನ ವಿಕ್ರಮಾದಿ ಗುಣಗಳೂ ಹಾಗಿರಲಿ! ಅವನು ಯಾವಾಗಲೂ ಗುರುಹಿರಿಯರನ್ನು ಗೌರವಿಸಿ ಅವರನ್ನು ಸೇವಿಸುವ ಸ್ವಭಾವವುಳ್ಳವನು! ಶ್ರೀಮಂತನು! ಯಾವ ಕಾರ್ಯಗಳಲ್ಲಿಯೂ ಶಕ್ತನು! ವಾದಸಮರ್ಥನಾಗಿದ್ದರೂ ಹೆಚ್ಚುಮಾತುಗಳನ್ನಾಡುವವನಲ್ಲ! ಆ ರಾಜಕುಮಾರನು ಸಮಸ್ತಲೋಕಕ್ಕೂ ಪ್ರಿಯನೆನಿಸಿರುವನು! ಎಲ್ಲರಿಗೂ ತಾನೇ ಮೇಲೆನಿಸಿಕೊಂಡವನು! ಗುಣಗಳಲ್ಲಿ ನನ್ನ ಮಾವನಾದ ದಶರಥರಾಜನನ್ನೇ ಹೋಲುತ್ತಿರುವನು. ಮುಖ್ಯವಾಗಿ ನನ್ನಲ್ಲಿ ಅತನಿಗೆ ಬಹಳ ವಿಶ್ವಾಸವುಂಟು. ಅತನನ್ನು ಆ ರಾಮನಿಗೆ ತಕ್ಕ ತಮ್ಮನೆಂದೇ ಹೇಳಬಹುದು. ವೀರ್ಯವಂತನಾದ ಆ ಲಕ್ಷ್ಮಣನು, ರಾಮನು ತನ್ನ ಮೇಲೆ ಎಂತಹ ಕಾರ್ಯಭಾರವನ್ನು ವಹಿಸಿದರೂ ಅದನ್ನು ತಪ್ಪದೆ ನಡೆಸುವನು. ಎಲ್ಲೆ ಕಪಿವೀರನೆ! ನನ್ನ ಪ್ರಿಯನಾದ ರಾಮನೂ ಕೂಡ ತನ್ನನ್ನು ತಂದೆಯಂತೆ ಪೋಷಿಸುತ್ತಿರುವ ಆ ಲಕ್ಷ್ಮಣನನ್ನು ನೋಡಿ ತನ್ನ ತಂದೆಯ ಸ್ಮರಣೆಯನ್ನೇ ಮರೆತಿರುವನು. ಆ ಲಕ್ಷ್ಮಣನು ಸಹಜವಾಗಿಯೇ ಮೃದುಸ್ವಭಾವವುಳ್ಳವನು. ಶುದ್ಧಾತ್ಮನು. ಕಾರ್ಯಸಮರ್ಥನು. ರಾಮನಿಗೂ ಬಹಳ ಪ್ರೀತಿಪಾತ್ರನು. ಆದುದರಿಂದ ನೀನು ನನ್ನ ಮಾತಿನಿಂದ ಅತನ ಕುಶಲ

ವನ್ನೂ ಕೇಳು. ಎಲೈ ವಾನರೋತ್ತಮನೆ! ಮುಖ್ಯವಾಗಿ ರಾಮನು ಈ ನನ್ನ ದುಃಖವನ್ನು ಕೊನೆಗಾಣಿಸುವಂತೆ ಮಾಡಬೇಕಾದ ಕಾರ್ಯಭಾರವೆಲ್ಲವೂ ನಿನಗೆ ಸೇರಿದೆ. ಮುಖ್ಯವಾಗಿ ನಿನ್ನ ಪ್ರಯತ್ನದಿಂದಲೇ ರಾಮನು ನನ್ನನ್ನು ಕರೆಸಿ ಕೊಳ್ಳುವುದಕ್ಕೆ ತಕ್ಕ ಸನ್ನಾಹವನ್ನು ಮಾಡಬೇಕೇ ಹೊರತು ಬೇರೆಯಲ್ಲ! ನೀನು ಶೀಘ್ರದಲ್ಲಿಯೇ ಹೋಗಿ, ನನ್ನ ಪ್ರಿಯನಾದ ರಾಮನಿಗೆ ಈ ಮಾತನ್ನು ಮಾತ್ರ ಬಾರಿಬಾರಿಗೂ ಹೇಳಬೇಕು. "ಎಲೈ ದಶರಥಪುತ್ರನೆ! ಇನ್ನೊಂದು ತಿಂಗಳುಮಾತ್ರವೇ ನಾನು ನನ್ನ ಪ್ರಾಣಗಳನ್ನು ಇಟ್ಟುಕೊಂಡಿರುವೆನು. ಒಂದು ತಿಂಗಳಮೇಲೆ ಕ್ಷಣಮಾತ್ರವೂ ಬದುಕಿರಲಾರೆನು. ಈ ವಿಷಯದಲ್ಲಿ ಸತ್ಯದ ಮೇಲೆ ಆಣೆಯಿಟ್ಟು ಹೇಳುವೆನು. ದುರಾತ್ಮನಾದ ರಾವಣನು ನನಗೆ ನಿರ್ಣಯಿಸಿಕೊಟ್ಟಿರುವ ಆ ಎರಡು ತಿಂಗಳವರೆಗಾದರೂ ನಾನು ನಿರೀಕ್ಷಿಸಿರಲಾರೆನು. ಎಲೈ ವಾನರನೇ! [1] ಪೂರ್ವದಲ್ಲಿ ಮಹಾವಿಷ್ಣುವು ದೇವತೆಗಳ ಪ್ರಾರ್ಥನೆಯ ಮೇಲೆ ಪಾತಾಳದಲ್ಲಿ ಹುದುಗಿದ್ದ ದೇವೇಂದ್ರನ ರಾಜ್ಯ

---

1. ಮೊದಲು ವೃತ್ರಾಸುರನನ್ನು ಕೊಂದಾಗ ದೇವೇಂದ್ರನಿಗೆ ಬ್ರಹ್ಮಹತ್ಯೆ ಯುಂಟಾಗಿ, ಅದರಿಂದ ಅವನ ರಾಜ್ಯಲಕ್ಷ್ಮಿಯೂ ತೊಲಗಿದಳು. ಆಗ ಮಹಾವಿಷ್ಣುವು ಇತರ ದೇವತೆಗಳೊಡಗೂಡಿ, ಅವನಿಂದ ವೈಷ್ಣವವೆಂಬ ಅಶ್ವಮೇಧಯಾಗವನ್ನು ಮಾಡಿಸಿ, ಬ್ರಹ್ಮಹತ್ಯೆಯನ್ನು ಪನ್ನಾಗಿ ಮಾಡಿ, ತ್ರೈಲೋಕ್ಯರಾಜ್ಯದಲ್ಲಿ ಅವನಿಗೆ ಅಭಿಷೇಕವನ್ನೂ ಮಾಡಿ, ಅವನಿಗೆ ತೊಡಲಿದ್ದ ಇಂದ್ರಲಕ್ಷ್ಮಿಯನ್ನು ಹಿಂತಿರುಗಿ ಬರುವಂತೆ ಕರೆದನು. ಆಗ ಅಶರೀರವಾಣಿಯು, ಆ ಇಂದ್ರಲಕ್ಷ್ಮಿಯು ಗವಾಕ್ಷತೀರ್ಥದಲ್ಲಿರುವುದಾಗಿ ನುಡಿಯಲು, ವಿಷ್ಣುವು ದೇವತೆಗಳೊಡನೆ ಆ ತೀರ್ಥಕ್ಕೆ ಹೋದನು. ಆಗ ಲಕ್ಷ್ಮಿಯು ದೇವತೆಗಳ ಅಗಮನವನ್ನು ನೋಡಿ ಆ ತೀರ್ಥವನ್ನು ಬಿಟ್ಟು ಪಾತಾಳಕ್ಕೆ ಪ್ರವೇಶಿಸಿದಳು. ದೇವತೆಗಳು ಅಲ್ಲಿಗೆ ಹೋಗಲಾರದಿರಲು, ತಿರುಗಿ ಅಶರೀರವಾಣಿಯು ಆ ದೇವತೆಗಳನ್ನು ಕುರಿತು "ನಿಮ್ಮಲ್ಲಿ ಸರ್ವಲಕ್ಷಣಸಂಪನ್ನನಾದವನೊಬ್ಬನುಮಾತ್ರ ಅಲ್ಲಿಹೋಗಿ ಆ ಲಕ್ಷ್ಮಿಯನ್ನು ಕರೆತರಬಹುದು" ಎಂದು ನುಡಿಯಿತು. ಆಗ ದೇವತೆಗಳೆಲ್ಲರೂ ಪುರುಷೋತ್ತಮನಾದ ಶ್ರೀಮನ್ನಾರಾಯಣನನ್ನೇ ಆ ಕಾರ್ಯಕ್ಕೆ ಪ್ರಾರ್ಥಿಸಿಕೊಂಡರು. ಆಗ ವಿಷ್ಣುವು ಪಾತಾಳವನ್ನು ಪ್ರವೇಶಿಸಿ, ಅಲ್ಲಿಂದ ಇಂದ್ರಲಕ್ಷ್ಮಿಯನ್ನು ತಂದು ಇಂದ್ರನಿಗೊಪ್ಪಿಸಿದನು. ಎಂದು ಬ್ರಹ್ಮಪುರಾಣವು. ಬೇರೆ ಕೆಲವರು ಉಚಥ್ಯಪತ್ನಿಯು ಯಮುನೆಯಲ್ಲಿ ಸ್ನಾನಮಾಡುತಿದ್ದಾಗ, ವರುಣನು ಅವಳನ್ನೆತ್ತಿಕೊಂಡು ಪಾತಾಳವನ್ನು ಪ್ರವೇಶಿಸಿದುದಾಗಿಯೂ, ಉಚಥ್ಯನು ನಾರದನ ಮೂಲಕವಾಗಿ ವರುಣನನ್ನು ಪ್ರಾರ್ಥಿಸಿದುದಾಗಿಯೂ, ವರುಣನು ಆಕೆಯನ್ನು ಬಿಡದಿರಲು, ಋಷಿಯು ಕೋಪಗೊಂಡು, ಪಾತಾಳಹ್ರದವನ್ನು ಶೋಷಿಸಿ ತನ್ನ ಪತ್ನಿಯನ್ನು ತಂದುದಾಗಿಯೂ, ಅವಳೇ ಕೌಶಿಕಿಯೆಂದೂ, ಹೇಳಿರುವ ಮಹಾಭಾರತದ ಕಥೆಯೇ ಇಲ್ಲಿ ಅನುಸಂಧೇಯವೆಂದು ಹೇಳುವರು.

ಲಕ್ಷ್ಮಿಯನ್ನು ಕಾಪಾಡಿ ತಂದಂತೆ, ಪಾಪಿಯಾದ ರಾವಣನಿಂದ ನನ್ನನ್ನು ಬಿಡಿಸಿ ರಕ್ಷಿಸಬೇಕು!" ಎಂದು ನನ್ನ ಮಾತಿನಿಂದ ಹೇಳು! ಎಂದಳು. ಆಮೇಲೆ ಸೀತೆಯು ತನ್ನ ಸೆರಗಿನಲ್ಲಿ ಕಟ್ಟಿಟ್ಟಿದ್ದ ದಿವ್ಯವಾದ ತನ್ನ ಚೂಡಾಮಣಿಯನ್ನು ತೆಗೆದು "ಎಲೆ ಭದ್ರನೆ! ಇದನ್ನು ನನ್ನ ಪ್ರಿಯನಾದ ರಾಮನಿಗೆ ಗುರುತಾಗಿ ಕೊಡು" ಎಂದು ಹೇಳಿ ಆಂಜನೇಯನ ಕೈಗೆ ಕೊಟ್ಟಳು. ವೀರನಾದ ಹನುಮಂತನು, ಸರ್ವೋತ್ತಮವಾದ ಆ ಚೂಡಾಮಣಿಯನ್ನು ತೆಗೆದುಕೊಂಡು, ಅದನ್ನು ತನ್ನ [1] ಬೆರಳಿಗೆ ಸಿಕ್ಕಿಸಿಕೊಂಡನು. ಆಗ (ಅತನು ಸೂಕ್ಷ್ಮದೇಹವುಳ್ಳವನಾಗಿಯೇ ಇದ್ದುದರಿಂದ, ಅವನ ಕೈಬೆರಳು ಆ ಚೂಡಾಮಣಿಯ ತೂಬನ್ನು ಸಿಕ್ಕಿಸುವುದಕ್ಕೆ ಶಕ್ಯಂತೆ ಸೂಕ್ಷ್ಮವಾಗಿಯೇ ಇದ್ದಿತು.) ಹೀಗೆ ಆ ಕಪಿಶ್ರೇಷ್ಠನು ಉತ್ತಮರತ್ನವಾದ ಆ ಚೂಡಾಮಣಿಯನ್ನು ಗ್ರಹಿಸಿದಮೇಲೆ, ಸೀತೆಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ವಿನಯದಿಂದ ನಮ್ರನಾಗಿ, ಆಕೆಯ ಪಕ್ಕದಲ್ಲಿ ನಿಂತಿದ್ದನು. ಆತನಿಗೆ ಸೀತಾದರ್ಶನದಿಂದುಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನ ದೇಹವು ಮಾತ್ರ ಅಲ್ಲಿ ನಿಂತಿದ್ದಹಾಗೆ ಕಾಣುತಿದ್ದರೂ, ಅವನು ತನ್ನ ಮನಸ್ಸಿನಿಂದ ಆಗಲೇ ಶ್ರೀರಾಮನ ಸಮೀಪವನ್ನು ಸೇರಿದಂತಿದ್ದನು. ಹೀಗೆ ಹನುಮಂತನು ತನ್ನ ಅಸಾಧಾರಣಸಾಮರ್ಥ್ಯದಿಂದ ಅಶೋಕವನದಲ್ಲಿ ಸೀತೆಯನ್ನು ನೋಡಿ, ಸರ್ವೋತ್ತಮವಾದ ಆಕೆಯ ಚೂಡಾಮಣಿಯನ್ನು ತೆಗೆದುಕೊಂಡು, ಮೊದಲು ಬಿರುಗಾಳಿಯ ಬಡಿತದಿಂದ ಕಂಪಿಸಿ, ಆ ಗಾಳಿಯು ನಿಂತಮೇಲೆ ಸ್ವಸ್ಥವಾಗಿ ನಿಲ್ಲುವ ಪರ್ವತದಂತೆ, ಅದುವರೆಗೆ ಸೀತೆಯು ಸಿಕ್ಕದುದರಿಂದುಂಟಾಗಿದ್ದ ಮನಸ್ಸಿನ ಕಳವಳವೆಲ್ಲವನೂ ಬಿಟ್ಟು ನೆಮ್ಮದಿಯುಳ್ಳವನಾಗಿ, ಆಗಲೇ ಅಲ್ಲಿಂದ ಹಿಂತಿರುಗಿ ಪ್ರಯಾಣಮಾಡುವುದಕ್ಕೆ ಸಿದ್ಧನಾದನು.

ಇಲ್ಲಿಗೆ ಮೂವತ್ತೆಂಟನೆಯ ಸರ್ಗವು.

---

1. ಇಲ್ಲಿ ಚೂಡಾಮಣಿಯನ್ನು ಬೆರಳಿಗೆ ಸಿಕ್ಕಿಸಿಕೊಂಡುದು ಹೇಗೆ? ಎಂದರೆ:— ಅಷ್ಟರಲ್ಲಿ ಹನುಮಂತನು ತನ್ನ ದೊಡ್ಡ ಸ್ವರೂಪವನ್ನು ಬಿಟ್ಟು ಸೂಕ್ಷ್ಮ ದೇಹವುಳ್ಳವನಾಗಿದ್ದನೆಂದೂ, ಆ ಚೂಡಾಮಣಿಯ ಉಮ್ಮಚ್ಚಿನ ಅಥವಾ (ಘಾಟಿನ) ಕಳಗೆ ಕೂಡಲನ್ನು ಪೋಣಿಸುವುದಕ್ಕಾಗಿ ಮಾಡಿದ್ದ ತೂಬಿನ ರಂಧ್ರವನ್ನು ಕೈಬೆರಳಿಗೆ ಸಿಕ್ಕಿಸಿಟ್ಟುಕೊಂಡನೆಂದೂ ಗೋವಿಂದರಾಜ ವ್ಯಾಖ್ಯಾನವು. ಕೈಗೆ ಹಿಡಿಯದುದರಿಂದ ಬೆರಳಿಗೆ ಸಿಕ್ಕಿಸಿಟ್ಟುಕೊಂಡನೆಂದು ಮಹೇಶ್ವರತೀರ್ಥರು. ಬಟ್ಟೆಯಲ್ಲಿ ಕಟ್ಟಿ ಬೆರಳಿಗೆ ಸಿಕ್ಕಿಸಿಟ್ಟುಕೊಂಡುದಾಗಿ ಕತಕವ್ಯಾಖ್ಯಾನವು.

ರಾಮಲಕ್ಷ್ಮಣರಾಗಲಿ, ಇತರ ವಾನರರಾಗಲಿ ಈ ಮಹಾಸಮುದ್ರವನ್ನು ಹೇಗೆ ದಾಟಿ ಬರಬಲ್ಲರೆಂದು ಸೀತೆಯು ಆಂಜನೇಯನನ್ನು ಕೇಳಲು, ಆಂಜನೇಯನು ಆಕೆಗೆ ವಾನರರ ಪ್ರಭಾವವನ್ನು ತಿಳಿಸಿ, ಕೊನೆಗೆ ತಾನೇ ಆ ರಾಮಲಕ್ಷ್ಮಣರನ್ನು ಭುಜದ ಮೇಲೇರಿಸಿಕೊಂಡಾದರೂ ಬಂದು ರಾವಣನನ್ನು ಕೊಲ್ಲಿಸಿ, ಆಕೆಯನ್ನು ಕರೆದುಕೊಂಡು ಹೋಗುವುದಾಗಿ ಸಮಾಧಾನ ಹೇಳಿದುದು.

ಹೀಗೆ ಸೀತೆಯು ಹನುಮಂತನಿಗೆ ಚೂಡಾಮಣಿಯನ್ನು ಕೊಟ್ಟ ಮೇಲೆ ತಿರುಗಿಯೂ ಆತನನ್ನು ಕುರಿತು, "ಎಲ್ಲೆ ವಾನರೋತ್ತಮನೆ! ಈ ಅಭಿಜ್ಞಾನವನ್ನು ನನ್ನ ಪ್ರಿಯನಾದ ರಾಮನು ಜ್ಞಾಪಿಸಿ ಬಲ್ಲನು. ನನ್ನ ತಾಯಿಯು ವಿವಾಹಕಾಲದಲ್ಲಿ ಇದನ್ನು ನನಗೆ ಕೊಟ್ಟಳು. ಆಗ ನನ್ನ ಮಾವನಾದ ದಶರಥರಾಜನೂ ಅಲ್ಲಿಯೇ ಇದ್ದನು. ಆದುದರಿಂದ ನನ್ನ ಪ್ರಿಯನಾದ ರಾಮನು ಈ ಚೂಡಾಮಣಿಯನ್ನು ನೋಡಿದೊಡನೆ ನನ್ನನ್ನೂ, ನನ್ನ ತಾಯಿಯನ್ನೂ, ತನ್ನ ತಂದೆಯಾದ ದಶರಥಮಹಾರಾಜನನ್ನೂ ಸ್ಮರಣೆಗೆ ತಂದುಕೊಳ್ಳುವನು. ಎಲ್ಲೆ ಕಪಿವೀರನೇ! ಮುಖ್ಯವಾಗಿ ನೀನು ಹೇಗಾದರೂ ರಾಮನನ್ನು ಪ್ರೋತ್ಸಾಹಗೊಳಿಸಿ ಇಲ್ಲಿಗೆ ಕರೆತರಬೇಕೆಂದು ನಾನು ಬಾರಿಬಾರಿಗೂ ನಿನ್ನಲ್ಲಿ ಪ್ರಾರ್ಥಿಸಿಕೊಳ್ಳುವೆನು. ಈ ಕಾರ್ಯಕ್ಕಾಗಿ ಮುಂದೆ ಯಾವಯಾವ ಪ್ರಯತ್ನವನ್ನು ಮಾಡಬೇಕೋ ಅದರ ಆಲೋಚನೆಯು ನಿನಗೇ ಸೇರಿದೆ. ಮುಖ್ಯವಾಗಿ ಈ ಕಾರ್ಯಸಂಘಟನೆಯ ಭಾರವು ನಿನ್ನ ಮೇಲೆಯೇ ಬಿದ್ದಿದೆ. ಎಲ್ಲೆ ಹನುಮಂತನೆ! ನೀನು ಹೇಗಾದರೂ ಪ್ರಯತ್ನಿಸಿ ನನ್ನ ದುಃಖವು ನೀಗುವಂತೆ ಮಾಡಬೇಕು. ಮಹಾಧೀಮಂತನಾದ ನೀನು ಮಾತ್ರ ಮನಸ್ಸಿಟ್ಟು ತಕ್ಕ ಪ್ರಯತ್ನವನ್ನು ಮಾಡಿದರೆ, ನನ್ನ ದುಃಖವು ನೀಗುವುದೇನೂ ಕಷ್ಟವಲ್ಲ" ಎಂದಳು. ಭಯಂಕರ ಪರಾಕ್ರಮವುಳ್ಳ ಆ ವಾಯುಪುತ್ರನು ಸೀತೆಯು ಹೇಳಿದ ಈ ದೈನ್ಯದ ಮಾತುಗಳನ್ನು ಕೇಳಿ, "ಅಮ್ಮಾ! ನೀನು ಚಿಂತಿಸಬೇಡ! ನೀನು ಹೇಳಿದಂತೆಯೇ ನಡೆಸುವೆನು" ಎಂದು ಪ್ರತಿಜ್ಞೆಮಾಡಿಕೊಟ್ಟು, ಆಕೆಗೆ ಸಾಷ್ಟಾಂಗವಾಗಿ ಪ್ರಣಾಮವನ್ನು ಮಾಡಿ, ಪ್ರಯಾಣಸನ್ನದ್ಧನಾಗಿ ಹೊರಟನು. ಹೀಗೆ ಹನುಮಂತನು ಪ್ರಯಾಣಸನ್ನದ್ಧನಾಗಿ ಹೊರಡುವುದನ್ನು ಕಂಡು, ತಿರುಗಿ ಸೀತೆಯು ಆತನನ್ನು ನೋಡಿ ಕಣ್ಣೀರು ಬಿಡುತ್ತ, ಗದ್ಗದಸ್ವರದಿಂದ "ಎಲೆ ಭದ್ರನೆ! ಆ ರಾಮಲಕ್ಷ್ಮಣರಿಬ್ಬರನ್ನೂ ನನ್ನ ಮಾತಿನಿಂದ ನೀನು ಕ್ಷೇಮವನ್ನು ವಿಚಾರಿಸು! ಸುಗ್ರೀವನಿಗೂ, ಅವನ ಮಂತ್ರಿಗಳಿಗೂ, ವೃದ್ಧರಾದ ಇತರ ವಾನರರಿಗೂ, ನಾನು ಅವರ ಕ್ಷೇಮ

ವನ್ನು ವಿಚಾರಿಸಿದುದಾಗಿ ತಿಳಿಸು! ಇವರೆಲ್ಲರಿಗೂ ಕ್ರಮವಾಗಿ ಧರ್ಮಯುಕ್ತವಾಗಿ ನಾನು ಕುಶಲಪ್ರಶ್ನೆ ಮಾಡಿದಂತೆ ಹೇಳು! ಮುಖ್ಯವಾಗಿ ನೀನು ಆ ರಾಮನಿಗೆ ಈ ದುಃಖಸಮುದ್ರದಿಂದ ನನ್ನನ್ನು ದಾಟಿಸುವ ಹಾಗೆ ಬಾರಿಬಾರಿಗೂ ಪ್ರೋತ್ಸಾಹಿಸಬೇಕು! ನಾನು ದಿಕ್ಕುಗಾಣದೆ ಪ್ರಾಣವನ್ನು ಬಿಡುವುದರೊಳಗಾಗಿಯೇ, ಕೀರ್ತಿಮಂತನಾದ ಆ ನನ್ನ ಪ್ರಿಯನು ಇಲ್ಲಿಗೆ ಬಂದು ನನ್ನನ್ನು ದೃಢಪಡಿಸಿ ಕಾಪಾಡುವ ಹಾಗೆ ನೀನು ಅವನನ್ನು ಪ್ರೇರಿಸಬೇಕು! ಇಷ್ಟುಮಾತ್ರದ ವಾಕ್ಸಹಾಯದಿಂದಲೇ ನಿನಗೆ ಎಷ್ಟೋ ಪುಣ್ಯವುಂಟು! ಈ ಧರ್ಮಕ್ಕೆ ನೀನೇ ಭಾಗಿಯಾಗು! ನೀನು ಆತನನ್ನು ಪ್ರೋತ್ಸಾಹಿಸುತಿದ್ದಷ್ಟೂ, ನಿನ್ನ ಮಾತನ್ನು ಕೇಳಿ ಆತನಿಗೆ ಮೇಲೆಮೇಲೆ ಉತ್ಸಾಹವು ಹುಟ್ಟುವುದು. ನಿನ್ನ ಮಾತನ್ನು ಕೇಳಿದ ಹಾಗೆಲ್ಲಾ ಆತನಿಗೂ ನನ್ನನ್ನು ಪಡೆಯುವ ವಿಷಯದಲ್ಲಿ ಪುರುಷಪ್ರಯತ್ನವೂ ಹೆಚ್ಚುವುದು. ನಾನು ಈಗ ನಿನ್ನ ಮೂಲಕವಾಗಿ ಹೇಳಿಕಳುಹಿಸಿರುವ ಮಾತುಗಳನ್ನು ನೀನು ಆಗಾಗ ಒತ್ತಿ ಹೇಳಿದಷ್ಟೂ, ವೀರನಾದ ಆ ರಾಮನಿಗೆ ನನ್ನನ್ನು ಕರೆಸಿಕೊಳ್ಳುವ ಆತುರವು ಹುಟ್ಟಿ, ಅದಕ್ಕೆ ತಕ್ಕ ಪರಾಕ್ರಮವನ್ನು ತೋರಿಸುವುದಕ್ಕೂ ಪ್ರಯತ್ನಿಸುವನು!" ಎಂದಳು. ಸೀತೆಯು ಹೇಳಿದ ಈ ಮಾತನ್ನು ಕೇಳಿ ವಾಯುಪುತ್ರನಾದ ಹನುಮಂತನು, ಆಕೆಗೆ ಕೈಮುಗಿಯುತ್ತ, ತಿರುಗಿ ಆವಳನ್ನು ಕುರಿತು, "ಎಲೆ ದೇವಿ! ಹೀಗೇಕೆ ನೀನು ಸಂದೇಹಪಡುವೆ? ಶೀಘ್ರದಲ್ಲಿಯೇ ನಿನ್ನ ಪ್ರಿಯನಾದ ರಾಮನು, ಅನೇಕ ವಾನರಭಲ್ಲೂಕಸಮೂಹಗಳೊಡನೆ ಇಲ್ಲಿಗೆ ಬಂದು ಸೇರುವನು. ಶೀಘ್ರದಲ್ಲಿಯೇ ಇಲ್ಲಿರುವ ಸಮಸ್ತಶತ್ರುಗಳನ್ನೂ ರಣರಂಗದಲ್ಲಿ ಕೊಂದು ನಿನ್ನ ದುಃಖವನ್ನೂ, ನೀಗಿಸುವನು. ಎಲೆ ಭದ್ರೆ! ಮನುಷ್ಯರಲ್ಲಿಯಾಗಲಿ, ದೇವಾಸುರರಲ್ಲಿಯಾಗಲಿ, ಯುದ್ಧದಲ್ಲಿ ಆ ರಾಮನು ಬಿಟ್ಟ ಬಾಣಗಳ ವೇಗವನ್ನು ತಡೆದು ನಿಲ್ಲುವವರೊಬ್ಬರನ್ನೂ ಕಾಣೆನು. ಆತನು, ಯುದ್ಧಕ್ಕೆ ನಿಂತರೆ, ಸೂರ್ಯನನ್ನಾಗಲಿ, ದೇವೇಂದ್ರನನ್ನಾಗಲಿ, ಕೊನೆಗೆ ಸೂರ್ಯ ಪುತ್ರನಾದ ಆ ಯಮನನ್ನೇ ಆಗಲಿ ಇದಿರಿಸಿ ನಿಲ್ಲಬಲ್ಲನು. ಇದರ ಮೇಲೆ ನಿನ್ನ ನಿಮಿತ್ತವಾಗಿಯೇ ಆತನು ರಣರಂಗಕ್ಕೆ ಬಂದು ನಿಂತರೆ ಅವನ ವೀರ್ಯಕ್ಕೆ ತಡೆಯಾವುದುಂಟು? ಎಲೆ ಜನಕಪುತ್ರಿ! ಆ ರಾಮನು ನಿನ್ನ ನಿಮಿತ್ತವಾಗಿ ಶತ್ರುಜಯವನ್ನಪೇಕ್ಷಿಸಿ ಭೀಕರಯುದ್ಧಕ್ಕೆ ನಿಂತಪಕ್ಷದಲ್ಲಿ ಸಮುದ್ರಪರ್ಯಂತವಾದ ಈ ಸಮಸ್ತಭೂಮಿಯನ್ನೂ ತನಗೆ ಈಡಾಗಿ ಮಾಡಿಕೊಳ್ಳಬೇಕೆಂಬ ಉತ್ಸಾಹವನ್ನು ಹೊಂದುವನು" ಎಂದನು. ಹೀಗೆ ಯುಕ್ತಿಯುಕ್ತವಾಗಿಯೂ, ಸತ್ಯವಾಗಿಯೂ ಇರುವ ಹನುಮಂತನ ಇಂಪಾದ ಮಾತನ್ನು

ಕೇಳಿ ಸೀತೆಯು, ಆ ಮಾತುಗಳಿಗಾಗಿ ಅಂಜನೇಯನನ್ನು ಮನ್ನಿಸಿದವಳಾಗಿ ಪ್ರಯಾಣಸನ್ನದ್ಧನಾಗಿ ನಿಂತಿರುವ ಆತನನ್ನು ಕುತೂಹಲದಿಂದ ಬಾರಿಬಾರಿಗೂ ನೋಡುತ್ತ, ತನಗೆ ಪತಿಯಲ್ಲಿರುವ ಅಸಾಧಾರಣಪ್ರೀತಿಯನ್ನು ಸೂಚಿಸತಕ್ಕ ಮಾತುಗಳಿಂದ ತಿರುಗಿ ಹನುಮಂತನನ್ನು ಕುರಿತು, "ಎಲೆ ವೀರನೆ! ನಿನಗೆ ಸಮ್ಮತವಾಗಿದ್ದ ಪಕ್ಷದಲ್ಲಿ ಇಲ್ಲಿ ಯಾವುದಾದರೂ ಒಂದು ರಹಸ್ಯ ಪ್ರದೇಶದಲ್ಲಿ ಒಂದು ದಿನದ ಮಟ್ಟಿಗಾದರೂ ಇದ್ದು, ನಿನ್ನ ಬಳಲಿಕೆಯನ್ನಾರಿಸಿಕೊಂಡು ನಾಳೆ ಇಲ್ಲಿಂದ ಹೊರಡು! ನೀನಾದರೂ ಇಲ್ಲಿ ನನ್ನಿಹತನಾಗಿದ್ದರೆ ಮುಂದಧಾರ್ಯೆಯಾದ ನಾನು ಈಗ ಅನುಭವಿಸುತ್ತಿರುವ ಮಹಾವ್ಯಸನವು ಮುಹೂರ್ತಕಾಲವಾದರೂ ತಪ್ಪಿರುವುದು. ಎಲೈ ವಾನರಸಿಂಹನೆ! ನೀನು ಹಿಂತಿರುಗಿ ಬರುವವನಾಗಿದ್ದರೂ, ನೀನು ಇಲ್ಲಿಂದ ಹೊರಟಕೂಡಲೆ ನನ್ನ ಪ್ರಾಣಗಳು ದಕ್ಕುವುವೋ ಇಲ್ಲವೋ ಎಂದು ಸಂದೇಹಿಸಬೇಕಾಗಿದೆ. ನಾನು ಮೊದಲೇ ನಾನಾವಿಧದುಃಖದಿಂದ ಕಪಿಸುತ್ತಿರುವೆನು. ನೀನೂ ಈಗ ನನಗೆ ಕಣ್ಮರೆಯಾಗಿ ಹೋದರೆ, ಅದರಿಂದುಂಟಾಗುವ ದುಃಖವು ಇನ್ನೂ ಹೆಚ್ಚಾಗಿ ನನ್ನನ್ನು ಬಾಧಿಸುವುದು. ಮೊದಲಿನ ನನ್ನ ದುಃಖವನ್ನು ಬೇರೊಂದು ಮಹಾದುಃಖದಿಂದ ಉದ್ದೀಪಿಸಿದಂತಾಗುವುದು. ಎಲೈ ವಾನರೋತ್ತಮನೆ! ಇವೆಲ್ಲವೂ ಹಾಗಿರಲಿ! ವಾನರಭಲ್ಲೂಕಸೈನ್ಯಗಳೊಡನೆ ರಾಮನು ಶೀಘ್ರದಲ್ಲಿಯೇ ಈ ಲಂಕೆಗೆ ಬರುವನೆಂದು ನೀನು ಹೇಳಿದೆಯಲ್ಲವೆ? ಅಪಾರವಾದ ಈ ಮಹಾಸಾಗರವನ್ನು ಆ ವಾನರಭಲ್ಲೂಕ ಸೈನ್ಯಗಳೆಲ್ಲವೂ ಹೇಗೆ ದಾಟಬಲ್ಲುವು? ಆ ರಾಮಲಕ್ಷ್ಮಣರಾದರೂ ಇದನ್ನು ದಾಟಬರುವ ಬಗೆ ಹೇಗೆ? ಈ ಮಹಾಸಮುದ್ರವನ್ನು ದಾಟಬೇಕೆಂದರೆ, ನೀನೊಬ್ಬನು; ವಿನತಾಪುತ್ರನಾದ ಗರುಡನೊಬ್ಬನು; ನಿನ್ನ ತಂದೆಯಾದ ವಾಯುದೇವನೊಬ್ಬನು. ಈ ಮೂವರು ಮಾತ್ರವೇ ಶಕ್ತರೇ ಹೊರತು ಬೇರೆಯಲ್ಲ. ಹೀಗೆ ಈ ಕಾರ್ಯಸಂಘಟನೆಯು ಅಸಾಧ್ಯವಾಗಿ ಬಂದೊದಗಿರುವಾಗ, ಇದಕ್ಕೆ ನೀನು ಯಾವ ಪ್ರತೀಕಾರವನ್ನು ಯೋಚಿಸಿರುವೆ? ಕಾರ್ಯಜ್ಞರಲ್ಲಿ ನೀನು ಮೇಲೆನಿಸಿಕೊಂಡವನಾದುದರಿಂದ, ಇದಕ್ಕೆ ತಕ್ಕ ಪರಿಹಾರವನ್ನು ಹೇಳು! ಎಲೈ ಶತ್ರುಸಂಹಾರಕನೆ! ನೀನೊಬ್ಬನೇ ರಾವಣಾದಿಗಳೆಲ್ಲರನ್ನೂ ಜಯಿಸಿ ನನ್ನನ್ನು ರಾಮನ ಬಳಿಗೆ ಸೇರಿಸಬಲ್ಲೆಯೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಕಾರ್ಯವನ್ನು ನೀನೊಬ್ಬನೇ ಸಾಧಿಸಿಬಿಟ್ಟರೆ, ಆ ಕೀರ್ತಿಗೆ ನೀನೊಬ್ಬನೇ ಭಾಗಿಯಾಗುವೆ. ಹಾಗಲ್ಲದೆ ನನ್ನ ಪ್ರಿಯನಾದ ರಾಮನು ಸಮಗ್ರವಾದ ಕಪಿಸೇನೆಯೊಡನೆ ತಾನೇ ಇಲ್ಲಿಗೆ ಬಂದು ಯುದ್ಧದಲ್ಲಿ ರಾವಣನನ್ನು ಕೊಂದು, ಜಯಶಾಲಿಯಾಗಿ, ನನ್ನನ್ನು ತನ್ನ ನಗರಿಗೆ ಕರೆದುಕೊಂಡು ಹೋಗುವಪಕ್ಷದಲ್ಲಿ, ಅದರಿಂದ

ಅವನಿಗೂ ನನಗೂ ಕೀರ್ತಿಯುಂಟು. ಮತ್ತು ಶತ್ರುಸೂದನನಾದ ಆ ನನ್ನ ಪ್ರಿಯನು ತನ್ನ ಬಾಣಗಳಿಂದ ಈ ಲಂಕಾನಗರಿಯೆಲ್ಲವನ್ನೂ ತುಂಬಿ, ತನ್ನ ವೀರ್ಯವನ್ನೂ ಜೆನ್ನಾಗಿ ತೋರಿಸಿ, ಇಲ್ಲಿಂದ ನನ್ನನ್ನು ಕರೆದುಕೊಂಡು ಹೋದರೆ, ಈ ಕಾರ್ಯವು ಕಕುತ್ಸ್ಥಕುಲತಿಲಕನಾದ ಆತನಿಗೆ ತಕ್ಕುದಾಗಿಯೂ ಇರುವುದು. ಆದುದರಿಂದ ರಣಶೂರನಾದ ಆ ಮಹಾತ್ಮನು ತನಗೆ ತಕ್ಕ ಪರಾಕ್ರಮವನ್ನು ತೋರಿಸಿ ಹೋಗುವಂತೆಯೇ ನೀನಿತ ಮಾಡಬೇಕು" ಎಂದಳು. ಹೀಗೆ ಸೀತೆಯು ಸಾರವತ್ತಾಗಿಯೂ, ಸಹಜವಾಗಿಯೂ, ಯುಕ್ತಿಯುಕ್ತವಾಗಿಯೂ, ಇರುವಂತೆ ಹೇಳಿದ ಮಾತನ್ನು ಕೇಳಿ, ಪುನಃ ಆಂಜನೇಯನು ಅಕೆಯನ್ನು ಕುರಿತು "ಎಲೆ ದೇವಿ! ನಿನಗೆ ತಿಳಿಸಬೇಕಾದ ಬೇರೊಂದು ಮುಖ್ಯವಿಷಯವುಂಟು. ಅದನ್ನೂ ತಿಳಿಸುವೆನು ಕೇಳು! ನಮ್ಮ ಪ್ರಭುವಾದ ಸುಗ್ರೀವನು ಸಮಸ್ತವಾನರಭಲ್ಲೂಕ ಸೈನ್ಯಗಳಿಗೂ ಅಧಿರಾಜನೆನಿಸಿಕೊಂಡು, ಮಹಾಬಲಾಢ್ಯನಾಗಿರುವನು. ಅವನು ಈ ನಿನ್ನ ಕಾರ್ಯವನ್ನು ಹೇಗಾದರೂ ಸಾಧಿಸಬೇಕೆಂದು ದೃಢನಿಶ್ಚಯವನ್ನೂ ಮಾಡಿರುವನು. ಆದುದರಿಂದ ಅವನಿಗೆ ಇಲ್ಲಿನ ವೃತ್ತಾಂತವನ್ನು ತಿಳಿಸಿದೊಡನೆ ಅವನು ಸಹಸ್ರಕೋಟಿವಾನರರೊಡನೆ ಕ್ಷಿಪ್ರದಲ್ಲಿಯೇ ಇಲ್ಲಿಗೆ ಬಂದುಬಿಡುವನು. ಇಲ್ಲಿನ ರಾಕ್ಷಸರನ್ನು ಕೊಲ್ಲುವುದಕ್ಕೂ ಆತನಿಗೆ ಸಾಮರ್ಥ್ಯವುಂಟು! ಮಹಾ ಪರಾಕ್ರಮಿಗಳಾಗಿಯೂ, ಧೈರ್ಯಶಾಲಿಗಳಾಗಿಯೂ, ಬಲಾಢ್ಯರಾಗಿಯೂ, ಮನೋವೇಗವುಳ್ಳವರಾಗಿಯೂ ಇರುವ ಎಷ್ಟೋಮಂದಿ ವಾನರವೀರರು ಆತನ ಆಜ್ಞಾಧೀನರಾಗಿ ಕಾದಿರುವರು. ಮೇಲೆಯಾಗಲಿ, ಕೆಳಗಾಗಲಿ, ಅಡ್ಡಲಾಗಲಿ, ಅವರ ಸಂಚಾರಕ್ಕೆ ಎಲ್ಲಿಯೂ ತಡೆಯಿಲ್ಲ. ಎಣೆಯಿಲ್ಲದ ತೇಜಸ್ಸುಳ್ಳ ಆ ವಾನರವೀರರು ಎಂತಹ ದೊಡ್ಡ ಕಾರ್ಯಗಳಿಗಾಗಲಿ ಹಿಂಜರಿಯುವವರಲ್ಲ ಯಾವ ವಿಷಯಗಳಲ್ಲಿಯೂ ಮಹೋತ್ಸಾಹವುಳ್ಳ ಆ ವಾನರರು, ಅಂತರಿಕ್ಷಚಾರಿಗಳಾಗಿಯೇ ಹೊರಟು, ಅನೇಕ ಸಮುದ್ರಪರ್ವತಗಳಿಂದ ತುಂಬಿದ ಈ ಸಮಸ್ತಪ್ರಪಂಚವನ್ನೂ ಅನೇಕಾವೃತ್ತಿ ಸುತ್ತಿಬಂದಿರುವರು. ಎಲೆ ದೇವಿ! ಈ ನನ್ನ ಅತ್ಯಲ್ಪಸಾಹಸವನ್ನೇ ನೀನು ಮೆಚ್ಚುತ್ತಿರುವೆಯಲ್ಲವೆ? ನನಗೆ ಸಮಾನವಾದ ಪರಾಕ್ರಮವುಳ್ಳ ವಾನರರು ಆ ಸುಗ್ರೀವನ ವಶದಲ್ಲಿ ಇನ್ನೂ ಎಷ್ಟೋಮಂದಿಯುಂಟು! ನನಗೆ ಕಡಮೆಯಾದವನೊಬ್ಬನಾದರೂ ಅಲ್ಲಿ ಇಲ್ಲ. ಅದರೆ "ಈ ದುರ್ಗಮವಾದ ಲಂಕೆಗೆ ನೀನುಮಾತ್ರ ಬಂದುದೇಕೆ" ಎಂದು ಕೇಳುವೆಯಾ? ಲೋಕದಲ್ಲಿ ಪ್ರಭುಗಳಾದವರು ತಮ್ಮ ಪರಿವಾರಗಳಲ್ಲಿ ಪ್ರಬಲನಾದವನನ್ನು ಮೊದಲು ಯಾವ ಕಾರ್ಯಕ್ಕೂ ಕಳುಹಿಸುವುದಿಲ್ಲ. ಮೊದಮೊದಲು ಸಾಮಾನ್ಯಜನರನ್ನು ಕಳುಹಿಸುವರು. ಇದೇ ರಾಜನೀತಿಯು. ಆದುದರಿಂದ ನಮ್ಮ

ಪ್ರಭುವಾದ ಸುಗ್ರೀವನೂಕೂಡ ಸಾಮಾನ್ಯವಾನರನಾದ ನನ್ನನ್ನೇ ಮೊದಲು ಈ ಕಾರ್ಯಕ್ಕಾಗಿ ಕಳುಹಿಸಿದನು. ನಾನೇ ಈ ಮಹಾಸಮುದ್ರವನ್ನು ದಾಟಿ ಇಲ್ಲಿಗೆ ಬಂದಿರುವಾಗ, ಅತನಲ್ಲಿರುವ ಪ್ರಮುಖರಾದ ಇತರ ವಾನರರ ಶಕ್ತಿಯನ್ನು ಕೇಳಬೇಕೇ? ಎಲೆ ದೇವಿ! ಆದುದರಿಂದ ನೀನು ಯಾವ ವಿಷಯದಲ್ಲಿಯೂ ಚಿಂತಿಸಬೇಕಾದುದಿಲ್ಲ! ನಿನ್ನ ದುಃಖವನ್ನು ಬಿಡು! ಸುಗ್ರೀವನಲ್ಲಿರುವ ಆ ವಾನರ ಪ್ರಮುಖರೊಬ್ಬೊಬ್ಬರೂ ಒಂದೇ ನೆಗೆತಕ್ಕೆ ಈ ಸಮುದ್ರವನ್ನು ಹಾರಿ ಬರಬಲ್ಲರು. ಆ ರಾಮಲಕ್ಷ್ಮಣರಿಬ್ಬರೂ ಈ ಸಮುದ್ರವನ್ನು ಹೇಗೆ ದಾಟಬಲ್ಲರೆಂದು ಕೇಳಿದೆಯಲ್ಲವೆ? ಆದರ ಚಿಂತೆಯು ನಿನಗೇಕೆ? ಪುರುಷಸಿಂಹರಾದ ಆ ರಾಮಲಕ್ಷ್ಮಣರಿಬ್ಬರನ್ನೂ ನಾನು, ಇದೋ! ಈ ನನ್ನ ಭುಜದ ಮೇಲೇರಿಸಿಕೊಂಡೇ ಇಲ್ಲಿಗೆ ಕರೆತರುವೆನು. ಉದಿಸಿಬಂದ ಚಂದ್ರಸೂರ್ಯರಂತೆ ಆ ರಾಜಕುಮಾರರಿಬ್ಬರೂ ನನ್ನ ಭುಜದ ಮೇಲೇರಿಯೇ ನಿನ್ನ ಸನ್ನಿಧಾನವನ್ನು ಸೇರುವರೆಂದು ತಿಳಿ! ಪುರುಷಶ್ರೇಷ್ಠರಾದ ಆ ರಾಮಲಕ್ಷ್ಮಣರ ವೀರ್ಯಾತಿಶಯವನ್ನು ನಾನು ಹೊಸದಾಗಿ ನಿನಗೆ ತಿಳಿಸಬೇಕಾದುದೇನೂ ಇಲ್ಲ. ಅವರಿಬ್ಬರೂ ಒಂದಾಗಿ ಸೇರಿ ಯುದ್ಧಕ್ಕೆ ನಿಂತರೆ, ಕ್ಷಣಮಾತ್ರದಲ್ಲಿ ಈ ಲಂಕಾನಗರಿಯೆಲ್ಲವನ್ನೂ ತಮ್ಮ ಬಾಣಗಳಿಂದ ಧೂಳಿಪಟ ಮಾಡಿಬಿಡುವರು. ರಘುನಂದನನಾದ ಆ ಶ್ರೀರಾಮನು ಇಲ್ಲಿಗೆ ಬಂದೊಡನೆ ರಾವಣನನ್ನೂ ಅವನ ಪರಿವಾರಗಳೊಡನೆ ಕೊಂದು, ನಿನ್ನನ್ನೂ ಸಂಗಡ ಕರೆದುಕೊಂಡು ತನ್ನ ಪಟ್ಟಣಕ್ಕೆ ಹಿಂತಿರುಗುವನು! ಇನ್ನು ನೀನು ಸಮಾಧಾನದಿಂದಿರು! ನಿನಗೆ ಶುಭವಾಗಲಿ! ಇದು ಮೊದಲು! ನೀನು ಹೇಳಿದ ದಿನಗಳನ್ನು ಮಾತ್ರ ಲೆಕ್ಕಮಾಡುತ್ತಿರು. ಶೀಘ್ರದಲ್ಲಿಯೇ ರಾಮನು ಜ್ವಲಿಸುವ ಅಗ್ನಿಯಂತೆ! ನಿನಗೆ ಗೋಚರಿಸುವನು. ಇಲ್ಲಿನ ರಾಕ್ಷಸಪ್ರಭುವಾದ ರಾವಣನು ತನ್ನ ಮಿತ್ರಬಾಂಧವಾದಿಗಳೊಡನೆಯೂ ತನ್ನ ಮಂತ್ರಿವರ್ಗಗಳೊಡನೆಯೂ ಹತನಾದ ಮೇಲೆ, ನೀನು ಚಂದ್ರನೊಡನೆ ಸೇರುವ ರೋಹಿಣಿಯಂತೆ ರಾಮನೊಡನೆ ಸೇರುವೆ! ಎಲೆ ಮೈಥಿಲಿ! ಇನ್ನು ಕ್ಷಿಪ್ರದಲ್ಲಿಯೇ ಈ ನಿನ್ನ ದುಃಖವೆಲ್ಲವೂ ಕೊನೆಮುಟ್ಟುವುದು. ರಾವಣನು ಶೀಘ್ರದಲ್ಲಿಯೇ ರಾಮನಿಂದ ಹತನಾಗಿ ಬೀಳುವುದನ್ನೂ ನೀನು ನೋಡಬಹುದು" ಎಂದನು. ವಾಯುಪುತ್ರನಾದ ಹನುಮಂತನು ಹೀಗೆ ಸೀತೆಯನ್ನು ಸಮಾಧಾನಮಾಡಿ, ಅಲ್ಲಿಂದ ಹೊರಡುವುದಕ್ಕೆ ಸಿದ್ಧನಾಗಿ ನಿಂತು, ತಿರುಗಿ ಸೀತೆಯನ್ನು ಕುರಿತು "ಅಮ್ಮಾ! ಇನ್ನು ನೀನು ಸ್ವಲ್ಪವೂ ಚಿಂತಿಸಬೇಡ, ಶತ್ರುಸಂಹಾರಕನಾಗಿಯೂ, ಕೃತಾತ್ಮನಾಗಿಯೂ ಇರುವ ಆ ಶ್ರೀರಾಮನೂ, ಧನುಷ್ಪಾಣಿಯಾದ ಲಕ್ಷ್ಮಣನೂ, ಕ್ಷಿಪ್ರದಲ್ಲಿಯೇ ಈ ಲಂಕೆಯ ಬಾಗಿಲಲ್ಲಿ ಬಂದು

ನಿಲ್ಲುವುದನ್ನು ನೀನೇ ನೋಡುವೆ! ಮತ್ತು ನೀನು ಇನ್ನು ಶೀಘ್ರದಲ್ಲಿಯೇ ಮಹಾ ಪರಾಕ್ರಮಿಗಳಾಗಿಯೂ, ವೀರರಾಗಿಯೂ, ನಖದಂಷ್ಟ್ರಾಯುಧವುಳ್ಳವರಾಗಿಯೂ, ಮಹಾಗಜಗಳಂತೆ ದೊಡ್ಡದೊಡ್ಡರೂಪವುಳ್ಳವರಾಗಿಯೂ ಇರುವ ಅನೇಕ ವಾನರವೀರರು ಇಲ್ಲಿ ಗುಂಪುಗೂಡುವುದನ್ನೂ ನೀನು ನೋಡಬಹುದು. ಮತ್ತು ಎಲೆ ಅರ್ಕೆ! ಪರ್ವತಗಳಂತೆಯೂ, ಮೇಘಗಳಂತೆಯೂ ಮಹಾಕಾಯವುಳ್ಳ ಅನೇಕ ಕಪಿವೀರರು ಗುಂಪುಗೂಡಿ ಬಂದು, ಈ ಲಂಕೆಯ ಸಮೀಪದಲ್ಲಿರುವ ಮಲಯಪರ್ವತದ ಮೇಲೆ ನಿಂತು ಸಿಂಹನಾದಮಾಡುವುದನ್ನೂ ನೀನು ಶೀಘ್ರದಲ್ಲಿಯೇ ಕೇಳಬಹುದು. ಆ ರಾಮನು ನಿನ್ನನ್ನ ಗಲಿದಂದಿನಿಂದ, ಮರ್ಮಸ್ಥಾನಗಳಲ್ಲಿ ಬಿದ್ದ ಭಯಂಕರವಾದ ಮನ್ಮಥಬಾಣದಿಂದ ಬಾಧಿತನಾಗಿ, ಸಿಂಹದ ಕೈಗೆ ಸಿಕ್ಕಿದ ಆನೆಯಂತೆ ಮನಸ್ಸಿನಲ್ಲಿ ನೆಮ್ಮದಿಯಿಲ್ಲದೆ ತತ್ತಳಿಸುತ್ತಿರುವನು. ಆದುದರಿಂದ ಅವನು ನಿನ್ನನ್ನು ಕ್ಷಣಮಾತ್ರವಾದರೂ ಮರೆತಿರುವನೆಂದೆಣಿಸಬೇಡ! ಹೀಗಿದ್ದರೂ ನೀನು ಅನಾಥೆಯಂತೆ ರೋದಿಸುವುದು ಸರಿಯಲ್ಲ! ಮನಸ್ಸಿನಲ್ಲಿ ಹೀಗೆ ಕೊರಗುವುದನ್ನು ಬಿಡು! ಶಚೀದೇವಿಗೆ ದೇವೇಂದ್ರನಂತೆ, ನಿನಗೆ ರಾಮನು ನಾಥನಾಗಿರುವಾಗಲೂ ನೀನು ಹೀಗೆ ದುಃಖಿಸುವುದೇಕೆ? ಲೋಕದಲ್ಲಿ ರಾಮನಿಗಿಂತಲೂ ಮೇಲಾದವನು ಬೇರೆ ಯಾವನುಂಟು! ಆ ಲಕ್ಷ್ಮಣನಿಗೆ ಸಾಟಿಯಾರು? ಅಗ್ನಿವಾಯುಗಳೆರಡೂ ಸೇರಿದಂತೆ ಆ ಮಹಾವೀರರಿಬ್ಬರೂ ನಿನಗೆ ಬೆಂಬಲವಾಗಿರುವಾಗ ನಿನಗೆ ಚಿಂತೆಯೇಕೆ! ಎಲೆ ದೇವಿ! ಮುಖ್ಯವಾಗಿ ನೀನು ಇನ್ನು ಬಹುದಿನಗಳವರೆಗೆ ರಾಕ್ಷಸಪ್ರಭುರವಾದ ಈ ಭಯಂಕರಪ್ರದೇಶದಲ್ಲಿ ವಾಸಮಾಡಲಾರೆ! ನಿನ್ನ ಪ್ರಿಯನಾದ ರಾಮನು ಶೀಘ್ರದಲ್ಲಿಯೇ ಇಲ್ಲಿಗೆ ಬರುವನು. ನಾನು ಅಲ್ಲಿಗೆ ಹೋಗಿ ಸೇರುವುದೊಂದೇ ತಡ! ಅದುವರೆಗೆ ಮಾತ್ರ ನೀನು ದುಃಖವನ್ನು ಸಹಿಸಿಕೊಂಡಿರು! ನಾನು ಕ್ಷಿಪ್ರದಲ್ಲಿಯೇ ಅವರನ್ನು ಇಲ್ಲಿಗೆ ಕರೆತರುವೆನು" ಎಂದನು.

ಇಲ್ಲಿಗೆ ಮೂವತ್ತೊಂಬತ್ತನೆಯ ಸರ್ಗವು.

ಸೀತೆಯು ಹನುಮಂತನ ಮಾತಿನಿಂದ ಸಮಾಧಾನವನ್ನು ಹೊಂದಿ ಮತ್ತೊಂದು ಗುರುತನ್ನು ರಾಮನಿಗೆ ಹೇಳಿ ಕಳುಹಿಸಿದುದು. ಹನುಮಂತನು ಸೀತೆಯ ಅನುಮತಿಯನ್ನು ಹೊಂದಿ, ಮುಂದಿನ ಕಾರ್ಯಕ್ಕೆ ಆಲೋಚಿಸಿದುದು.

ದೇವಕನ್ಯೆಯಂತಿರುವ ಸೀತಾದೇವಿಯು, ಹನುಮಂತನ ವಾಕ್ಯವನ್ನು ಕೇಳಿ, ಆತನೊಡನೆ ತಿರುಗಿ ತನಗೆ ಹಿತಕರವಾದ ಒಂದು ಮಾತನ್ನು ಹೇಳುವಳು. "ಎಲ್ಲೆ ಹನುಮಂತನೆ! ಸ್ವಲ್ಪವಾಗಿ ಮೊಳೆಹೊರಟ ಭೂಮಿಯು ಮಳೆಬಿದ್ದಮೇಲೆ ಜೆನ್ನಾಗಿ ಉಲ್ಲಾಸಹೊಂದುವಂತೆ, ನಿನ್ನನ್ನು ನೋಡಿದು ದರಿಂದುಂಟಾದ ನನ್ನ ಸಂತೋಷವು ಈ ನಿನ್ನ ಪ್ರಿಯವಾಕ್ಯವನ್ನು ಕೇಳಿ ಮತ್ತಷ್ಟು ಉಲ್ಲಾಸಹೊಂದುತ್ತಿರುವುದು. ಮಹಾವ್ಯಸನದಿಂದಿರುವ ಈ ನನ್ನ ಅವಯವಗಳಿಂದ, ಪುರುಷಶ್ರೇಷ್ಠನಾದ ಆ ರಾಮನನ್ನು ಸ್ಪರ್ಶಿಸಿ ನಾನು ಕೃತಾರ್ಥಳಾಗುವ ರೀತಿಯಲ್ಲಿ ನೀನು ನನ್ನಲ್ಲಿ ಕೃಪೆಮಾಡಬೇಕು! ಎಲೈ ವಾನರೋತ್ತಮನೆ! ಈಗ ನಾನು ಕೊಟ್ಟಿರುವ ಈ ಚೂಡಾಮಣಿಯನ್ನು ಆತನಿಗೆ ಗುರುತಾಗಿ ಕೊಡು! ರಾವಣನು ಕೋಪದಿಂದ ಕಾಗೆಯ ಮೇಲೆ ತೃಣವನ್ನು ಪ್ರಯೋಗಿಸಿ, ಅದರ ಕಣ್ಣನ್ನು ಕೆಡಿಸಿದ ವೃತ್ತಾಂತವೊಂದನ್ನು ಮೊದಲೇ ನಾನು ನಿನಗೆ ಗುರುತಾಗಿ ಹೇಳಿದೆನಲ್ಲವೆ? ಇನ್ನೊಂದು ಗುರುತನ್ನೂ ಹೇಳುವೆನು ಕೇಳು! ಇದನ್ನೂ ನಾನು ಹೇಳಿದಂತೆ ನನ್ನ ಮಾತಿನಿಂದಲೇ ನನ್ನ ಪ್ರಿಯನಿಗೆ ತಿಳಿಸು. "ಎಲೆ ನಾಥನೆ! [1] ಒಮ್ಮೆ ನನ್ನ ಮುಖದಲ್ಲಿ ತಿಲಕವು ಅಳಿಸಿಹೋದುದನ್ನು ಕಂಡು ನೀನೇ ನನ್ನ ಕೆನ್ನೆಯಲ್ಲಿ ಮಣಿಶಿಲೆಯಿಂದ ತಿಲಕವನ್ನಿಟ್ಟೆಯಲ್ಲವೆ! ಅದನ್ನು ಜ್ಞಾಪಿಸಿಕೊಂಡು ನೋಡು! ರಾಮಾ! ನೀನೋ ಮಹಾವೀರ್ಯಶಾಲಿಯು! ಮಹೇಂದ್ರವರುಣರಿಂಗೆ ಸಾಟಿಯೆನಿಸಿಕೊಂಡವನು! ಹೀಗಿದ್ದರೂ ನಿನ್ನ ಪ್ರಿಯಪತ್ನಿಯಾದ ನಾನು, ದುರಾತ್ಮನಾದ ರಾವಣನಿಂದಪಹೃತಳಾಗಿ, ಹೀಗೆ ರಾಕ್ಷಸರ ನೆರೆಯಲ್ಲಿ ಸಿಕ್ಕಿರುವುದನ್ನು ಹೇಗೆ ಸಮ್ಮತಿಸಿರುವೆ? ಈ ಮಹಾವ್ಯಸನಕಾಲದಲ್ಲಿಯೂ ಕೂಡ ನಾನು ಈ ದಿವ್ಯಚೂಡಾಮಣಿಯನ್ನು ಬಿಡದೆ ಎಷ್ಟೋ ಶ್ರಮದಿಂದ ಕಾಪಾಡಿಟ್ಟಿದ್ದೆನು!

---

1. ಇಲ್ಲಿ "ಒಮ್ಮೆ ನನ್ನ ಕಪೋಲದಲ್ಲಿದ್ದ ಬೊಟ್ಟು ಅಳಿಸಿಹೋಗಿರಲು, ಅದನ್ನು ನೋಡಿ ನೀನು, ಆ ಸಂಗತಿಯನ್ನು ನನಗೆ ತಿಳಿಸುವುದಕ್ಕಾಗಿ, ನನಗಿದಿರಾಗಿದ್ದ ಒಂದು ಕಲ್ಲುಬಂಡೆಯಮೇಲೆ ಮಣಿಶಿಲೆಯಿಂದ ಬೊಟ್ಟನ್ನು ಮೂಡಿಟ್ಟೆಯಲ್ಲವೆ? ಅದನ್ನೂ ಜ್ಞಾಪಿಸಿಕೊಂಡು ನೋಡು" ಎಂದು ಸೀತೆಯು ರಾಮನಿಗೆ ಹೇಳಿದುದಾಗಿ ಅರ್ಥಾಂತರವನ್ನೂ ಹೊಡಬಹುದು.

ನನಗೆ ತಡೆಯಲಾರದ ದುಃಖವುಂಟಾದಾಗ ಈ ಚೂಡಾಮಣಿಯನ್ನು ನೋಡಿ ಕೊಂಡು, ನಿನ್ನನ್ನೇ ನೋಡಿದಂತೆ ಸ್ವಲ್ಪವಾದರೂ ಮನಸ್ಸಿಗೆ ಆಪ್ಯಾಯನವನ್ನು ತಂದುಕೊಳ್ಳುತ್ತಿದ್ದೆನು. ಸಮುದ್ರಜನ್ಯವಾಗಿ ವಿಶೇಷಕಾಂತಿಯುಕ್ತವಾದ ಆ ಚೂಡಾ ಮಣಿಯನ್ನೂ ಈಗ ನಿನ್ನಲ್ಲಿಗೆ ಕಳುಹಿಸಿಬಿಟ್ಟಿರುವೆನು. ನನಗೆ ಆಗಾಗ ಸ್ವಲ್ಪ ವಾದರೂ ದುಃಖಸಮಾಧಾನವನ್ನುಂಟುಮಾಡುತ್ತಿದ್ದ ಆ ಚೂಡಾಮಣಿಯೂ ಇಲ್ಲದುದರಿಂದ, ಇನ್ನು ಮೇಲೆ ದುಃಖವು ಬಂದಾಗ ನಾನು ಬದುಕುವುದೇ ಕಷ್ಟವು. ಬದುಕಿದ್ದರೆ ಹೇಗಾದರೂ ನಿನ್ನನ್ನು ಪುನಃ ನೋಡಬಹುದೆಂಬ ಆಶೋತ್ತರದಿಂದಲೇ ನಾನು ಸಹಿಸಬಾರದ ಈ ಮಹಾವ್ಯಸನಗಳನ್ನೆಲ್ಲಾ ಸಹಿಸಿಕೊಂಡಿರುವೆನು. ಈ ಕ್ರೂರರಾಕ್ಷಸಿಯರಿಂದ ಕೇಳಬಾರದ ಮಾತುಗಳನ್ನೆಲ್ಲಾ ಕೇಳುತ್ತಿರುವೆನು. ಮರ್ಮಭೇದಕಗಳಾದ ಈ ದುರ್ವಾಕ್ಯಗಳನ್ನು ಕೇಳಿಯೂ ನಾನು ಈ ಪ್ರಾಣ ವನ್ನಿಟ್ಟುಕೊಂಡಿರುವೆನು. ಎಲ್ಲಿ ನಾಥನೆ! ಈಗಲೂ ಇನ್ನೊಂದು ತಿಂಗಳ ಗಡುವನ್ನಿಟ್ಟಿರುವೆನು. ಆ ಒಂದು ತಿಂಗಳವರೆಗೆ ಮಾತ್ರವೇ ನಾನು ಈ ಜೀವ ವನ್ನಿಟ್ಟುಕೊಂಡು ಕಾದಿರುವೆನು. ಆ ಪಕ್ಷದಲ್ಲಿಯೂ ನೀನು ನನ್ನನ್ನು ನಿನ್ನಲ್ಲಿಗೆ ಕರೆಸಿಕೊಳ್ಳದಿದ್ದರೆ, ಆ ಒಂದು ತಿಂಗಳಮೇಲೆ ಒಂದು ಕ್ಷಣವಾದರೂ ನಾನು ಬದುಕಿರಲಾರೆನು! ಇಲ್ಲಿನ ರಾಕ್ಷಸರಾಜನಾದ ರಾವಣನೋ, ಸಹಜ ವಾಗಿಯೇ ಭಯಂಕರಸ್ವರೂಪನು! ಇದರ ಮೇಲೆ ಅವನಿಗೆ ನನ್ನಲ್ಲಿ ಸ್ವಲ್ಪ ವಾದರೂ ಸೌಮ್ಯದೃಷ್ಟಿಯಿಲ್ಲ![1] ಇದಲ್ಲದೆ ನೀನು ದುಃಖಿಸುತ್ತಿರುವ ಸಂಗತಿ ಯನ್ನೂ ನಾನು ಕೇಳಿಬಿಟ್ಟೆನು. ಈ ಸ್ಥಿತಿಯಲ್ಲಿ ನಾನು ಬದುಕಿರಬಲ್ಲೆನೆ? ಒಂದು ತಿಂಗಳಮೇಲೆ ಕ್ಷಣಮಾತ್ರವೂ ಜೀವಿಸಿರಲಾರೆನು." ಎಂದು ನಾನು ಹೇಳಿಕಳುಹಿಸಿದುದಾಗಿ ರಾಮನಿಗೆ ತಿಳಿಸು" ಎಂದಳು. ಹೀಗೆ ಸೀತೆಯು ದೈನ್ಯದಿಂದ ಕಣ್ಣೀರುಬಿಟ್ಟು ಹೇಳಿದ ಮಾತನ್ನು ಕೇಳಿ, ತಿರುಗಿ ಹನುಮಂತನು ಅಕೆಯನ್ನು ಸಮಾಧಾನಪಡಿಸುತ್ತ "ಎಲೆ ದೇವಿ! ಇದೇನು? ಎಷ್ಟಾವರ್ತಿ ಹೇಳಿದರೂ ನನ್ನ ಮಾತಿನಲ್ಲಿ ನಿನಗೆ ನಂಬಿಕೆಯಿಲ್ಲವೆ? ನನ್ನ ಸತ್ಯದಾಣೆಗೂ ನಾನು ಇನ್ನೂ ಒಂದಾವರ್ತಿ ಹೇಳುವೆನು ಕೇಳು! ರಾಮನು ನಿನ್ನ ದುಃಖ ದಿಂದ ಇತರ ವ್ಯಾಪಾರಗಳನ್ನೇ ಮರೆತಿರುವನು. ಆತನ ದುಃಖವನ್ನು ನೋಡಿ ದಾಗಲೆಲ್ಲಾ ಲಕ್ಷ್ಮಣನೂ ನಿನಗಾಗಿ ಮಹಾವ್ಯಸನದಿಂದ ತಪಿಸುವನು. ಈ

---

1. ಇಲ್ಲಿ "ತ್ವಾಽಪಶ್ಯತ್ತ್ವಾ ವಿಸಜ್ಜಂತಂ" ಎಂದು ಪಾಠಾಂತರವುಂಟು "ನೀವು ನನ್ನನ್ನುಪೇಕ್ಷಿಸಿ ಅಲಸ್ಯಮಾಡುತ್ತಿರುವುದನ್ನೂ ಕೇಳಿದಮೇಲೆ" ಎಂದು ಇದರ ಅರ್ಥವನ್ನು ಗ್ರಹಿಸಬೇಕು.

ಸ್ಥಿತಿಯಲ್ಲಿ ಎಷ್ಟೋಕಷ್ಟದಿಂದ ನೀನು ನನ್ನ ಕಣ್ಣಿಗೆ ಗೋಚರಿಸಿದೆ! ಇದಕ್ಕಾಗಿ ಈಗ ನೀನು ಸಂತೋಷಿಸಬೇಕೇ ಹೊರತು ದುಃಖಿಸುವುದುಂಟೆ? ಇನ್ನು ಈ ಮುಹೂರ್ತದೊಳಗಾಗಿಯೇ ನಿನ್ನ ವ್ಯಸನವೆಲ್ಲವೂ ತೀರುವುದು. ಶತ್ರುಸೂದನ ರಾದ ಆ ಪುರುಷಸಿಂಹರಿಬ್ಬರೂ ನಿನ್ನನ್ನು ನೋಡಬೇಕೆಂಬ ಮಹೋತ್ಸಾಹ ದಲ್ಲಿ ಈ ಲಂಕಾನಗರಿಯೆಲ್ಲವನ್ನೂ ಭಸ್ಮಮಾಡದೆ ಬಿಡರು. ಎಲೆ ವಿಶಾಲಾಕ್ಷಿ! ಆ ಅಣ್ಣತಮ್ಮಂದಿರಿಬ್ಬರೂ ತೀಕ್ಷ್ಣದಲ್ಲಿಯೇ ಇಲ್ಲಿಗೆ ಬಂದು, ಕ್ರೂರನಾದ ರಾವಣ ನನ್ನು ಅವನ ಪರಿವಾರಗಳೊಡನೆ ಯುದ್ಧದಲ್ಲಿ ಕೊಂದು, ನಿನ್ನನ್ನೂ ಅಯೋ ಧ್ಯೆಗೆ ಕರೆದುಕೊಂಡು ಹೋಗುವನು. ಇದರಲ್ಲಿ ಸಂದೇಹವೇ ಇಲ್ಲ! ಎಲೆ ದೇವಿ! ಇನ್ನೂ ರಾಮನಿಗೆ ತಿಳಿಸಬಹುದಾದ ಬೇರೆ ಗುರುತುಗಳೇನಾದರೂ ಇದ್ದರೆ ಅವನ ನಂಬಿಕೆಗಾಗಿ ಅವುಗಳನ್ನೂ ನನಗೆ ಹೇಳು!" ಎಂದನು. ಆದಕ್ಕೆ ಸೀತೆಯು "ಎಲೆ ವೀರನೆ! ನಾನು ಮೊದಲೇ ಬಹಳ ಮೇಲಾದ ಈ ಅಭಿಜ್ಞಾನವನ್ನು ನಿನ್ನ ಕೈಗೆ ಕೊಟ್ಟಿರುವೆನಲ್ಲವೆ? ಇದಕ್ಕಿಂತಲೂ ಇನ್ನೇನು ಬೇಕು! ನವಗೆ ಶಿರೋ ಭೂಷಣವಾಗಿದ್ದ ಈ ಚೂಡಾಮಣಿಯನ್ನು ನೋಡಿದೊಡನೆ, ರಾಮನಿಗೆ ನಿನ್ನ ಮಾತಿನಲ್ಲಿ ಪೂರ್ಣವಾದ ನಂಬಿಕೆಯು ಹುಟ್ಟುವುದು, ಹೋಗು" ಎಂದಳು. ಇದನ್ನು ಕೇಳಿ ವಾನರೋತ್ತಮನಾದ ಹನುಮಂತನು, ಆ ಚೂಡಾಮಣಿಯೊಡನೆ ಸೀತೆಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ, ಪ್ರಯಾಣಕ್ಕೆ ಸಿದ್ಧನಾದನು. ಆಗಲೇ ಹನುಮಂತನು ಸಮುದ್ರವನ್ನು ಹಾರುವುದಕ್ಕೆ ಉತ್ಸಾಹಗೊಂಡು, ಆದಕ್ಕೆ ತಕ್ಕಂತೆ ತನ್ನ ಮೈಯ್ಯನ್ನು ಬಳೆಸಿ ನಿಂತಿರುವುದನ್ನು ಕಂಡು, ಸೀತೆಯು ಪುನಃ ಕಣ್ಣೀರು ತುಂಬಿಕೊಂಡು, ದುಃಖಿತೆಯಾಗಿ ಗದ್ಗದಸ್ವರದಿಂದ ಅತನನ್ನು ಕುರಿತು "ಎಲೆ ಹನುಮಂತನೆ! ಸಿಂಹಪರಾಕ್ರಮಿಗಳಾದ ರಾಮಲಕ್ಷ್ಮಣರೆಂಬ ಆ ಸಹೋದರ ರಿಬ್ಬರಿಗೂ ನನ್ನ ಕ್ಷೇಮವನ್ನು ತಿಳಿಸು! ಹಾಗೆಯೇ ಸುಗ್ರೀವನಿಗೂ, ಅವನ ಮಂತ್ರಿಗಳಿಗೂ, ಇತರ ವಾನರರೆಲ್ಲರಿಗೂ ನನ್ನ ಕುಶಲವನ್ನು ಹೇಳು! ಮುಖ್ಯವಾಗಿ ಮಹಾಬಾಹುವಾದ ರಾಮನು ಈ ದುಃಖಸಮುದ್ರದಿಂದ ನನ್ನನ್ನುದ್ಧರಿಸುವಂತೆ ನೀನು ಅತನನ್ನು ಪ್ರೋತ್ಸಾಹಿಸಬೇಕು. ತೀವ್ರವಾದ ಈ ನನ್ನ ದುಃಖಾತಿಶಯ ವನ್ನೂ ಇಲ್ಲಿನ ರಾಕ್ಷಸರು ನನ್ನನ್ನು ಆಗಾಗ ಹೆದರಿಸುತ್ತಿರುವುದನ್ನೂ, ಆ ರಾಮ ನಿಗೆ ತಿಳಿಸು! ನಿನಗೆ ಮಾರ್ಗದಲ್ಲಿ ಕ್ಷೇಮವುಂಟಾಗಲಿ!" ಎಂದಳು. ಹೀಗೆ ಹನು ಮಂತನು ಸೀತೆಯಿಂದ ಅಭಿಜ್ಞಾನವನ್ನು ಪಡೆದು, ತಾನು ಕೃತಾರ್ಥನಾದೆನೆಂಬ ಸಂತೋಷದಿಂದ ಹಿಗ್ಗುತ್ತ ಇನ್ನು ಮುಂದೆ ತಾನು ಪಡೆಸಬೇಕಾದ ಕಾರ್ಯವು ಸ್ವಲ್ಪವೇ ಉಳಿದಿರುವುದೆಂದೆಣಿಸಿಕೊಂಡು, ಶೀಘ್ರ ತ್ತರದಿಕ್ಕಿನ ಪ್ರಯಾಣಕ್ಕೆ ನಿಶ್ಚಯಿಸಿದನು.

ಇಲ್ಲಿಗೆ ನಾಲ್ವತ್ತನೆಯ ಸರ್ಗವು.

ಹನುಮಂತನು ಸೀತೆಯ ಅನುಜ್ಞೆಯನ್ನು ಪಡೆದು,
ಅಶೋಕವನವನ್ನು ಭಂಗಪಡಿಸಿದುದು.

ಹೀಗೆ ಸೀತೆಯು ತನ್ನನ್ನು ಪ್ರಶಂಸೆಮಾಡುತ್ತಿರಲು, ಹನುಮಂತನು ಪ್ರಯಾಣಸನ್ನದ್ಧನಾಗಿ ಹೊರಟು, ಆ ಪ್ರದೇಶವನ್ನು ಬಿಟ್ಟು ಬೇರೆಕಡೆಗೆ ಬಂದು ನಿಂತು, ತನ್ನಲ್ಲಿ ನಾನೇ ಆಲೋಚಿಸುವನು. "ನಾನು ಇಲ್ಲಿಗೆ ಬಂದ ಉದ್ದೇಶಗಳೆರಡು! ಮುಖ್ಯವಾಗಿ ಸೀತೆಯನ್ನು ಕಂಡುಹಿಡಿಯಬೇಕೆಂಬುದೊಂದು! ರಾವಣನ ಸ್ಥಳವನ್ನು ತಿಳಿಯಬೇಕೆಂಬುದೊಂದು! ಇವುಗಳಲ್ಲಿ ಬಹಳ ಪ್ರಧಾನವಾದ ಸೀತಾದರ್ಶನವೆಂಬ ಕಾರ್ಯವನ್ನು ಮುಗಿಸಿದುದಾಯಿತು. ಇನ್ನು ರಾವಣನ ಸ್ಥಿತಿಗತಿಗಳನ್ನು ತಿಳಿಯಬೇಕಾದ ಸ್ವಲ್ಪಕಾರ್ಯವು ಮಾತ್ರವೇ ಉಳಿದಿರುವುದು. ಈ ಅವಶಿಷ್ಟ ಅಲ್ಪಕಾರ್ಯವನ್ನು ಸಾಧಿಸಬೇಕಾದರೆ, ಸಾಮದಾನಭೇದಗಳೆಂಬ ಮೂರು ಪಾಯಗಳನ್ನೂ ಬಿಟ್ಟು ದಂಡೋಪಾಯವನ್ನವಲಂಬಿಸುವುದೇ ಮೇಲೆಂದು ತೋರುವುದು. ಈ ರಾಕ್ಷಸರು ಬಹಳ ಮೂರ್ಖಸ್ವಭಾವವುಳ್ಳವರಾದುದರಿಂದ, ಅವರಲ್ಲಿ ಸಾಮೋಪಾಯವನ್ನು ಪ್ರಯೋಗಿಸುವುದರಿಂದ ಗುಣವಿಲ್ಲ! ಬಹಳ ಧನಾಢ್ಯರಾದವರಲ್ಲಿ ದಾನೋಪಾಯವೂ ಕೆಲಸಕ್ಕೆ ಬಾರದು! ಬಲದಿಂದ ಬಹಳವಾಗಿ ಕೊಬ್ಬಿದ ಇಂತಹ ಜನರು ಭೇದೋಪಾಯಕ್ಕೂ ವಶರಾಗತಕ್ಕವರಲ್ಲ! ಆದುದರಿಂದ ಇವರ ವಿಷಯದಲ್ಲಿ ದಂಡೋಪಾಯರೂಪವಾದ ಪರಾಕ್ರಮವನ್ನವಲಂಬಿಸುವುದೇ ಈಗ ನನಗೆ ಯುಕ್ತವೆಂದು ತೋರಿದೆ. ಈಗ ಈ ಕಾರ್ಯವನ್ನು ಸಾಧಿಸುವುದಕ್ಕೂ ಪರಾಕ್ರಮವು ಹೊರತು ಬೇರೆ ಯಾವ ಉಪಾಯವೂ ಉಚಿತವೆಂದು ತೋರಲಿಲ್ಲ. ಆದುದರಿಂದ ಈಗ ನಾನಾಗಿಯೇ ಇಲ್ಲಿ ಒಂದು ಕಲಹವನ್ನೆಬ್ಬಿಸಿ, ಇಲ್ಲಿನ ರಾಕ್ಷಸರಲ್ಲಿ ಪ್ರಮುಖರಾದ ಕೆಲವರನ್ನು ಯುದ್ಧದಲ್ಲಿ ಕೊಂದುಬಿಟ್ಟರೆ, ಆಗ ಉಳಿದ ರಾಕ್ಷಸರು ಹೇಗೋ ಒಂದುವಿಧದಿಂದ ಕೊಬ್ಬಡಗಿ ಮೃದುತ್ವವನ್ನು ಹೊಂದಬಹುದು. ಲೋಕದಲ್ಲಿ ಯಾವನು ಮುಖ್ಯವಾಗಿ ನಡೆಸಬೇಕಾದ ನಿಯತಕಾರ್ಯವನ್ನು ಮೊದಲು ಮುಗಿಸಿಕೊಂಡು, ಆ ಪ್ರಥಮ ಕಾರ್ಯಕ್ಕೆ ವಿರೋಧವು ಬಾರದಂತೆ ಬೇರೆ ಅನೇಕ ಕಾರ್ಯಗಳನ್ನೂ ಸಾಧಿಸುವನೋ, ಅಂತಹ ಭೃತ್ಯನೇ ಕಾರ್ಯಸಮರ್ಥನೆನಿಸುವನು. ಉದ್ದೇಶಿಸಿದ ಕಾರ್ಯವು ಅತ್ಯಲ್ಪವಾಗಿದ್ದರೂ ಒಂದೇದಾರಿಯನ್ನು ಹಿಡಿದು ಅದನ್ನು ಸಾಧಿಸಬೇಕೆಂದರೂ ಸಾಧ್ಯವಲ್ಲ. ಒಂದು ಕಾರ್ಯಸಾಧನೆಗೆ ಅನೇಕ ಮಾರ್ಗಗಳನ್ನು ತಿಳಿದವನೇ ಕಾರ್ಯಸಾಧನೆಯಲ್ಲಿ ಸಮರ್ಥನೆನಿಸುವನು. ಆದುದರಿಂದ ಇಲ್ಲಿ ನಾನು ಸೀತೆಯನ್ನು ಕಂಡುಬಿಟ್ಟಮಾತ್ರಕ್ಕೆ ಫಲವೇನು? ಇನ್ನೂ ಸ್ವಲ್ಪಕಾಲದವರೆಗೆ ನಾನು ಇಲ್ಲಿಯೇ

ಇದ್ದುಕೊಂಡು, ಯುದ್ಧದಲ್ಲಿ ನಮಗೂ, ಇಲ್ಲಿನ ರಾಕ್ಷಸರಿಗೂ ಇರುವ ಬಲಾಬಲಗಳ ತಾರತಮ್ಯವನ್ನು ಚೆನ್ನಾಗಿ ತಿಳಿದು ನಿಶ್ಚಯಿಸಿಕೊಂಡು, ಆಮೇಲೆ ಸುಗ್ರೀವನ ಬಳಿಗೆ ಹೋದರೆ, ಆಗ ನನ್ನ ಪ್ರಭುವಾದ ಆ ಸುಗ್ರೀವನ ಆಜ್ಞೆಯನ್ನು ಪೂರ್ಣವಾಗಿ ನೆರವೇರಿಸಿದಂತಾಗುವುದು. ಹಾಗಿಲ್ಲದೆ ಇಲ್ಲಿ ನಾನು ಸೀತೆಯನ್ನು ಮಾತ್ರ ಕಂಡು ಹೋದರೆ, ಇಲ್ಲಿನ ರಾಕ್ಷಸರ ಸ್ಥಿತಿಗತಿಗಳೇನೆಂದು ಸುಗ್ರೀವನು ಕೇಳಿದಾಗ, ಅವನಿಗೆ ನಾನು ಯಾವ ಪ್ರತ್ಯುತ್ತರವನ್ನು ಕೊಡಲಿ? ಆದುದರಿಂದ ಹೇಗಾದರೂ ಈಗ ನಾನು ಇಲ್ಲಿನ ರಾಕ್ಷಸರೊಡನೆ ಕಲಹವನ್ನಾರಂಭಿಸಿ ಪರೀಕ್ಷಿಸಬೇಕು. ಆ ಯುದ್ಧವಾದರೂ ಈಗ ಅನಾಯಾಸದಿಂದಲೇ ನಿರ್ವಾಹವಾಗುವುದಕ್ಕೆ ಉಪಾಯವನ್ನೂ ಹುಡುಕಬೇಕು. ಹಾಗೆ ಮಾಡಿದರಲ್ಲವೇ ರಾವಣನಿಗೆ ತನ್ನ ಕಡೆಯ ರಾಕ್ಷಸರ ಬಲವೂ, ನನ್ನ ಬಲವೂ ಚೆನ್ನಾಗಿ ಗೊತ್ತಾಗುವುದು? ಆಮೇಲೆ ಈ ಯುದ್ಧದ ನೆವದಿಂದಲೇ ನಾನು ರಾವಣನನ್ನೂ, ಅವನ ಮಂತ್ರಿವರ್ಗಗಳನ್ನೂ, ಅವನ ಸೇನಾಧಿಪತಿಗಳನ್ನೂ ಇದಿರಾಗಿ ಬರಮಾಡಿಕೊಂಡು, ಸೀತೆಯವಿಷಯವಾಗಿ ಆ ರಾವಣನ ಮನಸ್ಸಿನಲ್ಲಿರುವ ಅಭಿಪ್ರಾಯಗಳನ್ನೂ, ಅವನ ಬಲವನ್ನೂ, ಸುಲಭವಾಗಿ ತಿಳಿದುಕೊಂಡು ಹೋಗಬಹುದು. ಇದಕ್ಕುಪಾಯವನ್ನು ಹುಡುಕಬೇಕಲ್ಲವೆ? ಇರಲಿ! ಅತ್ಯುತ್ತಮವಾಗಿ ನಂದನವನಕ್ಕೆಣೆಯಾದ ಈ ಅಶೋಕವನವನ್ನಂತೂ ಘಾತುಕನಾದ ಆ ರಾವಣನಿಗೆ ಸೇರಿರುವುದು. ಇದು ಕಣ್ಣಿಗೂ ಮನಸ್ಸಿಗೂ ಅತ್ಯಾನಂದವನ್ನುಂಟುಮಾಡುವಂತಿರುವುದು. ಬಗೆಬಗೆಯ ಗಿಡುಬಳ್ಳಿಗಳಿಂದ ಶೋಭಿಸುತ್ತಿರುವುದು. ಆದುದರಿಂದ ಕಾಡುಗಿಚ್ಚು ಒಣಗಿದ ಕಾಡನ್ನು ಸುಡುವಂತೆ ಮೊದಲು ನಾನು ಈ ಅಶೋಕವನವನ್ನು ಧ್ವಂಸಮಾಡಿಬಿಡುವೆನು. ಈ ತೋಟವು ರಾವಣನಿಗೆ ಬಹಳ ಪ್ರೇಮಪಾತ್ರವಾದುದರಿಂದ, ಇದನ್ನು ಭಂಗಪಡಿಸಿದಮಾತ್ರಕ್ಕೆ ರಾವಣನಿಗೆ ಕೋಪವು ಹುಟ್ಟುವುದು. ಆಗ ಆ ರಾಕ್ಷಸರಾಜನು ಆನೆ ಕುದುರೆಗಳಿಂದಲೂ ಮಹಾರಥಗಳಿಂದಲೂ ತುಂಬಿದ ದೊಡ್ಡ ಸೇನೆಯನ್ನು ನನ್ನಮೇಲೆ ಕಳುಹಿಸುವನು. ಆ ರಾಕ್ಷಸಸೈನ್ಯಗಳೆಲ್ಲವೂ ಶೂಲಗಳನ್ನೂ, ಕಬ್ಬಿಣದ ಒನಕೆಗಳನ್ನೂ, ಪಟ್ಟಸಗಳನ್ನೂ ಹಿಡಿದು ನನ್ನನ್ನಿದಿರಿಸುವುವು. ಆಗ ದೊಡ್ಡಯುದ್ಧಕ್ಕೂ ಪ್ರಾರಂಭವಾಗುವುದು ಆಗ ನಾನು ಇತರರಿಂಗೆ ತಡೆಯಲಸಾಧ್ಯವಾದ ನನ್ನ ಪರಾಕ್ರಮವನ್ನು ಹಿಡಿದು, ಪ್ರಚಂಡ ಪರಾಕ್ರಮವುಳ್ಳ ಆ ರಾಕ್ಷಸರನ್ನಿದಿರಿಸಿ, ಕೊನೆಗೆ ರಾವಣನಿಂದ ಚೋದಿತವಾದ ಆ ಸಮಸ್ತಸೈನ್ಯವನ್ನೂ ಕೊಂದು, ಸುಖವಾಗಿ ಹಿಂತಿರುಗಿ ಸುಗ್ರೀವನ ಬಳಿಗೆ ಹೋಗಬಹುದು" ಎಂದು ನಿಶ್ಚಯಿಸಿಕೊಂಡನು. ಆಗಲೇ ಭಯಂಕರಪರಾಕ್ರಮವುಳ್ಳ

ಹನುಮಂತನು, ಕೋಪವನ್ನು ತಂದುಕೊಂಡು, ತನ್ನ ತೊಡೆಯ ವೇಗದಿಂದಲೇ ಮಹಾವಾತದಂತೆ ಅಲ್ಲಿನ ಮರಗಳನ್ನು ಮುರಿಯುವುದಕ್ಕಾರಂಭಿಸಿದನು. ಮದಿಸಿದ ಪಕ್ಷಿಗಳ ಕೂಗಿನಿಂದ ಮನೋಹರವಾಗಿಯೂ, ಬಗೆಬಗೆಯ ಗಿಡುಬಳ್ಳಿಗಳಿಂದ ತುಂಬಿದುದಾಗಿಯೂ, ರಾವಣನ ಅಂತಃಪುರಸ್ತ್ರೀಯರ ಕ್ರೀಡಾಸ್ಥಾನವಾಗಿಯೂ ಇರುವ ಆ ಪ್ರಮದವನವೆಲ್ಲವನ್ನೂ ಮುರಿದನು. ಛಿನ್ನಭಿನ್ನಗಳಾಗಿ ಬಿದ್ದ ಮರಗಿಡಗಳಿಂದಲೂ, ಒಡೆದ ಜಲಾಶಯಗಳಿಂದಲೂ, ಪುಡಿಪುಡಿಯಾದ ಕ್ರೀಡಾ ಪರ್ವತಗಳಿಂದಲೂ ಆ ಪ್ರಮದವನವು ಅಂದಗೆಟ್ಟು ಕಣ್ಣಿನಿಂದ ನೋಡಿ ಸಹಿಸಲಾರದಂತಾಯಿತು. ಬೆದರಿದ ಹಕ್ಕಿಗಳ ಕೂಗಿನಿಂದಲೂ, ಕುಸಿದು ಬಿದ್ದ ಕೆರೆಯೇರಿಗಳಿಂದಲೂ, ಸುಕ್ಕಿದ ಕೆಂದಳಿರುಗಳಿಂದಲೂ, ಬಾಡಿದ ಗಿಡಬಳ್ಳಿಗಳಿಂದಲೂ, ಅಶೋಕವನವೆಲ್ಲವೂ ದವಾಗ್ನಿಯಿಂದ ಬೆಂದಕಾಡಿನಂತೆ ಕಾಂತಿಗೆಟ್ಟಿತು. ಆಶ್ರಯವೃಕ್ಷಗಳು ಮುರಿದು ಬಿದ್ದುದರಿಂದ ಅಲ್ಲಿನ ಲತೆಗಳೆಲ್ಲವೂ ಗಂಡನಿಲ್ಲದ ಮುಂಡೆಯರಂತೆ ಕಾಣುತಿದ್ದುವು. ಆ ವನದ ಯಾವ ಕಡೆಯಲ್ಲಿ ನೋಡಿದರೂ, ಕೆದರಿದ್ದ ಲತಾಗೃಹಗಳೂ, ಮುರಿದುಬಿದ್ದ ಚಿತ್ರಶಾಲೆಗಳೂ, ಚದರಿ ಪಲಾಯನ ಮಾಡುವ ಸರ್ಪಗಳೂ, ಭಯದಿಂದೋಡುವ ವನಮೃಗಗಳೂ, ಪುಡಿಪುಡಿಯಾಗಿ ಬಿದ್ದ ಕಲ್ಲಿನಮಂಡಪಗಳೂ, ನೆಲಮಟ್ಟವಾದ ಸಾಮಾನ್ಯಗೃಹಗಳೂ, ಕಾಣುತಿದ್ದುದರಿಂದ, ಆ ಉದ್ಯಾನವನವೆಲ್ಲವೂ ಹಾಳುಬಿದ್ದ ಬೆಂಗಾಡಿನಂತೆ ತೋರುತಿತ್ತು. ರಾವಣನ ಅಂತಃಪುರಸ್ತ್ರೀಯರಿಗೆ ಭೋಗಾಶ್ರಯವಾದ ಆ ಪ್ರಮದವನದ ಭೂಪ್ರದೇಶವೆಲ್ಲವೂ, ಆ ಮಹಾಕಪಿಯ ಬಲದಿಂದ ಕಾಂತಿಗುಂದಿದುದಾಗಿ, ಬಹಳ ದೈನ್ಯದಶೆಯನ್ನು ಹೊಂದಿ ಶೋಚನೀಯಸ್ಥಿತಿಯಲ್ಲಿದ್ದಿತು. (ವನಪ್ರದೇಶವೆಲ್ಲವೂ ಆ ಕಪಿಯ ಬಲದಿಂದ ಕಂದಿದ ತಾವರೆಗಳುಳ್ಳುದಾಗಿ ಶೋಚನೀಯಾವಸ್ಥೆಯನ್ನು ಹೊಂದಿತು.) ಹೀಗೆ ಆ ಮಹಾಕಪಿಯು, ಭಾಗ್ಯಮದದಿಂದ ಕೊಬ್ಬಿದ ಮಹಾ ಪ್ರಭಾವವುಳ್ಳ ರಾವಣನ ಮಗನಿಸ್ಸಿಗೆ, ಈ ವನಭಂಗವೆಂಬ ನೆವದಿಂದ ಮಹಾವ್ಯಸನವನ್ನುಂಟುಮಾಡಿ, ತಾನೊಬ್ಬನೇ ಬಲಾಢ್ಯರಾದ ಅಲ್ಲಿನ ಅನೇಕ ರಾಕ್ಷಸರೊಡನೆ ಧೈರ್ಯದಿಂದ ನಿಂತು, ಹೋರಾಡಬೇಕೆಂದೆಣಿಸಿ, ತೇಜಸ್ಸಿನಿಂದ ಜ್ವಲಿಸುವಂತೆ ತೋರುತ್ತ, ತೋಟದ ಹೊರಬಾಗಿಲಲ್ಲಿ ಬಂದು ಕಾದಿದ್ದನು.

ಇಲ್ಲಿಗೆ ನಾಲ್ವತ್ತೊಂದನೆಯ ಸರ್ಗವು.

ಅಶೋಕವನಕ್ಕುಂಟಾದ ಭಂಗವನ್ನು ನೋಡಿ, ಅಲ್ಲಿದ್ದ ರಾಕ್ಷಸಸ್ತ್ರೀಯರು ಭಯಗೊಂಡು, ಸೀತೆಯನ್ನು ಸೋಡಿ ಹನುಮಂತನಾರೆಂದು ಪ್ರಶ್ನೆಮಾಡಿದುದು. ಸೀತೆಯು ತನಗೇನೂ ತಿಳಿಯದೆಂದು ಪ್ರತ್ಯುತ್ತರವನ್ನು ಹೇಳಲು, ರಾಕ್ಷಸಿಯರು ಈ ಸಂಗತಿಯನ್ನು, ರಾವಣನಿಗೆ ತಿಳಿಸಿದುದು. ರಾವಣನು ಕಳುಹಿಸಿದ ರಾಕ್ಷಸಸೈನ್ಯವೆಲ್ಲವನ್ನೂ ಹನುಮಂತನು ಕೊಂದುಹಾಕಿದುದು.

ಹೀಗೆ ಅಶೋಕವನದಲ್ಲಿ ಆಕಸ್ಮಿಕವಾಗಿ ಎದ್ದ ಪಕ್ಷಿಗಳ ಕಲಕಲವನ್ನೂ, ಮರಗಳು ಮುರಿದುಬಿದ್ದ ಶಬ್ದಗಳನ್ನೂ ಕೇಳಿ, ಲಂಕಾನಿವಾಸಿಗಳೆಲ್ಲರಿಗೂ ಮಹಾ ಭಯವು ಹುಟ್ಟಿತು. ಆ ವನದಲ್ಲಿದ್ದ ಮೃಗಪಕ್ಷಿಗಳೆಲ್ಲವೂ ಭಯದಿಂದರಚುತ್ತ ನಾನಾದಿಕ್ಕುಗಳಿಗೆ ಪಲಾಯನಮಾಡುತಿದ್ದುವು. ಅಲ್ಲಲ್ಲಿ ರಾಕ್ಷಸರಿಗೆ ನಾಶಸೂಚಕಗಳಾದ ಭಯಂಕರ ದುರ್ನಿಮಿತ್ತಗಳೂ ಕಂಡುಬಂದುವು. ಆ ವನದಲ್ಲಿ ಕಾವಲಾಗಿ ಮಲಗಿದ್ದ ವಿಕಾರಮುಖವುಳ್ಳ ಕೆಲವು ರಾಕ್ಷಸಿಯರು, ಈ ಗದ್ದಲವನ್ನು ಕೇಳಿ ದೊಡನೆ ನಿದ್ರೆಯಿಂದೆಚ್ಚತ್ತು, ಅಲ್ಲಿನ ಹಾವಳಿಯನ್ನೂ, ಆ ವಾನರನನ್ನೂ ಕಂಡರು. ಧೀರನಾಗಿಯೂ, ಬಲಾಢ್ಯನಾಗಿಯೂ ಮಹಾಪರಾಕ್ರಮಿಯಾಗಿಯೂ ಇರುವ ಹನುಮಂತನೂ ಕೂಡ, ಮೊದಲೇ ಭಯವಶರಾಗಿ ತನ್ನನ್ನು ನೋಡುತ್ತಿರುವ ಆ ರಾಕ್ಷಸಿಯರಿಗೆ ಮತ್ತಷ್ಟು ಭಯವು ಹುಟ್ಟುವಂತೆ, ತನ್ನ ಆಕಾರವನ್ನು ಬಹಳ ದೊಡ್ಡದಾಗಿ ಬೆಳೆಸಿ ಬಿಟ್ಟನು. ಹೀಗೆ ಬೆಟ್ಟದಂತೆ ದೊಡ್ಡರೂಪವನ್ನು ತಾಳಿ ನಿಂತಿರುವ ಮಹಾಬಲಾಢ್ಯನಾದ ಆ ವಾನರನ ಆಕಾರವನ್ನು ನೋಡಿ, ಆ ರಾಕ್ಷಸಿಯರೆಲ್ಲರೂ ಜನಕಪುತ್ರಿಯಾದ ಸೀತೆಯ ಬಳಿಗೆ ಬಂದು ಅವಳನ್ನು ಕುರಿತು, "ಅಮ್ಮ ವಿಶಾಲಾಕ್ಷಿ! ಇವನು? ಯಾರಿವನು? ಯಾರ ಮಗನು? ಇಲ್ಲಿಗೇಕೆ ಬಂದನು? ಇವನ ಹೆಸರೇನು? ಯಾರ ಮಾತಿನಮೇಲೆ ಇಲ್ಲಿಗೆ ಬಂದಿರುವನು? ಎಲ್ಲಿಂದ ಬಂದಿರುವನು? ನಿನ್ನ ಕಿವಿಯಲ್ಲಿ ಇವನು ಮಾತಾಡಿದ ವಿಷಯವೇನು? ಎಲೆ ಸೀತೆ! ಹೆದರಬೇಡ! ಇದ್ದ ಸ್ಥಿತಿಯನ್ನು ವಿವರವಾಗಿ ತಿಳಿಸು! ಇವನು ನಿನ್ನೊಡನೆ ಮಾತಾಡಿದ ಕಾರಣವೇನು?" ಎಂದು ಅತ್ಯಾತುರದಿಂದ ಕೇಳಿದರು. ಆಗ ಪರಮಸಾಧ್ವಿಯಾದ ಆ ಸೀತೆಯು, ಅವರನ್ನು ಕುರಿತು, "ಎಲೆ ರಾಕ್ಷಸಿಯರೆ! ಬಹಳ ಚೆನ್ನಾಯಿತು! ನಿಮ್ಮ ರಾಕ್ಷಸರ ಮಾಯೆಯನ್ನು ನಾನು ಬಲ್ಲೆನೆ? ನಿಮ್ಮ

1. "ವಿವಾಹಕಾಲೇ ರತಿಸಂಪ್ರಯೋಗೇ ಪ್ರಾಣಾತ್ಯಯೇ ಸರ್ವಧನಾಪಹಾರೇ। ಮಿತ್ರಸ್ಯ ಚಾರ್ಥೇಽಪ್ಯನೃತಂ ವದೇದ್ಯಃ ಪಂಚಾನೃತಾನ್ಯಾಹುರಪಾತಕಾನಿ" ಒಂದು ವಿವಾಹವನ್ನು ನಡೆಸುವ ಸಂದರ್ಭದಲ್ಲಿಯೂ, ರತಿಕಾಲದಲ್ಲಿಯೂ, ಪ್ರಾಣಾಪಾಯವು ಬಂದೊ

ಕಡೆಯ ರಾಕ್ಷಸರೇ ಹೀಗೆ ಭಯಂಕರಗಳಾದ ನಾನಾರೂಪಗಳನ್ನು ತೋರಿಸಬಲ್ಲರೇ ಹೊರತು, ಅವೆಲ್ಲವೂ ನಮಗೆ ತಿಳಿಯುವುದೆ? ನೀವೂ ಸ್ತ್ರೀರಾಕ್ಷಸರಾದುದರಿಂದ ಇದರ ನಿಜಸ್ಥಿತಿಯು ನಿಮಗೇ ತಿಳಿದಿರಬೇಕು. ಈತನಾವನೋ! ಏನು ಮಾಡು ತ್ತಿರುವನೋ! ಅವೆಲ್ಲವನ್ನೂ ನೀವೇ ಬಲ್ಲಿರಿ! ಹಾವಿನ ಹೆಜ್ಜೆಯನ್ನು ಹಾವೇ ಬಲ್ಲುದಲ್ಲವೆ? ಈ ಕಪಿಯನ್ನು ನೋಡಿ ನನಗೂ ಭಯವಾಗಿರುವುದು. ಈ ಕಪಿ ಯಾವುದೋ ನಾಕು ಕಾಣೆನು. ನಿಮ್ಮಿಂದಲೇ ನಾನೂ ತಿಳಿಯಬೇಕಾಗಿರುವುದು. ನಿಮ್ಮಲ್ಲಿ ಕಾಮರೂಪಿಯಾದ ಯಾವನೋ ಒಬ್ಬ ರಾಕ್ಷಸನೇ ಈ ರೀತಿಯಿಂದ ಬಂದಿರಬೇಕೆಂದು ನನಗೆ ತೋರಿರುವುದು" ಎಂದಳು. ಸೀತೆಯ ಈ ಮಾತನ್ನು ಕೇಳಿದಮೇಲೆ ಆ ರಾಕ್ಷಸಿಯರೆಲ್ಲರೂ ಭಯದಿಂದ ಆ ತೋಟದ ನಾಲ್ಕು ಕಡೆಗಳಿಗೂ ಪಲಾಯನಮಾಡಿದರು. ಕೆಲವರು ಅಲ್ಲಿಯೇ ಮರಗಳ ಮರೆಯಲ್ಲಿ ಅವಿತುಕೊಂಡರು. ಕೆಲವರು ಈ ಸಂಗತಿಯನ್ನು ರಾವಣನಿಗೆ ತಿಳಿಸುವುದಕ್ಕಾಗಿ ಅರಮನೆಗೆ ಓಡಿದರು. ವಿಕಾರರೂಪವುಳ್ಳ ಆ ರಾಕ್ಷಸಿಯರು ರಾವಣನ ಮುಂದೆ ನಿಂತು ತಾವು ಅಶೋಕ ವನದಲ್ಲಿ ಕಂಡು ಬಂದ ಕಪಿಯ ವಿಲಕ್ಷಣರೂಪವನ್ನೂ, ಅದರ ಭಯಂಕರಾಕಾರ ವನ್ನೂ ವಿವರಿಸತೊಡಗಿದರು. "ಅಬ್ಬಾ! ಎಲೈ ರಾಜನೆ! ನಾವೇನು ಹೇಳಲಿ! ಒಂದು ದೊಡ್ಡಕಪಿ! ಅದನ್ನು ನೋಡುವಾಗಲೇ ಮೈನಡುಗುವುದು! ಹೇಗೋ ಬಂದು ಆದು ನಮ್ಮ ಅಶೋಕವನದ ನಡುವೆ ಸೇರಿಕೊಂಡಿರುವುದು! ಅದರ ಪರಾ ಕ್ರಮಕ್ಕೆ ಎಣೆಯೇ ಇಲ್ಲವೆಂದೂ ತೋರುವುದು! ಮೊದಲು ಸೀತೆಯೊಡನೆ ಏನೋ ಪಿಸುಮಾತುಗಳನ್ನಾಡಿತು. ಈಗಲೂ ಅಲ್ಲಿಯೇ ಕಾದಿರುವುದು! ಆ ಕಪಿಯಾವು ದೆಂದು ನಾವೆಲ್ಲರೂ ಎಷ್ಟೋ ವಿಧದಿಂದ ಸೀತೆಯನ್ನು ನಿರ್ಬಂಧಿಸಿ ಕೇಳಿದೆವು! ಎಷ್ಟಾದರೂ ಸೀತೆಯು ಆ ಕಪಿಯ ನಿಜಸ್ಥಿತಿಯನ್ನು ನಮಗೆ ತಿಳಿಸಲಿಲ್ಲ! ಒಂದು ವೇಳೆ ಅವನು ದೇವೇಂದ್ರನ ಕಡೆಯ ದೂತನಾಗಿದ್ದರೂ ಇರಬಹುದು! ಕುಬೇರನ ದೂತನಾಗಿದ್ದರೂ ಇರಬಹುದು! ಕೊನೆಗೆ ಸೀತೆಯನ್ನು ಹುಡುಕಿ ಬರುವುದಕ್ಕಾಗಿ ರಾಮನು ಕಳುಹಿಸಿದ್ದರೂ ಇರಬಹುದು! ಹೀಗೆಂದು ನಿಶ್ಚಯಿಸುವುದಕ್ಕಿಲ್ಲ! ಮುಖ್ಯವಾಗಿ ಮಹಾದ್ಭುತರೂಪವುಳ್ಳ ಆ ಕಪಿಯಂತೂ, ಅನೇಕ ಮೃಗಸಮೂಹ ಗಳಿಗಾಶ್ರಯವಾಗಿ, ಲೋಕಮನೋಹರವಾದ ನಮ್ಮ ಪ್ರಮದವನವೆಲ್ಲನ್ನೂ ನಿರ್ಮೂಲವಾಗಿ ನಾಶಮಾಡಿಬಿಟ್ಟಿತು! ನಮ್ಮ ತೋಟದಲ್ಲಿ ಆ ಕಪಿಯು

ದಗಿದಾಗಲೂ, ಮಿತ್ರರಕಾರ್ಯಕ್ಕಾಗಿಯೂ, ಸುಳ್ಳಾಡುವುದರಿಂದ ದೋಷವಿಲ್ಲವೆಂಬ ವಿಧಿ ಯುಂಟು. ಅದುದರಿಂದ ಇಲ್ಲಿ ಸೀತೆಯು ಮಿತ್ರರಕ್ಷಣೆಗಾಗಿ ಸುಳ್ಳಾಡುವುದು ಪಾಪವಲ್ಲ ವೆಂದೆಣಿಸಿ, ಹನುಮಂತನ ವಿಷಯವಾಗಿ ಅಸತ್ಯವನ್ನು ಹೇಳಿದುದಾಗಿ ಗ್ರಾಹ್ಯವು.

ಹಾಳುಮಾಡದ ಪ್ರದೇಶವೊಂದಾದರೂ ಇಲ್ಲ! ಆದರೆ ಜನಕಪುತ್ರಿಯಾದ ಆ ಸೀತೆಯಿರುವ ಪ್ರದೇಶವನ್ನು ಮಾತ್ರ ಹಾಗೆಯೇ ಬಿಟ್ಟಿರುವುದು! ಹೀಗೆ ಆ ಕಪಿಯು ಆ ಸ್ಥಳವನ್ನು ಮಾತ್ರ ಕೆಡಿಸದೆ ಬಿಟ್ಟಿರುವುದನ್ನು ನೋಡಿದರೆ, ಸೀತೆಯಮೇಲೆ ಅದಕ್ಕಿರುವ ಪ್ರೇಮದಿಂದಲೋ, ಅಥವಾ ಅದುವರೆಗೆ ವಿಶೇಷವಾಗಿ ಶ್ರಮಪಟ್ಟು ಬಳಲಿಹೋದುದರಿಂದಲೋ ಅದನ್ನೂ ತಿಳಿಯುವುದಕ್ಕಿಲ್ಲ. ಅಥವಾ ಆ ಮಹಾ ಕಪಿಗೆ ಬಳಲಿಕೆಯೆಂದರೇನು? ಸೀತೆಯನ್ನು ರಕ್ಷಿಸುವುದಕ್ಕಾಗಿಯೇ ಹಾಗೆ ಮಾಡಿರಬೇಕು. ಅಂದವಾದ ಚಿಗುರುಗಳಿಂದಲೂ, ಹೂಗಳಿಂದಲೂ ತುಂಬಿದ ಯಾವ ಶಿಂಶುಪಾವೃಕ್ಷದ ಕೆಳಗೆ ಆ ಸೀತೆಯು ಕುಳಿತಿರುವಳೋ, ಆ ಮರವನ್ನು ಮಾತ್ರ ಉಳಿಸಿರುವುದು. ಎಲೈ ಮಹಾರಾಜನೆ! ಭಯಂಕರಾಕಾರವುಳ್ಳ ಆ ವಾನರನು ಮೊದಲು ಸೀತೆಯೊಡನೆ ಕೆಲವು ಪಿಸುಮಾತಗಳನ್ನಾಡಿದುದೂ ಅಲ್ಲದೆ, ನಿನಗೆ ಪರಮಪ್ರಿಯವಾದ ಅಶೋಕವನವನ್ನೂ ಹಾಳುಮಾಡಿಬಿಟ್ಟಿತು. ಹೀಗೆ ನಿನ್ನಲ್ಲಿ ಎರಡು ಮಹಾಪರಾಧಗಳನ್ನು ಮಾಡಿದ ಆ ಕಪಿಯ ದುಷ್ಟೇಷ್ಟೆಗೆ ತಕ್ಕಂತೆ ನೀನೂ ಅದಕ್ಕೆ ಕ್ರೂರದಂಡನೆಯನ್ನೇ ವಿಧಿಸಬೇಕು? ಎಲೆ ರಾಕ್ಷಸೇಂದ್ರನೆ! ಲೋಕದಲ್ಲಿ ಬದುಕಿರಬೇಕೆಂಬ ಆಸೆಯುಳ್ಳ ಯಾವನು ತಾನೇ, ನೀನು ಮನಸ್ಸಿನಿಂದ ಪರಿಗ್ರಹಿಸಿರುವ ಆ ಸೀತೆಯನ್ನು ಅಷ್ಟು ಧೈರ್ಯದಿಂದ ಮಾತಾಡಿಸಬಲ್ಲನು?" ಎಂದರು. ರಾಕ್ಷಸಿಯರು ಹೇಳಿದ ಈ ಮಾತನ್ನು ಕೇಳಿದೊಡನೆ ರಾವಣನು ಬೆಂಕಿಯಂತೆ ಕೋಪದಿಂದ ಕಿಡಿಕಿಡಿಯಾಗಿ, ಅತ್ಯಾಕ್ರೋಶದಿಂದ ಕಣ್ಣಾಲಿಗಳನ್ನು ತಿರುಗಿಸಿ ಕ್ರೂರದೃಷ್ಟಿಯಿಂದ ನೋಡುತ್ತಿರಲು, ಉರಿಯುವ ದೀಪಗಳಿಂದ ಜ್ವಾಲೆಯೊಡಗೂಡಿ ಕೆಳಗೆ ಬೀಳುವ ಎಣ್ಣೆಯ ಬಿಂದುಗಳಂತೆ, ಆ ರಾವಣನ ಕಣ್ಣುಗಳಿಂದ ಬಾಷ್ಪ ಬಿಂದುಗಳು ಬೀಳುತಿದ್ದುವು. ಆಗಲೇ ಮಹಾತೇಜಸ್ವಿಯಾದ ಆ ರಾವಣನು ತನಗೆ ಸಮಾನವಾದ ಬಲವುಳ್ಳ ಕಿಂಕರರೆಂಬ ಕೆಲವು ರಾಕ್ಷಸರನ್ನು ಕರೆದು ಹನುಮಂತನನ್ನು ನಿಗ್ರಹಿಸಿ ಬರುವುದಕ್ಕಾಗಿ ನಿಯಮಿಸಿದನು. ಎಂಬತ್ತು ಸಾವಿರಸಂಖ್ಯೆಯುಳ್ಳ ಮಹಾವೇಗಶಾಲಿಗಳಾದ ಕಿಂಕರರೆಂಬ ಆ ರಾಕ್ಷಸರೆಲ್ಲರೂ, ಆಗಲೇ ಕೂಟಮುದ್ಗರಾದ್ಯಾಯುಧಗಳನ್ನು ಹಿಡಿದು ಆ ರಾಜಗೃಹದಿಂದ ಅಶೋಕವನಕ್ಕೆ ಹೊರಟರು. ಅವರಲ್ಲಿಯೋ, ಒಬ್ಬೊಬ್ಬರೂ ಗುಡಾಣದಂತೆ ದೊಡ್ಡ ಹೊಟ್ಟೆಯುಳ್ಳವರು. ಒಬ್ಬೊಬ್ಬರೂ ಮಹಾದಂಷ್ಟ್ರವುಳ್ಳವರು. ಒಬ್ಬೊಬ್ಬರೂ ಘೋರಸ್ವರೂಪವುಳ್ಳವರು. ಒಬ್ಬೊಬ್ಬರೂ ಮಹಾಬಲಾಢ್ಯರು! ಒಬ್ಬೊಬ್ಬರೂ ಯುದ್ಧದಲ್ಲಿ ಮಹೋತ್ಸಾಹವುಳ್ಳವರು. ಇಂತಹ ಘೋರರಾಕ್ಷಸರೆಲ್ಲರೂ ಸೇರಿ ಹನುಮಂತನನ್ನು ಹಿಡಿದುತರಬೇಕೆಂಬ ಆತುರ

ದಿಂದ ಹೊರಟುಬಂದರು. ಹೀಗೆ ಆ ರಾಕ್ಷಸರು ವೇಗದಿಂದ ಬಂದು, ಆಶೋಕ ವನದ ಹೊರಬಾಗಿಲಲ್ಲಿ ಯುದ್ಧಸನ್ನದ್ಧನಾಗಿ ನಿಂತಿದ್ದ ಆ ಮಹಾಕಪಿಯನ್ನು ನೋಡಿ, ಬೆಂಕಿಯಮೇಲೆ ಬೀಳುವ ಮಿಡಿತೆಗಳಂತೆ ಆ ಹನುಮಂತನಮೇಲೆ ನುಗ್ಗಿದರು. ಆ ರಾಕ್ಷಸರೆಲ್ಲರೂ ಸೇರಿ, ಚಿತ್ರವಿಚಿತ್ರಗಳಾದ ಗದೆಗಳಿಂದಲೂ, ಚಿನ್ನದ ಕಟ್ಟುಳ್ಳ ಪರಿಘಗಳಿಂದಲೂ, ಸೂರ್ಯನಂತೆ ಧಗಧಗಿಸುವ ಬಾಣಗಳಿಂದಲೂ, ಆ ವಾನರೋತ್ತಮನನ್ನು ಹೊಡೆದರು. ಹೀಗೆ ಅಲ್ಲಿಗೆ ಬಂದ ಆ ರಾಕ್ಷಸರಲ್ಲಿ, ಕೆಲವರು ಕಬ್ಬಿಣದೊನಕೆಗಳಿಂದಲೂ, ಕೆಲವರು ಪಟ್ಟಸಗಳಿಂದಲೂ, ಕೆಲವರು ಶೂಲಗಳಿಂದಲೂ, ಕೆಲವರು ಭಲ್ಲಗಳಿಂದಲೂ, ಕೆಲವರು ಈಟಿಗಳಿಂದಲೂ, ಕೆಲವರು ಶಕ್ತ್ಯಾಯುಧಗಳಿಂದಲೂ ಆ ಹನುಮಂತನನ್ನು ಪ್ರಹರಿಸುತ್ತ, ಅವನ ಸುತ್ತಲೂ ಮುತ್ತಿ ನಿಂತಿದ್ದರು. ಪರ್ವತದಂತೆ ಮಹಾದೇಹವುಳ್ಳ ತೇಜಸ್ವಿಯಾದ ಹನುಮಂತನಾದರೋ, ಅವೊಂದನ್ನೂ ಲಕ್ಷ್ಯಮಾಡದೆ, ಮೇಲೆಮೇಲೆ ತನ್ನ ಮೈಯನ್ನು ಬಳಸಿಕೊಂಡು, ಆ ಲಂಕಾನಗರಿಯೆಲ್ಲವನ್ನೂ ಮಹಾಧ್ವನಿಯಿಂದ ತುಂಬುವಂತೆ, ತನ್ನ ಬಾಲದಿಂದ ನೆಲವನ್ನಪ್ಪಳಿಸಿ ಹೊಡೆದು, ಒಂದು ದೊಡ್ಡ ಸಿಂಹನಾದವನ್ನು ಮಾಡಿದನು. ಮತ್ತು ವಾಯುಪುತ್ರನಾದ ಆ ಹನುಮಂತನು ರಾಕ್ಷಸರಮುಂದೆ ಹೀಗೆ ಮಹಾದ್ಭುತರೂಪವನ್ನು ತಾಳಿ ತನ್ನ ಭುಜವನ್ನು ಬಲವಾಗಿ ತಟ್ಟಲು, ಅವನ ಭುಜಾಸ್ಫಾಲನದಿಂದುಂಟಾದ ಮಹಾಧ್ವನಿಯು, ಅಲ್ಲಲ್ಲಿನ ಬೆಟ್ಟದ ತಪ್ಪಲುಗಳಿಂದ ಹೊರಟೆ ದೊಡ್ಡ ಪ್ರತಿಧ್ವನಿಯೊಡಗೂಡಿ ನಾಲ್ಕುದಿಕ್ಕುಗಳನ್ನೂ ವ್ಯಾಪಿಸಿತು. ಆ ಧ್ವನಿಗೆ ಹೆದರಿ ಗಗನಚಾರಿಗಳಾದ ಹಕ್ಕಿಗಳೆಲ್ಲವೂ ಕೆಳಕ್ಕುದಿರಿದುವು. ಆಮೇಲೆ ಹನುಮಂತನು ಆ ರಾಕ್ಷಸರ ನಡುವೆ ಧೈರ್ಯದಿಂದ ನಿಂತು, ಅವರನ್ನು ಕುರಿತು ಗಟ್ಟಿಯಾಗಿ "ಅತಿ ಬಲಾಢ್ಯನಾದ ನಮ್ಮ ರಾಮನಿಗೆ ಜಯವು. ಮಹಾಬಲವುಳ್ಳ ಲಕ್ಷ್ಮಣನಿಗೆ ಜಯವು. ರಾಮನಿಂದ ಪಾಲಿತನಾದ ನಮ್ಮ ಪ್ರಭುವಾದ ಸುಗ್ರೀವನಿಗೆ ಜಯವು. ಎಂತಹ ಅಸಾಧ್ಯಕಾರ್ಯಗಳನ್ನಾದರೂ ಸುಖವಾಗಿ ಸಾಧಿಸಬಲ್ಲ ಕೋಸಲೇಂದ್ರನಾದ ಆ ರಾಮನಿಗೆ ನಾನು ದಾಸನು. ನನಗೆ ಹನುಮಂತನೆಂದು ಹೆಸರು. ನಾನು ವಾಯುಪುತ್ರನು. ಶತ್ರುಸೈನ್ಯಗಳನ್ನು ನಿರ್ಮೂಲ ಮಾಡತಕ್ಕವನು. ಈ ಒಬ್ಬ ರಾವಣನು ಹಾಗಿರಲಿ! ಇಂತಹ ಸಾವಿರಮಂದಿ ರಾವಣರು ಬಂದರೂ ಯುದ್ಧದಲ್ಲಿ ನನಗಿದಿರಲ್ಲ! ನಾನು ನಿರಾಯುಧನಾಗಿರುವುದರಿಂದ ಕೈಲಾಗದವನೆಂದೆಣಿಸಬೇಡಿರಿ! ಕೈಗೆ ಸಿಕ್ಕಿದ ಕಲ್ಲುಮರಗಳನ್ನೇ ಹಿಡಿದು, ಸಾವಿರಾರುವಿಧದಿಂದ ಶತ್ರುಗಳನ್ನು ಹೊಡೆದೋಡಿಸಬಲ್ಲೆನು. ಈಗ ರಾಕ್ಷಸರೆಲ್ಲರೂ ನೋಡುತ್ತಿರು

ವಾಗಲೇ ನಾನು ಈ ಪಟ್ಟಣವೆಲ್ಲವನ್ನೂ ಧ್ವಂಸಮಾಡಿ, ನಮ್ಮ ಸೀತಾದೇವಿಗೂ ನಮಸ್ಕರಿಸಿ ಕೃತಾರ್ಥನಾಗಿ ರಾಮನಬಳಿಗೆ ಹೋಗಿ ಸೇರುವೆನು" ಎಂದು ಕೈಯೆತ್ತಿ ಕೂಗಿದನು. ಅಲ್ಲಿದ್ದ ರಾಕ್ಷಸರೆಲ್ಲರೂ ಈ ಹನುಮಂತನ ಮಹಾರ್ಭಟನವನ್ನು ಕೇಳಿ ಭಯಗೊಂಡು, ಸಂಧ್ಯಾಕಾಲದ ಮೇಘದಂತೆ ರಕ್ತವರ್ಣದಿಂದ ಕೂಡಿದ ಮಹಾಕಾಯವುಳ್ಳ ಆ ಹನುಮಂತನನ್ನು ನಟ್ಟ ಕಣ್ಣಿನಿಂದ ಸ್ತಬ್ಧರಾಗಿ ನೋಡುತ್ತಿದ್ದರು. ಅವರ ಮನಸ್ಸಿನಲ್ಲಿ ಬಹಳ ಭಯವಿದ್ದರೂ ರಾಜಾಜ್ಞೆಗೆ ಬದ್ಧರಾದುದರಿಂದ ಆ ಭಯವನ್ನು ಬಿಟ್ಟು, ಇದಿರಾಗಿ ಬಂದು ಅತನನ್ನು ದಿಟಿಸಲಾರದೆ, ಅಲ್ಲಲ್ಲಿ ಮರೆಯಾಗಿಯೇ ನಿಂತು ವಿವಿಧಾಯುಧಗಳಿಂದ ಅತನನ್ನು ಹೊಡೆಯುತಿದ್ದರು. ಮಹಾಬಲಾಢ್ಯನಾದ ಹನುಮಂತನಾದರೋ ಹೀಗೆ ಶೂರರಾದ ಅನೇಕರಾಕ್ಷಸರು ತನ್ನ ಸುತ್ತಲೂ ಮುತ್ತಿ ಹೊಡೆಯುವುದನ್ನು ನೋಡಿ ಕೋಪಗೊಂಡು, ಆ ತೋಟದ ಹೊರಬಾಗಿಲಲ್ಲಿದ್ದ ಮಹಾ ಭಯಂಕರವಾದ ದೊಡ್ಡ ಬಾಗಿಲಗುಳಿಯನ್ನು ನೋಡಿ, ಅದನ್ನೇ ಕೈಗೆ ತೆಗೆದುಕೊಂಡು, ಅದರಿಂದಲೇ ಆ ರಾಕ್ಷಸರೆಲ್ಲರನ್ನೂ ಬಡಿಯುತಿದ್ದನು. ಮತ್ತು ವೀರನಾದ ಆ ಹನುಮಂತನು ಸರ್ಪವನ್ನು ಹಿಡಿದ ಗರುಡನಂತೆ, ಆ ಅಗುಳಿಯನ್ನು ಹಿಡಿದು ಆಕಾಶದಲ್ಲಿಯೇ ಚಿತ್ರಗತಿಯಿಂದ ಸುತ್ತುತಿದ್ದನು. ಇಂದ್ರನು ತನ್ನ ವಜ್ರಾಯುಧದಿಂದ ದಾನವರನ್ನು ಕೊಲ್ಲುವಂತೆ, ಆ ಅಗುಳಿಯಿಂದಲೇ ಅವರೆಲ್ಲರನ್ನೂ ಕೊಂದನು. ಹೀಗೆ ಮಹಾವೀರನಾದ ವಾಯುಪುತ್ರನು, ಕಿಂಕರರೆಂಬ ಆ ಸಮಸ್ತ ರಾಕ್ಷಸರನ್ನೂ ನಿಶ್ಶೇಷವಾಗಿ ಕೊಂದು, ತಿರುಗಿ ಯುದ್ಧಾಕಾಂಕ್ಷಿಯಾಗಿ ಆ ತೋಟದ ಹೊರಬಾಗಿಲಲ್ಲಿಯೇ ಕಾದಿದ್ದನು. ಇತ್ತಲಾಗಿ ಆ ಯುದ್ಧದಲ್ಲಿ ಭಯದಿಂದ ತಲೆತಪ್ಪಿಸಿಕೊಂಡು ಬಂದ ಕೆಲವು ರಾಕ್ಷಸರು, ಅಗಲೇ ಓಡಿ ಹೋಗಿ, ಕಿಂಕರರೆಂಬ ರಾಕ್ಷಸರೆಲ್ಲರೂ ಹತರಾದ ವಿಷಯವನ್ನು ರಾವಣನಿಗೆ ತಿಳಿಸಿದರು. ಆಗ ರಾಕ್ಷಸರಾಜನು ಕಿಂಕರಸೈನ್ಯವೆಲ್ಲವೂ ಹತವಾದುದನ್ನು ಕೇಳಿ, ಕೋಪದಿಂದ ಕಣ್ಣುಗಳನ್ನು ತಿರುಗಿಸುತ್ತ, ಪರಾಕ್ರಮದಲ್ಲಿ ಎಣೆಯಿಲ್ಲದವನಾಗಿಯೂ, ಯುದ್ಧದಲ್ಲಿ ದುರ್ಜಯನಾಗಿಯೂ ಇದ್ದ ಪ್ರಹಸ್ತಪುತ್ರನನ್ನು ಕರೆದು, ಹನುಮಂತನನ್ನು ನಿಗ್ರಹಿಸುವುದಕ್ಕಾಗಿ ಕಳುಹಿಸಿದನು.

ಇಲ್ಲಿಗೆ ನಾಲ್ವತ್ತೆರಡನೆಯ ಸರ್ಗವು.

ಹನುಮಂತನು ತೋಟದ ಹೊರಬಾಗಿಲನ್ನು ಬಿಟ್ಟು, ಅಲ್ಲಿನ 1ಚೈತ್ಯಪ್ರಾಸಾದದನ್ನೇರಿ ಅದನ್ನು ಮುರಿದು ಅಲ್ಲಿನ ರಾಕ್ಷಸರನ್ನೂ ಧ್ವಂಸಮಾಡಿದುದು.

ಹೀಗೆ ಹನುಮಂತನು ಆ ಕಿಂಕರಸೈನ್ಯವನ್ನು ಕೊಂದಮೇಲೆ, ತಾನು ಮೊದಲಿದ್ದ ಸ್ಥಳಕ್ಕೆ ಬಂದು ನಿಂತು, ತನ್ನಲ್ಲಿ ತಾನು "ಈ ಅಶೋಕವನವನ್ನಂತೂ ನಾನು ಸಂಪೂರ್ಣವಾಗಿ ನಾಶಮಾಡಿ ಬಿಟ್ಟೆನು. ಆದರೆ ಇಲ್ಲಿನ ರಾಕ್ಷಸರ ಕುಲದೇವತೆಗಳಿಗೆ ಸ್ಥಾನವಾದ ಈ ಚೈತ್ಯಪ್ರಾಸಾದವು ಮಾತ್ರ ಇನ್ನೂ ಹಾಗೆಯೇ ಉಳಿದಿರುವುದು. ಇದನ್ನೂ ಬಿಡಬಾರದು. ಆದುದರಿಂದ ಮಹೋನ್ನತವಾಗಿಯೂ, ಭಯಂಕರವಾಗಿಯೂ ಇರುವ ಈ ಪ್ರಾಸಾದವನ್ನೂ ಕೆಡಹಿಬರುವೆನು" ಎಂದು ಮನಸ್ಸಿನಲ್ಲಿ ನಿರ್ಧರಮಾಡಿಕೊಂಡು, ಅಲ್ಲಿನ ರಾಕ್ಷಸರಿಗೆ ತನ್ನ ದೇಹಬಲವನ್ನು ತೋರಿಸುವುದಕ್ಕಾಗಿ, ಆ ಹೊರಬಾಗಿಲಿನಿಂದಲೇ ಒಂದೇ ನೆಗೆತಕ್ಕೆ ಮೇಲೆ ಹಾರಿ, ಮೇರು ಶಿಖರದಂತೆ ಮಹೋನ್ನತವಾದ ಆ ಪ್ರಾಸಾದವನ್ನೇರಿ ಕುಳಿತನು. ಹೀಗೆ ಆ ವಾನರೋತ್ತಮನು ದೊಡ್ಡಬೆಟ್ಟದಂತಿರುವ ಆ ಪ್ರಾಸಾದದ ಮೇಲೆ ಕುಳಿತಾಗ ತನ್ನ ತೇಜಸ್ಸಿನಿಂದ 2 ಬೇರೊಬ್ಬ ಸೂರ್ಯನೇ ಉದಿಸಿಬಂದಂತೆ ಪ್ರಕಾಶಿಸುತ್ತಿದ್ದನು. ಮತ್ತು ಬೇರೊಬ್ಬರಿಗೆ ದುರ್ಗಮವಾದ ಆ ಚೈತ್ಯಪ್ರಾಸಾದವನ್ನೇರಿ, ದಿವ್ಯತೇಜಸ್ಸಿನಿಂದ ಜ್ವಲಿಸುತ್ತ, ಪಾರಿಯಾತ್ರವೆಂಬ ಕುಲಪರ್ವತದಂತೆ ಕಾಣುತಿದ್ದನು. ಆಗಲೂ ವಾಯುಪುತ್ರನು, ತನ್ನ ಪ್ರಭಾವದಿಂದ ದೊಡ್ಡ ದೇಹವನ್ನು ತಾಳಿ, ಲಂಕೆಯೆಲ್ಲವನ್ನೂ ಶಬ್ದದಿಂದ ತುಂಬುವಂತೆ ಬಲವಾಗಿ ತನ್ನ ಭುಜವನ್ನಪ್ಪಳಿಸಿದನು. ಕರ್ಣಕ್ಕೆ ಘೋರವಾದ ಈ ದೊಡ್ಡ ಭುಜಾಸ್ಫಾಲನ ಧ್ವನಿಯನ್ನು ಕೇಳಿ, ಆಕಾಶದಿಂದ ಹಕ್ಕಿಗಳೆಲ್ಲವೂ ಉದುರಿ ಬೀಳುತಿದ್ದುವು. ಆ ಪ್ರಾಸಾದಕ್ಕೆ ಕಾವಲಿದ್ದ ರಾಕ್ಷಸರೆಲ್ಲರೂ ಮೂರ್ಛೆಬಿದ್ದರು. ಹೀಗೆ ಹನುಮಂತನು ಆ ಪ್ರಾಸಾದ ಶಿಖರದಲ್ಲಿ ಕುಳಿತು ಭುಜವನ್ನು ತಟ್ಟುತ್ತ "ಸರ್ವಾಸ್ತ್ರವಿಶಾರದನಾದ ಆ ಶ್ರೀರಾಮನಿಗೆ ಜಯವಾಗಲಿ! ಮಹಾಬಲಾಢ್ಯನಾದ ಲಕ್ಷ್ಮಣನೂ ಜಯಶೀಲನಾಗಲಿ! ರಾವಣನಿಂದ ಸುರಕ್ಷಿತವಾದ ನಮ್ಮ ಪ್ರಭುವಾದ ಸುಗ್ರೀವನೂ ಜಯಶೀಲ

---

1. ರಾಕ್ಷಸರು ತಮ್ಮ ಕುಲದೇವತೆಗಳಿಗಾಗಿ ಕಟ್ಟಿಕೊಂಡಿರುವ ದೇವಾಲಯಕ್ಕೆ ಚೈತ್ಯವೆಂದು ಹೆಸರು. ಅದು ಪ್ರಾಸಾದರೂಪವಾಗಿರುವುದರಿಂದ ಇಲ್ಲಿ ಚೈತ್ಯಪ್ರಾಸಾದವೆಂದು ವ್ಯವಹರಿಸಲ್ಪಟ್ಟಿದೆ.

2. ಇದರಿಂದ ಆಗ ಸೂರ್ಯೋದಯವಾಗಿತ್ತೆಂದು ಸೂಚಿತವಾಗುವುದು.

ನಾಗಲಿ! ನಾನು ಕೋಸಲೇಂದ್ರನಾದ ಆ ಶ್ರೀರಾಮನಿಗೆ ದಾಸನು. ಹನುಮಂತನೆಂಬ ಹೆಸರುಳ್ಳವನು! ಶತ್ರುಸೈನ್ಯವನ್ನು ಹುಟ್ಟಡಗಿಸತಕ್ಕವನು! ವಾಯುದೇವನ ಕುಮಾರನು! ಕಲ್ಲುಗಳಿಂದಲೂ, ಮರಗಳಿಂದಲೂ ಸಾವಿರಾರು ವಿಧದಿಂದ ಶತ್ರುಗಳನ್ನು ಹೊಡೆದೋಡಿಸಬಲ್ಲ ನನಗೆ, ಈ ಒಬ್ಬ ರಾವಣನು ಹಾಗಿರಲಿ! ಇಂತಹ ಸಾವಿರಾರುಮಂದಿ ರಾವಣರೂ ಇದಿರಲ್ಲ! ಈಗ ನೀವೆಲ್ಲರೂ ನೋಡುತ್ತಿರುವಾಗಲೇ, ನಾನು ಈ ಲಂಕೆಯನ್ನು ಧ್ವಂಸಮಾಡಿ ಸೀತೆಗೆ ನಮಸ್ಕರಿಸಿ ಕೃತಾರ್ಥನಾಗಿ ಹಿಂತಿರುಗುವೆನು" ಎಂದು ಗಟ್ಟಿಯಾಗಿ ಕೈಯೆತ್ತಿ ಕೂಗಿ ಹೇಳಿದನು ಹೀಗೆ ಆ ವಾನರೋತ್ತಮನು, ಪ್ರಾಸಾದದಲ್ಲಿದ್ದ ರಾಕ್ಷಸರ ಕಿವಿಗೆ ಬೀಳುವಂತೆ ಉದ್ಘೋಷಿಸಿ ಹೇಳಿದಮೇಲೆ, ರಾಕ್ಷಸರಿಗೆ ಇನ್ನೂ ಭಯವುಂಟಾಗುವಂತೆ ಒಂದು ಭಯಂಕರವಾದ ಸಿಂಹನಾದವನ್ನೂ ಮಾಡಿದನು. ಆ ಮಹಾಧ್ವನಿಯನ್ನು ಕೇಳಿ ಅಲ್ಲಿ ಕಾವಲಿದ್ದ ನೂರುಮಂದಿ ವೀರರಾಕ್ಷಸರು ಬಗೆಬಗೆಯ ಬಾಣಗಳನ್ನೂ, ಈಟಿಗಳನ್ನೂ, ಕತ್ತಿಗಳನ್ನೂ, ಗಂಡುಗೊಡಲಿಗಳನ್ನೂ ಹಿಡಿದು ಬಂದು, ಅವುಗಳನ್ನು ಹನುಮಂತನಮೇಲೆ ಪ್ರಯೋಗಿಸುತ್ತ, ಅವನ ಸುತ್ತಲೂ ಮುತ್ತಿನಿಂತರು. ಮತ್ತು ವಿಚಿತ್ರಗದೆಗಳನ್ನೂ, ಚಿನ್ನದ ಕಟ್ಟುಳ್ಳ ಪರಿಘಗಳನ್ನೂ, ಸೂರ್ಯಸಮಾನಗಳಾದ ಬಾಣಗಳನ್ನೂ, ಪ್ರಯೋಗಿಸಿ ಹನುಮಂತನನ್ನು ಹೊಡೆಯುತಿದ್ದರು. ವಾನರಶ್ರೇಷ್ಠನಾದ ಹನುಮಂತನನ್ನು ಸುತ್ತಿ ತಿರುಗುತಿದ್ದ ಆ ರಾಕ್ಷಸಸಮೂಹವು, ಗಂಗಾಪ್ರವಾಹದ ಮಧ್ಯದಲ್ಲಿ ತಿರುಗುವ ದೊಡ್ಡಸುಳಿಯಂತೆ ಕಾಣುತ್ತಿತ್ತು. ಇದನ್ನು ನೋಡಿ ವಾಯುಪುತ್ರನು ಬಹಳ ಕೋಪಗೊಂಡು, ಭಯಂಕರಸ್ವರೂಪವನ್ನು ತಾಳಿ, ಆ ಪ್ರಾಸಾದದ ನಡುವೆ ಶೋಭಿಸುತ್ತಿದ್ದ ಸುವರ್ಣಮಯವಾದ ಒಂದು ಕಂಬವನ್ನೇ ಕೈಗೆ ಕಿತ್ತುಕೊಂಡು, ವಜ್ರಾಯುಧದಂತೆ ನೂರೇಣುಗಳುಳ್ಳ ಆ ಕಂಬವನ್ನು ವಿಚಿತ್ರಗತಿಯಿಂದ ಗಿರ್ರನೆ ತಿರುಗಿಸಿದನು. ಮಹಾಬಲಾಢ್ಯನಾದ ಹನುಮಂತನು ಆ ಕಂಬವನ್ನು ಕೈಯಿಂದೆತ್ತಿ ತಿರುಗಿಸುವಾಗ, ಆ ವೇಗದಿಂದ ಹುಟ್ಟಿದ ಬೆಂಕಿಯಿಂದ ಪ್ರಾಸಾದವೆಲ್ಲವೂ ಕ್ಷಣಮಾತ್ರದಲ್ಲಿ ದಹಿಸಿಹೋಯಿತು. ಇತ್ತಲಾಗಿ ಪ್ರಾಸಾದವು ದಗ್ಧವಾಗುತ್ತಿರುವಾಗಲೇ ಅತ್ತಲಾಗಿ ಹನುಮಂತನು, ದೈತ್ಯರನ್ನು ವಜ್ರಾಯುಧದಿಂದ ಹೊಡೆಯುವ ಇಂದ್ರನಂತೆ, ಆ ನೂರುಮಂದಿ ರಾಕ್ಷಸರನ್ನೂ ಆ ಸ್ತಂಭದಿಂದಲೇ ಹೊಡೆದು ಕೊಂದನು. ಆ ಮೇಲೆ ಧೀರನಾದ ಹನುಮಂತನು, ದಗ್ಧವಾದ ಆ ಚೈತ್ಯಾಲಯವನ್ನು ಬಿಟ್ಟು ಆಂತರಿಕ್ಷಕ್ಕೆ ಹಾರಿ, ಅಲ್ಲಿಂದಲೇ ರಾಕ್ಷಸರನ್ನು ಕುರಿತು, "ನನ್ನಂತೆ ಮಹಾ

ಧೀರರಾಗಿಯೂ, ಬಲಾಢ್ಯರಾಗಿಯೂ ಇರುವ ಸಾವಿರಾರುಮಂದಿ ವಾನರರು ಸುಗ್ರೀವನ ವಶದಲ್ಲಿರುವರು. ಸೀತೆಯನ್ನು ಹುಡುಕುವುದಕ್ಕಾಗಿ ಅವರೆಲ್ಲರೂ ಸುಗ್ರೀವನಿಂದ ಬೇರೆಬೇರೆ ದಿಕ್ಕುಗಳಿಗೆ ಕಳುಹಿಸಲ್ಪಟ್ಟಿರುವರು. ನನ್ನಂತೆ ಇನ್ನೂ ಎಷ್ಟೋಮಂದಿ ವಾನರರು ಸೀತಾನ್ವೇಷಣಕ್ಕಾಗಿ ಈ ಭೂಮಿಯೆಲ್ಲವನ್ನೂ ಸುತ್ತುತ್ತಿರುವರು. ಅವರಲ್ಲಿ ಹತ್ತಾನೆಗಳ ಬಲವುಳ್ಳವರು ಕೆಲವರು! ನೂರಾನೆಗಳ ಬಲವುಳ್ಳವರು ಕೆಲವರು! ಸಾವಿರಾನೆಗಳ ಬಲವುಳ್ಳವರು ಕೆಲವರು! ಒಳ್ಳೆ ಸಂಖ್ಯೆಯ ಆನೆಗಳ ಬಲವುಳ್ಳವರು ಕೆಲವರು! ವಾಯುವಿನಂತೆ ಬಲವುಳ್ಳವರು ಕೆಲವರು! ಕೆಲವು ವಾನರವೀರರ ಬಲವನ್ನು ಇಷ್ಟೆಂದು ನಿರ್ಣಯಿಸುವುದೇ ಸಾಧ್ಯವಲ್ಲ! ಹೀಗೆ ನನ್ಮಲ್ಲಿ ಎಷ್ಟೋಮಂದಿ ವಾನರರುಂಟು! ದಂತ (ಹಲ್ಲು) ಗಳನ್ನೂ, ನಖ (ಉಗುರು)ಗಳನ್ನೂ ಆಯುಧವಾಗಿ ಉಳ್ಳ ಇಂತಹ ವಾನರವೀರರ ಸೇನೆಯು ನೂರುನೂರಾಗಿಯೂ ಲಕ್ಷಲಕ್ಷವಾಗಿಯೂ, ಕೋಟಿಕೋಟಿಯಾಗಿಯೂ, ತನ್ನನ್ನು ಸುತ್ತುವರಲು, ನಮ್ಮ ಪ್ರಭುವಾದ ಸುಗ್ರೀವನು ನಿಮ್ಮೆಲ್ಲರನ್ನೂ ಧ್ವಂಸಮಾಡುವುದಕ್ಕಾಗಿ ಬರುವನು. ಎಲೈ ರಾಕ್ಷಸರೆ! ಮಹಾತ್ಮನಾಗಿಯೂ, ಇಕ್ಷ್ವಾಕುನಾಥನಾಗಿಯೂ ಇರುವ ನನ್ನ ರಾಮನೊಡನೆ ನೀವು ವೈರವನ್ನು ಬಳೆಸಿದಿರಲ್ಲವೆ! ಇನ್ನು ಮೇಲೆ ನೀವಾಗಲಿ, ನಿಮ್ಮ ಲಂಕೆಯಾಗಲಿ, ನಿಮ್ಮ ರಾವಣನಾಗಲಿ ಉಳಿಯುವ ಆಸೆಯನ್ನೇ ಬಿಡಿರಿ" ಎಂದನು.

ಇಲ್ಲಿಗೆ ನಾಲ್ವತ್ತುಮೂರನೆಯ ಸರ್ಗವು.

ರಾವಣನ ಪ್ರೇರಣೆಯಿಂದ ಬಂದ ಪ್ರಹಸ್ತಪುತ್ರನಾದ ಜಂಬುಮಾಲಿಯೆಂಬವನು ಹನುಮಂತನಿಂದ ಹತನಾಪುದು.

ಅನಂತರದಲ್ಲಿ ಮಹಾಬಲಾಢ್ಯನಾಗಿಯೂ, ದೊಡ್ಡಕೋರೆದಾಡೆಯುಳ್ಳವನಾಗಿಯೂ ಇದ್ದ ಪ್ರಹಸ್ತಪುತ್ರನಾದ ಜಂಬುಮಾಲಿಯೆಂಬವನು, ರಾಕ್ಷಸಪ್ರಭುವಾದ ರಾವಣನ ಆಜ್ಞೆಯಮೇರೆ, ಧನುರ್ಧಾರಿಯಾಗಿ ಹೊರಟನು. ಈ ರಾಕ್ಷಸನೋ ಮೊದಲೇ ಬಹಳ ಪ್ರಚಂಡನು. ಮಹಾಕಾಯವುಳ್ಳವನು. ಯುದ್ಧದಲ್ಲಿ ಎಂತವರಿಗೂ ದುರ್ಜಯನು! ಇದರಮೇಲೆ ಯುದ್ಧಕ್ಕೆ ಹೊರಟಾಗ ಈತನಿಗೆ ಕೊರಲಲ್ಲಿ ಕೆಂಪುಹೂವಿನ ದಂಡೆ! ಕಡುವಿಗೆ ಸುತ್ತಿದ ಕೆಂಪಾದ ಪಟ್ಟೆಮಡಿ!

ತಲೆಯಲ್ಲಿ ದೊಡ್ಡ ಹೂಮುಡಿ! ಕಿವಿಯಲ್ಲಿ ಅಂದವಾದ ಕರ್ಣಕುಂಡಲಗಳು! ಕಣ್ಣಿನಲ್ಲಿ ಕೋಪದಿಂದ ತೊಳಲುವ ಕರಿಯಾಲಿಗಳು! ಕಾಡುಗಿಚ್ಚಿನಿಂದ ಬೆಂದ ತ್ರಿಕೂಟಪರ್ವತದಂತೆ ಕಪ್ಪಾದ ಮೈ! ಮಹಾಮೇಘದಂತೆ ದೊಡ್ಡ ಆಕೃತಿ! ಉದ್ದವಾದ ತೋಳುಗಳು! ದಪ್ಪತಲೆ! ಉಬ್ಬಿದ ಕೊರಲು! ನೀಡಿದ ಕೋರೆ ದಾಡೆಗಳು! ಅಗಲವಾದ ಬಾಯಿ! ಇದಲ್ಲದೆ ಆ ರಾಕ್ಷಸನ ಗತಿವೇಗವನ್ನಾಗಲಿ, ಅವನ ಯುದ್ಧೋತ್ಸಾಹವನ್ನಾಗಲಿ, ಅವನ ಬಲವನ್ನಾಗಲಿ, ಅವನ ಅರ್ಭಟವನ್ನಾಗಲಿ ಇಷ್ಟೆಂದು ನಿರ್ಣಯಿಸುವುದಕ್ಕಿಲ್ಲ. ಇಂತಹ ಘೋರ ರಾಕ್ಷಸನು, ಇಂದ್ರನ ವಜ್ರಾಯುಧದಿಂದ ಹೊರಟ ಸಿಡಿಲಿನಂತೆ ಮಹಾ ಧ್ವನಿಯಿಂದ ಸಿಂಹನಾದವನ್ನು ಮಾಡುತ್ತ ಅತಿವೇಗದಿಂದ ಹೊರಟುಬಂದನು. ಇವನು ರಾಜಗೃಹದಿಂದ ಹೊರಟುಬರುತ್ತಿರುವಾಗಲೇ, ಇಂದ್ರಧನುಸ್ಸಿನಂತೆ ಕಾಂತಿ ವಿಶಿಷ್ಟವಾಗಿಯೂ, ಮಹತ್ತಾಗಿಯೂ, ಉತ್ತಮಬಾಣಗಳನ್ನು ಪ್ರಯೋಗಿಸುವುದಕ್ಕೆ ತಕ್ಕುದಾಗಿಯೂ, ಸಿಡಿಲಿನಂತೆ ಮಹಾಧ್ವನಿಯುಳ್ಳದಾಗಿಯೂ ಇದ್ದ ಒಂದು ದೊಡ್ಡ ಬಿಲ್ಲನ್ನೆತ್ತಿ ಹಿಡಿದು, ಆಗಾಗ ಅದರ ನಾಣನ್ನು ಮಿಡಿದು ಟಂಕಾರಮಾಡುತ್ತ, ವೇಗದಿಂದ ಸಾಗಿಬರುತ್ತಿದ್ದನು. ಆ ಧನುಸ್ಸಿನ ದೊಡ್ಡ ಟಂಕಾರಧ್ವನಿಯಿಂದಲೇ ಸಮಸ್ತದಿಕ್ಕುಗಳೂ, ವಿದಿಕ್ಕುಗಳೂ, ಆಕಾಶವೂ ತುಂಬಿದಂತಾಯಿತು. ಮಹಾತೇಜಸ್ವಿಯಾದ ಈತನು, ಕೆಂಪಾದ ಕವಚವನ್ನು ಧರಿಸಿ ಬರುತ್ತಿರುವಾಗ, ಸಂಜೆಗೆಂಪಿನಿಂದ ಕೂಡಿ ಉದಿಸಿಬರುವ ಸೂರ್ಯನಂತೆ ತೋರುತ್ತ, ದೂರದಿಂದಲೇ ಹನುಮಂತನನ್ನು ನೋಡಿ "ಎಲಾ! ನಿಲ್ಲು! ನಿಲ್ಲು!" ಎಂದು ಕೂಗುತ್ತ ಬಂದನು. ಈ ರಾಕ್ಷಸನು ಹೇಸರಗತ್ತೆಯನ್ನು ಕಟ್ಟಿದ ರಥದಮೇಲೆ ಕುಳಿತು ವೇಗದಿಂದ ತನಗಿದಿರಾಗಿ ಬರುವುದನ್ನು ಕಂಡು ಹನುಮಂತನು, ತನಗೆ ತಕ್ಕ ವೈರಿಯು ಸಿಕ್ಕಿದನೆಂದು ಸಂತೋಷಗೊಂಡು, ಆಗಲೇ ಒಂದು ಸಿಂಹನಾದವನ್ನು ಮಾಡಿದನು. ಇಷ್ಟರಲ್ಲಿ ಮಹಾಬಾಹುವಾದ ಜಂಬುಮಾಲಿಯು ಮುಂದೆ ಬಂದು, ತೋರಣದ ಬಾಗಿಲಿನ ತೊಲೆಯಮೇಲೆ ಕುಳಿತು ಸಂತೋಷದಿಂದ ಸಿಂಹನಾದ ಮಾಡುತ್ತಿದ್ದ ಆ ದೊಡ್ಡ ಕಪಿಯನ್ನು ನೋಡಿ ಕೋಪಗೊಂಡು, ಆಗಲೇ ಅವನನ್ನು ತೀಕ್ಷ್ಣಬಾಣಗಳಿಂದ ಹೊಡೆಯಲಾರಂಭಿಸಿದನು. ಅರ್ಧಚಂದ್ರಬಾಣದಿಂದ ಆ ಕಪಿಯ ಮುಖಕ್ಕೆಗುರಿಯಿಟ್ಟು ಹೊಡೆದನು. ಅಡ್ಡಲಾಗಿನ ಒಂದು ಬಾಣವನ್ನು ಅದರ ತಲೆಗೆ ಹೊಡೆದನು. ಹತ್ತುಬಾಣಗಳನ್ನು ಆ ಕಪಿಯ ತೋಳುಗಳಿಗೆ ಬಿಟ್ಟನು. ಸಹಜವಾಗಿಯೇ ಕೆಂಪಾದ ಹನುಮಂತನ ಮುಖವು, ಈ ಬಾಣಹತಿಯಿಂದುಂಟಾದ ಗಾಯದಿಂದ ಮತ್ತಷ್ಟು ಕೆಂಪಾಗಿ, ಶರತ್ಕಾಲದಲ್ಲಿ ಸೂರ್ಯಕಿರಣ

ದಿಂದ ವ್ಯಾಪ್ತವಾದ ಅರಳಿದ ಕಮಲದಂತೆ ಶೋಭಿಸಿತು. ಮತ್ತು ರಕ್ತಧಾರೆಯಿಂದ ತೊಯ್ದ ಆ ಮಹಾಕಪಿಯ ಮುಖವು ಆಕಾಶದಲ್ಲಿ ರಕ್ತಚಂದನವಿಂದುಗಳಿಂದ ಕೂಡಿದ ರಕ್ತೋತ್ಪಲದಂತೆ ಕಾಣಿಸುತ್ತಿತ್ತು. ಈ ರಾಕ್ಷಸನ ಬಾಣಹತಿಯಿಂದ ಹನುಮಂತನಿಗೆ ಬಹಳವಾದ ಕೋಪವೂ ಹುಟ್ಟಿತು. ಆಗ ಬಲಾಢ್ಯನಾದ ಹನುಮಂತನು, ತನ್ನ ಪಕ್ಕದಲ್ಲಿದ್ದ ಒಂದು ದೊಡ್ಡ ಕಲ್ಲುಬಂಡೆಯನ್ನು ನೋಡಿ, ಅದನ್ನೇ ಕಿತ್ತುಕೊಂಡು ಜಂಬುಮಾಲಿಯಮೇಲೆ ವೇಗದಿಂದ ಬೀಸಿದನು. ಇದನ್ನು ನೋಡಿ ಜಂಬುಮಾಲಿಯು ಹತ್ತು ಬಾಣಗಳಿಂದ ಅದನ್ನು ಭೇದಿಸಿಬಿಟ್ಟನು. ಚಂಡಪರಾಕ್ರಮಿಯಾದ ಹನುಮಂತನು, ತನ್ನ ಪ್ರಯತ್ನವು ವಿಫಲವಾದುದನ್ನು ನೋಡಿ, ಸಮೀಪದಲ್ಲಿದ್ದ ಒಂದು ದೊಡ್ಡ ಮರವನ್ನು ಕಿತ್ತುಕೊಂಡು, ಅದನ್ನು ರಾಕ್ಷಸನಮೇಲೆ ಬೀಸಿ ಬಡಿಯುವುದಕ್ಕಾಗಿ ಕೈಯಿಂದೆತ್ತಿ ತಿರುಗಿಸುತ್ತಿದ್ದನು. ಹೀಗೆ ಮಹಾಬಲಾಢ್ಯನಾದ ಆ ಕಪಿಯು, ದೊಡ್ಡ ಮರವನ್ನೆತ್ತಿ ತಿರುಗಿಸುತ್ತಿರಲು, ಅದನ್ನು ನೋಡಿ, ವೀರ್ಯವಂತನಾದ ಜಂಬುಮಾಲಿಯು ಆಗಲೇ ಅನೇಕ ಬಾಣಗಳನ್ನು ಅವನ ಮೇಲೆ ಪ್ರಯೋಗಿಸುತ್ತ, ನಾಲ್ಕು ಬಾಣಗಳಿಂದ ಆ ಸಾಲವೃಕ್ಷವನ್ನು ತುಂಡುಮಾಡಿ ಕೆಡಹಿದನು. ಆ ಕಪಿಯ ಭುಜಕ್ಕೆ ಗುರಿಯಿಟ್ಟು ಐದು ಬಾಣಗಳನ್ನು ಬಿಟ್ಟನು. ಅವನ ಎದೆಗೆ ಒಂದು ಬಾಣವನ್ನು ಬಿಟ್ಟನು. ಅವನ ಸ್ತನಮಧ್ಯಕ್ಕೆ ಹತ್ತು ಬಾಣಗಳನ್ನು ಹೊಡೆದನು. ಆಗ ಹನುಮಂತನು ತನ್ನ ಸರ್ವಾವಯವಗಳೂ ಬಾಣದಿಂದ ತುಂಬಿಹೋದುದನ್ನು ನೋಡಿ, ಬಹಳ ಕೋಪಗೊಂಡವನಾಗಿ, ತಿರುಗಿ ಆ ಬಾಗಿಲಗುಳಿಯನ್ನೇ ಕೈಗೆತ್ತಿಕೊಂಡು ವೇಗದಿಂದ ತಿರುಗಿಸಿದನು. ಹೀಗೆ ಬಲದಿಂದುಬ್ಬಿದ ಆ ವಾನರೋತ್ತಮನು, ಆ ಬಾಗಿಲಗುಳಿಯನ್ನು ಮಹಾವೇಗದಿಂದ ತಿರುಗಿಸಿ, ಜಂಬುಮಾಲಿಯ ಎದೆಗೆ ಗುರಿಯಿಟ್ಟು ಅದನ್ನು ಬೀಸಿಬಿಟ್ಟನು. ಹನುಮಂತನು ಈ ಪರಿಘವನ್ನು ಪ್ರಯೋಗಿಸಿದೊಡನೆ, ಅಲ್ಲಿ ರಾಕ್ಷಸನ ತಲೆಯಾಗಲಿ, ಅವನ ತೋಳುಗಳಾಗಲಿ, ಅವನ ಮೊಣಗಾಲುಗಳಾಗಲಿ, ಅವನ ಬಿಲ್ಲಾಗಲಿ, ರಥವಾಗಲಿ, ರಥಾಶ್ವಗಳಾಗಲಿ, ಅವನ ಬಾಣವಾಗಲಿ ಕಾಣಿಸದಂತಾದುವು. ಈ ಹನುಮಂತನ ಪರಿಘಹತಿಯಿಂದ ಮಹಾಬಲಾಢ್ಯನಾದ ಜಂಬುಮಾಲಿಯೂ ಆಗಲೇ ಹತನಾಗಿ ನೆಲಕ್ಕೆ ಬಿದ್ದನು. ಅವನ ಮೈಮೇಲಿನ ಆಭರಣಗಳೆಲ್ಲವೂ ಪುಡಿಪುಡಿಯಾಗಿ ಬಿದ್ದುವು. ಹೀಗೆ ಮಹಾಬಲಾಢ್ಯರಾದ ಕಿಂಕರರಂತೆಯೇ ಜಂಬುಮಾಲಿಯೂ ಹನುಮಂತನಿಂದ ಹತನಾದ ಸಂಗತಿಯನ್ನು ಕೇಳಿ ರಾವಣನಿಗೆ ಅತ್ಯಾಕ್ರೋಶವುಂಟಾಯಿತು. ಅವನ ಕಣ್ಣುಗಳು ಕೆಂಡದಂತೆ ಕೆಂಪಾದುವು. ಹೀಗೆ ರಾವಣನು ಮಹಾಬಲನೆನಿಸಿದ ಪ್ರಹಸ್ತ

ಕುಮಾರನು ಹತನಾದುದನ್ನು ಕೇಳಿ ಕೋಪದಿಂದ ಕಣ್ಣಾಲಿಗಳನ್ನು ತಿರುಗಿಸುತ್ತ, ಆಗಲೇ ವೀರ್ಯದಲ್ಲಿಯೂ ಪರಾಕ್ರಮದಲ್ಲಿಯೂ ಮೇಲೆನಿಸಿಕೊಂಡ ಬೇರೆ ಏಳುಮಂದಿ ಮಂತ್ರಿಕುಮಾರರನ್ನು ಕರೆದು ಹನುಮಂತನೊಡನೆ ಯುದ್ಧಕ್ಕಾಗಿ ಕಳುಹಿಸಿದನು.

ಇಲ್ಲಿಗೆ ನಾಲ್ವತ್ತು ನಾಲ್ಕನೆಯ ಸರ್ಗವು.

ಹನುಮಂತನು ತನ್ನ ಮೇಲೆ ಯುದ್ಧಕ್ಕೆ ಬಂದ ಏಳುಮಂದಿ ಮಂತ್ರಿಕುಮಾರರನ್ನೂ ಕೊಂದುದು

ರಾವಣನಿಂದ ಪ್ರೇರಿತರಾದ ಆ ಏಳುಮಂದಿ ಮಂತ್ರಿಪುತ್ರರೂ, ವಿಷ ಆಗ್ನಿ ಜ್ವಾಲೆಗಳಂತೆ ಬೆಳಗುತ್ತ ರಾಜಗೃಹದಿಂದ ಹೊರಟರು. ಈ ಏಳುಮಂದಿಯೂ ಮಹಾಬಲಾಢ್ಯರು! ಶಸ್ತ್ರಾಸ್ತ್ರಗಳನ್ನು ಬಲ್ಲವರಲ್ಲಿ ಮೇಲೆನಿಸಿಕೊಂಡವರು! ಇಂತಹ ಮಂತ್ರಿಪುತ್ರರೊಬ್ಬೊಬ್ಬರೂ ತನ್ನ ತಮ್ಮ ದೊಡ್ಡ ಸೈನ್ಯಗಳನ್ನು ಸೇರಿಸಿಕೊಂಡು ಧನುರ್ಧಾರಿಗಳಾಗಿ ಹನುಮಂತನನ್ನು ಜಯಿಸುವುದಕ್ಕೆ ನಾನುತಾನೆಂಬ ಮಹೋತ್ಸಾಹದಿಂದಲೇ ಬಂದರು. ಈ ಮಂತ್ರಿಕುಮಾರರೆಲ್ಲರೂ ಚೆನ್ನಾದ ಕುದುರೆಗಳಿಂದಲಂಕೃತವಾಗಿಯೂ, ಧ್ವಜಪತಾಕೆಗಳಿಂದ ಶೋಭಿತವಾಗಿಯೂ, ಮೇಘಧ್ವನಿಯಂತೆ ಗಂಭೀರಧ್ವನಿಯುಳ್ಳದಾಗಿಯೂ, ಖಡ್ಗಮಾತ್ರಗಳಿಂದ ಕೂಡಿದುದಾಗಿಯೂ ಇರುವ ದೊಡ್ಡ ದೊಡ್ಡ ರಥಗಳನ್ನೇರಿ, ಚೆನ್ನಾದಿಂದ ಚಿತ್ರಕಾರ್ಯ ಮಾಡಲ್ಪಟ್ಟ ಧನುಸ್ಸನ್ನು ಹಿಡಿದು, ಆಗಾಗ ಅದನ್ನು ಮಹೋತ್ಸಾಹದಿಂದ ಟಂಕಾರಮಾಡುತ್ತ ಮುಂದೆ ಸಾಗಿಬರುತ್ತಿರಲು, ಮಿಂಚಿನಿಂದ ಕೂಡಿದ ಮೇಘಸಮೂಹಗಳಂತೆ ತೋರುತ್ತಿದ್ದರು. ಮೊದಲೇ ಕಿಂಕರರೆಂಬ ಮಹಾವೀರರಾಕ್ಷಸರು ಹನುಮಂತನಿಂದ ಹತರಾಗಿರುವಾಗಲೂ, ಈ ಮಂತ್ರಿಪುತ್ರರೂ ಹೀಗೆ ಮಹೋತ್ಸಾಹದಿಂದ ಆ ಹನುಮಂತನೊಡನೆಯೇ ಯುದ್ಧಕ್ಕೆ ಹೊರಟಿರುವುದನ್ನು ನೋಡಿ, ಇವರ ಮಾತೆಯರೂ, ಮಿತ್ರರೂ, ಬಂಧುಗಳೂ, "ಮುಂದೆ ಇವರ ಗತಿಯೇನಾಗುವುದೋ" ಎಂದು ಭಯದಿಂದ ತತ್ತರಿಸಿ ನೋಡುತ್ತಿದ್ದರು. ಆ ಮಂತ್ರಿಪುತ್ರರೇಳುಮಂದಿಯೂ, ಬಂಗಾರದ ವೀರಭೂಷಣಗಳನ್ನು ತೊಟ್ಟು, ಒಬ್ಬರಮೇಲೊಬ್ಬರು ನಾಮುಂತಾನೆಂದು ನುಗ್ಗುತ್ತ ತೋಟದ ಬಾಗಿಲಿಗೆ ಬಂದು, ಆದರೆ ಹೊರಬಾಗಿಲಲ್ಲಿ ಯುದ್ಧಾರ್ಥಿಯಾಗಿ ನಿಂತಿದ್ದ ಹನುಮಂತನನ್ನು ಕಂಡು,

ರಥಧ್ವನಿಗಳೆಂಬ ಗುಡುಗುಗಳೊಡನೆ ದೊಡ್ಡ ಮಳೆಯನ್ನು ಕರೆಯುವ ಮೇಘಗಳಂತೆ, ಮುಂದೆ ಬಂದು ಹನುಮಂತನಮೇಲೆ ಬಾಣದ ಮಳೆಯನ್ನು ಕರೆದರು. ಹನುಮಂತನು, ಇವರ ಬಾಣವರ್ಷದಿಂದ ಮುಚ್ಚಿದ ಮೈಯುಳ್ಳವನಾದರೂ ವರ್ಷಧಾರೆಯಿಂದಾವೃತವಾದ ದೊಡ್ಡಬೆಟ್ಟದಂತೆ ನಿಶ್ಚಲವಾಗಿಯೇ ನಿಂತಿದ್ದನು. ಮತ್ತು ಮಹಾವೇಗವುಳ್ಳ ಆ ಹನುಮಂತನು ಆ ಕಾಶಕ್ಕೆ ಹಾರುತ್ತ, ತನ್ನ ಗತಿಜಾತುರ್ಯದಿಂದ ಆ ವೀರರಾಕ್ಷಸರ ಬಾಣಗಳನ್ನೂ ರಥವೇಗವನ್ನೂ ತಪ್ಪಿಸಿಕೊಂಡು, ವಿಚಿತ್ರಗತಿಯಿಂದಲೇ ಸಂಚರಿಸುತ್ತಿದ್ದನು. ಹೀಗೆ ಆ ವೀರನು ಧನುರ್ಧಾರಿಗಳಾದ ಆ ರಾಕ್ಷಸರೊಡನೆ ಆಕಾಶದಿಂದಲೇ ಯುದ್ಧಕ್ರೀಡೆಯನ್ನು ನಡೆಸುತ್ತ, ಇಂದ್ರಧನುಸ್ಸಿನಿಂದ ಕೂಡಿದ ಮೋಡಗಳನ್ನಾಡಿಸುವ ಮಹಾವಾತದಂತೆ ತೋರುತ್ತಿದ್ದನು. ಕೊನೆಗೆ ಹನುಮಂತನು ಆ ಸಮಸ್ತ ರಾಕ್ಷಸಸೈನ್ಯವೂ ಭಯದಿಂದ ನಡುಗುವಂತೆ ಒಂದು ದೊಡ್ಡ ಸಿಂಹನಾದವನ್ನು ಮಾಡಿ, ಅವರೆಲ್ಲರನ್ನೂ ಕೊಲ್ಲುವುದಕ್ಕೆ ತಕ್ಕಂತೆ ತನ್ನ ಮಹಾವೀರ್ಯವನ್ನೂ ತೋರಿಸಲಾರಂಭಿಸಿದನು. ಅಲ್ಲಿ ಕೆಲವರನ್ನು ತನ್ನ ಅಂಗೈಯಿಂದಲೇ ಅಪ್ಪಳಿಸಿ ಹೊಡೆದನು. ಕೆಲವರನ್ನು ಕಾಲಿನಿಂದ ತುಳಿದು ಮೆಟ್ಟಿದನು. ಕೆಲವರನ್ನು ತನ್ನ ಮುಷ್ಟಿಯಿಂದ ಗುದ್ದಿ ಕೆಡಹಿದನು. ಕೆಲವರನ್ನು ಉಗುರುಗಳಿಂದ ಪರಚಿದನು. ಕೆಲವರನ್ನು ಎದೆಯಿಂದ ತಟ್ಟಿಕೆಡಹಿದನು. ತೊಡೆಗಳಿಂದುಜ್ಜಿ ಕೆಲವರನ್ನು ಕೊಂದನು. ಇವನ ಸಿಂಹನಾದವನ್ನು ಕೇಳಿದಾಗಲೇ ಕೆಲವರು ಭಯದಿಂದ ಎದೆಯೊಡೆದು ಸತ್ತುಬಿದ್ದರು. ಈ ಆಕ್ರಮಣವನ್ನು ನೋಡಿದಮೇಲೆ, ಅಲ್ಲಿ ಸತ್ತುಳಿದ ಕೆಲವು ರಾಕ್ಷಸರು ಭಯದಿಂದ ನಾನಾದಿಕ್ಕುಗಳಿಗೂ ಪಲಾಯನಮಾಡಿದರು. ಆನೆಗಳು ವಿಕೃತಸ್ವರದಿಂದ ಅರಚುತ್ತಿದ್ದುವು. ಕುದುರೆಗಳು ಭಯದಿಂದ ನೆಲಕ್ಕುರುಳುತ್ತಿದ್ದುವು. ಅಲ್ಲಲ್ಲಿ ಮುರಿದುಬಿದ್ದ ಧ್ವಜದಂಡಗಳಿಂದಲೂ, ಛತ್ರಗಳಿಂದಲೂ ಕೂಡಿದ ರಥಗಳೇ ಆ ರಣಭೂಮಿಯ ಸುತ್ತಲೂ ತುಂಬಿದ್ದುವು. ರಣಭೂಮಿಯ ಯಾವಕಡೆಯನ್ನು ನೋಡಿದರೂ ರಕ್ತಪ್ರವಾಹಗಳು ಹರಿಯುತ್ತಿದ್ದುವು. ಆ ರಣರಂಗದಲ್ಲಿ ಹುಟ್ಟಿದ ರೋದನಧ್ವನಿಯೇ ಲಂಕೆಯ ನಾಲ್ಕು ಕಡೆಗಳಲ್ಲಿಯೂ ಪ್ರತಿಧ್ವನಿಯನ್ನು ಹೊರಡಿಸಿತು. ಹೀಗೆ ಮಹಾಬಲಾಢ್ಯನಾಗಿಯೂ, ಚಂಡಪರಾಕ್ರಮಿಯಾಗಿಯೂ ಇರುವ ಹನುಮಂತನು, ಪ್ರಬಲರಾದ ಆ ರಾಕ್ಷಸರನ್ನೂ ನಿಶ್ಶೇಷವಾಗಿ ಕೊಂದು, ತಿರುಗಿ ಬೇರೆ ರಾಕ್ಷಸರೊಡನೆ ಯುದ್ಧಮಾಡಬೇಕೆಂಬ ಅಭಿಲಾಷೆಯಿಂದ, ಆ ಹೊರಬಾಗಿಲಲ್ಲಿಯೇ ಕಾದು ನಿಂತಿದ್ದನು.

ಇಲ್ಲಿಗೆ ನಾಲ್ವತ್ತೈದನೆಯ ಸರ್ಗವು.

ಹನುಮಂತನು ವಿರೂಪಾಕ್ಷನೇ ಮೊದಲಾದ ಐದುಮಂದಿ ಸೇನಾಪತಿಗಳನ್ನು ಕೊಂದದು.

ಮಹಾತ್ಮನಾದ ಹನುಮಂತನು ಆ ಏಳುಮಂದಿ ಮಂತ್ರಿಕುಮಾರರನ್ನೂ ಕೊಂದನೆಂಬ ಸುದ್ದಿಯನ್ನು ಕೇಳಿದಮೇಲೆ, ರಾವಣನಿಗೆ ಮನಸ್ಸಿನಲ್ಲಿ ಸ್ವಲ್ಪ ಭಯವು ಹುಟ್ಟಿತು. ಆದರೂ ತನ್ನ ಭಯವನ್ನು ಹೊರಕ್ಕೆ ಕಾಣಿಸಿಕೊಳ್ಳದೆ, ತನ್ನ ಇಂಗಿತಗಳನ್ನು ಮರೆಸಿಟ್ಟುಕೊಂಡು, ಮುಂದೆ ಮಾಡಬೇಕಾದುದೇನೆಂದು ಚೆನ್ನಾಗಿ ಪರ್ಯಾಲೋಚಿಸಿದನು. ಆ ಮೇಲೆ ಆತನು ದುರ್ಧರನೆಂದೂ, ವಿರೂಪಾಕ್ಷನೆಂದೂ, ಯೂಪಾಕ್ಷನೆಂದೂ, ವೀರನಾದ ಪ್ರಘಸನೆಂದೂ, ಭಾಸಕರ್ಣನೆಂದೂ ತನ್ನಲ್ಲಿ ಪ್ರಸಿದ್ಧರಾದ ಐದುಮಂದಿ ರಾಕ್ಷಸಸೇನಾಪತಿಗಳನ್ನು ಕರೆಸಿದನು. ಅವರಲ್ಲಿಯೋ ಒಬ್ಬೊಬ್ಬರೂ ರಾಜನೀತಿವಿಶಾರದರು! ಯುದ್ಧದಲ್ಲಿ ನಾಯು ವಿಗೆಯಾದ ವೇಗವುಳ್ಳವರು! ಯಾವ ಯುದ್ಧದಲ್ಲಿಯೂ ಮುಂದಾಗಿ ನುಗ್ಗುವ ಮಹೋತ್ಸಾಹವುಳ್ಳವರು! ಇಂತಹ ಐದುಮಂದಿ ಸೇನಾಪತಿಗಳನ್ನು ಕರೆದು, "ಎಲ್ಲೈ ಸೇನಾಪತಿಗಳೇ! ನೀವೆಲ್ಲರೂ ನಿಮ್ಮ ನಿಮ್ಮ ಸೈನ್ಯವನ್ನು ಸೇರಿಸಿಕೊಂಡು, ರಥಗಜತುರಗಾದಿ ಸಮಸ್ತ ಸಾಧನಗಳೊಡನೆ ಹೊರಟು, ಹೇಗಾದರೂ ಆ ಕಪಿಯನ್ನು ಹಿಡಿಸಿಯೇ ಬರಬೇಕು!" ಎಂದು ಮೊದಲು ಅವರೆಲ್ಲರಿಗೂ ಒಟ್ಟಾಗಿ ಕ್ರೂರಶಾಸನವನ್ನು ಮಾಡಿ, ತರುವಾಯ ಅವರನ್ನು ಕುರಿತು, "ಎಲ್ಲೈ! ನೀವು ಆ ಕಪಿಯ ವಿಷಯದಲ್ಲಿ ಬಹಳ ಎಚ್ಚರದಿಂದಿರಬೇಕು! ನಿಮ್ಮ ಕೈಯಿಂದಾದಷ್ಟು ಪ್ರಯತ್ನಿಸಬೇಕು. ದೇಶಕಾಲಗಳಿಗೆ ವಿರುದ್ಧವೆಂದು ತೋರುವ ಕಾರ್ಯಕ್ಕೆ ಪ್ರಯತ್ನಿಸಬಾರದು. ಆ ಕಪಿಯು ಮಾಡುವ ಕಾರ್ಯಗಳನ್ನು ನೋಡಿದರೆ, ಅದು ನಿಜವಾಗಿ ಕಪಿಯೆಂದೇ ನನಗೆ ತೋರಲಿಲ್ಲ! ಹೇಗೆ ನೋಡಿದರೂ ಅದನ್ನು ಮಹಾ ಬಲವುಳ್ಳ, ಒಂದು ದೊಡ್ಡ ಭೂತವೆಂದೇ ಹೇಳಬೇಕಾಗಿದೆ. ಒಂದುವೇಳೆ ಇಂದ್ರನೋ ಅಥವಾ ಬೇರೆಯಾರೋ ಮಹಾತಪಸ್ಸನ್ನು ಮಾಡಿ ನಮ್ಮನ್ನು ಕೊಂದು ಬರುವುದಕ್ಕಾಗಿ ಈ ದೊಡ್ಡ ಭೂತವನ್ನು ಸೃಷ್ಟಿಸಿ ಕಳುಹಿಸಿರಬಹುದು! ಮೊದಲಿಂದಲೂ ನಾವೆಲ್ಲರೂ ಸೇರಿ, ಎಷ್ಟೋಮಂದಿ ನಾಗರನ್ನೂ, ಯಕ್ಷರನ್ನೂ, ಗಂಧರ್ವರನ್ನೂ, ದೇವತೆಗಳನ್ನೂ, ಅಸುರರನ್ನೂ, ಮಹರ್ಷಿಗಳನ್ನೂ ನಾನಾವಿಧದಿಂದ ಪೀಡಿಸಿ ಓಡಿಸಿರುವೆವಷ್ಟೆ! ಅದಕ್ಕಾಗಿ ಅವರೆಲ್ಲರೂ ನಮ್ಮ ಮೇಲೆ ಪೂರ್ವದ್ವೇಷದಿಂದ ಕಣ್ಣಿಟ್ಟು ಕಾದಿರುವರು. ನಮಗೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂದು ಸಮಯವನ್ನೂ ಹುಡುಕುತ್ತಿರುವರು. ಆದುದರಿಂದ ಇದು ಅವರ ಜೇಷ್ಠಯೇ ಎಂಬುದರಲ್ಲಿ ಸಂದೇಹವಿರದು. ಆ ಭೂತವನ್ನು ನೀವು ಉಪಾಯದಿಂದ ಹಿಡಿಯ

ಬೇಕು! ಅದಕ್ಕೆ 1 ಅಸಾಧಾರಣವಾದ ಧೈರ್ಯವೂ, ಪರಾಕ್ರಮವೂ ಇರುವುದರಿಂದ ಅದನ್ನು ಭಂಗಿಸಿ ಅವಮಾನಪಡಿಸಬೇಕೆಂದರೆ ನಿಮಗೂ ಸಾಧ್ಯವಲ್ಲ! ನಾನು ಪೂರ್ವದಲ್ಲಿ, ವಾಲಿಯೆಂದೂ, ಸುಗ್ರೀವನೆಂದೂ, ಮಹಾಬಲಶಾಲಿಯಾದ ಜಾಂಬವಂತನೆಂದೂ, ವಾನರಸೇನಾಧಿಪತಿಯಾದ ನೀಲನೆಂದೂ, ದ್ವಿವಿದನೆಂದೂ ಹೆಸರುಗೊಂಡ ಮಹಾಪರಾಕ್ರಮಿಗಳಾದ ಇಂತಹ ವಾನರರನ್ನು ಅನೇಕವಾಗಿ ನೋಡಿರುವೆನು. ಅದರಿ ಅವರಿಗೆ ಮಾತ್ರ ಹೀಗೆ ಭಯಂಕರವಾದ ವೇಗವೂ, ತೇಜಸ್ಸೂ, ಪರಾಕ್ರಮವೂ, ಬುದ್ಧಿಯೂ, ಬಲವೂ, ಉತ್ಸಾಹವೂ, ಕಾಮರೂಪವನ್ನು ಹೊಂದುವ ಶಕ್ತಿಯೂ ಇದ್ದಂತೆ ತೋರಲಿಲ್ಲ ಅದುದರಿಂದ ಇದು ಅವರಂತೆ ಕಪಿಯಲ್ಲ. ಯಾವುದೋ ಬೇರೊಂದು ದೊಡ್ಡ ಭೂತವು ಹೀಗೆ ಕಪಿರೂಪದಿಂದ ಇಲ್ಲಿಗೆ ಬಂದಿರಬೇಕು! ನೀವು ದೊಡ್ಡ ಪ್ರಯತ್ನವನ್ನು ಮಾಡಿ ಹೇಗಾದರೂ ಅದನ್ನು ಹಿಡಿಯಬೇಕು! ಎಲೈ ವೀರರೇ! ಈ ಮೂರುಲೋಕಗಳಲ್ಲಿರುವ ದೇವತೆಗಳೂ, ಅಸುರರೂ, ಮಾನವರೂ ಒಂದಾಗಿ ಸೇರಿ, ದೇವೇಂದ್ರನನ್ನೇ ಮುಂದಿಟ್ಟುಕೊಂಡು ಬಂದರೂ, ಯುದ್ಧದಲ್ಲಿ ನಿಮ್ಮನ್ನು ನಿರಿಸಲಾರರೆಂಬುದೇನೋ ನಿಜವು. ಆದರೂ ಯುದ್ಧದಲ್ಲಿ ಜಯವೆಂಬುದು ಯಾರಿಗೂ ಸ್ಥಿರವಲ್ಲ. ನೀತಿಜ್ಞನಾದವನು ಯುದ್ಧದಲ್ಲಿ ಜಯವನ್ನು ಕೋರುವವನಾದರೆ, ಮುಖ್ಯವಾಗಿ ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ ಮೊದಲು ಪ್ರಯತ್ನಿಸುತ್ತಿರಬೇಕು! ಅದುದರಿಂದ ನೀವು ಅಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು! ಜೋಕೆ!" ಎಂದನು. ಅವರೆಲ್ಲರೂ ಈ ರಾಜಾಜ್ಞೆಯನ್ನು ಶಿರಸಾವಹಿಸಿ, ಅಗ್ನಿಯಂತೆ ಮಹಾತೇಜಸ್ವಿಗಳಾಗಿ, ತಮ್ಮತಮ್ಮ ರಥಗಳನ್ನೂ, ಮದದಾನೆಗಳನ್ನೂ, ತೀವ್ರವೇಗವುಳ್ಳ ಕುದುರೆಗಳನ್ನೂ ಅಣಿಮಾಡಿಕೊಂಡು, ಬಗೆಬಗೆಯ ದಿವ್ಯಾಯುಧಗಳನ್ನು ಹಿಡಿದು, ಸಮಸ್ತಸೈನ್ಯಗಳೊಡನೆ ವೇಗದಿಂದ ಹನುಮಂತನಿದ್ದಕಡೆಗೆ ಹೊರಟರು. ಈ ವೀರರಾಕ್ಷಸರೆಲ್ಲರೂ ತೋಟದ ಬಾಗಿಲಿಗೆ ಬಂದೊಡನೆ, ಅಲ್ಲಿ ಉದಿಸಿಬಂದ ಸೂರ್ಯನಂತೆ, ತನ್ನ ದಿವ್ಯತೇಜಸ್ಸಿನಿಂದ ದೇದೀಪ್ಯಮಾನನಾಗಿ ಜ್ವಲಿಸುತ್ತಿದ್ದ ಆ ಮಹಾಕಪಿಯನ್ನು ಕಂಡರು. ಉತ್ಸಾಹದಲ್ಲಿಯೂ, ಪ್ರಯತ್ನದಲ್ಲಿಯೂ, ಆಕಾರದಲ್ಲಿಯೂ, ಬಲದಲ್ಲಿಯೂ, ವೇಗದಲ್ಲಿಯೂ, ಶಕ್ತಿ

---

1. "ನಾವಮಾನ್ಯೋ ಭವದ್ಭಿಶ್ಚ ಹರಿರ್ಧೀರಪರಾಕ್ರಮಃ" ಎಂದು ಮೂಲವು. ಅಲ್ಲಿ ಧೀರಪರಾಕ್ರಮಃ ಎಂಬಲ್ಲಿರುವ "ಧೀ" ಎಂಬ ವರ್ಣವು ಗಾಯತ್ರಿಯ ಹದಿನಾಲ್ಕನೆಯ ಅಕ್ಷರವಾದುದರಿಂದ, ಇದುವರೆಗೆ ಹದಿಮೂರು ಸಹಸ್ರಗ್ರಂಥಗಳು ಮುಗಿದು ಇಲ್ಲಿ ಹದಿನಾಲ್ಕನೆಯ ಸಹಸ್ರ ಆರಂಭಿಸುವುದಾಗಿ ಗ್ರಾಹ್ಯವು.

ಯಲ್ಲಿಯೂ, ಲೋಕದಲ್ಲಿ ತಾನೇ ಮೇಲೆನಿಸಿಕೊಂಡು, ತೋಟದ ಹೊರಬಾಗಿಲಲ್ಲಿ ಯುದ್ಧಾರ್ಥಿಯಾಗಿ ಕಾದಿದ್ದ ಆ ಕಪಿಯನ್ನು ಕಂಡೊಡನೆ, ಆ ರಾಕ್ಷಸರೆಲ್ಲರೂ ಅವನನ್ನು ಸುತ್ತಲೂ ಮುತ್ತಿದರು, ತಮ್ಮ ತಮ್ಮ ತೀಕ್ಷ್ಣಬಾಣಗಳಿಂದ ಆ ಕಪಿಯನ್ನು ಹೊಡೆಯಲಾರಂಭಿಸಿದರು. ಅವರಲ್ಲಿ ದುರ್ಧರನೆಂಬವನು ಉಕ್ಕಿನಿಂದ ಮಾಡಿದ ತೀಕ್ಷ್ಣವಾದ ಐದು ಬಾಣಗಳನ್ನು ತೆಗೆದು ಹನುಮಂತನಿಗೆ ನೈದಿಲೆಯೆಸಳುಗಳನ್ನು ಮುಡಿಸುವಂತೆ ಅವನ ತಲೆಗೆ ಗುರಿಯಿಟ್ಟು ಹೊಡೆದನು. ಈ ಐದುಬಾಣಗಳು ತಲೆಗೆ ತಾಗುವಷ್ಟರಲ್ಲಿಯೇ ಹನುಮಂತನು ವೇಗದಿಂದ ಆಕಾಶಕ್ಕೆ ಹಾರಿ, ಹತ್ತುದಿಕ್ಕುಗಳೂ ಮೊಳಗುವಂತೆ ಒಂದು ದೊಡ್ಡ ಸಿಂಹನಾದವನ್ನು ಮಾಡಿದನು. ತಾನೇರಿಸಿದ ಬಿಲ್ಲನ್ನು ಕೈಯಲ್ಲಿ ಹಿಡಿದು ರಥಾರೂಢನಾಗಿದ್ದ ದುರ್ಧರನು ಇದನ್ನು ಕಂಡು ಕೋಪಗೊಂಡು ತಾನೂ ಮೇಲೆ ಹಾರಿ, ಆ ಹನುಮಂತನ ಮೇಲೆ ಇನ್ನೂ ನೂರಾರು ಬಾಣಗಳನ್ನು ಪ್ರಯೋಗಿಸಿದನು. ಶರತ್ಕಾಲದಲ್ಲಿ ಪಶ್ಚಿಮದಿಕ್ಕಿನ ಮೇಘವನ್ನು ಗಾಳಿಯು ಸುಲಭವಾಗಿ ಚದರಿಸುವಂತೆ, ಹನುಮಂತನು, ಆಕಾಶದಲ್ಲಿ ತನ್ನ ಮೇಲೆ ಬಾಣವರ್ಷವನ್ನು ಕರೆಯುತ್ತಿದ್ದ ಆ ದುರ್ಧರನನ್ನು ತನ್ನ ವೇಗದಿಂದ ತಡೆದುಬಿಟ್ಟನು. ಹಾಗಿದ್ದರೂ ದುರ್ಧರನು ಎಡೆಬಿಡದೆ ಬಾಣದಿಂದ ಪೀಡಿಸುತ್ತಿರಲು ಹನುಮಂತನು ಬಹಳ ಕೋಪಗೊಂಡು, ತನ್ನ ದೇಹವನ್ನು ಮತ್ತಷ್ಟು ದೊಡ್ಡದಾಗಿ ಬೆಳೆಸಿ ದೊಡ್ಡ ಯುದ್ಧವನ್ನಾರಂಭಿಸಿದನು. ಆ ಮೇಲೆ ಹನುಮಂತನು ಮಹಾವೇಗದಿಂದ ಥಟ್ಟನೆ ಬಹುದೂರಕ್ಕೆ ಮೇಲೆ ಹಾರಿ, ಬೆಟ್ಟದ ಮೇಲೆ ಬೀಳುವ ಬರಸಿಡಿಲಿನಂತೆ ದುರ್ಧರನ ರಥದಮೇಲೆ ಬಿದ್ದನು. ಆಗಲೇ ದುರ್ಧರನ ರಥಕ್ಕೆ ಕಟ್ಟಿದ ಎಂಟುಕುದುರೆಗಳೂ ನಜ್ಜುಗುಜ್ಜಾಗಿ ಬಿದ್ದುವು. ಆದರ ನೊಗವೂ ಮುರಿಯಿತು. ಆದರೆ ಅಚ್ಚು ತುಂಡಾಗಿ ಬಿದ್ದಿತು ಆಗಲೇ ದುರ್ಧರನೂ ಪ್ರಾಣವನ್ನು ಬಿಟ್ಟು ನೆಲಕ್ಕುರುಳಿದನು. ಹೀಗೆ ದುರ್ಧರನು ಸತ್ತು ಬಿದ್ದುದನ್ನು ಕಂಡು, ವಿರೂಪಾಕ್ಷಯೂಪಾಕ್ಷರೆಂಬ ಸೇನಾಪತಿಗಳಿಬ್ಬರೂ, ಬಹಳ ಕೋಪಗೊಂಡು, ಏಕಕಾಲದಲ್ಲಿ ಆಕಾಶಕ್ಕೆ ಹಾರಿದರು. ಇವರಿಬ್ಬರೂ ಥಟ್ಟನೆ ಮೇಲೆ ಹಾರಿ, ಅಂತರಿಕ್ಷದಲ್ಲಿದ್ದ ಮಹಾಬಾಹುವಾದ ಹನುಮಂತನ ಎದೆಯನ್ನು ತಾವು ಕಾವು ಹಿಡಿದಿದ್ದ ಕಬ್ಬಿಣದೊನಕೆಗಳಿಂದ ಪ್ರಹರಿಸಿದರು. ಬಲಾಢ್ಯನಾದ ಹನುಮಂತನಾದರೋ, ಗರುಡನಂತೆ ಮಹಾಪರಾಕ್ರಮವುಳ್ಳವನಾದುದರಿಂದ, ತನ್ನ ವೇಗದಿಂದ ಅವರಿಬ್ಬರ ಶಕ್ತಿಯನ್ನೂ ಅಡಗಿಸಿ ತಿರುಗಿ ಭೂಮಿಗಿಳಿದು, ಸಮೀಪದಲ್ಲಿ ಬೆಳೆದಿದ್ದ ಒಂದು ಸಾಲವೃಕ್ಷವನ್ನು ಕಿತ್ತುಕೊಂಡು, ಅದರಿಂದ

ಅಶೋಕವನದ ಕಡೆಗೆ ಹೊರಟನು. ಹೀಗೆ ಅಕ್ಷಕುಮಾರನು ರಥಾರೂಢನಾಗಿ ತನ್ನ ಚತುರಂಗಬಲವನ್ನೂ ಸಂಗಡಕರೆದುಕೊಂಡು, ಆ ಸೈನ್ಯದಲ್ಲಿರುವ ಅನೇಕುದುರೆಗಳ ಕೂಗಿನಿಂದಲೂ, ರಥಧ್ವನಿಗಳಿಂದಲೂ ಭೂಮ್ಯಾಕಾಶಗಳೆರಡನ್ನೂ ತುಂಬುತ್ತ, ಮಹಾಟ್ಟಹಾಸದಿಂದ ಹೊರಟು, ತೋಟದ ಹೊರಬಾಗಿಲಲ್ಲಿ ಕುಳಿತಿದ್ದ ಹನುಮಂತನ ಸಮೀಪಕ್ಕೆ ಬಂದನು. ಸಿಂಹದಂತೆ ಗಂಭೀರಪ್ರಕೃತಿಯುಳ್ಳ ಆ ಅಕ್ಷಕುಮಾರನು ಪ್ರಜಾಕ್ಷಯಕ್ಕಾಗಿ ಹೊರಟ ಸ್ವಯಂಕಾಲಾಗ್ನಿಯಂತೆ ಕಾಣುತ್ತ, ಮುಂದೆ ಬಂದು ಆ ಕಪಿಯ ಅದ್ಭುತಾಕಾರವನ್ನೂ, ಅವನ ಯುದ್ಧೋತ್ಸಾಹವನ್ನೂ ನೋಡಿ ಆಶ್ಚರ್ಯದಿಂದ ಬೆರಗಾಗಿ, ಗೌರವಬುದ್ಧಿಯಿಂದಲೇ ಅತನನ್ನು ನೋಡುತ್ತಿದ್ದನು. ಮಹಾಬಲನಾದ ಅಕ್ಷಕುಮಾರನು ಆ ಮಹಾಕಪಿಯ ವೇಗವನ್ನೂ, ಶತ್ರುಗಳ ವಿಷಯದಲ್ಲಿ ಅತನಿಗಿರುವ ಪರಾಕ್ರಮವನ್ನೂ, ತನ್ನ ಬಲವನ್ನೂ ಹೋಲಿಸಿ ನೋಡಿಕೊಂಡು ಆ ವ್ಯಗ್ರತಾರತಮ್ಯವನ್ನೂ ತನ್ನಲ್ಲಿ ತಾನೇ ನಿರ್ಣಯಿಸಿಕೊಂಡು, ವಸಂತಕಾಲದ ಸೂರ್ಯನಂತೆ ತಾನೂ ತೇಜಸ್ಸಿನಿಂದುಬ್ಬುತ್ತಿದ್ದನು. ಹೀಗೆ ಆ ರಾಕ್ಷಸನು ಮನಸ್ಸಿನಲ್ಲಿ ಬಲಾಬಲಗಳನ್ನು ನೋಡಿಕೊಂಡು, ಕೂಡಲೆ ಕೋಪದಿಂದ ಯುದ್ಧಕ್ಕೆ ವ್ಯವಧಾನವಾಗಿ ನಿಂತು, ಮೊದಲು ಎಚ್ಚರಿಕೆಯಿಂದ ಮೂರು ತೀಕ್ಷ್ಣಬಾಣಗಳನ್ನು ಹನುಮಂತನ ಮೇಲೆ ಬಿಟ್ಟು, ಆ ವ್ಯಾಜದಿಂದ ಅತನನ್ನು ಯುದ್ಧಕ್ಕೆ ರೇಗಿಸಿದನು. ಮತ್ತು ಆ ರಾಕ್ಷಸಕುಮಾರನು ಹನುಮಂತನ ಹೆಮ್ಮೆಯನ್ನೂ, ಎಂತಹ ಶ್ರಮವನ್ನಾದರೂ ಸಹಿಸಬಲ್ಲ ಅತನ ದೇಹಲಾಘವವನ್ನೂ, ಶತ್ರುಜಯದಲ್ಲಿ ಅವನಿಗಿರುವ ಸಾಮರ್ಥ್ಯವನ್ನೂ ಚೆನ್ನಾಗಿ ತಿಳಿದು, ಧೈರ್ಯಗುಂದದ ನುಪಸ್ಸುಳ್ಳವನಾಗಿ, ಧನುರ್ಬಾಣಗಳನ್ನು ಕೈಯಲ್ಲಿ ಸಿದ್ಧವಾಗಿ ಹಿಡಿದು, ಯುದ್ಧಾರಂಭಸೂಚಕವಾದ ದೃಷ್ಟಿಯಿಂದ ಹನುಮಂತನನ್ನು ನೋಡಿದನು. ಬಂಗಾರದ ಪದಕದಿಂದ ಕೂಡಿದ ತೋಳ್ಬಳೆಗಳನ್ನೂ, ಅಂದವಾದ ಕುಂಡಲಗಳನ್ನೂ ಧರಿಸಿದ ಆ ರಾಕ್ಷಸನು, ಹೀಗೆ ತೀವ್ರಪರಾಕ್ರಮವನ್ನು ತೋರಿಸುತ್ತ ಹನುಮಂತನನ್ನೆದಿರಿಸಿ ನಿಲ್ಲಲು, ಆಗ ಅವರಿಬ್ಬರ ಸೇರುವೆಯು ದೇವಾಸುರರನ್ನೂ ಬೆಜ್ಜರಗೊಳಿಸುವಂತಿತ್ತು. ಈ ಮಹಾವೀರರ ಹೋರಾಟವನ್ನು ನೋಡಿ ಹೆದರಿ, ಭೂಮಿಯು ಮೊರೆಯಿಟ್ಟಿತು. [1] ಸೂರ್ಯನು

---

1. ಇಲ್ಲಿ ಹಿಂದೆಯೇ ಸೂರ್ಯೋದಯವು ಸೂಚಿತವಾಗಿರುವುದರಿಂದ, ಆ ಸೂರ್ಯನೇ ತಪಸಲಿಲ್ಲವೆಂದು ಗೋವಿಂದರಾಜರು. ಅಕ್ಷಯುದ್ಧಸಮಯದಲ್ಲಿ ಸೂರ್ಯೋದಯವಿಲ್ಲವೆಂದೂ ಸೂರ್ಯನು ದೇಶಾಂತರಸ್ಥನಾಗಿದ್ದರೂ ಇಲ್ಲಿನ ಯುದ್ಧವನ್ನು ಕೇಳಿ ಭಯದಿಂದ ತಪಸಲಿಲ್ಲವೆಂದೂ ಮಹೇಶ್ವರತೀರ್ಥರು.

ತಣ್ಣಗಾದನು! ವಾಯುವು ನಿಶ್ಚಲವಾಯಿತು! ಬೆಟ್ಟವೊದಲಾದ ಆಚಲವಸ್ತುವೂ ಅಲ್ಲಾಡಿಹೋಯಿತು! ಆಕಾಶವೂ ಕೂಗಿತು! ಸಮುದ್ರವೂ ಕಲಗಿಹೋಯಿತು! ಗುರಿನೋಡುವುದರಲ್ಲಿಯೂ, ಬಾಣಸಂಧಾನಮಾಡುವುದರಲ್ಲಿಯೂ, ಸಂಧಾನಮಾಡಿದ ಬಾಣವನ್ನು ಗುರಿಯಿಟ್ಟು ಹೊಡೆಯುವುದರಲ್ಲಿಯೂ ಅತಿನಿಪುಣನಾದ ಆ ಅಕ್ಷಕುಮಾರನು, ತೀಕ್ಷ್ಣವಾದ ಅಲಗುಗಳಿಂದಲೂ, ವೇಗವಾದ ಗರಿಗಳಿಂದಲೂ, ಚಿನ್ನದ ಹಿಡಿಗಳಿಂದಲೂ ಕೂಡಿ, ವಿಷಸರ್ಪಗಳಂತಿದ್ದ ಮೂರು ಬಾಣಗಳನ್ನು ಆ ಹನುಮಂತನ ತಲೆಗೆ ಗುರಿಯಿಟ್ಟು ಹೊಡೆದನು. ಈ ಮೂರು ಬಾಣಗಳೂ ಏಕಕಾಲದಲ್ಲಿ ಬಂದು ಹನುಮಂತನ ತಲೆಗೆ ನಾಟಿಕೊಳ್ಳಲು, ಆ ಗಾಯದ ರಕ್ತದಿಂದ ತೊಯ್ದು ತೊಳಲುವ ಕಣ್ಣುಗಳುಳ್ಳ ಆ ಹನುಮಂತನು, ಅಗಲೇ ಉದಿಸಿಬರುವ ಬಾಲಸೂರ್ಯನಂತೆ ರಕ್ತವರ್ಣದಿಂದ ತೋಭಿಸುತ್ತಿದ್ದನು. ಆ ಬಾಣಧಾರೆಗಳೇ ಸೂರ್ಯಕಿರಣಧಾರೆಗಳಂತೆ ತೋರುತಿದ್ದುವು. ಆ ಮೇಲೆ ಸುಗ್ರೀವನಿಗೆ ಪ್ರಧಾನಮಂತ್ರಿಯಾದ ಆ ಆಂಜನೇಯನು, ತನ್ನೊಡನೆ ಯುದ್ಧಕ್ಕಾಗಿ ಬಂದು ನಿಂತಿರುವ ಆ ರಾಜಕುಮಾರನನ್ನೂ, ಅವನ ಕೈಯಲ್ಲಿ ಹಿಡಿದಿರುವ ವಿಚಿತ್ರ ಸಾಯಕಗಳನ್ನೂ, ವಿಚಿತ್ರಧನುಸ್ಸನ್ನೂ ನೋಡಿ "ಛಲೆ! ನನಗೆ ತಕ್ಕ ವೈರಿಯೇ ಸಿಕ್ಕಿದನು" ಎಂದು ಹಿಗ್ಗುತ್ತ, ತನ್ನ ಮೈಯನ್ನು ಮತ್ತಷ್ಟು ಬೆಳೆಸಿದನು. ಬಲದಿಂದಲೂ, ವೀರ್ಯದಿಂದಲೂ ಉಬ್ಬಿದ ಆ ಹನುಮಂತನು ತೀವ್ರಕೋಪದಿಂದ 1 ಮಧ್ಯಾಹ್ನ ಸೂರ್ಯನಂತೆ ಜ್ವಲಿಸುತ್ತ, ಕೆಂಡದಂತೆ ಕೆಂಪೇರಿದ ತನ್ನ ಕಣ್ಣುಗಳಿಂದಲೇ ಆ ಅಕ್ಷಕುಮಾರನನ್ನೂ, ಅವನ ಸೈನ್ಯವನ್ನೂ, ಅವನ ಸಾಹನವನ್ನೂ ದಹಿಸಿಬಿಡುವಂತೆ ನೋಡುತಿದ್ದನು. ಕಾಳಮೇಘದಂತಿದ್ದ ಆ ರಾಕ್ಷಸನು, ಇಂದ್ರಧನುಸ್ಸಿನಂತಿರುವ ವಿಚಿತ್ರಕಾರ್ಮುಕವನ್ನು ಹಿಡಿದು, ಪರ್ವತದಂತೆ ಮಹಾಕಾಯವುಳ್ಳ ಆ ಆಂಜನೇಯನ ಮೇಲೆ ಬಾಣವರ್ಷವನ್ನು ಕರೆಯುತ್ತಿರಲು, ಮೇಘವು ಬೆಟ್ಟದ ಮೇಲೆ ಮಳೆಯನ್ನು ಸುರಿಯುವಂತೆಯೇ ತೋರುತಿತ್ತು. ಹನುಮಂತನು, ತೇಜಸ್ಸಿನಿಂದಲೂ, ಬಲದಿಂದಲೂ, ವೀರ್ಯದಿಂದಲೂ ಉಬ್ಬಿದ ಚಂಡಪರಾಕ್ರಮಿಯಾದ ಆ ರಾಕ್ಷಸನು ತನಗಿದಿರಾಗಿ ಯುದ್ಧಕ್ಕೆ ನಿಂತಿರುವುದನ್ನು ನೋಡಿ ಸಂತೋಷಗೊಂಡು, ಮೇಘದಂತೆ ಉರವಣಿಸಿ ದೊಡ್ಡ ಸಿಂಹನಾದವನ್ನು ಮಾಡಿದನು. ಅಕ್ಷಕುಮಾರನಾದರೋ

1. ಇಲ್ಲಿ "ಸಮುದರಾಗ್ರಸ್ಥ ಇವಾಂಶುಮಾಲೀ" ಎಂದು ಮೂಲವು. ಭರತಖಂಡ ಮಧ್ಯದಲ್ಲಿ ಸಾಲಗ್ರಾಮಪರ್ವತಕ್ಕೆ ಉತ್ತರಭಾಗದಲ್ಲಿ ಮಂದರವೆಂಬ ಪರ್ವತವುಂಟು. ಅಲ್ಲಿಗೆ ಸೂರ್ಯನು ಮಧ್ಯಾಹ್ನ ಕಾಲಕ್ಕೆ ಬರುವುದಾಗಿ ಗ್ರಾಹ್ಯವು.

ಹನುಮಂತನಿಗಿರುವ ಎಣೆಯಿಲ್ಲದ ಶಕ್ತಿಯನ್ನೂ ಯೋಚಿಸದೆ, ಹುಡುಗುತನದಿಂದಲೂ, ವೀರ್ಯದ ಕೊಬ್ಬಿನಿಂದಲೂ, ಕೋಪಗೊಂಡು ಕೆಂಡದಂತೆ ಕೆಂಪಾದ ಕಣ್ಣುಳ್ಳವನಾಗಿ, ಕಾಡಾನೆಯು ಹುಲ್ಲುಮುಚ್ಚಿದ ಹಳೆಯಬಾವಿಯಮೇಲೆ ಅಜ್ಞಾನದಿಂದ ನುಗ್ಗುವಂತೆ ಆ ಕಪಿಯಮೇಲೆ ನುಗ್ಗಿದನು. ಹೀಗೆ ಆ ರಾಕ್ಷಸನು ಮೇಲೆ ಬಿದ್ದು ಬಲಾತ್ಕಾರದಿಂದ ಬಾಣಗಳನ್ನು ಪ್ರಯೋಗಿಸುವುದನ್ನು ನೋಡಿ, ಮೇಘವು ಗುಡುಗುವಂತೆ ಆಂಜನೇಯನು ದೊಡ್ಡಸಿಂಹನಾದವನ್ನು ಮಾಡಿ, ನೋಡುವವರಿಗೆ ಭಯವನ್ನುಂಟುಮಾಡುವಂತೆ ತೋಳುಗಳನ್ನೂ, ತೊಡೆಗಳನ್ನೂ ಬೀಸುತ್ತ ಆಕಾಶಕ್ಕೆ ಹಾರಿಬಿಟ್ಟನು. ಇದನ್ನು ನೋಡಿದೊಡನೆ, ಮಹಾಪ್ರತಾಪವುಳ್ಳವನಾಗಿಯೂ, ರಥಿಕರಲ್ಲಿ ಮೇಲೆನಿಸಿಕೊಂಡವನಾಗಿಯೂ ಇರುವ ಆ ರಾಕ್ಷಸಸಂತಾನಕುಮಾರನೂ ಕೂಡ, ತನ್ನ ರಥದೊಡನೆಯೇ ಆತನನ್ನು ಬೆನ್ನಟ್ಟಿ ಮೇಲೆ ಹಾರಿ, ಮಹಾಮೇಘವು ಪರ್ವತದ ಮೇಲೆ ಕಲ್ಮಳೆಯನ್ನು ಕರೆಯುವಂತೆ ಆ ಕಪಿಯಮೇಲೆ ಬಾಣವರ್ಷಗಳನ್ನು ಕರೆದನು. ಯುದ್ಧದಲ್ಲಿ ಚಂಡಪರಾಕ್ರಮವುಳ್ಳ ಹನುಮಂತನಾದರೋ, ಆಕಾಶದಲ್ಲಿ ಮನೋವೇಗದಿಂದ ಆ ಬಾಣಗಳ ಸಂದಿನಲ್ಲಿಯೇ ಗಾಳಿಯಂತೆ ತೂರಿಬರುತ್ತ, ಆ ಬಾಣಗಳೆಲ್ಲವನ್ನೂ ತಪ್ಪಿಸಿಕೊಂಡು ಸುತ್ತುತ್ತಿದ್ದನು. ಆದರೂ ಅಕ್ಷನು ಕೈಯಲ್ಲಿ ದೊಡ್ಡಬಿಲ್ಲನ್ನು ಹಿಡಿದು ಯುದ್ಧಕ್ಕೆ ನಿಂತು, ತನ್ನ ತೀಕ್ಷ್ಣಬಾಣಗಳಿಂದ ಆಕಾಶವನ್ನು ಎಡೆಬಿಡದೆ ತುಂಬುವುದನ್ನು ನೋಡಿ, ಹನುಮಂತನಿಗೆ ಆ ರಾಕ್ಷಸನ ಪರಾಕ್ರಮದಲ್ಲಿ ಸ್ವಲ್ಪವಾಗಿ ಗೌರವಬುದ್ಧಿಯು ಹುಟ್ಟಿತು. ಆ ಮಹಾವೀರನನ್ನು ಕೊಲ್ಲುವುದಕ್ಕುಪಾಯವೇನೆಂಬ ಚಿಂತೆಯೂ ಹುಟ್ಟಿತು. ಹೀಗೆ ಗೌರವದೃಷ್ಟಿಯಿಂದ ಆತನನ್ನು ನೋಡುತ್ತಿರುವಾಗಲೇ, ಧೀರನಾದ ಅಕ್ಷಕುಮಾರನು ಒಂದು ತೀಕ್ಷ್ಣಬಾಣವನ್ನು ತೆಗೆದು ಆ ಹನುಮಂತನ ಎದೆಗೆ ಹೊಡೆದನು. ಈ ಬಾಣದ ಪೆಟ್ಟು ಬಿದ್ದೊಡನೆ ಆಯಾ ಕಾರ್ಯವಿಶೇಷದ ಸ್ವರೂಪವನ್ನು ಚೆನ್ನಾಗಿ ತಿಳಿದ ಮಹಾಬಾಹುವಾದ ಹನುಮಂತನು ತನ್ನ ಮನಸ್ಸಿನಲ್ಲಿ ತಾನು "ಈ ರಾಕ್ಷಸನೋ ಮಹಾಬಲಾಢ್ಯನು! ಬಾಲಸೂರ್ಯನಂತೆ ತೇಜಸ್ಸಿನಿಂದ ಬೆಳಗುವನು! ಇನ್ನೂ ಬಾಲನಾದರೂ ರಣಪಂಡಿತನಂತೆ ಮಹಾಕಾರ್ಯವನ್ನು ನಡೆಸುತ್ತಿರುವನು! ಸಮಸ್ತ ಯುದ್ಧತಂತ್ರಗಳನ್ನೂ ಬಲ್ಲವನಂತೆ ಕಾಣುವನು! ಇಂತವನನ್ನು ಕೊಲ್ಲುವುದಕ್ಕೆ ನನಗೆ ಬುದ್ಧಿಯೇ ಹುಟ್ಟಲಿಲ್ಲ! ಇದಲ್ಲದೆ ಇವನು ಮಹಾತ್ಮನು! ಪರಾಕ್ರಮದಲ್ಲಿ ಮೇಲೆನಿಸಿರುವನು. ಯುದ್ಧದಲ್ಲಿ ಎಚ್ಚರಿಕೆಯುಳ್ಳವನು! ಕಷ್ಟಗಳನ್ನು ಸಹಿಸತಕ್ಕ

ವನು. ಯುದ್ಧಕಾರ್ಯದಲ್ಲಿ ಇವನ ಚಾತುರ್ಯವು ಬಹಳ ಅತಿಶಯವಾದುದರಿಂದ, ನಾಗರೂ, ಯಕ್ಷರೂ, ದೇವತೆಗಳೂ, ಮಹರ್ಷಿಗಳೂ ಇವನನ್ನು ಗೌರವಿಸುವುದರಲ್ಲಿ ಸಂದೇಹವಿಲ್ಲ. ಇವನಿಗೆ ಮನಸ್ಸಿನಲ್ಲಿ ಪರಾಕ್ರಮವೂ, ಉತ್ಸಾಹವೂ ಮೇಲೆ ಮೇಲೆ ಹೆಚ್ಚುತ್ತಿರುವುದು. ಈತನು ನನ್ನ ಮುಂದೆ ನಿಂತು ಧೈರ್ಯದಿಂದಲೇ ನನ್ನನ್ನು ನೋಡುತ್ತಿರುವನು. ಇವನ ಗತಿವೇಗವನ್ನೂ ಪರಾಕ್ರಮವನ್ನೂ ನೋಡಿದತೆ, ದೇವಾಸುರರಿಂಗಾದರೂ ಮನಸ್ಸು ನಡುಗುವುದು. ಅದರೆ ನಾನು ಇವನನ್ನು ಈಗಲೇ ಕೊಲ್ಲದೆ ಬಿಟ್ಟರೆ ಇವನು ನನ್ನನ್ನು ಭಂಗಿಸದೆ ಬಿಡನು. ಇವನ ಪರಾಕ್ರಮವು ಕ್ಷಣಕ್ಷಣಕ್ಕೂ ಉಬ್ಬಿ ಬರುತ್ತಿರುವುದು. ಈಗಲೂ ನಾನು ಸುಮ್ಮನಿದ್ದರೆ ಇವನನ್ನು ತಡೆಯುವುದೇ ಕಷ್ಟವಾಗುವುದು! ಅದುದರಿಂದ ಈಗಲೇ ಇವನನ್ನು ಕೊಂದುಬಿಡುವುದು ಯುಕ್ತವೆಂದು ತೋರುವುದು. ಉರಿಯುವ ಬೆಂಕಿಯನ್ನಾರಿಸದೆ ಬಿಡುವುದು ಯುಕ್ತವಲ್ಲ." ಎಂದು ಚಿಂತಿಸಿದನು. ವೀರ್ಯಶಾಲಿಯಾದ ಹನುಮಂತನು ಹೀಗೆ ತನ್ನ ಶತ್ರುವಿನ ಬಲವನ್ನು ಕುರಿತು ಮನಸ್ಸಿನಲ್ಲಿ ವಿಮರ್ಶಿಸಿ, ತಾನು ಅವನೊಡನೆ ಮುಂದೆ ನಡೆಸಬೇಕಾದ [1] ಯುದ್ಧಕ್ರಮವನ್ನೂ ನಿಶ್ಚಯಿಸಿಕೊಂಡು, ಆಗಲೇ ಅವನನ್ನು ಕೊಲ್ಲಬೇಕೆಂದೆಣಿಸಿ, ತನ್ನ ವೇಗವನ್ನಾರಂಭಿಸಿದನು. ಒಡನೆಯೇ ಆ ವಾಯುಪುತ್ರನು ಮಹಾವೇಗವುಳ್ಳವುಗಳಾಗಿಯೂ, ಎಚ್ಚರಿಕೆಯುಳ್ಳವುಗಳಾಗಿಯೂ, ಚಿತ್ರಗತಿಯಿಂದ ಹೋಗುವಾಗಲೂ ರಥಧಾರವನ್ನೆಳೆಯಬಲ್ಲವುಗಳಾಗಿಯೂ ಇದ್ದ ಆ ರಾಕ್ಷಸನ ಎಂಟು ರಥಾಶ್ವಗಳನ್ನೂ, ಆಕಾಶದಲ್ಲಿದ್ದಂತೆಯೇ ತನ್ನ ಅಂಗೈಯಿಂದ ಹೊಡೆದು ಕೆಡಹಿದನು. ಮತ್ತು ವೀರನಾದ ಹನುಮಂತನು ಮತ್ತೊಂದು ಕೈಯಿಂದ ಆ ರಾಕ್ಷಸನ ರಥವನ್ನಪ್ಪಳಿಸಿದನು. ಆಗಲೇ ಅದರ ಚಕ್ರಗಳೂ, ಅದರ ಮೂಕಿಯೂ ಮುರಿದು, ಕುದುರೆಗಳೊಡನೆ ಆ ರಥವು ನೆಲಕ್ಕುರುಳಿತು. ಆ ರಾಕ್ಷಸನು ಉಗ್ರವೀರ್ಯವುಳ್ಳ ಮಹಾರಥನಾದುದರಿಂದ ಆಗಲೇ ಆ ರಥವನ್ನು ಬಿಟ್ಟೆಳದು, ಬಿಲ್ಲನ್ನೂ, ಕತ್ತಿಯನ್ನೂ ಕೈಗೆತ್ತಿಕೊಂಡು, ಮೈಮಿಯು ತಪ್ಪೋಮುಜನೆಯಿಂದ ತನ್ನ ದೇಹವನ್ನು ತ್ಯಜಿಸಿ ದೇವಲೋಕವನ್ನಡರುವಂತೆ ಆಕಾಶಕ್ಕೆ ಹಾರಿದನು. ಹೀಗೆ ಆ ರಾಕ್ಷಸನು ಮೇಲೆ ಹಾರಿ, ಗರುಡಗಂಧರ್ವ ಸಿದ್ಧಾದಿಗಳಿಗೆ ವಿಹಾರಸ್ಥಾನವಾದ ಅಂತರಿಕ್ಷದಲ್ಲಿ ಸುತ್ತಿಬರುವುದನ್ನು ಕಂಡು ವಾಯುವೇಗವುಳ್ಳ ಹನುಮಂತನು, ಥಟ್ಟನೆ ಅವನನ್ನು ಸಮೀಪಿಸಿ, ಅವನ

1. ಇಲ್ಲಿ ಮೊದಲು ಆ ರಾಕ್ಷಸನ ರಥವನ್ನೂ ರಥಾಶ್ವಗಳನ್ನೂ ಧ್ವಂಸಮಾಡಿ, ಅಮೇಲೆ ಆ ಅಕ್ಷನನ್ನು ಕೊಲ್ಲಬೇಕೆಂದು ಯುದ್ಧಕ್ರಮವನ್ನು ಸಂಕಲ್ಪಿಸಿದುದಾಗಿ ಭಾವವು.

ಕಾಲುಗಳೆರಡನ್ನೂ ದೃಢವಾಗಿ ಹಿಡಿದುಬಿಟ್ಟನು. ಪರಾಕ್ರಮದಲ್ಲಿ ತನ್ನ ತಂದೆಯಾದ ವಾಯುದೇವನಿಗೆಕಿಂಚಿನಿಸಿದ ಆ ಹನುಮಂತನು, ಗರುಡನು ಮಹಾಸರ್ಪವನ್ನೆಳೆಯುವಂತೆ ಆ ರಾಕ್ಷಸನ ಕಾಲುಗಳನ್ನು ಹಿಡಿದೆಳೆದು, ಅನೇಕಾವರ್ತಿ ವೇಗದಿಂದ ಗಿರಗಿರನೆ ಸುತ್ತಿಸಿ ನೆಲವಲ್ಲಿ ಕುಕ್ಕಿಬಿಟ್ಟನು. [ಇದರಿಂದ ಆ ರಾಕ್ಷಸನಿಗೆ, ತೋಳು, ತೊಡೆ, ಪಡು, ಕಂಠ, ಮುಂತಾದ ಅವಯವಗಳೆಲ್ಲವೂ ಮುರಿದು, ಸರ್ವಾಂಗವೂ ರಕ್ತಮಯವಾಗಿ, ಹೆಮ್ಮೂಳೆಗಳೆಲ್ಲವೂ ಪುಡಿಯಾದುವು. ಕಣ್ಣುಗಳೆರಡೂ ಕಳಚಿಬಿದ್ದುವು. ಸಂಧಿಬಂಧಗಳು ಸಡಿಲಿದುವು. ಆವನ ಮೈಕಟ್ಟುಗಳೆಲ್ಲವೂ ಚದರಿಬಿದ್ದುವು. ಈ ಅವಸ್ಥೆಯಿಂದ ಆ ರಾಕ್ಷಸನು ಸತ್ತುಬೀಳಲು, ಹನುಮಂತನು ಅತನ ದೇಹವನ್ನು ನೆಲಕ್ಕೆ ತಿಕ್ಕಿ ತಿಕ್ಕಿ ಒಂದೇ ಗುಂಡೆಯಾಗಿ ಮಾಡಿ, ಅದರಿಂದ ರಾಕ್ಷಸಶಕ್ರವರ್ತಿಗೂ ನಮಸ್ಕರಿಸುವಂತಾಗುವಂತೆ ಮಾಡಿದನು. ಅಕ್ಷಕುಮಾರನಿಗೆ ಈ ಅವಸ್ಥೆಯುಂಟಾಗಲು, ಜ್ಯೋತಿಶ್ಚಕ್ರಚಾರಿಗಳಾದ ಮಹರ್ಷಿಗಳೂ, ಭೂತಗಳೂ, ಯಕ್ಷರೂ, ಪನ್ನಗರೂ, ಇಂದ್ರಾದಿದೇವತೆಗಳೂ ಆಶ್ಚರ್ಯವಶರಾಗಿ ಹನುಮಂತನನ್ನು ನೋಡುತ್ತಿದ್ದರು. ಹೀಗೆ ಆಂಜನೇಯನು ಇಂದ್ರಕುಮಾರನಿಗೆಯಂದ ಅಕ್ಷನನ್ನು ಕೊಂದು, ತಿರುಗಿ ಆ ತೋರಣದ ಬಾಗಿಲನ್ನೇ ಸೇರಿ ಕಾಲಯಮನಂತೆ ಭಯಂಕರಸ್ವರೂಪದಿಂದ ಕಾದಿದ್ದನು.

ಇಲ್ಲಿಗೆ ನಾಲ್ವತ್ತೈದನೆಯ ಸರ್ಗವು.

ರಾವಣನು ಇಂದ್ರಜಿತ್ತಿಗೆ ನಯವಾಕ್ಯವನ್ನು ಹೇಳಿ ಹನುಮಂತನ ಮೇಲೆ ಯುದ್ಧಕ್ಕೆ ಕಳುಹಿಸಿದುದು. ಇಂದ್ರಜಿತ್ತು ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿ ರಾವಣನ ಬಳಿಗೆ ತಂದುದು.

ಅಮೇಲೆ ಮಹಾಪ್ರಭಾವವುಳ್ಳ ರಾಕ್ಷಸೇಶ್ವರನಾದ ರಾವಣನು, ಹನುಮಂತನಿಂದ ಅಕ್ಷಕುಮಾರನು ಹತನಾದುದನ್ನು ಕೇಳಿ, ದುಃಖವಶನಾಗಿದ್ದರೂ, ತನ್ನ ಮನಸ್ಸನ್ನು ತಾನೇ ಸಮಾಧಾನಮಾಡಿಕೊಂಡು, ಕೊನೆಗೆ ಕೋಪದಿಂದ, ಇಂದ್ರನಿಗೆಯಾದ ಇಂದ್ರಜಿತ್ತೆಂಬ ತನ್ನ ಮಗನನ್ನು ನೋಡಿ, "ಎಲೆ ವತ್ಸನೆ! ನೀನು ಬ್ರಹ್ಮಾಸ್ತ್ರವನ್ನು ಬಲ್ಲವನು. ಶಸ್ತ್ರವಿದ್ಯೆಯನ್ನು ಬಲ್ಲವರಲ್ಲಿ ಮೇಲೆನಿಸಿಕೊಂಡ

ವನು! ದೇವಾಸುರರನ್ನೂ ಗೋಳಾಡಿಸಿದ ಮಹಾವೀರ್ಯವುಳ್ಳವನು. ಇಂದ್ರನೊಡಗೂಡಿ ಬಂದ ದೇವತೆಗಳಲ್ಲಿಯೂ ನೀನು ತೋರಿಸಿದ ಪರಾಕ್ರಮಕಾರ್ಯವು ಲೋಕಪ್ರಸಿದ್ಧವಾಗಿರುವುದು. ಬ್ರಹ್ಮನುಗ್ರಹದಿಂದ ನಿನಗೆ ಸಮಸ್ತದಿವ್ಯಾಸ್ತ್ರಗಳೂ ಸ್ವಾಧೀನವಾಗಿರುವವು. ನಿನ್ನ ಅಸ್ತ್ರಬಲಕ್ಕೆ ದೇವತೆಗಳಾಗಲಿ, ದಾನವರಾಗಲಿ, ಯುದ್ಧದಲ್ಲಿ ಇದಿರಾಗಿ ನಿಲ್ಲಲಾರರು. ಸಮಸ್ತದೇವಾಸುರರೂ ಒಂದಾಗಿ ಸೇರಿ ದೇವೇಂದ್ರನೊಡಗೂಡಿ ಬಂದರೂ ನಿನಗಿವರಲ್ಲ. ಮೂರುಲೋಕಗಳಲ್ಲಿಯೂ ನಿನ್ನೊಡನೆ ಯುದ್ಧಮಾಡಿ ಸೋತು ಪಲಾಯನಪಾಡದವರೊಬ್ಬರಾದರೂ ಇಲ್ಲ. ಒಂದು ಕಡೆಯಲ್ಲಿ ನಿನ್ನ ಬಾಹುವೀರ್ಯವೂ, ಮತ್ತೊಂದು ಕಡೆಯಲ್ಲಿ ನಿನ್ನ ಮಹಾತಪಸ್ಸೂ ನಿನ್ನನ್ನು ಸುರಕ್ಷಿತವಾಗಿ ಕಾಪಾಡುತ್ತಿರುವುವು. ಕಾಲದೇಶ ವಿಭಾಗಗಳನ್ನು ಬಲ್ಲ ಮಹಾಬುದ್ಧಿಶಾಲಿಯೆಂದರೆ ನಿನಗೇ ಸಲ್ಲುವುದು. ಯುದ್ಧಕಾಲಗಳಲ್ಲಿ ನಿನಗೆ ಸ್ವಪ್ರಯತ್ನದಿಂದ ಸಾಧ್ಯವಲ್ಲದುದೊಂದೂ ಇಲ್ಲ. ವಿವೇಕದಿಂದ ನೀನು ಮಂತ್ರಾಲೋಚನೆಯನ್ನು ಮಾಡಿದಪಕ್ಷದಲ್ಲಿ ನಿನ್ನ ಬುದ್ಧಿಗೆ ಹೊಳೆಯದ ಕಾರ್ಯವೊಂದೂ ಇಲ್ಲ! ಮೂರುಲೋಕಗಳಲ್ಲಿಯೂ, ನಿನ್ನ ಅಸ್ತ್ರಬಲವನ್ನಾಗಲಿ, ನಿನ್ನ ತಪೋಬಲವನ್ನಾಗಲಿ ತಿಳಿಯದವನೊಬ್ಬನೂ ಇಲ್ಲ. ತಪೋಬಲದಲ್ಲಿಯಾಗಲಿ, ಪರಾಕ್ರಮದಲ್ಲಿಯಾಗಲಿ, ಅಸ್ತ್ರಬಲದಲ್ಲಿಯಾಗಲಿ, ನೀನು ನನಗಿಣೆಯೆನಿಸಿಕೊಂಡಿರುವೆ. ಯಾವ ಯುದ್ಧದಲ್ಲಿಯೂ ನಿನಗೆ ಜಯವೆಂಬುದೇ ನಿಶ್ಚಯವು. ಅದುದರಿಂದ ಯುದ್ಧಸಂಕಟವು ಬಂದೊದಗಿದಾಗ, ಜಯಶೀಲನಾದ ನಿನ್ನನ್ನು ಸ್ಮರಿಸಿಕೊಂಡಮಾತ್ರಕ್ಕೇ ನನ್ನ ಮನಸ್ಸಿಗೆ ವಿಷಾದವೆಂಬುದೇ ತೋರದು. ಇದುವರೆಗೆ ಆ ಕಪಿಯಿಂದ ನನ್ನ ಕಡೆಯ ಕಿಂಕರರೆಂಬ ರಾಕ್ಷಸಭಟರೆಲ್ಲರೂ ಹತರಾದರು. ಜಂಬುಮಾಲಿಯೆಂಬ ವೀರರಾಕ್ಷಸನೂ ಸಂಹೃತನಾದನು. ಏಳುಮಂದಿ ಮಂತ್ರಿಕುಮಾರರೂ ಹತರಾದರು. ವೀರರಾದ ಐದುಮಂದಿ ಸೇನಾಪತಿಗಳೂ ಹತರಾದರು. ರಥಗಜತುರಗಾವಿಗಳಿಂದ ಪೂರ್ಣವಾದ ಅನೇಕಸೈನ್ಯಗಳೂ ಹತವಾದುವು. ಇರಲಿ! ನಿನಗೆ ಪ್ರಿಯಸಹೋದರನಾದ ಅಕ್ಷಕುಮಾರನೂ ಈಗಲೇ ಹತನಾದನು. ಅದರೇನು? ಎಲೈ ಶತ್ರುಸೂದನನೆ! ಪರಾಕ್ರಮದ ವಿಷಯದಲ್ಲಿ ನನಗೆ ನಿನ್ನಲ್ಲಿರುವ ನಂಬಿಕೆಯು ಬೇರೆಯವರಲ್ಲಿಲ್ಲ. ಅವರನ್ನು ನಾನು ನಂಬಿಯೂ ಇರಲಿಲ್ಲ. ಆದುದರಿಂದ ಈಗ ನೀನೇ ನಮಗೆ ಅಸ್ಮತ್ಪ್ರಯೋಜನಮಹಾನರ್ಥಗಳನ್ನು ಮಾಡಿದ ಆ ಕಪಿಯ ದೇಹಬಲವನ್ನೂ, ಬುದ್ಧಿಬಲವನ್ನೂ, ಪುಚ್ಛಮೆಯನ್ನೂ, ಪರಾಕ್ರಮವನ್ನೂ, ಚೆನ್ನಾಗಿ ವಿಮರ್ಶಿಸಿ, ನಿನ್ನ ಶಕ್ತಿಯನ್ನೂ ಚೆನ್ನಾಗಿ ಪರಿತೀಲಿಸಿ ನೋಡಿಕೊಂಡು, ಆ ನಿನ್ನ ಶಕ್ತಿಗೆ

ತಕ್ಕಂತೆ ಆ ವಾನರನಲ್ಲಿ ಪ್ರವರ್ತಿಸಬೇಕು. ಎಲೆ ವತ್ಸನೆ! ಶಸ್ತ್ರಾಸ್ತ್ರಗಳನ್ನು ಬಲ್ಲ ವರಲ್ಲಿ ನೀನೇ ಮೇಲೆನಿಸಿಕೊಂಡಿರುವೆಯಾದುದರಿಂದ, ನೀನು ಇಲ್ಲಿಂದ ಆ ಕಪಿಯ ಬಳಿಗೆ ಹೋದವೇಲೆ, ನಿನ್ನ ಮತ್ತು ನಿನ್ನ ಶತ್ರುವಿನ ಬಲವನ್ನು ನೋಡಿಕೊಂಡು, ನಮ್ಮ ಸೇನೆಗೆ ಯಾವ ಅಪಾಯವೂ ಇಲ್ಲದಂತೆ ಆ ಕಪಿಯನ್ನು ಹಿಡಿದುತರುವು ದಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕು! [1] ಎಲೈ ವೀರನೆ! ಆ ಹನುಮಂತನ ವಿಷಯದಲ್ಲಿ ನಮ್ಮ ಸೈನ್ಯಗಳೊಂದೂ ಕೆಲಸಕ್ಕೆ ಬಾರವು. ಅವನ ಪ್ರಹಾರಕ್ಕೆ ನಮ್ಮ ಸೈನ್ಯಗಳೆಲ್ಲವೂ ಗುಂಪ್ರಗುಂಪಾಗಿ ಸತ್ತು ಬೀಳುವುವು. ಆ ಹನುಮಂತನ ವಿಷಯದಲ್ಲಿ ವಜ್ರಾಯುಧವೂ ನಿಸ್ಸಾರವಾದುದರಿಂದ ಅದನ್ನು ಹಿಡಿದು ಹೋದರೂ ಫಲಕಾರಿಯಾಗದು. ಅವನ ಗಮನವೇಗವು ವಾಯುವಿಗೂ ಇಲ್ಲ! ಅಗ್ನಿಗೆಣೆಯಾದ ಅತನನ್ನು ಬೇರೆ ಮುಷ್ಟ್ಯಾದಿ ಸಾಧನಗಳಿಂದಲೂ ಕೊಲ್ಲುವುದು ಸಾಧ್ಯವಲ್ಲ! ನಾನು ಇದುವರೆಗೆ ಹೇಳಿದ ವಿಷಯಗಳೆಲ್ಲವನ್ನೂ ಚೆನ್ನಾಗಿ ವಿಮರ್ಶಿಸಿ, ನಿನ್ನ ಕಾರ್ಯಸಿದ್ಧಿಗೆ ತಕ್ಕ ಎಚ್ಚರಿಕೆಯಿಂದ ಕೂಡಿ, ನಿನ್ನ ಬಲ್ಲಿಗೆ ಯೋಗ್ಯವಾದ ದಿವ್ಯಾಸ್ತ್ರಗಳ ಬಲವನ್ನೂ ಮರೆಯದೆ ಮನಸ್ಸಿನಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ಹೊರಡು! ಅಸ್ತ್ರಬಲದಿಂದ ಹೊರತು ಬೇರೆ ಉಪಾಯದಿಂದ ಅವನನ್ನು ನಿಗ್ರಹಿಸುವುದೇ ಸಾಧ್ಯವಲ್ಲ! ಮುಖ್ಯವಾಗಿ ನೀನು ಹೋದ ಕಾರ್ಯವು ಕೆಡದಂತೆ ಪ್ರಯತ್ನಿಸು! ಆದರೆ, ಎಲೆ ವತ್ಸನೆ! ನಿನ್ನಲ್ಲಿ ನನಗಿರುವ ಅಸಾಧಾರಣ ಪ್ರೀತಿಯನ್ನು ನೋಡಿದರೆ, ಇಂತಹ ಅಪಾಯಕರವಾದ ಯುದ್ಧಕ್ಕೆ ನಾನು ನಿನ್ನನ್ನು ಕಳುಹಿಸುವುದೇ ಅಷ್ಟಾಗಿ ಯುಕ್ತವಲ್ಲ! ಆದರೆ ರಾಜನೀತಿಯನ್ನೂ

---

1. ಇಲ್ಲಿ "ನವೀರಸೇನಾಗಣಕೋಚ್ಯವಂತಿ :ನವಜ್ರಮಾದಾಯ ವಿಶಾಲಸಾರವಮ್" ಎಂದು ಮೂಲವು. ಇದರಲ್ಲಿ (ಗಣಕೋಚಿ) ಸೈನ್ಯಗಳನ್ನು ಗುಂಪುಗುಂಪಾಗಿ ಕೊಲ್ಲುತಕ್ಕ ಆ ಹನುಮಂತನಲ್ಲಿ (ಸೇನಾಃ) ನಿನ್ನ ಸೇನೆಗಳು (ನಾವಂತಿ) ನಿನ್ನನ್ನು ರಕ್ಷಿಸಲಾರವು. (ಅಲಸಾರಂ) ಅಲ್ಪಸಾರವುಳ್ಳ (ವಜ್ರಮಾದಾಯ) ವಜ್ರವೆಂಬ ಆಯುಧವನ್ನು ಹಿಡಿದಾಪರೂ (ನವಿಶ) ನೀನು ಯುದ್ಧಕ್ಕೆ ಪ್ರವೇಶಿಸಬೇಡ" ಎಂದು ಗೋವಿಂದರಾಜ ವ್ಯಾಖ್ಯಾನವು. ಮತ್ತು (ವೀರ) ಎಲೈ ವೀರನೆ! "(ಸೇನಾಃ) ನಿನ್ನ ಸೇನೆಗಳೂ (ನ) ಪ್ರಯೋಜನಕಾರಿಗಳಲ್ಲ. (ಗಣಶಃ) ಗುಂಪುಗುಂಪಾಗಿ (ಘ್ನಂತಿ) ಸತ್ತು ಮಲಗುವುವು. (ವಿಶಾಲಸಾರಂ) ವಿಶೇಷ ಸಾರವುಳ್ಳ (ವಜ್ರಮಾದಾಯಾಪಿ) ವಜ್ರವನ್ನು ಹಿಡಿದು ಹೋದರೂ(ನ)ಫಲವಿಲ್ಲ" ಇತ್ಯಾದಿ ವ್ಯಾಖ್ಯಾನಾಂತರಗಳೂ ಉಂಟು.

ಕ್ಷತ್ರಿಯಧರ್ಮವನ್ನೂ ವಿಚಾರಿಸುವಾಗ [1] ಇದು ನ್ಯಾಯವಾಗಿಯೇ ಇರುವುದರಿಂದ ಈಗ ನಾನು ನಿನ್ನನ್ನು ಕಳುಹಿಸುತ್ತಿರುವೆನು. ಮುಖ್ಯವಾಗಿ ನೀನು ಆ ಯುದ್ಧದಲ್ಲಿ ವಿವಿಧಾಸ್ತ್ರಪ್ರಯೋಗಗಳಲ್ಲಿ ನಿನಗಿರುವ ಸಾಮರ್ಥ್ಯವನ್ನು ಮಾತ್ರ ಅವಶ್ಯವಾಗಿ ಸ್ಮರಣೆಯಲ್ಲಿಟ್ಟಿರಬೇಕು! ಮುಖ್ಯವಾಗಿ ಜಯದಲ್ಲಿಯೇ ಪೂರ್ಣದೃಷ್ಟಿಯನ್ನಿಟ್ಟಿರಬೇಕು!' ಎಂದನು. [2] ದಕ್ಷಪುತ್ರರಾದ ದೇವತೆಗಳಂತೆ ಮಹಾಪ್ರಭಾವವುಳ್ಳ ವೀರನಾದ ಇಂದ್ರಜಿತ್ತು, ತಂದೆಯುಪದೇಶಿಸಿದ ಈ ಮಾತುಗಳನ್ನು ಕೇಳಿ, ಆಗಲೇ ಯುದ್ಧಪ್ರಯಾಣಕ್ಕೆ ನಿಶ್ಚಯಿಸಿಕೊಂಡು, ತಂದೆಗೆ ಪ್ರದಕ್ಷಿಣವನ್ನು ಮಾಡಿದನು. ಮತ್ತು ತನ್ನ ಇಷ್ಟ ಮಿತ್ರಪರಿವಾರಗಳಿಂದ ಸ್ತುತಿಸಲ್ಪಡುತ್ತ ಮಹೋತ್ಸಾಹವುಳ್ಳವನಾಗಿ ಯುದ್ಧಕ್ಕೆ ಹೊರಟನು. ತಾವರೆಯಿಸಳಿನಂತೆ ಕಣ್ಣುಳ್ಳ ಮಹಾತೇಜಸ್ವಿಯಾದ ಆ ರಾಕ್ಷಸರಾಜಕುಮಾರನು ಪ್ರಳಯಕಾಲದ ಸಮುದ್ರದಂತೆ ಉತ್ಸಾಹದಿಂದುಕ್ಕುತ್ತ, ಗರುಡನಂತೆ ಮಹಾವೇಗವುಳ್ಳವುಗಳಾಗಿ, ತೀಕ್ಷ್ಣಗಳಾದ ಬಿಳಿಕೋರೆದಾಡೆಗಳುಳ್ಳ ನಾಲ್ಕು ಸಿಂಹಗಳನ್ನು ಕಟ್ಟಿದ, ನಿರಂಕುಶವೇಗವುಳ್ಳ (ನೆಲವನ್ನು ಮುಟ್ಟದೆ ಹೋಗುವ) ಒಂದು ದೊಡ್ಡ ರಥವನ್ನೇರಿದನು. ಆ ಇಂದ್ರಜಿತ್ತಾದರೋ ಮಹಾರಥಿಕನು. ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡವನು. ಸಮಸ್ತ ಶಸ್ತ್ರಗಳನ್ನೂ ಬಲ್ಲವನು. ಅಸ್ತ್ರಜ್ಞರಲ್ಲಿ ಶ್ರೇಷ್ಠನು. ಇಂತಹ ರಾಕ್ಷಸರಾಜಕುಮಾರನು ರಥವನ್ನೇರಿ ವೇಗದಿಂದ ಹನುಮಂತನ ಕಡೆಗೆ ಬರುತ್ತಿರುವಾಗಲೇ, ಇವನ ರಥಧ್ವನಿಯನ್ನೂ, ಧನುಷ್ಟಂಕಾರಧ್ವನಿಯನ್ನೂ ಕೇಳಿ ಆ ಹನುಮಂತನು ತಿರುಗಿ ತನಗೆ ಯುದ್ಧವೊದಗಿತೆಂಬ ಉತ್ಸಾಹದಿಂದ ಸಂತೋಷಿಸಿ, ಉಬ್ಬುತ್ತಿದ್ದನು. ಇತ್ತಲಾಗಿ ರಣಪಂಡಿತನಾದ ಇಂದ್ರಜಿತ್ತು ದೊಡ್ಡ ಬಿಲ್ಲನ್ನೂ, ಹರಿತವಾದ ಅಲಗುಗಳುಳ್ಳ ಬಾಣಗಳನ್ನೂ ಹಿಡಿದು ಹನುಮಂತನಿಗೆದಿರಾಗಿ ಬಂದನು. ಹೀಗೆ ಇವನು ಬಾಣಗಳನ್ನು ಹಿಡಿದು ಸಿದ್ಧವಾಗಿ ಮಹೋತ್ಸಾಹದಿಂದ ಯುದ್ಧಕ್ಕೆ ಬರುವಾಗಲೇ ದಿಕ್ಕುಗಳೆಲ್ಲವೂ ಮಲಿನವಾದುವು. ಕ್ರೂರಮೃಗಗಳು ಅಪಸ್ವರದಿಂದ ಸುತ್ತಲೂ ಅರಚುತ್ತಿದ್ದುವು. ಈ ಯುದ್ಧವನ್ನು ನೋಡುವುದಕ್ಕಾಗಿ,

---

1. ಇಲ್ಲಿ ತನಗೆ ಬೇರೆ ಸಹಾಯಕರಿರುವಾಗ, ಶತ್ರುವಾನಸನಾದವನು ತಾನೇ ಮೊದಲು ಯುದ್ಧಕ್ಕೆ ಹೋಗುವುದು ನೀತಿಶಾಸ್ತ್ರವಿರುದ್ಧವಾದುದರಿಂದ ನಾನು ಹೋಗದೆ ನಿನ್ನನ್ನು ಕಳುಹಿಸುವುದು ನ್ಯಾಯವೆಂದು ರಾವಣನು ಇಂದ್ರಜಿತ್ತಿಗೆ ಹೇಳಿದುದಾಗಿ ಭಾವವು.

2. ವಿಷ್ಣುಪುರಾಣದಲ್ಲಿ "ಮನಸಾಶ್ಚೈವ ಭೂತಾನಾಮೃಷೀಣಾಂ ದಕ್ಷಕೋಽಸೃಜತ್ ತಾ ದೇವಾಸೃಷೀಃ ಸಗಂಧರ್ವಾಸುರಗಾಃ ಪಕ್ಷಿಣಸ್ತಥಾ ಎಂದು ಹೇಳಿರುವುದರಿಂದ ಇಲ್ಲಿ ದೇವತೆಗಳಿಗೆ ದಕ್ಷಸುತತ್ವವ್ಯವಹಾರವು.

ನಾಗರೂ, ಯಕ್ಷರೂ, ಗಂಧರ್ವರೂ, ಮಹರ್ಷಿಗಳೂ, ಯೂಥಚಾರಿಗಳಾದ ಸಿದ್ಧರೂ, ಅಲ್ಲಿಗೆ ಬಂದು ನೆರೆದರು. ಆಕಾಶದಲ್ಲಿ ಪಕ್ಷಿಗಳು ಹಿಂಡುಹಿಂಡಾಗಿ ಸೇರಿ ಹರುಷದಿಂದ ಗಟ್ಟಿಯಾಗಿ ಕೂಗುತ್ತಿದ್ದುವು. ಇತ್ತ ಕಡೆಲ್ಲಿ ಅತ್ಯಲಾಗಿ ಹನುಮಂತನು ತನಗಿದಿರಾಗಿ ರಥದಲ್ಲಿ ಕುಳಿತು ವೇಗದಿಂದ ಬರುತ್ತಿದ್ದ ಇಂದ್ರಜಿತ್ತನ್ನು ನೋಡಿ, ಆಗಲೇ ಒಂದುದೊಡ್ಡ ಸಿಂಹನಾದವನ್ನು ಮಾಡಿ ತನ್ನ ಮೈಯನ್ನು ಬೆಳೆಸುವುದಕ್ಕೆ ತೊಡಗಿದನು. ಇತ್ತಲಾಗಿ ಇಂದ್ರಜಿತ್ತೂ, ದಿವ್ಯರಥವನ್ನೇರಿ ಕೈಯಲ್ಲಿ ವಿಚಿತ್ರವಾದ ಬಿಲ್ಲನ್ನು ಹಿಡಿದು ಸಿಡಿಲು ಹೊಡೆದಂತೆ ಅದನ್ನು ಮಿಡಿದು ಧ್ವನಿಮಾಡುತ್ತಾ ಮುಂದೆ ಬಂದನು. ಅವರಿಬ್ಬರೂ ಒಂದಾಗಿ ಕಲೆತರು! ಇಬ್ಬರೂ ಪ್ರಚಂಡವೇಗವುಳ್ಳವರು! ಇಬ್ಬರೂ ಮಹಾಬಲಾಢ್ಯರು. ಇಬ್ಬರೂ ಯಾವ ಯುದ್ಧಗಳಲ್ಲಿಯೂ ಹಿಂಜರಿಯದವರು! ಹೀಗೆ ಸಮಾನ ಬಲವುಳ್ಳ ಆ ಕಪಿರಾಕ್ಷಸರಿಬ್ಬರೂ ಸಂಧಿಸಿ, ಬದ್ಧವೈರವುಳ್ಳ ದೇವೇಂದ್ರನೂ, ದಾನವೇಂದ್ರನೂ ಯುದ್ಧಕ್ಕಿದಿರಾಗಿ ನಿಂತಂತೆ ಇದಿರಿಸಿ ನಿಂತರು. ಇತ್ತರಲ್ಲಿ ವೀರನಾಗಿಯೂ ಮಹಾರಥನಾಗಿಯೂ, ಧನುರ್ಧಾರಿಗಳಲ್ಲಿ ಶ್ರೇಷ್ಠನಾಗಿಯೂ, ಯುದ್ಧದಲ್ಲಿ ಬಹಳ ಖ್ಯಾತಿಹೊಂದಿದವನಾಗಿಯೂ ಇರುವ ಇಂದ್ರಜಿತ್ತು, ತನ್ನ ಬಾಣಗಳನ್ನು ಪ್ರಯೋಗಿಸಲು, ಹನುಮಂತನು ತನ್ನ ಮೈಯನ್ನು ಬಹಳವಾಗಿ ಬೆಳೆಸಿ, ಆಕಾಶದಲ್ಲಿ ಚಿತ್ರಗತಿಯಿಂದ ತಿರುಗುತ್ತ, ಅವೆಲ್ಲವನ್ನೂ ತಪ್ಪಿಸಿಕೊಂಡನು. ಇದನ್ನು ನೋಡಿ ವೀರನಾದ ಇಂದ್ರಜಿತ್ತು ತೀಕ್ಷ್ಣವಾದ ಅಲಗುಗಳಿಂದಲೂ ಉತ್ತಮವಾದ ಗರಿಗಳಿಂದಲೂ, ಚೆನ್ನಾದ ಹಿಡಿಗಳಿಂದಲೂ, ಬಗ್ಗಿದ ಮೊನೆಗಳಿಂದಲೂ ಕೂಡಿದ ವಜ್ರಸಮಾನವೇಗವುಳ್ಳ ಬೇರೆಕೆಲವು ಬಾಣಗಳನ್ನು ತೆಗೆದು ಹನುಮಂತನ ಮೇಲೆ ಪ್ರಯೋಗಿಸಿದನು. ಆ ಹನುಮಂತನು ಇಂದ್ರಜಿತ್ತಿನ ರಥಧ್ವನಿಯನ್ನೂ ಅವನ ಸೇನೆಯಲ್ಲಿ ಬಾರಿಸಲ್ಪಡುವ ಪಣ್ಣವ, ಭೇರಿ, ತಮಟೆ ಮೊದಲಾದ ರಣವಾದ್ಯ ಧ್ವನಿಗಳನ್ನೂ, ಅವನ ಧನುಷ್ಟಂಕಾರವನ್ನೂ ಕೇಳಿ ತಿರುಗಿ ಆಕಾಶಕ್ಕೆ ಹಾರಿದನು. ಇಂದ್ರಜಿತ್ತು ಗುರಿಹಿಡಿದು ಹೊಡೆಯುವುದರಲ್ಲಿ ಬಹಳ ನಿಪುಣನಾಗಿದ್ದರೂ, ಅವನು ಬಿಟ್ಟ ಬಾಣಗಳ ನಡುನಡುವೆ ಹನುಮಂತನು ಆಕಾಶದಲ್ಲಿ ತನ್ನ ಗತಿ ಚಾತುರ್ಯದಿಂದ ಸುತ್ತಿಬರುತ್ತ ಅವೆಲ್ಲವನ್ನೂ ವ್ಯರ್ಥವಾಗಿ ಮಾಡಿದನು. ಕೆಲವು ಬಾಣಗಳಿಗೆ ತಾನು ಇದಿರಾಗಿಯೇ ನಿಂತು, ತನ್ನ ಕೈಗಳಿಂದಲೇ ಅವುಗಳನ್ನು ತಡೆದು ಆಕಾಶಕ್ಕೆ ಹಾರುತಿದ್ದನು. ಹೀಗೆ ವೇಗಸಂಪನ್ನರಾಗಿಯೂ, ಯುದ್ಧ ಕಾರ್ಯದಲ್ಲಿ ನಿಪುಣರಾಗಿಯೂ ಇದ್ದ ಆ ಕಪಿರಾಕ್ಷಸರಿಬ್ಬರೂ ಸಮಸ್ತಭೂತಗಳ ಮನಸ್ಸನ್ನೂ ಆಕರ್ಷಿಸುವಂತೆ ಅದ್ಭುತಯುದ್ಧವನ್ನು ಮಾಡಿದರು. ಆವಿಬ್ಬರೂ

ಮಹಾಪ್ರಭಾವವುಳ್ಳವರಾಗಿದ್ದರೂ, ಹನುಮಂತನನ್ನು ನಿಗ್ರಹಿಸುವುದಕ್ಕೆ ತಕ್ಕ ಅವಕಾಶವೇನೆಂದು ಇಂದ್ರಜಿತ್ತಿಗೆ ತೋರಲಿಲ್ಲ. ಇಂದ್ರಜಿತ್ತನ್ನು ನಿಗ್ರಹಿಸುವುದಕ್ಕೆ ಹನುಮಂತನಿಗೂ ಅವಕಾಶವು ಸಿಕ್ಕಲಿಲ್ಲ. ದೇವಕುಮಾರರಂತೆ ಮಹಾಪರಾಕ್ರಮವುಳ್ಳ ಅವರಿಬ್ಬರೂ ಹೀಗೆ ಹೋರಾಡುತ್ತಿರುವಾಗ, ಒಬ್ಬರ ವೇಗವನ್ನೊಬ್ಬರು ತಡೆದುಕೊಳ್ಳುವುದೇ ಕಷ್ಟವಾಯಿತು. ಇಂದ್ರಜಿತ್ತಾದರೋ ಗುರಿನೋಡಿ ಬಾಣ ಸಂಧಾನಮಾಡಿ ಹೊಡೆಯುವುದರಲ್ಲಿ ಬಹಳ ಎಚ್ಚರವುಳ್ಳವನು. ಅವನ ಬಾಣಗಳು ಎಲ್ಲಿಯೂ ವ್ಯರ್ಥವಾಗತಕ್ಕವುಗಳಲ್ಲ. ಹೀಗಿದ್ದರೂ ತನ್ನ ಪ್ರಯತ್ನಗಳೂ, ತನ್ನ ಬಾಣಗಳೂ, ಹನುಮಂತನಲ್ಲಿ ವಿಫಲಗಳಾಗಿ ಹೋದುದನ್ನು ನೋಡಿ ಮನಸ್ಸಿನಲ್ಲಿ ಅವನಿಗೆ ಮಹತ್ತಾದ ಚಿಂತೆಯುಂಟಾಯಿತು. ಕೊನೆಗೆ ರಾಕ್ಷಸರಾಜಕುಮಾರನಾದ ಆ ಇಂದ್ರಜಿತ್ತಿಗೆ ಹನುಮಂತನನ್ನು ಕೊಲ್ಲುವುದು ಯಾವವಿಧದಿಂದಲೂ ಅಸಾಧ್ಯವೆಂದೇ ತೋರಿತು. ಆ ಕಪಿಯನ್ನು ಹಿಡಿದು ಕಟ್ಟಿತರುವುದಕ್ಕಾದರೂ ಉಪಾಯವೇನೆಂಬ ಚಿಂತೆಯು ಹುಟ್ಟಿತು. ಕೊನೆಗೆ ಅಸ್ತ್ರವಿದರಲ್ಲಿ ಮೇಲೆನಿಸಿಕೊಂಡು ಮಹಾತೇಜಸ್ವಿಯಾದ ಅತನ ಮನಸ್ಸಿಗೆ ಒಂದುಪಾಯವು ತೋರಿತು. ಬ್ರಹ್ಮದೇವತಾತ್ಮಕವಾದ ಒಂದು ಉತ್ತಮಾಸ್ತ್ರವನ್ನು ಹನುಮಂತನಮೇಲೆ ಪ್ರಯೋಗಿಸುವುದಕ್ಕಾಗಿ ಬಿಲ್ಲಿನಲ್ಲಿ ಸಂಧಾನಮಾಡಿದನು. ಸಮಸ್ತಶಸ್ತ್ರಾಸ್ತ್ರಗಳ ಸಾರವನ್ನೂ ಜೀವನ್ನಾಗಿ ಬಲ್ಲ ಆ ಇಂದ್ರಜಿತ್ತು, ಹನುಮಂತನು ಬೇರೆ ಯಾವ ಬಾಣಗಳಿಗೂ ಅವಧ್ಯನೆಂಬುದನ್ನು ತಿಳಿದು, ಆ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿ, ಅದರಿಂದ ಆ ವಾಯುಪುತ್ರನ ವೇಗವನ್ನಡಗಿಸಿ ಅವನನ್ನು ಕಟ್ಟಿಬಿಟ್ಟನು. ರಾಕ್ಷಸನು ಬಿಟ್ಟ ಈ ಬ್ರಹ್ಮಾಸ್ತ್ರದಲ್ಲಿ ಹನುಮಂತನು ಕಟ್ಟುಬಿದ್ದು ನಿಶ್ಚೇಷ್ಟನಾಗಿ ನೆಲದಮೇಲೆ ಬಿದ್ದನು. ಆಗ ಆ ಹನುಮಂತನು ತಾನು ಬ್ರಹ್ಮಾಸ್ತ್ರದಲ್ಲಿ ಕಟ್ಟುಬಿದ್ದಿರುವುದನ್ನು ತಿಳಿದು, ಆ ಬ್ರಹ್ಮನ ಪ್ರಭಾವದಿಂದ ಶಕ್ತಿಗುಂದಿದವನಾಗಿ, ಪೂರ್ವದಲ್ಲಿ ತನಗೆ ಬ್ರಹ್ಮನು ಅನುಗ್ರಹಿಸಿ ಕೊಟ್ಟಿರುವ ವರವನ್ನೂ ನೆನಪಿಗೆ ತಂದುಕೊಂಡನು. ಹೀಗೆ ಇಂದ್ರಜಿತ್ತು ಸ್ವಾಯಂಭುವಮಂತ್ರಗಳಿಂದಭಿಮಂತ್ರಿಸಿ ಈ ಬ್ರಹ್ಮಾಸ್ತ್ರವನ್ನು ತನ್ನಮೇಲೆ ಬಿಟ್ಟಿರುವನೆಂಬುದನ್ನು ಹನುಮಂತನು ತಿಳಿದು, ತನಗೆ ಬ್ರಹ್ಮನು ಕೊಟ್ಟಿದ್ದ ವರವನ್ನೂ ಜ್ಞಾಪಿಸಿಕೊಂಡು, ಕನ್ನಲ್ಲಿ ತಾನು "ಲೋಕಗುರುವಾದ ಆ ಬ್ರಹ್ಮದೇವನ ಪ್ರಭಾವದಿಂದಿರುವ ಈ ಬ್ರಹ್ಮಾಸ್ತ್ರದ ಕಟ್ಟನ್ನು ಬಿಡಿಸಿಕೊಳ್ಳುವುದಕ್ಕೆ ಈಗ ನನ್ನಿಂದ ಸಾಧ್ಯವಲ್ಲ! ಇದನ್ನು ತಿಳಿದೇ ಈ ರಾಕ್ಷಸನೂ ನನ್ನನ್ನು ಈಗ ಬ್ರಹ್ಮಾಸ್ತ್ರದಿಂದ ಕಟ್ಟಿರಬೇಕು! ಹೇಗಾದರೂ ಆಗಲಿ! ಈ ಅಸ್ತ್ರವು ಮಹಾತ್ಮನಾದ ಬ್ರಹ್ಮನಿಗೆ ಸಂಬಂಧಪಟ್ಟಿರು

ವುದರಿಂದ, ಸ್ವಲ್ಪಕಾಲದವರೆಗೆ ಇದನ್ನನುವರ್ತಿಸಿ ನಡೆಯಬೇಕಾದುದೇ ನನಗೂ ಉಚಿತವು'' ಎಂದು ನಿಶ್ಚಯಿಸಿಕೊಂಡನು. ಹೀಗೆ ಹನುಮಂತನು ಬ್ರಹ್ಮಾಸ್ತ್ರದ ವೀರ್ಯವನ್ನೂ, ಆ ಬ್ರಹ್ಮಾಸ್ತ್ರವು ಒಂದು ಮುಹೂರ್ತಕಾಲದಮೇಲೆ ಬಿಟ್ಟು ಹೋಗುವಂತೆ ಬ್ರಹ್ಮನು ತನಗೆ ವರದಾನಮಾಡಿರುವುದನ್ನೂ ಮನಸ್ಸಿನಲ್ಲಿ ಚಿಂತಿಸಿ, ಆ ಬ್ರಹ್ಮದೇವನ ಆಜ್ಞೆಯನ್ನನುಸರಿಸಿ ಅದಕ್ಕೆ ಬದ್ಧನಾಗಿಯೇ ಇದ್ದು ತಿರುಗಿ ತನ್ನಲ್ಲಿ ತಾನು ''ನಾನು ಹುಟ್ಟಿದೊಡನೆ ಸೂರ್ಯಬಿಂಬವನ್ನು ಕಬಳಿಸುವುದಕ್ಕಾಗಿ ಆಕಾಶಕ್ಕೆ ಹಾರಿದಂದಿನಿಂದ, ಬ್ರಹ್ಮದೇವನೂ, ದೇವೇಂದ್ರನೂ, ವಾಯುದೇವನೂ, ನನಗೆ ವರದಾನವನ್ನು ಮಾಡಿ ರಕ್ಷಿಸುತ್ತಿರುವುದರಿಂದ ಈಗ ನಾನು ಈ ಅಸ್ತ್ರಕ್ಕೆ ಕಟ್ಟುಬಿದ್ದಿದ್ದರೂ ನನಗೆ ಯಾವಭಯವೂ ಇಲ್ಲ. ಒಂದುವೇಳೆ ಈ ರಾಕ್ಷಸರು ನನ್ನನ್ನು ಹಿಡಿದುಕೊಂಡು ಹೋದರೂ ಅದರಿಂದ ಗುಣವೇ ಉಂಟು. ನಾನು ಮೊದಲೇ ರಾವಣನನ್ನು ಮಾತಾಡಿಸಿ ಬರಬೇಕೆಂದಿರುವೆನು. ಈ ರಾಕ್ಷಸರೇ ನನ್ನನ್ನು ಅಲ್ಲಿಗೆ ಸಾಗಿಸಿದರೆ, ನನ್ನ ಈ ಉದ್ದೇಶವು ಸುಲಭವಾಗಿಯೇ ಕೈಗೂಡುವುದು.'' ಎಂದು ಮನಸ್ಸಿನಲ್ಲಿ ತನ್ನ ಕಾರ್ಯವನ್ನು ನಿಶ್ಚಯಿಸಿಬಿಟ್ಟನು. ಶತ್ರುಸಂಹಾರಕನಾಗಿಯೂ ದೂರದರ್ಶಿಯಾಗಿಯೂ ಇರುವ ಆ ಹನುಮಂತನು, ಹೀಗೆಂದು ನಿಶ್ಚಯಿಸಿ, ಕೈಕಾಲುಗಳುಡುಗಿದವನಂತೆ ನಿಶ್ಚೇಷ್ಟನಾಗಿರಲು, ವೈರಿಗಳಾದ ರಾಕ್ಷಸರೆಲ್ಲರೂ ಸಂತೋಷದಿಂದ ಅವನ ಸುತ್ತಲೂ ಮುತ್ತಿ, ತಮತಮಗೆ ತೋರಿದ ಮಾತುಗಳಿಂದ ಅವನನ್ನು ಮೂದಲಿಸಿ ಬಲಾತ್ಕರಿಸಿ ಬೆದರಿಸುತ್ತಿದ್ದರು. ಆ ಹನುಮಂತನೂ ಅವರ ಬೆದರಿಕೆಯ ಮಾತುಗಳನ್ನು ಕೇಳಿ ಆಗಾಗ ಗಟ್ಟಿಯಾಗಿ ಕೂಗಿಡುತಿದ್ದನು. ಹೀಗೆ ಹನುಮಂತನು ನಿಶ್ಚೇಷ್ಟನಾಗಿರುವುದನ್ನು ನೋಡಿ, ರಾಕ್ಷಸಭಟರು ಮೇಲೆಮೇಲೆ ಹರ್ಷದಿಂದುಬ್ಬುತ್ತ, ಸಣಬುಗಳನ್ನೂ, ಮರದ ನಾರುಗಳನ್ನೂ ಸೇರಿಸಿ ಹೊಸೆದು ಹುರಿಮಾಡಿ, ಆ ಹಗ್ಗದಿಂದಲೂ ಆ ಕಪಿಯನ್ನು ಕಟ್ಟಹಾಕಿದರು. ಆಗ ಹನುಮಂತನಾದರೋ ತನ್ನಲ್ಲಿ ತಾನು ''ಭಲೆ! ಈ ನೆವದಿಂದಲಾದರೂ ರಾವಣನು ನನ್ನನ್ನು ಆಸೆಯಿಂದ ಕರೆಸಿ ನೋಡುವಂತಾಗುವುದು!'' ಎಂದು ಮನಸ್ಸಿನಲ್ಲಿ ಹಿಗ್ಗುತ್ತ, ಆ ರಾಕ್ಷಸರು ತನ್ನನ್ನು ಹಗ್ಗದಿಂದ ಬಿಗಿಯುತ್ತಿದ್ದರೂ, ಅವರು ನಾನಾವಿಧದಿಂದ ಮೂದಲಿಸುತ್ತಿದ್ದರೂ, ಸಹಿಸಿಕೊಂಡು ಸುಮ್ಮನಿದ್ದನು. ಜದರೆ ರಾಕ್ಷಸರು ಸಣಬಿನಿಂದ ಆತನನ್ನು ಬಿಗಿದೊಡನೆಯೇ ಬ್ರಹ್ಮಾಸ್ತ್ರದ ಕಟ್ಟು ಬಿಟ್ಟುಹೋಯಿತು. ಬೇರೆವಿಧವಾದ ಕಟ್ಟನ್ನು ಬ್ರಹ್ಮಾಸ್ತ್ರವು ಎಂದಿಗೂ ಸಹಿಸಲಾರದು. ಹೀಗೆ ರಾಕ್ಷಸಭಟರು ಹನುಮಂತ

ನನ್ನು ಸಣಬಿನಿಂದ ಕಟ್ಟಿದುದನ್ನು ಕೇಳಿದೊಡನೆ ಇಂದ್ರಜಿತ್ತಿಗೆ ಮಹತ್ತಾದ ಚಿಂತೆಯು ಹುಟ್ಟಿತು. ಇದರಿಂದ ಇಂದ್ರಜಿತ್ತು ಚಿಂತಾಕ್ರಾಂತನಾಗಿ "ಅಯ್ಯೋ! ನಾನು ಮಹಾಪ್ರಯತ್ನದಿಂದ ನಡೆಸಿದ ಕಾರ್ಯವೂ ನಿರರ್ಥಕವಾಯಿತಲ್ಲಾ! ಮೂರ್ಖರಾದ ಈ ರಾಕ್ಷಸರು ಬ್ರಹ್ಮಾಸ್ತ್ರಮಂತ್ರದ ಪದ್ಧತಿಯನ್ನು ತಿಳಿಯದೆ ಪ್ರಕೃತ ಕಾರ್ಯವನ್ನೇ ಕೆಡಿಸಿದರು. ಇದಲ್ಲದೆ ಈ ಬ್ರಹ್ಮಾಸ್ತ್ರವು ಪ್ರತಿಹತವಾದ ಮೇಲೆ ಬೇರೆ ಯಾವ ಅಸ್ತ್ರವೂ ಫಲಿಸಲಾರದು. ತಿರುಗಿ ಆ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿದರೂ ಕೆಲಸಕ್ಕೆ ಬಾರದು! ಇನ್ನು ನಮ್ಮೆಲ್ಲರಿಗೂ ಪ್ರಾಣಸಂಶಯವೇ ಬಂದೊದಗಿರುವುದು." ಎಂದು ಕೊರಗುತ್ತಿದ್ದನು. ಅದರೆ ಇತ್ತಲಾಗಿ ಹನುಮಂತನಿಗೆ ಮಾತ್ರ ತನಗೆ ಬ್ರಹ್ಮಾಸ್ತ್ರ ವಿಮೋಚನವಾದುದೇ ತಿಳಿಯಲಿಲ್ಲ. ಆ ರಾಕ್ಷಸರೆಲ್ಲರೂ ಅವನನ್ನು ಹಿಂಗಟ್ಟುಗಟ್ಟಿ, ದೊಣ್ಣೆಗಳಿಂದಲೂ, ಮುಷ್ಟಿಗಳಿಂದಲೂ ಅತನನ್ನು ಬಡಿಯುತ್ತ, ರಾವಣನ ಸಮೀಪಕ್ಕೆ ಎಳೆದುಕೊಂಡು ಹೋದರು. ಆ ಮೇಲೆ ಇಂದ್ರಜಿತ್ತು, ಬ್ರಹ್ಮಾಸ್ತ್ರದಿಂದ ಮುಕ್ತನಾಗಿ ಸಣಬಿನಿಂದ ಬಿಗಿಯಲ್ಪಟ್ಟ ಆ ಹನುಮಂತನನ್ನು ರಾವಣನ ಸಭಾಸ್ಥಾನದಲ್ಲಿ ನಿಲ್ಲಿಸಿ, ರಾವಣನಿಗೂ, ಅವನ ಸಭಾಸದರಿಗೂ, "ಇದೋ! ಈತನೇ ಆ ವಾನರನು" ಎಂದು ತೋರಿಸಿದನು. ಆಗ ಇತರ ರಾಕ್ಷಸರೂ, ಅಲ್ಲಿ ಹೊರಜಿಗಳಿಂದ ಬಿಗಿದು ತಂದ ಮದದಾನೆಯಂತಿರುವ ಆ ಹನುಮಂತನನ್ನು ತಮ್ಮ ಪ್ರಭುವಾದ ರಾವಣನಿಗೆ ತೋರಿಸಿದರು. ಆ ಸಭೆಯಲ್ಲಿ ನೆರೆದಿದ್ದವರೆಲ್ಲರೂ ಇವನನ್ನು ಕಂಡು ಆಶ್ಚರ್ಯದಿಂದ ಒಬ್ಬರಿಗೊಬ್ಬರು "ಯಾರಿವನು? ಯಾರ ಮಗನು? ಇಲ್ಲಿಗೆ ಬಂದುದೇಕೆ! ಇಲ್ಲಿ ಇವನಿಗೆ ಕೆಲಸವೇನು? ಯಾರಿಗಾಗಿ ಬಂದಿರುವನು?" ಎಂದು ಕಿವಿಕಚ್ಚಿ ಮಾತಾಡಿಕೊಳ್ಳುತ್ತಿದ್ದರು. ಮತ್ತೆ ಕೆಲವರು ಆ ಹನುಮಂತನನ್ನು ಕಂಡಮಾತ್ರಕ್ಕೆ ತಡೆಯಲಾರದ ಕೋಪದಿಂದ "ಈ ಕಪಿಯನ್ನು ಈಗಲೇ ಕೊಲ್ಲಬೇಕು! ಬೆಂಕಿಹಾಕಿ ಸುಡಬೇಕು! ಅಥವಾ ಭಕ್ಷಿಸಬೇಕು!" ಎಂದು ಆರ್ಭಟಿಸಿ ಕೂಗುತ್ತಿದ್ದರು. ಇಷ್ಟರಲ್ಲಿ ಮಹಾತ್ಮನಾದ ಹನುಮಂತನು ಮುಂದೆ ಸಾಗಿ ಬಂದು, ಮೊದಲು ಅಲ್ಲಿ ರಾವಣನ ಪಾದಮೂಲದಲ್ಲಿ ನಿಂತಿದ್ದ ಮಂತ್ರಿವೃದ್ಧರನ್ನೂ, ಉತ್ತಮ ರತ್ನಗಳಿಂದಲಂಕೃತವಾದ ಆ ಸಭಾಸ್ಥಾನವನ್ನೂ ನೋಡಿದನು. ಮಹಾ ತೇಜಸ್ವಿಯಾದ ಆ ರಾವಣನೂಕೂಡ, ವಿಕೃತಾಕಾರವುಳ್ಳ ತನ್ನ ಕಡೆಯ ರಾಕ್ಷಸರು ಸುತ್ತಲೂ ಮುತ್ತಿಕೊಂಡು, ಇಲ್ಲಿಗಲ್ಲಿಗೆ ಸೆಳೆದು ತರುತ್ತಿದ್ದ ಆ ದೊಡ್ಡ ಕಪಿಯನ್ನು ಕಂಡನು. ತೇಜಸ್ಸಿನಿಂದಲೂ, ಬಲದಿಂದಲೂ ಮೇಲೆನಿಸಿ ಮಧ್ಯಾಹ್ನ ಸೂರ್ಯನಂತೆ ಶೋಭಿಸುತ್ತಿದ್ದ ಆ ರಾಕ್ಷಸಚಕ್ರವರ್ತಿಯನ್ನು ಹನುಮಂತನೂ ಕಣ್ಣಿಟ್ಟು ನೋಡಿ

ದನು. ಆಗ ರಾವಣನು ಕೋಪದಿಂದ ಕೆಂಡದಂತೆ ಕೆಂಪಾದ ತನ್ನ ಕಣ್ಣಾಲಿಗಳನ್ನು ತಿರುಗಿಸುತ್ತ, ಆ ಕಪಿವೀರನನ್ನು ನೋಡಿ, ಅವನ ಸಂಗತಿಯನ್ನು ವಿಚಾರಿಸಿ ತಿಳಿಯುವುದಕ್ಕಾಗಿ, ತನ್ನ ಸುತ್ತಲೂ ನೆರೆದಿದ್ದ ಕುಲಶೀಲವೃದ್ಧರಾದ ಪ್ರಧಾನ ಮಂತ್ರಿಗಳಿಗೆ ಆಜ್ಞೆಮಾಡಿದನು. ಆಗ ಅವರಲ್ಲಿ ಕೆಲವರು ಹನುಮಂತನನ್ನು ನೋಡಿ "ನೀನು ಬಂದ ಕಾರ್ಯವೇನು? ನಿನ್ನನ್ನು ಇಲ್ಲಿಗೆ ಕಳುಹಿಸಿದವರಾರು?" ಎಂದು ಒಂದೊಂದು ಸಂಗತಿಯನ್ನೂ ಕ್ರಮವಾಗಿ ಪ್ರಶ್ನೆಮಾಡಲು, ಅದಕ್ಕಾ ಹನುಮಂತನು "ನಾನು ವಾನರೇಶ್ವರನಾದ ಸುಗ್ರೀವನ ದೂತನು. ಅವನ ಆಜ್ಞೆಯಮೇಲೆಯೇ ಇಲ್ಲಿಗೆ ಬಂದೆನು" ಎಂದು ಅವರಿಗೆ ತಿಳಿಸಿದನು.

ಇಲ್ಲಿಗೆ ನಾಲ್ವತ್ತೆಂಟನೆಯ ಸರ್ಗವು.

ಹನುಮಂತನು ರಾವಣನನ್ನು ನೋಡಿ, ಅವನ ತೇಜೋ ವಿಶೇಷಕ್ಕಾಗಿ ಆಶ್ಚರ್ಯಗೊಂಡುದು.

ಆ ಮೇಲೆ ಭಯಂಕರಪರಾಕ್ರಮವುಳ್ಳ ಹನುಮಂತನು, ಸಿಂಹಾಸನದಲ್ಲಿ ಕುಳಿತಿದ್ದ ಆ ರಾವಣನನ್ನು ನೋಡಿ, ತನ್ನಲ್ಲಿ ತಾನು. "ಅಹಾ! ದುರಾತ್ಮನಾದ ಈ ರಾವಣನು ತಾನು ಸಿಂಹಾಸನದಿಂದ ಸ್ವಲ್ಪವೂ ಕದಲದೆ, ನನ್ನನ್ನು ಹೀಗೆ ಹಿಂಗಟ್ಟು ಕಟ್ಟಿಸಿ, ತಾನಿದ್ದ ಕಡೆಗೆ ಕರೆಸಿಕೊಂಡನಲ್ಲಾ!" ಎಂದು ಆತನ ಕಾರ್ಯಕ್ಕಾಗಿ ಆಶ್ಚರ್ಯಗೊಂಡು, ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಆ ರಾವಣನನ್ನೇ ದುರದುರನೆ ನೋಡುತ್ತಿದ್ದನು. ಆ ರಾವಣನಾದರೋ ಮೊದಲೇ ಸಹಜವಾದ ರಾಜತೇಜಸ್ಸಿನಿಂದ ಬೆಳಗುತ್ತಿರುವನು. ಇದರಮೇಲೆ ಅವನ ತಲೆಯಲ್ಲಿ ಮುತ್ತುಗಳಿಂದ ಖಚಿತವಾದ ಬೆಲೆಯುಳ್ಳ ಬಂಗಾರದ ಕಿರೀಟವು ಜಾಜ್ವಲ್ಯಮಾನವಾಗಿ ಜ್ವಲಿಸುತ್ತಿರುವುದು. ಅವನ ಸರ್ವಾವಯವಗಳಲ್ಲಿಯೂ, ವಜ್ರಗಳಿಂದಲೂ, ತುಂಬಾ ಬೆಲೆಬಾಳುವ ನಾನಾರತ್ನಗಳಿಂದಲೂ ಕೆತ್ತಲ್ಪಟ್ಟ ಸ್ವರ್ಣಾಭರಣಗಳು, ಮನಸ್ಸಿನಿಂದಲೇ ನಿರ್ಮಿಸಲ್ಪಟ್ಟಂತೆ ಚಿತ್ರವಿಚಿತ್ರಗಳಾಗಿ ಶೋಭಿಸುತ್ತಿರುವುವು. ಉತ್ತಮವಾದ ಪಟ್ಟೆಮಡಿಯುಟ್ಟಿರುವನು. ಮೈಗೆ ರಕ್ತಚಂದನವನ್ನು ಲೇಪಿಸಿಕೊಂಡಿರುವನು. ಇದಲ್ಲದೆ ಕಸ್ತೂರಿ ಮೊದಲಾದ ವಿಚಿತ್ರಾನುಲೇಪನಗಳನ್ನೂ ಪೂಸಿರುವನು. ಅವನ ತಲೆಗಳೋ, ಒಂದಲ್ಲ! ಎರಡಲ್ಲ! ಹತ್ತು ತಲೆಗಳು! ಅವೆಲ್ಲವೂ ಕಿರೀಟಕುಂಡಲಾದ್ಯಾಭರಣಗಳಿಂದ ಅಂದವನ್ನು ಕೊಡುತ್ತಿದ್ದರೂ,

ಅರ್ಧತೆರೆದ ಬಾಯಿಗಳಿಂದಲೂ, ಕೆಂಪೇರಿದ ಕಣ್ಣುಗಳಿಂದಲೂ, ತೀಕ್ಷ್ಣವಾಗಿ ಜ್ವಲಿಸುವ ಕೋರೆದಾಡೆಗಳಿಂದಲೂ, ಜೋಲುವ ತುಟಿಗಳಿಂದಲೂ ನೋಡುವುದಕ್ಕೆ ಭಯಂಕರಗಳಾಗಿರುವುವು. ಇದರಿಂದ ರಾವಣನು ನಾನಾ ಕ್ರೂರಮೃಗಗಳಿಂದ ತುಂಬಿರುವ ಅನೇಕ ಶಿಖರಗಳುಳ್ಳ ಮಂದರಪರ್ವತದಂತೆ ತೇಜಸ್ಸಿನಿಂದ ಜ್ವಲಿಸುತ್ತಿರುವನು. ಮತ್ತು ನೀಲಾಂಜನಪರ್ವತಗಳಂತೆ ಕಪ್ಪಾದ ಮೈಯುಳ್ಳ ಅತನ ಎದೆಯಲ್ಲಿ ಪೂರ್ಣಚಂದ್ರನಂತೆ ಶೋಭಿಸುವ ಮುತ್ತಿನಪದಕವುಳ್ಳ ಹಾರವು ಚಲಿಸುತ್ತಿರಲು, ಕೊಕ್ಕರೆಗಳ ಸಾಲಿನಿಂದ ಕೂಡಿದ ಕಾಲಮೇಘದಂತೆ ಕಾಣುವನು. ತೋಳ್ಬಳೆಗಳಿಂದಲೂ, ಕೈಬಳೆಗಳಿಂದಲೂ ಅಲಂಕೃತಗಳಾಗಿ, ಉತ್ತಮಚಂದನದಿಂದ ಲೇಪಿಸಲ್ಪಟ್ಟ ಅತನ ಇಪ್ಪತ್ತು ತೋಳುಗಳೂ, ಐದು ಹೆಡೆಯುಳ್ಳ ಮಹಾಸರ್ಪಗಳಂತೆ ಕಾಣುತ್ತಿರುವುವು. ಇಂತಹ ರಾಕ್ಷಸರಾಜನು ವಿಚಿತ್ರ ರತ್ನಖಚಿತವಾಗಿ, ಉತ್ತಮವಾದ ರತ್ನಗಂಬಳಿಯನ್ನು ಮೇಲೆ ಹಾಸಿದ ಒಂದು ದೊಡ್ಡ ಸ್ಫಟಿಕಪೀಠದಲ್ಲಿ ತೀವಿಯಿಂದ ಕುಳಿತಿದ್ದನು. ಅವನ ಸುತ್ತಲೂ ಸರ್ವಾಲಂಕಾರಭೂಷಿತರಾದ ಕೆಲವು ಸುಂದರಾಂಗಿಯರು ಚಾಮರವನ್ನು ಹಿಡಿದು ಬೀಸುತ್ತಿದ್ದರು. ಅವನ ನಾಲ್ಕು ಪಾರ್ಶ್ವಗಳಲ್ಲಿಯೂ ಮಂತ್ರತತ್ವಗಳನ್ನು ಚೆನ್ನಾಗಿ ತಿಳಿದು ಮಂತ್ರಾಲೋಚನೆಯಲ್ಲಿ ಸಮರ್ಥರೆನಿಸಿದ, ಬಲದರ್ಪಿತರಾದ, ದುರ್ಧರ, ಪ್ರಹಸ್ತ, ಮಹಾಪಾರ್ಶ್ವ, ನಿಕುಂಭರೆಂಬ ನಾಲ್ಕುಮಂದಿ ಪ್ರಧಾನಮಂತ್ರಿಗಳು ನುತ್ತಿನಿಂತಿರುವರು. ರಾವಣನು ಅವರೊಡನೆ ಸುಖಸಲ್ಲಾಪಗಳನ್ನು ಮಾಡುತ್ತ, ನಾಲ್ಕುಸಮುದ್ರಗಳಿಂದ ಪರಿವೃತವಾದ ಪ್ರಪಂಚದಂತೆ ಕಾಣುತ್ತಿದ್ದನು. ಇವಲ್ಲದೆ ಮಂತ್ರಜ್ಞರಾದ ಬೇರೆ ಅನೇಕ ಸಚಿವರಿಂದಲೂ ಸೇವಿತನಾಗಿ, ದೇವಸಮೂಹದಿಂದ ಸೇವಿತನಾದ ದೇವೇಂದ್ರನನ್ನು ಹೋಲುತ್ತಿದ್ದನು. ಮತ್ತು ಕಪ್ಪುಮೈಯುಳ್ಳ ಅತನು ಸ್ವರ್ಣಪೀಠದ ಮೇಲೆ ಕುಳಿತಿರುವಾಗ, ಮೇರುಪರ್ವತದಮೇಲೆ ಕುಳಿತ ಕಾಳಮೇಘದಂತೆ ತೋರುತ್ತಿದ್ದನು. ಇತ್ತಲಾಗಿ ಹನುಮಂತನು ಭಯಂಕರಪರಾಕ್ರಮವುಳ್ಳ ರಾಕ್ಷಸರು ತನ್ನನ್ನು ಸುತ್ತಿಮುತ್ತಿ ಬಹಳವಾಗಿ ಪೀಡಿಸುತ್ತಿದ್ದರೂ, ಅದಕ್ಕೆ ಲಕ್ಷ್ಯಗೊಡದೆ, ಆ ರಾವಣನ ಅದ್ಭುತಾಕೃತಿಗಾಗಿ ಆಶ್ಚರ್ಯಗೊಂಡು ಅತನನ್ನೇ ಕಣ್ಣಿಟ್ಟು ನೋಡುತ್ತಿದ್ದನು. ಹೀಗೆ ದೇದೀಪ್ಯಮಾನವಾಗಿ ಬೆಳಗುತ್ತಿರುವ ರಾವಣನನ್ನು ನೋಡಿ ಹನುಮಂತನು, ಅವನ ತೇಜಸ್ಸಿಗೆ ಮೋಹಿತನಾಗಿ, ತನ್ನಲ್ಲಿ ತಾನು ಆಶ್ಚರ್ಯಗೊಂಡು "ಆಬ್ಬಾ! ಈತನ ರೂಪವೇನು! ಈ ಧೈರ್ಯವೇನು! ಈ ಬಲವೇನು! ಈ ಕಾಂತಿಯೇನು! ಆಹಾ! ಇವನು ರಾಕ್ಷಸನಾದರೂ ಇವನಲ್ಲಿ ಸಮಸ್ತ ಲಕ್ಷಣಗಳೂ ಕೂಡಿರುವುವಲ್ಲಾ! ಈ ರಾಕ್ಷಸನು ಹೀಗೆ ಮಹತ್ತಾದ ಅಧರ್ಮಕ್ಕೆ ಮಾತ್ರ ಪ್ರಯೇ

ಶಿಸದಿದ್ದ ಪಕ್ಷದಲ್ಲಿ, ಇಲ್ಲಿನ ರಾಕ್ಷಸರಿಗೆ ಮಾತ್ರವೇ ಅಲ್ಲದೆ, ದೇವೇಂದ್ರನೊಡಗೂಡಿದ ಸಮಸ್ತ ದೇವತೆಗಳಿಗೂ ತಾನೇ ಪ್ರಭುವಾಗಿ ಪಾಲಿಸುತಿದ್ದನು. ಇವನು ಇದುವರೆಗೆ ಮಹಾಭಯಂಕರಗಳಾಗಿಯೂ, ಲೋಕನಿಂದಿತಗಳಾಗಿಯೂ, ಪರದ್ರೋಹಕರಗಳಾಗಿಯೂ ಇರುವ ಕಾರ್ಯಗಳನ್ನೇ ನಡೆಸಿರುವನು. ಅದುದರಿಂದಲೇ ಇವನನ್ನು ನೋಡಿದಮಾತ್ರಕ್ಕೆ ದೇವದಾನವಾದಿ ಸಮಸ್ತ ಲೋಕದವರೂ ಭಯಪಡುವರು! ಹೀಗಿಲ್ಲದಿದ್ದರೆ ಸಮಸ್ತ ಲೋಕವೂ ಇವನನ್ನೇ ಪೂಜಿಸಿ ಸೇವಿಸುತ್ತಿತ್ತು. ಇವನಿಗೆ ಮಾತ್ರ ಕೋಪವುಂಟಾದರೆ ಈ ಜಗತ್ತೆಲ್ಲವನ್ನೂ ಏಕಾರ್ಣವದಂತೆ ಮಾಡಬಲ್ಲನೆಂದೂ ತೋರುವುದು" ಎಂದು ಧೀಮಂತನಾದ ಆ ಹನುಮಂತನು ಆ ರಾಕ್ಷಸ ರಾಜನನ್ನು ನೋಡಿ, ಆಶ್ಚರ್ಯಪಡುತ್ತ, ಅವನ ಮಹಿಮೆಯನ್ನು ಕುರಿತು ಇನ್ನೂ ನಾನಾವಿಧದಿಂದ ಚಿಂತಿಸುತ್ತಿದ್ದನು.

ಇಲ್ಲಿಗೆ ನಾಲ್ವತ್ತೊಂಬತ್ತನೆಯ ಸರ್ಗವು.

ಹನುಮಂತನು ರಾವಣನೊಡನೆ ಸಂಭಾಷಿಸಿದುದು.

ಸಮಸ್ತಲೋಕವನ್ನೂ ತನ್ನ ವೀರ್ಯದಿಂದ ಗೋಳಾಡಿಸತಕ್ಕ ಆ ರಾವಣನಿಗಾದರೋ, ಆ ಹನುಮಂತನನ್ನು ತನ್ನ ಮುಂದೆ ತಂದಿರಿಸಿದಾಗಲೇ ಮಹಾ ಕೋಪವು ಹುಟ್ಟಿತು. ಇದರಮೇಲೆ ಆ ಹನುಮಂತನ ಅದ್ಭುತ ತೇಜಸ್ಸನ್ನೂ, ಧೈರ್ಯವನ್ನೂ ನೋಡಿದಾಗ, ಅವನ ಕೋಪವು ಮಿತಿಮೀರಿ ಹೋಯಿತು. ಅವನ ಮನಸ್ಸಿನಲ್ಲಿ ನಾನಾವಿಧವಾದ ಚಿಂತೆಯೂ ಹುಟ್ಟಿತು. ಹೀಗೆ ಚಿಂತಾಪರವಶನಾದ ರಾವಣನು ತನ್ನಲ್ಲಿ ತಾನು "ಇದೇನಿದು! ಹಿಂದೆ ನಾನು ಕೈಲಾಸಪರ್ವತವನ್ನು ಕದಲಿಸಿದಾಗ, ನನ್ನನ್ನು ಶಪಿಸಿದ ಪೂಜ್ಯನಾದ ನಂದಿಯೇ ಈಗ ಈ ರೂಪದಿಂದ ಬಂದಿರಬಹುದೆ? ಇಲ್ಲವೇ ಒಂದುವೇಳೆ ಅಸುರಶ್ರೇಷ್ಠನಾದ ಆ ಬಾಣಾಸುರನೇ ಹೀಗೆ ವಾನರಾಕೃತಿಯಿಂದ ಬಂದಿರುವನೇನು?" ಎಂದು ಆಶ್ಚರ್ಯದಿಂದ ಮೈಮರೆತಿದ್ದನು. ಆ ಹನುಮಂತನನ್ನು ನೋಡುತ್ತಿದ್ದಹಾಗೆ ಅವನಿಗೆ ಮೇಲೆ ಮೇಲೆ ಕೋಪವು ಹೆಚ್ಚಿತು. ಅವನ ಕಣ್ಣುಗಳು ಕೆಂಡದಂತೆ ಕೆಂಪಾದುವು. ಆಗ ರಾವಣನು ತನ್ನ ಸಮೀಪದಲ್ಲಿದ್ದ ಮುಖ್ಯಮಂತ್ರಿಯಾದ ಪ್ರಹಸ್ತನನ್ನು ಕುರಿತು, ಅರ್ಥಯುಕ್ತವಾಗಿಯೂ, ಕಾಲೋಚಿತವಾಗಿಯೂ ಇರುವ ಮಾತಿನಿಂದ "ಪ್ರಹಸ್ತಾ! ಈ ದುರಾತ್ಮನು ಎಲ್ಲಿಂದ ಬಂದವನೆಂದು ವಿಚಾರಿಸು! ಇವನನ್ನು

ಇಲ್ಲಿಗೆ ಕಳುಹಿಸಿದವರಾರು? ನಮ್ಮ ಅಶೋಕವನವನ್ನು ಮುರಿದುದಕ್ಕೆ ಕಾರಣವೇನು? ನಮ್ಮ ರಾಕ್ಷಸಸ್ತ್ರೀಯರನ್ನು ಹೆದರಿಸಿದುದೇಕೆ? ಎಂತವರಿಗೂ ದುರ್ಗಮವಾದ ನಮ್ಮ ಲಂಕೆಗೆ ಇವನು ಹೇಗೆ ಬಂದನು? ಈ ಕಪಿಗೆ ನಮ್ಮೊಡನೆ ಯುದ್ಧವೇಕೆ? ಈ ಸಂಗತಿಗಳೆಲ್ಲವನ್ನೂ ನೀನು ಅವನನ್ನೇ ಚೆನ್ನಾಗಿ ವಿಚಾರಿಸಿ ತಿಳಿ!" ಎಂದನು. ಇದನ್ನು ಕೇಳಿ ಪ್ರಹಸ್ತನು ಆ ಹನುಮಂತನನ್ನು ಕುರಿತು, ಬಹಳ ಮೃದುವಾಕ್ಯದಿಂದ "ಎಲೈ ವಾನರನೆ! ಹೆದರಬೇಡ! ಸಮಾಧಾನದಿಂದಿರು! ನಿನಗೆ ಕ್ಷೇಮವಾಗಲಿ! ನೀನು ಈ ರಾವಣಾಲಯಕ್ಕೆ ಬಂದ ಕಾರಣವೇನು? ನಮ್ಮಲ್ಲಿ ಬದ್ಧವೈರವುಳ್ಳ ದೇವೇಂದ್ರನೇನಾದರೂ ನಿನ್ನನ್ನು ಇಲ್ಲಿಗೆ ಕಳುಹಿಸಿರುವನೆ! ಹೇಗಾದರೂ ಇರಲಿ! ಇದ್ದ ಸ್ಥಿತಿಯನ್ನು ನಿಜವಾಗಿ ಹೇಳಿಬಿಡು! ಭಯಪಡಬೇಡ! ನಿನ್ನನ್ನು ನಾವು ಬಿಟ್ಟುಬಿಡುವೆವು! ಅಥವಾ ನೀನು ಕುಬೇರನಿಗಾಗಲಿ, ಯಮನಿಗಾಗಲಿ, ವರುಣನಿಗಾಗಲಿ, ದೂತನಾಗಿ ಈ ಕಪಿರೂಪದಿಂದ ಇಲ್ಲಿಗೆ ಬಂದಿರುವೆಯಾ? ಈ ರಾವಣನನ್ನು ಜಯಿಸುವುದಕ್ಕಾಗಿ ವಿಷ್ಣುವೇನಾದರೂ ಇಲ್ಲಿಗೆ ನಿನ್ನನ್ನು ಕಳುಹಿಸಿರುವನೆ? ಹೇಗಿದ್ದರೂ ಚಿಂತೆಯಿಲ್ಲ! ನಿನ್ನನ್ನು ನಾನೇನನ್ನೂ ಮಾಡುವುದಿಲ್ಲ! ಇದ್ದ ಸ್ಥಿತಿಯನ್ನು ತಿಳಿಸಿಬಿಡು! ರೂಪದಲ್ಲಿ ಮಾತ್ರ ನೀನು ಕಪಿಯಂತಿದ್ದರೂ, ನಿನ್ನ ತೇಜಸ್ಸು ಯಾವ ವಾನರನಿಗೂ ಇಲ್ಲ! ನಡೆದ ಸಂಗತಿಯನ್ನು ಯಥಾಸ್ಥಿತವಾಗಿ ತಿಳಿಸು! ಆ ಮೇಲೆ ನಿನ್ನನ್ನು ಬಿಟ್ಟುಬಿಡುವೆವು. ಸುಳ್ಳಾಡಿದರೆ ಮಾತ್ರ ನೀನು ಬದುಕಿಕೊಳ್ಳಗಾರೆ! ಅಥವಾ ಬೇರೆ ಯಾರ ಪ್ರೇರಣೆಯೂ ಇಲ್ಲದೆ ನಿನ್ನ ಪಕ್ಕೆ ನೀನೇ ಬಂದಿದ್ದರೂ, ಇಷ್ಟು ಪ್ರಯತ್ನಪಟ್ಟಾದರೂ ಈ ರಾವಣಾಲಯಕ್ಕೆ ನೀನು ಬರಬೇಕಾದ ಕಾರಣವೇನು? ಅದನ್ನಾದರೂ ಹೇಳು" ಎಂದನು. ಹೀಗೆ ಪ್ರಹಸ್ತನು ಎಷ್ಟೋ ಒಳ್ಳೆಯಮಾತಿನಿಂದ ನಯವಾಗಿ ಕೇಳಿದರೂ ಹನುಮಂತನು ಅತನನ್ನು ಲಕ್ಷ್ಯಮಾಡದೆ, ರಾಕ್ಷಸಪ್ರಭುವಾದ ಆ ರಾವಣನನ್ನೇ ನೋಡಿ, "ಎಲೆ! ನಾನು ಇಂದ್ರನಿಗಾಗಲಿ, ಯಮನಿಗಾಗಲಿ, ವರುಣನಿಗಾಗಲಿ ಚಾರನಾಗಿ ಬಂದವನಲ್ಲ! ಕುಬೇರನೊಡನೆಯೂ ನನಗೆ ಸ್ನೇಹವಿಲ್ಲ! ವಿಷ್ಣುದೇವನೂ ನನ್ನನ್ನು ಇಲ್ಲಿಗೆ ಕಳುಹಿಸಿದವನಲ್ಲ! ನಾನು ವಾನರಜಾತಿಯವನೆಂಬುದೇ ನಿಜವು. ನಾನು ಆ ನನ್ನ ನಿಜರೂಪದಿಂದಲೇ ಇಲ್ಲಿಗೆ ಬಂದಿರುವೆನೇ ಹೊರತು ಇದು ವೇಷವಲ್ಲ. ರಾಕ್ಷಸೇಂದ್ರನಾದ ನಿನ್ನ ದರ್ಶನವು ದುರ್ಲಭವೆಂಬುದನ್ನು ತಿಳಿದು. ಈ ನೆವದಿಂದಲಾದರೂ ನಿನ್ನನ್ನು ನೋಡಬಹುದೆಂಬ ಉದ್ದೇಶದಿಂದಲೇ ನಿನ್ನ ತೋಟವನ್ನು ಹಾಳುಮಾಡಿದೆನು. ನಾನು ಎಣಿಸಿದ್ದಂತೆಯೇ ಬಲಾಢ್ಯರಾದ ಕೆಲವು ರಾಕ್ಷಸರು ನನ್ನ ಮೇಲೆ ಯುದ್ಧಕ್ಕೆ ಬಂದರು. ನನ್ನ

ದೇಹರಕ್ಷಣೆಗಾಗಿ ನಾನು ಅವರೊಡನೆ ಹೋರಾಡಬೇಕಾಯಿತೇ ಹೊರತು ಬೇರೆ ಯಲ್ಲ! ದೇವಾಸುರರಿಗೂ ಕೂಡ ಯಾವ ಅಸ್ತ್ರದಿಂದಾಗಲಿ, ಯಾವ ಪಾಶದಿಂದಾ ಗಲಿ ನನ್ನನ್ನು ಕಟ್ಟುವುದು ಸಾಧ್ಯವಿಲ್ಲ. ನಿನ್ನಂತೆಯೇ ನಾನೂ ಬ್ರಹ್ಮದೇವ ನಿಂದ ಎಷ್ಟೋ ವರಗಳನ್ನು ಪಡೆದಿರುವೆನು. ರಾಕ್ಷಸರಾಜನಾದ ನಿನ್ನನ್ನು ನೋಡಬೇಕೆಂಬ ಕೋರಿಕೆಯಿಂದಲೇ ನಾನು ನಿಮ್ಮ ಬ್ರಹ್ಮಾಸ್ತ್ರಕ್ಕೆ ಬದ್ಧನಾಗಿ ಬಂದೆನೇ ಹೊರತು ಬೇರೆಯಲ್ಲ. ಈ ರಾಕ್ಷಸರು ನನ್ನನ್ನು ಸಣಬಿನಿಂದ ಕಟ್ಟಿ ದೊಡನೆಯೇ ಬೇರೆ ಕಟ್ಟನ್ನು ಸಹಿಸಲಾರದೆ ಬ್ರಹ್ಮಾಸ್ತ್ರವು ನನ್ನನ್ನು ಬಿಟ್ಟು ಹೋಯಿತು. ಇಲ್ಲಿ ನನಗೆ ಒಂದು ರಾಜಕಾರ್ಯವುಂಟು! ಆದಕ್ಕಾಗಿಯೇ ನಿನ್ನಲ್ಲಿಗೆ ಬರಬೇಕಾಯಿತು. ಎಣೆಯಿಲ್ಲದ ತೇಜಸ್ಸುಳ್ಳ ರಾಮನಿಗೆ ನಾನೇ ದೂತನೆಂದು ತಿಳಿ! ಎಲೆ ರಾಜನೆ! ನಾನು ನಿನಗೆ ಹಿತವಾದ ಕೆಲವು ಮಾತುಗಳನ್ನು ಹೇಳುವೆನು. ಇವುಗಳನ್ನು ನೀನು ಲಾಲಿಸಿ ಕೇಳಬೇಕು" ಎಂದನು.

ಇಲ್ಲಿಗೆ ಐವತ್ತನೆಯ ಸರ್ಗವು.

ಹನುಮಂತನು ರಾಮನ ವನವಾಸವೇ ಮೊದಲಾಗಿ, ತಾನು ಲಂಕೆಗೆ ಬಂದಪರೆಗಿನ ವೃತ್ತಾಂತವನ್ನು ತಿಳಿಸಿ, ಸೀತೆಯನ್ನು ರಾಮನಿಗೊಪ್ಪಿಸಿ ಬಿಡುವಂತೆ ರಾವಣನಿಗೆ ಹಿತೋಪದೇಶವನ್ನು ಹೇಳಿದುದು.

ಬಲಾಢ್ಯನಾದ ಆ ವಾನರೋತ್ತಮನು ರಾವಣನನ್ನು ನೋಡಿ ಬಹಳ ಎಚ್ಚರಿಕೆಯೊಡನೆ ಅರ್ಥವತ್ತಾದ ಈ ವಾಕ್ಯವನ್ನು ಹೇಳುವನು. "ಎಲೆ ರಾಕ್ಷಸೇಂದ್ರನೆ! [1] ನನ್ನೊಡೆಯನಾದ ಸುಗ್ರೀವನು ನಿನಗಾಗಿ ಕೆಲವು ವಿಷಯಗಳನ್ನು ಹೇಳಿ ನನ್ನನ್ನು ಇಲ್ಲಿಗೆ ಕಳುಹಿಸಿರುವನು. ಆದಕ್ಕಾಗಿಯೇ ನಾನು ನಿನಗೆ ನಿವಾಸವಾದ ಈ ಲಂಕೆಗೆ ಬರಬೇಕಾಯಿತು. ಎಲೈ ರಾಜನೆ! ಒಡ ಹುಟ್ಟಿದವ

---

1. ಸುಗ್ರೀವನು ಹನುಮಂತನೊಡನೆ ರಾವಣನಿಗಾಗಿ ಯಾವಮಾತನ್ನೂ ಹೇಳಿ ಕಳುಹಿಸದಿದ್ದರೂ ದೂತನು ಹೇಳಿದ ಮಾತುಗಳೆಲ್ಲವೂ, ಸ್ವಾಮಿಯು ಹೇಳಿದಂತೆಯೇ ಆಗುವುವೆಂಬ ಭಾವದಿಂದ ಹೀಗೆ ಹನುಮಂತನು ತಾನಾಗಿ ಈ ಮಾತುಗಳನ್ನು ಕಲ್ಪಿಸಿ ಹೇಳಿದುದಾಗಿ ಗ್ರಾಹ್ಯವು.

ನಂತೆ ನಿನಗೆ ಹಿತೈಷಿಯಾದ ನಮ್ಮ ವಾನರೇಂದ್ರನು ನಿನ್ನ ಕ್ಷೇಮವನ್ನು ವಿಚಾರಿಸಿ ಬರುವಂತೆ ಹೇಳಿರುವನಲ್ಲದೆ, ಮಹಾತ್ಮನಾದ ಆ ಸುಗ್ರೀವನು ಹೇಳಿ ಕಳುಹಿಸಿರುವ ಇನ್ನೂ ಕೆಲವು ಸಂಗತಿಗಳನ್ನೂ ಕೇಳು! ಅವೆಲ್ಲವೂ ಧರ್ಮಾರ್ಥ ಯುಕ್ತವಾಗಿರುವುವಲ್ಲದೆ, ನಿನಗೆ ಇಹಪರಗಳೆರಡರಲ್ಲಿಯೂ ಶ್ರೇಯಸ್ಕರವಾಗಿರುವವು. [1] ಸರ್ವೋತ್ತಮವಾದ ರಥಗಜತುರಗಾದಿ ಸೇನಾಸಮೃದ್ಧಿಯಿಂದ ಖ್ಯಾತಿಗೊಂಡ ದಶರಥನೆಂಬ ರಾಜನಿದ್ದನು. ಅವನು ಸಮಸ್ತಪ್ರಜೆಗಳಿಗೂ ತಂದೆಯಂತೆ ಪ್ರಿಯನಾದವನು. ಕಾಂತಿಯಲ್ಲಿ ದೇವೇಂದ್ರನಿಗೆಣೆಯಾದವನು. ಅತನಿಗೆ ಮಹಾಭುಜನಾಗಿಯೂ, ಮಹಾತೇಜಸ್ವಿಯಾಗಿಯೂ, ಸಮರ್ಥನಾಗಿಯೂ ಇರುವ ರಾಮನೆಂಬ ಜ್ಯೇಷ್ಠಪುತ್ರನುಂಟು. ಅತನು ತಂದೆಯಾಜ್ಞೆಯಿಂದ ರಾಜ್ಯವನ್ನು ಬಿಟ್ಟು, ತಮ್ಮನಾದ ಲಕ್ಷ್ಮಣನೊಡನೆಯೂ, ಪತ್ನಿಯಾದ ಸೀತೆಯೊಡನೆಯೂ ವನವಾಸಕ್ಕಾಗಿ ಹೊರಟು, ದಂಡಕಾರಣ್ಯವನ್ನು ಪ್ರವೇಶಿಸಿದನು. ಆ ಸೀತೆಯೆಂಬವಳು ಮಹಾತ್ಮನಾದ ಜನಕರಾಜನ ಮಗಳು. ಮಹಾಪತಿವ್ರತೆಯು. ರಾಮನು ಕಾಡಿನಲ್ಲಿರುವಾಗ, ತನ್ನ ಪ್ರಿಯಭಾರ್ಯೆಯಾದ ಆ ಸೀತೆಯನ್ನು ಕಳೆದುಕೊಂಡು, ತಮ್ಮನಾದ ಲಕ್ಷ್ಮಣನೊಡಗೂಡಿ ಆಕೆಯನ್ನು ಹುಡುಕುತ್ತ, ಋಷ್ಯಮೂಕ ಪರ್ವತಕ್ಕೆ ಬಂದು ಅಲ್ಲಿ ಸುಗ್ರೀವನೊಡನೆ ಸೇರಿದನು. ಆ ಸುಗ್ರೀವನು ಸೀತೆಯನ್ನು ಹುಡುಕಿಸುವುದಾಗಿ ರಾಮನಿಗೆ ಪ್ರತಿಜ್ಞೆ ಮಾಡಿಕೊಟ್ಟನು. ಅದಕ್ಕೆ ಪ್ರತಿಯಾಗಿ ರಾಮನೂ ಸುಗ್ರೀವನಿಗೆ ವಾನರರಾಜ್ಯದಲ್ಲಿ ಪಟ್ಟವನ್ನು ಕಟ್ಟುವುದಾಗಿ ಪ್ರತಿಜ್ಞೆ ಮಾಡಿಕೊಟ್ಟನು. ಅದರಂತೆಯೇ ರಾಮನು ವಾಲಿಯನ್ನು ಕೊಂದು ಸುಗ್ರೀವನನ್ನು ವಾನರಭಲ್ಲೂಕರಾಜ್ಯಕ್ಕೆ ರಾಜನನ್ನಾಗಿ ಮಾಡಿಬಿಟ್ಟನು. ರಾವಣಾ! ವಾನರರಾಜನಾದ ವಾಲಿಯೆಂಥವನೆಂಬುದನ್ನು ನೀನು ಮೊದಲೇ ಬಲ್ಲೆಯಷ್ಟೆ? ಅಂತಹ ವಾಲಿಯನ್ನೂ ನಮ್ಮ ರಾಮನು ಯುದ್ಧದಲ್ಲಿ ಒಂದೇ ಬಾಣದಿಂದ ಕೊಂದುಬಿಟ್ಟನು ವಾನರಾಧಿಪನಾದ ಸುಗ್ರೀವನೂ ಪ್ರತಿಜ್ಞೆಗೆ ತಪ್ಪದವನಾದುದರಿಂದ, ಸೀತೆಯನ್ನು ಹುಡುಕುವುದರಲ್ಲಿಯೇ ಅತುರವುಳ್ಳವನಾಗಿ, ಸಮಸ್ತ ದಿಕ್ಕುಗಳಿಗೂ ವಾನರರನ್ನು ಕಳುಹಿಸಿದನು. ಈಗಲೂ ವಾನರರು ನೂರುಸಾವಿರ ಲಕ್ಷಸಂಖ್ಯೆಯಿಂದ ಹೋಗಿ ಸಮಸ್ತದಿಕ್ಕುಗಳಲ್ಲಿಯೂ, ಪಾತಾಳದಲ್ಲಿಯೂ, ಭೂಮಿಯಲ್ಲಿಯೂ, ಆಕಾಶದಲ್ಲಿಯೂ ಆಕೆಯನ್ನು ಹುಡುಕುತ್ತಿರುವರು. ಅವರಲ್ಲಿ ಬಲಾಢ್ಯ

---

1. ಹನುಮಂತನು ಮೊದಲು ರಾಮಸುಗ್ರೀವರಿಗಿರುವ ಸಂಬಂಧವನ್ನು ತಿಳಿಸಿ, ಅಲ್ಲಿಂದ ರಾವಣನ ಹೃದಯವನ್ನು ತಿಳಿಯುವುದಕ್ಕಾಗಿ ಸುಗ್ರೀವನ ಸಂದೇಶವೆಂಬ ನೆವದಿಂದ ತಾನೇ ಕೆಲವು ಮಾತುಗಳನ್ನು ಕಲ್ಪಿಸಿ ಹೇಳುವನು.

ರಾದ ಕೆಲವರು ವಾನರವೀರರು, ಎಲ್ಲಿಯೂ ತಡೆಯಿಲ್ಲದೆ, ನೆಲವನ್ನೂ ಮುಟ್ಟದೆ ಆಂತರಿಕ್ಷದಲ್ಲಿಯೇ ಅತಿತೀಕ್ಷ್ಣರಾಗಿ ಹಾರಬಲ್ಲವರಾದುದರಿಂದ, ಗರುಡನಿಗೆ ಸಾಟಿಯೆನಿಸಿಕೊಂಡಿರುವರು, ಮತ್ತೆ ಕೆಲವರು ವಾಯುವಿಗೆ ಸಮಾನರಾಗಿರುವರು. ನಾನು ವಾಯುದೇವನಿಗೆ ಔರಸಪುತ್ರನು. ನನಗೆ ಹನುಮಂತನೆಂದು ಹೆಸರು. ನಾನೂ ಸೀತಾನಿಮಿತ್ತವಾಗಿಯೇ ನೂರುಯೋಜನದ ವಿಸ್ತಾರವುಳ್ಳ ಈ ಸಮುದ್ರವನ್ನು ಲಂಘಿಸಿ, ಆಕೆಯನ್ನು ನೋಡಬೇಕೆಂದು ಇಲ್ಲಿಗೆ ಬಂದೆನು. ನಾನು ನಿನ್ನ ಮನೆಯಲ್ಲಿ ಸುತ್ತುತ್ತಿರುವಾಗ, ದೈವಿಕವಾಗಿ ನನಗೆ ಜನಕಪ್ರತ್ರಿಯಾದ ಆ ಸೀತೆಯು ಸಿಕ್ಕಿಬಿಟ್ಟಳು. ಇದೀಗ ನಡೆದ ಸಂಗತಿಯು. ಎಲೆ ರಾಕ್ಷಸರಾಜನೆ! ನೀನೋ ಶಾಸ್ತ್ರಗಳನ್ನರಿತು ಧರ್ಮಾರ್ಥಸ್ವರೂಪಗಳನ್ನು ಜೆ ನ್ನಾ ಗಿ ವಿಮರ್ಶಿಸಿದವನು. ಅನೇಕ ತಪಸ್ಸುಗಳನ್ನು ನಡೆಸಿದವನು. ತಪಸ್ಸೇ ತಾನಾಗಿ ನಿನ್ನನ್ನು ಕೈಕೊಂಡಿರುವುದೆಂದೂ ಹೇಳಬಹುದು. ಇದರಮೇಲೆ ಬಹಳ ಪ್ರಾಜ್ಞನೂ ಆಗಿರುವೆ. ಹೀಗಿದ್ದೂ ನೀನು ಪರಸ್ತ್ರೀಯರನ್ನು ತಂದು ಸೆರೆಯಲ್ಲಿರಿಸಿರುವುದು ಎಷ್ಟುಮಾತ್ರವೂ ಯುಕ್ತವಲ್ಲ. ನಿನ್ನಂತೆ ಬುದ್ಧಿವಂತರಾದವರು ಧರ್ಮವಿರುದ್ಧವಾಗಿಯೂ, ಅಪಾಯಕ್ಕೆಡೆಯಾಗಿಯೂ, ಇರುವ ಇಂತಹ ಕಾರ್ಯಗಳಲ್ಲಿ ಎಂದಿಗೂ ಪ್ರವರ್ತಿಸಲಾರರು. ಒಂದುವೇಳೆ ನೀನು ನಿನ್ನ ವೀರ್ಯಮದದಿಂದ ಯಾವ ಅಪಾಯವನ್ನಾದರೂ ಪರಿಹರಿಸಿಕೊಳ್ಳಬಹುದೆಂದು ತಿಳಿದಿರಬಹುದು. ಮೊದಲೇ ಮೂಲಹಾನಿಯನ್ನುಂಟುಮಾಡತಕ್ಕ ಈ ದುಷ್ಕೃತ್ಯಗಳಿಗೆ ಪರಿಹಾರವೆಂದರೇನು? ಈ ಘೋರಪಾಪವು ಮೊದಲು ನಿನ್ನನ್ನೇ ನಿರ್ಮೂಲಮಾಡಿಬಿಡುವುದಲ್ಲವೆ? ಮೊದಲು ರಾಮನೂ, ಅವನನ್ನು ನೋಡಿ ಲಕ್ಷ್ಮಣನೂ ಕೋಪಗೊಂಡು ಬಾಣಗಳನ್ನು ಬಿಡುವುದಕ್ಕೆ ತೊಡಗಿದರೆ ಆ ಬಾಣಗಳಮುಂದೆ ನಿಲ್ಲುವುದಕ್ಕೆ ದೇವಾಸುರರಲ್ಲಿಯಾದರೂ ಯಾವನು ಶಕ್ತನಾಗುವನು? ಎಲೆ ರಾಕ್ಷಸರಾಜನೆ! ರಾಮನಿಗೆ ಅಪ್ರಿಯವನ್ನು ಮಾಡಿಯೂ ಸೌಖ್ಯದಿಂದಿರುವವನು ಮೂರುಲೋಕಗಳಲ್ಲಿಯೂ ಯಾವನೊಬ್ಬನೂ ಇಲ್ಲ. ಆದುದರಿಂದ ಈಗ ನೀನು ನಡೆಸಿರುವ ಕೃತ್ಯವು ಬಹಳ ಅಧರ್ಮಹೇತುವಾದುದರಿಂದಲೂ, ರಾಮನಲ್ಲಿ ನೀನು ನಡೆಸಿರುವ ಈ ಮಹಾಪರಾಧವನ್ನು ಈಗಲೇ ಪರಿಹರಿಸಿಕೊಳ್ಳಬೇಕಾದುದು ಅತ್ಯವಶ್ಯವಾದುದರಿಂದಲೂ, ನಮ್ಮ ಪ್ರಭುವಾದ ಸುಗ್ರೀವನು ನಿನಗೆ ಈ ಮಾತುಗಳನ್ನು ಹೇಳಿ ಕಳುಹಿಸಿರುವನು. ಅವನ ಮಾತಿನಂತೆ ಈಗಲೂ ನೀನು ನಡೆದುಕೊಳ್ಳುವುದಾದರೆ, ಆದರಿಂದ ನಿನಗೆ ಹಿಂದೆಯೂ, ಈಗಲೂ, ಮುಂದೆಯೂ ಸೌಖ್ಯವುಂಟು. ನೀನು ಹಿಂದೆ ಸೀತೆಯನ್ನು ಕದ್ದುತಂದ ಪೂರ್ವ ಕಾಲಾಪರಾಧವೂ ಮರೆತು ಹೋಗುವುದು. ಈಗಿನ ನಿನ್ನ ಐಶ್ವರ್ಯವೂ ಸ್ಥಿರವಾಗಿ

ನಿಲ್ಲುವುದು. ಮುಂದೆಯೂ ನಿನಗೆ ಅನೇಕವಿಧಗಳಾದ ಶ್ರೇಯಸ್ಸುಗಳು ಕೈಗೂಡಿ ಬರುವುವು. ಹೀಗೆ ಆವನ ಈ ಹಿತವಾದವು ಭೂತಭವಿಷ್ಯದ್ವರ್ತಮಾನಕಾಲಗಳು ಮೂರರಲ್ಲಿಯೂ ನಿನಗೆ ಮೇಲ್ಕೆಯನ್ನುಂಟುಮಾಡುವುದು. ಧರ್ಮಕ್ಕೂ ಅನುಗುಣವಾಗಿರುವುದು. ಪುರುಷಾರ್ಥಗಳನ್ನೂ ಕೈಗೂಡಿಸುವುದು. ಈ ವಿಷಯಗಳೆಲ್ಲವನ್ನೂ ನೀನು ಮನಸ್ಸಿನಲ್ಲಿ ಚೆನ್ನಾಗಿ ಪರ್ಯಾಲೋಚಿಸಿ, ರಾಮನಿಗೆ ಸೀತೆಯನ್ನೊಪ್ಪಿಸಿಬಿಡು. ಎಲೆ ರಾವಣಾ! ನೀನು ಸೀತೆಯನ್ನು ಕದ್ದುತಂದ ವಿಷಯವೇನೋ ಲೋಕ ಪ್ರಸಿದ್ಧವಾಗಿರುವುದು. ಇಲ್ಲಿ ನಾನೇ ನನ್ನ ಕಣ್ಣಾರೆ ಸೀತೆಯನ್ನು ನೋಡಿಯೂ ಬಂದಿರುವೆನು. ಬೇರೊಬ್ಬರಿಗೆ ದುರ್ಲಭವಾಗಿದ್ದರೂ ಈ ಸೀತಾದರ್ಶನವು ಇಲ್ಲಿ ನನಗೆ ಲಭಿಸಿತು. ಈಗ ನಾನೇ ಆಕೆಯನ್ನು ರಾಮನಬಳಿಗೆ ಸೇರಿಸಬಲ್ಲೆನಾಗಿದ್ದರೂ, ಮುಂದೆ ಇಲ್ಲಿ ರಾಮನಿಂದಲೇ ನಡೆಯಬೇಕಾದ ಕೆಲವು ಕಾರ್ಯಗಳುಂಟು. ಅವುಗಳನ್ನು ನಡೆಸುವುದಕ್ಕೆ ಮಾತ್ರ ನನಗೆ ಅಪ್ಪಣೆಯಿಲ್ಲ! ಇನ್ನು ಮುಂದಿನ ಕಾರ್ಯವು ಆ ರಾಮನಿಗೇ ಸೇರಿದುದು. ಇಲ್ಲಿ ಸೀತೆಯು ಕೊನೆಮೊದಲಿಲ್ಲದ ದುಃಖದಿಂದ ಎಡೆಬಿಡದೆ ಕೊರಗುತ್ತಿರುವುದನ್ನೂ ನಾನು ಕಣ್ಣಾರೆ ನೋಡಿದೆನು. ಎಲೆ ರಾವಣಾ! ಸೀತೆಯು ನಿನ್ನ ವಶದಲ್ಲಿರುವಾಗ ರಾಮನು ಹೇಗೆ ತಾನೇ ಅವಳನ್ನು ಬಿಡಿಸಿಕೊಂಡುಹೋಗಬಲ್ಲನೆಂದು ನೀನು ಕೇಳಬಹುದು. ನೀನು ಸೀತೆಯನ್ನು ಸೆರೆಹಿಡಿದು ತಂದು ನಿನ್ನವಶದಲ್ಲಿರಿಸಿಕೊಂಡಿರುವುದಾಗಿ ನಿನಗೆ ನೀನೇ ಭ್ರಾಂತಿಗೊಂಡಿರುವೆಯೇ ಹೊರತು, ನಿನ್ನ ಪ್ರಾಣಗಳನ್ನು ಹೀರಿಬಿಡತಕ್ಕ ಐದುಹೆಡೆಯ ಸರ್ಪವನ್ನು ತಂದು ನಿನ್ನ ಮನೆಯಲ್ಲಿಟ್ಟುಕೊಂಡಿರುವೆಯೆಂದು ನಿನಗೆ ತಿಳಿಯಲಿಲ್ಲ. ಜಠರಾಗ್ನಿಯು ಎಷ್ಟೇ ತೀಕ್ಷ್ಣವಾಗಿದ್ದರೂ ವಿಷಮಿಶ್ರವಾದ ಅನ್ನವನ್ನು ಜೀರ್ಣಿಸಿಕೊಳ್ಳುವುದು ಸಾಧ್ಯವೆ? ಹಾಗೆಯೇ ದೇವತೆಗಳಾಗಲಿ, ಅಸುರರಾಗಲಿ, ಎಷ್ಟೇ ಪರಾಕ್ರಮವುಳ್ಳವರಾದರೂ ಆಕೆಯನ್ನು ದಕ್ಕಿಸಿಕೊಳ್ಳಲಾರರು. ಎಲೆ ರಾಕ್ಷಸರಾಜನೆ! ನೀನು ಎಷ್ಟೋ ಕಷ್ಟಪಟ್ಟು ತಪಸ್ಸುಮಾಡಿ, ಆ ತಪಸ್ಸಿದ್ಧಿಗೆ ಫಲವಾಗಿ, ಇತರರಿಗೆ ದುರ್ಲಭವಾದ ದೀರ್ಘಾಯುಸ್ಸನ್ನು ಪಡೆದುಕೊಂಡಿರುವೆ. ಅದನ್ನು ಕೆಡಿಸಿಕೊಳ್ಳುವುದು ನ್ಯಾಯವಲ್ಲ. ನೀನು ಸೀತೆಯನ್ನು ಬಿಡದಿದ್ದರೆ ರಾಮನಿಂದ ನಿನಗೆ ಎಂದಿಗೂ ಸಾವು ತಪ್ಪಿದುದಲ್ಲ! ಅಥವಾ "ದೇವಾಸುರರಿಗೂ ಅವಧ್ಯನಾದ ನನ್ನನ್ನು ಕೊಲ್ಲುವುದಕ್ಕೆ ಅವನಿಂದ ಸಾಧ್ಯವೆ?" ಎಂದು ನೀನು ಕೇಳಬಹುದು. ನೀನು ನಿನ್ನೆ ತಪೋಬಲದಿಂದ ದೇವಾಸುರರಿಗೂ ಅವಧ್ಯ

ನೆಂಬುದೇನೋ ನಿಜವು. ಅದನ್ನು ನಾನೂ ಚೆನ್ನಾಗಿ ಬಲ್ಲೆನು. [1] ನೀನು ಹಾಗೆ ದೇವಾಸುರರಿಂದ ಅವಧ್ಯನಾದುದರಿಂದಲೇ ನಿನ್ನನ್ನು ಕೊಲ್ಲುವುದಕ್ಕಾಗಿ ಅಪರಿಹಾರ್ಯವಾದ ಇದೊಂದು ದೊಡ್ಡ ನೆವವು ಇದೋ ಈಗಲೇ ಏರ್ಪಟ್ಟಿರುವುದೆಂದು ತಿಳಿ! ಅದು ಬೇರೆ ಯಾವುದೂ ಅಲ್ಲ. ಆ ಕಾರ್ಯನಿರ್ವಾಹಕ್ಕಾಗಿಯೇ ನಮ್ಮ ಪ್ರಭುವಾದ ಸುಗ್ರೀವನು ಜನಿಸಿರುವನು! ಆ ಸುಗ್ರೀವನು ದೇವತೆಯೂ ಅಲ್ಲ! ಅಸುರನೂ ಅಲ್ಲ! ರಾಕ್ಷಸನೂ ಅಲ್ಲ! ದಾನವನೂ ಅಲ್ಲ! ಗಂಧರ್ವನೂ ಅಲ್ಲ! ಯಕ್ಷಪನ್ನಗಜಾತಿಗೂ ಸೇರಿದವನಲ್ಲ. ನೀನು ಯಾರುಯಾರಿಂದ ಸಾವಿಲ್ಲದಂತೆ ವರವನ್ನು ಪಡೆದುಬಂದಿರುವೆಯೋ ಅವರೊಬ್ಬರಲ್ಲಿಯೂ ಸುಗ್ರೀವನು ಸೇರಿದವನಲ್ಲ. ಹೀಗಿರುವಾಗ ಎಲೆ ರಾಕ್ಷಸರಾಜನೆ! ಆ ಸುಗ್ರೀವನ ಕೈಯಿಂದ ನೀನು ಸಾಯದೆ ಹೇಗೆ ಪ್ರಾಣಗಳನ್ನು ದಕ್ಕಿಸಿಕೊಳ್ಳಬಲ್ಲೆ! [2] "ಈ ಉಪದೇಶಗಳೇಕೆ? ನಾನಂತೂ ಈ

---

1. ರಾವಣನು ಬ್ರಹ್ಮನಿಂದ ವರವನ್ನು ಪಡೆದಾಗ, ವೀರ್ಯದಲ್ಲಿ ಪ್ರಸಿದ್ಧರಾದ ದೇವಾಸುರ ಯಕ್ಷಪನ್ನಗಾದಿ ದೇವಜಾತಿಗಳಿಂದಮಾತ್ರವೇ ತನಗೆ ಸಾವಿಲ್ಲದಂತೆ ಕೇಳಿಕೊಂಡನೇಹೊರತು, ನರವಾನರಾದಿಗಳೆಲ್ಲರೂ ಅಲ್ಪಬಲವುಳ್ಳವರೆಂದು, ಅವರನ್ನು ಅಲಕ್ಷ್ಯದಿಂದ ಬಿಟ್ಟುಬಿಟ್ಟನು. ಆದುದರಿಂದ ರಾವಣನಿಗೆ ವಾನರಜಾತಿಯ ಸುಗ್ರೀವನೇ ಮರಣ ಹೇತುವಾಗುವುದರಲ್ಲಿ ತಡೆಯಿಲ್ಲವೆಂದು ಇಲ್ಲಿನ ಭಾವವು.

2. ಇಲ್ಲಿ "ನತು ಧರ್ಮೋಪಸಂಹಾರಮಧರ್ಮಫಲಸಂಹಿತಂ। ತದೇವ ಫಲಮನ್ವೇತಿ ಧರ್ಮಶ್ಚಾಧರ್ಮನಾಶನಃ" ಎಂದು ಮೂಲವು. ಇದಕ್ಕೆ ಗೋವಿಂದರಾಜೀಯ ವ್ಯಾಖ್ಯಾನಾನುಸಾರವಾದ ಅರ್ಥವು ಮೇಲೆಯೇ ಕಾಣಿಸಲ್ಪಟ್ಟಿರುವುದು. ಮುಹೇಶ್ವರತೀರ್ಥರು ಇದಕ್ಕೆ ಬೇರೆ ಅರ್ಥಾಂತರವನ್ನು ವಿವರಿಸಿರುವರು. ಹೇಗೆಂದರೆ:— ರೋಗರಾಜ್ಯಗಳೆರಡೂ ಸಮಕಾಲದಲ್ಲಿ ಒಬ್ಬಮನುಷ್ಯನ ಅನುಭವಕ್ಕೆ ಬರುವಂತೆ, ಅಧರ್ಮಫಲದಿಂದ ಅತ್ಮನಾಶವು ಬರಬಹುದಾದರೂ, ಧರ್ಮಫಲದಿಂದ ಅತ್ಮರಕ್ಷಣವೂ ಉಂಟಾಗಬಹುದು. ಅಥವಾ ಅಧರ್ಮವನ್ನು ನಾಶಮಾಡಿ ಧರ್ಮಫಲವೇ ಅನುಭವಕ್ಕೆ ಬಂದರೂ ಬರಬಹುದು. ಎಂದೀ ಎರಡು ವಿಕಲ್ಪಗಳನ್ನೆತ್ತಿ ಅವೆರಡನ್ನೂ ಈ ಶ್ಲೋಕಾರ್ಥದಿಂದ ಪರಿಹರಿಸುವರು. "ನತು ಧರ್ಮೋಪಸಂಹಾರಮಧರ್ಮಫಲಸಂಹಿತಂ" ರೋಗರಾಜ್ಯಗಳೆರಡೂ ಒಂದಾಗಿ ಸೇರಿ ಬರಬಹುದಾದರೂ, ಪ್ರಕೃತದಲ್ಲಿ ರಾವಣನ ತೀವ್ರತಪಸ್ಸೆಂಬ ಧರ್ಮಕ್ಕೂ, ಪರದಾರಾಪಹರಣವೆಂಬ ಅವನ ಅಧರ್ಮಕ್ಕೂ ಫಲರೂಪಗಳಾದ ವಧ್ಯತ್ವಅವಧ್ಯತ್ವಗಳೆಂಬೆರಡೂ ಒಂದಾಗಿ ಸೇರುವುದುಪೂರ್ತಿ ಅಸಂಭವವೆಂದು ಭಾವವು. ಇದರಿಂದ ಮೊದಲನೆಯ ವಿಕಲ್ಪವನ್ನು ಪರಿಹರಿಸಿ, ಉತ್ತರಾರ್ಧದಿಂದ ಎರಡನೆಯ ವಿಕಲ್ಪವನ್ನೂ ಪರಿಹರಿಸುವರು. "ತದೇವ ಫಲಮನ್ವೇತಿ ಧರ್ಮೋನಾಧರ್ಮನಾಶನಃ" ಧರ್ಮವು ಧರ್ಮಫಲವನ್ನು ಹೊಂದುವುದೇ

ಪಾಪಕೃತ್ಯಗಳನ್ನು ಮಾಡಿಬಿಟ್ಟೆನು. ಅದಕ್ಕೆ ತಕ್ಕ ಫಲವನ್ನು ಅನುಭವಿಸಿಯೇ ತೀರಬೇಕಲ್ಲವೆ? ಅದನ್ನು ತಪ್ಪಿಸಿಕೊಳ್ಳಲಾದೀತೆ?" ಎಂದು ಈಗಲೂ ನೀನು ನಿರಾಶನಾಗಬೇಡ! ಧರ್ಮಫಲವೆಂಬುದು ಯಾವಾಗಲೂ ಅಧರ್ಮಫಲದೊಡನೆ ಕಲೆತಿರತಕ್ಕುದಲ್ಲ! ಅದೂ ಧರ್ಮಫಲದ ಹಿಂದೆಯೇ ಸೇರಿಹೋಗುವುದು. "ಅದರೂ ಅಧರ್ಮವನ್ನು ನಡೆಸಿರುವಾಗ ಅದರ ಫಲವನ್ನೂ ಅನುಭವಿಸಿಯೇ ತೀರಬೇಕಲ್ಲವೆ?" ಎಂದು ಕೇಳುವೆಯಾ? ಧರ್ಮವು ಅಧರ್ಮವನ್ನು ನಾಶಗೊಳಿಸುವುದರಿಂದ ಧರ್ಮದ ಮುಂದೆ ಅಧರ್ಮಫಲವು ನಿಲ್ಲುವುದಿಲ್ಲ. "ಹಾಗಿದ್ದಲ್ಲಿ ಅಧರ್ಮವೇ ಧರ್ಮವನ್ನು ನಾಶ ಮಾಡಲಾರದೆ?" ಎಂದು ನೀನು ಕೇಳಬಹುದು. ಧರ್ಮವು ಅಧರ್ಮವನ್ನು ನಾಶ ಮಾಡುವುದೇ ಹೊರತು ಅಧರ್ಮಬಲದಿಂದ ಧರ್ಮವು ನಾಶವಾಗದು. "ಮೊದಲು ಮಾಡಿದ ಧರ್ಮವೇ ಈಗಿನ ಅಧರ್ಮಗಳೆಲ್ಲವನ್ನೂ ತೊಲಗಿಸಬಾರದೆ?" ಎಂದರೆ, [1] ನಿನ್ನ ಧರ್ಮಫಲವೆಲ್ಲವೂ ಆಗಲೇ ನಿಶ್ಶೇಷನಾಗಿ ಅಳಿಸಿಹೋಗಿರುವುದು. ಇದಕ್ಕೆ

ಹೊರತು ಅಧರ್ಮವನ್ನು ನಾಶಮಾಡಲಾರದು; ಎಂದರೆ, ಧರ್ಮಫಲವು ಧರ್ಮಫಲದೊಡನೆಯೇ ಸೇರಿರುವುದೇ ಹೊರತು ಅಧರ್ಮವನ್ನು ಬಾಧಿಸಿ ಅನುಭವಕ್ಕೆ ಬರುವುದಲ್ಲವೆಂದರ್ಥವು. ಅಥವಾ ಇಲ್ಲಿ ರಾವಣನು "ತಾನು ಯಾರಿಂದ ಅವಧ್ಯತ್ವವನ್ನು ಕೇಳಿಲ್ಲವೋ, ಅವರ ಹೆಸರಿಂದ ರಕ್ಷಿಸುವುದಕ್ಕಾದರೂ ತನ್ನ ಪೂರ್ವಸಂಕೃತವೇ ಸಾಲದೆ?" ಎಂದು ಶಂಕಿಸಲು, ಹಾಗಿದ್ದರೆ ಅದೇ ನ್ಯಾಯದಿಂದ ನೀನು ಮಾಡಿದ ಪಾಪಸಂಚಯವೇ ನಿನ್ನನ್ನು ಕೊಲ್ಲಬಹುದೆಂದೂ ತಿಳಿಸುವನು. "ನಶು ಧರ್ಮೋ.....ಧರ್ಮಶ್ಚಾಧರ್ಮನಾಶನಃ" ಧರ್ಮಫಲವಾದ ಸುಖವು ಅಧರ್ಮಫಲವಾದ ದುಃಖದೊಡನೆ ಸೇರದು. ಅದು ಸುಖವನ್ನೇ ಅನುವರ್ತಿಸುವುದು. ಹಾಗೆಯೇ ಅಧರ್ಮಫಲವಾದ ದುಃಖವೂ ಧರ್ಮಫಲದೊಡನೆ ಸೇರದೆ, ಅಧರ್ಮಫಲವನ್ನೇ ಅನುವರ್ತಿಸುವುದು. "ಧರ್ಮಫಲವಾದರೂ ಅಧರ್ಮವನ್ನು ನಾಶಮಾಡಲಾರದೆ" ಎಂದರೆ "ಧರ್ಮಶ್ಚಾಧರ್ಮನಾಶನಃ" ಮೊದಲಿನ "ನ" ಕಾರವೇ ಇಲ್ಲಿಯೂ ಅನ್ವಯಿಸುವುದರಿಂದ "ಧರ್ಮಶ್ಚ ಅಧರ್ಮನಾಶನೋ ನ" ಧರ್ಮವಾದರೂ ಅಧರ್ಮವನ್ನು ನಾಶಗೊಳಿಸಲಾರದು" ಎಂದರ್ಥವು. ಧರ್ಮಾಧರ್ಮಗಳೆರಡನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಅನುಭವಿಸಿಯೇ ತೀರಿಸಬೇಕೆಂದು ಮುಖ್ಯಾರ್ಥವು.

1. ಇಲ್ಲಿ "ಪ್ರಾಪ್ತಂ ಧರ್ಮಫಲಂ ತಾವದ್ಭವತಾ ನಾತ್ರ ಸಂಶಯಃ। ಫಲಮಸ್ಯಾಪ್ಯ ಧರ್ಮಸ್ಯ ಕ್ಷಿಪ್ರಮೇವ ಪ್ರಪತ್ಸ್ಯತೇ" ಎಂದು ಮೂಲವು. ಇಲ್ಲಿ ಶೂರನಾದ ನೀನು ನಿನ್ನ ಶೌರ್ಯಮಾರ್ಗವನ್ನು ಬಿಟ್ಟು ಪರಸ್ತ್ರೀಯನ್ನು ಕದ್ದುತರುವುದಕ್ಕೆ ಪ್ರವರ್ತಿಸಿದಾಗಲೇ ನಿನ್ನ ಧರ್ಮಫಲವೆಲ್ಲವೂ ಕ್ಷೀಣಿಸಿಹೋಯಿತೆಂದೂ, ಅಧರ್ಮವನ್ನು ಪುನಃ ನೀನು ಗಳಿಸಿ ಕಾಪಾಡಿಕೊಳ್ಳಬೇಕಾದರೆ, ಈಗಲೂ ರಾಮನಿಗೆ ಸೀತೆಯನ್ನೊಪ್ಪಿಸಿ, ಅವನಲ್ಲಿ ಶರಣಾಗತಿರೂಪವಾದ ಪ್ರಧಾನ ಧರ್ಮವೊಂದನ್ನು ನಡೆಸಿದರೆ ಸಾಕೆಂದೂ ಹನುಮಂತನ ಅಭಿಪ್ರಾಯವೆಂದೂ ಗ್ರಾಹ್ಯವು.

ಸಂದೇಹವಿಲ್ಲ. ಈಗ ನೀನು ನಡೆಸಿರುವ ಸೀತಾಪಹಾರವೆಂಬ ಅಧರ್ಮವನ್ನು ಕೆಡಿಸ ತಕ್ಕ ಧರ್ಮವೊಂದಾದರೂ ನಿನ್ನಲ್ಲಿಲ್ಲ. ಅದುದರಿಂದ ಈ ನಿನ್ನ ಅಧರ್ಮಕ್ಕೆ ತಕ್ಕ ಫಲವನ್ನು ಶೀಘ್ರದಲ್ಲಿಯೇ ಅನುಭವಿಸಬೇಕಾಗುವುದನು. ಅದುದರಿಂದ ಈಗಲೂ ನೀನು ಧರ್ಮವನ್ನೇ ಆಚರಿಸಿದಪಕ್ಷದಲ್ಲಿ ನಿನ್ನ ಪಾಪಕರ್ಮಗಳೆಲ್ಲವೂ ನಶಿಸುವುವು. ಈ ಧರ್ಮಾಧರ್ಮ ವಿಚಾರವೂ ಹಾಗಿರಲಿ! ನಿನಗೆ ಧರ್ಮಾಪೇಕ್ಷೆಯಿಲ್ಲದಿದ್ದರೂ ಹೋಗಲಿ! ಪ್ರಕೃತಕಾರ್ಯವನ್ನಾದರೂ ನೀನು ಪರ್ಯಾಲೋಚಿಸಬೇಕು. ರಾಮನು ಕೇವಲ ಮನುಷ್ಯಮಾತ್ರನೆಂದೆಣಿಸಬೇಡ. ಆತನು ಜನಸ್ಥಾನದಲ್ಲಿ ತಾನೊಬ್ಬನೇ ನಿಂತು, ರಾಕ್ಷಸರೆಲ್ಲರನ್ನೂ ಕೊಂದುದನ್ನೂ, ಒಂದೇಬಾಣದಿಂದ ಮಹಾ ವೀರನಾದ ವಾಲಿಯನ್ನು ವಧಿಸಿದ ಸಂಗತಿಯನ್ನೂ, ರಾಮಸುಗ್ರೀವರಿಬ್ಬರಿಗೂ ಈಗ ಉಂಟಾಗಿರುವ ಸ್ನೇಹಾತಿಶಯವನ್ನೂ ಚೆನ್ನಾಗಿ ಪರ್ಯಾಲೋಚಿಸಿ, ಮುಂಬೆ ನಿನಗೆ ಹಿತವಾಗುವ ರೀತಿಯನ್ನು ಚಿಂತಿಸು. ಎಲೆ ರಾವಣಾ! ಈಗ ನಾನೊಬ್ಬನೇ ಇಲ್ಲಿ ರಥಗಜತುರಗಾದಿಗಳಿಂದ ತುಂಬಿದ ಈ ಲಂಕೆಯನ್ನು ಧ್ವಂಸಮಾಡಿಬಿಡಬಲ್ಲೆನು. ಆದರೂ ಇದು ರಾಮನಿಗೆ ಸಮ್ಮತವಲ್ಲ. ಇಲ್ಲಿ ಸೀತೆಯನ್ನು ಹೀಗೆ ಗೋಳಾಡಿಸಿದ ಶತ್ರುಗಳೆಲ್ಲರನ್ನೂ ತನ್ನ ಕೈಯಿಂದ ತಾನೇ ಕೊಲ್ಲಬೇಕೆಂದು ರಾಮನು ಅನೇಕ ವಾನರಭಲ್ಲೂಕಸಮೂಹಗಳ ಮುಂದೆ ದೃಢ ಪ್ರತಿಜ್ಞೆಯನ್ನು ಮಾಡಿರುವನು. ಸಾಕ್ಷಾದ್ದೇವೇಂದ್ರನಾದರೂ ರಾಮನಿಗೆ ಅಪ ಕಾರವನ್ನು ಮಾಡಿ ಎಷ್ಟುಮಾತ್ರವೂ ಸುಖದಿಂದಿರಲಾರನು. ಇನ್ನು ನಿನ್ನಂತ ವನ ಸಂಗತಿಯನ್ನು ಕೇಳಬೇಕೆ? ನೀನು ಯಾರನ್ನು ಸೀತೆಯೆಂದು ಮಾತ್ರವೇ ತಿಳಿದಿರುವೆಯೋ, ಯಾವಳು ಈಗ ನಿನ್ನ ಕೈಯಲ್ಲಿ ಸಿಕ್ಕಿರುವಳೋ, ಆ ಸ್ತ್ರೀ ವ್ಯಕ್ತಿಯೇ ಈಗ ಈ ಲಂಕೆಯೆಲ್ಲವನ್ನೂ ನಾಶಮಾಡಿಸತಕ್ಕ ಕಾಳರಾತ್ರಿ ಯೆಂದು ತಿಳಿ! ಅದುದರಿಂದ, ಎಲೆ ರಾವಣಾ! ಸೀತಾರೂಪದಿಂದಿರುವ ಈ ಕಾಲ ಪಾಶವನ್ನು ನಿನ್ನ ಕೈಯಿಂದ ನೀನೇ ಕೊರಲಿಗೆ ಸುತ್ತಿಕೊಂಡಂತಾಯಿತು. ಈಗಲೂ ಅದನ್ನು ಬಿಟ್ಟು ನಿನಗೆ ಮುಂದೆ ಹಿತವಾವುದೋ ಅದನ್ನಾಲೋಚಿಸು. ಈ ನಿನ್ನ ಲಂಕೆಯು ಈಗಲೇ ಆ ಸೀತೆಯ ತೇಜಸ್ಸಿನಿಂದ ಅರ್ಧದಗ್ಧವಾಗಿರು ವುದು. ಇನ್ನು ರಾಮನ ಕೋಪಕ್ಕೂ ಪಾತ್ರವಾದರೆ ಇದು ಅಟ್ಟಳಿಗೆಯೊಡ ನೆಯೂ ರಾಜಬೀದಿಗಳೊಡನೆಯೂ ಸಂಪೂರ್ಣವಾಗಿ ದಗ್ಧವಾಗುವುದು. ಈ ನಿನ್ನ ದುಷ್ಕೃತ್ಯದಿಂದ ನೀನೊಬ್ಬನೇ ಸಾಯುವೆಯೆಂದೆಣಿಸಬೇಡ. ನಿನ್ನ ಮಿತ್ರರೂ, ನಿನ್ನ ಮಂತ್ರಿಗಳೂ, ನಿನ್ನ ಜ್ಞಾತಿಗಳೂ, ನಿನ್ನ ಸಹೋದರರೂ, ನಿನ್ನ ಪುತ್ರ ಕಳತ್ರಾದಿಗಳೂ, ನಿನ್ನ ಭೋಗಭಾಗ್ಯಗಳೂ, ನಿನ್ನ ಈ ಲಂಕಾನಗರಿಯೂ

ನಿರ್ಮೂಲವಾಗಿ ನಾಶಹೊಂದುವೆವು. ಈಗಲೂ ನೀನು ಇವೆಲ್ಲವನ್ನೂ ಉಳಿಸಿ ಕೊಳ್ಳುವ ಮಾರ್ಗವನ್ನು ನೋಡು. ಎಲೆ ರಾಕ್ಷಸಚಕ್ರವರ್ತಿ! ನಾನು ರಾಮನಿಗೆ ಪ್ರಧಾನಭೃತ್ಯನಾದುದರಿಂದ ಅವನ ಪ್ರಭಾವವನ್ನು ಚೆನ್ನಾಗಿ ಬಲ್ಲೆನು. ಅವನ ಕಡೆಯ ರಾಯಭಾರಿಯಾಗಿ ನಾನು ಇಲ್ಲಿಗೆ ಬಂದಿರುವುದರಿಂದ ಮೊದಲು ನಿನಗೆ ಹಿತವನ್ನು ಹೇಳಬೇಕಾದುದೂ ನನ್ನ ಕೃತ್ಯವು. ಇದರವೇಳೆ ನಾನು ನಿನ್ನಂತೆ ರಾಕ್ಷಸನೂ ಅಲ್ಲ! ಆ ರಾಮನಂತೆ ಮನುಷ್ಯನೂ ಅಲ್ಲ! ವಾನರಜಾತಿಯವನಾದುದರಿಂದ, ನಿನ್ನಿಬ್ಬರಿಗೂ ಮಧ್ಯಸ್ಥನಾಗಿ ನಿಷ್ಪಕ್ಷಪಾತ ಬುದ್ಧಿಯಿಂದಲೇ ಹೇಳುವೆನು. ಆದುದರಿಂದ ನನ್ನ ಮಾತನ್ನು ಕೇಳು. ನಾನು ಹೇಳಿದುದೆಲ್ಲವೂ ಸತ್ಯವೆಂದು ನಂಬು! ನನ್ನ ನೂತು ತಪ್ಪಲಾರದು. ಆ ರಾಮನನ್ನು ಸಾಮಾನ್ಯನೆಂದು ತಿಳಿಯಬೇಡ! ಮಹಾತೇಜಸ್ವಿಯಾದ ಅತನು ಪಂಚಮಹಾಭೂತಗಳೊಡನೆಯೂ, ಸ್ಥಾವರಜಂಗಮಗಳೊಡನೆಯೂ ಕೂಡಿದ ಈ ಸಮಸ್ತ ಲೋಕಗಳನ್ನೂ ತಾನೇ ಸಂಹರಿಸಿ, ತಿರುಗಿ ಅವುಗಳನ್ನು ಯಥಾಪ್ರಕಾರವಾಗಿ ಸೃಷ್ಟಿಸಬಲ್ಲನು. ಆ ರಾಮನು ಪರಾಕ್ರಮದಲ್ಲಿ ವಿಷ್ಣುದೇವನಿಗೆ ಸಮಾನನಾದುದರಿಂದ, ಅವನೊಡನೆ ಯುದ್ಧಮಾಡಬಲ್ಲವರು ದೇವದಾನವರಲ್ಲಿಯಾಗಲಿ, ಕ್ಷತ್ರಿಯರಲ್ಲಿಯಾಗಲಿ, ಯಕ್ಷರಲ್ಲಿಯಾಗಲಿ, ರಾಕ್ಷಸಂಡಲ್ಲಿಯಾಗಲಿ, ವಿದ್ಯಾಧರರಲ್ಲಿಯಾಗಲಿ, ಸಿದ್ಧಗಂಧರ್ವಕಿನ್ನರರಲ್ಲಿಯಾಗಲಿ, ನಾಗರಲ್ಲಿಯಾಗಲಿ, ಪತಗರಲ್ಲಿಯಾಗಲಿ, ಬೇರೆ ಯಾವ ಪ್ರಾಣಿಗಳಲ್ಲಿಯಾಗಲಿ, ಯಾವ ಸ್ಥಳದಲ್ಲಿಯೂ, ಯಾವ ಕಾಲದಲ್ಲಿಯೂ, ಇಲ್ಲ! ಎಲೆ ರಾವಣಾ! ಸರ್ವಲೋಕೇಶ್ವರನಾಗಿಯೂ, ರಾಜಸಿಂಹನಾಗಿಯೂ ಇರುವ ಆ ರಾಮನಲ್ಲಿಯೇ ನೀನು ಇಂತಹ ಮಹಾಪರಾಧವನ್ನು ನಡೆಸಿಬಿಟ್ಟೆಯಲ್ಲಾ! ಇನ್ನು ನಿನಗೆ ನಿನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳುವುದು ಸಾಧ್ಯವೆ? ಎಲೆ ರಾಕ್ಷಸೇಂದ್ರನೇ! ಮುಖ್ಯವಾಗಿ ಈ ಮೂರು ಲೋಕಗಳನ್ನು ಸುತ್ತಿನೋಡಿದರೂ ದೇವತೆಗಳಾಗಲಿ, ದೈತ್ಯರಾಗಲಿ, ಗಂಧರ್ವರಾಗಲಿ, ವಿದ್ಯಾಧರರಾಗಲಿ, ಯಕ್ಷಕಿನ್ನರನಾಗರಲಿ, ಯಾರೇ ಇರಲಿ, ಆ ರಾಮನನ್ನೆದಿರಿಸಿ ಯುದ್ಧಕ್ಕೆ ನಿಲ್ಲಲಾರರು. ಈ ಸಾಮಾನ್ಯದೇವತೆಗಳೊ ಹಾಗಿರಲಿ, [1] ವೃತ್ರಾಸುರನನ್ನು ಕೊಂದುದರಿಂದ ಪ್ರಸಿದ್ಧ ಸಾಮರ್ಥ್ಯವುಳ್ಳವನಾಗಿ,

---

1. ಇಲ್ಲಿ "ಬ್ರಹ್ಮಾ ಸ್ವಯಂಭೂಶ್ಚತುರಾನನೋವಾ ರಾದ್ರಸ್ತ್ರಿನೇತ್ರಸ್ತ್ರಿಪುರಾಂತಕೋವಾ। ಇಂದ್ರೋ ಮಹೇಂದ್ರಸ್ಸುರನಾಯಕೋವಾ। ತ್ರಾತುಂ ನ ಶಕ್ತಾ ಯುಧಿ ರಾಮವಧ್ಯಮ್" ಎಂದು ಮೂಲವು. ಇಲ್ಲಿ ಶ್ಲೋಕಾನುಪೂರ್ವಿಯು ಹೀಗಿದ್ದರೂ, ಅಯಾದೇವತೆಗಳ ಪದವಿಯನ್ನನುಸರಿಸಿ ಯೋಜನೆಯನ್ನು ಮಾಡಬೇಕಾದುದರಿಂದ, ಮೊದಲು ಇಂದ್ರ

ಸಮಸ್ತ ದೇವತೆಗಳನ್ನೂ ತನಗೆ ಕೈವಶವಾಗಿ ಸಹಾಯಕ್ಕಿಟ್ಟುಕೊಂಡಿರತಕ್ಕ ತ್ರಿಲೋಕಾಧಿಪತಿಯಾದ ಇಂದ್ರನಾದರೂ, ತ್ರಿಪುರಾಸುರನನ್ನು ಕೊಂದ ಮೂರು ಕಣ್ಣಿನ ಕಾಲರುದ್ರನಾದರೂ, ಅಯೋನಿಜನೆಂದು ಖ್ಯಾತಿಗೊಂಡು ನಾಲ್ಕು ಮುಖವನ್ನು ಹೊತ್ತ ಬ್ರಹ್ಮನಾದರೂ, ಯುದ್ಧದಲ್ಲಿ ರಾಮನ ಕೊಲೆಗೀಡಾದವನನ್ನು ಮಾತ್ರ ಬಿಡಿಸಿ ರಕ್ಷಿಸಲಾರರು. ಈ ಮೂವರೂ ಏಕಕಾಲದಲ್ಲಿ ಒಂದಾಗಿ ಸೇರಿಬಂದರೂ, ರಾಮನಿಗೆ ವಧ್ಯನಾದವನನ್ನು ರಕ್ಷಿಸಲಾರರು" ಎಂದನು. ಹೀಗೆ ಹನುಮಂತನು ನಯಭಯಗಳೆರಡನ್ನೂ ತೋರಿಸುವಂತೆ ನಿರ್ಭಯ

ನನ್ನು ಗ್ರಹಿಸಬೇಕು. (ಇಂದ್ರಃ) "ಇದಿಪರಮೈಶ್ವರ್ಯೇ" ಎಂಬ ಧಾತ್ವರ್ಥದಂತೆ ಪರಮೈಶ್ವರ್ಯವುಳ್ಳ ತ್ರಿಲೋಕಾಧಿಪತಿಯೂ ಶಕ್ತನಲ್ಲ. "ತ್ರೈಲೋಕ್ಯಾಧಿಪತ್ಯವಿದ್ದರೂ ಪರಸ್ಪರಸಹಾಯಸಾಮರ್ಥ್ಯವಿಲ್ಲದಿರಬಹುದಾದುದರಿಂದ ಅಶಕ್ತನಾಗಿರಬಾರದೆ?" ಎಂದರೆ, ಮಹೇಂದ್ರಃ) "ಯೋ ವೃತ್ರಮವಧೀದಿತಿ ತನ್ಮಹೇಂದ್ರಸ್ಯ ಮಹೇಂದ್ರತ್ವಂ" ಎಂಬಂತೆ, ವೃತ್ರವಧದಿಂದ ಮಹೇಂದ್ರನೆಂದು ಪ್ರಸಿದ್ಧಿಹೊಂದಿದವನಾದರೂ ಶಕ್ತನಲ್ಲವು. ಹಾಗೆ ತಾನು ಚತುರನಾಗಿದ್ದರೂ ಸಹಾಯಸಂಪತ್ತಿಯಿಲ್ಲದಾಗ ಅಶಕ್ತನಾಗಿರನೆ? ಎಂದರೆ (ಸುರನಾಯಕೋವಾ) ಸಮಸ್ತದೇವತಾಗಣಗಳ ಸಹಾಯವುಳ್ಳವನಾದರೂ, ರಾಮನಿಗೆ ವಧ್ಯನಾದವನನ್ನು ರಕ್ಷಿಸಲಾರನು. ಇಂದ್ರನಿಂದ ಸಾಗದಿದ್ದರೂ ಸರ್ವಸಂಹಾರಕನಾದ ರುದ್ರನು ಶಕ್ತನಲ್ಲವೆ?" ಎಂದರೆ (ರುದ್ರಃ) ಪ್ರಳಯಕಾಲದಲ್ಲಿ ಸಮಸ್ತಜಗತ್ತನ್ನೂ ಕೊಲ್ಲತಕ್ಕ ರುದ್ರನಿಗೂ ಸಾಧ್ಯವಲ್ಲವೆಂದು ಭಾವವು. ಇದೇ ಕೃದುದಲ್ಲಿ (ತ್ರಿಜೇತ್ರಃ) (ತ್ರಿಪುರಾಸ್ತ್ರಕಃ) ಇತ್ಯಾದಿ ರುದ್ರವಿಶೇಷಣಗಳಿಗೂ, ಹಣೆಗಣ್ಣಿನಿಂದ ಮನ್ಮಥನನ್ನು ದಹಿಸಿದವನೆಂದೂ, ಬೇರೆಯಾವದೇವತೆಗಳಿಗೂ ನಿಗ್ರಹಿಸಲಸಾಧ್ಯನಾದ ತ್ರಿಪುರಾಸುರನನ್ನು ಕೊಂದವನೆಂದೂ ಮೇಲೆಮೇಲೆ ಅತಿಶಯವನ್ನು ಗ್ರಹಿಸಬೇಕು. ಇವರಿಬ್ಬರಿಗೂ ಸಾಧ್ಯವಲ್ಲದಿದ್ದರೂ "ಬ್ರಹ್ಮಣಃ ಪುತ್ರಾಯ ಜ್ಯೇಷ್ಠಾಯ ಶ್ರೇಷ್ಠಾಯ" ಎಂಬಂತೆ ಶಿವನಿಗೂ ತಂದೆಯೆನಿಸಿದ ಬ್ರಹ್ಮನಿಗಾದರೂ ಸಾಧ್ಯವಲ್ಲವೆ? ಎಂದರೆ ಅವನೂ ಶಕ್ತನಲ್ಲವೆಂಬುದಕ್ಕಾಗಿ (ಬ್ರಹ್ಮಾ) ಬ್ರಹ್ಮನಿಗೂ ಸಾಧ್ಯವಲ್ಲವೆಂದು ಭಾವವು ಹಾಗೆಯೇ (ಸ್ವಯಂಭೂಃ ಚತುರಾನನೋವಾ) ಕರ್ತೃವಶ್ಯನಲ್ಲದೆ ತನಗೆ ತಾನೇ ಹುಟ್ಟಿದವನಾದರೂ, ನಾಲ್ಕುಮುಖದವನಾಗಿದ್ದರೂ ಶಕ್ತನಲ್ಲವೆಂದರ್ಥವು. ಇವರೊಬ್ಬೊಬ್ಬರೇ ಅಲ್ಲದೆ ಈ ಮೂವರೂ ಒಟ್ಟಾಗಿ ಸೇರಿಬಂದರೂ ಶಕ್ತರಲ್ಲವೆಂಬುದಕ್ಕಾಗಿ (ನ ಶಕ್ತಾಃ) ಎಂದು ಬಹುವಚನವು. (ಯುಧಿ ನ ಶಕ್ತಾಃ) ಯುದ್ಧದಲ್ಲಿ ರಕ್ಷಿಸಿಕೊಳ್ಳಲಾರರೆಂಬುದರಿಂದ ಒಂದುವೇಳೆ ರಾಮನಲ್ಲಿ ಶರಣಾಗತಿಯನ್ನು ಮಾಡಿದರೆ ರಕ್ಷಿಸಬಹುದೆಂದೂ ಸೂಚಿತವು. ಈ ಶ್ಲೋಕಾರ್ಧದಿಂದ "ಹಿರಣ್ಯಗರ್ಭಸ್ಸಮವರ್ತತಾಗ್ರೇ" "ನಸನ್ನಾಸಿಚ್ಛಿವ ಏವ ಕೇವಲಃ" "ಇಂದ್ರೋ ಮಾಯಾಭಿಃ ಪುರುರೂಪ ಈಯತೇ" ಇತ್ಯಾದಿ ಶ್ರುತಿಪ್ರಮಾಣಗಳಿಂದ, ಪರದೇವತೆಗಳೆಂದು ಪ್ರಸಿದ್ಧರಾದ ಬ್ರಹ್ಮೇಂದ್ರ ಶಿವರು ಮೂವರಿಗಿಂತಲೂ ಈತನೇ ಮೇಲೆಂದು ಸೂಚಿತವು. ಮತ್ತು ರಕ್ಷಣಾಕಾರ್ಯದಲ್ಲಿ ಪ್ರಧಾನ ದೇವತೆಗಳನ್ನು ನಿರಾಕರಿಸುವ ಈ ಪ್ರಕರಣದಲ್ಲಿ ವಿಷ್ಣುವನ್ನು ಹೇಳದುದರಿಂದ, ರಾಮನೇ ವಿಷ್ಣುವೆಂದೂ ಪ್ರತಿಪಾದಿತವು. (ಗೋವಿಂದರಾಜರು.)

ವಾಗಿ ಹೇಳಿದ ಮಾತುಗಳನ್ನು ಕೇಳಿ ರಾವಣನು, ಅವನ ಮಾತುಗಳೆಲ್ಲವೂ ತನಗೆ ಅಪ್ರಿಯವೆಂದೆಣಿಸಿ ಕೋಪಗೊಂಡು ಕಣ್ಣಾಲಿಗಳನ್ನು ತಿರುಗಿಸುತ್ತ, ಆಗಲೇ ಆ ಮಹಾಕಪಿಯನ್ನು ಕೊಂದುಬಿಡುವಂತೆ ತನ್ನ ಕಡೆಯ ರಾಕ್ಷಸರಿಗೆ ಭಯವಿಸಿದನು.

ಇಲ್ಲಿಗೆ ಐವತ್ತೊಂದನೆಯ ಸರ್ಗವು.

ವಿಭೀಷಣನು ದೂತಕಾರ್ಯಕ್ಕಾಗಿ ಬಂದವರನ್ನು ಕೊಲ್ಲುವುದು ರಾಜಧರ್ಮಕ್ಕೆ ವಿರುದ್ಧವೆಂದು ರಾವಣನಿಗೆ ಬುದ್ಧಿವಾದವನ್ನು ಹೇಳಿ ತಡೆಯುವುದು.

ಹೀಗೆ ಮಹಾಪ್ರಭಾವವುಳ್ಳ ಆ ಕಪಿಯು ಹೇಳಿದ ಮಾತನ್ನು ಕೇಳಿ ದೊಡನೆ, ರಾವಣನು ಕೋಪದಿಂದ ಮೈಮರೆತು, ಆಗಲೇ ಆ ಕಪಿಯನ್ನು ಕೊಲ್ಲುವಂತೆ ಅಲ್ಲಿದ್ದ ರಾಕ್ಷಸರಿಗೆ ಆಜ್ಞಾಪಿಸಿದನು. ದುರಾತ್ಮನಾದ ರಾವಣನು ಹೀಗೆ ದೂತಕಾರ್ಯವನ್ನು ತಿಳಿಸುವುದಕ್ಕಾಗಿ ತನ್ನಲ್ಲಿಗೆ ಬಂದಿರುವ ಕಪಿಯನ್ನು ಕೊಲ್ಲಬೇಕೆಂದು ಆಜ್ಞೆಮಾಡಿದ ವಿಷಯವು, ಅವನ ತಮ್ಮನಾದ ವಿಭೀಷಣನ ಮನಸ್ಸಿಗೆ ಸಮ್ಮತವಾಗಲಿಲ್ಲ. ಆದುದರಿಂದ ಕಾರ್ಯಾಕಾರ್ಯಗಳನ್ನು ಚೆನ್ನಾಗಿ ಬಲ್ಲ ಆ ವಿಭೀಷಣನು ತನ್ನಣ್ಣನಾದ ರಾವಣನು ಹಾಗೆ ಕೋಪದಿಂದ ಮೈಮರೆತು, ದೂತವಧರೂಪವಾದ ಆ ದುಷ್ಕಾರ್ಯಕ್ಕೆ ಕೈಯಿಕ್ಕಿರುವುದನ್ನು ನೋಡಿ, ಇದಕ್ಕೆ ಪರಿಹಾರವೇನೆಂದು ತನ್ನಲ್ಲಿ ತಾನು ಚಿಂತಿಸುತ್ತಿದ್ದನು. ಆಮೇಲೆ ಅವನು ತನ್ನ ಮನಸ್ಸಿನಲ್ಲಿ ತಾನೇ ಯುಕ್ತಾಯುಕ್ತವನ್ನು ಪರ್ಯಾಲೋಚಿಸಿ ನಿಶ್ಚಯಿಸಿಕೊಂಡು, ಅಣ್ಣನಾದ ರಾವಣನನ್ನು ಬಹಳ ಗೌರವದಿಂದ ಮನ್ನಿಸಿ, ಸಾಂತ್ವನವಾಕ್ಯಗಳಿಂದಲೇ ಅವನಿಗೆ ಹಿತವಾದಗಳನ್ನು ಹೇಳತೊಡಗಿದನು. ಅಣ್ಣಾ! ನೀನು ರಾಕ್ಷಸರಾಜನಲ್ಲವೇ? ಈ ಕಪಿಯಲ್ಲಿ ಇಷ್ಟು ಕೋಪವೇಕೆ? ಮನ್ನಿಸು! ಕೋಪವನ್ನು ಬಿಡು! ನನ್ನಲ್ಲಿ ಪ್ರಸನ್ನನಾಗು! ನನ್ನ ಮಾತನ್ನು ಲಾಲಿಸಿ ಕೇಳು! ಯುಕ್ತಾಯುಕ್ತ ವಿವೇಕವುಳ್ಳ ರಾಜಶ್ರೇಷ್ಠರು ದೂತಕಾರ್ಯಕ್ಕಾಗಿ ತಮ್ಮಲ್ಲಿಗೆ ಬಂದವರನ್ನು ಎಂದಿಗೂ ಕೊಲ್ಲಿಸಬಾರದು. ದೂತರನ್ನು ಕೊಲ್ಲುವುದು ರಾಜಧರ್ಮಕ್ಕೆ ಬಹಳ ವಿರುದ್ಧವಾದ ಕಾರ್ಯವು! ಲೋಕದ ನಡತೆಯಲ್ಲಿಯೂ ಇದು ಬಹಳ

ನಿಂದಾಸ್ಪದವಾದುದು. ಈ ಕಾಡು ಕಪಿಯನ್ನು ಕೊಲ್ಲುವುದು ಲೋಕೈಕವೀರ ನೆನಿಸಿಕೊಂಡ ನಿನ್ನ ಗೌರವಕ್ಕೂ ಸರಿಯಾದುದಲ್ಲ. ನೀನೋ ಧರ್ಮಸೂಕ್ಷ್ಮಗಳೆಲ್ಲವನ್ನೂ ಚೆನ್ನಾಗಿ ಬಲ್ಲವನು. ಕೃತಜ್ಞನು. ರಾಜಧರ್ಮಗಳಲ್ಲಿ ನಿಪುಣನು. ಕಾರ್ಯಾಕಾರ್ಯಗಳನ್ನು ಬಲ್ಲವನು! ಸಮಸ್ತ ಭೂತಗಳಲ್ಲಿಯೂ ನೀನೊಬ್ಬನೇ ಸಮಸ್ತತತ್ವಗಳನ್ನೂ ತಿಳಿದವನು. ನಿನ್ನಂತೆ ಶಾಸ್ತ್ರಜ್ಞಾನವುಳ್ಳವರೇ ಹೀಗೆ ಕೋಪಕ್ಕೆ ವಶರಾದರೆ, ಸಂಪಾದಿಸಿದ ಶಾಸ್ತ್ರಜ್ಞಾನವೆಲ್ಲವೂ ವ್ಯರ್ಥಾಶ್ರಮದಲ್ಲಿ ಪರ್ಯವಸಾನಹೊಂದಿದಂತಾಗುವುದಿಲ್ಲವೆ? ಆದುದರಿಂದ ಪ್ರಸನ್ನನಾಗು! ನೀನು ಎಂತಹ ಶತ್ರುಗಳನ್ನಾದರೂ ಸಂಹರಿಸಬಲ್ಲವನು. ಸಮಸ್ತ ರಾಕ್ಷಸರಿಗೂ ಚಕ್ರವರ್ತಿಯು. ಲೋಕದಲ್ಲಿ ಯಾರೂ ನಿನಗಿದಿರಲ್ಲ. ಈ ನಿನ್ನ ಗೌರವಗಳೆಲ್ಲವನ್ನೂ ನೀನು ಚೆನ್ನಾಗಿ ಗಮನಿಸಿ ಯುಕ್ತಾಯುಕ್ತಗಳನ್ನೂ ಚೆನ್ನಾಗಿ ನಿಶ್ಚಯಿಸಿಕೊಂಡು, ದೂತರಾಗಿ ಬಂದವರನ್ನು ದಂಡಿಸಬೇಕಾದ ರೀತಿಯಲ್ಲಿ ಈ ಕಪಿಯನ್ನು ದಂಡಿಸು" ಎಂದನು ರಾಕ್ಷಸೇಶ್ವರನಾದ ರಾವಣನಾದರೋ, ತನ್ನ ತಮ್ಮನಾದ ವಿಭೀಷಣನು ಹೇಳಿದ ಈ ಬುದ್ಧಿವಾದಗಳನ್ನು ಕೇಳಿಯೂ, ತನ್ನ ಅತ್ಯಾಕ್ರೋಶವನ್ನು ತಾನು ಬಿಡದೆ ಅವನಿಗೆ ಪ್ರತ್ಯುತ್ತರವನ್ನು ಕೊಡುವನು. "ಎಲೆ ವತ್ಸ ವಿಭೀಷಣಾ! ಪಾಪಿಗಳನ್ನು ಕೊಲ್ಲುವುದರಿಂದ ದೋಷವಿಲ್ಲ. ಆದುದರಿಂದ ಪಾಪಿಯಾದ ಈ ವಾನರನನ್ನು ನಾನು ಕೊಲ್ಲಿಸುವುದೇ ನಿಜವು" ಎಂದನು. ಹೀಗೆ ರಾವಣನು ಅಧರ್ಮಹೇತುವಾಗಿಯೂ, ಅತ್ಯಾಕ್ರೋಶಸೂಚಕವಾಗಿಯೂ, ಸಜ್ಜನನಿಂದಿತವಾಗಿಯೂ ಇರುವ ಈ ಮಾತುಗಳನ್ನು ಹೇಳಲು, ಅದನ್ನು ಕೇಳಿ ಬುದ್ಧಿವಂತರಲ್ಲಿ ಮೇಲೆನಿಸಿಕೊಂಡ ವಿಭೀಷಣನು, ತಿರುಗಿ ಆ ರಾವಣನನ್ನು ಕುರಿತು, ಸಾರವತ್ತಾದ ಒಂದಾನೊಂದು ವಾಕ್ಯವನ್ನು ಹೇಳುವನು. "ಎಲೆ ರಾಕ್ಷಸೇಂದ್ರನೆ! ಪ್ರಸನ್ನನಾಗು! ಧರ್ಮಾರ್ಥಯುಕ್ತವಾದ ನನ್ನ ಮಾತನ್ನು ಲಾಲಿಸು! ದೂತರಾಗಿ ಬಂದವರನ್ನು ಯಾವಾಗಲೂ ಎಲ್ಲಿಯೂ ಕೊಲ್ಲಬಾರದೆಂದು ಹಿರಿಯರು ಹೇಳಿರುವರು. "ಇವನು ದೂತನೆಂಬ ನೆವದಿಂದ ಬಂದಿದ್ದರೂ, ನಮ್ಮ ಪ್ರೀತಿಯ ಮಗನಾದ ಅಕ್ಷನೇ ಮೊದಲಾದವರನ್ನು ಕೊಂದುದರಿಂದ ಶತ್ರುವೆಂದೆಣಿಸಿ ಇವನನ್ನು ಕೊಲ್ಲಬೇಡವೆ?" ಎಂದು ನೀನು ಹೇಳಬಹುದು. ಇವನು ನಮಗೆ ಶತ್ರುವೆಂಬುದರಲ್ಲಿ ಸಂದೇಹವೇ ಇಲ್ಲ. ಮೇಲೆಮೇಲೆ ಹೆಚ್ಚಿಬರುವ ಇವನ ಕೊಬ್ಬನ್ನು ನಾವು ಅಡಗಿಸಬೇಕಾದುದೂ ಯುಕ್ತವು. ಇವನು ತಮ್ಮಲ್ಲಿ ಎಣಿಸಬಾರದ ಮಹಾಪರಾಧವನ್ನು ಮಾಡಿರುವುದೂ ನಿಜವು. ಹೇಗಿದ್ದರೂ

ದೂತರನ್ನು ಕೊಲ್ಲಬಾರದೆಂದೇ ದೊಡ್ಡವರು ಹೇಳಿರುವರು. ದೂತರನ್ನಡಗಿಸುವುದಕ್ಕೆ ಬೇರೆ ಅನೇಕ ದಂಡನೆಗಳುಂಟು. ಅವರ ಕೈಕಾಲು ಮುಂತಾದ ಅವಯವಗಳನ್ನು ಕತ್ತರಿಸಿ ವಿರೂಪನಮಾಡುವುದು, ಕಶೆಯಿಂದ ಹೊಡೆಸುವುದು, ಮುಂಡನಮಾಡಿ ಕಳುಹಿಸುವುದು, ಅವಮಾನಸೂಚಕವಾಗಿ ಹಣೆಮುಂತಾದ ಕಡೆಗಳಲ್ಲಿ ಬರೆಯೆಳೆಯುವುದು; ಇವೆಲ್ಲವೂ ದೂತರನ್ನು ದಂಡಿಸಕಕ್ಕ ಕ್ರಮಗಳೆಂದು ರಾಜನೀತಿಜ್ಞರು ಹೇಳಿರುವರು. ದೂತರಿಗೆ ವಧರೂಪವಾದ ಶಿಕ್ಷೆಯನ್ನು ನಾನು ಇದುವರೆಗೆ ಎಲ್ಲಿಯೂ ಕೇಳಿದುದೇ ಇಲ್ಲ. ಅಣ್ಣಾ! ನೀನಾದರೋ ಧರ್ಮಾರ್ಥವಿಚಾರಗಳಲ್ಲಿ ಚೆನ್ನಾಗಿ ಶಿಕ್ಷಿತವಾದ ಬುದ್ಧಿಯುಳ್ಳವನು. ಯುಕ್ತಾಯುಕ್ತಗಳನ್ನು ನಿಶ್ಚಯಿಸಿ ತಿಳಿದವನು. ನಿನ್ನಂತವನೇ ಹೀಗೆ ಕೋಪವಶನಾಗುವುದೆಂದರೇನು? ಧೀರರಾದವರು ಎಷ್ಟೇ ಕೋಪವನ್ನಾದರೂ ಅಡಗಿಸಿಕೊಳ್ಳಬೇಡವೆ? ಎಲೈ ವೀರನೆ! ಶಾಸ್ತ್ರವಿಚಾರಗಳಲ್ಲಿಯಾಗಲಿ ಲೌಕಿಕಾಚಾರಗಳಲ್ಲಿಯಾಗಲಿ, ಶಾಸ್ತ್ರಾರ್ಥಗಳನ್ನು ಕೂಲಂಕಷವಾಗಿ ತಿಳಿದು ಧರ್ಮವನ್ನು ತಿಳಿದು ನಿರ್ಧರಿಸುವುದರಲ್ಲಿಯಾಗಲಿ, ಲೋಕದಲ್ಲಿ ನಿನಗೆಣೆಯಾದವನೇ ಇಲ್ಲ! ಸಮಸ್ತದೇವಾಸುರರಿಗೂ ನೀನು ಮೇಲೆನಿಸಿಕೊಂಡವನು. ಹೀಗಿದ್ದರೂ ನೀನು ಧರ್ಮವಿರುದ್ಧವಾದ ಈ ಕಾರ್ಯವನ್ನು ಆಜ್ಞಾಪಿಸಬಹುದೆ? ಒಂದುವೇಳೆ ನಿನ್ನ ವೈರಿಗಳು ಇಲ್ಲಿಗೆ ಬರುವರೆಂಬ್ಭಿಭಯಕ್ಕಾಗಿ ನೀನು ಇಲ್ಲಿಯೇ ಈ ದೂತನನ್ನು ಕೊಲ್ಲಬೇಕೆಂದೆಣಿಸುವೆಯಾ? ಯಾವ ವೈರಿಗಳು ಬಂದರೂ ನಿನಗೆ ಭಯವೇನು? ವೀರ್ಯದಲ್ಲಿಯೂ, ಉತ್ಸಾಹದಲ್ಲಿಯೂ, ಧೈರ್ಯದಲ್ಲಿಯೂ ಮೇಲೆನಿಸಿಕೊಂಡ ದೇವಾಸುರರಾದರೂ ನಿನ್ನನ್ನು ಜಯಿಸಲಾರರು. ಎಣೆಯಿಲ್ಲದ ಮಹಾಪ್ರಭಾವವುಳ್ಳ ನೀನು ಅನೇಕಾವರ್ತಿ ದೇವಗಣಗಳನ್ನೂ, ಕ್ಷತ್ರಿಯರನ್ನೂ ಯುದ್ಧಗಳಲ್ಲಿ ಜಯಿಸಿ ಓಡಿಸಿರುವೆ. ಹೀಗೆ ದೇವಾಸುರರನ್ನೂ ಜಯಿಸಿದ ಶೂರನಾಗಿಯೂ, ವೀರನಾಗಿಯೂ ದುರ್ಜಯನಾಗಿಯೂ ಇರುವ ನಿನ್ನ ವಿಷಯದಲ್ಲಿ ಮನಸ್ಸಿನಿಂದಲಾದರೂ ಕೇಡನ್ನು ಬಯಸಿ ಬದುಕುವವರುಂಟೆ? ಮೊದಲು ನಿನ್ನಿಂದ ತಲೆತಪ್ಪಿಸಿಕೊಂಡು ಬದುಕಿಹೋಗುವುದೇ ನಿನ್ನ ಶತ್ರುಗಳಿಗೆ ಕಷ್ಟವಾಯಿತಲ್ಲವೆ? ಅಣ್ಣಾ! ನೀನು ಈಗ ಈ ಕಪಿಯನ್ನು ಕೊಲ್ಲುವುದರಿಂದ ನನಗೆ ಯಾವ್ದಗುಣವೂ ತೋರಲಿಲ್ಲ. ನೀನು ಉದ್ದೇಶಿಸಿರುವ ಈ ಕ್ರೂರದಂಡನೆಯನ್ನೇ ಇಲ್ಲಿಗೆ ಈ ಕಪಿಯನ್ನು ಕಳುಹಿಸಿದ ನಿನ್ನ ಶತ್ರುಗಳಲ್ಲಿ ಪ್ರಯೋಗಿಸು! ಈ ವಾನರನು ಸಾಧುವಾಗಲಿ, ಅಥವಾ ದುಷ್ಟನಾಗಲಿ, ಬೇರೊಬ್ಬರ ಮಾತಿನ ಮೇಲೆ ಇಲ್ಲಿಗೆ ಬಂದಿರುವನೇ ಹೊರತು ತಾನಾಗಿ ಬಂದವನಲ್ಲ. ಯಾವವಿಧ

ದಲ್ಲಿಯೂ ಇವನು ಸ್ವತಂತ್ರನಲ್ಲದುದರಿಂದ, ಇವನು ಹೇಳಿದ ಮಾತುಗಳನ್ನೂ ನಿನ್ನ ಶತ್ರುಗಳ ಮಾತುಗಳನ್ನಾಗಿಯೇ ಎಣಿಸಬೇಕಲ್ಲವೆ? ಅದುದರಿಂದ ಪರಾಧೀನನಾಗಿ ಬಂದಿರುವ ಈ ದೂತನನ್ನು ಕೊಲ್ಲುವುದುಚಿತವಲ್ಲ. ಒಂದುವೇಳೆ ನೀನು ಈತನನ್ನು ಕೊಂದುಬಿಟ್ಟರೆ ತಿರುಗಿ ಈ ಮಹಾಸಮುದ್ರವನ್ನು ದಾಟಿ ಇಲ್ಲಿಗೆ ಬರಬಲ್ಲ ಬೇರೊಬ್ಬ ಖೇಚರನಾವನೆಂದು ನನಗೆ ತೋರಲಿಲ್ಲ. ಆ ಮೇಲೆ ಇಲ್ಲಿನ ವೃತ್ತಾಂತವನ್ನು ನಿನ್ನ ಶತ್ರುಗಳಾದ ರಾಮಲಕ್ಷ್ಮಣರಿಗೆ ತಿಳಿಸಿ ಅವರನ್ನು ಇಲ್ಲಿಗೆ ಕರೆತರುವವನಾರು? ಆಗ ನಿನ್ನ ಶತ್ರುಗಳನ್ನು ಕೊಲ್ಲುವುದಕ್ಕೂ ನಿನಗೆ ಅವಕಾಶವಿಲ್ಲದೆ ಹೋಗುವುದಲ್ಲವೆ? ಅದುದರಿಂದ, ಎಲೈ ಪರಂತಪನೆ! ಈ ಕಪಿಯನ್ನು ಕೊಲ್ಲಬೇಕೆಂಬ ಯತ್ನವನ್ನು ಬಿಡು! ನಿನ್ನ ಪರಾಕ್ರಮವಾದರೋ ಇಂದ್ರಾದಿ ದೇವತೆಗಳಲ್ಲಿ ಮಾತ್ರವೇ ಉಪಯೋಗಿಸುವುದಕ್ಕೆ ಯೋಗ್ಯವಾದುದು. ಅದನ್ನು ಈ ಕಾಡುಕಪಿಯ ಮೇಲೆ ತೋರಿಸಿದರೆ ನಿನ್ನ ಮಾನಕ್ಕೆ ಕಡೆಯುವುದೆ? ನೀನೋ ಯುದ್ಧದಲ್ಲಿ ವಿಶೇಷಪ್ರೀತಿಯುಳ್ಳವನು. ಹೀಗಿರುವಾಗಲೂ ನೀನು ಇಲ್ಲಿಯೇ ಈ ದೂತನನ್ನು ಕೊಂದುಬಿಟ್ಟರೆ, ಇಲ್ಲಿಂದ ಹೋಗಿ ರಾಮಲಕ್ಷ್ಮಣರಿಗೆ ಇಲ್ಲಿ ಸೀತೆಯಿರುವ ಸಂಗತಿಯನ್ನು ತಿಳಿಸಿ ಅವರನ್ನು ಕರೆತರುವವರಾರು? ಅಂತಹ ದೂತನು ಬೇರೊಬ್ಬನಿರುವನೆಂದು ನನಗೆ ತೋರಲಿಲ್ಲ. ಆದುದರಿಂದ ಅವರೊಡನೆ ನಿನಗೆ ಯುದ್ಧವು ತಾನೇ ಹೇಗೆ ಸಂಭವಿಸುವುದು? ನೀನು ರಾಕ್ಷಸರ ಮನಸ್ಸನ್ನು ಉಲ್ಲಾಸಗೊಳಿಸತಕ್ಕವನು. ಧೈರ್ಯೋತ್ಸಾಹ ಪರಾಕ್ರಮಗಳಲ್ಲಿ ಮೇಲೆನಿಸಿದ ದೇವಾಸುರರೂ ನಿನ್ನನ್ನು ಗೆಲ್ಲಲಾರರು. [1] ಇಂತಹ ಮಹಾವೀರನಾದ ನಿನಗೆ ಒಳ್ಳೆಯುದ್ಧವು ಬಂದೊದಗುತ್ತಿರುವಾಗ, ಅದನ್ನು ನೀನೇ ತಪ್ಪಿಸಿಕೊಳ್ಳುವುದು ಯುಕ್ತವೆ? ನಿನ್ನವಶದಲ್ಲಿಯೋ ಕೋಟ್ಯನುಕೋಟಿ ರಾಕ್ಷಸಯೋಧರಿರುವರು. ಅವರಲ್ಲಿ ಒಬ್ಬೊಬ್ಬರೂ ನಿನಗೆ ಮನಃಪೂರ್ವಕವಾಗಿ ಹಿತವನ್ನು ಬಯಸತಕ್ಕವರು! ಒಬ್ಬೊಬ್ಬರೂ ಅಸಹಾಯಕಶೂರರು! ಒಬ್ಬೊಬ್ಬರೂ ದಾನಮಾನಾದಿಗಳಿಂದ ನಿನಗೆ ವಶರಾಗಿರುವವರು! ಒಬ್ಬೊಬ್ಬರೂ ಉತ್ತಮಕುಲದಲ್ಲಿ ಜನಿಸಿದವರು! ಒಬ್ಬೊಬ್ಬರೂ ಮಹಾಧೀರರು! ಒಬ್ಬೊಬ್ಬರೂ ಶಸ್ತ್ರಧಾರಿಗಳಲ್ಲಿ ಮೇಲೆನಿಸಿಕೊಂಡವರು! ಅದುದರಿಂದ ಇವರಲ್ಲಿ ಕೆಲವರು, ನಿನ್ನ ಸೈನ್ಯಗಳಲ್ಲಿ ಕೆಲವನ್ನು ಸಂಗಡ ಕರೆದುಕೊಂಡು, ಈಗಲೇ ನಿನ್ನಾಜ್ಞೆಯಿಂದ ಹೊರಟು,

---

1. ಇಲ್ಲಿ ವಿಭೀಷಣನು, ರಾವಣನು ರಾಜಸ ಸ್ವಭಾವವುಳ್ಳವನಾದುದರಿಂದ, ಅವನ ಸ್ವಭಾವಕ್ಕನುಗುಣವಾಗಿ ಅವನಿಗೆ ಯುದ್ಧವಾಸೆಯನ್ನೇ ತೋರಿಸಿ, ರಾಮನನ್ನೂ ನಿಂದಿಸಿ ಹನುಮಂತನನ್ನು ಕೊಲ್ಲದಹಾಗೆ ಮಾಡುವನೆಂದು ಗ್ರಾಹ್ಯವು.

ಮೂಢರಾದ ರಾಮಲಕ್ಷ್ಮಣರೆಂಬ ಆ ರಾಜಪುತ್ರರಿಬ್ಬರನ್ನೂ ನಿಗ್ರಹಿಸಿ, ಅವರಿಗೆ ನಿನ್ನ ಪ್ರಭಾವವೆಷ್ಟೆಂಬುದನ್ನು ತೋರಿಸಿಬರಲಿ! ಈ ಉಪಾಯಗಳೊಂದನ್ನೂ ಪರ್ಯಾಲೋಚಿಸದೆ ಇಲ್ಲಿಯೇ ಈ ದೂತನನ್ನು ಕೊಂದುಬಿಡುವುದರಿಂದೇನು ಫಲ?" ಎಂದನು. ರಾಕ್ಷಸಚಕ್ರವರ್ತಿಯಾಗಿಯೂ, ದೇವತೆಗಳಿಗೆ ಮುಖ್ಯಶತ್ರುವಾಗಿಯೂ, ಮಹಾಬಲಾಢ್ಯನಾಗಿಯೂ ಇರುವ ರಾವಣನು, ತನ್ನ ತಮ್ಮನಾದ ವಿಭೀಷಣನು ತನ್ನ ಮನಸ್ಸಿಗೊಪ್ಪುವಂತೆ ಹೇಳಿದ ಈ ಮಾತುಗಳನ್ನು ಕೇಳಿ, ತನ್ನ ಮನಸ್ಸಿನಲ್ಲಿ ತಾನೂ ಪರ್ಯಾಲೋಚಿಸಿ, ಕೊನೆಗೆ ಅವನ ಮಾತನ್ನೇ ಅಂಗೀಕರಿಸಿದನು.

ಇಲ್ಲಿಗೆ ಐವತ್ತೆರಡನೆಯ ಸರ್ಗವು.

ರಾವಣಾಜ್ಞೆಯಿಂದ ರಾಕ್ಷಸರು ಹನುಮಂತನ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ, ಲಂಕೆಯ ಬೀದಿಗಳಲ್ಲಿ ಸುತ್ತಿಸಿದುದು. ಇದನ್ನು ತಿಳಿದು ಸೀತೆಯು ಅಗ್ನಿದೇವನನ್ನು ಪ್ರಾರ್ಥಿಸಲು, ಅಗ್ನಿಯು ಹನುಮಂತನ ಬಾಲವನ್ನು ಸುಡದೆ ಶೀತಲನಾಗಿದ್ದುದು.

ತಮ್ಮನಾದ ವಿಭೀಷಣನು ದೇಶಕಾಲೋಚಿತವಾಗಿ ಹೇಳಿದ ಮಾತನ್ನು ಕೇಳಿ ಮಹಾಬಲಾಢ್ಯನಾದ ರಾವಣನು, ತಿರುಗಿ ಅವನನ್ನು ಕುರಿತು, "ವಿಭೀಷಣಾ? ನೀನು ಹೇಳಿದುದೇ ಯುಕ್ತವು. ದೂತರನ್ನು ಕೊಲ್ಲುವುದೇನೋ ನಿಂದ್ಯವಾದ ಕಾರ್ಯವೇ ನಿಜವು! ಆದರೆ ಈ ಕಪಿಯನ್ನು ಕೊಲ್ಲದೆ ಹೋದರೂ ಇದಕ್ಕೆ ಬೇರೊಂದು ಶಿಕ್ಷೆಯನ್ನಾದರೂ ಮಾಡಿಯೇ ತೀರಬೇಕು. ಕಪಿಗಳು ತಮ್ಮ ಬಾಲವೇ ತಮಗೊಂದು ದೊಡ್ಡ ಅಲಂಕಾರವೆಂದು ತಿಳಿದು ಬಾಲದಲ್ಲಿ ಬಹಳ ಪ್ರೀತಿಯನ್ನಿಟ್ಟಿರುವುವು ಆದುದರಿಂದ ಇದರ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ ಸುಡಿಸಿಬಿಡು! ಇದು ಸುಟ್ಟಬಾಲದೊಡನೆಯೇ ತನ್ನೊಡೆಯನ ಬಳಿಗೆ ಹೋಗಲಿ! ಅಂಗಹೀನವಾಗಿ ದೈನ್ಯದಿಂದ ಮುಂದೆ ಬಂದು ನಿಂತಿರುವ ಈ ಕಪಿಯನ್ನು, ಇದರ ಮಿತ್ರರೂ, ಜ್ಞಾತಿಗಳೂ, ಬಂಧುಗಳೂ, ಪ್ರಿಯಜನರೂ ನೋಡಿ ಹಾಸ್ಯಮಾಡಲಿ!" ಎಂದನು. ಆಮೇಲೆ ರಾವಣನು ಅಲ್ಲಿದ್ದ ರಾಕ್ಷಸಭಟರನ್ನು ನೋಡಿ, "ಎಲೆ ರಾಕ್ಷಸರೆ! ಈ ಕಪಿಯ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ, ನಮ್ಮ

ಪಟ್ಟಣದ ಬೀದಿಗಳಲ್ಲಿಯೂ, ಚತುಷ್ಪಥಗಳಲ್ಲಿಯೂ ಸುತ್ತಿಸಿಕೊಂಡು ಬನ್ನಿರಿ'' ಎಂದು ನಿಯಮಿಸಿದನು. ರಾವಣನ ಈ ಆಜ್ಞೆಯನ್ನು ಕೇಳಿದೊಡನೆ ಅಲ್ಲಿದ್ದ ರಾಕ್ಷಸಭಟರು ಕೋಪಾವಿಷ್ಟರಾಗಿ ಬಂದು ಆ ಹನುಮಂತನ ಬಾಲಕ್ಕೆ ಹರಕು ಬಟ್ಟೆಗಳನ್ನು ತಂದು ಸುತ್ತಿದರು. ರಾಕ್ಷಸರು ಬಾಲಕ್ಕೆ ಬಟ್ಟೆಯನ್ನು ಸುತ್ತುತ್ತಿರುವಾಗಲೇ ಹನುಮಂತನು ಕೋಪಗೊಂಡು, ಒಣಗಿದ ಕಾಡಿಗೆ ತಗುಲಿದ ಬೆಂಕಿಯಂತೆ ಕ್ಷಣಮಾತ್ರದಲ್ಲಿ ಉಬ್ಬಿಬಳೆದನು. ಆ ಮೇಲೆ ರಾಕ್ಷಸರು ಬಟ್ಟೆ ಸುತ್ತಿದ ಆ ಹನುಮಂತನ ಬಾಲಕ್ಕೆ ಎಣ್ಣೆಯನ್ನು ಸುರಿದು, ಬೆಂಕಿಯನ್ನೂ ತೋರಿಸಿದರು. ಇದರಿಂದ ಹನುಮಂತನಿಗೆ ಮನಸ್ಸಿನಲ್ಲಿ ರೋಷಾವೇಶಗಳು ಉಕ್ಕಿಬರುತ್ತಿರಲು, ಬಾಲಸೂರ್ಯನಂತೆ ಕೆಂಪಾದ ಮುಖವುಳ್ಳವನಾಗಿ, ಉರಿಯುತ್ತಿದ್ದ ಬಾಲವನ್ನು ಗಿರ್ರನೆ ತಿರುಗಿಸಿ ತನ್ನನ್ನು ಸುತ್ತುವರಿಯುತ್ತಿದ್ದ ಸಮಸ್ತ ರಾಕ್ಷಸರನ್ನೂ ಆದರಿಂದಲೇ ಅಪ್ಪಳಿಸಿ ಕೆಡಹಿದನು. ಕಪಿಯ ಬಾಲಕ್ಕೆ ಬೆಂಕಿಯಿಟ್ಟು ವಿರವಣಿಗೆಮಾಡಿಸುವ ಸುದ್ದಿಯನ್ನು ಕೇಳಿ ಹೆಂಗಸರು, ಮಕ್ಕಳು, ಮುದುಕರು ಮೊದಲಾಗಿ, ಲಂಕಾನಿವಾಸಿಗಳೆಲ್ಲರೂ ಆ ವಿನೋದವನ್ನು ನೋಡುವುದಕ್ಕಾಗಿ ಸಂತೋಷದಿಂದ ಹೊರಕ್ಕೆ ಬಂದು ನಿಂತಿದ್ದರು. ಬಾಲಕ್ಕೆ ಬೆಂಕಿಯಿಟ್ಟಾಗಲೂ ಆ ಹನುಮಂತನ ಹಾವಳಿಯನ್ನು ತಡೆಯಲಾರದೆ, ಅಲ್ಲಿದ್ದ ಕೆಲವು ಕ್ರೂರ ರಾಕ್ಷಸರು ಗುಂಪಾಗಿ ಬಂದು ಅತನನ್ನು ತಿರುಗಿ ಹಗ್ಗದಿಂದ ಬಿಗಿದರು. ವೀರನಾದ ಹನುಮಂತನು, ಆಗ ತಾನು ಮಾಡಬೇಕಾದ ಕಾರ್ಯವೇನೆಂದು ತನ್ನಲ್ಲಿ ತಾನೇ ಚಿಂತಿಸುತ್ತ '' ಈ ರಾಕ್ಷಸರು ನನ್ನನ್ನು ಹೀಗೆ ಹಗ್ಗಗಳಿಂದ ಬಿಗಿದಿದ್ದರೂ, ಈಗಲೂ ಇವರು ನನ್ನ ವೇಗವನ್ನು ತಡೆದುಕೊಳ್ಳಲಾರರೆಂಬುದೇನೋ ನಿಜವು. ನಾನು ಈಗಲೂ ಈ ಹಗ್ಗಗಳನ್ನು ಕಿತ್ತುಕೊಂಡು ಮೇಲೆ ಹಾರಿ ಒಂದೇ ಪೆಟ್ಟಿಗೆ ಈ ರಾಕ್ಷಸರೆಲ್ಲರನ್ನೂ ಬಡಿದುಕೊಲ್ಲಬಹುದು. ಆದರೆ ಸ್ವಾಮಿಹಿತಾರ್ಥವಾಗಿ ಇಲ್ಲಿ ಬಂದು ಸುತ್ತುತ್ತಿದ್ದ ನನ ನ್ನು ಈ ದುಷ್ಟರಾಕ್ಷಸರೂ ಕೂಡ ತಮ್ಮ ಪ್ರಭುವಿನ ಆಜ್ಞೆಯಂತೆಯೇ ಕಟ್ಟಿರುವರು. ಇಷ್ಟುಮಾತ್ರದಿಂದಲೇ ಇವರು ನನಗೆ ಯಾವ ಪ್ರತೀಕಾರವನ್ನೂ ಮಾಡಿದಂತಾಗಲಿಲ್ಲ. ಇದು ಅಷ್ಟಾಗಿ ನನಗೆ ಲಕ್ಷ್ಯವೂ ಇಲ್ಲ. ಇಲ್ಲಿನ ಸಮಸ್ತರಾಕ್ಷಸರಿಗೂ ಯುದ್ಧದಲ್ಲಿ ತಾನೊಬ್ಬನೇ ಸಾಕು! ಆದರೂ ರಾಮನು ತಾನಾಗಿಯೇ ಇಲ್ಲಿ ಬಂದು ರಾವಣನನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿರುವುದರಿಂದ ಅವನು ಆ ಪ್ರತಿಜ್ಞೆಯನ್ನು ತೀರಿಸಿ ಕೃತಾರ್ಥನಾಗಲೆಂದೇ ನಾನು ಈಗ ಇದನ್ನೆಲ್ಲಾ ಸಹಿಸಿಕೊಂಡಿರಬೇಕಾಗಿರುವುದು. ಇದಲ್ಲದೆ, ಈ ರಾಕ್ಷಸರು ನನ್ನನ್ನು ಈ ಲಂಕೆಯಲ್ಲಿ ಸುತ್ತಿಸಬೇಕೆಂದಿರುವುದರಿಂದ, ತಿರುಗಿ ನಾನು ಈ ಪಟ್ಟ

ಇದ ಸನ್ನಿವೇಶಗಳೆಲ್ಲವನ್ನೂ ಚೆನ್ನಾಗಿ ನೋಡಿಕೊಂಡು ಬರಬಹುದು. ನಾನು ಮೊದಲೇ ಸೀತೆಯನ್ನು ಹುಡುಕುವ ನೆವದಲ್ಲಿ ಇಲ್ಲಿನ ಸಮಸ್ತಭಾಗಗಳನ್ನೂ ಒಮ್ಮೆ ಸುತ್ತಿಬಂದಿದ್ದರೂ, ಆಗ ರಾತ್ರಿಯಾದುದರಿಂದ ಇದರ ದುರ್ಗರಹಸ್ಯಾದಿಗಳೆಲ್ಲವನ್ನೂ ಚೆನ್ನಾಗಿ ನೋಡವುದಕ್ಕಾಗಲಿಲ್ಲ. ಹಗಲುಹೊತ್ತಿನಲ್ಲಿಯೂ ಅವಶ್ಯವಾಗಿ ಈ ಲಂಕೆಯನ್ನು ನೋಡಿ ಬರಬೇಕಾದುದೇ ನ್ಯಾಯವು. ಅದುದರಿಂದ ನನಗೆ ಇವರು ಎಷ್ಟೆಷ್ಟು ವಿಧದಿಂದ ಅವಮಾನಮಾಡಿದರೂ ಸಹಿಸಿಕೊಂಡಿರುವೆನು. ಇವರು ನನ್ನನ್ನು ಹಗ್ಗದಿಂದ ಬಿಗಿದರೂ, ಬಾಲಕ್ಕೆ ಬೆಂಕಿಯನ್ನಿಟ್ಟರೂ, ಇನ್ನೂ ನಾನಾವಿಧದಿಂದ ಹಿಂಸಿಸಿದರೂ ಅದರಿಂದ ನನ್ನ ಮನಸ್ಸಿಗೆ ಸ್ವಲ್ಪಮಾತ್ರವೂ ಆಯಾಸವಿಲ್ಲ" ಎಂದು ತನ್ನಲ್ಲಿ ತಾನೇ ನಿಶ್ಚಯಿಸಿಕೊಂಡು ಸುಮ್ಮನಿದ್ದನು. ಆ ರಾಕ್ಷಸಭಟರಾದರೋ ಕಪಿಶ್ರೇಷ್ಠನಾಗಿಯೂ, ಬುದ್ಧಿವಂತನಾಗಿಯೂ, ಬಲಾಢ್ಯನಾಗಿಯೂ ಇರುವ ಆ ಹನುಮಂತನನ್ನು ಇಂತವನೆಂದು ತಿಳಿಯಲಾರದೆ, ಯಾವುದೋ ಕಪಿಯು ಕೈಗೆ ಸಿಕ್ಕಿತೆಂಬ ಸಂತೋಷದಿಂದ ಎಲ್ಲರೂ ಸೇರಿ ಬೀದಿಯಲ್ಲಿ ಅವನನ್ನೆಳೆದುಕೊಂಡು ಹೋಗುತ್ತಿದ್ದರು. ಕ್ರೂರಕರ್ಮಿಗಳಾದ ಆ ರಾಕ್ಷಸರಲ್ಲಿ ಪರಮಸಂತೋಷದಿಂದ ಮುಂದೆ ಬಂದು ಶಂಖಗಳನ್ನೂದುವರು ಕೆಲವರು! ಭೇರಿಗಳನ್ನು ಬಾರಿಸುವರು ಕೆಲವರು! ಸಿಂಹನಾದಗಳನ್ನು ಮಾಡುವರು ಕೆಲವರು! ಭುಜಗಳನ್ನು ತಟ್ಟುವರು ಕೆಲವರು! ಹೀಗೆ ಆ ಕಪಿಯನ್ನು ಪಟ್ಟಣದ ಒಂದೊಂದು ಕಡೆಯಲ್ಲಿಯೂ ಸುತ್ತಿಸುತ್ತ ಬಂದರು. ಹನುಮಂತನಾದರೋ ಹೀಗೆ ಅನೇಕ ರಾಕ್ಷಸಸೈನ್ಯವು ತನ್ನನ್ನು, ಹಿಂಬಾಲಿಸಿ ಬರುತ್ತಿರಲು, ಅನಾಯಾಸದಿಂದಲೇ ಆ ಮಹಾಪಟ್ಟಣವೆಲ್ಲವನ್ನೂ ಸುತ್ತಿ, ಅದರೊಳಗಿನ ಸೂಕ್ಷ್ಮಸನ್ನಿವೇಶಗಳನ್ನೆಲ್ಲಾ ಗಮನಿಸಿ ನೋಡುತ್ತ ಬಂದನು. ಆ ಲಂಕೆಯಲ್ಲಿ ಅಲ್ಲಲ್ಲಿದ್ದ ವಿಚಿತ್ರವಿಮಾನಗಳನ್ನೂ, ರಹಸ್ಯಗಳಾದ ಭೂಪ್ರದೇಶಗಳನ್ನೂ ಚೆನ್ನಾಗಿ ಸಂಸ್ಕರಿಸಲ್ಪಟ್ಟ ಅಂಗಳಗಳನ್ನೂ, ಮನೆಗಳ ಸಾಲಿನಿಂದ ತುಂಬಿದ ಬೀದಿಗಳನ್ನೂ, ಚತುಷ್ಪಥಗಳನ್ನೂ ನೋಡುತ್ತ ಬಂದನು. ಹಾಗೆಯೇ ದೊಡ್ಡ ರಾಜಬೀದಿಗಳನ್ನೂ, ಸಣ್ಣ ಬೀದಿಗಳನ್ನೂ, ರಹಸ್ಯವಾದ ಬಾಗಿಲಿನಿಂದ ಕೂಡಿ ಮೇಘಗಳಂತೆ ವಿಸ್ತಾರವಾದ ಮನೆಗಳನ್ನೂ ಸಣ್ಣಮನೆಗಳನ್ನೂ ನೋಡಿದನು. ಇವನನ್ನು ಹಿಂಬಾಲಿಸಿ ಬರುತಿದ್ದ ರಾಕ್ಷಸರಾದರೋ ಅಲ್ಲಲ್ಲಿ ಮನೆಗಳ ಮುಂದಿನ ಅಂಗಳಗಳಲ್ಲಿಯೂ ಬೀದಿಯ ಚೌಕಗಳಲ್ಲಿಯೂ, ರಾಜಮಾರ್ಗಗಳಲ್ಲಿಯೂ, "ಇದೋ! ಚಾರನು" ಎಂದು ಆ ಹನುಮಂತನನ್ನು ತೋರಿಸಿ, ಗಟ್ಟಿಯಾಗಿ ಕೂಗಿ ಸಾರುತ್ತ ಬಂದರು. ಉರಿಯುವ ಬಾಲಸಹಿತನೆ ಮೇರವಣಿಗೆ ಬರುತ್ತಿರುವ

ಈ ಕಪಿಯನ್ನು ನೋಡಬೇಕೆಂಬ ಕುತೂಹಲದಿಂದ ಸ್ತ್ರೀಜಾಲವೃದ್ಧರೂ ಹೊರಗೆ ಬಂದು ನಿಂತಿದ್ದರು. ಹೀಗೆ ಹನುಮಂತನ ಬಾಲಕ್ಕೆ ಬೆಂಕಿಯಿಟ್ಟುದನ್ನು ನೋಡಿ, ವಿಕೃತಾಕಾರವುಳ್ಳ ಕೆಲವು ರಾಕ್ಷಸಸ್ತ್ರೀಯರು ಸಂತೋಷದಿಂದ ಅಗಲೇ ಸೀತೆಯ ಬಳಿಗೆ ಓಡಿಬಂದು, ಈ ಅಪ್ರಿಯವಾಕ್ಯವನ್ನು ನುಡಿಯುತ್ತ, "ಎಲೆ, ಸೀತೆ! ಇದಕ್ಕೆ ಮೊದಲು ಯಾವುದೋ ಒಂದು ಕಪಿಯು ನಿನ್ನನ್ನು ವಾತಾಡಿಸಿ ಹೋಗಲಿಲ್ಲವೆ? ಕೆಂಪಾದ ಮೂತಿಯುಳ್ಳ ಆ ಕಪಿಯ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ, ಇದೋ! ಇಲ್ಲಿನ ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡಿಸುತ್ತಿರುವರು" ಎಂದು ಹೇಳಿದರು. ಕರ್ಣಕಠೋರವಾದ ಈ ಮಾತನ್ನು ಕೇಳಿದೊಡನೆ ಸೀತೆಯು ತನ್ನ ಪ್ರಾಣವೇ ಹೋದಂತೆ ಬಹಳ ದುಃಖಿತೆಯಾಗಿ, ಹನುಮಂತನ ಶ್ರೇಯಸ್ಸಿಗಾಗಿ, ಶುದ್ಧವಾದ ಮನಸ್ಸಿನಿಂದ ಅಗ್ನಿಯನ್ನು ಪ್ರಾರ್ಥನೆಮಾಡಿ "ಎಲೈ ಅಗ್ನಿದೇವನೆ! ನಾನು ಪತಿಶುಶ್ರೂಷೆಯನ್ನು ಮಾಡಿದವಳಾಗಿದ್ದರೆ, ತಪಸ್ಸನ್ನು ನಡೆಸಿದವಳಾಗಿದ್ದರೆ, ನನ್ನಲ್ಲಿ ಪಾತಿವ್ರತ್ಯವಿದ್ದರೆ, ನೀನು ಈ ಹನುಮಂತನ ವಿಷಯದಲ್ಲಿ ತಣ್ಣಗಿರಬೇಕು. ನನ್ನ ಪ್ರಿಯನಾದ ರಾಮನಿಗೆ ನನ್ನಲ್ಲಿ ಅಲ್ಪಸ್ವಲ್ಪವಾದರೂ ದಯೆಯಿದ್ದರೆ, ನಾನು ಅನುಭವಿಸಬೇಕಾದ ಭಾಗ್ಯಶೇಷವು ಇನ್ನೂ ಮಿಕ್ಕಿದ್ದರೆ, ಹನುಮಂತನ ವಿಷಯದಲ್ಲಿ ತಣ್ಣಗಿರು! ಎಲೈ ವೀತಿಹೋತ್ರನೆ! ನಾನು ನಿರ್ದೋಷವಾದ ಪಾತಿವ್ರತ್ಯವುಳ್ಳವಳೆಂದೂ, ಈಗಲೂ ನನ್ನ ಪ್ರಿಯನಾದ ರಾಮನನ್ನು ಹೊಂದಬೇಕೆಂದು ಆತುರಪಡುತ್ತಿರುವೆನೆಂದೂ, ಧರ್ಮಾತ್ಮನಾದ ಆ ಹನುಮಂತನಿಗೆ, (ಅಥವಾ ನನ್ನ ಪ್ರಿಯನಾದ ರಾಮನಿಗೆ) ತಿಳಿದಿದ್ದ ಪಕ್ಷದಲ್ಲಿ, ನೀನು ಹನುಮಂತನ ವಿಷಯದಲ್ಲಿ ಶೀತಲನಾಗಿರು. ಸತ್ಯಪ್ರತಿಜ್ಞನಾದ ಸುಗ್ರೀವನು, ಈಗ ನನಗೆ ಬಂದೊದಗಿರುವ ಈ ದುಃಖಸಮುದ್ರದಿಂದ ನನ್ನನ್ನು ದಾಟಿಸುವುದು ನಿಜವಾಗಿದ್ದರೆ ನೀನು ಹನುಮಂತನ ವಿಷಯದಲ್ಲಿ ಶೀತಲನಾಗು!" ಎಂದು ಪ್ರಾರ್ಥಿಸಿದಳು. ಇಷ್ಟರಲ್ಲಿಯೇ ಹನುಮಂತನ ಬಾಲದಲ್ಲಿ ಉರಿಯುತ್ತಿದ್ದ ಬೆಂಕಿಯು, ಆತನಿಗೆ ಯಾವ ಅಪಾಯವೂ ಇಲ್ಲದೆ ಮಂಗಳವೇ ಉಂಟಾಗುವುದೆಂದು ಸೂಚಿಸುವಂತೆ, ಪ್ರದಕ್ಷಿಣವಾಗಿ ಸುತ್ತುವ ತೀಕ್ಷ್ಣಜ್ವಾಲೆಗಳೊಡನೆ ಜಾಜ್ವಲ್ಯಮಾನವಾಗಿ ಉರಿಯುತಿತ್ತು. ಮತ್ತು ಹನುಮಂತನಿಗೆ ವಾಯುವು ತಂದೆಯಾದುದರಿಂದ, ಆತನ ಬಾಲದ ಬೆಂಕಿಯನ್ನು ಉಬ್ಬಕ್ಕ ಗಾಳಿಯೂ ಕೂಡ, ಸೀತೆಯ ಮನಸ್ಸಿಗೆ ಸಮಾಧಾನವನ್ನು ಹುಟ್ಟಿಸುತ್ತ ಮಲಯಮಾರುತದಂತೆ ತಂಪಾಗಿ ಬೀಸುತಿತ್ತು. ಇತ್ತಲಾಗಿ ಹನುಮಂತನು ತನ್ನ ಬಾಲವು ಹಾಗೆ ಬೆಂಕಿಯಿಂದುರಿಯುವಾಗಲೂ ತನಗೆ ಸ್ವಲ್ಪವಾದರೂ ಉಷ್ಣವು ತೋರದಿರುವುದನ್ನು ನೋಡಿ,

ತನ್ನಲ್ಲಿ ತಾನು "ಅಹಾ! ನನ್ನ ಬಾಲದಲ್ಲಿ ಇಷ್ಟೊಂದು ಮಹಾಜ್ವಾಲೆಯೊಡನೆ ಈ ಬೆಂಕಿಯು ಉರಿಯುತ್ತಿರುವುದು! ಇಷ್ಟಾದರೂ ನನ್ನನ್ನು ಸುಡದಿರುವುದಲ್ಲಾ! ಇದರಲ್ಲಿ ಪ್ರತ್ಯಕ್ಷವಾಗಿಯೇ ದೊಡ್ಡಜ್ವಾಲೆಯು ಕಾಣುತ್ತಿರುವುದು. ಬಾಧೆಯು ಮಾತ್ರ ನನಗೆ ಸ್ವಲ್ಪವೂ ಕಾಣುವುದಿಲ್ಲ. ಈಗ ನನ್ನ ಬಾಲಕ್ಕೆ ಶೈತ್ಯೋಪಚಾರವನ್ನು ಮಾಡಿದಂತೆಯೇ ತೋರುತ್ತಿರುವುದು! ಇದಕ್ಕೆ ಕಾರಣವೇನು? ಒಂದುವೇಳೆ ಹೀಗಾಗುವುದಕ್ಕೆ ಇದೇ ಕಾರಣವಿರಬಹುದು! ನಾನು ಸಮುದ್ರವನ್ನು ದಾಟುವಾಗಲೂ, ಆ ಮಹಾಸಮುದ್ರದ ನಡುವೆ ಒಂದು ದೊಡ್ಡ ಪರ್ವತವು ಮೇಲೆದ್ದು ಬಂದಂತೆ, ಮಹಾಶ್ಚರ್ಯವನ್ನು ನೋಡಿದೆನಲ್ಲವೆ? ನಡುನೀರಿನಲ್ಲಿ ಪರ್ವತವು ಹುಟ್ಟಬೇಕೆಂದರೆ ಅದು ರಾಮನ ಪ್ರಭಾವವೇ ಹೊರತು ಬೇರೆಯಲ್ಲ! ಅದರಂತೆಯೇ ಈ ಬೆಂಕಿಯು ತಣ್ಣಗಿರುವುದೂ ಅತನ ಪ್ರಭಾವದಿಂದಲೇ ಆಗಿರಬೇಕು. ಇದರಲ್ಲಿ ಸಂದೇಹವಿಲ್ಲ. ಶ್ರೀರಾಮನ ಸಹಾಯಾರ್ಥವಾಗಿ ಸಮುದ್ರವೇ ನಾಗಗಳೇ ಹಾಗೆ ಆತುರಗೊಂಡು ಬಂದಾಗ, ಈ ಅಗ್ನಿಯೂ ರಾಮಕಾರ್ಯಕ್ಕೆ ಅನುಕೂಲನಾಗುವುದೊಂದಾಶ್ಚರ್ಯವೆ? ಅಗ್ನಿಯೂ ಕೂಡ, ಸೀತೆಗೆ ಪೂರ್ಣವಾಗಿರುವ ವಾತ್ಸಲ್ಯವನ್ನೂ, ರಾಮನ ಪ್ರಭಾವವನ್ನೂ, ತನಗೆ ನನ್ನ ತಂದೆಯಲ್ಲಿರುವ ಸ್ನೇಹವನ್ನೂ ಭಾವಿಸಿಯೇ ಈಗ ನನ್ನನ್ನು ಸುಡದೆ ಇರಬಹುದು" ಎಂದು ನಿಶ್ಚಯಿಸಿಕೊಂಡನು. ವಾನರಶ್ರೇಷ್ಠನಾದ ಹನುಮಂತನು ತಿರುಗಿ ಸ್ವಲ್ಪಹೊತ್ತಿನವರೆಗೆ ಮುಂದೆ ಮಾಡಬೇಕಾದ ಕಾರ್ಯವೇನೆಂದು ಆಲೋಚಿಸುತ್ತಿದ್ದು, ಆಗಲೇ ವೇಗದಿಂದ ಮೇಲೆ ಹಾರಿ ಒಂದು ದೊಡ್ಡ ಸಿಂಹನಾದವನ್ನು ಮಾಡಿ, ಅಲ್ಲಿಂದ ಹೊರಟು, ಪರ್ವತಶಿಖರದಂತೆ ಮನೋಹರವಾಗಿಯೂ, ರಾಕ್ಷಸಸಂಚಾರರಹಿತವಾಗಿಯೂ ಇದ್ದ ಆ ಪುರದ್ವಾರಕ್ಕೆ ಬಂದಿಳಿದನು. ಅಲ್ಲಿ ಪರ್ವತಾಕಾರವಾಗಿದ್ದ ತನ್ನ ದೇಹವನ್ನು ಕ್ಷಣಮಾತ್ರದಲ್ಲಿ ಬಹಳ ಸಣ್ಣದಾಗಿ ಮಾಡಿಕೊಂಡು, ತನಗೆ ಕಟ್ಟಿದ್ದ ಕಟ್ಟುಗಳೆಲ್ಲವನ್ನೂ ಸಡಿಲಿಸಿ ಕಳೆದುಬಿಟ್ಟನು. ಆ ಕಟ್ಟುಗಳು ಸಡಿಲಿದೊಡನೆ ತಿರುಗಿ ಪರ್ವತದಂತೆ ದೊಡ್ಡ ರೂಪವನ್ನು ತಾಳಿ, ನಾಲ್ಕುದಿಕ್ಕುಗಳನ್ನೂ ತಿರುಗಿ ನೋಡುತ್ತ, ಹೊರಬಾಗಿಲಲ್ಲಿದ್ದ ಒಂದು ಕಬ್ಬಿಣದ ಅಗುಳಿಯನ್ನು ಕಂಡನು. ಮಹಾಬಾಹುವಾದ ಆ ವಾಯುಪುತ್ರನು, ಆ ಅಗುಳಿಯನ್ನು ಕೈಗೆತ್ತಿಕೊಂಡು, ತನ್ನ ಮೇಲೆ ಕಾವಲಿದ್ದ ಸಮಸ್ತರಾಕ್ಷಸರನ್ನೂ ಅದರಿಂದಲೇ ಬಡಿದು ಕೊಂದನು. ಯುದ್ಧದಲ್ಲಿ ಪ್ರಚಂಡಪರಾಕ್ರಮವುಳ್ಳ ಆ ಹನುಮಂತನು, ಹೀಗೆ ರಾಕ್ಷಸರನ್ನು ಕೊಂದು ತಿರುಗಿ ಲಂಕೆಯ ಕಡೆಗೆ ದೃಷ್ಟಿಯಿಟ್ಟುನೋಡುತ್ತ

ತನ್ನ ಬಾಲದಲ್ಲಿರುವ ಅಗ್ನಿಜ್ವಾಲೆಯೇ ತನ್ನ ದೇಹದ ಸುತ್ತಲೂ ವ್ಯಾಪಿಸಿರಲು, ಸಹಸ್ರ ಕಿರಣಗಳಿಂದ ಪರಿವೃತನಾದ ಸೂರ್ಯನಂತೆ ಪ್ರಕಾಶಿಸುತ್ತಿದ್ದನು.

ಇಲ್ಲಿಗೆ ಏವತ್ತ್ಮೂರನೆಯ ಸರ್ಗವು.

ಹನುಮಂತನು ತನ್ನ ವಾಲಾಗ್ನಿಯಿಂದ ಲಂಕೆಯಲ್ಲಿ
ವಿಭೀಷಣ ಗೃಹವೊಂದನ್ನು ಬಿಟ್ಟು ಉಳಿದ
ರಾಕ್ಷಸಗೃಹಗಳೆಲ್ಲವನ್ನೂ ಸುಟ್ಟುದು.

ಹನುಮಂತನು ಹೀಗೆ ತಾನು ಬಯಸಿದ ಕೋರಿಕೆಗಳೆಲ್ಲವನ್ನೂ ಈಡೇರಿಸಿಕೊಂಡು ತಿರುಗಿ ಲಂಕೆಯನ್ನು ನೋಡಿ ಉತ್ಸಾಹದಿಂದುಬ್ಬಿ ಬಳೆಯುತ್ತ, ತಾನು ಮುಂದೆ ನಡೆಸಬೇಕಾದ ಕಾರ್ಯವೇನೆಂಬುದನ್ನು ಕುರಿತು ತಿರುಗಿ ಆಲೋಚಿಸುವನು. "ಇನ್ನು ಮೇಲೆ ನಾನು ಇಲ್ಲಿ ಮಾಡಬೇಕಾದ ಕಾರ್ಯವೇನು? ಇಲ್ಲಿನ ರಾಕ್ಷಸರನ್ನು ಮತ್ತಷ್ಟು ಗೋಳಾಡಿಸುವುದಕ್ಕೆ ಉಪಾಯವೇನಿರುವುದು? ಅಶೋಕವನವನ್ನು ಮುರಿದುದಾಯಿತು! ಪ್ರಬಲರಾಕ್ಷಸರನೇಕರನ್ನು ಕೊಂದುದಾಯಿತು! ಇಲ್ಲಿನ ಸೇನೆಯಲ್ಲಿ ಸ್ವಲ್ಪಭಾಗವನ್ನೂ ನಾಶಮಾಡಿದುದಾಯಿತು! ಇನ್ನು ಮೇಲೆ ಈ ಪಟ್ಟಣದ ದುರ್ಗಗಳನ್ನು ನಾಶಮಾಡಬೇಕಾದುದೊಂದೇ ಉಳಿದಿರುವುದು. ಇಲ್ಲಿನ ದುರ್ಗಗಳನ್ನೂ ಭೇದಿಸಿಬಿಟ್ಟರೆ ಆಗ ಸಮುದ್ರಲಂಘನವೇ ಮೊದಲಾದ ನನ್ನ ಶ್ರಮವೆಲ್ಲವೂ ಸಫಲವಾಗುವುದು. ಈ ಕಾರ್ಯಕ್ಕಾಗಿಯೂ ನಾನು ಈಗ ಅಷ್ಟಾಗಿ ಶ್ರಮಪಡಬೇಕಾದುದಿಲ್ಲ. ಸ್ವಲ್ಪಪ್ರಯತ್ನದಿಂದಲೇ ಈ ಕಾರ್ಯವನ್ನೂ ಸಾಧಿಸಬಹುದು! ಇದನ್ನೂ ನಡೆಸಿಬಿಟ್ಟರೆ ನಾನು ಇದುವರೆಗೆ ಪಟ್ಟಶ್ರಮವೆಲ್ಲವೂ ಸಾರ್ಥಕವಾಗುವುದು. [1] ಈಗ ನನ್ನ ಬಾಲದಲ್ಲಿ ದೇದೀಪ್ಯಮಾನವಾಗಿ ಉರಿಯುತ್ತಿರುವ ಅಗ್ನಿಯೂಕೂಡ ನನ್ನಲ್ಲಿ ಪ್ರಸನ್ನನಾಗಿ, ನನಗೆ ಸ್ವಲ್ಪವಾದರೂ ಊರಿಯನ್ನು ತೋರಿಸದಂತೆ ತಣ್ಣಗಿರುವನಲ್ಲವೆ? ಇದಕ್ಕೆ ಪ್ರತ್ಯುಪಕಾರರೂಪ

---

1. ಹಿಂದೆ ಹನುಮಂತನು ತನ್ನ ಕಟ್ಟುಗಳನ್ನು ಸಡಿಲಿಸುವುದಕ್ಕಾಗಿ ತನ್ನ ಮೈಯನ್ನು ಸಣ್ಣನಾಗಿಸಿಕೊಂಡಾಗ, ತನ್ನ ಬಾಲಕ್ಕೆ ಸುತ್ತಿದ್ದ ಬಟ್ಟೆಯನ್ನು ಮಾತ್ರ ಮುಂದಿನ ಕಾರ್ಯಕ್ಕಾಗಿ ಜಾಗೆಯೇ ಉಳಿಸಿಕೊಂಡಿದ್ದನೆಂದು ಗ್ರಾಹ್ಯವು.

ವಾಗಿ, ಈ ಅಗ್ನಿಹೋತ್ರನಿಗೆ ಇಲ್ಲಿನ ಗೃಹಗಳನ್ನು ಆಹುತಿಕೊಟ್ಟು ತೃಪ್ತಿಹೊಂದಿಸಬೇಕಾದುದೇ ನ್ಯಾಯವು " ಎಂದು ನಿಶ್ಚಯಿಸಿಕೊಂಡನು. ಹೀಗೆ ನಿಶ್ಚಯಿಸಿದ ಕೂಡಲೇ ಮಿಂಚಿನಿಂದ ಕೂಡಿದ ಮಹಾಮೇಘದಂತೆ, ಉರಿಯುತ್ತಿರುವ ಆ ಬಾಲದೊಡನೆ ಲಂಕಾಪುರದ ಮನೆಗಳಮೇಲೆ ಹಾರಿಬಿಟ್ಟನು. ಹೀಗೆ ಆ ಹನುಮಂತನು ಸ್ವಲ್ಪವೂ ಭಯವಿಲ್ಲದೆ, ಮನೆಯಿಂದ ಮನೆಗೆ ಹಾರಿ, ಅಲ್ಲಲ್ಲಿನ ಗೋಪುರಗಳನ್ನೂ, ಉದ್ಯಾನವನಗಳನ್ನೂ ನೋಡುತ್ತ, ಅಲ್ಲಿನ ಪ್ರತಿಗೃಹಗಳಮೇಲೆಯೂ ಸುತ್ತಿಸುತ್ತಿ ಬರುತ್ತಿದ್ದನು. ವಾಯುಸಮಾನವಾದ ವೇಗವುಳ್ಳವನಾಗಿಯೂ, ಬಲಾಢ್ಯನಾಗಿಯೂ ಇದ್ದ ಆ ಹನುಮಂತನು ಮೊದಲು ಪ್ರಹಸ್ತನ ಮನೆಗೆ ಹಾರಿ ಅದಕ್ಕೆ ಬೆಂಕಿಯಿಟ್ಟನು. ಅಲ್ಲಿಂದ ಮಹಾಪಾರ್ಶ್ವನ ಮನೆಗೆ ಹಾರಿ ಕಾಲಾಗ್ನಿ ಜ್ವಾಲೆಗೆ ಸಮಾನವಾದ ತನ್ನ ಬಾಲದುರಿಯನ್ನು ಅದಕ್ಕೂ ತೋರಿಸಿಬಿಟ್ಟನು. ಅಲ್ಲಿಂದ ಆ ಮಹಾಕಪಿಯು ವಜ್ರದಂಷ್ಟ್ರನ ಮನೆಗೆ ಹಾರಿದನು. ಅಲ್ಲಿಂದ ಶುಕಸಾರಣರೆಂಬ ಮಂತ್ರಿಗಳಿಬ್ಬರ ಮನೆಗೆ ಹಾರಿದನು. ಅಲ್ಲಿಂದ ಇಂದ್ರಜಿತ್ತಿನ ಮನೆಗೆ ಹಾರಿ, ಅದನ್ನೂ ತನ್ನ ಬಾಲಾಗ್ನಿಯಿಂದ ಸುಟ್ಟುಬಿಟ್ಟನು. ಜಂಬುಮಾಲಿಯ ಮತ್ತು ಸುಮಾಲಿಯ ಮನೆಗಳನ್ನೂ ಸುಟ್ಟನು. ಹಾಗೆಯೇ ಕ್ರಮವಾಗಿ, ರಶ್ಮಿಕೇತು, ಸೂರ್ಯಶತ್ರು, ಹ್ರಸ್ವಕರ್ಣ, ದಂಷ್ಟ್ರ, ರೋಮಶರೆಂಬ ರಾಕ್ಷಸರ ಮನೆಗಳೆಲ್ಲವನ್ನೂ, ಸುಡುತ್ತ ಬಂದನು. ಅಲ್ಲಿಂದ ಮುಂದೆ ಯುದ್ಧೋನ್ಮತ್ತನ ಗೃಹವನ್ನೂ, ಮತ್ತನೆಂಬ ರಾಕ್ಷಸನ ಮನೆಯನ್ನೂ, ಧ್ವಜಗ್ರೀವನ ವಾಸಸ್ಥಳವನ್ನೂ, ಭಯಂಕರನಾದ ವಿದ್ಯುಜ್ಜಿಹ್ವನ ನಿವೇಶವನ್ನೂ, ಹಸ್ತಿಮುಖನ ಮನೆಯನ್ನೂ, ಕರಾಲ ಪಿಶಾಚರೆಂಬ ರಾಕ್ಷಸರ ಗೃಹಗಳನ್ನೂ, ಕೋಣಿತಾಕ್ಷನ ನಿವಾಸವನ್ನೂ, ಕುಂಭಕರ್ಣನ ಅರಮನೆಯನ್ನೂ, ಮಕರಾಕ್ಷನ ಗೃಹವನ್ನೂ, ಯಜ್ಞಶತ್ರು, ಬ್ರಹ್ಮಶತ್ರುವೆಂಬ ರಾಕ್ಷಸರ ನಿವಾಸಗಳನ್ನೂ ನರಾಂತಕ, ಕುಂಭ, ನಿಕುಂಭರ ಮನೆಗಳನ್ನೂ, ತನ್ನ ಬಾಲದುರಿಯಿಂದ ಸುಟ್ಟುಬಿಟ್ಟನು. ಹೀಗೆ ಆ ವಾನರೋತ್ತಮನು ಆ ಲಂಕೆಯಲ್ಲಿ ವಿಭೀಷಣನ ಮನೆಯೊಂದನ್ನು ಬಿಟ್ಟು, ಉಳಿದ ಒಬ್ಬೊಬ್ಬ ರಾಕ್ಷಸನ ಮನೆಯನ್ನೂ ಬಿಡದೆ ಕ್ರಮವಾಗಿ ಸುಡುತ್ತ ಬಂದನು. ವೀರ್ಯವಂತನಾದ ಆ ಹನುಮಂತನು ಹೀಗೆ ರಾಕ್ಷಸರ ಮನೆಮನೆಗೂ ಬೆಂಕಿಯಿಟ್ಟ ಮೇಲೆ ರಾಕ್ಷಸೇಂದ್ರನಾದ ರಾವಣನ ಅರಮನೆಯಕಡೆಗೆ ಬಂದನು. ನಾನಾರತ್ನಗಳಿಂದ ಭೂಷಿತವಾಗಿಯೂ, ಮೇರುಮಂದರಪರ್ವತಗಳಂತೆ ಮಹೋನ್ನತವಾಗಿಯೂ, ಸಮಸ್ತವಿಧಗಳಾದ ಮಂಗಳದ್ರವ್ಯಗಳಿಂದ ಶೋಭಿತವಾಗಿಯೂ, ಲಂಕೆಯಲ್ಲಿರುವ ಮನೆಗಳಿಗೆಲ್ಲಾ ಮೇಲಾಗಿಯೂ ಇದ್ದ ಆ ಅರಮನೆಗೂ ತನ್ನ

ಜಾಲದುರಿಯನ್ನು ತೋರಿಸಿ ಅಲ್ಲಿ ಪ್ರಳಯಕಾಲಮೇಘದಂತೆ ದೊಡ್ಡ ಸಿಂಹನಾದವನ್ನು ಮಾಡಿದನು. ಆಗ ವಾಯುದೇವನೂ ಕೂಡ ತನ್ನ ಶತ್ರುವಾದ ರಾವಣನಲ್ಲಿ ಹಗೆತೀರಿಕೊಳ್ಳುವುದಕ್ಕೆ ಇದೇ ತಕ್ಕ ಸಮಯವೆಂದು ತಿಳಿದು ತನ್ನ ಸಖನಾದ ಅಗ್ನಿದೇವನಿಗೆ ಸಹಾಯಕನಾಗಿ ಉದ್ರೇಕಗೊಳಿಸುತ್ತಿರಲು ಆ ಅಗ್ನಿಯು ಪ್ರಳಯಕಾಲಾಗ್ನಿಯಂತೆ ಜ್ವಲಿಸುತ್ತ ಮೇಲೆಮೇಲೆ ವೃದ್ಧಿ ಹೊಂದುತ್ತಿತ್ತು. ವಾಯುವು ಆ ಅಗ್ನಿಯನ್ನು ಅರಮನೆಯ ಸಮಸ್ತಭಾಗಗಳಿಗೂ ವ್ಯಾಪಿಸುವಂತೆ ಮಾಡಿತು. ಬಂಗಾರದ ಕಿಟಕಿಗಳಿಂದಲೂ, ಮುತ್ತಿನ ಕುಸುರಿಗಳಿಂದಲೂ, ರತ್ನಮಯವಾದ ಅಲಂಕಾರದಿಂದಲೂ ಶೋಭಿತಗಳಾದ ಆ ಅರಮನೆಯ ದೊಡ್ಡ ದೊಡ್ಡ ನಿವೇಶನಗಳೆಲ್ಲವೂ ಕ್ಷಣಮಾತ್ರದಲ್ಲಿ ಸುಟ್ಟುಬಿದ್ದುವು. ಹೀಗೆ ವಾಯುವಿನ ಸಹಾಯದಿಂದ ಅಗ್ನಿಯು ಕ್ಷಣಮಾತ್ರದಲ್ಲಿ ಲಂಕೆಯೆಲ್ಲವನ್ನೂ ವ್ಯಾಪಿಸಲು, ಪ್ರಣ್ಯಫಲವು ತೀರಿದಮೇಲೆ ಕೆಳಕ್ಕೆ ಬೀಳುವ ಸಿದ್ಧರ ವಿಮಾನಗಳಂತೆ ಅಲ್ಲಿನ ಪ್ರಾಸಾದಗಳೆಲ್ಲವೂ ಉರುಳುತ್ತಿದ್ದುವು. ಅಲ್ಲಿದ್ದ ರಾಕ್ಷಸರೆಲ್ಲರೂ ತಮ್ಮ ತಮ್ಮ ಮನೆಗಳನ್ನು ರಕ್ಷಿಸಿಕೊಳ್ಳುವ ವಿಷಯದಲ್ಲಿ ನಿರಾಶರಾಗಿ, ಭಯದಿಂದ ದಿಕ್ಕು ದಿಕ್ಕಿಗೆ ಪಲಾಯನವಾಡುತ್ತ "ಅಯ್ಯೋ! ನಿಜವಾಗಿಯೂ ಇವನು ವಾನರನಲ್ಲ! ಸಾಕ್ಷಾದಗ್ನಿಹೋತ್ರನೇ ಈ ಕಪಿರೂಪದಿಂದ ಬಂದು ನಮ್ಮ ಲಂಕೆಯನ್ನು ಹಾಳುಮಾಡುತ್ತಿರುವನು! ಇದರಲ್ಲಿ ಸಂದೇಹವಿಲ್ಲ!" ಎಂದು ನಾನಾ ಕಡೆಗಳಿಂದಲೂ ಅರಚಿಕೊಳ್ಳುತ್ತಿದ್ದರು. ಈ ಗದ್ದಲವು ನಾಲ್ಕುದಿಕ್ಕುಗಳಿಗೂ ವ್ಯಾಪಿಸಿತು. ಉಪ್ಪರಿಗೆಗಳಮೇಲೆ ನಿಂತಿದ್ದ ಕೆಲವು ರಾಕ್ಷಸಸ್ತ್ರೀಯರು ಪ್ರಾಣಭಯದಿಂದ ತಮ್ಮ ತಮ್ಮ [1] ಶಿಶುಗಳನ್ನೆತ್ತಿಕೊಂಡು ರೋದನಮಾಡುತ್ತ ತಲೆಯನ್ನು ಬಿಚ್ಚಿಕೊಂಡು, ಮೇಘದಿಂದಿಳಿಯುವ ಮಿಂಚುಗಳಂತೆ ಬೆಂಕಿಯಿಂದಾವೃತವಾದ ಆ ಉಪ್ಪರಿಗೆಗಳಿಂದ, ಕೆಳಕ್ಕೆ ಬೀಳುತಿದ್ದರು. ಅಲ್ಲಿ ಹನುಮಂತನು ವಜ್ರ, ವೈಡೂರ್ಯ, ಮುತ್ತು, ಹವಳ, ಬೆಳ್ಳಿ ಮೊದಲಾದ ನಾನಾರತ್ನಗಳಿಂದ ತುಂಬಿದ ಆ ರಾಜಗೃಹಗಳಿಂದ, ಸ್ವರ್ಣಾದಿವಿಚಿತ್ರಲೋಹಗಳೆಲ್ಲವೂ ಅಗ್ನಿಜ್ವಾಲೆಯಿಂದ ಕರಗಿ ಬೀಳುವುದನ್ನು ನೋಡುತಿದ್ದನು. ಆಹಾ! ಆಗಿನ ಆಶ್ಚರ್ಯವನ್ನು ಕೇಳಬೇಕೆ? ಹುಲ್ಲು, ಸೌದೆ, ಮೊದಲಾದ ಎಷ್ಟೆಷ್ಟಾಹುತಿಗಳು ಸಿಕ್ಕಿದರೂ

1. ಪೂರ್ವದಲ್ಲಿ ರುದ್ರನು ಸುಕೇಶವಂಶದಲ್ಲಿ ಹುಟ್ಟಿದವರಿಗೆ, ಹುಟ್ಟಿದಾಗಲೇ ತಾಯಿಯು ಹಾಗಿರುವಂತೆ ವರವನ್ನು ಕೊಟ್ಟಿರುವಾಗ, ಇಲ್ಲಿ ರಾಕ್ಷಸಿಯರು ಮಕ್ಕಳನ್ನೆತ್ತಿಕೊಂಡು ಬಂದರೆಂಬುದು ಹೇಗೆ? ಎಂದರೆ ಸುಕೇಶವಂಶದವರಿಗೆ ಮಾತ್ರವೇ ಆ ವರವಿದ್ದರೂ, ಆ ವರವಿಲ್ಲದ ಬೇರೆ ಕುಲದ ರಾಕ್ಷಸರೂ ಲಂಕೆಯಲ್ಲಿದ್ದರೆಂದು ಗ್ರಾಹ್ಯವು.

ಅಗ್ನಿಗೆ ತೃಪ್ತಿಯಿಲ್ಲ! ಆ ಅಗ್ನಿಯು ಎಷ್ಟೆಷ್ಟು ಮನೆಗಳನ್ನು ಸುಟ್ಟರೂ ಹನುಮಂತನಿಗೆ ತೃಪ್ತಿಯಿಲ್ಲ! ಎಷ್ಟೆಷ್ಟುಮಂದಿ ರಾಕ್ಷಸರು ಹತರಾಗಿ ಬಿದ್ದರೂ ಆಲ್ಲಿನ ಭೂಮಿಗೆ ತೃಪ್ತಿಯಿಂಲಿಲ್ಲ! ಆಲ್ಲಿನ ಅಗ್ನಿಜ್ವಾಲೆಗಳಾದರೋ, ಕೆಲವು ಕಡೆಗಳಲ್ಲಿ ಹೂಬಿಟ್ಟ ಮುತ್ತುಗದ ಮರಗಳಂತೆಯೂ, ಕೆಲವು ಕಡೆಯಲ್ಲಿ ಕುಂಕುಮದಂತೆಯೂ ಬಗೆಬಗೆಯ ಬಣ್ಣಗಳಿಂದ ಪ್ರಕಾಶಿಸುತ್ತಿದ್ದುವು. ವೇಗಶಾಲಿಯಾಗಿಯೂ ಮಹಾತ್ಮನಾಗಿಯೂ ಇರುವ ಹನುಮಂತನು ರುದ್ರನು ತ್ರಿಪುರವನ್ನು ದಹಿಸಿದಂತೆ ಆ ಲಂಕಾನಗರಿಯೆಲ್ಲವನ್ನೂ ಸುಟ್ಟು ಬೂದಿಮಾಡಿದನು. ಹನುಮಂತನು ಮಹಾವೇಗದಿಂದ ಆಯಾ ಮನೆಗಳಲ್ಲಿಟ್ಟ ಅಗ್ನಿಜ್ವಾಲೆಯ ಸಮೂಹವು, ಮುಂದೆ ಮುಂದೆ ವ್ಯಾಪಿಸಿ, ಕೊನೆಗೆ ಆ ಲಂಕಾನಗರಿಗೆ ಮುಖ್ಯಾಧಾರಭೂತವಾದ ತ್ರಿಕೂಟಪರ್ವತದ ಶಿಖರವನ್ನೂ ಮುಟ್ಟಿ, ಅಲ್ಲಿ ಮಹಾಜ್ವಾಲೆಯಿಂದ ಉರಿಯಲಾರಂಭಿಸಿತು. ಹೀಗೆ ಹನುಮಂತನ ವಾಲಾಗ್ನಿಯು, ವಾಯುಸಹಾಯದಿಂದ ಪ್ರಳಯಕಾಲಾಗ್ನಿಯಂತೆ ವ್ಯಾಪಿಸಿ ಆಕಾಶವನ್ನೂ, ಮುಟ್ಟುವಂತಾಯಿತು. ಮತ್ತು ಆ ಅಗ್ನಿಯು ಸ್ವಲ್ಪವಾದರೂ ಹೊಗೆಯಿಲ್ಲದ ಜ್ವಾಲೆಯಿಂದ, ರಾಕ್ಷಸರ ಮನೆಮನೆಗಳನ್ನೂ ವ್ಯಾಪಿಸಿ ಆಲ್ಲಿನ ರಾಕ್ಷಸರ ದೇಹದ ಕೊಬ್ಬೆಂಬ ಆಜ್ಯಾಹುತಿಯಿಂದ, ಮೇಲೆಮೇಲೆ ಉರಿಯನ್ನು ಕಾರುತ್ತ ವೃದ್ಧಿಹೊಂದಿತು! ಹೀಗೆ ಕೋಟಿ ಸೂರ್ಯಸಮಾನವಾದ ತೇಜಸ್ಸಿನಿಂದ ದೇದೀಪ್ಯಮಾನವಾದ ಆ ಅಗ್ನಿಯು, ಲಂಕಾಪುರವೆಲ್ಲವನ್ನೂ ಸಂಪೂರ್ಣವಾಗಿ ವ್ಯಾಪಿಸಿ, ಸಿಡಿಲಿನಂತೆ ಪ್ರಬಲವಾದ ಛಟಛಟತ್ಕಾರಗಳಿಂದ ಬ್ರಹ್ಮಾಂಡವನ್ನೇ ಭೇದಿಸುವಂತೆ ತೋರಿತು. ಮತ್ತು ಆ ಅಗ್ನಿಯು ನೋಡುವವರ ಕಣ್ಣುಗಳನ್ನು ಕೋರೈಸುವಂತೆ ಕ್ರೂರವಾದ ತೇಜಸ್ಸನ್ನು ಹರಡುತ್ತ, ಮುತ್ತುಗದ ಹೂಗಳಂತಿರುವ ಜ್ವಾಲೆಗಳಿಂದ ಆಕಾಶದ ವರೆಗೂ ವ್ಯಾಪಿಸಿತು. ಮತ್ತು ಆ ಲ್ಲ ಲ್ಲಿ ಉರಿಯಡಗಿ ಶಾಂತವಾದ ಮೇಲೆ ಹುಟ್ಟಿದ ಕಪ್ಪಾದ ಹೊಗೆಯು ಮೇಲೆ ವ್ಯಾಪಿಸಿ, ಮೇಘಗಳನ್ನೂ ಮರೆಸುತ್ತಿರಲು, ಆ ಮೇಘಗಳೆಲ್ಲವೂ ಕನ್ನೈದಿಲೆಯ ಕಾಂತಿಯಿಂದ ಶೋಭಿಸುತ್ತಿದ್ದುವು. ಆ ಲಂಕೆಯಲ್ಲಿ ಜ್ಞಾನಾಧಿಕರಾದ ಕೆಲವು ರಾಕ್ಷಸರು ಗುಂಪುಗುಂಪಾಗಿ ಸೇರಿ, ಆಲ್ಲಿನ ಪ್ರಾಣಿಗಳೂ, ಗೃಹಗಳೂ, ವೃಕ್ಷಗಳೂ, ಕ್ಷಣಮಾತ್ರದಲ್ಲಿ ದಗ್ಧವಾಗುತ್ತಿರುವುದನ್ನು ನೋಡಿ, ಒಬ್ಬರಿಗೊಬ್ಬರು "ಆಹಾ! ಈ ಮಹಾಕಪಿ ಯಾವನೋ ಕಾಣೆವಲ್ಲಾ! ವಜ್ರದಿಂದ ವೃತ್ರನನ್ನು ಕೊಂದ ದೇವೇಂದ್ರನೇ ಹೀಗೆ ಬಂದಿರಬಹುದೆ! ಸಾಕ್ಷಾದ್ಯಮನೇ ಇವನಾಗಿರಬಹುದೆ! ಅಥವಾ ಇವನು ವರುಣನೋ! ವಾಯುವೋ! ರುದ್ರನೋ! ಅಗ್ನಿಯೋ! ಸೂರ್ಯನೋ! ಕುಬೇರನೋ! ಚಂದ್ರನೋ!

ತಿಳಿಯಲಿಲ್ಲ. ಇದು ಕಪಿಯೆಂಬುದೇನೋ ಸುಳ್ಳು! ಇವನೇ ಕಾಲಯಮನಾಗಿರಬಹುದು! ಸಮಸ್ತಲೋಕಗಳಿಗೂ ತಾತನಾಗಿ, ಸಮಸ್ತಜಗತ್ತನ್ನೂ ಧರಿಸತಕ್ಕ ಚತುರ್ಮುಖ ಬ್ರಹ್ಮನೇ ಒಂದುವೇಳೆ ಇಲ್ಲಿನ ರಾಕ್ಷಸರೆಲ್ಲರನ್ನೂ ನಿರ್ಮೂಲಮಾಡಬೇಕೆಂದು ಸಂಕಲ್ಪಿಸಿದುದಕ್ಕಾಗಿ, ಅತನ ಕೋಪವೇ ಹೀಗೆ ಕಪಿರೂಪದಿಂದ ಇಲ್ಲಿಗೆ ಬಂದಿರಬಹುದೆ! ಅಥವಾ ಹೀಗೆಂದು ನಿರ್ಣಯಿಸಲಸಾಧ್ಯವಾಗಿಯೂ, ಇಂದ್ರಿಯಗಳಿಗೆ ಅಗೋಚರವಾಗಿಯೂ, ಮನಸ್ಸಿನಿಂದಲೂ ಚಿಂತಿಸುವುದಕ್ಕೆ ಸಾಧ್ಯವಲ್ಲದುದಾಗಿಯೂ, ಅದ್ವಿತೀಯವಾಗಿಯೂ ಪೂಜ್ಯವಾಗಿಯೂ ಇರುವ ಸರ್ವೋತ್ತಮವಾದ ವೈಷ್ಣವತೇಜಸ್ಸೇ ಹೀಗೆ ರಾಕ್ಷಸರನ್ನು ನಾಶಮಾಡುವುದಕ್ಕಾಗಿ, ಎಣೆಯಿಲ್ಲದ ತನ್ನ ಅದ್ಭುತಶಕ್ತಿಯಿಂದ ಹೀಗೆ ಕಪಿರೂಪವನ್ನು ಧರಿಸಿ ಇಲ್ಲಿಗೆ ಬಂದಿರಬಹುದೆ!" ಎಂದು ನಾನಾವಿಧಗಳಲ್ಲಿ ಮಾತಾಡಿಕೊಳ್ಳುತ್ತಿದ್ದರು. ಆ ಲಂಕೆಯಲ್ಲಿದ್ದ ರಾಕ್ಷಸವೀರರೂ, ರಥಗಜತುರಗಾದಿ ಸೇನಾಸಮೂಹಗಳೂ, ಪಕ್ಷಿಗಳೂ, ಮೃಗಗಳೂ, ಮರಗಳೂ, ಹೀಗೆ ಅಕಸ್ಮಾತ್ತಾಗಿ ಸುಟ್ಟುಹೋಗುತ್ತಿರಲು, ಅಲ್ಲಲ್ಲಿ ಪ್ರಾಣಿಗಳ ಆಕ್ರೋಶಧ್ವನಿಗಳು ನಾನಾಕಡೆಯಿಂದಲೂ ಹೊರಟು, ಆ ಪಟ್ಟಣವೆಲ್ಲವೂ ರೋದನಧ್ವನಿಯಿಂದಲೇ ತುಂಬಿಹೋಯಿತು. ಅಲ್ಲಿ ಬೆಂಕಿಗೆ ಸಿಕ್ಕಿ ರಾಕ್ಷಸರು ಸತ್ತುಬೀಳುವಾಗ "ಹಾ! ತಾತಾ! ಹಾ ಕಂದಾ! ಅಯ್ಯೋ ನನ್ನ ಪ್ರಾಣನಾಥನೆ! ಹಾ ನನ್ನ ಪ್ರಿಯಮಿತ್ರನೆ! ಹಾ ಪ್ರಿಯನೆ! ಹಾ! ನನ್ನ ಪುಣ್ಯಫಲದಿಂದ ಸಂಪಾದಿಸಿದ ಪ್ರಿಯಜೀವವೆ! ಅಯ್ಯೋ ಕೆಟ್ಟೆನು" ಎಂದು ಒಬ್ಬೊಬ್ಬರೂ ತಮ್ಮ ತಮ್ಮ ತಂದೆ ಮೊದಲಾದ ಪ್ರಿಯಬಂಧುಗಳನ್ನು ಕೂಗಿಕೊಂಡು ನಾನಾವಿಧದಿಂದ ಮೊರೆಯಿಡುತ್ತಿರಲು, ಕಿವಿಯಿಂದ ಕೇಳುವುದಕ್ಕೂ ಭಯಂಕರವಾದ ಆ ಆಕ್ರಂದನಧ್ವನಿಯೇ ಎಲ್ಲೆಲ್ಲಿಯೂ ವ್ಯಾಪಿಸಿತ್ತು. ಹೀಗೆ ಹನುಮಂತನ ಕೋಪೋದ್ರೇಕದಿಂದ ಆ ಲಂಕೆಯೆಲ್ಲವೂ ಅಗ್ನಿಜ್ವಾಲೆಯಿಂದಾವೃತವಾಗಿ, ಅಲ್ಲಿನ ವೀರರೆಲ್ಲರೂ ಸತ್ತು ಅಲ್ಲಿನ ರಾಕ್ಷಸಭಟರೂ ನಿರ್ನಾಮವಾಗುತ್ತಿರಲು, ಆ ಪಟ್ಟಣವು ಅಕಸ್ಮಾತ್ತಾಗಿ ಮಹಾತ್ಮರ ಶಾಪದಿಂದ ಹತವಾದಂತೆ ಕಾಣಿಸಿತು. ಭಯಸಂಭ್ರಮಗಳಿಂದ ದುಃಖಿಸಿ ತತ್ತಳಿಸುವ ರಾಕ್ಷಸರ ಗದ್ದಲದಿಂದಲೂ, ಮಹಾಜ್ವಾಲೆಯಿಂದುರಿಯುವ ಬೆಂಕಿಯಿಂದಲೂ, ರೂಪುಗೆಟ್ಟ ಆ ಲಂಕೆಯನ್ನು ನೋಡಿದಾಗ, ಹನುಮಂತನಿಗೆ, ಪ್ರಳಯಕಾಲದಲ್ಲಿ ಪರಬ್ರಹ್ಮನ ಕೋಪದಿಂದ ಹತವಾಗಿ ಸುಟ್ಟುರಿಯುವ ಭೂಮಿಯೋ ಎಂಬಂತೆ ತೋರುತ್ತಿತ್ತು. ಹೀಗೆ ವಾಯುಪುತ್ರನಾದ ಹನುಮಂತನು, ವೃಕ್ಷಗಳಿಂದಲೂ ನವರತ್ನಗಳಿಂದಲೂ ಪೂರ್ಣವಾದ ಅಶೋಕವನವನ್ನು ಮುರಿದು, ಯುದ್ಧದಲ್ಲಿ

ಬಹಳಮಂದಿ ರಾಕ್ಷಸರನ್ನೂ ಕೊಂದು, ಉತ್ತಮಗೃಹಗಳ ಸಾಲಿನಿಂದ ಶೋಭಿತವಾದ ಲಂಕೆಯನ್ನೂ ತನ್ನ ವಾಲಾಗ್ನಿಯಿಂದ ದಹಿಸಿದಮೇಲೆ ಅವನ ಕೋಪವಡಗಿತು. ಹೀಗೆ ಶಾಂತಚಿತ್ತನಾದ ಆ ವಾನರ ರಾಜಸಿಂಹನು ತನ್ನ ಬಾಲದಲ್ಲಿ ಧಗಧಗಿಸಿ ಉರಿಯುತ್ತಿರುವ ಬೆಂಕಿಯೊಡನೆಯೇ, ವಿಚಿತ್ರವಾದ ಅಲ್ಲಿನ ಶಿಕೂಟ ಶಿಖರದ ತುದಿಯನ್ನೇರಿ ಕುಳಿತಿರಲು, ಸಹಸ್ರಕಿರಣಗಳೊಡನೆ ಕೂಡಿದ ಸೂರ್ಯನಂತೆ ಕಾಣುತಿದ್ದನು. ಮಹಾತ್ಮನಾದ ಹನುಮಂತನು, ಹೀಗೆ ಅನೇಕ ರಾಕ್ಷಸರನ್ನು ಕೊಂದು, ವೃಕ್ಷಗಳಿಂದ ತುಂಬಿದ ಅಶೋಕವನವನ್ನೂ ಭಂಗಿಸಿ ರಾಕ್ಷಸರ ಮನೆಗಳಿಗೂ ಬೆಂಕಿಯಿಟ್ಟಮೇಲೆ, ಅವನಿಗೆ ರಾಮನ ಸ್ಮರಣೆಯು ಬಂದು, ಆಗಲೇ ಅವನಬಳಿಗೆ ಹಿಂತಿರುಗಬೇಕೆಂಬ ಆತುರವೂ ಹುಟ್ಟಿತು. ಮಹಾತ್ಮನಾಗಿಯೂ, ಧೈರ್ಯಶಾಲಿಯಾಗಿಯೂ ಇರುವ ಆ ಹನುಮಂತನು, ರಾಕ್ಷಸರನ್ನು ಕೊಂದು ದಕ್ಕಾಗಿ ತಾನು ಕೃತಾರ್ಥನೆಂದೆಣಿಸುತ್ತ, ಆಗಲೇ ತನ್ನ ಮನಸ್ಸಿನಿಂದ ತ್ರಿಲೋಕನಾಥನಾದ ಶ್ರೀರಾಮನ ಪಾದಮೂಲವನ್ನು ಸೇರಿಬಿಟ್ಟನು. ವಾನರ ವೀರರಲ್ಲಿ ಪ್ರಮುಖನಾಗಿಯೂ, ಮಹಾಬಲನಾಗಿಯೂ, ವಾಯುದೇವನಿಗೆಣೆಯಾದ ವೇಗವುಳ್ಳವನಾಗಿಯೂ, ಬಹಳಧೀವಂತನಾಗಿಯೂ ಇರುವ, ಆ ವಾಯುಕುಮಾರನನ್ನು ಸಮಸ್ತ ದೇವಗಣಗಳೂ ಸಂತೋಷದಿಂದ ಸ್ತುತಿಸುತ್ತಿದ್ದುವು. ಅಶೋಕವನಭಂಗದಿಂದಲೂ, ರಾಕ್ಷಸರ ಸಂಹಾರದಿಂದಲೂ, ಲಂಕಾದಹನದಿಂದಲೂ, ಆ ಹನುಮಂತನ ತೇಜಸ್ಸು ಮತ್ತಷ್ಟು ವಿಶೇಷವಾಗಿ ಪ್ರಕಾಶಹೊಂದಿತು. ಆ ಮಹಾಕಪಿಯು ನಡೆಸಿದ ಲಂಕಾದಹನವನ್ನು ನೋಡಿ ದೇವತೆಗಳೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ, ಮಹರ್ಷಿಗಳೂ ಪರಮಾಶ್ಚರ್ಯವನ್ನು ಹೊಂದಿದರು. ಅಲ್ಲಿದ್ದ ಸಮಸ್ತಭೂತಗಳೂ ಆಗ ವಾನರೋತ್ತಮನಾದ ಆ ಹನುಮಂತನನ್ನೇ ಪ್ರಳಯಕಾಲಾಗ್ನಿಯೆಂದೆಣಿಸಿ ಭಯದಿಂದ ನಡುಗುತಿದ್ದುವು. ದೇವತೆಗಳೂ ಮಹರ್ಷಿಗಳೂ, ಗಂಧರ್ವರೂ, ವಿದ್ಯಾಧರರೂ, ಯಕ್ಷರೂ, ನಾಗರೂ ಇತರ ಸಮಸ್ತಭೂತಗಳೂ ಆ ಹನುಮಂತನನ್ನು ಎಣೆಯಿಲ್ಲದ ಪ್ರೀತಿಯಿಂದ ನೋಡುತ್ತಿದ್ದರು.

ಇಲ್ಲಿಗೆ ಐವತ್ತನಾಲ್ಕನೆಯ ಸರ್ಗವು.

ತಿಳಿಯಲಿಲ್ಲ. ಇದು ಕಪಿಯೆಂಬುದೇನೋ ಸುಳ್ಳು! ಇವನೇ ಕಾಲಯಮನಾಗಿರ ಬಹುದು! ಸಮಸ್ತಲೋಕಗಳಿಗೂ ತಾತನಾಗಿ, ಸಮಸ್ತಜಗತ್ತನ್ನೂ ಭರಿಸ ತಕ್ಕ ಚತುರ್ಮುಖ ಬ್ರಹ್ಮನೇ ಒಂದುವೇಳೆ ಇಲ್ಲಿನ ರಾಕ್ಷಸರೆಲ್ಲರನ್ನೂ ನಿರ್ಮೂಲ ಮಾಡಬೇಕೆಂದು ಸಂಕಲ್ಪಿಸಿದುದಕ್ಕಾಗಿ, ಅತನ ಕೋಪವೇ ಹೀಗೆ ಕಪಿರೂಪ ದಿಂದ ಇಲ್ಲಿಗೆ ಬಂದಿರಬಹುದೆ! ಅಥವಾ ಹೀಗೆಂದು ನಿರ್ಣಯಿಸಲಸಾಧ್ಯವಾಗಿಯೂ, ಇಂದ್ರಿಯಗಳಿಗೆ ಅಗೋಚರವಾಗಿಯೂ, ಮನಸ್ಸಿನಿಂದಲೂ ಚಿಂತಿಸುವುದಕ್ಕೆ ಸಾಧ್ಯವಲ್ಲದುದಾಗಿಯೂ, ಅದ್ವಿತೀಯವಾಗಿಯೂ ಪೂಜ್ಯವಾಗಿಯೂ ಇರುವ ಸರ್ವೋತ್ತಮವಾದ ವೈಷ್ಣವತೇಜಸ್ಸೇ ಹೀಗೆ ರಾಕ್ಷಸರನ್ನು ನಾಶಮಾಡುವು ದಕ್ಕಾಗಿ, ಎಣೆಯಿಲ್ಲದ ತನ್ನ ಅದ್ಭುತಶಕ್ತಿಯಿಂದ ಹೀಗೆ ಕಪಿರೂಪವನ್ನು ಧರಿಸಿ ಇಲ್ಲಿಗೆ ಬಂದಿರಬಹುದೆ!" ಎಂದು ನಾನಾವಿಧಗಳಲ್ಲಿ ಮಾತಾಡಿಕೊಳ್ಳು ತ್ತಿದ್ದರು. ಆ ಲಂಕೆಯಲ್ಲಿದ್ದ ರಾಕ್ಷಸವೀರರೂ, ರಥಗಜತುರಗಾದಿ ಸೇನಾಸಮೂಹ ಗಳೂ, ಪಕ್ಷಿಗಳೂ, ಮೃಗಗಳೂ, ಮರಗಳೂ, ಹೀಗೆ ಅಕಸ್ಮಾತ್ತಾಗಿ ಸುಟ್ಟು ಹೋಗುತ್ತಿರಲು, ಅಲ್ಲಲ್ಲಿ ಪ್ರಾಣಿಗಳ ಆಕ್ರೋಶಧ್ವನಿಗಳು ನಾನಾಕಡೆಯಿಂದಲೂ ಹೊರಟು, ಆ ಪಟ್ಟಣವೆಲ್ಲವೂ ರೋದನಧ್ವನಿಯಿಂದಲೇ ತುಂಬಿಹೋಯಿತು. ಅಲ್ಲಿ ಬೆಂಕಿಗೆ ಸಿಕ್ಕಿ ರಾಕ್ಷಸರು ಸಾಯುತ್ತಿರುವಾಗ "ಹಾ! ತಾತಾ! ಹಾ ಕಂದಾ! ಅಯ್ಯೋ ನನ್ನ ಪ್ರಾಣನಾಥನೆ! ಹಾ ನನ್ನ ಪ್ರಿಯಮಿತ್ರನೆ! ಹಾ ಪ್ರಿಯನೆ! ಹಾ! ನನ್ನ ಪುಣ್ಯಫಲದಿಂದ ಸಂಪಾದಿಸಿದ ಪ್ರಿಯಜೀವವೆ! ಅಯ್ಯೋ ಕೆಟ್ಟೆನು" ಎಂದು ಒಬ್ಬೊಬ್ಬರೂ ತಮ್ಮ ತಮ್ಮ ತಂದೆ ಮೊದಲಾದ ಪ್ರಿಯಬಂಧುಗಳನ್ನು ಕೂಗಿಕೂಗಿ ನಾನಾವಿಧದಿಂದ ಮೊರೆಯಿಡುತ್ತಿರಲು, ಕಿವಿಯಿಂದ ಕೇಳುವುದಕ್ಕೂ ಭಯಂಕರವಾದ ಆ ಆಕ್ರಂದನಧ್ವನಿಯೇ ಎಲ್ಲೆಲ್ಲಿಯೂ ವ್ಯಾಪಿಸಿತ್ತು. ಹೀಗೆ ಹನುಮಂತನ ಕೋಪೋದ್ರೇಕದಿಂದ ಆ ಲಂಕೆಯೆಲ್ಲವೂ ಅಗ್ನಿಜ್ವಾಲೆಯಿಂದಾ ವೃತವಾಗಿ, ಅಲ್ಲಿನ ವೀರರೆಲ್ಲರೂ ಸತ್ತು ಅಲ್ಲಿನ ರಾಕ್ಷಸಭಟರೂ ನಿರ್ನಾಮ ವಾಗುತ್ತಿರಲು, ಆ ಪಟ್ಟಣವು ಅಕಸ್ಮಾತ್ತಾಗಿ ಮಹಾತ್ಮರ ಶಾಪದಿಂದ ಹತವಾ ದಂತೆ ಕಾಣಿಸಿತು. ಭಯಸಂಭ್ರಮಗಳಿಂದ ದಿಕ್ಕಿಪಿಸಿ ತತ್ತಳಿಸುವ ರಾಕ್ಷಸರ ಗದ್ದಲದಿಂದಲೂ, ಮಹಾಜ್ವಾಲೆಯಿಂದುರಿಯುವ ಬೆಂಕಿಯಿಂದಲೂ, ರೂಪುಗೆಟ್ಟ ಆ ಲಂಕೆಯನ್ನು ನೋಡಿದಾಗ, ಹನುಮಂತನಿಗೆ, ಪ್ರಳಯಕಾಲದಲ್ಲಿ ಪರಬ್ರಹ್ಮನ ಕೋಪದಿಂದ ಹತವಾಗಿ ಸುಟ್ಟುರಿಯುವ ಭೂಮಿಯೋ ಎಂಬಂತೆ ತೋರುತ್ತಿತ್ತು. ಹೀಗೆ ವಾಯುಪುತ್ರನಾದ ಹನುಮಂತನು, ವೃಕ್ಷಗಳಿಂದಲೂ ನವರತ್ನಗಳಿಂದಲೂ ಪೂರ್ಣವಾದ ಅಶೋಕವನವನ್ನು ಮುರಿದು, ಯುದ್ಧದಲ್ಲಿ

ಬಹಳಮಂದಿ ರಾಕ್ಷಸರನ್ನೂ ಕೊಂದು, ಉತ್ತಮಗೃಹಗಳ ಸಾಲಿನಿಂದ ಶೋಭಿತವಾದ ಲಂಕೆಯನ್ನೂ ತನ್ನ ವಾಲಾಗ್ನಿಯಿಂದ ದಹಿಸಿದಮೇಲೆ ಅವನ ಕೋಪವಡಗಿತು. ಹೀಗೆ ಶಾಂತಚಿತ್ತನಾದ ಆ ವಾನರ ರಾಜಸಿಂಹನು ತನ್ನ ಬಾಲದಲ್ಲಿ ಧಗಧಗಿಸಿ ಉರಿಯುತ್ತಿರುವ ಬೆಂಕಿಯೊಡನೆಯೇ, ವಿಚಿತ್ರವಾದ ಅಲ್ಲಿನ ತ್ರಿಕೂಟ ಶಿಖರದ ತುದಿಯನ್ನೇರಿ ಕುಳಿತಿರಲು, ಸಹಸ್ರಕಿರಣಗಳೊಡನೆ ಕೂಡಿದ ಸೂರ್ಯನಂತೆ ಕಾಣುತಿದ್ದನು. ಮಹಾತ್ಮನಾದ ಹನುಮಂತನು, ಹೀಗೆ ಅನೇಕ ರಾಕ್ಷಸರನ್ನು ಕೊಂದು, ವೃಕ್ಷಗಳಿಂದ ತುಂಬಿದ ಅಶೋಕವನವನ್ನೂ ಭಂಗಿಸಿ ರಾಕ್ಷಸರ ಮನೆಗಳಿಗೂ ಬೆಂಕಿಯಿಟ್ಟಮೇಲೆ, ಅವನಿಗೆ ರಾಮನ ಸ್ಮರಣೆಯು ಬಂದು, ಆಗಲೇ ಅವನಬಳಿಗೆ ಹಿಂತಿರುಗಬೇಕೆಂಬ ಆತುರವೂ ಹುಟ್ಟಿತು. ಮಹಾತ್ಮನಾಗಿಯೂ, ಧೈರ್ಯಶಾಲಿಯಾಗಿಯೂ ಇರುವ ಆ ಹನುಮಂತನು, ರಾಕ್ಷಸರನ್ನು ಕೊಂದು ದಕ್ಕಾಗಿ ತಾನು ಕೃತಾರ್ಥನೆಂದೆಣಿಸುತ್ತ, ಅಗಲೇ ತನ್ನ ಮನಸ್ಸಿನಿಂದ ತ್ರಿಲೋಕನಾಥನಾದ ಶ್ರೀರಾಮನ ಪಾದಮೂಲವನ್ನು ಸೇರಿಬಿಟ್ಟನು. ವಾನರ ವೀರರಲ್ಲಿ ಪ್ರಮುಖನಾಗಿಯೂ, ಮಹಾಬಲನಾಗಿಯೂ, ವಾಯುದೇವನಿಗೆಣೆಯಾದ ವೇಗವುಳ್ಳವನಾಗಿಯೂ, ಬಹಳಧೀವಂತನಾಗಿಯೂ ಇರುವ, ಆ ವಾಯುಕುಮಾರನನ್ನು ಸಮಸ್ತ ದೇವಗಣಗಳೂ ಸಂತೋಷದಿಂದ ಸ್ತುತಿಸುತ್ತಿದ್ದುವು. ಅಶೋಕವನಭಂಗದಿಂದಲೂ, ರಾಕ್ಷಸರ ಸಂಹಾರದಿಂದಲೂ, ಲಂಕಾದಹನದಿಂದಲೂ, ಆ ಹನುಮಂತನ ತೇಜಸ್ಸು ಮತ್ತಷ್ಟು ವಿಶೇಷವಾಗಿ ಪ್ರಕಾಶಹೊಂದಿತು. ಆ ಮಹಾಕಪಿಯು ನಡೆಸಿದ ಲಂಕಾದಹನವನ್ನು ನೋಡಿ ದೇವತೆಗಳೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ, ಮಹರ್ಷಿಗಳೂ ಪರಮಾಶ್ಚರ್ಯವನ್ನು ಹೊಂದಿದರು. ಅಲ್ಲಿದ್ದ ಸಮಸ್ತಭೂತಗಳೂ ಆಗ ವಾನರೋತ್ತಮನಾದ ಆ ಹನುಮಂತನನ್ನೇ ಪ್ರಳಯಕಾಲಾಗ್ನಿಯೆಂದೆಣಿಸಿ ಭಯದಿಂದ ನಡುಗುತಿದ್ದುವು. ದೇವತೆಗಳೂ ಮಹರ್ಷಿಗಳೂ, ಗಂಧರ್ವರೂ, ವಿದ್ಯಾಧರರೂ, ಯಕ್ಷರೂ, ನಾಗರೂ ಇತರ ಸಮಸ್ತಭೂತಗಳೂ ಆ ಹನುಮಂತನನ್ನು ಎಣೆಯಿಲ್ಲದ ಪ್ರೀತಿಯಿಂದ ನೋಡುತ್ತಿದ್ದರು.

ಇಲ್ಲಿಗೆ ಐವತ್ತನಾಲ್ಕನೆಯ ಸರ್ಗವು.

ಹನುಮಂತನು ಸಮುದ್ರದಲ್ಲಿ ತನ್ನ ಬಾಲವನ್ನದ್ದಿ ಬೆಂಕಿಯನ್ನಾರಿಸಿದ ಮೇಲೆ, ಅವನಿಗೆ ಸೀತೆಯ ಸ್ಮರಣವು ಬಂದು, ಸೀತೆಯೇನಾದಳೋ ಎಂದು ಭಯದಿಂದ ಚಿಂತಿಸಿದುದು. ಆಮೇಲೆ ಚಾರಣರ ವಾಕ್ಯದಿಂದ ಅವಳ ಕ್ಷೇಮವನ್ನು ತಿಳಿದು, ಆಕೆಯನ್ನು ತಿರುಗಿ ನೋಡಿಬಂದು ಪ್ರಯಾಣಸನ್ನದ್ಧನಾದುದು.

ಮಹಾಬಲಾಢ್ಯನಾದ ಆ ವಾನರೋತ್ತಮನು ಲಂಕೆಯ ಸಮಸ್ತ ಭಾಗಕ್ಕೂ ಬೆಂಕಿಯನ್ನಿಟ್ಟಮೇಲೆ, ಸಮುದ್ರದಲ್ಲಿ ತನ್ನ ಬಾಲವನ್ನದ್ದಿ ಅದರ ಬೆಂಕಿಯನ್ನಾರಿಸಿಬಿಟ್ಟನು. ಆ ಕಪಿಶ್ರೇಷ್ಠನು ಹಾಗೆಯೇ ನಿಂತು, ಇನ್ನೂ, ಆ ಲಂಕೆಯು ಅಗ್ನಿಜ್ವಾಲೆಯಲ್ಲಿ ಧಗಧಗಿಸಿ ಉರಿದುಬೀಳುತ್ತಿರುವುದನ್ನೂ ಅಲ್ಲಲ್ಲಿ ರಾಕ್ಷಸರು ಸಂಭ್ರಮದಿಂದ ಚದರಿ ಪಲಾಯನನಮಾಡುತ್ತಿರುವುದನ್ನೂ ನೋಡಿದನು. ಅವನಿಗೆ ಹಠಾತ್ತಾಗಿ ಒಂದು ಭಯವು ಹುಟ್ಟಿ, ತನ್ನನ್ನೇ ತಾನು ನಿಂದಿಸುವುದಕ್ಕೂ ತೊಡಗಿದನು. "ಅಯ್ಯೋ ಇದೇನಿದು? ನಾನು ಮಾಡಿದ ಕಾರ್ಯವೇನು? ಈ ಲಂಕೆಯನ್ನು ಸುಟ್ಟುಬಿಟ್ಟೆನಲ್ಲಾ! ನನಗೂ ಹೀಗೊಂದು ದುರ್ಬುದ್ಧಿಯು ಹುಟ್ಟಬಹುದೆ? ಮುಖ್ಯವಾಗಿ ಕೋಪವು ಬಂದಾಗ, ಉರಿಯುವ ಬೆಂಕಿಯನ್ನು ನೀರಿನಿಂದಾರಿಸುವಂತೆ ಸ್ವಬುದ್ಧಿಯಿಂದ ಆ ಕೋಪವನ್ನು ನಿಗ್ರಹಿಸಬಲ್ಲವರೇ ಮಹಾತ್ಮರು! ಅವರೇ ಪುರುಷಶ್ರೇಷ್ಠರು! ಅಂತವರೇ ಧನ್ಯರು! ಕೋಪಗೊಂಡಮೇಲೆ ಪಾಪನೂಡದವರಾರು? ಕೋಪಗೊಂಡವನು ಗುರುಗಳನ್ನಾದರೂ ಕೊಂದುಬಿಡುವನು! ಕೋಪಗೊಂಡವನು ಸಾಧುಗಳನ್ನು ಪರುಷವಾಕ್ಯದಿಂದ ಧಿಕ್ಕರಿಸುವನು. ಕೋಪವುಳ್ಳವರಿಗೆ ಮಾಡಬಾರದ ಕೆಲಸವಾಗಲಿ, ಆಡಬಾರದ ಮಾತಾಗಲಿ, ಯಾವುದೊಂದೂ ಇಲ್ಲ. ಹಾವುಗಳು ಜೀರ್ಣವಾದ ತಮ್ಮ ಪರೆಯನ್ನು ಬಿಡುವಂತೆ, ಯಾವನು ತಾಳ್ಮೆಯಿಂದ ತನ್ನ ಕೋಪವನ್ನುಡಗಿಸಿಬಿಡುವನೋ ಅತನೇ ಮನುಷ್ಯನೆನಿಸುವನು. ಅಹಾ! ಇಲ್ಲಿ ಸೀತೆಯಿರುವುದನ್ನೂ ಭಾವಿಸದೆ ಈ ಲಂಕೆಗೆ ಬೆಂಕಿಯಿಟ್ಟೆನಲ್ಲಾ! ನಾಚಿಕೆಯಿಲ್ಲದ ಪರಮಪಾಪಿಯಾದ ನನ್ನ ಈ ದುರ್ಬುದ್ಧಿಯನ್ನು ಸುಡಬೇಕಲ್ಲವೆ? ಅಯ್ಯೋ ನನ್ನ ಸ್ವಾಮಿಯನ್ನೇ ಈಗ ನಾನು ಕೊಂದಂತಾಯಿತಲ್ಲಾ! ಈ ಲಂಕೆಯೆಲ್ಲವೂ ಸುಟ್ಟುಹೋದಮೇಲೆ ಇನ್ನು ಸೀತೆಯುಮಾತ್ರ ಬದುಕಿರುವುದುಂಟೆ? ನಿಜವಾಗಿಯೂ ಸೀತೆಯು ಬೆಂಕಿಯಲ್ಲಿ ಸಿಕ್ಕಿ ದಗ್ಧಳಾಗಿದ್ದಪಕ್ಷದಲ್ಲಿ, ಅವಿವೇಕಿಯಾದ ನಾನೇ ನನ್ನ ಸ್ವಾಮಿಕಾರ್ಯವನ್ನು ಕೆಡಿಸಿದಂತಾಯಿತಲ್ಲವೆ? ನಾನು ಯಾವ ಕಾರ್ಯಕ್ಕಾಗಿ ಇಷ್ಟೊಂದು ಪ್ರಯತ್ನಗಳನ್ನು ನಡೆಸಿದೆನೋ ಆ ಕಾರ್ಯಕ್ಕೆ

ವನೂ ಬಂಧುಸಮೇತನಾಗಿ ಪ್ರಾಣವನ್ನು ಬಿಡುವನು. ಇದನ್ನು ಕೇಳಿದಮೇಲೆ ಧರ್ಮಾತ್ಮನಾಗಿಯೂ, ಭ್ರಾತೃವತ್ಸಲನಾಗಿಯೂ ಇರುವ ಭರತನು ಜೀವವನ್ನಿಟ್ಟು ಕೊಂಡಿರಬಲ್ಲನೆ? ಅವನೂ ಶತ್ರುಘ್ನನೊಡನೆ ಪ್ರಾಣವನ್ನು ಬಿಡುವನು. ಹೀಗೆ ಧರ್ಮಪ್ರಚುರವಾದ ಇಕ್ಷ್ವಾಕುವಂಶವೇ ಕ್ರಮಕ್ರಮವಾಗಿ ನಾಶಹೊಂದುತ್ತ ಬಂದರೆ, ದೇಶದ ಪ್ರಜೆಗಳೆಲ್ಲರೂ ದುಃಖದಿಂದಲೂ ಸಂತಾಪದಿಂದಲೂ ಪೀಡಿತರಾಗಿ ಎಡೆಬಿಡದೆ ಕೊರಗುವರು. ಇದಕ್ಕೆ ಸಂದೇಹವಿಲ್ಲ! ಅಃ! ಹೀಗಾದರೆ ನಾನು ಎಂತಹ ದುರ್ಭಾಗ್ಯನೆನಿಸುವೆನು! ಧರ್ಮಾರ್ಥಗಳೆರಡನ್ನೂ ಕೆಡಿಸಿಕೊಂಡು ಕೋಪವೆಂಬ ಮಹಾದೋಷಕ್ಕೆ ಭಾಗಿಯಾದ ನಾನೇ ಲೋಕನಾಶಕನೆನಿಸಿ ಕೊಳ್ಳುವುದಿಲ್ಲವೆ?" ಎಂದು ಮನಸ್ಸಿನಲ್ಲಿ ನಾನಾವಿಧದಿಂದ ಕೊರಗಿ ಚಿಂತಿಸುತ್ತಿರುವಾಗಲೇ, ಅವನಿಗೆ ಹಿಂದೆ ಆಗಾಗ ಸ್ವಲ್ಪಸ್ವಲ್ಪವಾಗಿ ತೋರುತ್ತಿದ್ದ ಕೆಲವು ಶುಭಶಕುನಗಳೇ, ಮೇಲೆಮೇಲೆ ವ್ಯಕ್ತವಾಗಿ ತೋರಿಬಂದುವು. ಅದ್ದರಿಂದ ಅವನು ಸ್ವಲ್ಪವಾಗಿ ಮನಸ್ಸಮಾಧಾನಹೊಂದಿ, ತಿರುಗಿ ತನ್ನಲ್ಲಿ ತಾನು 'ಅಥವಾ ಒಂದುವೇಳೆ ಮಂಗಳಸ್ವರೂಪಿಣಿಯಾದ ಆ ಸುಂದರಾಂಗಿಯು ಅಗ್ನಿಜ್ವಾಲೆಗೆ ಸಿಕ್ಕಿಬಿದ್ದರೂ, ತನ್ನ ಪಾತಿವ್ರತ್ಯದ ತೇಜಸ್ಸಿನಿಂದಲೇ ತಾನು ರಕ್ಷಿತೆಯಾಗಿದ್ದರೂ ಇರಬಹುದು! ಅಗ್ನಿಯೇ ಅಗ್ನಿಯನ್ನು ದಹಿಸಲಾರದಲ್ಲವೆ! ಅಕೆಯೋ ಮಹಾತೇಜಸ್ವಿಯಾದ ಮತ್ತು ಧರ್ಮಾತ್ಮನಾದ ರಾಮನಿಗೆ ಭಾರ್ಯೆಯು! ಅವಳ ಪಾತಿವ್ರತ್ಯವೇ ಅವಳಿಗೆ ರಕ್ಷೆಯಾಗಿರುವುದು. ಅಂತಹ ಸೀತೆಯನ್ನು ಅಗ್ನಿ ಹೋತ್ರನು ಮುಟ್ಟುವುದಕ್ಕೂ ಸಮರ್ಥನಲ್ಲ. ಅಗ್ನಿಗೆ ದಹಿಸುವುದೇ ಸ್ವಭಾವವಾಗಿದ್ದರೂ, ಈಗ ನನ್ನನ್ನು ದಹಿಸದಿದ್ದುದೂಕೂಡ ಆ ರಾಮನ ಪ್ರಭಾವದಿಂದಲೂ ಸೀತೆಯ ಪುಣ್ಯದಿಂದಲೂ ಆಗಿರಬೇಕೇ ಹೊರತು ಬೇರೆಯಲ್ಲ. ಭರತಲಕ್ಷ್ಮಣ ಶತ್ರುಘ್ನರು ಮೂವರಿಗೂ ಪರದೇವತೆಯೆನಿಸಿಕೊಂಡು, ಶ್ರೀರಾಮನ ಮನೋವಲ್ಲಭೆಯಾದ ಆ ಶುಭಾಂಗಿಗೆ ಯಾವ ವಿಧದಲ್ಲಿಯಾಗಲಿ ನಾಶವೆಂದರೇನು! ಅದೂ ಹೋಗಲಿ! ಅಗ್ನಿಗೆ ಸುಡುವುದೇ ಸ್ವಭಾವಕಾರ್ಯವು. ಮತ್ತು ಅದರ ಪ್ರವರ್ತನೆಗೆ ಎಲ್ಲಿಯೂ ತಡೆಯಿಲ್ಲ, ಅದಕ್ಕೆ ನಾಶವೂ ಇಲ್ಲ. ಇಂತಹ ಅಗ್ನಿಯೂ ನನ್ನನ್ನೇ ಹೀಗೆ ದಹಿಸದಿದ್ದಾಗ, ಇನ್ನು ಪೂಜ್ಯಳಾದ ಆ ಸೀತೆಯ ವಿಷಯದಲ್ಲಿ ಹೇಳಬೇಕಾದುದೇನು!" ಎಂದು ತನಗೆ ತಾನೇ ಸಮಾಧಾನಮಾಡಿಕೊಂಡನು. ತಿರುಗಿ ಅತನು ಹಿಂದೆ ಸಮುದ್ರಮಧ್ಯದಲ್ಲಿ ತನಗಿದಿರಾಗಿ ಬಂದು ನಿಂತ ಮೈನಾಕಪರ್ವತದ ವೃತ್ತಾಂತವನ್ನೂ ನೆನೆಸಿಕೊಂಡು ಆಶ್ಚರ್ಯಪಡುತ್ತ ತನ್ನಲ್ಲಿ ತಾನು "ಸೀತಾದೇವಿಯು ತನ್ನ ತಪಃಪ್ರಭಾವದಿಂದಲೂ, ತನ್ನ ಸತ್ಯಬಲದಿಂದಲೂ ತನ್ನ

ಪಾತಿವ್ರತ್ಯದ ಮಹಿಮೆಯಿಂದಲೂ, ಅಗ್ನಿಯನ್ನಾದರೂ ತಾನು ದಹಿಸಿಬಿಡಬಲ್ಲಳೇ ಹೊರತು ಅಗ್ನಿಯು ಅಕೆಯನ್ನು ಸುಡಲಾರನು" ಎಂದು ತನಗೆ ತಾನೇ ಚಿಂತಿಸುತ್ತಿದ್ದನು. ಹೀಗೆ ಹನುಮಂತನು ಸೀತಾದೇವಿಯ ಧರ್ಮಪ್ರಭಾವವನ್ನು ಚಿಂತಿಸುತ್ತಿರುವಷ್ಟರಲ್ಲಿಯೇ, ಆಕಾಶದಲ್ಲಿ ಮಹಾತ್ಮರಾದ ಚಾರಣರು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದ ಕೆಲವು ಮಾತುಗಳು ಅವನ ಕಿವಿಗೆ ಬಿದ್ದವು. ಆ ಚಾರಣರು ಆಕಾಶದಲ್ಲಿ "ಆಹಾ! ಈ ಹನುಮಂತನು ಮಾಡಿದ ಕಾರ್ಯವು ಎಷ್ಟು ದುಷ್ಕರವಾದುದು! ಈ ಲಂಕೆಯಲ್ಲಿರುವ ಒಂದೊಂದು ರಾಕ್ಷಸಗೃಹಕ್ಕೂ ಬೆಂಕಿಯಿಟ್ಟು ಬಂದನಲ್ಲಾ! ಇದು ಎಷ್ಟು ಭಯಂಕರಕಾರ್ಯವು! ಹೆಂಗಸರು, ಮಕ್ಕಳು, ಮುದುಕರು ಮೊದಲಾಗಿ ಇಲ್ಲಿನ ರಾಕ್ಷಸರೆಲ್ಲರೂ ಭಯದಿಂದ ದಿಕ್ಕು ಗೆಟ್ಟು ಪಲಾಯನ ಮಾಡಿದರು. ಇಲ್ಲಿನ ಜನರ ಕೋಲಾಹಲವಾದರೋ ಪರ್ವತ ಗುಹೆಗಳಲ್ಲಿ ವಿಶೇಷವಾಗಿ ಪ್ರತಿಧ್ವನಿಯನ್ನುಂಟುಮಾಡುತ್ತಿರುವುದರಿಂದ ಈ ಲಂಕಾನಗರಿಯೇ ಗೋಳಾಡುವಂತಿರುವುದು. ಅಟ್ಟಣಿಗಳಿಂದಲೂ ಪ್ರಾಕಾರಗಳಿಂದಲೂ, ತೋರಣಗಳಿಂದಲೂ ಶೋಭಿತವಾದ ಈ ನಗರವೆಲ್ಲವೂ ಸಂಪೂರ್ಣವಾಗಿ ದಗ್ಧವಾಯಿತು. ಇಷ್ಟಾದರೂ ಸೀತಾದೇವಿಗೆ ಮಾತ್ರ ಯಾವ ಅಪಾಯವೂ ಇಲ್ಲದಿರುವುದನ್ನು ನೋಡಿದರೆ ಅತ್ಯಾಶ್ಚರ್ಯವಾಗಿರುವುದು. ಈ ಪರಮಾಶ್ಚರ್ಯವನ್ನು ನಾವು ಇದುವರೆಗೆ ಹಿಂದೆ ಯಾವಾಗಲೂ ನೋಡಿದ್ದಿಲ್ಲ!" ಎಂದು ಹೇಳಿಕೊಳ್ಳುತ್ತಿದ್ದರು. ಕರ್ಣಾಮೃತಪ್ರಾಯವಾದ ಈ ಮಾತನ್ನು ಕೇಳಿ ಹನುಮಂತನಿಗೆ ಅಪರಿಮಿತವಾದ ಹರ್ಷವುಂಟಾಯಿತು. ಮತ್ತು ಆ ಹನುಮಂತನು ಇದುವರೆಗೆ ಹಿಂದೆ ಅನೇಕಾವರ್ತಿ ತನಗೆ ಫಲಸಿದ್ಧಿಯನ್ನು ತೋರಿಸಿಕೊಟ್ಟ ಶುಭನಿಮಿತ್ತಗಳನ್ನೆಲ್ಲವನ್ನೂ ಆಗಲೂ ಕಾಣುತಿದ್ದುದರಿಂದಲೂ, ಸೀತೆಯ ಪಾತಿವ್ರತ್ಯವೇ ಮೊದಲಾದ ಕಾರಣಗಳಿಂದಲೂ, ಚಾರಣರ ವಾಕ್ಯದಿಂದಲೂ, ಸೀತೆಗೆ ಯಾವ ಅಪಾಯವೂ ಉಂಟಾಗಿರದೆಂದು ಸಂತುಷ್ಟಹೃದಯನಾಗಿದ್ದನು. ಹೀಗೆ ಹನುಮಂತನು ತಾನು ಉದ್ದೇಶಿಸಿ ಬಂದ ಕಾರ್ಯವು ಕೈಗೂಡಿತೆಂದು ಕೃತಾರ್ಥನಾಗಿ, ಸೀತಾದೇವಿಗೂ ಯಾವ ಅಪಾಯವೂ ಇಲ್ಲವೆಂಬುದನ್ನೂ ತಿಳಿದು, ತಿರುಗಿ ಆ ಸೀತೆಯನ್ನು ಪ್ರತ್ಯಕ್ಷವಾಗಿ ನೋಡಿ ಬಂದಮೇಲೆಯೇ ಹಿಂತಿರುಗಿ ಪ್ರಯಾಣಮಾಡಬೇಕೆಂದು ಮನಸ್ಸಿನಲ್ಲಿ ಉದ್ದೇಶಿಸಿದನು.

ಇಲ್ಲಿಗೆ ಐವತ್ತೈದನೆಯ ಸರ್ಗವು.

ಹನುಮಂತನು ಸೀತೆಯನ್ನು ಕಂಡು, ಅವಳ ಅಜ್ಞೆಯನ್ನು ಪಡೆದು ಅರಿಷ್ಟಪರ್ವತವನ್ನೇರಿ ಸಮುದ್ರಲಂಘನಕ್ಕಾಗಿ ಉದ್ಯೋಗಿಸಿದುದು.

ಅಮೇಲೆ ಹನುಮಂತನು ಶಿಂಶುಪಾವೃಕ್ಷದ ಕೆಳಗೆ ಕುಳಿತಿದ್ದ ಸೀತೆಯ ಬಳಿಗೆ ಬಂದು, ಅವಳಿಗೆ ನಮಸ್ಕರಿಸಿ, "ಅಮ್ಮಾ! ಇಷ್ಟು ಅನಾಹುತಗಳಲ್ಲಿಯೂ ಯಾವ ಅಪಾಯಕ್ಕೂ ಸಿಕ್ಕದೆ ಸುಖದಿಂದಿರುವ ನಿನ್ನನ್ನು ನೋಡುವಂತಾದುದು ನನ್ನ ಭಾಗ್ಯವೇ ಹೊರತು ಬೇರೆಯಲ್ಲ!" ಎಂದನು. ಪ್ರಯಾಣೋದ್ಯುಕ್ತನಾಗಿ ನಿಂತಿರುವ ಆ ಹನುಮಂತನನ್ನು ಸೀತೆಯು ವಾತ್ಸಲ್ಯದಿಂದ ಬಾರಿಬಾರಿಗೂ ನೋಡುತ್ತ ತನಗೆ ಪತಿಯಲ್ಲಿರುವ ಪ್ರೇಮಕ್ಕೆ ಸೂಚಕವಾದ ಮಾತಿನಿಂದ ಅತನನ್ನು ಕುರಿತು, "ಎಲೈ ಪರಂತಪನೆ! ಇಲ್ಲಿನ ರಾಕ್ಷಸರೆಲ್ಲರನ್ನೂ ನಿರ್ಮೂಲಮಾಡಿ ನನ್ನನ್ನು ರಾಮನ ಬಳಿಗೆ ಸೇರಿಸುವುದಕ್ಕೂ ನೀನೊಬ್ಬನೇ ಸಾಕಾಗಿರುವೆ. ನೀನು ಇಲ್ಲಿ ತೋರಿಸಿದ ನಿನ್ನ ಬಲಾತಿಶಯಗಳೆಲ್ಲವೂ ನಿನಗೆ ಅಪಾರಕೀರ್ತಿಯನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ. ಮುಂದೆಯೂ ಹೀಗಾದರೆ ರಾಮನ ಕೀರ್ತಿಯು ಜೊರಕ್ಕೆ ಬರುವುದಕ್ಕೆ ಅವಕಾಶವಿಲ್ಲ ಪರಂತಪನಾದ ಆ ರಾಮನೇ ಇಲ್ಲಿಗೆ ಬಂದು, ತನ್ನ ಬಾಣಗಳಿಂದ ಈ ಲಂಕೆಯೆಲ್ಲವನ್ನೂ ಉಲ್ಲೋಲಕಲ್ಲೋಲಮಾಡಿ, ನನ್ನನ್ನು ಕರೆದುಕೊಂಡು ಹೋದರೆ, ಆ ಕಾರ್ಯವು ಕಕುತ್ಸ್ಥಕುಲತಿಲಕನಾದ ರಾಮನಿಗೆ ತಕ್ಕುದಾಗಿರುವುದು. ಅದುದರಿಂದ ಮಹಾಶೂರನಾದ ಆ ನನ್ನ ಪ್ರಿಯನು ಇಲ್ಲಿಗೆ ಬಂದು, ತನಗೆ ತಕ್ಕ ರೀತಿಯಲ್ಲಿ ಪರಾಕ್ರಮವನ್ನು ತೋರಿಸಿಕೊಳ್ಳುವಂತೆ ಘಟಿಸಬೇಕಾದುದು ನಿನ್ನ ಕಾರ್ಯವು" ಎಂದಳು. ಹೀಗೆ ಸೀತೆಯು ಸಕಾರಣವಾಗಿಯೂ, ಸಾರವತ್ತಾಗಿಯೂ, ವಿನಯಯುಕ್ತವಾಗಿಯೂ ಇರುವ ಮಾತನ್ನು ಹೇಳಲು ಅದನ್ನು ಕೇಳಿ ಹನುಮಂತನು ಆ ಮಾತಿಗೆ ಪ್ರತ್ಯುತ್ತರವಾಗಿ "ಅಮ್ಮಾ! ಯುದ್ಧದಲ್ಲಿ ಶತ್ರುಗಳನ್ನು ಕೊಂದು ನಿನ್ನ ದುಃಖವನ್ನು ನೀಗಿಸತಕ್ಕ ಆ ರಾಮನು ಅನೇಕವಾನರಭಲ್ಲೂಕವೀರರೊಡಗೂಡಿ ಶೀಘ್ರದಲ್ಲಿಯೇ ಇಲ್ಲಿಗೆ ಬರುವನು" ಎಂದನು. ಹೀಗೆ ಹನುಮಂತನು ಸೀತೆಗೆ ಸಮಾಧಾನವನ್ನು ಹೇಳಿ, ತಾನು ಪ್ರಯಾಣೋನ್ಮುಖನಾಗಿ, ತಿರುಗಿ ಸೀತೆಗೆ ಸಾಷ್ಟಾಂಗವಾಗಿ ನಮಸ್ಕರಿಸಿದನು. ಅಮೇಲೆ ಆ ವಾನರಸಿಂಹನು ತನ್ನ ಪ್ರಭುವಾದ ರಾಮನನ್ನು ನೋಡುವ ಆತುರದಿಂದ ಅಗಲೇ ಅಲ್ಲಿಂದ ಹೊರಟು, ಅರಿಷ್ಟವೆಂಬ ಪರ್ವತದ ಮೇಲೆ ಹತ್ತಿದನು. ಆ ಪರ್ವತವಾದರೋ ನಡುನಡುವೆ ಪದ್ಮವರ್ಣವುಳ್ಳ

ದೊಡ್ಡದೊಡ್ಡ ಮರಗಳಿಂದ ತುಂಬಿದ ಕಸ್ಯಾದ ವನರಾಜಿಯಿಂದ ವಿಚಿತ್ರವರ್ಣವಾದ ನಡುಬಟ್ಟೆಯನ್ನುಟ್ಟು ನಿಂತಂತೆ ಕಾಣುವುದು. ಶಿಖರಗಳ ಮೇಲೆ ತೂಗಾಡುತ್ತಿರುವ ಮೇಘಗಳಿಂದ ಉತ್ತರೀಯವನ್ನು ಧರಿಸಿದಂತೆ ತೋರುವುದು. ಬಾಲಸೂರ್ಯನು ತನ್ನ ಕಿರಣಗಳೆಂಬ ಹಸ್ತಗಳಿಂದ ಆ ಪರ್ವತವನ್ನು ಪ್ರೀತಿಪೂರ್ವಕವಾಗಿ ಎಚ್ಚರಗೊಳಿಸುವಂತೆಯೂ, ಆ ಪರ್ವತವು ತನ್ನಲ್ಲಿರತಕ್ಕ ಗೈರಿಕಾದಿ ಧಾತುಗಳಿಂದ ಕಣ್ಣುತೆರೆದು ನೋಡುವಂತೆಯೂ ತೋರುವುದು. ಶಿಖರಗಳಿಂದ ಬೀಳುವ ಗಿರಿನದಿಗಳ ಪ್ರವಾಹಧ್ವನಿಯಿಂದ ಆ ಪರ್ವತವು ವೇದಾಧ್ಯಯನವನ್ನು ಮಾಡುವಂತೆಯೂ ಸುತ್ತಲೂ ಹೊರಟು ಬರುವ ಷಣ್ಣಷಣ್ಣ ಬೆಲುಮೆಗಳ ಧ್ವನಿಯಿಂದ ಗಾನಮಾಡುವಂತೆಯೂ ಕಾಣುವುದು. ಅದರಲ್ಲಿ ಮಹೋನ್ನತವಾಗಿ ಬೆಳೆದ ದೇವದಾರು ವೃಕ್ಷಸಮೂಹದಿಂದ ಆ ಪರ್ವತವು ಕೈಯೆತ್ತಿ ತಪಸ್ಸು ಮಾಡುವಂತಿರುವುದು. ಅಲ್ಲಲ್ಲಿ ಬೀಳುವ ಜಲಪಾತಗಳ ಮಹಾಧ್ವನಿಯಿಂದ ಗಟ್ಟಿಯಾಗಿ ಕೂಗಿಡುವಂತಿರುವುದು. ಅಲ್ಲಲ್ಲಿ ಶಿಖರಗಳ ಮೇಲೆ ತೂರಿ ಬರುತ್ತಿರುವ ಶರತ್ಕಾಲದ ಮೇಘಗಳಿಂದ ಭಯಪಟ್ಟು ನಡುಗುವಂತೆ ಕಾಣುವುದು. ಗಾಳಿಯಿಂದ ಶಬ್ದಿಸುವ ಕೀಚಕಗಳೆಂಬ ಬಿದಿರುಗಳ ಧ್ವನಿಯಿಂದ ಆ ಪರ್ವತವೇ ಕೂಗಿಡುವಂತಿರುವುದು. ಅದರೊಳಗಿನ ಮಹಾಸರ್ಪಗಳು ಬುಸುಗುಟ್ಟುವ ಧ್ವನಿಯನ್ನು ಕೇಳಿದಾಗ ಆ ಪರ್ವತವು ತನ್ನನ್ನು ಕಾಲಿನಿಂದ ಮೆಟ್ಟಿದ ಹನುಮಂತನ ಮೇಲೆ ಕೋಪಗೊಂಡು ನಿಟ್ಟುಸಿರುಬಿಡುವಂತೆ ಕಾಣುವುದು. ಮಂಜುತುಂಬಿ ನಿಶ್ಶಬ್ದವಾಗಿ ಗಂಭೀರವಾಗಿರುವ ಅದರ ಗುಹೆಗಳನ್ನು ನೋಡಿದಾಗ, ಇಂದ್ರಿಯಗಳನ್ನು ತಡೆದು ಮೌನದಿಂದ ತಪಸ್ಸು ಮಾಡುವಂತೆ ಕಾಣುವುದು. ಮೇಘಗಳು ನೆಲಕ್ಕಿಳಿದಂತೆ ತೋರುವ ತನ್ನ ಪ್ರತ್ಯಂತ ಪರ್ವತಗಳಿಂದ ಸೆಡೆದುಹೋಗುವಂತೆಯೂ, ಮೇಘಪರಂಪರೆಗಳಿಂದ ತುಂಬಿದ ಶಿಖರಗಳಿಂದ ಆಕಾಶದಲ್ಲಿ ಮೈನುರಿಯುವಂತೆಯೂ ತೋರುವುದು. ಹೀಗೆ ಅತಿರಮ್ಯವಾಗಿ ಅನೇಕ ಗುಹೆಗಳಿಂದ ತುಂಬಿದ ಆದರ ಶಿಖರಗಳೆಲ್ಲವೂ, ಹನುಮಂತನ ಕಾಲಿನ ತುಳಿತದಿಂದ ಕ್ಷಣಮಾತ್ರದಲ್ಲಿ ಕದಲಿ ಹೋಗಿದ್ದುವು. ಮತ್ತು ಸಾಲ, ತಾಳೆ, ಅಶ್ವಕರ್ಣ, ಬಿದಿರು ಮುಂತಾದ ಅನೇಕ ವೃಕ್ಷಜಾತಿಗಳೂ, ವಿಸ್ತಾರವಾಗಿ ಪುಷ್ಪಿಸಿ ಬೆಳೆದ ಲತಾವನಸಮೂಹಗಳೂ, ಗುಂಪುಗುಂಪಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದ ಬಗೆಬಗೆಯ ಮೃಗಸಮೂಹಗಳೂ, ಗೈರಿಕಾದಿಧಾತುರಸಗಳ ಪ್ರವಾಹವೂ, ಆ ಪರ್ವತಕ್ಕೆ ಒಂದು ಅಪೂರ್ವಶೋಭೆಯನ್ನುಂಟುಮಾಡುತ್ತಿದ್ದುವು. ಅದರ ಸುತ್ತಲೂ, ಅಸಂಖ್ಯಾತಗಳಾದ ಗಿರಿನದಿಗಳು ಹರಿಯುತ್ತಿದ್ದುವು. ಎಲ್ಲಿ ನೋಡಿ

ದರೂ ದೊಡ್ಡದೊಡ್ಡ ಕಲ್ಲು ಬಂಡೆಗಳು ದಟ್ಟವಾಗಿ ತುಂಬಿರುವುವು. ಮಹರ್ಷಿಗಳೂ, ಯಕ್ಷರೂ, ಗಂಧರ್ವರೂ, ಕಿನ್ನರರೂ, ಉರಗರೂ, ಅಲ್ಲಿಗೆ ಬಂದು ಅದನ್ನು ಸೇವಿಸುತ್ತಿರುವರು. ಆ ಪರ್ವತದ ಯಾವ ಕಡೆಯಲ್ಲಿ ನೋಡಿದರೂ ಗಿಡಬಳ್ಳಿಗಳು ನಿಬಿಡವಾಗಿ ಬೆಳೆದಿರುವುವು. ಅದರ ಗುಹೆಗಳೆಲ್ಲವೂ ಸಿಂಹಗಳಿಗೆ ನಿವಾಸಸ್ಥಾನವಾಗಿರುವುವು. ಅದರ ಸುತ್ತಲೂ ಹುಲಿಗಳು ಗುಂಪುಗುಂಪಾಗಿ ತಿರುಗುತ್ತಿರುವುವು. ಅದರಲ್ಲಿ ರುಚಿಕರಗಳಾದ ಫಲಮೂಲಗಳಿಂದ ತುಂಬಿದ ಕ್ಷೇತ್ರಗಳು ಅನೇಕವಾಗಿ ಬೆಳೆದಿರುವುವು. ಹೀಗೊಪ್ಪಿತ್ತಿದ್ದ ಆ ಅರಿಷ್ಟಪರ್ವತವನ್ನು ನೋಡುತ್ತ, ವಾಯುಪುತ್ರನಾದ ಹನುಮಂತನು, ರಾಮನನ್ನು ನೋಡಬೇಕೆಂಬ ಆತುರದಿಂದಲೂ, ಉತ್ಸಾಹದಿಂದಲೂ ಪ್ರೇರಿತನಾಗಿ, ಆ ಪರ್ವತದಮೇಲೆ ಹತ್ತಿದನು. ಹೀಗೆ ಹನುಮಂತನು ಅತಿ ಮನೋಹರವಾದ ಆ ಪರ್ವತದ ತಪ್ಪಲುಗಳಲ್ಲಿರುವ ಶಿಲೆಗಳನ್ನು ತನ್ನ ಕಾಲುಗಳಿಂದ ಮೆಟ್ಟಿ ಮೇಲೇರಿಹೋಗುವಾಗ, ಆ ಮಹಾಶಿಲೆಗಳೆಲ್ಲವೂ ದೊಡ್ಡ ಧ್ವನಿಯೊಡನೆ ಪುಡಿಪುಡಿಯಾಗಿ ಬೀಳುತಿದ್ದುವು. ಈ ರೀತಿಯಲ್ಲಿ ಆ ಮಹಾಕಪಿಯು ಆ ಅರಿಷ್ಟ ಪರ್ವತವನ್ನೇರಿ, ಸಮುದ್ರದ ದಕ್ಷಿಣತೀರದಿಂದ ಉತ್ತರತೀರಕ್ಕೆ ಹಾರುವುದಕ್ಕಾಗಿ ಸಮುದ್ರವನ್ನು ಪ್ರಾರ್ಥಿಸಿ, ತನ್ನ ದೇಹವನ್ನು ಬಳಸಿಕೊಂಡನು. ವೀರನಾದ ವಾಯುಪುತ್ರನು ಆ ಪರ್ವತವನ್ನೇರಿ ನಿಂತು, ಅನೇಕ ಮತ್ಸ್ಯಗಳಿಂದಲೂ, ಸರ್ಪಗಳಿಂದಲೂ, ತುಂಬಿ ಭಯಂಕರವಾದ ಆ ಲವಣ ಸಮುದ್ರವನ್ನು ನೋಡಿಯೂ ಮಹೋತ್ಸಾಹದಿಂದುಬ್ಬುತ್ತ, ತನ್ನ ತಂದೆಯಾದ ವಾಯುವಿನಂತೆ ಆಗಲೇ ಆಕಾಶಕ್ಕೆ ಹಾರಿಬಿಟ್ಟನು. ಈತನು ಹಾರುವಾಗ ಪರ್ವತವನ್ನು ತನ್ನ ಕಾಲಿನಿಂದ ಮೆಟ್ಟಿದೊಡನೆ ಆ ಪರ್ವತವನ್ನಾಶ್ರಯಿಸಿದ್ದ ಸಮಸ್ತ ಪ್ರಾಣಿಗಳೂ ಭಯದಿಂದ ನಡುಗಿ "ಹೋ!" ಎಂದು ಅರಚುತ್ತಿರಲು ಆ ಪರ್ವತವೇ ಗೋಳಿಡುವಂತಿತ್ತು. ಆ ಪರ್ವತಶಿಖರಗಳೆಲ್ಲವೂ ನಡುಗಿ ಹನುಮಂತನ ತುಳಿತದಿಂದ ಕುಗ್ಗಿ ನೆಲಕ್ಕಿಳಿದುವು. ಅದರ ವೃಕ್ಷಗಳೆಲ್ಲವೂ ಮುರಿದುಬಿದ್ದುವು. ಅದರಲ್ಲಿದ್ದ ಪುಷ್ಪಿತಗಳಾದ ಗಿಡಗಳೆಲ್ಲವೂ ಈ ಆಂಜನೇಯನ ತೊಡೆಯ ವೇಗದಿಂದ ಪೀಡಿತಗಳಾಗಿ ಸಿಡಿಲಿನ ಬಡಿತಕ್ಕೆ ಸಿಕ್ಕಿದಂತೆ ನೆಲಕ್ಕುರುಳಿದುವು. ಆ ಪರ್ವತ ಗುಹೆಗಳಲ್ಲಿ ಚೆನ್ನಾಗಿ ಕೊಬ್ಬಿಬೆಳೆದ ಸಿಂಹಗಳೂ ಕೂಡ ಈ ಹನುಮಂತನ ಪಾದಾಘಾತದಿಂದ ಪೀಡಿತಗಳಾಗಿ ಆಕಾಶವನ್ನು ಭೇದಿಸುವಂತೆ ಮಹಾಧ್ವನಿಯಿಂದ ಮೆರೆಯಿಟ್ಟುವು. ಅಲ್ಲಿದ್ದ ವಿದ್ಯಾಧರಸ್ತ್ರೀಯರೆಲ್ಲರೂ ಭಯದಿಂದ ನಡುಗಿ, ಕದಲಿದ ವಸ್ತ್ರಾಭರಣಗಳುಳ್ಳವರಾಗಿ, ಆಗಲೇ ಆ ಪರ್ವತದ ತಪ್ಪಲನ್ನು ಬಿಟ್ಟ ತಟ್ಟನೆ ಆಕಾಶಕ್ಕೆ ಹಾರಿದರು. ಆ ಪರ್ವತದಲ್ಲಿ ಬಲಾಢ್ಯಗಳಾಗಿಯೂ ಉರಿಯುವ ನಾಲಗೆ

ಯುಳ್ಳುವುಗಳಾಗಿಯೂ, ಕ್ರೂರವಿಷವುಳ್ಳುವುಗಳಾಗಿಯೂ ಇದ್ದ ದೊಡ್ಡ ಸರ್ಪಗಳೆಲ್ಲವೂ ಭಯದಿಂದ ಕುಗ್ಗಿದ ತಲೆಯುಳ್ಳುವುಗಳಾಗಿ ನೆಲದಲ್ಲಿ ಹೊರಳುತ್ತಿದ್ದುವು. ಆ ಪರ್ವತದಮೇಲಿದ್ದ ಕಿನ್ನರರೂ, ಉರಗರೂ, ಗಂಧರ್ವರೂ, ಯಕ್ಷರೂ, ವಿದ್ಯಾಧರರೂ, ಭಯಗೊಂಡು ಹನುಮಂತನಿಂದ ಪೀಡಿತವಾದ ಆ ಪರ್ವತವನ್ನು ಆಗಲೇ ಬಿಟ್ಟು ಆಕಾಶಕ್ಕೆ ಹಾರಿದರು. ಬಲಾಢ್ಯನಾದ ಈ ಹನುಮಂತನ ಕಾಲಿನ ತುಳಿತವನ್ನು ತಡೆಯಲಾರದೆ ಆ ಪರ್ವತವು ತನ್ನಲ್ಲಿರುವ ಸಮಸ್ತ ವೃಕ್ಷಗಳೊಡನೆಯೂ, ಶಿಖರಗಳೊಡನೆಯೂ ಪಾತಾಳವನ್ನು ಪ್ರವೇಶಿಸಿಬಿಡುವಂತೆ ನೆಲಕ್ಕೆ ತಗ್ಗಿ ಹೋಯಿತು. ಹತ್ತು ಯೋಜನಗಳವಿಸ್ತಾರವುಳ್ಳದಾಗಿಯೂ, ಮೂವತ್ತು ಯೋಜನಗಳಷ್ಟು ಉನ್ನತವಾಗಿಯೂ ಇದ್ದ ಆ ಮಹಾಪರ್ವತವೂ ಕೂಡ, ಹನುಮಂತನ ಕಾಲತುಳಿತದಿಂದ ಕುಗ್ಗಿ ನೆಲಸಮವಾಯಿತು. ಹನುಮಂತನು ಅಲೆಗಳ ಬಡಿತದಿಂದ ಭಯಂಕರವಾದ ಲವಣಸಮುದ್ರವನ್ನು ಲೀಲಾಮಾತ್ರದಿಂದಲೇ ದಾಟಬೇಕೆಂದೆಣಿಸಿ ಒಂದೇ ವೇಗದಿಂದ ಆಕಾಶದಲ್ಲಿ ಹಾರಿ ಬಂದನು.

ಇಲ್ಲಿಗೆ ಐವತ್ತಾರನೆಯ ಸರ್ಗವು.

ಹನುಮಂತನು ಸಮುದ್ರವನ್ನು ದಾಟಿ ಉತ್ತರತೀರವನ್ನು ಸೇರಿದುದು. ಅಲ್ಲಿ ಜಾಂಬವಾದಿಗಳು ಅತ್ಯಾತುರದಿಂದ ಲಂಕೆಯ ವೃತ್ತಾಂತವನ್ನು ವಿಚಾರಿಸಿದುದು.

ಹೀಗೆ ಹನುಮಂತನು ಹಾರಿಬರುವಾಗ ಆಕಾಶಪ್ರದೇಶವು ಚಂದ್ರನೆಂಬ ಬಿಳಿನೈದಿಲೆ ಹೂವಿನಿಂದಲೂ, ಸೂರ್ಯನೆಂಬ ಕಾರಂಡವಪಕ್ಷಿಯಿಂದಲೂ, ಪುಷ್ಯ ಶ್ರವಣ ನಕ್ಷತ್ರಗಳೆಂಬ ಕಲಹಂಸದಂಪತಿಗಳಿಂದಲೂ, ಮೇಘಗಳೆಂಬ ಪಾಚಿಗಳ ಮತ್ತು ತೀರದ ಗರಿಕೆಗಳ ಸಮೂಹದಿಂದಲೂ, ಪುನರ್ವಸುವೆಂಬ ಮಹಾಮತ್ಸ್ಯದಿಂದಲೂ ಅಂಗಾರಕ ಗ್ರಹವೆಂಬ ದೊಡ್ಡ ಮೊಸಳೆಯಿಂದಲೂ, ಐರಾವತವೆಂಬ ದ್ವೀಪದಿಂದಲೂ, ಸ್ವಾತಿ ನಕ್ಷತ್ರವೆಂಬ ಹಂಸಸಂಚಾರದಿಂದಲೂ, ಚಂದ್ರ ಕಿರಣಗಳೆಂಬ ಅಲೆಯಾಡುವ ಶೀತಲಜಲದಿಂದಲೂ, ನಾಗಯಕ್ಷಗಂಧರ್ವರೆಂಬ ಬಣ್ಣಬಣ್ಣದ ತಾವರೆ ನೈದಿಲೆ ಹೂಗಳಿಂದಲೂ ಕೂಡಿ, ಒಂದು ಮಹಾಸಮುದ್ರದಂತಿರಲು, ಆ ಮಹಾಕಪಿಯು ಸಮುದ್ರವನ್ನು ದಾಟುವ ದೊಡ್ಡ ಹಡಗಿನಂತೆ ಗಂಭೀರವಾಗಿ ದಾಟಬಂದನು. ಇವನು ವೇಗದಿಂದ ಮೇಲೆ

ಹಾರಿಬರುವಾಗ, ಅಂತರಿಕ್ಷವನ್ನೇ ನುಂಗಿಬಿಡುವಂತೆಯೂ, ಚಂದ್ರನನ್ನು ಉಗುರುಗಳಿಂದ ಪರಚುವಂತೆಯೂ, ನಕ್ಷತ್ರಗಳೊಡನೆಯೂ ಸೂರ್ಯಬಿಂಬದೊಡನೆಯೂ ಕೂಡಿದ ಆಕಾಶವನ್ನೇ ಸುರುಟಿಕೊಂಡು ಹೋಗುವಂತೆಯೂ, ಮೇಘಗಳನ್ನಾಕರ್ಷಿಸುವಂತೆಯೂ, ಮುಂದೆ ಮುಂದೆ ಸಾಗಿಬರುತ್ತಿದ್ದನು. ಈ ತೇಜಸ್ವಿಯಾದ ಹನುಮಂತನ ದೇಹಕಾಂತಿಯಿಂದ, ಆಕಾಶದಲ್ಲಿದ್ದ ಮಹಾಮೇಘಗಳಲ್ಲಿ ಕೆಲವು ಬಿಳುಪಾಗಿಯೂ, ಕೆಲವು ಹಸುರಾಗಿಯೂ, ಕೆಲವು ನೀಲವರ್ಣವಾಗಿಯೂ, ಕೆಲವು ಹೊಂಬಣ್ಣವಾಗಿಯೂ, ಕೆಲವು ಹಸುರಾಗಿಯೂ, ಕೆಲವು ಎಳಗೆಂಪುಬಣ್ಣವುಳ್ಳವುಗಳಾಗಿಯೂ ಕಾಣುತ್ತಿದ್ದುವು. ಆ ಹನುಮಂತನೂ ಕೂಡ ಆಗಾಗ ಆ ಮೇಘಸಮೂಹದಲ್ಲಿ ಪ್ರವೇಶಿಸಿ, ತಿರುಗಿ ಹೊರಕ್ಕೆ ಕಾಣಿಸಿಕೊಳ್ಳುತ್ತಾ, ಮೇಘಗಳ ಮರೆಯಲ್ಲಿ ನುಗ್ಗಿಬರುವ ಚಂದ್ರನಂತೆ ಕಾಣುತಿದ್ದನು. ಬಿಳೀಬಟ್ಟೆಯನ್ನುಟ್ಟಿದ್ದ ವೀರನಾದ ಆ ಹನುಮಂತನು, ಹೀಗೆ ನಾನಾವಿಧಗಳಾದ ಮೇಘಗಳ ನಡುವೆ ನುಗ್ಗಿ ಬರುವಾಗ ವರ್ಷಾಕಾಲದಲ್ಲಿ ಮೇಘಗಳ ನಡುವೆ ಸೇರಿ, ಕಂಡೂ ಕಾಣದ ಪ್ರಕಾಶವುಳ್ಳ ಚಂದ್ರನಂತೆ ತೋರುತಿದ್ದನು. ಮತ್ತು ಆ ಹನುಮಂತನು ಮೇಘಸಮೂಹಗಳನ್ನು ಭೇದಿಸಿಕೊಂಡು ಕ್ಷಣಕ್ಷಣಕ್ಕೂ ಹೊರಗೆ ಗೋಚರಿಸುತ್ತ, ಆಗಾಗ ಮೇಘಧ್ವನಿಯಂತೆ ಮಹಾಧ್ವನಿಯನ್ನೂ ಮಾಡುತ್ತಿರಲು ಆಕಾಶದಲ್ಲಿ ಹಾರಿ ಬರುವ ಗರುಡನಂತೆ ಕಾಣುತಿದ್ದನು. ಮಹಾತೇಜಸ್ವಿಯಾದ ಆ ಕಪಿಶ್ರೇಷ್ಠನು ಲಂಕೆಯಲ್ಲಿ ಅನೇಕ ವೀರರಾಕ್ಷಸರನ್ನು ಕೊಂದು ತನ್ನ ಖ್ಯಾತಿಯನ್ನು ಪ್ರಸಿದ್ಧಪಡಿಸಿ ಆ ಲಂಕಾನಗರಿಯೆಲ್ಲವನ್ನೂ ಸುಟ್ಟು ಜುಲ್ಲೋಲಕಲ್ಲೋಲವನ್ನಾಗಿ ಮಾಡಿ, ರಾವಣನಿಗೂ ಮಹಾವ್ಯಸನವನ್ನುಂಟುಮಾಡಿ, ಅವನ ಸೈನ್ಯಗಳೆಲ್ಲವನ್ನೂ ಕೊಂದು ಸೀತೆಗೆ ನಮಸ್ಕರಿಸಿ, ಇಷ್ಟು ಸಾಹಸಕಾರ್ಯಗಳನ್ನು ಮಾಡಿದ್ದರೂ, ಸ್ವಲ್ಪಮಾತ್ರವೂ ಬಳಲಿಕೆಯನ್ನು ತೋರಿಸದೆ ಸಮುದ್ರಮಧ್ಯದಲ್ಲಿ ಒಂದೇ ನೆಗೆತಕ್ಕೆ ಆಕಾಶಮಾರ್ಗವಾಗಿ ಹಾರಿಬಂದನು. ಇವನು ಬರುವಾಗ ಮೊದಲಿನಂತೆಯೇ ಸುಷಾಭವೆಂಬ ಮೈನಾಕಪರ್ವತವು ದಾರಿಗಡ್ಡಲಾಗಿ ನಿಂತಿರಲು ಅದನ್ನು ಕೈಯಿಂದ ಸವರಿ, ನಾಣಿನಿಂದ ಹೊರಟ ಬಾಣದಂತೆ ಮಹಾವೇಗದಿಂದ ಮುಂದೆ ಬಂದನು. ಆ ವಾನರೋತ್ತಮನು ಮೈನಾಕವನ್ನು ದಾಟಿ ಸ್ವಲ್ಪ ದೂರಕ್ಕೆ ಬಂದೊಡನೆಯೇ ಮೇಘದಂತೆ ಕಾಣುತ್ತಿದ್ದ ಮಹೇಂದ್ರಪರ್ವತವನ್ನು ನೋಡಿ, ಆಗಲೇ ಸಂತೋಷದಿಂದ ಒಂದು ಸಿಂಹನಾದವನ್ನು ಮಾಡಿದನು. ಮೇಘಧ್ವನಿಯಂತೆ ಗಂಭೀರಧ್ವನಿಯುಳ್ಳ ಹನುಮಂತನು ಆ ತನ್ನ ಸಿಂಹನಾದದಿಂದಲೇ ಹತ್ತುದಿಕ್ಕುಗಳನ್ನೂ ತುಂಬಿಬಿಟ್ಟನು. ಹಾಗೆಯೇ ಆತನು ಅಂಗದಾದಿವಾನರ

ರಿದ್ದ ಸ್ಥಳವನ್ನು ಸಮೀಪಿಸಿ ಅಗಲೂ ಮತ್ತೊಮ್ಮೆ ತನ್ನ ಗೆಳೆಯರನ್ನು ನೋಡ ಬೇಕೆಂಬ ಉತ್ಸಾಹದಿಂದ ಬಾಲವನ್ನಾಡಿಸುತ್ತಾ, ಸಿಂಹನಾದವನ್ನು ಮಾಡಿದನು. ಹೀಗೆ ಆಕಾಶದಲ್ಲಿ ಬಾರಿಬಾರಿಗೂ ಮಹೋತ್ಸಾಹದಿಂದ ಸಿಂಹನಾದಮಾಡುತ್ತಿದ್ದ ಆ ಹನುಮಂತನ ಧ್ವನಿಗೆ, ಸೂರ್ಯಬಿಂಬಸಹಿತವಾಗಿ ಆಕಾಶವೇ ಒಡೆದು ಹೋಗು ವಂತೆ ತೋರುತ್ತಿತ್ತು. ಹೀಗೆ ಹನುಮಂತನು ಆಗಾಗ ಸಿಂಹನಾದಗಳನ್ನು ಮಾಡುತ್ತ ಮುಂದೆ ಸಾಗಿಬರುತ್ತಿರಲು, ಇತ್ತಲಾಗಿ ಆ ಸಮುದ್ರದ ಉತ್ತರತೀರ ದಲ್ಲಿ ಬಹಳ ಹೊತ್ತಿನಿಂದ ಈತನನ್ನು ನೋಡಬೇಕೆಂದು ಅತ್ಯಾತುರದಿಂದ ಕಾದಿದ್ದ ಅಂಗದಾದಿವಾನರವೀರರೆಲ್ಲರೂ, ವಾಯುಪ್ರೇರಿತಗಳಾದ ಮಹಾಮೇಘಗಳ ಗರ್ಜನೆ ಯಂತಿರುವ ಹನುಮಂತನ ಸಿಂಹನಾದವನ್ನೂ, ಅವನ ತೊಡೆಗಳ ವೇಗದಿಂದುಂ ಟಾದ ಆರ್ಭಟವನ್ನೂ ಕೇಳಿದರು. "ಹನುಮಂತನ ಪ್ರಯತ್ನವೇನಾಗಿರು ವುದೋ" ಎಂದು ಚಿಂತಿಸಿ ಕೊರಗುತಿದ್ದ ಆ ಕಪಿಗಳೆಲ್ಲರಿಗೂ ಮೇಘಗರ್ಜನೆ ಯಂತಿರುವ ಈ ದೊಡ್ಡ ಸಿಂಹನಾದಧ್ವನಿಯು ಕೇಳಿಬೊಡನೆಯೇ ಅಲ್ಲಿದ್ದ ವಾನರರೆಲ್ಲರೂ, ಅದನ್ನು ಹನುಮಂತನ ಧ್ವನಿಯೆಂದೇ ತಿಳಿದು ತಮ್ಮ ಪ್ರಿಯಮಿತ್ರನಾದ ಆತನನ್ನು ನೋಡುವುದರಲ್ಲಿ ಅತ್ಯಾತುರದಿಂದ ಸುತ್ತಲೂ ಗುಂಪುಗೂಡಿ ಕಣ್ಣಿಟ್ಟು ಕಾದಿದ್ದರು. ಆಗ ಅಲ್ಲಿನ ಸಮಸ್ತ ವಾನರರಿಗೂ ಪ್ರಮುಖನಾದ ಜಾಂಬವಂತನು ಮನಸ್ಸಿನಲ್ಲಿ ಸಂತೋಷದಿಂದುಕ್ಕುತ್ತ ಅಲ್ಲಿದ್ದ ವಾನರರೆಲ್ಲರನ್ನೂ ಕರೆದು ಅವರನ್ನು ಕುರಿತು, "ಎಲ್ಲೈ ಕಪಿವೀರರೆ! ಹನುಮಂತನು ಸರ್ವವಿಧದಿಂದಲೂ ಕಾರ್ಯವನ್ನು ನಿರ್ವಹಿಸಿಕೊಂಡೇ ಬಂದಿರುವನು! ಅದರಲ್ಲಿ ಸಂದೇಹವಿಲ್ಲ! ಇವನ ಕಾರ್ಯವು ಕೈಗೂಡಿಲ್ಲದ ಪಕ್ಷದಲ್ಲಿ ಅವನ ಕಂಠ ಧ್ವನಿಯು ಈ ರೀತಿಯಾಗಿರದು" ಎಂದನು. ಆಗ ವಾನರರು ಮಹಾತ್ಮನಾದ ಹನುಮಂತನ ವೇಗವನ್ನೂ, ಅವನ ಸಿಂಹನಾದವನ್ನೂ ಕೇಳಿ ಸಂತೋಷದಿಂದು ಕ್ಕುತ್ತ ನಾನಾಕಡೆಗಳಿಗೂ ಹಾರಿಹಾರಿ ಕುಣಿಯುತಿದ್ದರು. ಆ ವಾನರರೊಬ್ಬೊ ಬ್ಬರೂ ಪರಮಸಂತುಷ್ಟರಾಗಿ ಹನುಮಂತನನ್ನು ನೋಡಬೇಕೆಂಬ ಆತುರದಿಂದ ಮರದಿಂದ ಮರಕ್ಕೂ, ಶಿಖರದಿಂದ ಶಿಖರಕ್ಕೂ ಹಾರುತ್ತ ಎಲ್ಲರೂ ಗುಂಪಾಗಿ ಸೇರಿ ನಿಂತರು. ಮತ್ತು ಅವರು ಸಂತೋಷದಿಂದ ದೊಡ್ಡದೊಡ್ಡ ಮರಗಳನ್ನೇರಿ ಅವುಗಳ ತುದಿಯಕೊಂಬೆಗಳಮೇಲೆ ಕುಳಿತು ಸ್ನೇಹಿತರನ್ನು ಸಂತೋಷದಿಂದ ಸಮೀಪಕ್ಕೆ ಬರ ಮಾಡಿಕೊಳ್ಳುವುದಕ್ಕಾಗಿ ಬಟ್ಟೆಯನ್ನು ಬೀಸಿ ಕರೆಯುವಂತೆ, ಹನುಮಂತನನ್ನು ಬೇಗನೆ ಸಮೀಪಕ್ಕೆ ಕರೆಯುವುದಕ್ಕಾಗಿ ಆ ಮರದ ಕೊಂಬೆಗಳನ್ನು ಹಿಡಿದಾಡಿಸು ತಿದ್ದರು. ವಾಯುವು ಪರ್ವತಗುಹೆಯಲ್ಲಿ ಸೇರಿ ಗರ್ಜಿಸುವಂತೆ, ವಾಯುಪುತ್ರನಾದ

ಹನುಮಂತನೂ ಆಗಾಗ ಸಿಂಹನಾದವಮಾಡುತ್ತಿದ್ದನು. ಈ ವಾನರರೆಲ್ಲರೂ ಮುಂದೆ ಆಕಾಶದಲ್ಲಿ ಮಹಾಮೇಘಂತೆ ಬರುತ್ತಿದ್ದ ಆ ಮಹಾಕಪಿಯನ್ನು ನೋಡಿ ಸಂತೋಷದಿಂದ ಬದ್ಧಾಂಜಲಿಗಳಾಗಿ ನಿಂತುಬಿಟ್ಟರು. ಇಷ್ಟರಲ್ಲಿಯೇ ಪರ್ವತಾಕಾರದಿಂದಿದ್ದ ಆ ಹನುಮಂತನೂ ವೇಗದಿಂದ ಬಂದು ವೃಕ್ಷಸಮೂಹಗಳಿಂದ ಕೂಡಿದ ಆ ಮಹೇಂದ್ರಪರ್ವತಶಿಖರದಲ್ಲಿಳಿದನು. ಆ ಹನುಮಂತನಿಗೂ ತನ್ನ ಕಡೆಯ ವಾನರರನ್ನು ನೋಡುವ ಸಂತೋಷವು ಮನಸ್ಸಿನಲ್ಲಿ ಪೂರ್ಣವಾಗಿ ಉಕ್ಕಿ ಬರುತ್ತಿರಲು, ಆ ಮಹೇಂದ್ರಪರ್ವತದಲ್ಲಿ ರಮ್ಯವಾದ ಒಂದು ಗಿರಿನದಿಯ ಸವಿೂಪದಲ್ಲಿ, ರೆಕ್ಕೆಗಳನ್ನು ಕಡಿದ ಕುಲಪರ್ವತದಂತೆ ಆಕಾಶದಿಂದಿಳಿದನು. ವಾನರರೆಲ್ಲರೂ ಮಹಾ ಸಂತೋಷದಿಂದ ಮಹಾತ್ಮನಾದ ಹನುಮಂತನ ಸುತ್ತಲೂ ಬಂದು ಮುತ್ತಿಕೊಂಡರು. ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಕ್ಷೇಮದಿಂದ ಹಿಂತಿರುಗಿ ಬಂದ ಆ ಹನುಮಂತನನ್ನು ಅವರೆಲ್ಲರೂ ಪರಮಾನಂದದಿಂದ ಆದರಿಸಿ ಮನ್ನಿಸುತ್ತ, ಒಬ್ಬೊಬ್ಬರೂ ಅವನನ್ನು ಪಜರಿಸತೊಡಗಿದರು. ಕೆಲವರು ಗೆಡ್ಡೆಗೆಣಸುಗಳನ್ನು ತಂದಿಟ್ಟರು. ಕೆಲವರು ಹಣ್ಣುಗಳನ್ನು ತಂದೊಪ್ಪಿಸಿದರು. ಕೆಲವರು ಕಾಣಿಕೆಗಳನ್ನು ಸಮರ್ಪಿಸಿದರು. ಅಲ್ಲಿ ಹನುಮಂತನು ಮೊದಲು ಜಾಂಬವಂತನೇ ಮೊದಲಾದ ಗುರುಗಳಿಗೂ, ವೃದ್ಧರಿಗೂ ನಮಸ್ಕರಿಸಿ, ಆಮೇಲೆ ಯುವರಾಜನಾದ ಅಂಗದನಿಗೂ ವಂದನವಮಾಡಿದನು. ಪೂಜ್ಯನಾಗಿಯೂ, ಪರಾಕ್ರಮಶಾಲಿಯಾಗಿಯೂ ಇರುವ ಅತನನ್ನು ಅಂಗದನೂ, ಜಾಂಬವಂತನೂ ಪ್ರೀತಿಯಿಂದಾದರಿಸಿ ಪೂಜಿಸಿದರು. ಕಪಿಗಳೆಲ್ಲರೂ ಪ್ರಸನ್ನದೃಷ್ಟಿಯಿಂದ ಅತನನ್ನೇ ನೋಡುತ್ತಿದ್ದರು. ಎಲ್ಲರೂ ಲಂಕೆಯ ವೃತ್ತಾಂತವನ್ನು ತಿಳಿಯಬೇಕೆಂದು ಅತುರಪಡುತ್ತಿರುವುದನ್ನು ನೋಡಿ, ಹನುಮಂತನು ಮೊದಲು ಅವರಿಗೆ ಸಂದೇಹಪರಿಹಾರವಾಗುವಂತೆ "ಸಿಕ್ಕಿದಳು ಸೀತೆ" ಯೆಂಬ ಎರಡು ಮಾತುಗಳನ್ನು ಸಂಕ್ಷೇಪವಾಗಿ ಹೇಳಿಬಿಟ್ಟನು. ಆಮೇಲೆ ಹನುಮಂತನು ವಾಲಿಪುತ್ರನಾದ ಅಂಗದನ ಕೈಯನ್ನು ಹಿಡಿದುಕೊಂಡು, ಆ ಮಹೇಂದ್ರಪರ್ವತದಲ್ಲಿ ರಮಣೀಯವಾದ ಒಂದು ಪ್ರದೇಶಕ್ಕೆ ಬಂದು ಕುಳಿತನು. ಅಲ್ಲಿ ಆ ವಾನರೋತ್ತಮನು ಕಪಿವೀರರೆಲ್ಲರನ್ನೂ ನೋಡಿ "ಎಲ್ಲ ಮಿತ್ರರೆ! ಅಶೋಕವನದಲ್ಲಿ ಜನಕಪುತ್ರಿಯಾದ ಸೀತೆಯನ್ನು ಕಂಡು ಬಂದೆನು. ಈಗಲೂ ಜನಕಪುತ್ರಿಯ ಮೇಲೆ ಬಹಳ ಭಯಂಕರಾಕಾರವುಳ್ಳ ಜನೇಕರಾಕ್ಷಸಸ್ತ್ರೀಯರು ಕಾವಲಿರುವರು. ಅಲ್ಲಿ ಸೀತೆಯು ತನ್ನ ಕೂದಲನ್ನು ಒಂದೇ ಜಡೆಯಾಗಿ ಬಳೆಸಿ, ರಾಮನನ್ನು ನೋಡಬೇಕೆಂಬ ಅತುರದಿಂದ ಕಳವಳಿಸುತ್ತ ಉಪವಾಸದಿಂದ ಕಂದಿಕುಂದಿ ಕೃಶಳಾಗಿ, ಕೊಳೆಯೇರಿದ ಮೈಯುಳ್ಳವಳಾಗಿರುವಳು."

ಎಂದನು. ಆಗ ಅಲ್ಲಿದ್ದ ವಾನರರೆಲ್ಲರೂ ಆ ಹನುಮಂತನು "ಸೀತೆಯನ್ನು ಕಂಡೆನು" ಎಂದು ಹೇಳಿದ ಕರ್ಣಾಮೃತಪ್ರಾಯವಾದ ಆ ಮಾತನ್ನು ಕೇಳಿದ ಮಾತ್ರದಿಂದಲೇ ಸಂತೋಷದಿಂದ ಮೈಮರೆತಿದ್ದರು. ಆಗಲೇ ಆ ವಾನರರಲ್ಲಿ ಕೆಲವರು ಸಿಂಹನಾದವನ್ನು ಮಾಡಿದರು. ಕೆಲವರು ಅವ್ಯಕ್ತವಾದ ಕೀಚುಧ್ವನಿಯಿಂದ ಕೂಗಿದರು. ಕೆಲವರು ಮೇಘಗಳಂತೆ ಗರ್ಜಿಸಿದರು. ಕೆಲವರು ತಮ್ಮ ಕಪಿಜಾತಿಗೆ ತಕ್ಕಂತೆ ಕಿಲಕಿಲಧ್ವನಿಯನ್ನು ಮಾಡಿದರು. ಒಬ್ಬರ ಗರ್ಜನೆಯನ್ನು ಕೇಳಿ ಮತ್ತೊಬ್ಬರು ಅದಕ್ಕಿಂತಲೂ ಗಟ್ಟಿಯಾಗಿ ಗರ್ಜಿಸಿದರು. ಕೆಲವು ಕಪಿವೀರರು ಸಂತೋಷದಿಂದ ಮೈತಿಳಿಯದೆ, ಉದ್ಧವಾಗಿಯೂ, ದಪ್ಪವಾಗಿಯೂ ಇರುವ ತಮ್ಮ ತಮ್ಮ ಬಾಲಗಳನ್ನೂ ಮೇಲಕ್ಕೆತ್ತಿ, ಆ ಬಾಲಗಳನ್ನು ನೆಲಕ್ಕಪ್ಪಳಿಸಿದರು. ಮತ್ತೆ ಕೆಲವು ವಾನರರು ಮದದಾನೆಯಂತಿರುವ ಈ ಹನುಮಂತನನ್ನು ನೋಡಿ ಸಂತೋಷವಶರಾಗಿ, ಆ ಬೆಟ್ಟದ ಶಿಖರಗಳಿಂದ ಒಂದೇ ನೆಗೆತಕ್ಕೆ ಹಾರಿಬಂದು, ಅತನನ್ನು ಬಿಗಿಯಾಗಿ ಅಪ್ಪಿಕೊಂಡರು. ಹನುಮಂತನು ಹೀಗೆ ಒಂದೆರಡು ಮಾತುಗಳನ್ನು ಹೇಳಿ ಮುಗಿಸಿದಮೇಲೆ ಯುವರಾಜನಾದ ಅಂಗದನು ಆ ಸಮಸ್ತ ವಾನರರ ಮಧ್ಯದಲ್ಲಿ ಹನುಮಂತನನ್ನು ಕುರಿತು, "ಎಲ್ಲೆ ವಾನರವೀರನೆ! ಬಲದಲ್ಲಿಯಾಗಲಿ, ವೀರ್ಯದಲ್ಲಿಯಾಗಲಿ ನಿನಗೆ ಸಮಾನನೊಬ್ಬನೂ ಇಲ್ಲ! ಇಷ್ಟು ವಿಸ್ತಾರವಾದ ಸಮುದ್ರವನ್ನು ಹಾರಿ ಹಿಂತಿರುಗಿ ಬಂದೆಯಲ್ಲವೆ! ಎಲ್ಲೆ ವಾನರೋತ್ತಮನೆ! ನಮ್ಮೆಲ್ಲರಿಗೂ ನೀನೇ ಈಗ ಪ್ರಾಣದಾನವನ್ನು ಮಾಡಿದಂತಾಯಿತು! ನಾವು ಕೃತಾರ್ಥವಾಗಿ ಹಿಂತಿರುಗಿ ರಾಮನ ಬಳಿಗೆ ಹೋಗುವುದೂ ನಿನ್ನ ಅನುಗ್ರಹವೇ ಹೊರತು ಬೇರೆಯಲ್ಲ. ಆಹಾ! ನಿನ್ನ ಸ್ವಾಮಿಭಕ್ತಿಯೂ, ನಿನ್ನ ವೀರ್ಯವೂ, ನಿನ್ನ ಧೈರ್ಯವೂ ಲೋಕಾದ್ಭುತವು! ಯಶಸ್ವಿನಿಯಾದ ಆ ರಾಮಪತ್ನಿಯು ದೈವವಶದಿಂದ ನಿನಗೆ ಗೋಚರಿಸಿದಳು. ಶ್ರೀರಾಮನು ಸೀತಾವಿರಹದಿಂದುಂಟಾದ ತನ್ನ ದುಃಖವನ್ನು ದೈವಾಧೀನನಿಂದ ನೀಗುವಂತಾಯಿತು. ಎಂದನು. ಆ ಮೇಲೆ ಅಲ್ಲಿದ್ದ ಸಮಸ್ತ ವಾನರರೂ ಸಂತೋಷದಿಂದ ಅಂಗದನನ್ನೂ, ಜಾಂಬವಂತನನ್ನೂ, ಹನುಮಂತನನ್ನೂ ನಡುವೆ ಬಿಟ್ಟುಕೊಂಡು ಸುತ್ತಲೂ ಅಲ್ಲಲ್ಲಿ ವಿಸ್ತಾರವಾಗಿದ್ದ ಕಲ್ಲುಬಂಡೆಗಳಮೇಲೆ ಕುಳಿತರು. ಇವರೆಲ್ಲರೂ ಹನುಮಂತನು ಸಮುದ್ರವನ್ನು ದಾಟಿದುದು ಮೊದಲು, ಲಂಕೆಯನ್ನೂ, ಸೀತೆಯನ್ನೂ, ರಾವಣನನ್ನೂ ನೋಡಿ ಬಂದ ಕ್ರಮಗಳನ್ನೆಲ್ಲಾ ವಿಸ್ತರವಾಗಿ ಕೇಳಬೇಕೆಂಬ ಕುತೂಹಲದಿಂದ, ಬದ್ಧಾಂಜಲಿಗಳಾಗಿ ಆ ಹನುಮಂತನ ಮುಖವನ್ನೇ ನೋಡುತ್ತಿದ್ದರು. ಅಲ್ಲಿ ಶ್ರೀಮಂತನಾದ ಅಂಗದನು ಸ್ವರ್ಗದಲ್ಲಿ ದೇವತೆಗಳಿಂದ ಪರಿವೃತ

ನಾದ ಸೇವೇಂದ್ರನಂತೆ ಅನೇಕ ವಾನರರಿಂದ ಪರಿವೇಷ್ಟಿತನಾಗಿ ಕುಳಿತಿದ್ದನು. ಆಗ ಯತಸ್ವಿಯೂ ಪ ಹನುಮಂತನೂ ಉತ್ತಮಾಂಗದಗಳಿಂದ ಶೋಭಿತನಾದ ಅಂಗದನೂ, ಸಂತೋಷದಿಂದ ಕುಳಿತಿರಲು, ಮಹೋನ್ನತವಾದ ಆ ಮಹೇಂದ್ರಪರ್ವತ ಶಿಖರವು ಅಪೂರ್ವವಾದ ಒಂದು ಕಾಂತಿವಿಶೇಷದಿಂದ ಬೆಳಗುತಿತ್ತು.

ಇಲ್ಲಿಗೆ ಐವತ್ತೇಳನೆಯ ಸರ್ಗವು.

ಹನುಮಂತನು ತಾನು ಅಂಕೆಗೆ ಹೋಗಿಬಂದ ವೃತ್ತಾಂತಗಳೆಲ್ಲವನ್ನೂ ವಾನರರಿಂಗೆ ವಿವರಿಸಿ ತಿಳಿಸಿದುದು.

ಹೀಗೆ ಹನುಮಂತನೇ ಮೊದಲಾದ ಮಹಾಬಲಾಢ್ಯರಾದ ವಾನರರೆಲ್ಲರೂ, ಮಹೇಂದ್ರಪರ್ವತದ ಶಿಖರದಲ್ಲಿ ಪರಮಸಂತೋಷದಿಂದ ಕುಳಿತಿದ್ದರು. ಆಗ ಹನುಮಂತನ ಸಂದರ್ಶನದಿಂದ ಸಂತೋಷಭರಿತನಾದ ಜಾಂಬವಂತನು, ವಾನರರ ನಡುವೆ ಕುಳಿತಿದ್ದ ಆ ವಾಯುಪುತ್ರನನ್ನು ಕುರಿತು, ಅವನು ಸೀತೆಯನ್ನು ನೋಡಿಬಂದ ಕಾರ್ಯದ ಸಂಗತಿಯನ್ನು ವಿಚಾರಿಸುತ್ತ, "ವತ್ಸ ಆಂಜನೇಯನೆ! ನೀನು ಸೀತಾದೇವಿಯನ್ನು ಹೇಗೆ ನೋಡಿದೆ? ಆ ಕೆಯು ಅಲ್ಲಿ ಯಾವ ಸ್ಥಿತಿಯಲ್ಲಿರುವಳು? ಕ್ರೂರಕರ್ಮಿಯಾದ ರಾವಣನು ಅವಳ ವಿಷಯದಲ್ಲಿ ಹೇಗೆ ನಡೆಯುತ್ತಿರುವನು? ಇದ್ದುದ್ದಿದ್ದಹಾಗೆ ಅವೆಲ್ಲವನ್ನೂ ನನಗೆ ತಿಳಿಸು! ಅಲ್ಲಿನ ಸಂಗತಿಗಳನ್ನು ಕೇಳಿ ಮುಂದಿನ ಕಾರ್ಯದ ನಿಶ್ಚಯವನ್ನು ಆಲೋಚಿಸುವೆವು. ನಾವು ಇಲ್ಲಿಂದ ರಾಮನ ಬಳಿಗೆ ಹೋದಮೇಲೆ ನಮಗೆ ಯಾವ ವಿಷಯಗಳನ್ನು ತಿಳಿಸಬೇಕೋ, ಯಾವಯಾವ ಸಂಗತಿಗಳನ್ನು ಅವನಿಗೆ ತಿಳಿಸಿ ಮರೆಸಿಡಬೇಕೋ ಅವೆಲ್ಲವನ್ನೂ ಈಗಲೇ ಇಲ್ಲಿ ನನಗೆ ತಿಳಿಸಿಬಿಡು" ಎಂದನು. ಈ ಜಾಂಬವಂತನ ವಾಕ್ಯವನ್ನು ಕೇಳಿ ಹನುಮಂತನು ಸಂತೋಷದಿಂದ ಪುಳಕಿತವಾದ ಮೈಯುಳ್ಳವನಾಗಿ, ಮೊದಲು ಸೀತಾದೇವಿಗೆ ತಲೆಬಾಗಿ ನಮಸ್ಕರಿಸಿ, ಹೇಳತೊಡಗಿದನು. "ಎಲೈ ಪ್ರಿಯನಿಧಿಗಳಿರಾ! ನೀವು ನೋಡುತ್ತಿದ್ದ ಹಾಗೆಯೇ ನಾನು ಈ ಮಹೇಂದ್ರಪರ್ವತ ಶಿಖರದಿಂದ ಸಮುದ್ರದ ದಕ್ಷಿಣತೀರವನ್ನು ಸೇರುವುದಕ್ಕಾಗಿ ಆಕಾಶಕ್ಕೆ ಹಾರಿದೆನಷ್ಟೆ! ನಾನು ಎಷ್ಟೋ ಎಚ್ಚರಿಕೆಯಿಂದ ಹಾರಿ ಹೋಗುತ್ತಿರುವಾಗಲೂ ನಡುದಾರಿಯಲ್ಲಿ ನನಗೆ ಏನೋ ಒಂದು ಭಯಂಕರವಾದ ಅಡ್ಡಿಯುಂಟಾದಂತೆ

ಗತೋರಿತು! ನನ್ನ ಮುಂದೆ ದಾರಿಗಡ್ಡಲಾಗಿ ಸುವರ್ಣಮಯವಾದ ಮತ್ತು ಅತಿ ಗಮನೋಹರವಾದ ಒಂದ ಪರ್ವತಶಿಖರವು ಗೋಚರಿಸಿತು. ಅದು ದಾರಿಗಡ್ಡಲಾಗಿ ತನಿಂತಿರುವುದನ್ನು ನೋಡಿ ನನ್ನನ್ನು ತಡೆಯುವುದಕ್ಕಾಗಿಯೇ ಅದು ಹಾಗೆ ನಿಂತಿರ ಬೇಕೆಂದೆಡಸಿದೆನು. ಮುಂದೆ ದಾರಿಗಡ್ಡಲಾಗಿದ್ದ ಆ ಸುವರ್ಣಪರ್ವತವನ್ನು ನೋಡಿ ದೊಡನೆ, ಅದನ್ನು ಭೇದಿಸಿಬಿಡಬೇಕೆಂದೇ ನನಗೆ ಬುದ್ಧಿಯು ಹುಟ್ಟಿತು. ಆಗಲೇ ನಾನು ಬಾಲದಿಂದ ಅದನ್ನು ಅಪ್ಪಳಿಸಿಹೊಡೆದೆನು. ಸೂರ್ಯಸಮಾನ ವಾದ ಆ ಪರ್ವತದ ಒಂದು ಶಿಖರವು ಸಹಸ್ರಧಾಗವಾಗಿ ಮುರಿದುಬಿದ್ದಿತು. ಈ ನನ್ನ ಪ್ರಯತ್ನವನ್ನು ನೋಡಿ ಆ ಪರ್ವತವು ನನ್ನ ಮನಸ್ಸನ್ನು ಉಲ್ಲಾಸ ಗೊಳಿಸುವಂತೆ ಕಿವಿಗಿಂಪಾದ ಮೃದುಸ್ವರದಿಂದ "ಅಪ್ಪ! ಮಗು!" ಎಂದು ನನ್ನನ್ನು ಕರೆದು, "ಎಲೆ ವತ್ಸನೆ! ನಾನು ನಿನ್ನ ತಂದೆಯಾದ ವಾಯುದೇವನಿಗೆ ಮಿತ್ರನಾದುದರಿಂದ ನಿನಗೆ ಚಿಕ್ಕಪ್ಪನೆಂದು ತಿಳಿ! ನನ್ನನ್ನು ಮೈನಾಕವೆಂದು ಕರೆಯುವರು. ನಾನು ಈ ಸಮುದ್ರದಲ್ಲಿಯೇ ವಾಸಮಾಡುತ್ತಿರುವೆನು. ಎಲೆ ಕುಮಾರನೆ! ಪೂರ್ವಕಾಲದಲ್ಲಿ ಪರ್ವತಗಳೆಲ್ಲಕ್ಕೂ ರೆಕ್ಕೆಗಳಿದ್ದುವು. ಆ ರೆಕ್ಕೆಗಳ ಬಲದಿಂದ ಅವು ನಾನಾದಿಕ್ಕುಗಳಿಗೂ ಹಾರಿ ಪ್ರಾಣಿಗಳನ್ನು ಹಿಂಸಿಸುತ್ತಿದ್ದುವು. ಆ ಪರ್ವತಗಳ ಚೇಷ್ಟೆಯನ್ನು ಕೇಳಿ ಇಂದ್ರನು ತನ್ನ ವಜ್ರಾಯುಧದಿಂದ ಆ ಪರ್ವತಗಳ ರೆಕ್ಕೆಗಳನ್ನು ಸಹಸ್ರಧಾಗವಾಗಿ ಭೇದಿಸುತ್ತ ಬಂದನು. ಆದರೆ ನನ್ನನ್ನು ಮಾತ್ರ ಮಹಾತ್ಮನಾದ ನಿನ್ನ ತಂದೆಯು ಈ ಅಪಾಯದಿಂದ ತಪ್ಪಿಸಿ ಕಾಪಾಡಿದನು. ಆಗ ನಿನ್ನ ತಂದೆಯಾದ ವಾಯುದೇವನೇ ನನ್ನನ್ನು ತೂರಿಸಿ ಕೊಂಡು ಬಂದು ಈ ಸಮುದ್ರದಲ್ಲಿ ಹಾಕಿಬಿಟ್ಟನು. ಇದರಿಂದ ನಿನ್ನ ತಂದೆಗೆ ನಾನು ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಸಾಲದು. ಶ್ರೀರಾಮನಿಗೂ ನಾನು ನನ್ನಿಂದಾದ ಸಹಾಯವನ್ನು ಮಾಡಬೇಕಾಗಿರುವುದು. ಶ್ರೀರಾಮನು ಸಾಮಾನ್ಯನಲ್ಲ, ಧಾರ್ಮಿಕರಲ್ಲಿ ಮೇಲೆನಿಸಿಕೊಂಡವನು. ಮಹೇಂದ್ರನಿಗೆಣೆಯಾದ ಪರಾಕ್ರಮವುಳ್ಳವನು. ಅದುದರಿಂದ ವಾಯುಪುತ್ರನಾಗಿಯೂ, ರಾಮದೂತ ನಾಗಿಯೂ ಇರುವ ನಿನ್ನನ್ನು ನಾನು ಮನ್ನಿಸುವುದಕ್ಕೆ ಪ್ರಬಲವಾದ ಈ ಎರಡು ಕಾರಣಗಳುಂಟು" ಎಂದನು. ಮಹಾತ್ಮನಾದ ಆ ಮೈನಾಕನು ಹೇಳಿದ ಈ ಮಾತನ್ನು ಕೇಳಿ ನಾನೂ ನನ್ನ ಕಾರ್ಯಗೌರವವನ್ನೂ ನನ್ನ ಮನಸ್ಸಿನ ಆತುರ ವನ್ನೂ ಆ ಪರ್ವತೇಂದ್ರನಿಗೆ ತಿಳಿಸಿ, ಅವನಿಂದ ಮುಂದಿನ ಪ್ರಯಾಣಕ್ಕೆ ಅನು ಮತಿಯನ್ನು ಪಡೆದುಕೊಂಡೆನು. ನನ್ನೊಡನೆ ಮೈನಾಕವು ಈ ಮಾತುಗಳನ್ನಾ ಡುವವರೆಗೂ, ಮನುಷ್ಯರೂಪದಿಂದಿದ್ದು, ನಮ್ಮ ಸಲ್ಲಾಪವು ಮುಗಿಸಿದಮೇಲೆ ಆ

ಮನುಷ್ಯರೂಪವನ್ನು ಮರೆಸಿ ಪರ್ವತಶರೀರದಿಂದ ಸಮುದ್ರದಮೇಲೆಯೇ 1 ನಿಂತಿತ್ತು. ಆ ಮೇಲೆ ನಾನು ನನ್ನ ಹೆಚ್ಚುವೇಗವನ್ನೇ ಹಿಡಿದು ಮುಂದಿನ ಪ್ರಯಾಣಕ್ಕೆ ಹೊರಟೆನು. ಬಹಳಹೊತ್ತಿನವರೆಗೆ ಅದೇ ವೇಗದಿಂದ ಮುಂದಿನ ದಾರಿಯನ್ನು ಹಿಡಿದುಹೋದೆನು. ಇಷ್ಟರಲ್ಲಿ ನಾಗಮಾತೆಯಾದ ಸುರಸೆಯೆಂಬ ವಳನ್ನು ಕಂಡೆನು. ಅವಳು ಸಮುದ್ರಮಧ್ಯದಲ್ಲಿ ನನ್ನನ್ನು ನೋಡಿ "ಎಲೆ ವಾನರೋತ್ತಮನೆ! ದೇವತೆಗಳು ನಿನ್ನನ್ನು ನನ್ನ ಆಹಾರಕ್ಕಾಗಿಯೇ ಏರ್ಪಡಿಸಿರುವರು. ಆದುದರಿಂದ ನಿನ್ನನ್ನು ನಾನು ಭಕ್ಷಿಸಿಬಿಡುವೆನು. ಬಹುಕಾಲಕ್ಕೆ ಈಗ ನೀನು ನನಗೆ ಸಿಕ್ಕಿದೆ" ಎಂದು ಕೂಗಿಹೇಳಿದಳು. ಈ ಮಾತನ್ನು ಕೇಳಿದೊಡನೆಯೇ ಸ್ವಾಮಿಕಾರ್ಯವು ಕೆಡುವುದೆಂಬ ಚಿಂತೆಯಿಂದ ನನ್ನ ಮುಖವು ಬಣ್ಣಗುಂದಿತು. ಆಗ ನಾನು ಅವಳ ಮುಂದೆ ದೈನ್ಯದಿಂದ ಕೈಜೋಡಿಸಿ ನಿಂತು. "ಅಮ್ಮಾ! ದಶರಥ ಪುತ್ರನಾದ ಶ್ರೀಮಂತನಾದ ರಾಮನು, ತನ್ನ ತಮ್ಮನಾದ ಲಕ್ಷ್ಮಣನೊಡನೆಯೂ, ಪತ್ನಿಯಾದ ಸೀತಾದೇವಿಯೊಡನೆಯೂ ದಂಡಕಾರಣ್ಯಕ್ಕೆ ಬಂದನು. ಅಲ್ಲಿ ದುರಾತ್ಮನಾದ ರಾವಣನು ಶ್ರೀರಾಮನ ಪತ್ನಿಯಾದ ಸೀತೆಯನ್ನು ಕದ್ದುಕಂದು ಲಂಕೆಯಲ್ಲಿಟ್ಟಿರುವನು. ಈಗ ನಾನು ಆ ರಾಮನ ಆಜ್ಞೆಯಿಂದ ಅವನ ಪತ್ನಿಯಾದ ಆ ಸೀತೆಯಬಳಿಗೆ ದೂತನಾಗಿ ಹೋಗುತ್ತಿರುವೆನು. ಎಲೆ ದೇವಿ! ನೀನೂ ಆ ರಾಮನ ದೇಶದಲ್ಲಿ ವಾಸಮಾಡುವವಳಲ್ಲವೆ! ನೀನೂ ನಿನ್ನಿಂದಾದ ಮಟ್ಟಿಗೆ ರಾಮನಿಗೆ ಸಹಾಯವನ್ನು ಮಾಡಬೇಕು. ಆದುದರಿಂದ ನನ್ನನ್ನು ಬಿಡು. ಅಥವಾ ನಿನಗೆ ಹೇಗಾದರೂ ನನ್ನನ್ನು ಭಕ್ಷಿಸಿಯೇ ತೀರಬೇಕೆಂಬ ಆಶೆಯಿದ್ದರೆ, ಈಗ ನಾನು ಸೀತೆಯನ್ನು ನೋಡಿಬಂದು ಆ ವೃತ್ತಾಂತವನ್ನು ರಾಮನಿಗೆ ತಿಳಿಸಿಬರುವವರೆಗಾದರೂ ನನ್ನನ್ನು ಬಿಟ್ಟುಕೊಡು! ಆ ಮೇಲೆ ನಾನೇ ಬಂದು ನಿನ್ನ ಬಾಯನ್ನು ಪ್ರವೇಶಿಸಿಬಿಡುವೆನು. ಈ ವಿಷಯದಲ್ಲಿ ಬೇಕಾದರೆ ನಾನು ನಿನಗೆ ಸತ್ಯವಾಗಿ ಆಣೆಯಿಟ್ಟು ಹೇಳುವೆನು." ಎಂದು ಕೇಳಿಕೊಂಡೆನು. ಇಷ್ಟಾದರೂ

---

1 ಈ ಕಾಂಡದ ಮೊದಲನೆಯ ಸರ್ಗದಲ್ಲಿ, ಇಂದ್ರಾನುಗ್ರಹದಿಂದ ಮೈನಾಕವು ಭೂರಿನಲ್ಲಿ ಮುಳುಗದೆ ಹಾಗಯೇ ಸಮುದ್ರದಮೇಲೆ ನಿಂತಿತ್ತೆಂದು ಹೇಳಲ್ಪಟ್ಟಿರುವುದು. ಹನುಮಂತನು ಹಿಂತಿರುಗಿ ಸಮುದ್ರವನ್ನು ದಾಟಿ ಬರುವಾಗಲೂ "ಪರ್ವತೇಂದ್ರಂ ಸುನಾಭಂಚ ಸಮುಪಸ್ಪೃಶ್ಯ" ಎಂದು ಮೈನಾಕವನ್ನು ಮುಟ್ಟಿಬಂದುದಾಗಿ ಹೇಳಿದೆ. ರಾಮನು ಸೀತೆಯೊಡನೆ ಅಯೋಧ್ಯೆಗೆ ಹಿಂತಿರುಗುವಾಗಲೂ, "ಹಿರಣ್ಮಯಾಭಂ ಶೈಲೇಂದ್ರಂ ಕಾಂಚನಂ ಪಶ್ಯ ಮೈಥಿಲಿ" ಎಂದು ಆ ಪರ್ವತವನ್ನು ತೋರಿಸಿರುವುದರಿಂದ ಮೈನಾಕವು ಸಮುದ್ರದ ಮೇಲೆಯೇ ನಿಂತಿತ್ತೆಂಬುದು ಸ್ಪಷ್ಟವು.

ಕಾಮರೂಪಿಣಿಯಾದ ಆ ಸುರಸೆಯು ನನ್ನ ಪ್ರಾರ್ಥನೆಯನ್ನಂಗೀಕರಿಸದೆ ಹಟ ಹಿಡಿದು ತಿರುಗಿ ನನ್ನನ್ನು ಕುರಿತು "ಎಲೆ ವಾನರನೆ! ನನ್ನ ಕಣ್ಣಿಗೆ ಬಿದ್ದಮೇಲೆ ಯಾವನೊಬ್ಬನೂ ನನ್ನನ್ನು ವಿೂರಿಹೋಗಕೂಡದು! ನನಗೆ ಇದೊಂದು ವರವು." ಎಂದಳು. ನಾನು ಈ ಮಾತನ್ನು ಕೇಳಿದೊಡನೆ ಆ ಸುರಸೆಯ ಬಾಯಲ್ಲಿ ಪ್ರವೇಶಿಸಿ ಬರುವುದಕ್ಕಾಗಿ, ಮೊದಲೇ ಹತ್ತುಯೋಜನಗಳ ವಿಸ್ತಾರವುಳ್ಳ ನನ್ನ ಮೈಯನ್ನು ಮತ್ತಷ್ಟು ದೊಡ್ಡದಾಗಿ ಬೆಳೆಸುತ್ತ ಬಂದೆನು. ಇದನ್ನು ನೋಡಿ ಸುರಸೆಯೂ ನನ್ನ ಮೈಯಳತೆಗೆ ತಕ್ಕಂತೆ ತನ್ನ ಬಾಯನ್ನಗಲಿಸುತ್ತ ಬಂದಳು. ಹೀಗೆ ಅವಳ : ಅತಿವಿಶಾಲವಾಗಿ ಬಾಯಗಲಿಸಿರುವುದನ್ನು ನೋಡಿ ನಾನು ಆ ಕ್ಷಣವೇ ನನ್ನ ದೇಹವನ್ನು ಬಹಳ ಸಣ್ಣದಾಗಿ ಒಂದೇ ಅಂಗುಲಪ್ರಮಾಣಕ್ಕೆ ತಂದು ಕೊಂಡು ಅವಳ ಬಾಯನ್ನು ಪ್ರವೇಶಿಸಿ ನಿಮಿಷಮಾತ್ರದಲ್ಲಿ ಹೊರಕ್ಕೆ ಬಂದು ಬಿಟ್ಟೆನು. ಆಗ ಸುರಸಾದೇವಿಯು ನನ್ನಲ್ಲಿ ಪ್ರಸನ್ನಳಾಗಿ, ತನ್ನ ಮೊದಲಿನ ರೂಪವನ್ನೇ ಧರಿಸಿ ನಿಂತು ನನ್ನನ್ನು ನೋಡಿ, "ಎಲೈ ವಾನರತಿಲಕನೆ! ಇನ್ನು ನೀನು ನಿನ್ನ ಕಾರ್ಯಸಿದ್ಧಿಗಾಗಿ ಸುಖವಾಗಿ ಹೋಗಬಹುದು. ಸೀತೆಯನ್ನು ಕರೆತಂದು ಮಹಾತ್ಮನಾದ ರಾಮನೊಡನೆ ಸೇರಿಸು! ಎಲೈ ಮಹಾಬಾಹುವೆ! ನಿನಗೆ ಕ್ಷೇಮವಾಗಲಿ! ನಿನ್ನಲ್ಲಿ ನನಗೆ ಸಂಪೂರ್ಣಪ್ರೀತಿಯು ಹುಟ್ಟಿತು." ಎಂದಳು. ಆಗ ಸಮಸ್ತಭೂತಗಳೂ ನನ್ನನ್ನು "ಭಲೆ! ಭಲೆ! ಎಂದು ಕೊಂಡಾಡುತಿದ್ದುವು. ಆ ಮೇಲೆ ನಾನು ಗರುಡನಂತೆ ವೇಗದಿಂದ ಆಕಾಶದಲ್ಲಿ ಹಾರಿಹೋಗುತ್ತಿದ್ದೆನು. ಇಷ್ಟರಲ್ಲಿ ಯಾವುದೋ ಒಂದು ಭೂತವು ನನ್ನ ದೇಹಚ್ಛಾಯೆಯನ್ನು ತಡೆದು ನಿಲ್ಲಿಸಿತು. ಅದು ಯಾವುದೆಂದೇ ನನಗೆ ತಿಳಿಯಲಿಲ್ಲ. ಹೀಗೆ ನನ್ನ ವೇಗವು ನಿಂತು ಹೋಗಲು, ದೈನ್ಯದಿಂದ ಹತ್ತುದಿಕ್ಕುಗಳನ್ನೂ ತಿರುಗಿ ನೋಡಿದೆನು. ಎಲ್ಲಿ ನೋಡಿದರೂ ನನ್ನನ್ನು ತಡೆದವರಾರೆಂದು ನನಗೆ ತಿಳಿಯಲಿಲ್ಲ. ನನಗೆ ಆಗ ಮನಸ್ಸಿನಲ್ಲಿ, 'ಆಹಾ! ಇದೇನು? ಆಂತರಿಕ್ಷದಲ್ಲಿ ನನ್ನ ಗತಿಗೆ ಇದೊಂದು ವಿಘ್ನವುಂಟಾಯಿತು! ಯಾವ ರೂಪವೂ ಕಣ್ಣಿಗೆ ಕಾಣುವುದಿಲ್ಲವಲ್ಲಾ! ಇನ್ನು ಮಾಡುವುದೇನು!' ಎಂದು ಮಹತ್ತಾದ ಚಿಂತೆಯು ಹುಟ್ಟಿತು. ಆದರೆ ಈ ವ್ಯಸನದಲ್ಲಿ ಮೊದಲು ನಾನು ಕೆಳಗೆ ಸಮುದ್ರವನ್ನು ಚೆನ್ನಾಗಿ ಕಣ್ಣಿಟ್ಟುನೋಡಲಿಲ್ಲ. ಅಮೇಲೆ ಗಮನಿಸಿ ನೋಡಿದಾಗ ಸಮುದ್ರಜಲದಲ್ಲಿ ಭಯಂಕರರೂಪವುಳ್ಳ ಒಬ್ಬ ರಾಕ್ಷಸಿಯನ್ನು ಕಂಡೆನು. ಆಗಲೇ ಆ ಘೋರರಾಕ್ಷಸಿಯು ನನ್ನನ್ನು ನೋಡಿ ಅಟ್ಟಹಾಸದಿಂದ ನಗುತ್ತ, ಸ್ವಲ್ಪವೂ ಭಯವಿಲ್ಲದೆ ಹಟವಾದದಿಂದ "ಎಲೆ! ಎಲ್ಲಿಗೆ ಹೋಗುತ್ತಿರುವೆ? ಚೆನ್ನಾಗಿ ಕೊಬ್ಬಿಬೆಳೆದ ಈ ನಿನ್ನ ಮೈಯು, ಹಸಿದು ಬಂದ

ನನಗೆ ಒಳ್ಳೇ ಆಹಾರವಾಗಿ ಸಿಕ್ಕಿತು. ಬಹುಕಾಲದಿಂದ ಹಸಿದಿರುವೆನು! ನನಗೆ ತೃಪ್ತಿಯಾಗುವಂತೆ ಮಾಡು'' ಎಂದು ಕೂಗಿದಳು. ಆಗ ನಾನು ಅದನ್ನು ಕುರಿತು ''ಎಲೆ ರಾಕ್ಷಸಿ! ಒಳ್ಳೇದು! ಹಾಗೆಯೇ ಆಗಲಿ!'' ಎಂದು ಹೇಳಿ ಆಗಲೇ ನನ್ನ ಮೈಯ್ಯನ್ನು ಆ ರಾಕ್ಷಸಿಯ ಬಾಯಿಗಿಂತಲೂ ದೊಡ್ಡದಾಗಿ ಬೆಳಿಸಿಬಿಟ್ಟೆನು. ಆ ಘೋರರಾಕ್ಷಸಿಯೂ ಕೂಡ ನನ್ನನ್ನು ನುಂಗುವುದಕ್ಕೆ ತಕ್ಕಂತೆ ತನ್ನ ಬಾಯನ್ನೂ ಮೇಲಿಮೇಲೆ ಆಗಲಿಸುತ್ತ ಬಂದಳು. ಆ ರಾಕ್ಷಸಿಗಾದರೋ ನನ್ನ ಶಕ್ತಿಯಾಗಲಿ, ನನ್ನಿಂದ ತನಗೆ ಸಂಭವಿಸಬಹುದಾದ ಭಂಗವಾಗಲಿ ಮೊದಲು ತಿಳಿಯದೆಹೋಯಿತು. ಇಷ್ಟರಲ್ಲಿ ನಾನು ನನ್ನ ದೊಡ್ಡರೂಪವನ್ನು ನಿಮಿಷಮಾತ್ರದಲ್ಲಿ ಬಹಳ ಸಣ್ಣದಾಗಿ ಮಾಡಿಕೊಂಡು, ಆ ರಾಕ್ಷಸಿಯ ಹೊಟ್ಟೆಯೊಳಗೆ ಪ್ರವೇಶಿಸಿ, ಅಲ್ಲಿ ಮೊದಲಿನಂತೆ ನನ್ನ ಮೈಯನ್ನು ಬೆಳಿಸಿ, ಅವಳ ಎದೆಯನ್ನು ಸೀಳಿಕೊಂಡು ಹೊರಕ್ಕೆ ಬಂದು, ಆಗಲೇ ಆಕಾಶಕ್ಕೆ ಹಾರಿಬಿಟ್ಟೆನು. ನಾನು ಹೀಗೆ ಆಕೆಯ ಎದೆಯನ್ನು ಸೀಳಿಕೊಂಡು ಬಂದೊಡನೆ ಪರ್ವತಾಕಾರವುಳ್ಳ ಆ ರಾಕ್ಷಸಿಯ ತೋಳುಗಳೆರಡೂ ಕಳಚಿಬಿದ್ದವು. ಆಗಲೇ ಅವಳು ಸಕ್ತು ಸಮುದ್ರದಲ್ಲಿ ಮುಳುಗಿದಳು. ಆಗ ಆಕಾಶದಲ್ಲಿ ನೆರೆದಿದ್ದ ಸಿದ್ಧಚಾರಣಾದಿಗಳೆಲ್ಲರೂ ''ಭಲೆ! ಹನುಮಂತನು ತನ್ನ ಮಹಾವೇಗದಿಂದ ಸಿಂಹಿಕೆಯೆಂಬ ಘೋರರಾಕ್ಷಸಿಯನ್ನೂ ಕೊಂದುಬಿಟ್ಟನು.'' ಎಂದು ಹೇಳಿಕೊಳ್ಳುತ್ತಿದ್ದ ಮಾತು ನನ್ನ ಕಿವಿಗೆ ಕೇಳಿಸಿತು. ಹೀಗೆ ನಾನು ಸಿಂಹಿಕೆಯನ್ನು ಕೊಂದಮೇಲೆ, ಪ್ರಾಣಾಂತಕರವಾದ ಆ ಸಾಹಸಕಾರ್ಯವನ್ನೇ ಮನಸ್ಸಿನಲ್ಲಿ ಆಗಾಗ ಸ್ಮರಿಸುತ್ತ, ಬಹಳ ದೂರದವರೆಗೆ ಹಾರಿಹೋದೆನು. ಮುಂದೆ ಅನೇಕನಕ್ಷತ್ರಗಳಿಂದ ನಿಬಿಡವಾಗಿಯೂ, ಲಂಕೆಗೆ ವಾಸಭೂತವಾಗಿಯೂ ಇರುವ ಸಮುದ್ರದ ದಕ್ಷಿಣತೀರವನ್ನು ಕಂಡೆನು. ಸೂರ್ಯನು ಮುಳುಗಿದಮೇಲೆ ಯಾವ ರಾಕ್ಷಸರಿಗೂ ತಿಳಿಯದಂತೆ ರಾಕ್ಷಸನಿವಾಸವಾದ ಆ ಲಂಕೆಯನ್ನು ಪ್ರವೇಶಿಸುವುದಕ್ಕೆ ಹೋದೆನು. ನಾನು ಹೀಗೆ ಎಚ್ಚರಿಕೆಯಿಂದ ಸಮಯವನ್ನು ನಿರೀಕ್ಷಿಸಿ ಪ್ರವೇಶಿಸುವಾಗಲೂ, ಅಲ್ಲಿ ಪ್ರಳಯಕಾಲದ ಮೇಘಕ್ಕೆ ಸಮಾನವಾದ ಅಟ್ಟಹಾಸದಿಂದ ಕೂಗುತ್ತ ಯಾವಳೋ ಒಬ್ಬ ಹೆಂಗಸು ಮುಂದೆ ಕಾಣಿಸಿದಳು. ಬೆಂಕಿಯುರಿಯಂತೆ ಕೆಂಪಾದ ಕೂದಲುಗಳುಳ್ಳ, ಭಯಂಕರಾಕಾರಿಯಾದ ಆ ರಾಕ್ಷಸಿಯು ನನ್ನನ್ನು ಕಂಡೊಡನೆ ನನ್ನನ್ನು ಕೊಲ್ಲಬೇಕೆಂದು ಮುಂದೆ ಬಂದಳು. ಆಗ ನಾನು ನನ್ನ ಎಡಗೈಯಿಂದಲೇ ಆಕೆಯನ್ನು ಗುದ್ದಿ, ಅವಳನ್ನು ಸೋಲಿಸಿ ಪ್ರದೋಷಕಾಲದಲ್ಲಿ ಲಂಕೆಯನ್ನು ಪ್ರವೇಶಿಸುತ್ತಿದ್ದೆನು. ಇಷ್ಟರಲ್ಲಿ ನನ್ನ ಸಾಮರ್ಥ್ಯಕ್ಕೆ ಭಯಪಟ್ಟ ಆ ಹೆಂಗಸು ತಾನಾಗಿಯೇ ನನ್ನನ್ನು ಕರೆದು, ''ಎಲೈ ವೀರನೇ!

ನಾನೇ ಲಂಕಾಧಿದೇವತೆಯು, ನಿನ್ನ ಪರಾಕ್ರಮಕ್ಕೆ ಸೋತೆನು! ನನ್ನನ್ನೇ ನೀನು ಸೋಲಿಸಿರುವಾಗ ಇಲ್ಲಿನ ಸಮಸ್ತ ರಾಕ್ಷಸರನ್ನೂ ಜಯಿಸುವುದರಲ್ಲಿ ಸಂದೇಹವೇ ಇಲ್ಲ'' ಎಂದು ಹೇಳಿ, ತಾನೇ ನನಗೆ ಅನುಜ್ಞೆಯನ್ನು ಕೊಟ್ಟು ಕಳುಹಿಸಿದಳು. ಲಂಕೆಯಲ್ಲಿ ನಾನು ಆ ರಾತ್ರಿಯೆಲ್ಲವೂ ಸೀತೆಯನ್ನು ಹುಡುಕಿದೆನು. ರಾವಣನ ಅಂತಃಪುರಕ್ಕೂ ಹೋದೆನು. ಅಲ್ಲಿಯೂ ಸೀತೆಯನ್ನೂ ಕಾಣಲಿಲ್ಲ. ಆ ರಾವಣನ ಅರಮನೆಗಳಲ್ಲಿ ಎಲ್ಲಿ ನೋಡಿದರೂ ಸೀತೆಯನ್ನು ಕಾಣದುದರಿಂದ, ಬಹಳ ಚಿಂತೆಗೊಂಡು ದುಃಖಸಮುದ್ರದಲ್ಲಿ ಮುಳುಗಿದಂತಿದ್ದೆನು. ಆ ದುಃಖವನ್ನು ಕೊನೆಮುಟ್ಟಿಸುವ ರೀತಿಯೇನೆಂದೂ ನನಗೆ ತೋರಲಿಲ್ಲ. ಹೀಗೆ ನಾನು ಹಿಂದುಮುಂದು ತೋರದೆ ಚಿಂತಿಸುತ್ತಿರುವಾಗಲೇ ಮುಂಬೆ ನನಗೆ ಸರ್ವೋತ್ಕೃಷ್ಟವಾದ ಸುವರ್ಣ ಪ್ರಾಕಾರದಿಂದ ಪರಿವೇಷ್ಟಿತವಾದ ರಾವಣನ ಗೃಹೋದ್ಯಾನವು ಕಾಣಿಸಿತು. ಜಗಲೇ ಅದರ ಪ್ರಾಕಾರದಮೇಲೆ ಹಾರಿ, ಅನೇಕ ವೃಕ್ಷಸಮೂಹಗಳಿಂದ ಕೂಡಿದ ಆ ತೋಟವನ್ನು ನಾಲ್ಕುಕಡೆಗಳಿಗೂ ಕಣ್ಣಿಟ್ಟು ನೋಡಿದೆನು. ಆ ತೋಟದ ಫಡುವೆ ಒಂದು ದೊಡ್ಡ ಶಿಂಶುಪಾವೃಕ್ಷವನ್ನು ಕಂಡು, ಅದರ ಮೇಲೆ ಹತ್ತಿನೋಡುವಾಗ ಸುವರ್ಣಮಯವಾದ ಒಂದು ಬಾಳೆಯ ತೋಟವು ನನ್ನ ಕಣ್ಣಿಗೆ ಗೋಚರಿಸಿತು. ಇವೆಲ್ಲವನ್ನೂ ನೋಡುತ್ತ ಬರುವಾಗ, ನಾನು ಕುಳಿತಿದ್ದ ಶಿಂಶುಪಾವೃಕ್ಷಕ್ಕೆ ಸ್ವಲ್ಪದೂರದಲ್ಲಿ, ಶ್ಯಾಮವರ್ಣದ ಮೈಯುಳ್ಳವಳಾಗಿಯೂ, ಕಮಲದಂತೆ ಕಣ್ಣುಳ್ಳವಳಾಗಿಯೂ ಇದ್ದ ಸೀತೆಯನ್ನೂ ಕಂಡೆನು. ಅವಳು ಉಪವಾಸದಿಂದ ಬಾಡಿದ ಮುಖವುಳ್ಳವಳಾಗಿ ಒಂದೇ ಬಟ್ಟೆಯನ್ನುಟ್ಟು, ಕೊಳೆ ಮುಚ್ಚಿದ ತಲೆಕೂದಲುಳ್ಳವಳಾಗಿದ್ದಳು. ದುಃಖದಿಂದಲೂ, ಸಂಕಟದಿಂದಲೂ ಅವಳ ದೇಹವು ಬಹಳವಾಗಿ ಕೃಶಿಸಿಹೋಗಿದ್ದಿತು. ಅನವರತವೂ ಅವಳು ಪತಿಕ್ಷೇಮವನ್ನೇ ಚಿಂತಿಸಿ ಕೊರಗುತ್ತಿದ್ದಳು. ರಕ್ತಮಾಂಸಗಳಿಂದಲೇ ಹೊಟ್ಟೆ ಹೊರೆಯತಕ್ಕ ವಿಕೃತಾಕಾರವುಳ್ಳ ಕೆಲವು ಘೋರರಾಕ್ಷಸಿಯರು, ಹೆಣ್ಣುಜಿಂಕೆಯನ್ನು ಮುತ್ತಿದ ಹುಲಿಗಳಂತೆ ಅವಳ ಸುತ್ತಲೂ ಅವರಿಸಿ ನಿಂತಿದ್ದರು. ಆ ರಾಕ್ಷಸಿಯರು ಆಗಾಗ ಅವಳನ್ನು ಕ್ರೂರವಾಕ್ಯಗಳಿಂದಲೂ ಹೆದರಿಸುತ್ತಿದ್ದರು. ಅಕೆಯು ತನ್ನ ಕೂದಲುಗಳನ್ನು ಒಂದೇ ಜಡೆಯಾಗಿ ಬಳಿಯಿಸಿ, ಅನವರತವೂ ತನ್ನ ಪ್ರಿಯಪತಿಯಾದ ರಾಮನನ್ನೇ ಚಿಂತಿಸಿ ಕೊರಗುತ್ತಿದ್ದಳು. ಬರೀನೆಲದ ಮೇಲೆ ಮಲಗುತ್ತಿದ್ದುದರಿಂದ ಹಿಮಗಾಲದ ಕಮಲದಂತೆ ಬಣ್ಣಗೆಟ್ಟ ಮೈಯುಳ್ಳವಳಾಗಿ ಕಂಗೆಟ್ಟಿದ್ದಳು. ಅವಳು (ರಾವಣನ ಹಿಂಸೆಯನ್ನು ತಡೆಯಲಾರದೆ ತನ್ನ ಜೀವದ ಮೇಲೆಯೇ ಆಸೆಯನ್ನು ಬಿಟ್ಟು) ಪ್ರಾಣತ್ಯಾಗಕ್ಕಾಗಿ ನಿಶ್ಚಯಿಸಿಕೊಂಡಿದ್ದಳು.

ಇಷ್ಟರಲ್ಲಿ ನಾನೂ ಹೇಗೋ ದೈವವಶದಿಂದ ಅಲ್ಲಿಗೆ ಬಂದು ಸೇರಿದೆನು. ಯಶಸ್ವಿನಿಯಾದ ಆ ಸೀತಾದೇವಿಯು ಆ ರೀತಿಯಲ್ಲಿ ಅನುಭವಿಸುತಿದ್ದ ದುರ್ದಶೆಯನ್ನು ನೋಡುತ್ತ, ಆ ಶಿಂಶುಪಾವೃಕ್ಷದಲ್ಲಿಯೇ ಮರೆಯಾಗಿ ಕುಳಿತಿದ್ದೆನು. ಇಷ್ಟರಲ್ಲಿ ರಾವಣನ ಅರಮನೆಯ ಕಡೆಯಿಂದ, ಹೆಂಗಸರ ಕಾಲಂದುಗೆ ಮೊದಲಾದ ಆಭರಣಗಳ ಧ್ವನಿಗಳೊಡನೆ, ಅತಿ ಗಂಭೀರವಾದ ಜನಗಳ ಕೋಲಾಹಲವು ನನ್ನ ಕಿವಿಗೆ ಕೇಳಿಸಿತು. ಆಗ ನಾನು ಬಹಳ ಬೆಜ್ಜರಗೊಂಡು ನನ್ನ ಆಕಾರವನ್ನು ಮುಗಿಸಿ, ಆ ಶಿಂಶುಪಾವೃಕ್ಷದ ಎಲೆಗಳ ಮರೆಯಲ್ಲಿ ಹಕ್ಕಿಯಂತೆ ಮರೆಯಾಗಿ ಕುಳಿತು ನೋಡುತ್ತಿದ್ದೆನು. ಇಷ್ಟರಲ್ಲಿ ಮಹಾ ಬಲಾಢ್ಯನಾದ ಆ ರಾವಣನೂ, ಅವನ ಪತ್ನಿಯರೂ ಗುಂಪಾಗಿ, ನೆಟ್ಟಗೆ ಸೀತೆಯು ಕುಳಿತಿದ್ದ ಸ್ಥಳಕ್ಕೇ ಬಂದರು. ಆ ರಾಕ್ಷಸನು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದೊಡನೆ ಸೀತೆಯು, ತನ್ನ ತೊಡೆಗಳನ್ನು ಜೆನ್ನಾಗಿ ಉಡುಗಿಸಿಕೊಳ್ಳುತ್ತ, ಉಬ್ಬಿದ ತನ್ನ ಎರಡು ಸ್ತನಗಳನ್ನೂ ತೋಳುಗಳಿಂದ ಮರೆಸಿಟ್ಟುಕೊಂಡು ಸಂಕುಚಿತಗಾತ್ರೆಯಾಗಿ ಕುಳಿತಳು. ಆಗ ಆಕೆಯು ಮಿತಿಮೀರಿದ ಭಯದಿಂದಲೂ ದುಃಖದಿಂದಲೂ ನಾಲ್ಕುಕಡೆಗಳಿಗೂ ಕಣ್ಣಿಟ್ಟು ನೋಡಿ, ರಕ್ಷಕರೊಬ್ಬರನ್ನೂ ಕಾಣದೆ ನಡುಗುತ್ತಿದ್ದಳು. ಅಷ್ಟರಲ್ಲಿಯೇ ದುರಾತ್ಮನಾದ ರಾವಣನು ನೆಟ್ಟಗೆ ಅವಳ ಸಮೀಪಕ್ಕೆ ಬಂದು, ಅವಳ ಮನಸ್ಸಂಕಟವನ್ನೂ ಲಕ್ಷ್ಯಮಾಡದೆ ಮಾತನಾಡಿಸತೊಡಗಿದನು. ಕಾಮವಶನಾದ ಆ ಪಾಪಿಯು ಮೊದಲು ಅವಳಿಗೆ ತಲೆಬಗ್ಗಿ ನಮಸ್ಕರಿಸುತ್ತ "ಎಲೆ ದೇವಿ! ಸೀತೆ! ನನ್ನನ್ನು ಮನ್ನಿಸು!" ಎಂದು ಬಹಳ ದೈನ್ಯದಿಂದ ಪ್ರಾರ್ಥಿಸುತ್ತಿದ್ದು, ಕೊನೆಕೊನೆಗೆ ಕೋಪಗೊಂಡು ಅವಳನ್ನು ಕುರಿತು, "ಎಲೆ ಗರ್ವಿಷ್ಠಳೆ! ನೀನು ನಿನ್ನ ಕೊಬ್ಬಿನಿಂದ ಈಗಲೂ ನನ್ನ ಮಾತನ್ನು ನಡೆಸದಿರುವೆಯಷ್ಟೆ? ಇರಲಿ! ಇನ್ನೆರಡು ತಿಂಗಳುಗಳ ಗಡುವು ಮಾತ್ರವೇ ಉಳಿದಿರುವುದು. ಆಮೇಲೆ ನಿನ್ನ ರಕ್ತವನ್ನು ಹೀರಿಬಿಡುವುದೇ ನಿಜವು" ಎಂದನು. ದುರಾತ್ಮನಾದ ರಾವಣನ ಈ ಮಾತನ್ನು ಕೇಳಿ ಸೀತೆಯು ಪರಮಕುಪಿತಳಾಗಿ, ಅವನಿಗೆ ತಕ್ಕ ಪ್ರತ್ಯುತ್ತರವನ್ನು ಹೇಳುವಳು. "ಎಲೆ ರಾಕ್ಷಸಾಧಮನೆ! ಎಣೆಯಿಲ್ಲದ ದಿವ್ಯತೇಜಸ್ಸುಳ್ಳ ರಾಮನಿಗೆ ಭಾರ್ಯೆಯಾಗಿ, ಇಕ್ಷ್ವಾಕುಕುಲನಾಥನಾದ ದಶರಥನಿಗೆ ಸೊಸೆಯಾದ ನನ್ನೊಡನೆಯೂ ಹೀಗೆ ಅಡಬಾರದ ಮಾತುಗಳನ್ನಾಡುವೆಯಾ? ಛೀ ಪಾಪಿ! ನಿನ್ನ ನಾಲಗೆಯು ಸೀಳಿಹೋಗಬೇಡವೆ? ಎಲೆ ಅನಾರ್ಯನೆ! ನಾನು ಪತಿಯನ್ನಗಲಿರುವಾಗ ಮಹಾತ್ಮನಾದ ಅತಪ ಕಣ್ಣಿಗೆ ಬೀಳದಂತೆ ನನ್ನನ್ನು ಕದ್ದು ತಂದ ನಿನ್ನ ವೀರ್ಯವೊಂದು ವೀರ್ಯವೆ? ಯಾವ ವಿಧದಲ್ಲಿಯೂ ನೀನು ಆ ರಾಮನಿಗೆಣೆಯಲ್ಲ! ಕೊನೆಗೆ ಅವನಲ್ಲಿ ದಾಸ್ಯಮಾಡುವ

ದಕ್ಕೂ ನಿನಗೆ ಯೋಗ್ಯತೆಯಿಲ್ಲ. ಅತನೋ ಅನೇಕ ಯಜ್ಞಗಳನ್ನು ನಡೆಸಿದವನು. ಸತ್ಯಸಂಧನು. ಯುದ್ಧದಲ್ಲಿ ಕೀರ್ತಿಯನ್ನು ಪಡೆದವನು. ರಘುವಂಶೋತ್ತಮನು. ಎಲೆ ಪಾಪಿ! ಅತನೊಡನೆಯೂ ನಿನಗೆ ಹೋರಾಟವೆ! ಛೀ ಹೋಗು" ಎಂದಳು. ಹೀಗೆ ಸೀತೆಯು ತನ್ನನ್ನು ಧಿಕ್ಕರಿಸಿ ಹೇಳಿದ ಕ್ರೂರವಾಕ್ಯಗಳನ್ನು ಕೇಳಿ ರಾವಣನು ಚಿತೆಯೊಳಗಣ ಬೆಂಕಿಯಂತೆ ಕೋಪದಿಂದುರಿಯುತ್ತಿದ್ದನು. ಮತ್ತು ಅವನು ತಡೆಯಲಾರದ ಕೋಪದಿಂದ ಕಣ್ಣಾಲಿಗಳನ್ನು ತಿರುಗಿಸುತ್ತ, ಆಗಲೇ ತನ್ನ ಬಲಗೈಯ ಮುಷ್ಟಿಯನ್ನೆತ್ತಿ ಹಿಡಿದು, ಸೀತೆಯನ್ನು ಕೊಲ್ಲುವುದಕ್ಕಾಗಿ ಮುಂದೆ ಬಂದನು. ಇದನ್ನು ನೋಡಿ ಅಲ್ಲಿ ಅವನೊಡನೆ ಬಂದಿದ್ದ ಸ್ತ್ರೀಯರೆಲ್ಲರೂ "ಹಾ! ಹಾ!" ಎಂದು ಕೂಗಿದರು. ಆಗ ರಾವಣನಿಗೆ ಪಟ್ಟಮಹಿಷಿಯಾಗಿ ಗುಣ ಸಂಪನ್ನೆಯಾದ[1] ಮಂಡೋದರಿಯೆಂಬವಳು, ಆ ಸ್ತ್ರೀಯರ ಮಧ್ಯದಿಂದ ಥಟ್ಟನೆ ಮೇಲೆದ್ದು ಬಂದು, ದುರಾತ್ಮನಾದ ಆ ರಾವಣನನ್ನು ತಡೆದು ನಿಲ್ಲಿಸಿದಳು. ಮತ್ತು ಕಾಮಪೀಡಿತನಾಗಿ ಮೈಮರೆತಿರುವ ಅತನನ್ನು ಕುರಿತು ಬಹಳ ಮೃದುವಾದ ಸಾಂತ್ವನವಾಕ್ಯದಿಂದ "ಎಲೈ ಪ್ರಿಯನೆ! ನೀನು ಮಹೇಂದ್ರನಿಗೆಣೆಯಾದ ಪರಾಕ್ರಮವುಳ್ಳವನು. ನಿನಗೆ ಮನುಷ್ಯಮಾತ್ರಳಾದ ಈ ಸೀತೆಯಿಂದಾಗಬೇಕಾದುದೇನು! ನನ್ನೊಡನೆ ಕ್ರೀಡಿಸಬಾರದೆ? ನನಗಿಂತಲೂ ಸೀತೆಯು ಮೇಲೆಂದೆಣಿಸುವೆಯಾ? ಇದಲ್ಲದೆ ನಿನ್ನ ವಶದಲ್ಲಿ ಇನ್ನೂ ಎಷ್ಟೋ ಮಂದಿ ದೇವಕನ್ಯೆಯರುಂಟು! ಎಷ್ಟೋ ಮಂದಿ ಗಂಧರ್ವಕನ್ಯೆಯರುಂಟು! ಎಷ್ಟೋ ಮಂದಿ ಯಕ್ಷಕನ್ಯೆಯರುಂಟು? ಅವರೊಡನೆ ಯಥೇಚ್ಛವಾಗಿ ವಿಹರಿಸು! ಸೀತೆಯಿಂದ ನಿನಗೇನು?" ಎಂದಳು. ಹಾಗೆಯೇ ಅಲ್ಲಿದ್ದ ಇತರಸ್ತ್ರೀಯರೂ ಅತನನ್ನು ಅನೇಕವಿಧದಿಂದ ಸಮಾಧಾನಮಾಡಿ ಅರಮನೆಗೆ ಕರೆತಂದು ಸೇರಿಸಿದರು. ಅತ್ತಲಾಗಿ ರಾವಣನು ಹೊರಟು ಹೋದ ಮೇಲೆಯೂ, ಇಲ್ಲಿ ಸೀತೆಯಮೇಲೆ ಕಾವಲಿದ್ದ ವಿಕಾರಮುಖವುಳ್ಳ ಕೆಲವು ರಾಕ್ಷಸಿಯರು, ಅತಿಭಯಂಕರವಾಗಿಯೂ, ಕ್ರೂರವಾಗಿಯೂ ಇರುವ ಮಾತುಗಳಿಂದ ಸೀತೆಯನ್ನು ಹೆದರಿಸಿ ನಿರ್ಬಂಧಿಸುತ್ತಿದ್ದರು. ಎಷ್ಟು ಹೆದರಿಸಿದರೇನು? ಜನಕಪುತ್ರಿಯಾದ ಸೀತೆಯು, ಆವರ ಬೆದರಿಕೆಯ ಮಾತುಗಳನ್ನೂ, ಅವರ ಗರ್ಜನೆಗಳನ್ನೂ ಹುಲ್ಲಿಗೆ ಸಮಾನವಾಗಿ ಭಾವಿಸಿ ಅಲಕ್ಷ್ಯದಿಂದಿದ್ದಳು. ಅವರ ನಿರ್ಬಂಧಗಳೆಲ್ಲವೂ ನಿರರ್ಥಕಗಳಾದುವು. ಹೀಗೆ ಮಾಂಸಭಕ್ಷಕರಾದ ಆ ರಾಕ್ಷಸಿಸ್ತ್ರೀಯರೆಲ್ಲರೂ ತಾವು ಇದುವರೆಗೆ ಮಾಡಿದ ಆರ್ಭಟಗಳೂ ಗರ್ಜನೆಗಳೂ ಸೀತೆಯಲ್ಲಿ ವಿಫಲ

1. ಹಿಂದೆ ಧಾನ್ಯಮಾಲಿನಿಯು ತಡೆದುದಾಗಿ ಹೇಳಿದೆ. ಇಲ್ಲಿ ಮಂಡೋದರಿಯು ತಡೆದುದಾಗಿ ಹೇಳಿದೆ. ಇದರಿಂದ ಆ ಕಾಲದಲ್ಲಿ ಇಬ್ಬರೂ ಬಂದು ತಡೆದುದಾಗಿ ಗ್ರಹಿಸಬೇಕು.

ವಾದುದನ್ನು ನೋಡಿ, ಆಶಾಭಂಗವನ್ನು ಹೊಂದಿ, ಮುಂದೆ ಏನೆನ್ನೂ ಮಾಡ ಲಾರದೆ ರಾವಣನಬಳಿಗೆ ಹೋಗಿ, ಸೀತೆಗಿದ್ದ ಬಲವಾದ ಮನೋದಾರ್ಢ್ಯವನ್ನು ಅವನಿಗೆ ತಿಳಿಸಿಬಿಟ್ಟರು. ಕೊನೆಗೆ ಅವರೆಲ್ಲರೂ ಸೀತೆಯಸುತ್ತಲೂ ಮಲಗಿ ನಿದ್ರೆ ಯಿಂದ ಸ್ವೈಮರೆತಿದ್ದರು. ಇವರೆಲ್ಲರೂ ಹಾಗೆ ಮಲಗಿದಮೇಲೆಯೂ, ಪತಿಕ್ಷೇಮ ಪರಾಯಣೆಯಾದ ಆ ಸೀತೆಯು, ನಾನಾವಿಧದಲ್ಲಿ ದೈನ್ಯದಿಂದ ವಿಲಪಿಸುತ್ತ ಬಹಳ ವಾಗಿ ದುಃಖಿಸಿ ಕೊರಗುತ್ತಿದ್ದಳು. ಆಗಾಗ ಎಚ್ಚರಗೊಂಡ ರಾಕ್ಷಸಿಯರು ಸೀತೆ ಯನ್ನು ನೋಡಿ ಅವಳನ್ನು ಭಕ್ಷಿಸಿಬಿಡುವುದಾಗಿ ಹೆದರಿಸುತ್ತಿದ್ದರು. ಇದನ್ನು ಸಹಿಸಲಾರದೆ, ಅಲ್ಲಿ ತ್ರಿಜಟೆಯೆಂಬವಳೊಬ್ಬಳು ಕೋಪದಿಂದ ಥಟ್ಟನೆ ಮೇಲೆದ್ದು ಆ ರಾಕ್ಷಸಸ್ತ್ರೀಯರನ್ನು ನೋಡಿ "ಎಲೆ ಘಾತುಕಿಯರೆ! ಇಷ್ಟು ಶೀಘ್ರದಲ್ಲಿಯೇ ನೀವೇ ನಿಮ್ಮ ಹೆಣವನ್ನು ತಿನ್ನಬೇಕಾಗುವುದೇ ಹೊರತು ಸೀತೆಗೆ ಎಂದಿಗೂ ನಾಶ ವಿಲ್ಲ! ಜನಕರಾಜನ ಮಗಳಾಗಿ, ಮಹಾಪತಿವ್ರತೆಯಾಗಿ, ದಶರಥರಾಜನ ಸೊಸೆ ಯಾದ ಈಕೆಯನ್ನು ನೀವು ಭಕ್ಷಿಸುವಿರಾ! ಛೀ ಹೋಗಿರಿ! ಈಗಲೇ ನಾನು ಮಹಾಭಯಂಕರವಾದ ಒಂದು ಸ್ವಪ್ನವನ್ನು ಕಂಡೆನು. ಅದನ್ನು ನೆನೆಸಿಕೊಂಡ ಮಾತ್ರಕ್ಕೆ ಮೈನಡುಗಿ ರೋಮಾಂಚವೇಳುತ್ತಿರುವುದು! ಆ ಸ್ವಪ್ನವೇ ರಾಕ್ಷಸರ ವಿನಾಶವನ್ನೂ, ಈಕೆಯ ಪತಿಗೆ ಜಯವನ್ನೂ ಸೂಚಿಸುತ್ತಿರುವುದು. ಈಗಲೂ ಆ ರಾಮನಿಂದ ನಮ್ಮ ಕಡೆಯ ರಾಕ್ಷಸಿಯರನ್ನು ರಕ್ಷಿಸಿಕೊಳ್ಳಬೇಕಾದರೆ, ಈ ಸೀತೆ ಯಲ್ಲಿಯೇ ನಾವೆಲ್ಲರೂ ಮರೆಹೊಕ್ಕು ಪ್ರಾರ್ಥಿಸುವುದು ಮೇಲೆಂದು ನನಗೆ ತೋರಿರು ವುದು. ಇವಳು ಹೀಗೆ ದುಃಖಿತೆಯಾಗಿರುವಾಗಲೇ ನಾನು ಈ ದುಸ್ಸ್ವಪ್ನವನ್ನು ಕಂಡಿರುವುದರಿಂದ, ಇವಳು ಈ ದುಃಖದಿಂದ ಬಿಡುಗಡೆಹೊಂದಿ, ಮೇಲಾದ ಸುಖ ವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಜನಕಪುತ್ರಿಯಾದ ಈ ಸೀತೆಯಾದರೋ ತನ್ನ ಮನಸ್ಸಿನಲ್ಲಿ ಎಷ್ಟೇ ಕೋಪವಿದ್ದರೂ ತನ್ನ ಅಪರಾಧಿಗಳು ಒಂದಾವರ್ತಿ ತಲೆ ಬಗ್ಗಿದ ಮಾತ್ರಕ್ಕೆ ಪ್ರಸನ್ನಳಾಗುವ ಸ್ವಭಾವವುಳ್ಳವಳು. ಅದುದರಿಂದ ಇವಳನ್ನೇ ಪ್ರಸನ್ನಳನ್ನಾಗಿ ಮಾಡಿಕೊಳ್ಳಿರಿ" ಎಂದಳು. ತ್ರಿಜಟೆಯು ಹೇಳಿದ ಶರಣಾಗತಿ ಯೆಂಬ ಮಾತನ್ನು ಕೇಳಿದೊಡನೆ ಸೀತೆಯ ಮನಸ್ಸು ಪ್ರಸನ್ನವಾಯಿತು. ಆ ಬಾಲೆಯು ಪತಿಯ ವಿಜಯವಾರ್ತೆಯನ್ನು ಕೇಳಿ ಹರ್ಷಗೊಂಡು, ಸ್ವಲ್ಪ ಲಜ್ಜೆ ಯನ್ನೂ ತೋರಿಸುತ್ತ, ಅಲ್ಲಿದ್ದ ರಾಕ್ಷಸಿಯರನ್ನು ಕುರಿತು "ಎಲೆ ರಾಕ್ಷಸಿಯರೆ! ಈ ತ್ರಿಜಟೆಯು ಹೇಳಿದಂತೆಯೇ ಆಗುವುದಾದರೆ ನಾನು ನಿಜವಾಗಿ ನಿಮಗೆ ರಕ್ಷಕಿ ಯಾಗಿರುವೆನು! ಹೆದರಬೇಡಿರಿ!" ಎಂದು ಹೇಳಿ ಅಭಯವನ್ನು ಕೊಟ್ಟಳು. ಹಾಗೆ ಅತಿಭಯಂಕರವಾದ ದುರ್ದಶೆಯನ್ನನುಭವಿಸುತ್ತಿದ್ದ ಆ ಸೀತೆಯನ್ನು ನೋಡಿದಾಗ,

ನನಗೆ ಮಹತ್ತಾದ ಚಿಂತೆಯುಂಟಾಯಿತು. ಎದೆಗುಂದದೆ ಧೈರ್ಯವನ್ನು ತಂದು ಕೊಳ್ಳುವುದರಲ್ಲಿ ನಾನು ಎಷ್ಟೋ ಸಮರ್ಥನಾದರೂ, ನನ್ನ ಮನಸ್ಸಿಗೆ ನೆಮ್ಮದಿಯಿಲ್ಲದೆ ಹೋಯಿತು. ಆಗ ನಾನು ಸೀತೆಯನ್ನು ಮಾತಾಡಿಸುವುದಕ್ಕೆ ಉಪಾಯವೇನೆಂದು ಚಿಂತಿಸಿ, ಕೊನೆಗೆ ಇಕ್ಷ್ವಾಕುವಂಶವನ್ನೇ ಮುಂದಿಟ್ಟುಕೊಂಡು ರಾಮನ ಗುಣಗಳನ್ನು ವರ್ಣಿಸುವುದಕ್ಕೆ ತೊಡಗಿದೆನು. ಸಮಸ್ತರಾಜರ್ಷಿಗಳ ಸಮೂಹಕ್ಕೂ ಪೂಜ್ಯವಾದ ಆ ನನ್ನ ಮಾತು ಸೀತೆಯ ಕಿವಿಗೆ ಬೀಳುತಿದ್ದಾಗಲೆ ಅವಳ ಕಣ್ಣುಗಳಲ್ಲಿ ಪಳಪಳನೆ ದುಃಖಬಾಷ್ಪವು ಹೊರಟಿತು. ಆಗ ಅವಳು ನನ್ನನ್ನು ನೋಡಿ, "ಎಲೈ ಕಪಿಶ್ರೇಷ್ಠನೆ! ನೀನು ಯಾರು? ಇಲ್ಲಿಗೆ ಬಂದುದೇಕೆ? ನೀನು ಇಲ್ಲಿಗೆ ಬಂದ ಬಗೆಯೇನು? ನಿನಗೆ ರಾಮನೊಡನೆ ಸ್ನೇಹವುಂಟಾಗುವುದಕ್ಕೆ ಕಾರಣವೇನು? ಇವೆಲ್ಲವನ್ನೂ ನನಗೆ ತಿಳಿಸಬೇಕು" ಎಂದಳು. ಸೀತೆಯೇ ಹೇಳಿದ ಈ ಮಾತನ್ನು ಕೇಳಿ ನಾನು ಅಕೆಯನ್ನು ಕುರಿತು, "ಎಲೆ ದೇವಿ! ನಿನ್ನ ಪ್ರಿಯನಾದ ರಾಮನಿಗೆ ನಾನು ಸಹಾಯಕನಾಗಿ ಬಂದಿರುವೆನು. ನಾನು ಭಯಂಕರ ಪರಾಕ್ರಮವುಳ್ಳವನು. ಮಹಾಬಲಾಢ್ಯನಾದ ಸುಗ್ರೀವನೆಂಬ ವಾನರನೊಬ್ಬನುಂಟು. ನಾನು ಅವನ ಕಡೆಯ ಭೃತ್ಯನು. ನನಗೆ ಹನುಮಂತನೆಂದು ಹೆಸರು. ನಿನಗಾಗಿಯೇ ನಿನ್ನ ಪತಿಯಾದ ರಾಮನು ನನ್ನನ್ನು ಇಲ್ಲಿಗೆ ಕಳುಹಿಸಿರುವನು. ಎಲೆ ಯಶಸ್ವಿನಿ! ಪುರುಷೋತ್ತಮನಾಗಿಯೂ, ಶ್ರೀಮಂತನಾಗಿಯೂ ಇರುವ ಆ ದಶರಥಸುತನು, ಇದೋ ಈ ಉಂಗುರವನ್ನು ಗುರುತಿಗಾಗಿ ನಿನ್ನಲ್ಲಿಗೆ ಕಳುಹಿಸಿಕೊಟ್ಟಿರುವನು. ಎಲೆ ದೇವಿ! ಮುಂದೆ ನಾನು ಮಾಡಬೇಕಾದ ಕೆಲಸವೇನೆಂದು ನಿನ್ನ ಆಜ್ಞೆಯನ್ನು ನಿರೀಕ್ಷಿಸುವೆನು. ಈಗಲೇ ನಾನು ನಿನ್ನನು ರಾಮಲಕ್ಷ್ಮಣರ ಬಳಿಗೆ ಸೇರಿಸುವುದಕ್ಕೂ ಸಿದ್ಧನಾಗಿರುವೆನು. ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು!" ಎಂದು ಕೇಳಿದೆನು. ಜನಕಪುತ್ರಿಯಾದ ಸೀತೆಯು, ಈ ನನ್ನ ಮಾತನ್ನು ಕೇಳಿ ತನ್ನಲ್ಲಿ ತಾನು ಪರ್ಯಾಲೋಚಿಸಿ, ನನ್ನನ್ನು ಕುರಿತು, "ರಾಮನೇ ಇಲ್ಲಿಗೆ ಬಂದು ರಾವಣನನ್ನು ಕೊಂದು ನನ್ನನ್ನು ಕರೆದುಕೊಂಡು ಹೋಗಲಿ!" ಎಂದಳು. ಆ ಮೇಲೆ ನಾನು ಪೂಜ್ಯಳಾದ ಆ ಸೀತೆಗೆ ತಲೆಬಗ್ಗಿ ನಮಸ್ಕರಿಸಿ, "ಎಲೆ ದೇವಿ! ಹಾಗೆ ನೀನು ನನ್ನೊಡನೆ ಬಾರದಿದ್ದರೆ, ರಾಮನ ಮನಸ್ಸಿಗೆ ನಂಬಿಕೆ ಹುಟ್ಟುವಂತೆ ಏನಾದರೂ ಒಂದು ಗುರುತನ್ನು ಕೊಡು" ಎಂದು ಯಾಚಿಸಿದೆನು. ಆಗ ಸೀತೆಯು ನನ್ನನ್ನು ಕುರಿತು, ವಾನರೋತ್ತಮನೆ! ಇದೋ! ಉತ್ತಮವಾದ ಈ ನನ್ನ ಚೂಡಾಮಣಿಯನ್ನು ನಾನು ಕೊಟ್ಟುದಾಗಿ ರಾಮನಿಗೆ ಕೊಡು! ಇದನ್ನು ನೋಡಿದೊಡನೆ ಮಹಾಬಾಹುವಾದ ರಾಮನು ನಿನ್ನನ್ನು ಬಹಳವಾಗಿ

ಮನ್ನಿಸುವನು." ಎಂದು ಹೇಳುತ್ತ, ಅದ್ಭುತಕಾಂತಿಯುಳ್ಳ ಸರ್ವೋತ್ತಮವಾದ ಈ ಚೂಡಾಮಣಿಯನ್ನು ಬಹಳ ದುಃಖದೊಡನೆ ನನ್ನ ಕೈಗೆ ಕೊಟ್ಟಳು. ಮತ್ತು ತನ್ನ ಪ್ರಿಯನಾದ ರಾಮನಿಗೆ ಮಾತ್ರವೇ ತಿಳಿಯಬಹುದಾದ ಕೆಲವು ಏಕಾಂತ ವೃತ್ತಾಂತಗಳನ್ನೂ ರಾಮನಿಗೆ ಗುರುತಾಗಿ ಹೇಳುವಂತೆ ನನ್ನೊಡನೆ ಹೇಳಿದಳು. ಆಗಲೇ ನನಗೆ ಇತ್ತಲಾಗಿ ಹೊರಟು ಬರಬೇಕೆಂಬ ಆತುರವು ಮನಸ್ಸಿನಲ್ಲಿ ಹುಟ್ಟಿತು. ಪ್ರಯಾಣಸನ್ನದ್ಧನಾಗಿ ಸೀತೆಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಹೊರಡುವುದಕ್ಕೆ ಸಿದ್ಧನಾಗಿ ನಿಂತೆನು. ತಿರುಗಿ ಸೀತೆಯು ದುಃಖದಿಂದ ಮನಸ್ಸಿನಲ್ಲಿ ಚಿಂತಿಸುತ್ತ ನನ್ನನ್ನು ಕರೆದು "ಎಲೈ ಹನುಮಂತನೆ ! ಇಲ್ಲಿನ ನನ್ನ ಸಂಗತಿಗಳೆಲ್ಲವನ್ನೂ ನೀನು ರಾಮನಿಗೆ ಚೆನ್ನಾಗಿ ತಿಳಿಸಬೇಕು. ನೀನು ಇಲ್ಲಿನ ವಿಷಯಗಳನ್ನು ತಿಳಿಸಿದ ಕ್ಷಣವೇ ರಾಮಲಕ್ಷ್ಮಣರಿಬ್ಬರೂ ಸುಗ್ರೀವನೊಡನೆ ಇಲ್ಲಿಗೆ ಹೊರಟುಬರುವಂತೆ ಮಾಡುವ ಭಾರವು ನಿನಗೆ ಸೇರಿದೆ. ಹಾಗೆ ಅವರು ಶೀಘ್ರದಲ್ಲಿಯೇ ಬಾರದಿದ್ದರೆ ಮಾತ್ರ ರಾಮನು ತಿರುಗಿ ನನ್ನನ್ನು ನೋಡಲಾರನು. ಇನ್ನೆರಡು ತಿಂಗಳುಮಾತ್ರವೇ ನನ್ನ ಪ್ರಾಣಕ್ಕೆ ಅವಧಿಯು. ಅದಕ್ಕೆ ಮೇಲೆ ನಾನು ದಿಕ್ಕಿಲ್ಲದ ವಳಂತೆ ಸಾಯಬೇಕಾಗಿರುವುದು. ಆ ಮೇಲೆ ರಾಮನು ಇಲ್ಲಿಗೆ ಬಂದರೂ ಫಲ ವಿಲ್ಲ. ಬಂದರೂ ನನ್ನನ್ನು ಕಾಣಲಾರನು. ಬರಬೇಕಾದ ಅವಶ್ಯವೂ ಇಲ್ಲ" ಎಂದಳು. ಬಹಳ ಸಂಕಟಕರವಾದ ಈ ಮಾತನ್ನು ಕೇಳಿ ನನಗೆ ದುರಾತ್ಮರಾದ ಆ ರಾಕ್ಷಸರಮೇಲೆ ತಡೆಯಲಾರದ ಕೋಪವುಂಟಾಯಿತು. ಅಲ್ಲಿ ನಾನು ಮುಂದೆ ಮಾಡಬೇಕಾಗಿ ಉಳಿದಿರುವ ಕಾರ್ಯವೇನೆಂದು ಸ್ವಲ್ಪಹೊತ್ತಿನ ವರೆಗೆ ಆಲೋಚಿಸುತ್ತ ನಿಂತಿದ್ದೆನು. ಕೊನೆಗೆ ನನ್ನ ಮನಸ್ಸಿಗೆ ಒಂದು ನಿಶ್ಚಯವು ಹುಟ್ಟಿ ಅಲ್ಲಿನ ರಾಕ್ಷಸರೊಡನೆ ಹೇಗಾದರೂ ಜಗಳವನ್ನು ತೆಗೆಯಬೇಕೆಂದು ತೋರಿತು. ಆಗಲೆ ನನ್ನ ದೇಹವನ್ನು ಪರ್ವತಾಕಾರವಾಗಿ ಬೆಳೆಸಿಬಿಟ್ಟೆನು. ಮೊದಲು ರಾವಣನಿಗೆ ಕೋಪವನ್ನು ಹುಟ್ಟಿಸುವುದಕ್ಕಾಗಿ ಅವನಿಗೆ ಬಹಳ ಪ್ರೇಮ ಪಾತ್ರವಾದ ಅಶೋಕವನವನ್ನೆಲ್ಲಾ ನಾಶಮಾಡುವುದಕ್ಕೆ ತೊಡಗಿದೆನು. ಹೀಗೆ ನಾನು ಆ ತೋಟವನ್ನು ಹಾಳುಮಾಡುತ್ತಿರುವಾಗ, ಅಲ್ಲಲ್ಲಿ ಮರಗಳು ಮುರಿದು ಬೀಳುವ ಧ್ವನಿಯನ್ನು ಕೇಳಿ, ಅಲ್ಲಿನ ಮೃಗಪಕ್ಷಿಗಳೆಲ್ಲವೂ ಭಯದಿಂದ ಚೆಲ್ಲಾಚದರಾಗಿ ಓಡುತ್ತಿದ್ದುವು. ಆ ತೋಟದಲ್ಲಿ ಕಾವಲಿದ್ದ ವಿಕಾರಮುಖವುಳ್ಳ ರಾಕ್ಷಸಿಯರು ಈ ಗದ್ದಲವನ್ನು ನೋಡಿ ಬೆಚ್ಚಿ ಬಿದ್ದು, ಇದರ ಕಾರಣವನ್ನು ತಿಳಿಯುವುದಕ್ಕಾಗಿ ಅಲ್ಲಲ್ಲಿ ಸುತ್ತಿನೋಡುವಾಗ ಆ ತೋಟದಲ್ಲಿ ನನ್ನನ್ನು ಕಂಡರು. ನನ್ನ ಅದ್ಭುತರೂಪವನ್ನು ನೋಡಿದಾಗಲೇ ಅವರಿಗೆ ನಾನೇ ಆ ವನ

ನನ್ನು ಹಾಳುಮಾಡಿರಬೇಕೆಂದು ತೋರಿತು. ಅಲ್ಲಲ್ಲಿದ್ದ ರಾಕ್ಷಸಿಯರೆಲ್ಲರೂ ಒಂದಾಗಿ ಸೇರಿ, ಆ ಕ್ಷಣವೇ ರಾವಣನ ಬಳಿಗೆ ಓಡಿಹೋಗಿ ಅವನನ್ನು ಕುರಿತು "ಅಯ್ಯಾ ಮಹಾರಾಜನೆ! ನಿನ್ನ ಪರಾಕ್ರಮವನ್ನು ತಿಳಿಯದ ಯಾವುದೋ ಒಂದು ಕಾಡುಕಪಿಯು, ಬೇರೊಬ್ಬರಿಗೆ ದುರ್ಗಮವಾದ ನಮ್ಮ ತೋಟಕ್ಕೆ ಪ್ರವೇಶಿಸಿ, ಅದನ್ನು ಸಂಪೂರ್ಣವಾಗಿ ಹಾಳುಮಾಡಿಬಿಟ್ಟಿರುವುದು. ಹೀಗೆ ನಿನಗೆ ಅಪ್ರಿಯವನ್ನುಂಟುಮಾಡಿದ ಆ ದುಷ್ಟಕಪಿಯನ್ನು ಈಗಲೇ ಕೊಂದು ಹಾಕುವಂತೆ ಆಜ್ಞೆಯಾಗಬೇಕು" ಎಂದರು. ಈ ಮಾತನ್ನು ಕೇಳಿದೊಡನೆ ರಾವಣನು ಅತ್ಯಾಕ್ರೋಶಗೊಂಡು, ಯಾರಿಗೂ ಧರ್ಜಯರಾಗಿಯೂ, ತನ್ನ ಮನಸ್ಸನ್ನನುವರ್ತಿಸಿ ನಡೆಯುವವರಾಗಿಯೂ ಇದ್ದ ಕಿಂಕರರೆಂಬ ಕೆಲವು ರಾಕ್ಷಸರನ್ನು ಕರೆದು, ನನ್ನನ್ನು ಹಿಡಿದು ತರುವುದಕ್ಕಾಗಿ ಕಳುಹಿಸಿದನು. ಆಗಲೇ ಎಂಬತ್ತು ಸಾವಿರಮಂದಿ ಆ ಕಿಂಕರರು, ಶೂಲಮುದ್ಗರಾದಿ ವಿವಿಧಾಯುಧಗಳನ್ನು ಹಿಡಿದು ನನ್ನ ಕಡೆಗೆಬಂದರು. ನಾನು ಆ ತೋಟದ ಬಾಗಿಲಿಗೆ ಹಾಕಿದ್ದ ಒಂದು ದೊಡ್ಡ ಅಗುಳಿಯನ್ನೇ ಕೈಗೆತ್ತಿಕೊಂಡು ಅವರೆಲ್ಲರನ್ನೂ ಅದರಿಂದಲೇ ಬಡಿದು ಧ್ವಂಸಮಾಡಿದೆನು. ಅವರಲ್ಲಿ ಸತ್ತುಳಿದ ಕೆಲವು ರಾಕ್ಷಸರು ಆ ಕ್ಷಣವೇ ರಾವಣನ ಬಳಿಗೆ ಹೋಗಿ, ಆ ಕಿಂಕರಸೈನ್ಯವು ನನ್ನಿಂದ ಪೂರ್ಣವಾಗಿ ಹತವಾದ ಸಂಗತಿಯನ್ನು ತಿಳಿಸಿದರು. ಇಷ್ಟರಲ್ಲಿ ಇತ್ತಲಾಗಿ ನನಗೆ ಬೇರೊಂದಾಲೋಚನೆಯು ತೋರಿತು. ಆ ತೋಟದ ನಡುವೆ ಮಹೋನ್ನತವಾಗಿದ್ದ ಜೈತ್ಯ ಪ್ರಾಸಾದವೆಂಬ ಗೋಪುರದ ಮೇಲಕ್ಕೆ ಹಾರಿದೆನು. ಅದರಲ್ಲಿ ಒಂದು ಕಂಬವನ್ನು ಕಿತ್ತುಕೊಂಡು, ಅಲ್ಲಿ ಕಾವಲಿದ್ದ ನೂರಾರುಮಂದಿ ರಾಕ್ಷಸರನ್ನೂ ಆ ಕಂಬದಿಂದಲೇ ಬಡಿದು ಕೊಂದೆನು. ಲಂಕಾನಗರಕ್ಕೆ ಮುಖ್ಯಾಲಂಕಾರದಂತಿದ್ದ ಆ ಪ್ರಾಸಾದವನ್ನೂ ಅದರಿಂದಲೇ ಅಗೆದು ಕೆಡಹಿದೆನು. ಇಷ್ಟರಲ್ಲಿ ಅತ್ತಲಾಗಿ ರಾವಣನು ಪ್ರಹಸ್ತಪುತ್ರನಾದ ಜಂಬುಮಾಲಿಯೆಂಬವನನ್ನು, ಅನೇಕ ಘೋರರಾಕ್ಷಸಸೈನ್ಯ ದೊಡನೆ ನನ್ನ ಮೇಲೆ ಯುದ್ಧಕ್ಕೆ ಕಳುಹಿಸಿದನು. ಬಲಾಢ್ಯನಾಗಿಯೂ, ಯುದ್ಧದಲ್ಲಿ ನಿಪುಣನಾಗಿಯೂ ಇದ್ದ ಆ ರಾಕ್ಷಸನನ್ನೂ, ಅವನ ಸಮಸ್ತ ಸೈನ್ಯಗಳನ್ನೂ ನಾನು ಆ ಬಾಗಿಲಗುಳಿಯಿಂದಲೇ ಹೊಡೆದು ಕೊಂದೆನು. ಈ ಸಂಗತಿಯೂ ಆ ಕ್ಷಣವೇ ರಾವಣನ ಕಿವಿಗೆ ಮುಟ್ಟಿತು. ಆಗ ರಾವಣನು ಬಹಳ ಬಲಾಢ್ಯರಾದ ಏಳುಮಂದಿ ಮಂತ್ರಿಪುತ್ರರನ್ನು ಅನೇಕ ಪದಾತಿಸೇನೆಯೊಡನೆ ನನ್ನ ಮೇಲೆ ಕಳುಹಿಸಿದನು. ಅವರನ್ನೂ ನಾನು ಆ ಪರಿಘದಿಂದಲೇ ಕೊಂದು ಯಮಪುರಿಗೆ ಕಳುಹಿಬ್ಬಿಟ್ಟೆನು. ಯುದ್ಧವಿಶಾರದರಾದ ಆ ಮಂತ್ರಿಪುತ್ರರೂ ಹಾಗೆ

ನನ್ನಿಂದ ಹತನಾದುದನ್ನು ಕೇಳಿ ರಾವಣನು ಶೂರರಾದ ಐದುಮಂದಿ ಸೇನಾಪತಿಗಳನ್ನು ತಿರುಗಿ ನನ್ನಲ್ಲಿಗೆ ಕಳುಹಿಸಿದನು. ನಾನು ಅವರನ್ನೂ, ಅವರ ಸೇನೆಯನ್ನೂ ನಿಶ್ಶೇಷವಾಗಿ ಕೊಂದೆನು. ಆಮೇಲೆ ರಾವಣನು ಬಲಾಢ್ಯರಲ್ಲಿ ಮೇಲೆನಿಸಿಕೊಂಡ ತನ್ನ ಮಗನಾದ ಅಕ್ಷಕುಮಾರನನ್ನು ದೊಡ್ಡ ಸೇನೆಯೊಡನೆ ನನ್ನ ಮೇಲೆ ಕಳುಹಿಸಿದನು. ಆ ಅಕ್ಷನೆಂಬವನು ಮಂಡೋದರಿಯ ಹೊಟ್ಟೆಯಲ್ಲಿ ಹುಟ್ಟಿದವನು. ಯುದ್ಧದಲ್ಲಿ ಮಹಾನಿಪುಣನು. ಆತನು ನನ್ನನ್ನು ಕಂಡೊಡನೆ ಕೋಪದಿಂದ ಥಟ್ಟನೆ ಆಕಾಶಕ್ಕೆ ಹಾರುತ್ತಿರುವಾಗ, ನಾನು ಅವನ ಕಾಲುಗಳನ್ನು ಬಲವಾಗಿ ಹಿಡಿದುಬಿಟ್ಟೆನು. ಕೈಯಲ್ಲಿ ಕತ್ತಿಯನ್ನೂ, ಗುರಾಣಿಯನ್ನೂ ಹಿಡಿದು, ಆಕಾಶಕ್ಕೆ ಹಾರುತ್ತಿದ್ದ ಆ ಅಕ್ಷಕುಮಾರನ ಕಾಲುಗಳನ್ನು ಹಿಡಿದು ಅವನನ್ನು ನೂರಾವರ್ತಿ ಗಿರಗಿರನೆ ತಿರುಗಿಸಿ ನೆಲಕ್ಕೆ ಬಡಿದು, ಕೈಕಾಲುಗಳೊಂದೂ ಕಾಣಿಸದಂತೆ ಅವನ ದೇಹವನ್ನು ತಿಕ್ಕಿ ಒಂದೇ ಮುದ್ದೆಯಾಗಿ ಮಾಡಿಬಿಟ್ಟೆನು. ಹೀಗೆ ಅಕ್ಷಕುಮಾರನೂ ಹತನಾದುದನ್ನು ಕೇಳಿ ರಾವಣನಿಗೆ ತಡೆಯಲಾರದ ಕೋಪವುಂಟಾಯಿತು. ತಿರುಗಿ ಆ ರಾವಣನು ಬಲಾಢ್ಯನಾಗಿಯೂ, ಯುದ್ಧದಲ್ಲಿ ಕೊಬ್ಬಿದವನಾಗಿಯೂ ಇದ್ದ ಇಂದ್ರಜಿತ್ತೆಂಬ ಬೇರೊಬ್ಬ ಮಗನನ್ನು ನನ್ನ ಮೇಲೆ ಯುದ್ಧಕ್ಕಾಗಿ ಕಳುಹಿಸಿದನು. ನಾನು ಕ್ಷಣಮಾತ್ರದಲ್ಲಿ ಅವನೊಡನೆ ಬಂದಿದ್ದ ಸೇನೆಯೆಲ್ಲವನ್ನೂ ಕೊಂದು, ಆ ಇಂದ್ರಜಿತ್ತಿನ ವೀರ್ಯವನ್ನೂ ಅಡಗಿಸಿ ಸಂತೋಷಗೊಂಡಿದ್ದೆನು. ಮಹಾಬಾಹುವಾದ ಆ ಇಂದ್ರಜಿತ್ತು ಬಹಳ ಬಲಶಾಲಿಯೆಂದು ಹೆಸರುಗೊಂಡವನಾದುದರಿಂದ, ತಪ್ಪದೆ ನನ್ನನ್ನು ಕೊಲ್ಲಬಹುದೆಂಬ ದೃಢವಾದ ನಂಬಿಕೆಯಿಂದಲೇ ರಾವಣನು ಅನೇಕ ರಾಕ್ಷಸವೀರರೊಡನೆ ಅವನನ್ನು ನನ್ನ ಮೇಲೆ ಕಳುಹಿಸಿದ್ದನು. ಆದರೇನು? ಆ ಇಂದ್ರಜಿತ್ತಿಗೆ ನನ್ನನ್ನು ಜಯಿಸುವುದು ಅಸಾಧ್ಯವೆಂದೇ ತೋರಿತಲ್ಲದೆ, ತನ್ನ ಸಮಸ್ತಸೈನ್ಯವೂ ನನ್ನಿಂದ ಹತವಾದುದನ್ನೂ ತಿಳಿದು, ಕೊನೆಗೆ ಮಹಾವೇಗದಿಂದ ನನ್ನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ, ಅದರಿಂದ ನನ್ನನ್ನು ಬಂಧಿಸಿಬಿಟ್ಟನು. ಆಗ ಅಲ್ಲಿ ಸತ್ತುಳಿದ ರಾಕ್ಷಸರಿಗೂ ಧೈರ್ಯವು ಹುಟ್ಟಿತು. ಆಗಲೇ ಆ ರಾಕ್ಷಸರೆಲ್ಲರೂ ಹಗ್ಗಗಳಿಂದ ನನ್ನ ದೇಹವನ್ನು ಬಿಗಿದು, ನನ್ನನ್ನು ರಾವಣನ ಬಳಿಗೆ ಕರೆತಂದು, ಅವನ ಮುಂದೆ ನಿಲ್ಲಿಸಿದರು. ದುರಾತ್ಮನಾದ ರಾವಣನು ನನ್ನನ್ನು ನೋಡಿ ನಾನು ಲಂಕೆಗೆ ಬಂದುದಕ್ಕೂ, ಅಲ್ಲಿನ ರಾಕ್ಷಸರನ್ನು ಕೊಂದುದಕ್ಕೂ ಕಾರಣವೇನೆಂದು ತನ್ನ ಕಡೆಯವರಿಂದ ಪ್ರಶ್ನೆಮಾಡಿಸಿದನು. ಆಗ ನಾನು "ಇವೆಲ್ಲವನ್ನೂ ಸೀತೆಗಾಗಿಯೇ ಮಾಡಿದೆನು" ಎಂದು ಸ್ಪಷ್ಟವಾಗಿ ಹೇಳಿಬಿಟ್ಟೆನು. ಮತ್ತು

ನಾನು ಅಷ್ಟರಲ್ಲಿಯೇ ಸುಮ್ಮನಿರದೆ ತಿರುಗಿ ರಾವಣನನ್ನು ಕುರಿತು, "ಎಲೆ ರಾಜನೆ! ಸೀತೆಯನ್ನು ನೋಡುವುದಕ್ಕಾಗಿಯೇ ನಾನು ನಿನ್ನ ಮನೆಗೆ ಬಂದೆನು. ನಾನು ವಾಯುವಿಗೆ ಔರಸಪುತ್ರನು. ಕಪಿಜಾತಿಗೆ ಸೇರಿದವನು. ಹನುಮಂತನೆಂದು ನನಗೆ ಹೆಸರು. ನಾನು ಆ ಶ್ರೀರಾಮನಿಗೆ ದೂತನೆಂದೂ, ಸುಗ್ರೀವನ ಮಂತ್ರಿಯೆಂದೂ ತಿಳಿ. ಆ ರಾಮನ ದೂತಕಾರ್ಯಕ್ಕಾಗಿಯೇ ನಿನ್ನಲ್ಲಿಗೆ ಬಂದೆನು. ಮಹಾತೇಜಸ್ವಿಯಾದ ಸುಗ್ರೀವನು ನಿನ್ನ ಕ್ಷೇಮವನ್ನು ವಿಚಾರಿಸುವಂತೆ ಹೇಳಿರುವನು. ಮತ್ತು ಅವನು ಬಹುಧರ್ಮಯುಕ್ತವಾಗಿರುವುದರಿಂದ ಪರಲೋಕಸಾಧಕವಾಗಿಯೂ, ಅರ್ಥಕಾಮಗಳನ್ನು ಕೈಗೂಡಿಸುವುದರಿಂದ ಈ ಲೋಕದಲ್ಲಿ ಉಪಕಾರಕವಾಗಿಯೂ ಇರುವ ಕೆಲವು ಹಿತವಾದಗಳನ್ನೂ ನಿನಗೆ ಹೇಳಿ ಕಳುಹಿಸಿರುವನು. ನಾವು ಅನೇಕವೃಕ್ಷಗಳಿಂದ ತುಬಿದ ಋಷ್ಯಮೂಕಗಿರಿಯಲ್ಲಿರುವಾಗ ರಣಪಂಡಿತನಾದ ರಾಮನೊಡನೆ ಸುಗ್ರೀವನಿಗೆ ಸ್ನೇಹವುಂಟಾಯಿತು. ಅವರಿಬ್ಬರಿಗೂ ಸ್ನೇಹವುಂಟಾದಮೇಲೆ, ರಾಮನು ಅವನನ್ನು ಕುರಿತು ತನ್ನ ಹೆಂಡತಿಯನ್ನು ಯಾವನೋ ರಾಕ್ಷಸನು ಕದ್ದುಯ್ದನೆಂದೂ ಅವಳನ್ನು ಹುಡುಕುವ ವಿಷಯದಲ್ಲಿ ಸಹಾಯವನ್ನು ಮಾಡಬೇಕೆಂದೂ ಕೇಳಿದನು. ಆಗ ನನ್ನ ರಾಜನಾದ ಸುಗ್ರೀವನೂ ರಾಮನನ್ನು ಕುರಿತು, ನನ್ನ ಅಣ್ಣನಾದ ವಾಲಿಯನ್ನು ಕೊಂದು ನನಗೆ ಸಹಾಯಮಾಡುವುದಾಗಿ ಮೊದಲು ನೀನು ಪ್ರತಿಜ್ಞೆಮಾಡಿಕೊಟ್ಟರೆ, ನಾನೂ ನಿನಗೆ ಬೇಕಾದ ಸಹಾಯವನ್ನು ಮಾಡುವುದರಲ್ಲಿ ತಡೆಯಿಲ್ಲ" ಎಂದನು. ಅದರಂತೆಯೇ ಲೋಕಪ್ರಭುವಾದ ರಾಮನು ಲಕ್ಷ್ಮಣಸಹಿತನಾಗಿ, ವಾಲಿಯಿಂದ ರಾಜ್ಯಭ್ರಷ್ಟನಾಗಿ ಮಾಡಲ್ಪಟ್ಟಿದ್ದ ಸುಗ್ರೀವನಿಗೆ ಅಗ್ನಿಸಾಕ್ಷಿಕವಾಗಿ ಪ್ರತಿಜ್ಞೆಮಾಡಿಕೊಟ್ಟು ಸ್ನೇಹವನ್ನು ಬೆಳೆಸಿದನು. ತನ್ನ ಪ್ರತಿಜ್ಞೆಯಂತೆಯೇ ವಾಲಿಯನ್ನು ಒಂದೇ ಬಾಣದಿಂದ ಯುದ್ಧದಲ್ಲಿ ಕೊಂದು ಸುಗ್ರೀವನಿಗೆ ವಾನರರಾಜ್ಯದಲ್ಲಿ ಪಟ್ಟವನ್ನೂ ಕಟ್ಟಿದನು. ನಾವೂ ಆ ರಾಮನಿಗೆ ಹೇಗಾದರೂ ಸಹಾಯವನ್ನು ಮಾಡಿಯೇ ತೀರಬೇಕಲ್ಲವೆ? ಅದರಿಂದ ಸುಗ್ರೀವನು ಧರ್ಮಲೋಪವಿಲ್ಲದೆ ನಿನ್ನಲ್ಲಿಗೆ ನನ್ನನ್ನು ಕಳುಹಿಸಿರುವನು. ಇದಕ್ಕಾಗಿ ಸುಗ್ರೀವನು ನಿನಗೆ ಹೇಳಿಕಳುಹಿಸಿರುವ ಮಾತನ್ನೂ ಹೇಳುವೆನು ಕೇಳು. "ಎಲೆ ರಾವಣಾ! ಸೀತೆಯನ್ನು ಈಗಲೇ ತಂದು ರಾಮನಿಗೊಪ್ಪಿಸಿಬಿಡು. ಹಾಗಿಲ್ಲದಪಕ್ಷದಲ್ಲಿ ಮಹಾವೀರರಾದ ಕಪಿಗಳು ನಿನ್ನಪಟ್ಟಣಕ್ಕೆ ಪ್ರವೇಶಿಸಿ, ನಿನ್ನ ಸಮಸ್ತ ಸೈನ್ಯವನ್ನೂ ಧ್ವಂಸಮಾಡಿಬಿಡುವರು. ಅಷ್ಟರೊಳಗಾಗಿ ನೀನು ಸೀತೆಯನ್ನು ತಂದೊಪ್ಪಿಸುವುದು ಮೇಲು! ನಮ್ಮಕಡೆಯ ವಾನರರ

ಪ್ರಭಾವವನ್ನು ಲೋಕದಲ್ಲಿ ತಿಳಿಯದವರೇ ಯಾರೂ ಇಲ್ಲ. ದೇವಾಸುರಯುದ್ಧಗಳಲ್ಲಿಯೂ ಇವರು ದೇವತೆಗಳ ಪ್ರಾರ್ಥನೆಯಮೇಲೆ ಅವರ ಸಹಾಯಕ್ಕಾಗಿ ಹೋಗುವುದುಂಟು. ಆದುದರಿಂದ ನಮ್ಮ ಕಡೆಯ ಕಪಿಗಳನ್ನು ಸಾಮಾನ್ಯರೆಂದು ತಿಳಿಯಬೇಡ" ಎಂದು ನಮ್ಮ ಸುಗ್ರೀವರಾಜನೇ ನಿನಗೆ ಹೇಳಿ ಕಳುಹಿಸಿರುವನು" ಎಂದು ನಾನು ರಾವಣನಿಗೆ ತಿಳಿಸಿದೆನು. ಇದನ್ನು ಕೇಳಿ ರಾವಣನು ಕಣ್ಣುಗಳಿಂದಲೇ ನನ್ನನ್ನು ದಹಿಸಿಬಿಡುವಂತೆ ಮುರದುರನೆ ನೋಡುತ್ತಿದ್ದನು. ಮತ್ತು ಕ್ರೂರಕರ್ಮಿಯಾದ ಆ ರಾಕ್ಷಸನು ನನ್ನ ಮಹಿಮೆಯನ್ನು ತಿಳಿಯದೆ ನನ್ನನ್ನು ಕೊಲ್ಲುವಂತೆ ತನ್ನ ಕಡೆಯ ದೂತರಿಗೆ ಆಜ್ಞಾಪಿಸಿದನು. ಆಗ ಮಹಾಬುದ್ಧಿಶಾಲಿಯಾದ ವಿಭೀಷಣನೆಂಬ ಅವನ ತಮ್ಮನು, ಆ ರಾಕ್ಷಸರಾಜನನ್ನು ಕುರಿತು, ನನಗಾಗಿ ಬಹಳ ವಿಧದಲ್ಲಿ ಅವನಿಗೆ ಕೋಪಸಮಾಧಾನವನ್ನು ಮಾಡುತ್ತ ಅತನನ್ನು ಕುರಿತು " ಎಲೈ, ರಾಕ್ಷಸೇಂದ್ರನೇ! ನೀನು ಹೀಗೆ ಮಾಡಬಾರದು! ಈ ನಿಶ್ಚಯವನ್ನು ಬಿಟ್ಟುಬಿಡು! ರಾಜನೀತಿಗೆ ವಿರುದ್ಧವಾದ ದಾರಿಯನ್ನು ಹಿಡಿಯುವೆಯಲ್ಲಾ! ದೂತವಧವೆಂಬುದನ್ನು ಯಾವ ರಾಜನೀತಿಶಾಸ್ತ್ರವೂ ಒಪ್ಪುವುದಿಲ್ಲ. ದೂತನಾದವನು ಶತ್ರುರಾಜರ ಮುಂದೆ ತನಗೆ ತೋರಿದ ಹಿತವಾದವನ್ನು ತಿಳಿಸಬೇಕಾದುದೇ ನ್ಯಾಯವು. ದೂತನಾಗಿ ಬಂದವನು ಎಷ್ಟೇ ತಪ್ಪನ್ನು ಮಾಡಿದ್ದರೂ ಅವನಿಗೆ ಅಂಗಭಂಗವನ್ನು ಮಾಡಿ ಕಳುಹಿಸಬಹುದೆಂಬ ವಿಧಿಯುಂಟೇ ಹೊರತು, ಯಾವ ರಾಜಶಾಸ್ತ್ರದಲ್ಲಿಯೂ ದೂತವಧವು ವಿಧಿಸಲ್ಪಟ್ಟಿರುವಂತೆ ತೋರಲಿಲ್ಲ" ಎಂದನು. ಈ ವಿಭೀಷಣನ ಮಾತನ್ನು ಕೇಳಿ ರಾವಣನು, ಅದಕ್ಕೊಪ್ಪಿ, ಅಲ್ಲಿದ್ದ ರಾಕ್ಷಸರನ್ನು ಕರೆದು ನನ್ನ ಬಾಲವನ್ನು ಸುಡುವಂತೆ ಆಜ್ಞೆಮಾಡಿದನು. ಆಗಲೇ ರಾಕ್ಷಸರು ರಾವಣಾಜ್ಞೆಯಂತೆ ನನ್ನ ಬಾಲಕ್ಕೆ ಗೋಣಿಗಳನ್ನೂ ಹರಕುಬಟ್ಟೆಗಳನ್ನೂ ಸುತ್ತಿದರು. ಮತ್ತು ಪ್ರಚಂಡಪರಾಕ್ರಮವುಳ್ಳ ಆ ರಾಕ್ಷಸರೆಲ್ಲರೂ ತೈಲಸೇಚನವೇ ಮೊದಲಾದ ಸಮಸ್ತ ಸನ್ನಾಹಗಳನ್ನೂ ಮಾಡಿಕೊಂಡು, ಬೊಣ್ಣೆಗಳಿಂದಲೂ, ಮುಷ್ಟಿಗಳಿಂದಲೂ ನನ್ನನ್ನು ಹೊಡೆಯುತ್ತ ನನ್ನ ಬಾಲಕ್ಕೆ ಬೆಂಕಿಯನ್ನೂ ತೋರಿಸಿದರು. ರಾಕ್ಷಸರು ನನ್ನನ್ನು ಎಷ್ಟೋ ಹಗ್ಗಗಳಿಂದ ಬಿಗಿದರು. ನಾನು ಅತ್ತಿತ್ತ ಚಲಿಸದಂತೆ ನನ್ನನ್ನು ಸುತ್ತಿಮುತ್ತಿ ಹೊಡೆಯುತ್ತಿದ್ದರು. ಇಷ್ಟಾದರೂ ಪಟ್ಟಣವನ್ನು ಸುತ್ತಿನೋಡಬೇಕೆಂಬ ಆತುರದಿಂದಿದ್ದ ನನಗೆ ಯಾವುದೊಂದು ಬಾಧೆಯೂ ತೋರಲಿಲ್ಲ. ಹೀಗೆ ಆ ರಾಕ್ಷಸರೆಲ್ಲರೂ ನನ್ನನ್ನು ಕಟ್ಟಿ, ನನ್ನ ಬಾಲಕ್ಕೆ ಬೆಂಕಿಯನ್ನಿಟ್ಟುದಲ್ಲದೆ ಬೀದಿಬೀದಿ

ಗಳಲ್ಲಿ ಸಾರುತ್ತಮೆರವಣಿಗೆಯನ್ನು ಮಾಡಿಸಿದರು. ಕೊನೆಗೆ ನನ್ನನ್ನು ಪಟ್ಟಣದ ಬಾಗಿಲಿಗೆ ಕರೆತಂದರು. ಅಲ್ಲಿಗೆ ಬಂದಮೇಲೆ ನಾನು ನನ್ನದೇಹವನ್ನು ಸಣ್ಣದಾಗಿ ಮಾಡಿ, ಆ ಕಟ್ಟುಗಳನ್ನು ಸಡಿಲಿಸಿಕೊಂಡು ಸಹಜವಾದ ರೂಪವನ್ನು ಹೊಂದಿ ಅಲ್ಲಿದ್ದ ಒಂದು ಕಬ್ಬಿಣದ ಬಾಗಿಲಗುಳಿಯನ್ನು ಕೈಗೆ ತೆಗೆದುಕೊಂಡು ಅದರಿಂದ ಆ ರಾಕ್ಷಸರೆಲ್ಲರನ್ನೂ ಧ್ವಂಸಮಾಡಿದೆನು. ಆಗಲೇ ಅಲ್ಲಿಂದ ಪುರದ್ವಾರದ ಗೋಪುರಕ್ಕೆ ಹಾರಿ ಕುಳಿತೆನು. ಮತ್ತು ಪ್ರಳಯಕಾಲಾಗ್ನಿಯು ಪ್ರಜೆಗಳನ್ನು ದಹಿಸುವಂತೆ ಉರಿಯುತಿದ್ದ ನನ್ನ ಬಾಲದ ಬೆಂಕಿಯಿಂದಲೇ ಆ ಲಂಕಾನಗರಿಯೆಲ್ಲವನ್ನೂ ದಹಿಸಿಬಿಟ್ಟೆನು. ಅಟ್ಟಲಿಗಳಿಂದಲೂ ಗೋಪುರಗಳಿಂದಲೂ ನಿಬಿಡವಾದ ಲಂಕೆಯು ಸಂಪೂರ್ಣವಾಗಿ ಸುಟ್ಟುಹೋದುದನ್ನು ನೋಡಿದಮೇಲೆ ನನ್ನ ಮನಸ್ಸಿಗೆ ಭಯವು ಹುಟ್ಟಿತು. ಆಗ ನನ್ನಲ್ಲಿ ನಾನು "ಓಹೋ! ಈ ಪಟ್ಟಣವೆಲ್ಲವೂ ಸಂಪೂರ್ಣವಾಗಿ ಭಸ್ಮವಾಗಿ ಹೋಯಿತು. ಈ ಲಂಕೆಯಲ್ಲಿ ಸುಡದ ಭಾಗವೆಂದಾದರೂ ಇಲ್ಲ. ಸೀತೆಯೂ ಇದರಲ್ಲಿ ದಗ್ಧಳಾಗಿರಬೇಕು. ಇದರಲ್ಲಿ ಸಂದೇಹವಿಲ್ಲ. ಅಯ್ಯೋ! ಈ ಲಂಕೆಯನ್ನು ಸುಡುವ ಸಂಭ್ರಮದಲ್ಲಿ ಸೀತೆಗೂ ಅಪಾಯವನ್ನು ತಂದಿಟ್ಟು, ಶ್ರೀರಾಮನ ಕಾರ್ಯವನ್ನು ನಾನೇ ಕೆಡಿಸಿದಂತಾಯಿತಲ್ಲಾ" ಎಂದು ಮಹಾವ್ಯಸನದಿಂದ ಪೀಡಿತನಾಗಿ ಚಿಂತಿಸುತ್ತಿದ್ದೆನು. ಇಷ್ಟರಲ್ಲಿ ನನಗೆ ಆಕ್ಕಾಶ್ಚರ್ಯವನ್ನೂ, ಪರಮಸಂತೋಷವನ್ನೂ ಉಂಟುಮಾಡುವಂತೆ ಆಕಾಶದಲ್ಲಿ ಚಾರಣರು "ಸೀತೆಯು ದಗ್ಧಳಾಗಲಿಲ್ಲ" ಎಂದು ಹೇಳುತ್ತಿದ್ದ ಮಾತು ನನ್ನ ಕಿವಿಗೆ ಬಿದ್ದಿತು. ಈ ಆಶ್ಚರ್ಯಕರವಾದ ಮಾತನ್ನು ಕೇಳಿದ ಮೇಲೆಯೇ ನನಗೆ ಸೀತೆಗೆ ಅಪಾಯವಿಲ್ಲವೆಂಬ ನಿಶ್ಚಯವುಂಟಾಯಿತು. ಆಗ ನನಗೆ ಕೆಲವು ಶುಭಶಕುನಗಳೂ ಕಂಡುಬಂದುವು. ನನ್ನ ಬಾಲವನ್ನು ಸುಡುವಾಗಲೂ ನನಗೆ ಸ್ವಲ್ಪವಾದರೂ ಕಾವು ತೋರದೆ, ನನ್ನ ಮನಸ್ಸಿನಲ್ಲಿಯೂ ಯಾವುದೋ ಒಂದು ವಿಧವಾದ ಉಲ್ಲಾಸವು ಕಾಣುತ್ತಿತ್ತು. ಸುವಾಸನೆಯುಳ್ಳ, ಮಂಗಳಕರವಾದ ವಾಯುವೂ ಬೀಸುತ್ತಿತ್ತು. ಸಿದ್ಧವಾದ ಫಲವನ್ನು ತೋರಿಸತಕ್ಕ ಈ ಶುಭಶಕುನಗಳಿಂದಲೂ, ಯಾವಾಗಲೂ ಸುಳ್ಳಾಗದ ಆ ಸಿದ್ಧಚಾರಣಾದಿಗಳ ಮಾತಿನಿಂದಲೂ, ಇನ್ನೂ ಕೆಲವು ಕಾರಣಗಳಿಂದಲೂ ನನ್ನ ಮನಸ್ಸಿಗೆ ಸಂಪೂರ್ಣವಾದ ಹರ್ಷವುಂಟಾಯಿತು. ಆಗಲೇ ನಾನು ಹಿಂತಿರುಗಿ ಸೀತೆಯಬಳಿಗೆ ಹೋಗಿ, ಅವಳ ಅನುಮತಿಯನ್ನು ಪಡೆದು ಇತ್ತಲಾಗಿ ಪ್ರಯಾಣಕ್ಕೆ ಸಿದ್ಧನಾದೆನು. ನಿಮ್ಮನ್ನು ನೋಡಬೇಕೆಂಬ ಆತುರವೂ ನನಗೆ ಮೇಲಿಮೇಲೆ ಹುಟ್ಟುತ್ತಿತ್ತು. ಅಲ್ಲಿದ್ದ ಅರಿಷ್ಟವೆಂಬ ಪರ್ವತವನ್ನೇರಿ ಈ ಕಡೆಗೆ ಹಾರಿಬರುವುದಕ್ಕೆ ಪ್ರಯತ್ನಿಸಿದೆನು. ಆಗಲೇ ನಾನು

ಚಂದ್ರಸೂರ್ಯಾದಿಗ್ರಹಗಳಿಗೂ, ವಾಯುದೇವನಿಗೂ, ಸಿದ್ಧಗಂಧರ್ವಾದಿಗಳಿಗೂ ಸಂಚಾರಯೋಗ್ಯಕರವಾದ ಅಂತರಿಕ್ಷಮಾರ್ಗದಲ್ಲಿ ಹಾರಿಬಂದು, ಇಲ್ಲಿಷ್ಟನ್ನು ಕಂಡೆನು. ಎಲ್ಲೈ ವೀರರೆ! ಶ್ರೀರಾಮನ ಪ್ರಭಾವದಿಂದಲೂ, ನಿಮ್ಮ ಅನುಗ್ರಹಬಲದಿಂದಲೂ, ನಾನು ನಮ್ಮ ಪ್ರಭುವಾದ ಸುಗ್ರೀವನ ಕಾರ್ಯಸಿದ್ಧಿಗಾಗಿ ಇಷ್ಟೆಲ್ಲವನ್ನೂ ಮಾಡಿ ಬಂದೆನು. ಅಲ್ಲಿ ನಾನು ನಡೆಸಿಬಂದ ಸಂಗತಿಗಳೆಲ್ಲವನ್ನೂ, ನಿಮಗೆ ಯಥಾಸ್ಥಿತವಾಗಿ ತಿಳಿಸಿರುವೆನು. ಇನ್ನು ಮಾಡಬೇಕಾದ ಕಾರ್ಯವೇನಾದರೂ ಉಳಿದಿದ್ದರೆ ಅದನ್ನು ಮುಂದೆ ನೀವು ಮಾಡಿಕೊಳ್ಳಬೇಕು" ಎಂದನು.

ಇಲ್ಲಿಗೆ ಏನತ್ತಂಟನೆಯ ಸರ್ಗವು.

ಹನುಮಂತನು ತಿರುಗಿ ಲಂಕೆಯ ವೃತ್ತಾಂತವನ್ನು ಮುಂದು ವರಿಸಿ, ತನ್ನ ಸಾಮರ್ಥ್ಯವನ್ನು ಹೇಳಿಕೊಂಡುದು.

ಹೀಗೆ ವಾಯುಪುತ್ರನಾದ ಹನುಮಂತನು, ತಾನು ಲಂಕೆಯಲ್ಲಿ ಸೀತೆಯನ್ನು ನೋಡಿಬಂದ ವೃತ್ತಾಂತಗಳೆಲ್ಲವನ್ನೂ ಹೇಳಿ, ತಿರುಗಿ ಮುಂದಿನ ವಿಷಯವನ್ನಾರಂಭಿಸಿ, ಅಲ್ಲಿದ್ದ ವಾನರರನ್ನು ಕುರಿತು, "ಎಲ್ಲೈ ಮಿತ್ರರೆ! ಸೀತೆಯೋ ಮಹಾಶೀಲವತಿಯು! ಪತಿವ್ರತಾಶಿರೋಮಣಿಯು! ಅದುದರಿಂದ ಶ್ರೀರಾಮನ ಪ್ರಯತ್ನವೂ, ಸುಗ್ರೀವನ ಉತ್ಸಾಹವೂ ಸಫಲಗಳಾಗುವುವು. ನನ್ನ ಮನಸ್ಸೂ ನೋಡಲಿಂದಲೇ ಆಕೆಯಲ್ಲಿ ಅತ್ಯಂತ ಭಕ್ತಿವಿಶಿಷ್ಟವಾಗಿರುವುದು. ಆಹಾ! ರಾಕ್ಷಸೇಶ್ವರನಾದ ಆ ರಾವಣನ ಮಹಿಮೆಯಾದರೂ ಸಾಮಾನ್ಯವಲ್ಲ! ಅವನು ತನ್ನ ತಪೋಬಲದಿಂದಲೇ ಸಮಸ್ತಲೋಕಗಳನ್ನೂ ಧರಿಸಬಲ್ಲನು ಕೋಪವೆಂಟಾದರೆ ಇವನ್ನು ದಹಿಸುವುದಕ್ಕೂ ಶಕ್ತನು. ಯಾವ ವಿಧದಿಂದ ನೋಡಿದರೂ ಅವನು ಬಹಳ ಮೇಲಾದ ತಪಸ್ವಿಯೇ! ಅತನು ಮಹಾಪತಿವ್ರತೆಯಾದ ಸೀತೆಯನ್ನು ಕೈಯಿಂದ ಮುಟ್ಟಿದರೂ, ಅವನ ತಪೋಬಲವೇ ಅವನನ್ನು ರಕ್ಷಿಸುತ್ತಿರುವುದೆಂದು ತೋರುವುದು. ಆ ಸೀತೆಯನ್ನು ಕೈಯಿಂದ ಮುಟ್ಟಿದಾಗ ಅವಳಿಗೆ ಕೋಪವೆಂಟಾದರೆ, ಅವಳು ಮಾಡುವ ಕಾರ್ಯವನ್ನು ಅಗ್ನಿಜ್ವಾಲೆಯೂ ಮಾಡಲಾರದು! ಆಕೆಯು

ತನ್ನ ಪತಿಯ ಕೈಯಿಂದಲೇ ರಾವಣನನ್ನು ಕೊಲ್ಲಿಸಬೇಕೆಂಬ [1] ವೀರಪತ್ನಿಯರ ಧರ್ಮವನ್ನ ವಲಂಬಿಸಿ, ರಾವಣನಮೇಲೆ ಕೋಪಗೊಳ್ಳದಿರುವಳು. ಆದರಿಂದಲೇ ಇದುವರೆಗೆ ರಾವಣನೂ ಜೀವದಿಂದಿರುವನು. ಅಲ್ಲಿನ ಕಾರ್ಯಸ್ಥಿತಿಯಂತೂ ಹೀಗಿರುವುದು. ಈಗಲೂ ನನಗೆ ತೋರುವುದೇನೆಂದರೆ ಈ ಜಾಂಬವಂತನೇ ಮೊದಲಾದ ವಾನರೋತ್ತಮರನ್ನೂ, ನಿಮ್ಮನ್ನೂ ಒಪ್ಪಿಸಿ, ನಿಮ್ಮೆಲ್ಲರೊಡನೆ ನಾನೂ ತಿರುಗಿ ಲಂಕೆಗೆ ಹೋಗಿ ಈಗಲೂ ಅಕೆಯನ್ನು ಕರೆತಂದು, ಅವಳೊಡವೆಯೇ ರಾಜಪುತ್ರರಾದ ಆ ರಾಮಲಕ್ಷ್ಮಣರನ್ನು ನೋಡುವುದು ಯುಕ್ತವೆಂದು ತೋರುವುದು. ಎಲೈ ವಾನರರೇ! ನಾನೊಬ್ಬನೇ ಲಂಕೆಯಲ್ಲಿರುವ ಸಮಸ್ತರಾಕ್ಷಸರನ್ನೂ, ಮಹಾಬಲಾಢ್ಯನಾದ ರಾವಣನನ್ನೂ ನನ್ನ ವೇಗದಿಂದ ಕೊಲ್ಲಬಲ್ಲೆನು. ಇನ್ನು ಪರಾಕ್ರಮಿಗಳಾಗಿಯೂ, ಬಲಾಢ್ಯರಾಗಿಯೂ, ಬುದ್ಧಿವಂತರಾಗಿಯೂ, ಶಸ್ತ್ರಾಸ್ತ್ರಗಳಲ್ಲಿ ನಿಪುಣರಾಗಿಯೂ ಶೂರರಾಗಿಯೂ, ಜಯಕಾಂಕ್ಷಿಗಳಾಗಿಯೂ ಇರುವ ನೀವೂ ನನ್ನ ಸಹಾಯಕ್ಕಿದ್ದರೆ ಮತ್ತೆ ಹೇಳಬೇಕಾದುದೇನು! ನಾನೊಬ್ಬನೇ ಯುದ್ಧದಲ್ಲಿ ರಾವಣನನ್ನೂ, ಅವನ ಸೈನ್ಯಗಳನ್ನೂ ಅವನ ಪುತ್ರಮಿತ್ರಪರಿಜನಾದಿಗಳೆಲ್ಲವನ್ನೂ ಕೊಂದುಬರಬಹುದು. ಆ ಇಂದ್ರಜಿತ್ತೇ ನುತ್ತೊಮ್ಮೆ ಯುದ್ಧಕ್ಕೆ ಬಂದು ಕಣ್ಣಿಂದ ನೋಡುವುದಕ್ಕೂ ಅಸಾಧ್ಯವಾದ ಬ್ರಹ್ಮಾಸ್ತ್ರವನ್ನಾಗಲಿ, ಐನ್ದ್ರಾಸ್ತ್ರವನ್ನಾಗಲಿ, ರೌದ್ರಾಸ್ತ್ರವನ್ನಾಗಲಿ, ವಾಯವ್ಯಾಸ್ತ್ರವನ್ನಾಗಲಿ, ವಾರುಣಾಸ್ತ್ರವನ್ನಾಗಲಿ, ಬೇರೆಯಾವ ಮಹಾಸ್ತ್ರಗಳನ್ನಾಗಲಿ, ನನ್ನಮೇಲೆ ಪ್ರಯೋಗಿಸಿದರೂ, ಅವೆಲ್ಲವನ್ನೂ ನಾನು ವ್ಯರ್ಥಮಾಡಿ ಸಮಸ್ತ ರಾಕ್ಷಸರನ್ನೂ ನಿರ್ಮೂಲಮಾಡುವೆನು. ಈಗಲೂ ನೀವು ಅನುಮತಿಸಿದ ಪಕ್ಷದಲ್ಲಿ ನಾನೇ ನನ್ನ ವೀರ್ಯದಿಂದ ರಾವಣನನ್ನೂ ಕೊಂದುಬರುವೆನು. ಎಲೈ ವಾನರೋತ್ತಮರೆ! ನಾನು ಯುದ್ಧದಲ್ಲಿ ಶತ್ರುಗಳಮೇಲೆ ಎಡೆಬಿಡದೆ ಕಲ್ಮಳೆಯನ್ನು ಕರೆಯುತ್ತಿದ್ದರೆ ದೇವತೆಗಳಾದರೂ ಬದುಕಿ ಹೋಗಲಾರರು. ಇನ್ನು ಆ ರಾಕ್ಷಸರ ಪಾಡನ್ನು ಕೇಳಬೇಕೇ! ನನ್ನ ವಿಷಯವೂ ಹಾಗಿರಲಿ! ಸಮುದ್ರವಾದರೂ ಎಲ್ಲೆಯನ್ನು ಮೀರಬಹುದು! ಮಂದರಪರ್ವತವಾದರೂ ಚಲನಹೊಂದಬಹುದು! ಈ ಜಾಂಬವಂತನನ್ನು ಮಾತ್ರ ಎಂತಹ ಶತ್ರುಸೈನ್ಯವಾದರೂ ಎಷ್ಟುಮಾತ್ರವೂ ಕದಲಿಸಲಾರದು! ಮತ್ತು ವೀರನಾದ

---

1. ತನ್ನ ಪತಿಯು ಮೂಲವಾಗಿಯೇ ಶತ್ರುಗಳನ್ನು ಕೊಲ್ಲಿಸಿ ಹಗೆತೀರಿಸಿಕೊಳ್ಳಬೇಕಾದುದು ವೀರಪತ್ನಿಯರ ಧರ್ಮವು. ಹಾಗೆ ಮಾಡದೆ ತಾನಾಗಿಯೇ ಸ್ವತಂತ್ರಿಸಿದ ಪಕ್ಷದಲ್ಲಿ ಪತಿಯನ್ನು ಅನಾದರಿಸಿದಂತಾಗುವುದೆಂದು ತಿಳಿದು, ಸೀತೆಯು ತಾನಾಗಿಯೇ ರಾವಣನನ್ನು ಕೊಲ್ಲುವುದಕ್ಕೆ ಪ್ರಯತ್ನಿಸಲಿಲ್ಲವೇ ಹೊರತು, ತನ್ನಿಂದಾಗದೆ ಬಿಟ್ಟವಳಲ್ಲವೆಂದು ಭಾವವು.

ಈ ವಾಲಿಪುತ್ರನೊಬ್ಬನೇ ಸಮಸ್ತ ರಾಕ್ಷಸಸಮೂಹವನ್ನೂ, ಆಯಾ ಸೈನ್ಯದ ಪ್ರಮುಖರಾಕ್ಷಸರೊಡನೆ ಕೊಲ್ಲಬಲ್ಲನು. ಮಹಾತ್ಮನಾದ, ಈ ಪನಸನ ಮತ್ತು ಈ ನೀಲನ ತೊಡೆಯ ವೇಗಕ್ಕೆ ಮಂದರಪರ್ವತವಾದರೂ ಒಡೆದು ಹೋಗುವುದು. ಎಲೈ ವಾನರರೇ! ದೇವತೆಗಳಲ್ಲಿಯಾಗಲಿ, ವಾನರರಲ್ಲಿಯಾಗಲಿ, ನಾಗ ಗಂಧರ್ವ ಯಕ್ಷ ಪನ್ನಗ ಚಾರಣರಲ್ಲಿಯಾಗಲಿ, ಈ ವ್ಯೆಂದದ್ವಿವಿದರೊಡನೆ ಯುದ್ಧಕ್ಕೆ ನಿಲ್ಲುವ ವೀರನೊಬ್ಬನಾದರೂ ಉಂಟೆ? ಈ ವಾನರೋತ್ತಮರಿಬ್ಬರೂ ಅಶ್ವಿನೀ ದೇವತೆಗಳಿಂದ ಹುಟ್ಟಿದವರು. ಮಹಾಮಹಿಮೆಯುಳ್ಳವರು. ಯುದ್ಧದಲ್ಲಿ ಇವರೊಡನೆ ಇದಿರಾಗಿ ನಿಂತು ಹೋರಾಡುವ ವೀರನೊಬ್ಬನಾದರೂ ಇಲ್ಲವು. ಇವರಿಬ್ಬರೂ ಬ್ರಹ್ಮನ ವರಬಲದಿಂದ ಬಹಳವಾಗಿ ಕೊಬ್ಬಿದವರು. ಇತರರಿಗೆ ದುರ್ಲಭವಾದ ಅಮೃತವನ್ನೂ ಭುಜಿಸಿಬಂದವರು. ಸಮಸ್ತವಾನರರಿಗೂ ಮೇಲೆನಿಸಿಕೊಂಡವರು. ಪೂರ್ವದಲ್ಲಿ ಸರ್ವಲೋಕಪಿತಾಮಹನಾದ ಬ್ರಹ್ಮನು, ಇವರ ತಂದೆಗಳಾದ ಅಶ್ವಿನೀದೇವತೆಗಳ ಸಂತೋಷಕ್ಕಾಗಿ ಇವರಿಗೆ ಯಾರಿಂದಲೂ ಮರಣವಿಲ್ಲದಂತೆ ವರವನ್ನೂ ಕೊಟ್ಟಿರುವನು. ಆ ವರದ ಬಲದಿಂದಲೇ ಈ ಕಪಿವೀರರಿಬ್ಬರೂ ಸಮಸ್ತ ದೇವಸೈನ್ಯವನ್ನೂ ಕದಲಿಸಿ, ಅಮೃತವನ್ನು ಕುಡಿದು ಬಂದಿರುವರು. ಉಳಿದ ವಾನರರೆಲ್ಲರೂ ಹಾಗಿರಲಿ! ಇವರಿಬ್ಬರೇ ಆ ಲಂಕೆಯನ್ನು ಅದರಲ್ಲಿರತಕ್ಕ ಚತುರಂಗಸೈನ್ಯದೊಡನೆ ಧ್ವಂಸಮಾಡಬಲ್ಲರು. ಇದುವರೆಗೇ ನಾನು ಆ ಲಂಕೆಯೆಲ್ಲವನ್ನೂ ಸುಟ್ಟು ಬೂದಿಮಾಡಿ ಬಂದಿರುವೆನು. ಅಲ್ಲಿನ ಬೀದಿಬೀದಿಗಳಲ್ಲಿಯೂ ನನ್ನ ಹೆಸರನ್ನು ಉದ್ಘೋಷಿಸಿರುವೆನು. ನನ್ನ ಹೆಸರನ್ನು ಮಾತ್ರವೇ ಅಲ್ಲದೆ, ಅಲ್ಲಲ್ಲಿ ರಾಕ್ಷಸರು ಗುಂಪುಕೂಡಿದ ಕಡೆಗಳಲ್ಲೆಲ್ಲಾ ನಾನು ಅವರ ಮುಂದೆ ಕೈಯೆತ್ತಿನಿಂತು "ಅತಿಬಲಾಢ್ಯನಾದ ರಾಮನಿಗೆ ಜಯವು! ಮಹಾಬಲವುಳ್ಳ ಲಕ್ಷ್ಮಣನಿಗೆ ಜಯವು! ರಾಮನಿಂದ ರಕ್ಷಿತನಾದ ಸುಗ್ರೀವರಾಜನಿಗೆ ಜಯವು. ಕೋಸಲೇಂದ್ರನಾದ ಆ ರಾಮಚಂದ್ರನಿಗೆ ನಾನೇ ದಾಸನು! ವಾಯುದೇವನ ಮಗನು, ನನಗೆ ಹನುಮಂತನೆಂದು ಹೆಸರು" ಎಂದು ನಮ್ಮ ಖ್ಯಾತಿಯನ್ನೂ ಸಾರಿಬಂದಿರುವೆನು. ಇದರಿಂದ ಆ ಲಂಕೆಯ ಯಾವಕಡೆಯಲ್ಲಿ ನೋಡಿದರೂ ನನ್ನ ಹೆಸರೇ ಹೆಸರಾಗಿರುವುದು. ಎಲೈ ವಾನರರೆ! ದುರಾತ್ಮನಾದ ರಾವಣನಿಗೆ ಸೇರಿದ ಅಶೋಕವನದ ನಡುವೆ ಪತಿವ್ರತೆಯಾದ ಆ ಸೀತೆಯು ಶಿಂಶುಪಾವೃಕ್ಷದ ಕೆಳಗೆ ದುಃಖದಿಂದ ಕುಳಿತಿರುವಳು! ಸಂಕಟದಿಂದ ಕೊರಗಿ ಕೃಶಳಾಗಿರುವಳು! ಅನೇಕಘೋರರಾಕ್ಷಸಿಯರು ಆಕೆಯ ಸುತ್ತಲೂ ಮುತ್ತಿ ನಿಂತಿರುವರು. ಹೀಗೆ ರಾಕ್ಷಸಿಯರಿಂದ ಪರಿವೃತೆಯಾಗಿ, ಸಂತಾಪದಿಂದ ಕೃಶಳಾದ ಆಕೆಯು ಮೋಡಮುಚ್ಚಿದ ಚಂದ್ರ

ಕಳೆಯಂತಿರುವಳು. ಮದೋನ್ಮತ್ತನಾದ ರಾವಣನನ್ನು ಮನಸ್ಸಿನಿಂದಲಾದರೂ ಸ್ಮರಿಸದೆ, ಎಡೆಬಿಡದೆ ರಾಮಧ್ಯಾನದಲ್ಲಿರುವ ಆಕೆಯ ಸ್ಥಿತಿಯನ್ನು ನೋಡಿದರೆ ಎಂತವರಿಗೂ ಮನಸ್ಸುಕರಗುವುದು. ಆ ವಿದೇಹರಾಜಪುತ್ರಿಯು ರಾವಣನಲ್ಲಿ ಸೆರೆ ಬಿದ್ದವಳಾದರೂ, ನಹುಷನಲ್ಲಿ ಸೆರೆಸಿಕ್ಕಿದ ಶಚಿಯು ದೇವೇಂದ್ರನನ್ನು ಹೇಗೋ ಹಾಗೆ ಸರ್ವವಿಧದಿಂದಲೂ ರಾಮನನ್ನೇ ಚಿಂತಿಸುತ್ತ, ಬೇರೊಂದರ ಸ್ಮರಣೆಯೇ ಇಲ್ಲದೆ ಸಂಕಟದಿಂದ ಕೊರಗುತ್ತಿರುವಳು.ಒಂದೇ ಬಟ್ಟೆಯನ್ನು ಟ್ಟು,ಕೊಳೆಪುಚ್ಚಿದ ಮೈಯುಳ್ಳವಳಾಗಿ ಸಂಕಟದಿಂದ ಕೊರಗುತ್ತ ಅನವರತವೂ ತನ್ನ ಪತಿಯ ಕ್ಷೇಮವನ್ನೇ ಬಯಸುತ್ತಿರುವಳು. ಎಲೈ ವಾನರರೆ! ವಿಕೃತಾಕಾರವುಳ್ಳ ಅನೇಕ ರಾಕ್ಷಸಿಯರು ಆಕೆಯನ್ನು ಸುತ್ತಿನಿಂತು, ಆ ಪ್ರಮದಾವನದಲ್ಲಿ ಅವಳನ್ನು ಬಾರಿ ಬಾರಿಗೂ ಹೆದರಿಸುತ್ತಿರುವಾಗ ನಾನು ಅವಳನ್ನು ಕಂಡೆನು. ಆಕೆಯು ತನ್ನ ತಲೆ ಕೂದಲನ್ನು ಒಂದೇ ಜಡೆಯಾಗಿ ಬೆಳೆಬಿಟ್ಟು, ದುಃಖದಿಂದ ಕೃಶಳಾಗಿ ಎಡೆಬಿಡದೆ ತನ್ನ ಪತಿಯನ್ನೇ ಚಿಂತಿಸುತ್ತಿರುವಳು. ಬರೀನೆಲದಮೇಲೆ ಮಲಗುತ್ತಿರುವಳು. ಹಿಮಗಾಲದ ತಾವರೆಬಳ್ಳಿಯಂತೆ ಬಹಳವಾಗಿ ಬಣ್ಣಗುಂದಿರುವಳು. ರಾವಣನು ಆಕೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿ,ಎಷ್ಟೆಷ್ಟೋ ಪ್ರಲೋಭನವಾಕ್ಯಗಳನ್ನಾಡಿದರೂ ಆಕೆಯಲ್ಲಿ ಅವೆಲ್ಲವೂ ನಿಷ್ಪ್ರಯೋಜನಗಳಾದುವು. ಕೊನೆಗೆ ಅವಳು ಆ ದುರಾತ್ಮನ ಹಿಂಸೆಯನ್ನು ತಡೆಯಲಾರದೆ ಆತ್ಮಹತ್ಯೆಗಾಗಿಯೂ ನಿಶ್ಚಯಿಸಿಕೊಂಡಿದ್ದಳು. ಈ ಸಂದರ್ಭದಲ್ಲಿ ನಾನು ಅವಳಿಗೆ ಎಷ್ಟೋ ಕಷ್ಟದಿಂದ ನನ್ನ ವೃತ್ತಾಂತವನ್ನು ತಿಳಿಸಿ ನಂಬಿಕೆಯನ್ನು ಹುಟ್ಟಿಸಿದೆನು. ಹಾಗೆಯೇ ನಾನು ಅವಳೊಡನೆ ಸಂಧಾಷಿಸಿ ರಾಮನ ಪ್ರಯತ್ನವೇ ಮೊದಲಾದ ಇಲ್ಲಿನ ವೃತ್ತಾಂತವೆಲ್ಲವನ್ನೂ ತಿಳಿಸಿದೆನು. ರಾಮಸುಗ್ರೀವರಿಬ್ಬರಿಗೂ ಸ್ನೇಹವುಂಟಾದುದನ್ನು ಕೇಳಿ ಆಕೆಗೆ ಸಂತೋಷವು ಹುಟ್ಟಿತು. ಆ ಸೀತೆಯಲ್ಲಿರುವ ಸದಾಚಾರವೂ, ಆಕೆಯ ಪತಿಭಕ್ತಿಯೂ ಸರ್ವೋತ್ತಮವಾದುದು. ಇಂತಹ ಮಹಾಮಹಿಮೆಯುಳ್ಳ ಆ ಸೀತೆಯು, ತಾನೇ ರಾವಣನನ್ನು ಕೊಲ್ಲದಿರುವುದಕ್ಕೆ ಕಾರಣವೇನೆಂದು ನೀವು ಕೇಳಬಹುದು. ಆ ರಾವಣನು ಅಷ್ಟು ಮಹಾಪರಾಧಿಯಾಗಿದ್ದರೂ ಅವನು ಮಹಾತ್ಮನಾದುದರಿಂದ ಅವನಿಗೆ ಶಾಪರೂಪವಾದ ದುರ್ಮರಣವು ಸಂಭವಿಸಲಾರದು. ಅದುದರಿಂದ ಆ ರಾವಣನವಧಕ್ಕೆ ರಾಮನು ನಿಮಿತ್ತಮಾತ್ರವಾಗಿನಿಂತಿರುವನು. ಸೀತೆಯೇ ಪ್ರಧಾನಕಾರಣವು. ಸೀತೆಯು ಸಹಜವಾಗಿಯೇ ಸೂಕ್ಷ್ಮವಾದ ದೇಹವುಳ್ಳವಳು. ಇದರಮೇಲೆ ಪತಿವಿಯೋಗದಿಂದ ಮತ್ತಷ್ಟು ಕೃಶಳಾಗಿರುವಳು! ಪಾಡ್ಯದಿನದಲ್ಲಿ ಹಿಡುವ ಸ್ವಭಾವವುಳ್ಳವನ ವಿದ್ಯೆಯು, ಕ್ರಮಕ್ರಮವಾಗಿ ಕರಗುವಂತೆ ಕರಗುತ್ತಿರು

ವಳು. ಎಲೈ ಮಹಾತ್ಮರೆ! ಸೀತೆಯಂತೂ ಈ ಸ್ಥಿತಿಯಲ್ಲಿ ಅನವರತವೂ ದುಃಖದಿಂದ ತಪಿಸುತ್ತಿರುವಳು. ಇದಕ್ಕೆ ಮುಂದೆ ಯಾವವಿಧದಲ್ಲಿ ಪ್ರತೀಕಾರವನ್ನು ಮಾಡಬೇಕೋ, ಅದನ್ನು ನೀವು ಯೋಚಿಸಿರಿ" ಎಂದನು.

ಇಪ್ಪತ್ತೊಂಬತ್ತನೆಯ ಸರ್ಗವು.

ಅಂಗದನೂ ಹನುಮಂತನ ಮಾತನ್ನನುಮೋದಿಸಿ, ತಾನೇ ಸೀತೆಯನ್ನು ಕರೆತಂದು ರಾಮನ ಬಳಿಗೆ ಸೇರಿಸಬೇಕೆಂದು ಹೇಳಲು, ಜಾಂಬವಂತನು ಅವನ ಮಾತನ್ನು ನಿವಾರಿಸಿ ಸಮಾಧಾನಹೇಳಿದುದು.

ಹನುಮಂತನ ಮಾತನ್ನು ಕೇಳಿ ಅಂಗದನು "ಎಲೈ ವಾನರರೆ! ನಾವು ಸೀತೆಯನ್ನು ನೋಡಿಬಂದೆವೇಲೆ ಅವಳನ್ನು ಬಿಟ್ಟು, ರಾವಣಬಳಿಗೆ ಹೋಗುವುದು ಮಾತ್ರ ಎಂದಿಗೂ ಯುಕ್ತವಲ್ಲ. ನಾವೆಲ್ಲರೂ ಇಷ್ಟು ಪ್ರಸಿದ್ಧಪರಾಕ್ರಮವುಳ್ಳವರಾಗಿರುವಾಗಲೂ, ರಾವಣನಮುಂದೆ ನಿಂತು "ನಾವು ಸೀತೆಯನ್ನು ನೋಡಿಬಂದೆವೇ ಹೊರತು ಅವಳನ್ನು ಕರೆತರಲಿಲ್ಲ" ಎಂದು ಹೇಳುವುದು ನಮ್ಮ ಮಾನಕ್ಕೆ ಕಡಿಮೆಯೆಂದೇ ನನಗೆ ತೋರುವುದು. ಎಲೈ ವಾನರೋತ್ತಮರೆ! ದೇವತೆಗಳಲ್ಲಿಯಾಗಲಿ, ದಾನವರಲ್ಲಿಯಾಗಲಿ, ಇತರ ಲೋಕಗಳಲ್ಲಿಯಾಗಲಿ ಹಾರಿಹೋಗುವುದರಲ್ಲಿಯೂ ಪರಾಕ್ರಮದಲ್ಲಿಯೂ ನಮಗೆ ಸಮಾನರೊಬ್ಬರೂ ಇಲ್ಲ. ಇದರಮೇಲೆ ಮೊದಲೇ ಹನುಮಂತನು ಲಂಕೆಯಲ್ಲಿ ಅನೇಕ ವೀರರಾಕ್ಷಸರನ್ನು ಕೊಂದೂ ಬಂದಿರುವನು. ಇನ್ನು ನಾವು ನಡೆಸಬೇಕಾದ ಕಾರ್ಯವೇನಿರುವುದು? ಸೀತಾದೇವಿಯನ್ನು ಕರೆದುಕೊಂಡು ಹೋಗುವುದೊಂದೇ ಅಲ್ಲವೆ? ಅದನ್ನೂ ನಡೆಸಿಯೇ ಬಿಡಬೇಕು" ಎಂದನು. ವಾನರೋತ್ತಮನಾದ ಜಾಂಬವಂತನಿಗೆ ಅಂಗದನು ಹೇಳಿದ ಈ ಮಾತನ್ನು ಕೇಳಿದೊಡನೆ ಅವನ ದೃಢವಾದ ಸಂಕಲ್ಪವನ್ನು ನೋಡಿ ಸಂತೋಷವುಟ್ಟಿತು. ಆದರೂ ಅವನು ಕಾರ್ಯಾಕಾರ್ಯಗಳನ್ನು ಬಲ್ಲ ವಿವೇಕಿಯಾದುದರಿಂದ, ಆ ಅಂಗದನನ್ನು ಕುರಿತು ಅರ್ಥಯುಕ್ತವಾದ ಮಾತಿನಿಂದ "ಎಲೈ ಯುವರಾಜನೆ! ನಿನ್ನ ಅಲೋಚನೆಯೇನೋ ನನಗೂ ಯುಕ್ತವಾಗಿಯೇ ತೋರುವುದು. ಈ ಕಾರ್ಯಕ್ಕೆ ನಾವು ಸಮರ್ಥರೆಂಬುದೂ

ನಿಜವು. ಆದರೂ ನಾವು ಶ್ರೀರಾಮನ ಆಜ್ಞೆಯನ್ನನುಸರಿಸಿಯೇ ಯಾವ್ಕಾರ್ಯವನ್ನಾದರೂ ನಡೆಸಬೇಕಲ್ಲವೆ? ಆದುದರಿಂದ ಮೊದಲು ಆ ರಾಮನ ಮನಸ್ಸು ಹೇಗಿರುವುದೋ ಅದನ್ನು ತಿಳಿದು, ಅವನ ಅಭಿಪ್ರಾಯವನ್ನನುಸರಿಸಿಯೇ ನಾವು ಮುಂದಿನ ಕಾರ್ಯವನ್ನು ಮಾಡುವುದುತ್ತಮವು" ಎಂದನು.

ಇಲ್ಲಿಗೆ ಅರುವತ್ತನೆಯ ಸರ್ಗವು.

ಹನುಮಂತಾದಿ ವಾನರರೆಲ್ಲರೂ, ಹಿಂತಿರುಗಿ ರಾಮನ ಬಳಿಗೆ ಪ್ರಯಾಣಹೊರಟು, ನಡುದಾರಿಯಲ್ಲಿ ಮಧುವನವನ್ನು ಪ್ರವೇಶಿಸಿ, ಅಲ್ಲಿ ಅಂಗದನ ಅನುಮತಿಯಿಂದ ಜೇನನ್ನು ಕುಡಿಯುತ್ತಿರಲು, ಅಲ್ಲಿ ಕಾವಲಿದ್ದ ದಧಿಮುಖನು ಅವರನ್ನು ಅಕ್ಷೇಪಿಸಿ ತಡೆದುದು.

ಜಾಂಬವಂತನು ಹೇಳಿದ ಈ ಮಾತನ್ನು ಕೇಳಿ ಹನುಮಂತನೂ, ಅಂಗದನೇ ಮೊದಲಾದ ಇತರ ವಾನರರೂ, ಅವನ ಮಾತಿಗೊಪ್ಪಿ ಸುಮ್ಮನಾದರು. ಆಗಲೇ ಬಲಾಢ್ಯರಾದ ಆ ವಾನರರೆಲ್ಲರೂ ಹನುಮಂತನನ್ನು ಮುಂದಿಟ್ಟುಕೊಂಡು ಮಹೇಂದ್ರಪರ್ವತವನ್ನು ಬಿಟ್ಟು ಮೇಲೆ ಹಾರಿದರು. ಮೇರುಮಂದರಪರ್ವತಗಳಂತೆಯೂ, ಮದಿಸಿದ ಮಹಾಗಜಗಳಂತೆಯೂ, ದೊಡ್ಡದೊಡ್ಡದೇಹವುಳ್ಳ ಆ ವಾನರರೆಲ್ಲರೂ ಒಟ್ಟಾಗಿ ಆಕಾಶವನ್ನೇ ಮರೆಸುವಂತೆ ಸಾಗಿ ಬರುತ್ತಿದ್ದರು. ಆ ವಾನರರಲ್ಲಿ ಒಬ್ಬೊಬ್ಬರೂ, ಸಮಸ್ತಭೂತಗಳಿಗೂ ಪೂಜ್ಯನಾಗಿಯೂ, ಧೀರನಾಗಿಯೂ ಬಲಾಢ್ಯನಾಗಿಯೂ, ವೇಗಶಾಲಿಯಾಗಿಯೂ ಇರುವ ಆ ಹನುಮಂತನನ್ನೇ ಎವೆಮುಚ್ಚದೆ ನೋಡುತ್ತ, ತಮ್ಮ ದೃಷ್ಟಿಗಳಿಂದಲೇ ಅವನನ್ನೆತ್ತಿತರುವಂತೆ ಕಾಣುತ್ತಿದ್ದರು. ಆ ವಾನರರೊಬ್ಬೊಬ್ಬರೂ ತಾವೇ ಕಾರ್ಯವನ್ನು ಸಾಧಿಸಿ, ವಿಶೇಷವಾದ ಕೀರ್ತಿಯನ್ನು ಪಡೆಯಬೇಕೆಂಬ ಉದ್ದೇಶವುಳ್ಳವರಾದುದರಿಂದ, ತಾವು ಬಂದಕಾರ್ಯವನ್ನೇಡೇರಿಸಿಕೊಂಡು, ಆ ಕಾರ್ಯಸಿದ್ಧಿಯಿಂದ ಇತರ ವಾನರರಿಗಿಂತಲೂ ತಾವೇ ಮೇಲೆನಿಸಿಕೊಂಡವರು. ಅವರಲ್ಲಿ ಒಬ್ಬೊಬ್ಬರೂ ರಾಮನಿಗೆ ಸೀತಾದರ್ಶನವೆಂಬ ಪ್ರಿಯವಾಕ್ಯವನ್ನು ಹೇಳುವುದರಲ್ಲಿ ಆತುರವುಳ್ಳವರು. ಒಬ್ಬೊಬ್ಬರೂ ರಾಮನಿಗೆ ಪ್ರತ್ಯುಪಕಾರವನ್ನು ಮಾಡಬೇಕೆಂಬ ನಿಶ್ಚಯದಿಂದ ಉತ್ಸಾಹಪೂರ್ಣವಾದ ಮನಸ್ಸುಳ್ಳವರು! ಒಬ್ಬೊಬ್ಬರೂ ಯುದ್ಧೋತ್ಸಾಹವುಳ್ಳವರು! ಇಂಥಹ ವಾನರರೆಲ್ಲರೂ ಆ ಮಹೇಂದ್ರಪರ್ವತವನ್ನು ಬಿಟ್ಟು ಅತ್ಯಾತುರದಿಂದ

ಆಕಾಶದಲ್ಲಿ ಹಾರಿ ಬರುತ್ತಿರುವಾಗ, ನಡುದಾರಿಯಲ್ಲಿ ಅವರಿಗೆ ಒಂದು ತೋಟವು ಕಾಣಿಸಿತು. ಆ ತೋಟವಾದರೋ ಬಗೆಬಗೆಯ ಗಿಡಬಳ್ಳಿಗಳಿಂದ ತುಂಬಿ, ದೇವೇಂದ್ರನ ನಂದನವನದಂತೆ ಕಾಣುತ್ತಿರುವುದು. ಅದಕ್ಕೆ ಮಧುವನ ವೆಂದು ಹೆಸರು. ಸುಗ್ರೀವನಿಂದ ರಕ್ಷಿತವಾದ ಆ ವನವನ್ನು ಪ್ರವೇಶಿಸಿ ನೋಡುವುದಕ್ಕಾದರೂ ಯಾವಪ್ರಾಣಿಗಳಿಗೂ ಸಾಧ್ಯವಿಲ್ಲ. ಅದು ಸಮಸ್ತಭೂತ ಗಳ ಮನಸ್ಸನ್ನೂ ಆಕರ್ಷಿಸುವಂತಿರುವುದು. ಮಹಾತ್ಮನಾಗಿಯೂ, ಕಪಿಶ್ರೇಷ್ಠ ನಾಗಿಯೂ ಇರುವ ದಧಿಮುಖನೆಂಬ ವಾನರನು ಅದಕ್ಕೆ ಕಾವಲಾಗಿರುವನು. ಆ ದಧಿಮುಖನು ಸುಗ್ರೀವನಿಗೆ ಸೋದರಮಾವನು. ಸುಗ್ರೀವನಿಗೆ ಬಹಳಪ್ರೀತಿ ಪಾತ್ರವಾಗಿಯೂ, ವಿಶ್ವಾಸವಾಗಿಯೂ ಇರುವ ಆ ತೋಟವನ್ನು ಕಂಡೊಡನೆ, ವಾನರರೆಲ್ಲರೂ, ಅದರಲ್ಲಿ ಪ್ರವೇಶಿಸಿ, ಅಲ್ಲಿದ್ದ ಜೇನನ್ನು ಕುಡಿಯಬೇಕೆಂದು ಆತುರ ಪಡುತ್ತಿದ್ದರು. ಮಧುವಿನಂತೆ ಪಿಂಗಳದೇಹವುಳ್ಳ ಆ ಕಪಿಗಳೆಲ್ಲರೂ, ಆ ಮಧುವನ ವನ್ನು ಕಂಡು ಪರಮಸಂತೋಷದಿಂದ, ಯುವರಾಜನಾದ ಅಂಗದನ ಬಳಿಗೆ ಹೋಗಿ, ತಮಗೆ ಅಲ್ಲಿನಜೇನನ್ನು ಕೊಡಿಸಬೇಕೆಂದು ಪ್ರಾರ್ಥಿಸಿದರು. ಆಗ ಅಂಗ ದನು ಜಾಂಬವಂತನೇ ಮೊದಲಾದ ವೃದ್ಧವಾನರರಿಗೆ ಈ ವಿಷಯವನ್ನು ತಿಳಿಸಿ ಅವರ ಅನುಜ್ಞೆಯನ್ನು ಪಡೆದು, ಆ ವಾನರರನ್ನು ಅಲ್ಲಿನ ಮಧುಪಾನಕ್ಕಾಗಿ ಅನುಮತಿಸಿದನು. ಮೊದಲೇ ಆ ವಾನರರೆಲ್ಲರೂ ಸೀತೆಯನ್ನು ನೋಡಿ ಬಂದ ಸಂತೋಷದಿಂದ ಉಬ್ಬಿಹೋಗಿದ್ದರು. ಇದರಮೇಲೆ ಅಂಗದನು ತಮಗೆ ಆ ತೋಟದಲ್ಲಿ ಮಧುಪಾನಕ್ಕೂ ಅನುಮತಿಯನ್ನು ಕೊಟ್ಟಮೇಲೆ ಅವರ ಸಂತೋಷಕ್ಕೆ ಪಾರವುಂಟೆ? ಅಂಗದನೂ ಅವರನ್ನು ಯಥೇಷ್ಟವಾಗಿ ಮಧು ವನ್ನು ಕುಡಿಯುವಂತೆ ಮೇಲೆಮೇಲೆ ಪ್ರೇರಿಸುತ್ತಿದ್ದನು. ಆ ಸಂತೋಷದಲ್ಲಿ ಅಲ್ಲಿದ್ದ ಕಪಿಗಳೆಲ್ಲರೂ, ತಮ್ಮತಮ್ಮ ಚೇಷ್ಟೆಯನ್ನಾರಂಭಿಸಿಬಿಟ್ಟರು. ಅವರಲ್ಲಿ ಹಾಡುವರು ಕೆಲವರು! ತಲೆಕೆಳಗಾಗಿ ಲಾಗಹಾಕುವವರು ಕೆಲವರು! ಅಟ್ಟ ಹಾಸದಿಂದ ನಗುವವರು ಕೆಲವರು! ಕುಣಿಯುವವರೂ ಕೆಲವರು! ಹಾರಿಬೀಳುವವರು ಕೆಲವರು! ಓಡುವವರು ಕೆಲವರು! ನೆಗೆಯುವರು ಕೆಲವರು! ಕೇಕೆ ಹಾಕುವರು ಕೆಲವರು! ಒಬ್ಬರ ಮೇಲೊಬ್ಬರು ಹಾರುವರು ಕೆಲವರು! ಒಬ್ಬರಿ ಗೊಬ್ಬರು ಸೇರಿ ಆಟವಾಡುವರು ಕೆಲವರು! ಮರದಿಂದ ಮರಕ್ಕೆ ಹಾರುವವರು ಮತ್ತೆ ಕೆಲವರು! ಮರದ ಕೊಂಬೆಯನ್ನೇರಿ ನೆಲಕ್ಕೆಧುಮುಕುವರು ಕೆಲವರು! ನೆಲದಿಂದ ಹಾರಿ ಮರದ ಕೊಂಬೆಗಳನ್ನು ಹಿಡಿಯುವರು ಕೆಲವರು! ಮತ್ತು, ಒಬ್ಬನುಹೇಹಾಡುವಾಗ ಮತ್ತೊಬ್ಬನು ಸಕಪಕನೆ ನಗುತ್ತ ಬಂದು ಮೇಲೆಬೀಳು

ವನು! ನಗುವವನ ಮುಂದೆ ಗಟ್ಟಿಯಾಗಿ ಅಳುತ್ತ ಬರುವವನೊಬ್ಬನು. ಅಳುವ ವನನ್ನು ಹಿಂದಿನಿಂದ ನೂಕುತ್ತ ಬರುವವನೊಬ್ಬನು. ನೂಕುವವನ ಹಿಂದೆ ಕೂಗುತ್ತ ಬರುವವನೊಬ್ಬನು. ಹೀಗೆ ಆ ವಾನರಸಮೂಹವೆಲ್ಲವೂ ಯಥೇಚ್ಛವಾಗಿ ಜೇನನ್ನು ಕುಡಿದು, ಮದದಿಂದ ವೈಮರಿತು ನಾನಾಚೇಷ್ಟೆಗಳನ್ನು ಮಾಡುತಿದ್ದರು. ಆ ವಾನರರಲ್ಲಿ ಅಗ ಮದ್ಯಪಾನದಿಂದ ಮದವೇರದವನಾಗಲಿ, ಹಣ್ಣುಗಳನ್ನು ತಿಂದು ತೃಪ್ತಿಯಿಲ್ಲದವನಾಗಲಿ, ಒಬ್ಬನಾದರೂ ಇರಲಿಲ್ಲ! ಇಷ್ಟರಲ್ಲಿ ಆ ತೋಟಕ್ಕೆ ಕಾವಲಿದ್ದ ದಧಿಮುಖನೆಂಬ ವಾನರನು, ಆ ತೋಟದಲ್ಲಿಯ ಜೇನು ಮೊದಲಾದ ಆಹಾರಪದಾರ್ಥಗಳೆಲ್ಲವೂ ಕಪಿಗಳಿಂದ ಭಕ್ಷಿಸಲ್ಪಡುವುದನ್ನೂ, ಅಲ್ಲಿನ ಫಲ, ಪುಷ್ಪಾದಿಗಳು ನಾಶಹೊಂದುತ್ತಿರುವುದನ್ನೂ ಕಂಡು, ಕೋಪದಿಂದ ಬಂದು ಆ ಕಪಿಗಳನ್ನು ತಡೆದನು. ಈ ದಧಿಮುಖನಾದರೋ ಬಹಳ ವೃದ್ಧನು. ಮೊದಲೇ ಪ್ರಾಯದ ಮದದಿಂದಲೂ, ಅದರಮೇಲೆ ಮದ್ಯಮದದಿಂದಲೂ ಕೊಬ್ಬಿದ ಈ ವಾನರರು ಆ ಮುದುಕನ ಮಾತಿಗೆ ಲಕ್ಷ್ಯಕೊಡುವರೆ? ಈ ಕಪಿಗಳೆಲ್ಲರೂ ಸೇರಿ ಅವನನ್ನೇ ಗದರಿಸುತ್ತ, ತಮ್ಮ ಕಾರ್ಯವನ್ನೇ ತಾವು ನೋಡುತ್ತಿದ್ದರು. ಇದನ್ನು ನೋಡಿ ಉಗ್ರತೇಜಸ್ವಿಯಾದ ಆ ದಧಿಮುಖನು, ಹೇಗಾದರೂ ತನ್ನ ತೋಟಕ್ಕೆ ಆ ಕಪಿಗಳ ಹಾವಳಿಯನ್ನು ತಪ್ಪಿಸಬೇಕೆಂದು, ತಿರುಗಿ ತಿರುಗಿ ಅವರನ್ನು ತಡೆಯುತ್ತಿದ್ದನು. ಅವರಲ್ಲಿ ಭೀರುಸ್ವಭಾವವುಳ್ಳ ಕೆಲವರನ್ನು ಪರುಷವಾಕ್ಯದಿಂದ ಹೆದರಿಸಿದನು. ತನಗೆ ಸಮಾನವುಳ್ಳ ಕೆಲವರೊಡನೆ ಜಗಳವಾಡಿದನು. ಪ್ರಬಲರಾದ ಕೆಲವರಿಗೆ ಒಳ್ಳೆಯಮಾತುಗಳಿಂದ ಬುದ್ಧಿವಾದಗಳನ್ನು ಹೇಳಿದನು. ಇಷ್ಟಾದರೂ ಆ ವಾನರರು ಸ್ವಲ್ಪವೂ ಭಯಪಡದೆ, ತಮ್ಮ ತಪ್ಪನ್ನೂ ತಾವು ನೋಡದೆ, ಎಲ್ಲರೂ ಒಂದಾಗಿ ಸೇರಿ, ಅವನನ್ನು ಸುತ್ತಿಮುತ್ತಿಕೊಂಡು, ಅವನನ್ನೇ ಬಾಯಿಗೆ ಬಂದಹಾಗೆ ಬೈದು ತಿರಸ್ಕರಿಸಿ ಭಂಗಿಸುತಿದ್ದರು. ಅಗ ಕಪಿಗಳ ಕೈಗೆ ಸಿಕ್ಕಿಬಿದ್ದ ಆ ದಧಿಮುಖನ ಅವಸ್ಥೆಯನ್ನು ಕೇಳಬೇಕೆ? ಅವನನ್ನು ಉಗುರುಗಳಿಂದ ಪರಚುವವರು ಕೆಲವರು! ಹಲ್ಲುಗಳಿಂದ ಕಡಿಯುವವರು ಕೆಲವರು! ಅಂಗೈಯಿಂದ ಅಪ್ಪಳಿಸುವವರು ಕೆಲವರು! ಕಾಲುಗಳಿಂದ ಒದೆಯುವವರು ಕೆಲವರು! ಹೀಗೆ ಮದದಿಂದ ಕೊಬ್ಬಿದ ಆ ಕಪಿಗಳೆಲ್ಲರೂ ಒಂದಾಗಿ ಸೇರಿ, ದಧಿಮುಖನನ್ನು ಮೃತಪ್ರಾಯನನ್ನಾಗಿ ಮಾಡಿ ಕಳುಹಿಸಿದುದಲ್ಲದೆ, ಇತ್ತಲಾಗಿ ಆ ತೋಟದಲ್ಲಿಯೂ ಫಲಪುಷ್ಪಾದಿ ಭೋಗ್ಯವಸ್ತುಗಳೊಂದೂ ಇಲ್ಲದಂತೆ ಅದನ್ನು ಶುದ್ಧಶೂನ್ಯವಾಗಿ ಮಾಡಿಬಿಟ್ಟರು.

ಇಲ್ಲಿಗೆ ಅರುವತ್ತೊಂದನೆಯ ಸರ್ಗವು.

ದಧಿಮುಖನಿಂದ ನಿವಾರಿತರಾದ ವಾನರರನ್ನು, ಹನುಮಂತನೂ, ಅಂಗದನೂ ಮತ್ತಷ್ಟು ಪ್ರೋತ್ಸಾಹಿಸಿದುದು. ದಧಿಮುಖನು ವಾನರರ ಪ್ರಹಾರದಿಂದ ನೊಂದು ಸುಗ್ರೀವನ ಬಳಿಗೆ ಓಡಿಹೋದುದು.

ಆಮೇಲೆ ವಾನರೋತ್ತಮನಾದ ಹನುಮಂತನು ಅಲ್ಲಿ ದಧಿಮುಖನ ಕಲಹಕ್ಕೆ ಹೆದರಿ ಸುಮ್ಮನಿದ್ದ ಕೆಲವು ವಾನರರನ್ನು ಕುರಿತು, "ಎಲೈ ವಾನರರೆ! ಹೆದರಬೇಡಿರಿ! ನೀವು ನಿಶ್ಚಿಂತರಾಗಿ ಮಧುವನ್ನು ಕುಡಿಯಿರಿ! ಯಾರು ನಿಮ್ಮನ್ನು ತಡೆದರೂ ನಾನಿರುವೆನು!" ಎಂದನು. ಹನುಮಂತನ ಮಾತನ್ನು ಕೇಳಿ ಕಪಿಶ್ರೇಷ್ಠನಾದ ಅಂಗದನೂ ಅವರಲ್ಲಿ ಪ್ರಸನ್ನನಾಗಿ ಆ ವಾನರರನ್ನು ಕುರಿತು, "ಇಲ್ಲಿರುವ ವಾನರರೆಲ್ಲರೂ ಯಥೇಷ್ಟವಾಗಿ ಮಧುವನ್ನು ಕುಡಿಯಬಹುದು. ಸುಖುವಾಗಿ ನಾವು ಉದ್ದೇಶಿಸಿಬಂದ ಕಾರ್ಯವನ್ನು ಸಾಧಿಸಿದವನು ಈ ಹನುಮಂತನು! ಇವನು ಏನಾದರೂ ಒಂದು ಅಕಾರ್ಯವನ್ನು ಮಾಡಬೇಕೆಂದು ಹೇಳಿದರೂ ಈಗ ನಾವು ಅವಶ್ಯವಾಗಿ ಅದನ್ನು ನಡೆಸಿಯೇ ತೀರಬೇಕು. ಇನ್ನು ಇವನೇ ಈ ಕಾರ್ಯಕ್ಕೆ ಅನುಮತಿಸಿರುವಾಗ ಹೇಳಬೇಕಾದುದೇನು?" ಎಂದು ಅವರೆಲ್ಲರಿಗೂ ಮತ್ತೆ ಆಜ್ಞೆಮಾಡಿದನು. ಅಂಗದನ ಬಾಯಿಂದ ಈ ಮಾತು ಬಂದೊಡನೆ, ಆ ವಾನರರೆಲ್ಲರೂ ಪರಮಾನಂದಭರಿತರಾಗಿ "ಭಲೆ! ಭಲೆ!" ಎಂದು ಅಂಗದನನ್ನು ಮನ್ನಿಸಿ, ನದೀಪ್ರವಾಹದಂತೆ ಮಹಾವೇಗದಿಂದ ತಿರುಗಿ ಮಧುವನಕ್ಕೆ ನುಗ್ಗಿದರು. ಆ ವಾನರರಿಗಾದರೋ ಮೊದಲೇ ತಾವು ಸೀತೆಯ ವೃತ್ತಾಂತವನ್ನು ತಿಳಿದು ಬಂದ ಹೆಮ್ಮೆಯೊಂದು! ಸಹಜವಾದ ವೀರ್ಯವೊಂದು! ಅಂಗದನು ಕೊಟ್ಟ ಸ್ವಾತಂತ್ರ್ಯವೊಂದು! ಹೀಗೆ ಇವೆಲ್ಲವೂ ಒಂದಾಗಿ ಸೇರಿರಲು ಎಲ್ಲರೂ ಮಹೋತ್ಸಾಹಗೊಂಡವರಾಗಿ, ಆ ತೋಟಕ್ಕೆ ನುಗ್ಗಿ, ಅಲ್ಲಿದ್ದ ಕಾವಲುಗಾರರೆಲ್ಲರನ್ನೂ ಬಲಾತ್ಕಾರದಿಂದೋಡಿಸಿ, ಅಲ್ಲಿ ಯಥೇಚ್ಛವಾಗಿ ಮಧುವನ್ನು ಕುಡಿದರು. ಬೇಕಾದ ಹಣ್ಣುಗಳನ್ನೂ ಭಕ್ಷಿಸಿದರು. ಹೀಗೆ ಆ ವಾನರರೆಲ್ಲರೂ ಯಥೇಚ್ಛವಾಗಿ ತಿಂದು ತೇಗುತ್ತ ಅಲ್ಲಿ ತಮ್ಮನ್ನು ತಡೆಯುವುದಕ್ಕಾಗಿ ಬಂದ ಒಬ್ಬೊಬ್ಬ ಕಾವಲಿನವನನ್ನೂ ನಾನಾವಿಧದಿಂದ ಕೊಡೆದೋಡಿಸುತ್ತಿದ್ದರು. ಅಲ್ಲಲ್ಲಿ ಕೆಲವು ವಾನರರು ಒಟ್ಟಾಗಿ ಸೇರಿಕೊಂಡು, ಒಂದೊಂದು ಕೊಳಗದಷ್ಟು ಜೇನುಳ್ಳ ಗೂಡುಗಳನ್ನೂ ಕೈಗಳಿಂದೊತ್ತಿ ಬಾಯಿಗೆ ಹಿಂಡಿಕೊಳ್ಳುತ್ತಿದ್ದರು. ಬೇರೆ ಕೆಲವರು ಹಿಂಡಿದ ಗೂಡುಗಳನ್ನು ಕಿತ್ತು ಹಾಕುತ್ತಿರುವರು. ಕೆಲವರು ಜೇನನ್ನು ಕುಡಿದು ಗೂಡನ್ನು ಬಿಸುಡುವರು. ಕೆಲವರು

ಮದ್ಯಪಾನದಿಂದ ಮತ್ತೇರಿ ಮೈಮರೆತು ಅದರ ಮೇಣದಿಂದಲೇ ಪರಸ್ಪರವಾಗಿ ಹೊಡೆದಾಡುತ್ತಿರುವರು. ಕೆಲವರು ನಡೆಯಲಾರದೆ ಮತ್ತೇರಿ ಮರದ ಬುಡದಲ್ಲಿ ಶಾಖೆಯನ್ನೊರಗಿಕೊಂಡು ನಿಂತಿರುವರು. ನಿಲ್ಲುವುದಕ್ಕೂ ತ್ರಾಣವಿಲ್ಲದ ಕೆಲವರು ಮರದಡಿಯಲ್ಲಿ ಎಲೆಗಳನ್ನು ಹಾಸಿ ಮಲಗಿರುವರು. ಇದಲ್ಲದೆ ಅವರಲ್ಲಿ ಪಾನಮದದಿಂದ ಹುಚ್ಚು ಹಿಡಿದವರು ಕೆಲವರು! ಸಂತೋಷದಿಂದ ಮೈಮರೆತವರು ಕೆಲವರು! ಒಬ್ಬರನ್ನೊಬ್ಬರು ಮೇಲಕ್ಕೆತ್ತಿ ಹಾಕುವವರು ಕೆಲವರು! ನಡೆಯಲಾರದೆ ತಡಬಡಿಸುವವರು ಕೆಲವರು. ಸಿಂಹನಾದ ಮಾಡುವವರು ಕೆಲವರು. ಅಟ್ಟಹಾಸದಿಂದ ಕೂಗುವವರು ಕೆಲವರು. ಪಾನಮದದಿಂದ ಪ್ರಜ್ಞೆತಪ್ಪಿ ನೆಲದಲ್ಲಿ ಮಲಗಿದವರು ಕೆಲವರು. ಬಾಯಿಂದಾಡಬಾರದ ಯಾವುದೋ ಒಂದು ಅಸಹ್ಯಕಾರ್ಯವನ್ನು ಮಾಡಿ ನಗುತ್ತಿರುವವರು ಕೆಲವರು. ಅದನ್ನು ನೋಡಿ ಅದರಂತೆಯೇ ಬೇರೊಂದು ಗ್ರಾಮ್ಯಕಾರ್ಯವನ್ನು ನಡೆಸುವವರು ಕೆಲವರು. ತಾವುಮಾಡಿದ ಅಸಹ್ಯಕಾರ್ಯವನ್ನು ಬಾಯಿಂದಲೂ ಆಡುತ್ತಿದ್ದವರು ಕೆಲವರು. ಅದರಂತೆಯೇ ಬೇರೊಂದು ಗ್ರಾಮ್ಯಕಾರ್ಯಕ್ಕೆ ಉದ್ದೇಶಿಸಿ ನಿಂತವರು ಕೆಲವರು. ಹೀಗೆ ಮದದಿಂದ ಕೊಬ್ಬಿದ ಆ ವಾನರರು, ಆ ತೋಟಕ್ಕೆ ಕಾವಲಿದ್ದ ದಧಿಮುಖನ ಕಡೆಯ ಒಬ್ಬೊಬ್ಬ ವಾನರನನ್ನೂ ಹೊಡೆದೋಡಿಸುತ್ತಿರಲು ಅವರೆಲ್ಲರೂ ಭಯದಿಂದ ದಿಕ್ಕುದಿಕ್ಕಿಗೆ ಪಲಾಯನ ಮಾಡಿದರು. ಮತ್ತು ಆ ವಾನರರು ತಮ್ಮನ್ನು ತಡೆಯುವುದಕ್ಕಾಗಿ ಬಂದ ಒಬ್ಬೊಬ್ಬ ವನಪಾಲಕನನ್ನೂ, ಮೊಳಕಾಲುಗಳಲ್ಲಿ ಹಿಡಿದೆಳೆದು, [1] ಅವರ ಗುದದ್ವಾರವನ್ನೇ ಅವರ ಮುಖದ ಕಡೆಗೆ ತೋರಿಸಿ ಅವಮಾನಪಡಿಸುತ್ತಿರಲು ಅವರೆಲ್ಲರೂ ಬಹಳ ದುಃಖಿತರಾಗಿ, ದಧಿಮುಖನ ಬಳಿಗೆಬಂದು, "ಸ್ವಾಮೀ! ಹನುಮಂತನ ಬಲದಿಂದ ಆ ವಾನರರೆಲ್ಲರೂ ನಮ್ಮ ಮಧುವನವನ್ನೆಲ್ಲಾ ಹಾಳುಮಾಡಿಬಿಟ್ಟರು. ನಮ್ಮ ಮೊಳಕಾಲುಗಳನ್ನು ಹಿಡಿದೆಳೆದು, ನಮ್ಮ ಗುದದ್ವಾರವನ್ನೇ ನಮ್ಮ ಮುಖದ ಕಡೆಗೆ ತಿರುಗಿಸಿ ತೋರಿಸಿದರು" ಎಂದರು. ಹೀಗೆ ವಾನರರಿಂದ ತನ್ನ ತೋಟವು ಹಾಳಾದುದಲ್ಲದೆ, ಅವರ ಕುಚೇಷ್ಟೆಗಳನ್ನೂ ಕೇಳಿ, ದಧಿಮುಖನಿಗೆ ತಡೆಯಲಾರದ ಕೋಪವುಂಟಾಯಿತು. ಆ ಮೇಲೆ ಆ ದಧಿಮುಖನು ದುಃಖಿತರಾಗಿ ಬಂದ ತನ್ನ ಕಡೆಯ ವಾನರರನ್ನು ಸಮಾಧಾನಪಡಿಸುತ್ತ "ಎಲೆ

---

1. ಇಲ್ಲಿ "ಜಾನುಭಿಸ್ತು ಪ್ರಕೃಷ್ಯಾಶ್ಚ ದೇವಮಾರ್ಗಂ ಪ್ರದರ್ಶಿತಾಃ" ಎಂದು ಮೂಲವು. ಇಲ್ಲಿ ದೇವಮಾರ್ಗವೆಂದರೆ ಆಕಾಶವೆಂಬ ಅರ್ಥವಾಗಿ, ಆ ವಾನರರು ಕಾಲುಗಳನ್ನು ಹಿಡಿದೆಳೆದು ಆಕಾಶಕ್ಕೆಸೆಯುತ್ತಿದ್ದರೆಂದು ಅರ್ಥಾಂತರವನ್ನೂ ಹೇಳಬಹುದು. ಅಥವಾ ಆ ವಾನರರು ಮೊಳಕಾಲುಗಳ ಹಿಂದೆ ಹೂಡಿದು, ಮೇಲುಮುಖವಾಗಿ ಕೆಳಕ್ಕುರುಳಿಸಿ, ಆಕಾಶವನ್ನು ನೋಡುವಂತೆ ಮಾಡಿದರೆಂದೂ ಅರ್ಥಾಂತರವುಂಟು.

ವಾನರರೇ! ಇಲ್ಲಿ ಬನ್ನಿರಿ! ಈಗ ನಾವೆಲ್ಲರೂ ಒಟ್ಟಾಗಿಯೇ ಸೇರಿಹೋಗುವೆವು. ಅಲ್ಲಿಹೋಗಿ, ನಮ್ಮ ತೋಟದ ಮಧುವೆಲ್ಲವನ್ನೂ ಕುಡಿದು ಬಲದಿಂದ ಕೊಬ್ಬಿದ ಆ ವಾನರರ ಕೊಬ್ಬನ್ನು ಮುರಿಯುವೆವು" ಎಂದನು. ಇದನ್ನು ಕೇಳಿ ಆ ತೋಟಕ್ಕೆ ಕಾವಲಿದ್ದ ಕಪಿಗಳೆಲ್ಲರೂ, ದಧಿಮುಖನನ್ನು ಮುಂದಿಟ್ಟುಕೊಂಡು ತಿರುಗಿ ವೇಗದಿಂದ ಮಧುವನಕ್ಕೆ ಹೋದರು. ಅಲ್ಲಿಂದ ಹೊರಡುವಾಗಲೇ ದಧಿಮುಖನು ಒಂದು ದೊಡ್ಡ ಮರವನ್ನು ಕಿತ್ತು ಕೈಯಲ್ಲಿ ಹಿಡಿದುಕೊಂಡು, ತನ್ನ ಕಡೆಯ ವಾನರರಿಂದ ಪರಿವೃತನಾಗಿ ವೇಗದಿಂದ ಬಂದನು. ಆ ವಾನರರಲ್ಲಿಯೂ ಕೆಲವರು ಕಲ್ಲುಗಳನ್ನೂ, ಕೆಲವರು ಮರಗಳನ್ನೂ, ಕೆಲವರು ಬೆಟ್ಟಗಳನ್ನೂ, ಕೈಗೆತ್ತಿಕೊಂಡು ಕೋಪದಿಂದ ದಧಿಮುಖನೊಡನೆ ಬರುತ್ತಿದ್ದರು. ಹೀಗೆ ಈ ಕಪಿವೀರರೆಲ್ಲರೂ, ಸಾಲ ತಾಳೆ ಮೊದಲಾದ ವೃಕ್ಷಗಳನ್ನೂ, ಕಲ್ಲುಗಳನ್ನೂ ಆಯುಧಗಳನ್ನಾಗಿ ಹಿಡಿದು, ತಮ್ಮೊಡೆಯನಾದ ದಧಿಮುಖನ ಆಜ್ಞೆಯಂತೆ ಅಂಗದಾದಿಗಳಿದ್ದ ಕಡೆಗೆ ಓಡಿಬಂದರು. ಆ ವನಪಾಲಕರೆಲ್ಲರೂ, ಸಾವಿರಾರು ಲೆಕ್ಕದಿಂದ ಹೊರಟುಬಂದು, ಆ ತೋಟದಲ್ಲಿ ಮರಗಳ ಮೇಲೆಯೂ, ನೆಲದಲ್ಲಿಯೂ, ಅಲ್ಲಲ್ಲಿ ಗುಂಪುಗುಂಪಾಗಿ ಸೇರಿದ್ದ ವಾನರರನ್ನು ಮುತ್ತಿಸಿಂತರು. ಆಗ ಅಲ್ಲಿದ್ದ ಹನುಮಂತನೇ ಮೊದಲಾದ ವಾನರೋತ್ತಮರೆಲ್ಲರೂ, ತಮ್ಮ ಕಡೆಗೆ ಕೋಪದಿಂದ ಬರುತ್ತಿದ್ದ ದಧಿಮುಖನನ್ನು ನೋಡಿ ಅವನನ್ನೊಡಿಸುವುದಕ್ಕಾಗಿ ಮುಂದೆ ಬಂದರು. ಇಷ್ಟರಲ್ಲಿಯೇ ಅಂಗದನು ತನಗಿದಿರಾಗಿ ಕೈಯಲ್ಲಿ ಮರವನ್ನು ಹಿಡಿದು ಬರುತ್ತಿದ್ದ ದಧಿಮುಖನನ್ನು ನೋಡಿ, ಬಹಳವಾಗಿ ಕೋಪಗೊಂಡು, ಆಗಲೇ ತನ್ನ ಎರಡು ಕೈಗಳಿಂದಲೂ ಆ ದಧಿಮುಖನನ್ನು ಬಲವಾಗಿ ಅಪ್ಪಳಿಸಿದನು. ಯುವರಾಜನಾದ ಆ ಅಂಗದನೂಕೂಡ, ಮದಾಂಧನಾಗಿದ್ದುದರಿಂದ ಆ ದಧಿಮುಖನು ತನಗೆ ಶಾತ ನೆಂಬುದನ್ನೂ ಭಾವಿಸದೆ, ಅವನಲ್ಲಿ ಪೂಜ್ಯಭಾವವನ್ನೂ ತೋರಿಸದೆ ಅವನನ್ನು ಹೀಗೆ ಭಂಗಪಡಿಸಿದುದಲ್ಲದೆ ಆ ದಧಿಮುಖನನ್ನು ಕೈಯಿಂದೆತ್ತಿ ಬಲವಾಗಿ ನೆಲದಲ್ಲಿ ಕುಕ್ಕಿಬಿಟ್ಟನು. ಇದರಿಂದ ಆ ದಧಿಮುಖನಿಗೆ ತೋಳು, ತೊಡೆ, ಹೆಗಲು ಮುಂತಾದ ಸರ್ವಾವಯವಗಳೂ ಜರ್ಜರಿತಗಳಾದುವು. ಅವನ ದೇಹವೆಲ್ಲವೂ ರಕ್ತಮಯವಾಯಿತು. ಒಂದು ಮುಹೂರ್ತಕಾಲದವರೆಗೆ ಮೈಮೇಲೆ ಪ್ರಜ್ಞೆಯಿಲ್ಲದೆ ಮೂರ್ಛೆಹೋದನು. ಸ್ವಲ್ಪಕಾಲದಮೇಲೆ ಹೇಗೋ ಚೇತರಿಸಿಕೊಂಡು, ತಿರುಗಿ ಬಹಳ ಕೋಪಗೊಂಡು, ಮಧುಪಾನದಿಂದ ಮೈಮರೆತಿದ್ದ ಆ ವಾನರರನ್ನು ನಿಗ್ರಹಿಸಬೇಕೆಂದು ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದು ಮುಂದೆ ಹೋದನು. ಆಗಲೂ ಅವನ ಪ್ರಯತ್ನವು ವಿಫಲವಾಯಿತು. ಅಂಗದಾದಿಗಳ ಕೈಯಿಂದ ತಪ್ಪಿಸಿ

ಕೊಂಡು ಬರುವುದೇ ಅವನಿಗೆ ಕಷ್ಟವಾಯಿತು. ಕೊನೆಗೆ ಎಷ್ಟೋ ಪ್ರಯಾಸದಿಂದ ಹಿಂತಿರುಗಿ ಬಂದು, ಏಕಾಂತವಾದ ಒಂದು ಸ್ಥಲವನ್ನು ಸೇರಿ, ಅಲ್ಲಿ ತನ್ನ ಕಡೆಯ ಭೃತ್ಯರನ್ನು ನೋಡಿ, "ಎಲೈ ವಾನರರೇ! ಇನ್ನು ನಮ್ಮಿಂದ ಸಾಧ್ಯವಿಲ್ಲ! ಈ ಅಂಗದಾದಿಗಳ ಮೇಲೆ ನಮ್ಮ ಶಕ್ತಿಯು ಸಾಗದು! ಇವರೆಲ್ಲರೂ ಇಲ್ಲಿಯೇ ಇರಲಿ! ಈಗಲೇ ನಾವು ನಮ್ಮ ಪ್ರಭುವಾದ ಸುಗ್ರೀವನನ್ನೂ, ರಾಮನನ್ನೂ ಸೇರಿರತಕ್ಕ ಸ್ಥಳಕ್ಕೆ ಹೋಗುವೆವು. ಈ ಅಂಗದನು ಮಾಡಿರತಕ್ಕ ತಪ್ಪುಗಳೆಲ್ಲವನ್ನೂ ಆತನಲ್ಲಿ ಸ್ಪಷ್ಟವಾಗಿ ತಿಳಿಸಿಬಿಡುವೆವು. ನಮ್ಮ ಪ್ರಭುವಾದ ಸುಗ್ರೀವನೋ ಬಹಳಕೋಪ ಸ್ವಭಾವವುಳ್ಳವನು. ಈ ಮಾತನ್ನು ಕೇಳಿದ ಮಾತ್ರಕ್ಕೆ ಈ ವಾನರರೆಲ್ಲರನ್ನೂ ಕೊಂದೇಬಿಡುವನು. ಈ ಮಧುವನವನ್ನು ಹಾಳುಮಾಡಿದ ಸಂಗತಿಯು ಅವನ ಕಿವಿಗೆ ಬಿದ್ದಮಾತ್ರದಲ್ಲೇ ಅವನು ಇವರನ್ನು ಸುಮ್ಮನೆಬಿಡುವವನಲ್ಲ. ಈ ತೋಟವು ಮಹಾತ್ಮನಾದ ನಮ್ಮ ಸುಗ್ರೀವನಿಗೆ ಪಿತೃಪಿತಾಮಹಪರಂಪರೆಯಿಂದ ಬಂದಿರುವುದು. ದೇವತೆಗಳಿಗಾದರೂ ಇದನ್ನು ಪ್ರವೇಶಿಸುವುದು ಸಾಧ್ಯವಲ್ಲ. ದಿವ್ಯವಾದ ಈ ತೋಟದಲ್ಲಿ ಅವನೂ ಎಷ್ಟೋ ಪ್ರೀತಿಯನ್ನಿಟ್ಟಿರುವನು. ಜೇನಿನ ಆಸೆಗಾಗಿ ಈ ತೋಟವನ್ನು ಹಾಳುಮಾಡಿದ ಈ ವಾನರಸೇನಾಪತಿಗಳಿಗೂ, ಇವರ ಕಡೆಯ ವರಿಗೂ, ಮರಣದಂಡನೆಯನ್ನೇ ವಿಧಿಸುವನು. ಈ ವಾನರರ ಆಯುಃಪ್ರಮಾಣವು ಇಂದಿಗೆ ತೀರಿತೆಂದೇ ಹೇಳಬೇಕು. ರಾಜಾಜ್ಞೆಯನ್ನೂ ಲಕ್ಷ್ಯಮಾಡದ ಈ ದುರಾತ್ಮರಿಗೆ ವಧವೇ ಸರಿಯಾದ ಶಿಕ್ಷೆಯು. ಸುಗ್ರೀವನು ಇವರನ್ನು ಕೊಲ್ಲಿಸುವುದರಲ್ಲಿ ಸಂದೇಹವೇ ಇಲ್ಲ. ನಮಗೆ ಇವರ ಮೇಲೆ ಹಗೆತೀರಿಸಿಕೊಳ್ಳುವುದಕ್ಕೆ ಇದೇ ಉಪಾಯವು" ಎಂದನು. ಹೀಗೆ ದಧಿಮುಖನು ತನ್ನ ಕಡೆಯ ವನಪಾಲಕರಿಗೆ ತಿಳಿಸಿ ಅವರನ್ನೂ ಕರೆದುಕೊಂಡು ವೇಗದಿಂದ ಸುಗ್ರೀವನಕಡೆಗೆ ಹೊರಟನು. ಎವೆ ಮುಚ್ಚುವಷ್ಟರಲ್ಲಿಯೇ ಅವರೊಡನೆ ಸೂರ್ಯಪ್ರಭಾಸದ ಸುಗ್ರೀವನಿದ್ದ ಸ್ಥಲಕ್ಕೆ ಬಂದು ಸೇರಿ, ಅಲ್ಲಿ ರಾಮನನ್ನೂ, ಲಕ್ಷ್ಮಣನನ್ನೂ, ಸುಗ್ರೀವನನ್ನೂ ನೋಡಿ ಹಳ್ಳಹಿಟ್ಟಿಲ್ಲದ ಒಂದು ಸಮಪ್ರದೇಶದಲ್ಲಿ ಆಕಾಶದಿಂದ ಕೆಳಕ್ಕಿಳಿದು ನಿಂತನು. ವನಪಾಲಕರೆಲ್ಲರಿಗೂ ಪ್ರಭುವಾದ ಈ ದಧಿಮುಖನು ತನ್ನ ಭೃತ್ಯರಿಂದ ಪರಿವೃತನಾಗಿ, ಸುಗ್ರೀವನಮುಂದೆ ಬಹಳ ದೈನ್ಯದಿಂದ ತಲೆಯಮೇಲೆ ಕೈಜೋಡಿಸಿ ನಿಂತು ಸುಗ್ರೀವನ ಕಾಲುಗಳೆರಡನ್ನೂ ಹಿಡಿದು[1] ನಮಸ್ಕರಿಸಿದನು.

ಇಲ್ಲಿಗೆ ಅರುವತ್ತೆರಡನೆಯ ಸರ್ಗವು.

---

1. ದಧಿಮುಖನು ಸುಗ್ರೀವನಿಗೆ ಮಾವನಾದುದರಿಂದ ನಮಸ್ಕರಿಸಬಾರದಾಗಿದ್ದರೂ, ಇಲ್ಲಿ ರಾಜಭೃತ್ಯಭಾವದಿಂದ ನಮಸ್ಕರಿಸಿದುದು ದೋಷವಲ್ಲವೆಂದು ಗ್ರಾಹ್ಯವು.

ದಧಿಮುಖನು ಸುಗ್ರೀವನೊಡನೆ ಮಧುವನಭಂಗವನ್ನು ಹೇಳಲು, ಅಂಗದಾದಿವಾನರರೇ ಸೀತೆಯನ್ನು ನೋಡಿ ಬಂದ ಸಂತೋಷದಿಂದ ಹಾಗೆ ಮಾಡಿರಬಹುದೆಂದು ಸುಗ್ರೀವನು ಲಕ್ಷ್ಮಣನಿಗೆ ತಿಳಿಸಿ, ಅವರನ್ನು ಬೇಗನೆ ಕರತರುವಂತೆ ದಧಿಮುಖನನ್ನು ಕಳುಹಿಸಿದುದು.

ಹೀಗೆ ದಧಿಮುಖನು ತಲೆಬಗ್ಗಿ ಸುಗ್ರೀವನ ಕಾಲಿಗೆ ಬೀಳಲು, ಅವನನ್ನು ನೋಡಿ ಸುಗ್ರೀವನ ಮನಸ್ಸಿಗೆ ಬಹಳ ಭಯವು ತೋರಿತು ! ತನಗೆ ಪೂಜ್ಯನಾದ ಮಾವನು ತನ್ನ ಕಾಲಮೇಲೆಬಿದ್ದು ವೊರೆಯಿಡುವುದಕ್ಕೆ ಕಾರಣವೇನೆಂದು ಕಳವಳಿಸುತ್ತ ಆ ದಧಿಮುಖನನ್ನು ಕುರಿತು, "ಅಯ್ಯನೆ! ಏಳೇಳು ! ಇದೇನು ! ಪೂಜ್ಯನಾದ ನೀನು ನನ್ನ ಕಾಲಿಗೆ ಬೀಳುವುದೆಂದರೇನು ? ಹೆದರಬೇಡ ! ನಡೆದಿರುವ ಸಂಗತಿಯೆಲ್ಲವನ್ನೂ ಹೇಳು !" ಎಂದನು. ಹೀಗೆ ಸುಗ್ರೀವನು ಅಭಯವನ್ನು ಕೊಟ್ಟಮೇಲೆ, ದಧಿಮುಖನು ನಂಬಿಕೆಯಿಂದ ಮೇಲಕ್ಕೆದ್ದು, ಅವನೊಡನೆ, "ಎಲೆ ರಾಜನೆ ! ನಾನೇನು ಹೇಳಲಿ ! ನಿನ್ನ ತಂದೆಯಾದ ಋಕ್ಷರಜಸ್ಸಾಗಲಿ, ನಿನ್ನಣ್ಣನಾದ ವಾಲಿಯಾಗಲಿ, ನೀನಾಗಲಿ, ಇದುವರೆಗೆ ಒಂದು ದಿನವಾದರೂ ನಮ್ಮ ಮಧುವನವನ್ನು ಸ್ವಲ್ಪಮಾತ್ರವೂ ನೋಯಿಸಿದವರಲ್ಲ ! ನಿಮಗೆ ಅಷ್ಟು ಪ್ರೀತಿಪಾತ್ರವಾದ ತೋಟವನ್ನೂ ಈಗ ಕೆಲವರು ವಾನರರು ತಿಂದು ತೀರಿಸಿಬಿಟ್ಟರು ! ನಮ್ಮ ಕಡೆಯ ಈ ಕಾವಲಿನವರು ಎಷ್ಟು ತಡೆದರೂ ಇವರನ್ನೂ ಲಕ್ಷ್ಯಮಾಡದೆ, ಅಲ್ಲಿನ ಹಣ್ಣುಗಳೆಲ್ಲವನ್ನೂ ತಿಂದು, ಅಲ್ಲಿನ ಜೇನನ್ನೂ ಇಷ್ಟಬಂದ ಹಾಗೆ ಕುಡಿಯುತ್ತಿರುವರು. ಅವರಲ್ಲಿ ಕೆಲವರು ಇನ್ನೂ ಅಲ್ಲಲ್ಲಿ ಉಳಿದಿರುವ ಜೇನುಗೂಡುಗಳನ್ನು ಕಿತ್ತು ಧ್ವಂಸಮಾಡುತ್ತಿರುವರು. ಬೇರೆ ಕೆಲವರು ತಿನ್ನುತ್ತಿರುವರು. ಈ ನಮ್ಮ ವನಪಾಲಕರು ಅವರನ್ನು ತಡೆದಾಗ ಅವರು ಹುಬ್ಬುಗಳನ್ನು ಕುಣಿಸಿ ಇವರನ್ನೇ ಹೆದರಿಸಿಬಿಟ್ಟರು. ಇವರೆಲ್ಲರೂ ಎಷ್ಟೋ ಅತುರದಿಂದ ಆ ವಾನರರನ್ನು ತೋಟದಿಂದ ಹೊರಡಿಸಬೇಕೆಂದು ಪ್ರಯತ್ನಿಸಿದರು. ವೀರರಾದ ಆ ಅಂಗದಾದಿಗಳು ಕೋಪದಿಂದಬ್ಬಿಕೆಂಪೇರಿದ ಕಣ್ಣುಳ್ಳವರಾಗಿ ಹುಬ್ಬುಗಳನ್ನು ಕುಡಿಸುತ್ತ ಎಲ್ಲರೂ ಒಟ್ಟಾಗಿ ಸೇರಿ ಇವರನ್ನೇ ಹೆದರಿಸಿ,ಓಡಿಸಿಬಿಟ್ಟರು.ಇದಲ್ಲದೆ ಕೆಲವರನ್ನು ಕೈಗಳಿಂದ ಹೊಡೆದಟ್ಟಿದರು. ಕೆಲವರನ್ನು ಮೊಳಕಾಲುಗಳಿಂದ ಗುದ್ದಿ ಕೆಡಹಿದರು. ನಮ್ಮಲ್ಲಿ ಕೆಲವರನ್ನು ಸಿಕ್ಕಿದಹಾಗೆ ಎಳೆದಾಡಿಬಿಟ್ಟರು. ಕೆಲವರನ್ನು ತಲೆಕೆಳಗಾಗಿ ನಿಲ್ಲಿಸಿ, ಅವರ ಗುದದ್ವಾರವನ್ನೇ ಅವರ ಮುಖದ ಕಡೆಗೆ ತಿರುಗಿಸಿ ತೋರಿಸಿಬಿಟ್ಟರು. ಪ್ರಭುವಾದ ನೀನಿರುವಾಗಲೇ ಆ ವಾನರರು ನಮ್ಮ ಕಡೆಯ ಈ ಕಾವಲಿನವರನ್ನು ಹೀಗೆ ಹೊಡೆದೋಡಿಸಿದರಲ್ಲಾ ! ಅದೂ ಹಾಗಿರಲಿ ! ಈಗಲೂ ನಮ್ಮ ತೋಟದಲ್ಲಿರುವ

ಮಧುಫಲಾದಿಗಳೆಲ್ಲವನ್ನೂ ಇಷ್ಟಬಂದಹಾಗೆ ಭಕ್ಷಿಸುತ್ತಿರುವರು" ಎಂದನು. ಹೀಗೆ ದಧಿಮುಖನ್ನು ವಾನರೇಂದ್ರನಾದ ಸುಗ್ರೀವನಿಗೆ ವಿಜ್ಞಾಪಿಸುತ್ತಿರುವಾಗಲೇ ಪರಂತಪನಾಗಿಯೂ ಪ್ರಾಜ್ಞನಾಗಿಯೂ ಇರುವ ಲಕ್ಷ್ಮಣನು ಸುಗ್ರೀವನನ್ನು ನೋಡಿ, "ಎಲ್ಲೆ ವಾನರೇಂದ್ರನೆ! ನಿನ್ನ ವನಪಾಲಕನಾದ ಈ ವಾನರನು ಇಲ್ಲಿಗೇಕೆ ಬಂದನು? ಯಾವುದಕ್ಕಾಗಿ ಹೀಗೆ ದುಃಖಿಸುತ್ತಿರುವನು? ಯಾವ ಉದ್ದೇಶವನ್ನು ಕುರಿತು ನಿನ್ನೊಡನೆ ವಿಜ್ಞಾಪಿಸುತ್ತಿರುವನು?" ಎಂದನು. ಮಹಾತ್ಮನಾದ ಲಕ್ಷ್ಮಣನು ಈ ಮಾತನ್ನು ಕೇಳಲು, ಸುಗ್ರೀವನು ಆತನನ್ನು ಕುರಿತು, "ಆರ್ಯ ಲಕ್ಷ್ಮಣಾ! ಈ ದಧಿಮುಖನು ಹೇಳುವ ವಿಷಯವು ಬೇರೇನೂ ಇಲ್ಲವು. ನಾವು ಸೀತೆಯನ್ನು ಹುಡುಕಿ ಬರುವುದಕ್ಕಾಗಿ ದಕ್ಷಿಣದಿಕ್ಕಿಗೆ ಕೆಲವು ವಾನರರನ್ನು ಕಳುಹಿಸಿದ್ದೆವಲ್ಲವೆ? ಅಂಗದನೇ ಮೊದಲಾದ ಆ ವಾನರರೆಲ್ಲರೂ ನಮ್ಮ ಮಧುವನದಲ್ಲಿ ಯಥೇಚ್ಛವಾಗಿ ಮಧುವನ್ನು ಕುಡಿಯುತ್ತಿರುವರಂತೆ. ಅದರೆ ಆ ಅಂಗದಾದಿಗಳು ದಾರಿಯಲ್ಲಿ ಬರುವಾಗ ಹೀಗೆ ನಮ್ಮ ತೋಟದಲ್ಲಿ ಪ್ರವೇಶಿಸಿ, ಅಲ್ಲಿನ ಗಿಡಗಳನ್ನು ಮುರಿದು ಅಲ್ಲಿನ ಮಧುವೆಲ್ಲವನ್ನೂ ಕುಡಿದು ತೀರಿಸಬೇಕಾದರೆ ಅವರು ಇಲ್ಲಿಂದ ಉದ್ದೇಶಿಸಿ ಹೋದ ಕಾರ್ಯವನ್ನು ನಡೆಸಿ ಬಂದಿರಬೇಕೆಂದೇ ತೋರುವುದು. ಹಾಗೆ ಅವರಿಗೆ ಹೋದಕಾರ್ಯವು ಕೈಗೂಡದಿದ್ದಪಕ್ಷದಲ್ಲಿ ಈ ಜೇಷ್ಠೆಗೆ ಉಪಕ್ರಮಿಸಲಾರರು. ಆ ವಾನರರು ಸ್ವತಂತ್ರಿಸಿ ನಮ್ಮ ಮಧುವನಕ್ಕೆ ಪ್ರವೇಶಿಸಿದಾಗಲೇ, ಅವರು ತಮ್ಮ ಕಾರ್ಯವನ್ನು ಸಾಧಿಸಿಕೊಂಡು ಬಂದಿರಬೇಕೆಂಬುದು ಸ್ಪಷ್ಟವು. ಅವರು ಸೀತೆಯನ್ನು ನೋಡಿಯೇ ಬಂದಿರಬೇಕು. ಇದರಲ್ಲಿ ಸಂದೇಹವಿಲ್ಲ. ಅವರಲ್ಲಿಯೂ ಹನುಮಂತನೇ ಆ ಕಾರ್ಯವನ್ನು ಸಾಧಿಸಿರಬೇಕು. ಹನುಮಂತನ ಹೊರತು ಬೇರೊಬ್ಬರೂ ಆ ಕಾರ್ಯವನ್ನು ಸಾಧಿಸಲಾರರು. ಕಾರ್ಯವನ್ನು ಸಾಧಿಸುವ ಶಕ್ತಿಯೂ, ಬುದ್ಧಿಯೂ, ಉತ್ಸಾಹವೂ, ಪರಾಕ್ರಮವೂ, ವಿದ್ಯೆಯೂ, ಇವೆಲ್ಲವೂ ವಾನರೋತ್ತಮನಾದ ಆ ಹನುಮಂತನಲ್ಲಿಯೇ ದೃಢವಾಗಿ ಬೇರೂರಿರುವುವು. ಯಾವ ಕಾರ್ಯಕ್ಕೆ ಜಾಂಬವಂತನೂ, ಬಲಾಢ್ಯನಾದ ಅಂಗದನೂ ನಿಯಾಮಕರಾಗಿಯೂ, ಹನುಮಂತನು ಸಾಧಿಸತಕ್ಕವನಾಗಿಯೂ ನಿಲ್ಲುವರೋ, ಆ ಕಾರ್ಯವು ತಪ್ಪದೆ ಸಿದ್ಧಿಸುವುದೇ ಹೊರತು ಅದಕ್ಕೆ ಬೇರೆ ಗತಿಯೆಂದರೇನು? ಲಕ್ಷ್ಮಣಾ! ಆ ಅಂಗದಾದಿ ವಾನರರೇ ಬಂದು ಈಗ ನಮ್ಮ ಮಧುವನವನ್ನು ಹಾಳುಮಾಡುತ್ತಿರುವರಂತೆ! ಅವರನ್ನು ತಡೆಯುವುದಕ್ಕಾಗಿ ಈ ವನಪಾಲಕರೆಲ್ಲರೂ ಒಂದಾಗಿ ಸೇರಿಹೋಗಲು, ಅವರು ಇವರನ್ನು ಮೊಳಕಾಲಿನಿಂದ ಗುದ್ದಿ ಓಡಿಸಿದರಂತೆ. ಪರಾಕ್ರಮದಲ್ಲಿ ಪ್ರಸಿದ್ಧನಾದ ಇವನು ದಧಿಮುಖನೆಂದು ಹೆಸರುಗೊಂಡವನಲ್ಲವೆ? ಅವನ

ಹೆಸರಿಗೆ ತಕ್ಕಂತೆ ನಮಗೆ ಪ್ರಿಯವಾಕ್ಯವನ್ನು ಹೇಳುವುದಕ್ಕಾಗಿಯೇ ಇಲ್ಲಿಗೆ ಬಂದನೇ ಹೊರತು ಬೇರೆಯಲ್ಲ! ಆರ್ಯ ಲಕ್ಷ್ಮಣಾ! ಹೇಗಾದರೂ ಆಗಲಿ! ಇಲ್ಲಿಂದ ಹೋದ ವಾನರರು ಸೀತೆಯನ್ನು ನೋಡಿಯೇ ಬಂದಿರಬೇಕು. ನೀನೂ ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ ನೋಡು. ಆ ಉತ್ಸಾಹದಿಂದಲೇ ಅಂಗದಾದಿ ವಾನರರೆಲ್ಲರೂ ಹಾಗೆ ನಿರ್ಭಯವಾಗಿ ನಮ್ಮ ತೋಟವನ್ನು ಪ್ರವೇಶಿಸಿ ಅಲ್ಲಿ ಯಥೇಚ್ಛವಾಗಿ ಜೇನನ್ನೂ ಕುಡಿಯುತ್ತಿರುವರು. ದಕ್ಷಿಣದಿಕ್ಕಿಗೆ ಹೋದ ಆ ವಾನರರೊಬ್ಬೊಬ್ಬರೂ ಬುದ್ಧಿಯಲ್ಲಿಯೂ, ಪರಾಕ್ರಮದಲ್ಲಿಯೂ, ಖ್ಯಾತಿ ಹೊಂದಿದವರೇ ಹೊರತು ಮಂದಬುದ್ಧಿಯವರಲ್ಲ! ಅಂಥವರು ಸೀತೆಯನ್ನು ನೋಡದೆಯೇ ಬಂದಿದ್ದ ಪಕ್ಷದಲ್ಲಿ, ಹೀಗೆ ಧೈರ್ಯದಿಂದ ನಮ್ಮ ಮಧುವನಕ್ಕೆ ಕಾಲಿಡಲಾರರು. ಆ ಮಧುವನವಾದರೂ ಸಾಮಾನ್ಯವಲ್ಲ. ಅದು ಬ್ರಹ್ಮಾನುಗ್ರಹದಿಂದ ನನ್ನ ತಂದೆಗೆ ವರವಾಗಿ ಕೊಡಲ್ಪಟ್ಟ ದಿವ್ಯವನವು" ಎಂದನು. ಇದನ್ನು ಕೇಳಿ ರಾಮಲಕ್ಷ್ಮಣರಿಬ್ಬರಿಗೂ ಅಪರಿಮಿತವಾದ ಸಂತೋಷವುಂಟಾಯಿತು. ಸುಗ್ರೀವನ ಬಾಯಿಂದ ಹೊರಟ ಕರ್ಣಾರ್ಮ್ಯವಾದ ಆ ವಾತನ್ನು ಕೇಳಿ, ಅವರಿಬ್ಬರೂ ಪರಮಾನಂದಭರಿತರಾಗಿ ನಿಂತಿದ್ದರು. ಇತ್ತರಲ್ಲಿ ಸುಗ್ರೀವನು ದಧಿಮುಖನ ಮಾತನ್ನು ಕೇಳಿ ಸಂತುಷ್ಟಹೃದಯನಾಗಿ, ತಿರುಗಿ ಆ ವನಪಾಲಕನನ್ನು ಕುರಿತು, "ಎಲೆ ಆರ್ಯನೆ! ಆ ವಾನರರು ತಾವು ಉದ್ದೇಶಿಸಿ ಹೋದ ಕಾರ್ಯವನ್ನು ನಡೆಸಿ ಕೃತಾರ್ಥರಾಗಿ ಬಂದಿರುವರು. ಆದುದರಿಂದ ಅವರು ನಮ್ಮ ತೋಟದಲ್ಲಿ ಮಧುವನ್ನು ಕುಡಿದುದಕ್ಕಾಗಿ ನನಗೆ ಸಂತೋಷವೇ ಹೊರತು ವ್ಯಸನವಿಲ್ಲ. ಅವರು ನಮ್ಮ ಕಾರ್ಯವನ್ನು ಸಾಧಿಸಿ ಬಂದಿರುವುದರಿಂದ, ಅವರು ಎಷ್ಟೇ ಚೇಷ್ಟೆಗಳನ್ನು ಮಾಡಿದರೂ ನಾವು ಕ್ಷಮಿಸಬೇಕಾದುದೇ ನ್ಯಾಯವು. ಆದುದರಿಂದ ನಾನು ಕ್ಷಮಿಸಿರುವೆನು ಹೋಗು! ಆದರೆ ಕೃತಾರ್ಥರಾಗಿ ಬಂದ ಆ ಹನುಮದಾದಿಗಳನ್ನು ಶೀಘ್ರದಲ್ಲಿಯೇ ಕಣ್ಣಾರೆ ನೋಡುವುದಕ್ಕೂ, ಸೀತೆಯನ್ನು ಕಾಣುವುದಕ್ಕಾಗಿ ಅವರು ಪಟ್ಟ ಪ್ರಯಾಸವನ್ನು ಕಿವಿಯಿಂದ ಕೇಳುವುದಕ್ಕೂ ನನಗೂ ಈ ರಾಮಲಕ್ಷ್ಮಣರಿಗೂ ಮೇಲಿಮೇಲೆ ಆತುರವು ಹೆಚ್ಚುತ್ತಿರುವುದು. ಆದಂದರಿಂದ ಅವರನ್ನು ಬೇಗನೆ ಕಳುಹಿಸು ಹೋಗು" ಎಂದನು. ತಮ್ಮ ಕಾರ್ಯವು ಕೈಗೂಡಿತೆಂಬ ಸಂತೋಷದಿಂದ ಅರಳಿದ ಕಣ್ಣುಳ್ಳವರಾಗಿಯೂ, ಪುಳಕಿತವಾದ ಮೈಯುಳ್ಳವರಾಗಿಯೂ ಮುಂದೆ ನಿಂತಿದ್ದ ಆ ರಾಮಲಕ್ಷ್ಮಣರನ್ನು ನೋಡಿ, ಸುಗ್ರೀವನೂ ಸಂತೋಷದಿಂದ ರೋಮಾಂಚಿತಗಾತ್ರನಾಗಿ, ಕಾರ್ಯ ಸಿದ್ಧಿಯೇ ಕೈಗೆ ಬಿದ್ದಂತೆ ಪರಮಾನಂದಭರಿತನಾಗಿದ್ದನು.

ಇಲ್ಲಿಗೆ ಅರುವತ್ತಾರನೆಯ ಸರ್ಗವು.

ದಧಿಮುಖನು ಅಂಗದಾದಿಗಳನ್ನು ಸುಗ್ರೀವನಬಳಿಗೆ ಕರೆತಂದುದು. ಹನುಮಂತನು ಸೀತೆಯನ್ನು ನೋಡಿಬಂದ ಸಂಗತಿಯನ್ನು ರಾಮನಿಗೆ ತಿಳಿಸಿದುದು.

ಸುಗ್ರೀವನು ಈ ಮಾತನ್ನು ಹೇಳಿದಕೂಡಲೇ ದಧಿಮುಖನ ಕೋಪವೂ ಶಾಂತವಾಗಿ ಅವನಿಗೂ ಸಂತೋಷವು ಹುಟ್ಟಿತು. ಆಗ ಅವನು ರಾಮನಿಗೂ, ಲಕ್ಷ್ಮಣನಿಗೂ, ಸುಗ್ರೀವನಿಗೂ ಕ್ರಮವಾಗಿ ವಂದನವನ್ನು ಮಾಡಿ, ತನ್ನ ಕಡೆಯ ವನಪಾಲಕರೊಡನೆ ಆಗಲೇ ಆಕಾಶಕ್ಕೆ ಹಾರಿಬಿಟ್ಟನು. ತಾನು ಬಂದ ರೀತಿಯಲ್ಲಿಯೇ ವೇಗದಿಂದ ಹೊರಟು ಮಧುವನದಲ್ಲಿ ಆಕಾಶದಿಂದ ನೆಲಕ್ಕಿಳಿದನು. ಹೀಗೆ ದಧಿಮುಖನು ಮಧುವನವನ್ನು ಪ್ರವೇಶಿಸುವಷ್ಟರಲ್ಲಿ, ಅಲ್ಲಿದ್ದ ವಾನರೋತ್ತಮರೆಲ್ಲರೂ ಮತ್ತಿಳಿದು, ಮೊದಲು ತಾವು ಪಾನಮಾಡಿದ್ದ ಜೇನನ್ನೂ, ಅನುಪಾನವಾಗಿ ಕುಡಿದ ನೀರನ್ನೂ ಮೂತ್ರದ್ವಾರದಿಂದ ಬಿಡುತ್ತಿರುವುದನ್ನು ಕಂಡನು. ವೀರನಾದ ಆ ದಧಿಮುಖನು ಸಂತೋಷದಿಂದ ಕೈಮುಗಿಯುತ್ತ ಮುಂದೆ ಹೋಗಿ, ಬಹುಮೃದುವಾದ ವಾಕ್ಯದಿಂದ ಅಂಗದನನ್ನು ಕುರಿತು, 'ಎಲೈ ಸೌಮ್ಯನೆ! ನಮ್ಮ ತಪ್ಪನ್ನು ಮನ್ನಿಸಬೇಕು! ನಾವು ತಡೆದೆವೆಂದು ಕೋಪಮಾಡಕೂಡದು! ಈ ವನಪಾಲಕರು ಏನೋ ಕೋಪದಿಂದಲೂ, ಅಜ್ಞಾನದಿಂದಲೂ ನಿಮ್ಮನ್ನು ತಡೆದರು. ನೀನು ಯುವರಾಜನಾದುದರಿಂದ ಈ ತೋಟದಲ್ಲಿ ನಿನಗೆ ಪೂರ್ಣಾಧಿಕಾರವುಂಟು! ಅಜ್ಞಾನದಿಂದ ನಾವು ನಿನ್ನಲ್ಲಿ ತಪ್ಪನ್ನು ನಡೆಸಿಬಿಟ್ಟೆವು. ನಮ್ಮನ್ನು ಮನ್ನಿಸಬೇಕು! ನಾನು ಇಲ್ಲಿಂದ ಹೋಗಿ ನಿನ್ನ ಚಿಕ್ಕಪ್ಪನಾದ ಸುಗ್ರೀವನೊಡನೆ ನೀವೆಲ್ಲರೂ ಇಲ್ಲಿಗೆ ಬಂದಿರುವ ಸಂಗತಿಯನ್ನು ತಿಳಿಸಿದೆನು. ಈ ಮಾತನ್ನು ಕೇಳಿದೊಡನೆ ಆತನು ಬಹಳ ಸಂತೋಷಗೊಂಡನೇ ಹೊರತು, ನೀವು ತೋಟವನ್ನು ಕೆಡಿಸಿದ ಸಂಗತಿಯನ್ನು ಕೇಳಿಯೂ ಸ್ವಲ್ಪಮಾತ್ರವೂ ಕೋಪಿಸಲಿಲ್ಲ. ಇದಲ್ಲದೆ ನಮ್ಮ ಪ್ರಭುವಾದ ಆ ಸುಗ್ರೀವನು ನಿಮ್ಮ ಆಗಮನಕ್ಕಾಗಿ ಬಹಳ ಸಂತೋಷಗೊಂಡು, ಈಗಲೇ ನಿಮ್ಮನ್ನು ಕರೆತರುವಂತೆಯೂ ನನಗೆ ಆಜ್ಞಾಪಿಸಿ ಕಳುಹಿಸಿದನು" ಎಂದನು. ದಧಿಮುಖನು ಹೇಳಿದ ಈ ಪ್ರಿಯವಾಕ್ಯವನ್ನು ಕೇಳಿ ಮಾತಿನಲ್ಲಿ ಚತುರನಾದ ಅಂಗದನು ಅಲ್ಲಿದ್ದ ವಾನರರನ್ನು ಕುರಿತು, "ಎಲೈ ವಾನರೋತ್ತಮರೆ? ಓಹೋ! ನಾವು ಇಲ್ಲಿಗೆ ಬಂದ ವಿಷಯವು ಆಗಲೇ ರಾಮನ ಕಿವಿಗೆ ಮುಟ್ಟಿದಂತಿದೆ. ಕಾರ್ಯವನ್ನು ಸಾಧಿಸಿ ಬಂದ ನಾವು, ಇನ್ನು ಮೇಲೆ ಇಲ್ಲಿ ತಡಮಾಡಿ ನಿಲ್ಲುವುದು ಯುಕ್ತವಲ್ಲ! ಇಲ್ಲಿರುವ ವಾನರರೆಲ್ಲರೂ ಈ ತೋಟದಲ್ಲಿ ಯಥೇಚ್ಛವಾಗಿ ಮಧುವನ್ನು ಕುಡಿದು ವಿಶ್ರಾಂತಿಯನ್ನೂ ಹೊಂದಿದುದಾಯಿ

ತಪ್ಪೆ? ಇನ್ನು ಮೇಲೆ ನಾವು ನಡೆಸಬೇಕಾದ ಕಾರ್ಯಶೇಷವೇನು? ನಮ್ಮ ಪ್ರಭುವಾದ ಸುಗ್ರೀವನನ್ನು ನೋಡಬೇಕಾದುದೊಂದೇ ಅಲ್ಲವೆ! ಆದರೆ ನಾನು ಯಾವ ವಿಷಯದಲ್ಲಿಯೂ ನಿಮ್ಮನ್ನು ನಿರ್ಬಂಧಿಸಲಾರೆನು! ಎಲೆ ವಾನರಶ್ರೇಷ್ಠರೆ? ಈಗಲೂ ನೀವೆಲ್ಲರೂ ಸೇರಿ ಹೇಗೆ ನಿಯಮಿಸುವಿರೋ ಹಾಗೆಯೇ ನಾನೂ ನಡೆದುಕೊಳ್ಳತಕ್ಕವನು. ನಾನು ನಿಮಗೆ ಪರತಂತ್ರನೇ ಹೊರತು ಸ್ವತಂತ್ರನಲ್ಲ. ಇಲ್ಲಿ ನಾನು ಯುವರಾಜನೆಂಬ ಹೆಸರನ್ನು ಹೊತ್ತಿದ್ದರೂ ಈಗ ಯಾವ ವಿಷಯಕ್ಕಾಗಲಿ ನಿಮ್ಮನ್ನು ನಿಯಮಿಸುವುದಕ್ಕೆಮಾತ್ರ ಸ್ವತಂತ್ರನಲ್ಲ! ಹೇಗಿದ್ದರೂ ನೀವು ಕಾರ್ಯವನ್ನು ಸಾಧಿಸಿ ಬಂದವರು! ನಿಮ್ಮ ಮೇಲೆ ಅಧಿಕಾರವನ್ನು ಬೀರುವುದೂ ಯುಕ್ತವಲ್ಲ!" ಎಂದನು. ಹೀಗೆ ಅಂಗದನು ಎಂದೆಂದಿಗೂ ತಮ್ಮ ಮನಸ್ಸಿನಲ್ಲಿ ನಾಟುವಂತೆ ಹೇಳಿದ ಈ ವಾಕ್ಯವನ್ನು ಕೇಳಿ, ಅಲ್ಲಿದ್ದ ವಾನರರೆಲ್ಲರೂ ಸಂತುಷ್ಟ ಹೃದಯರಾಗಿ, ಆ ಅಂಗದನನ್ನು ಕುರಿತು, "ಎಲ್ಲೆ ಯುವರಾಜನೆ! ಈಗಲೀಗ ನೀನು ವಾನರೋತ್ತಮನೆಂಬುದು ಸ್ಪಷ್ಟವಾಯಿತು! ಪ್ರಭುತ್ವವಿರುವಾಗಲೂ ಹೀಗೆ ಹೇಳುವವನಾವನುಂಟು! ಪ್ರಭುತ್ವವು ಬಂದಾಗ ಲೋಕದಲ್ಲಿ ಪ್ರತಿಯೊಬ್ಬನೂ ಆ ಅಧಿಕಾರದಿಂದ ಮೈಮರೆತು ಗರ್ವಪಡುವನೇ ಹೊರತು ಹೀಗೆ ವಿನಯವನ್ನು ತೋರಿಸಲಾರನು! ಈ ಮಾತು ನಿನಗುಚಿತವಾಗಿಯೇ ಇರುವುದು. ಇಷ್ಟು ವಿನಯವು ಬೇರೊಬ್ಬರಿಗೆ ಉಂಟಾಗಲಾರದು. ಈ ನಿನ್ನ ವಿನಯವೇ ನಿನಗೆ ಮುಂದೆಬರುವ ಶ್ರೇಯಸ್ಸನ್ನೂ ಸೂಚಿಸುವುದು. ನಾವೆಲ್ಲರೂ ಮೊದಲೇ ನಮ್ಮ ಪ್ರಭುವಾದ ಸುಗ್ರೀವನ ಬಳಿಗೆ ಹೋಗುವುದಕ್ಕೆ ಸಿದ್ಧರಾಗಿ ಸಮಯವನ್ನು ನಿರೀಕ್ಷಿಸುತ್ತ ಆತುರದಿಂದ ಕಾದಿರುವೆವು. ಆದರೇನು? ವಾನರರಾದ ನಮಗೆ ನಿನ್ನ ಅಪ್ಪಣೆಯಿಲ್ಲದೆ, ಎಲ್ಲಿಗಾದರೂ ಒಂದು ಹೆಜ್ಜೆಯನ್ನಿಟ್ಟು ಹೋಗುವುದಕ್ಕೂ ಸಾಧ್ಯವಲ್ಲ. ಈ ಮಾತು ಸತ್ಯವು?" ಎಂದರು. ಇದನ್ನು ಕೇಳಿ ಪುನಃ ಅಂಗದನು ಆವರನ್ನು ಕುರಿತು, "ಸರಿ! ಹಾಗಾದಲೆ ಹೊರಡುವೆವು." ಎಂದನು. ಈ ಮಾತು ಅಂಗದನ ಬಾಯಿಂದ ಹೊರಡುತ್ತಿರುವಾಗಲೇ ಮಹಾಬಲಾಢ್ಯರಾದ ಕೆಲವು ವಾನರರು ಆಕಾಶಕ್ಕೆ ಹಾರಿಬಿಟ್ಟರು. ಅಂಗದನು ಮುಂದಾಗಿ ಹಾರಿದುದನ್ನು ಕಂಡು ಅಲ್ಲಿದ್ದ ಸಮಸ್ತವಾನರರೂ ಮೇಲೆ ಹಾರಿದರು. ಹೀಗೆ ಆ ಕಪಿವೀರರೆಲ್ಲರೂ ಯಂತ್ರಗಳಿಂದ ಹಾರಿಸಲ್ಪಟ್ಟ ಪರ್ವತಗಳಂತೆ ಮೇಲೆ ಹಾರಿ ಆಕಾಶವನ್ನು ಎಡೆಬಿಡದೆ ವ್ಯಾಪಿಸಿ ಅಂಗದನ ಹಿಂದೆ ಹೊರಟು, ವಾಯುಪ್ರೇರಿತಗಳಾದ ಮಹಾ ಮೇಘಗಳಂತೆ, ಮಹಾಧ್ವನಿಯಿಂದ ಕೂಗುತ್ತ ಮಹಾವೇಗದಿಂದ ಹಾರಿಬರುತ್ತಿದ್ದರು. ಅಂಗದನು ಬಂದಿಳಿಯುವಷ್ಟರಲ್ಲಿ ಇತ್ತಲಾಗಿ ಕಪಿರಾಜನಾದ ಸುಗ್ರೀವನು, ಸೀತಾವಿರಹದುಃಖದಿಂದ ಕೊರಗುತ್ತಿದ್ದ ರಾಮನನ್ನು

ನೋಡಿ "ರಾಮಾ! ಇನ್ನು ನಿನ್ನ ದುಃಖವನ್ನು ಬಿಡು. ಸಮಾಧಾನದಿಂದಿರು. ನಿನಗೆ ಮಂಗಳವಾಗಲಿ. ಸೀತೆಯು ಸಿಕ್ಕಿರುವಳು! ಇದಕ್ಕೆ ಸಂದೇಹವಿಲ್ಲ. ಆ ವಾನರರು ಸೀತೆಯನ್ನು ನೋಡದಿದ್ದ ಪಕ್ಷದಲ್ಲಿ, ನಾನು ನಿರ್ಣಯಿಸಿದ್ದ ಕಾಲವೂ ಅತಿಕ್ರಮಿಸಿ ಹೋಗಿರುವಾಗ ಇಲ್ಲಿಗೆ ಬರುತ್ತಲೇ ಇರಲಿಲ್ಲ. ಆದರಲ್ಲಿಯೂ ಮುಖ್ಯವಾಗಿ ಯುವರಾಜನಾದ ಅಂಗದನು, ತಾನು ಹೋದಕಾರ್ಯವು ನಡೆಯದಿದ್ದಪಕ್ಷದಲ್ಲಿ ತಿರುಗಿ ನನ್ನಲ್ಲಿಗೆ ಬರುವುದೆಂದರೇನು? ಒಂದುವೇಳೆ ಅವರು ಕಾರ್ಯವನ್ನು ಸಾಧಿಸದಂತೆಯೇ ಬಂದು, ವನಭಂಗವೆಂಬ ಈ ಜೇಷ್ಠಗೆ ತೊಡಗಿದ್ದ ಪಕ್ಷದಲ್ಲಿ ಆ ಕಾರ್ಯವನ್ನು ಮಾಡಿಸಿದುದಕ್ಕಾಗಿ, ನಮ್ಮ ಅಂಗದನಿಗೆ ಮನಸ್ಸಿನಲ್ಲಿ ಬಹಳವಾಗಿ ಕಳಕಳವೂ, ಮುಖದಲ್ಲಿ ದೈನ್ಯವೂ ಇರುತ್ತತ್ತೇ ಹೊರತು ಆಗ ಅವನಿಗೆ ಇಷ್ಟು ಉತ್ಸಾಹವೆಂದರೇನು? ಆ ಮಧುವನವಾದರೋ! ನಮಗೆ ತಂದೆತಾತಂದಿರ ಕಾಲದಿಂದ ಬಂದಿರುವುದು. ನಮ್ಮ ಹಿರಿಯರೆಲ್ಲರ ಎಷ್ಟೋ ಜಾಗರೂಕತೆಯಿಂದ ಅದನ್ನು ರಕ್ಷಿಸುತ್ತಿದ್ದರು. ಅಂತಹ ವನವನ್ನು ಈ ಅಂಗದನು ನಿರ್ಭಯವಾಗಿ ಕೆಡಿಸಬೇಕಾದರೆ ಅವನ ಮನಸ್ಸಿನಲ್ಲಿ ಎಷ್ಟೋ ಸಂತೋಷವಿರಬೇಕು. ಸಂತೋಷವಿಲ್ಲದಿದ್ದರೆ, ಮಾತ್ರ ಎಂದಿಗೂ ಅವನು ಈ ಕಾರ್ಯಕ್ಕೆ ಅವಕಾಶಕೊಡುತ್ತಿರಲಿಲ್ಲ! ಎಲೈ ವ್ರತನಿಷ್ಠನೆ! ಇನ್ನು ನಿನ್ನ ದುಃಖವನ್ನು ಬಿಟ್ಟು ಸಮಾಧಾನದಿಂದಿರು. ನೀನು ಕುಶಲಿಯಾದುದರಿಂದ ನಿನ್ನನ್ನು ಪಡೆದ ಕೌಸಲ್ಯೆಯು ಸುಪುತ್ರವತಿಯೆನಿಸಿಕೊಂಡಳು. ಸೀತೆಯು ಸಿಕ್ಕಿರುವುದರಲ್ಲಿ ಸಂದೇಹವಿಲ್ಲ. ನಮ್ಮ ಹನುಮಂತನೇ ಅವಳನ್ನು ನೋಡಿ ಬಂದಿರಬೇಕು. ಹನುಮಂತನು ಹೊರತು ಬೇರೆ ಯಾರೂ ಈ ಕಾರ್ಯವನ್ನು ಸಾಧಿಸಲಾರರು. ಸೂರ್ಯನಲ್ಲಿ ತೇಜಸ್ಸು ಹೇಗೋ ಹಾಗೆ ಅವನಲ್ಲಿ ಕಾರ್ಯಸಿದ್ಧಿಯೂ, ಬುದ್ಧಿಯೂ, ಉತ್ಸಾಹವೂ, ಪರಾಕ್ರಮವೂ, ಸ್ಥಿರವಾಗಿ ನೆಲೆಗೊಂಡಿರುವುವು. ಯಾವಕಾರ್ಯಕ್ಕೆ ಅಂಗದನು ನಿಯೋಮಕನಾಗಿಯೂ, ಜಾಂಬವಂತನು ಮಂತ್ರಿಯಾಗಿಯೂ, ಹನುಮಂತನು ಸಾಧಕನಾಗಿಯೂ ನಿಲ್ಲುವನೋ, ಅಂತಹ ಕಾರ್ಯವು ತಪ್ಪದೆ ಸಿದ್ಧಿಸುವುದೇ ಹೊರತು ಬೇರೆ ಗತಿಯನ್ನು ಹೊಂದದು! ರಾಮಾ! ಇನ್ನು ನಿನ್ನ ಚಿಂತೆಯನ್ನು ಬಿಡು" ಎಂದನು. ಇಷ್ಟರಲ್ಲಿ, ಅಂಗದಾದಿ ವಾನರರೆಲ್ಲರೂ ಕಿಷ್ಕಿಂಧೆಯನ್ನು ಸಮೀಪಿಸಿದರು. ಅವರೆಲ್ಲರೂ ಹನುಮಂತನು ಸಾಧಿಸಿಬಂದ ಕಾರ್ಯದಿಂದ ಹೆಮ್ಮೆಗೊಂಡವರಾಗಿ, ಆಕಾಶದಿಂದಲೇ ತಮ್ಮ ಕಾರ್ಯಸಿದ್ಧಿಯನ್ನು ಕೂಗಿ ಹೇಳುವಂತೆ, ಒಬ್ಬರಿಗೆ ಮೇಲೊಬ್ಬರು ಕಿಲಕಿಲಧ್ವನಿಯೊಡನೆ ಸಿಂಹನಾದವನ್ನು ಮಾಡುತ್ತಿರಲು, ಆ ಉತ್ಸಾಹದ ಗದ್ದಲವನ್ನು ಸುಗ್ರೀವನು ಕೇಳಿ, ಮನಸ್ಸಿನಲ್ಲಿ ಸಂತೋಷದಿಂದುಕ್ಕುತ್ತ ತನ್ನ ಬಾಲವನ್ನು ಉದ್ದಕ್ಕೆ ಬೀಸಿ,

ಆ ಮಾಲ್ಯವತ್ಪರ್ವತದ ಶಿಖರದಲ್ಲಿಯೇ ಸ್ತಬ್ಧನಾಗಿ ನಿಂತಿದ್ದನು. ಆ ವಾನರರೆಲ್ಲರೂ, ಅಂಗದನನ್ನೂ, ಹನುಮಂತನನ್ನೂ, ಮುಂದಿಟ್ಟುಕೊಂಡು, ರಾಮದರ್ಶನಾತುರದಿಂದ ಮುಂದೆ ಬಂದರು. ಅವರೆಲ್ಲರೂ ಸಂತೋಷದಿಂದ ಪುಳಕಿತವಾದ ಮೈಯುಳ್ಳವರಾಗಿ, ರಾಮಸುಗ್ರೀವರ ಸವಿೀಪದಲ್ಲಿಳಿದರು. ಅಲ್ಲಿ ಮಹಾಬಾಹುವಾದ ಹನುಮಂತನು, ರಾಮಸುಗ್ರೀವರಿಬ್ಬರಿಗೂ ತಲೆಬಗ್ಗಿ ಸಾಷ್ಟಾಂಗಪ್ರಣಾಮವನ್ನು ಮಾಡಿ "ಸ್ವಾಮಿ! ಸೀತಾದೇವಿಯು ಯಾವ ಅಪಾಯವೂ ಇಲ್ಲದೆ ತನ್ನ ಪಾತಿವ್ರತ್ಯನಿಯನುದೊಡನೆ ಕುಶಲದಿಂದಿರುವಳು" ಎಂದು ರಾಮನಲ್ಲಿ ವಿಜ್ಞಾಪಿಸಿದನು. ಆಗ ವಾಯುಪುತ್ರನಾದ ಆ ಹನುಮಂತನೇ ಈ ಕಾರ್ಯವನ್ನು ಸಾಧಿಸಿರಬೇಕೆಂದು, ಲಕ್ಷ್ಮಣಸುಗ್ರೀವರಿಬ್ಬರೂ ಮನಸ್ಸಿನಲ್ಲಿ ನಿಶ್ಚಯಿಸಿ, ಪರಮಾನಂದಭರಿತರಾಗಿ, ಗೌರವದೃಷ್ಟಿಯಿಂದ ಆ ಹನುಮಂತನನ್ನೇ ನೋಡುತ್ತಿದ್ದರು. ಹಾಗೆಯೇ ಪರಂತಪನಾದ ರಾಮನೂ ಕೂಡ ಪ್ರೀತಿಯಿಂದಲೂ, ಗೌರವದಿಂದಲೂ ಹನುಮಂತನನ್ನು ನೋಡುತ್ತ ಸಂತೋಷದಿಂದಿದ್ದನು.

ಇಲ್ಲಿಗೆ ಅರುವತ್ತುನಾಲ್ಕನೆಯ ಸರ್ಗವು.

ಹನುಮಂತನು ರಾಮಸನ್ನಿಧಿಯಲ್ಲಿ ಸೀತಾವೃತ್ತಾಂತವನ್ನೆಲ್ಲವನ್ನೂ ತಿಳಿಸಿ ಚೂಡಾಮಣಿಯನ್ನು ಕೊಟ್ಟುದು.

ಹೀಗೆ ಆ ವಾನರರು ವಿಚಿತ್ರವನಗಳಿಂದ ತುಂಬಿದ ಪ್ರಸ್ರವಣಪರ್ವತವನ್ನು ಸೇರಿ, ಅಲ್ಲಿ ರಾಮನಿಗೂ, ಮಹಾಬಲಾಢ್ಯನಾದ ಲಕ್ಷ್ಮಣನಿಗೂ, ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಸುಗ್ರೀವನಿಗೂ ನಮಸ್ಕರಿಸಿ, ಯುವರಾಜನಾದ ಅಂಗದನನ್ನು ಮುಂದಿಟ್ಟುಕೊಂಡು, ಸೀತಾವೃತ್ತಾಂತವನ್ನು ಹೇಳತೊಡಗಿದರು. ಆ ವಾನರರಲ್ಲಿ ಒಬ್ಬೊಬ್ಬರೂ ರಾಮನಿಗೆ ಸೀತಾವೃತ್ತಾಂತವೆಂಬ ಪ್ರಿಯವಾರ್ತೆಯನ್ನು ತಿಳಿಸುವುದರಲ್ಲಿ, ನಾನು ತಾನೆಂಬ ಆತುರದಿಂದ, ಕ್ರಮವಿಲ್ಲದೆ ಎಲ್ಲರೂ ಒಟ್ಟಾಗಿ ಸೇರಿ, ರಾವಣಾಂತಃಪುರದಲ್ಲಿ ಸೀತೆಯು ಸೆರೆಸಿಕ್ಕಿರುವುದನ್ನೂ, ರಾಕ್ಷಸಸ್ತ್ರೀಯರು ಆಕೆಯನ್ನು ಸುತ್ತಿಮುತ್ತಿ ಹೆದರಿಸುತ್ತಿರುವುದನ್ನೂ, ಸೀತೆಗೆ ರಾಮನಲ್ಲಿರುವ ಅತ್ಯಂತಾನುರಾಗವನ್ನೂ ರಾವಣನು ಸೀತೆಗೆ ನಿರ್ಣಯಿಸಿರುವ ಎರಡು ತಿಂಗಳ ಗಡುವನ್ನೂ, ಇನ್ನೂ ಕೆಲಕೆಲವು ವಿಷಯಾಂಶಗಳನ್ನೂ ರಾಮನ ಮುಂದೆ ಒಂದೇ ಕೂಗಾಗಿ ಕೂಗಿಬಿಟ್ಟರು. ಆದರೆ ರಾಮನು ಮುಖ್ಯವಾಗಿ ಸೀತಾದೇವಿಗೆ

ಯಾವ ಅಪಾಯವೂ ಇಲ್ಲವೆಂಬ ಸಂಗತಿಯನ್ನು ಮಾತ್ರ ಆ ವಾನರಮುಖದಿಂದ ಕೇಳಿ ಸಂತೋಷಯುಕ್ತನಾಗಿ, ಆ ವಾನರರನ್ನು ಕುರಿತು, "ಎಲೈ ವಾನರೋತ್ತಮರೆ? ಸೀತೆಯು ಈಗ ಎಲ್ಲಿರುವಳು? ಆಕೆಯ ಮನಸ್ಸು ಇನ್ನೆಲ್ಲಿ ಹೇಗಿರುವುದು? ಸೀತೆಯ ವಿಷಯವಾದ ಸಂಗತಿಗಳೆಲ್ಲವನ್ನೂ ನೀವು ನನಗೆ ಇನ್ನೂ ಚೆನ್ನಾಗಿ ವಿವರಿಸಿ ತಿಳಿಸಬೇಕು" ಎಂದು ಕೇಳಿದನು. ರಾಮನು ಹೇಳಿದ ಈ ಮಾತನ್ನು ಕೇಳಿ ಆ ವಾನರರು ಸೀತೆಯ ವೃತ್ತಾಂತವನ್ನು ಚೆನ್ನಾಗಿ ತಿಳಿದ ಹನುಮಂತನ ಮುಖವನ್ನು ನೋಡುತ್ತ ರಾಮಸನ್ನಿಧಿಯಲ್ಲಿ ಅಲ್ಲಿನ ಸಂಗತಿಗಳೆಲ್ಲವನ್ನೂ ಚೆನ್ನಾಗಿ ವಿವರಿಸುವಂತೆ ಅವನನ್ನೇ ಪ್ರೇರಿಸಿದರು. ಈ ವಾನರರ ಪ್ರೇರಣೆಯಿಂದ ವಾಯುಪುತ್ರನಾದ ಹನುಮಂತನು, ಸೀತೆಯಿರುವ ದಿಕ್ಕಿನಕಡೆಗೆ ತಿರುಗಿ, ತಲೆಬಗ್ಗಿ ನಮಸ್ಕರಿಸಿ, ತಾನು ಆಕೆಯನ್ನು ನೋಡಿಬಂದ ವಿಷಯವನ್ನು ರಾಮನಿಗೆ ವಿವರಿಸುವನು. "ಸ್ವಾಮಿ! ನಾನು ಸೀತೆಯನ್ನು ನೋಡಬೇಕೆಂಬ ಕೋರಿಕೆಯಿಂದ ನೂರುಯೋಜನಗಳ ವಿಸ್ತಾರವುಳ್ಳ ಸಮುದ್ರವನ್ನೂ ದಾಟಿ ಹೋದೆನು. ಆ ಸಮುದ್ರದ ದಕ್ಷಿಣತೀರದಲ್ಲಿ ದುರಾತ್ಮನಾದ ರಾವಣನಿಗೆ ರಾಜಧಾನಿಯಾದ ಲಂಕೆಯೆಂಬ ಪಟ್ಟಣವೊಂದಿರುವುದು. ಅಲ್ಲಿನ ರಾವಣಾಂತಃಪುರದಲ್ಲಿ ಪತಿವ್ರತೆಯಾಗಿಯೂ, ಸುಂದರೀಮಣಿಯಾಗಿಯೂ ಇರುವ ಸೀತೆಯನ್ನು ಕಂಡೆನು. ಆಕೆಯಾದರೋ ತನ್ನ ಕೋರಿಕೆಗಳೆಲ್ಲವನ್ನೂ ನಿನ್ನಲ್ಲಿಯೇ ಇರಿಸಿ, ನಿನ್ನ ಆಸೆಯಿಂದಲೇ ಈಗಲೂ ಪ್ರಾಣವನ್ನಿಟ್ಟುಕೊಂಡಿರುವಳು. ಆ ಅಂತಃಪುರಕ್ಕೆ ಸೇರಿದ ಅಶೋಕವನವೆಂಬ ತೋಟದಲ್ಲಿ ನಿನ್ನ ಪ್ರಿಯಪತ್ನಿಯಾದ ಸೀತೆಯು ಅನೇಕ ರಾಕ್ಷಸಸ್ತ್ರೀಯರ ನಡುವೆ ಸಿಕ್ಕಿಬಿದ್ದಿರುವಳು. ವಿಕಾರರೂಪವುಳ್ಳ ಆ ರಾಕ್ಷಸಸ್ತ್ರೀಯರೆಲ್ಲರೂ ಆಕೆಯನ್ನು ಸುತ್ತಿಮುತ್ತಿ ಬಾರಿಬಾರಿಗೂ ಹೆದರಿಸುತ್ತಿರುವಾಗಲೇ, ಆಕೆಯನ್ನು ನಾನು ನೋಡಿದೆನು. ಸ್ವಲ್ಪಮಾತ್ರವೂ ದುಃಖವೆಂಬುದನ್ನೇ ಅರಿಯದ ಆ ಸತೀಮಣಿಯು, ಈಗ ನಾನಾವಿಧದುಃಖದಿಂದ ಕೊರಗಿ ಸಂಕಟಪಡುತ್ತಿರುವಳು. ಆ ರಾವಣಾಂತಃಪುರದಲ್ಲಿ ಅನೇಕ ರಾಕ್ಷಸಸ್ತ್ರೀಯರು ಅವಳ ಮೇಲೆ ಕಾವಲಿರುವರು. ಆಕೆಯು ತನ್ನ ಕೂದಲನ್ನು ಒಂದೇ ಜಡೆಯಾಗಿ ಬೆಳೆಸಿಬಿಟ್ಟಿರುವಳು. ಬಹಳ ದೀನದಶೆಯನ್ನು ಹೊಂದಿರುವಳು. ಅನವರತವೂ ನಿನ್ನನ್ನೇ ಧ್ಯಾನಿಸುತ್ತಿರುವಳು. ಬರೀ ನೆಲದಮೇಲೆ ಮಲಗುವಳು. ಹಿಮುಗಾಲದ ತಾವರೆಯಂತೆ ಅವಳ ದೇಹವೆಲ್ಲವೂ ಬಣ್ಣಗುಂದಿರುವುದು. ರಾವಣನು ಆಕೆಯನ್ನು ವಶಪಡಿಸಿಕೊಳ್ಳುವುಕ್ಕಾಗಿ ಎಷ್ಟೆಷ್ಟೋ ಪ್ರಯತ್ನಗಳನ್ನು ಮಾಡಿದರೂ, ಆಕೆಯಲ್ಲಿ ಅವನ ಪ್ರಯತ್ನವೊಂದೂ ಸಫಲವಾಗಲಿಲ್ಲ. ದುರಾತ್ಮನಾದ ರಾವಣನ ಬಾಧೆಯನ್ನು ತಡೆಯಲಾರದೆ, ಆ

ಸೀತೆಯು ತಾನಾಗಿ ಪ್ರಾಣತ್ಯಾಗವನ್ನು ಮಾಡಿಕೊಳ್ಳುವುದಕ್ಕೆ ನಿಶ್ಚಯಿಸಿರುವಳು. ರಾಮಾ! ನಿನ್ನಲ್ಲಿಯೇ ಮನಸ್ಸಿಟ್ಟು ಕೊರಗುತ್ತಿರುವ ಆ ಸೀತಾದೇವಿಯನ್ನು ನಾನು ಎಷ್ಟೋ ಪ್ರಯತ್ನದಿಂದ ನೋಡುವಂತಾಯಿತು. ಎಲೈ ಪುರುಷೋತ್ತಮನೆ! ಅಲ್ಲಿ ನಾನು ಮೊದಲು ಇಕ್ಷ್ವಾಕುವಂಶದ ಖ್ಯಾತಿಯನ್ನೇ ಪ್ರಶಂಸೆಮಾಡುತ್ತ, ಅವಳಿಗೆ ನನ್ನಲ್ಲಿ ನಂಬಿಕೆಯುಂಟಾಗುವಂತೆ ಮಾಡಿಕೊಂಡೆನು ಆದರ ಮೇಲೆ ಅವಳೊಡನೆ ಮಾತಾಡುವುದಕ್ಕಾರಂಭಿಸಿ ಇಲ್ಲಿ ನಡೆದ ಸಂಗತಿಗಳೆಲ್ಲವನ್ನೂ ತಿಳಿಸಿದೆನು. ಅವಳು ನಿನಗೂ, ಸುಗ್ರೀವನಿಗೂ ಉಂಟಾದ ಸ್ನೇಹವನ್ನು ಕೇಳಿ ಬಹಳ ಸಂತೋಷಪಟ್ಟಳು. ಅಕೆಯಲ್ಲಿ ಸದಾಚಾರವೆಂಬುದು ಸ್ಥಿರವಾಗಿ ನಿಂತಿರುವುದು. ಹಾಗೆಯೇ ನಿನ್ನಲ್ಲಿ ಭಕ್ತಿಯೂ ಅಕೆಗೆ ದೃಢವಾಗಿರುವುದು. ಎಲೈ ಪುರುಷಶ್ರೇಷ್ಠನೆ! ಉಗ್ರವಾದ ಪಾತಿವ್ರತ್ಯವೆಂಬ ಮಹಾತಪಸ್ಸಿನಿಂದಲೂ, ನಿನ್ನಲ್ಲಿ ದೃಢಭಕ್ತಿಯಿಂದಲೂ ಕೂಡಿದ ಮಹಾಭಾಗೆಯಾದ ಆ ಸೀತೆಯನ್ನು ನಾನು ಕಂಡು ಮಾತಾಡಿಸಿದಾಗ, ಅಕೆಯು ಮೊದಲು ಚಿತ್ರಕೂಟದಲ್ಲಿ ನೀನಿದ್ದಾಗ ಅಲ್ಲಿ ನಡೆದ ಒಂದು ಕಾಗೆಯ ವೃತ್ತಾಂತವನ್ನು ನಿನಗೆ ಗುರುತಾಗಿ ನನ್ನೊಡನೆ ಹೇಳಿರುವಳು. ರಾಮಾ! ಅವಳು ನನಗಾಗಿ ಹೇಳಿ ಕಳುಹಿಸಿರುವ ಇನ್ನೂ ಕೆಲವು ಸಂಗತಿಗಳುಂಟು. ಇವೆಲ್ಲವನ್ನೂ ತಿಳಿಸುವೆನು ಕೇಳು. ಅವಳು ನನ್ನೊಡನೆ " ಎಲೈ ವಾಯುಪುತ್ರನೇ! ಇಲ್ಲಿ ನೀನು ಕಣ್ಣಾರೆ ನೋಡುತ್ತಿರುವಾಗಲೇ, ರಾವಣನು ಬಂದುದು ಮೊದಲಾದ ವೃತ್ತಾಂತಗಳೆಲ್ಲವನ್ನೂ, ಪುರುಷೋತ್ತಮನಾದ ಆ ನನ್ನ ಪ್ರಿಯನಲ್ಲಿ ಇದ್ದುಸಿದ್ದಂತೆ ವಿಜ್ಞಾಪಿಸಬೇಕು. ಮತ್ತು ನಿಮ್ಮ ಪ್ರಭುವಾದ ಸುಗ್ರೀವನೂ ಕೇಳುತ್ತಿರುವ ಹಾಗೆಯೇ ಈಗ ನಾನು ಹೇಳುವ ಮಾತುಗಳೆಲ್ಲವನ್ನೂ ಹೇಳು. ಆ ರಾಮನಿಗೆ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ, ಇದೋ! ಈ ನನ್ನ ಚೂಡಾಮಣಿಯನ್ನೂ ಆತನ ಕೈಗೆ ಕೊಡು! ಸಂಪದ್ಯುಕ್ತವಾದ ಈ ಚೂಡಾಮಣಿಯನ್ನು ನಾನು ಬಹಳ ಪ್ರಯತ್ನದಿಂದ ಕಾಪಾಡಿಟ್ಟಿರುವೆನು. ಇದನ್ನು ರಾಮನಿಗೆ ಗುರುತಾಗಿ ಕೊಡುವಾಗ ನನ್ನ ಮಾತಿನಿಂದ ನೀನು ಅವನಿಗೆ " ಎಲೈ ಪ್ರಿಯನೆ! ಒಮ್ಮೆ ನನ್ನ ಹಣೆಯಲ್ಲಿದ್ದ ಬೊಟ್ಟು ಅಳಿಸಿ ಹೋಗಲು, ನೀನು ಪರಿಹಾಸಕ್ಕಾಗಿ ಮಣಿಶಿಲೆಯನ್ನು ಬೊಟ್ಟುಮಾಡಿ ನನ್ನ ಕೆನ್ನೆಯಲ್ಲಿಟ್ಟೆಯಲ್ಲವೆ? ಅದನ್ನೂ ನೀನು ಜ್ಞಾಪಿಸಿಕೊಂಡು ನೋಡು. ಎಲೈ ದೋಷರಹಿತನೆ! ಸಮುದ್ರದಲ್ಲಿ ಹುಟ್ಟಿದ ಈ ದಿವ್ಯಚೂಡಾಮಣಿಯನ್ನೂ ಈಗ ನಾನು ನಿನ್ನಲ್ಲಿಗೆ ಕಳುಹಿಸಿಬಿಟ್ಟೆನು. ಈ ಮಹಾವ್ಯಸನದಲ್ಲಿಯೂ

ಸಾಧ್ಯವಿಲ್ಲ. ಹೇಗಾದರೂ ಇನ್ನೊಂದು ತಿಂಗಳವರೆಗೆ ಈ ಪ್ರಾಣಗಳನ್ನು ತಡೆದುಕೊಂಡಿರುವೆನು. ಈ ರಾಕ್ಷಸರ ಬಾಧೆಯಲ್ಲಿ ಸಿಕ್ಕಿ ಒಂದು ತಿಂಗಳಮೇಲೆ ಕ್ಷಣಮಾತ್ರವೂ ಬದುಕಿರಲಾರೆನು'' ಎಂದು ವಿಜ್ಞಾಪಿಸುವಂತೆ ಹೇಳಿರುವಳು. ಅಕೆಯ ಅವಯವಗಳೆಲ್ಲವೂ ದುಃಖದಿಂದ ಕೃಶಿಸಿ ಹೋಗಿದ್ದರೂ, ಅವಳು ತನ್ನ ಪತಿವ್ರತಾಧರ್ಮವನ್ನು ಮಾತ್ರ ಬಿಡದೆ ನಡೆಸುತ್ತಿರುವಳು. ರಾವಣಾಂತಃಪುರದಲ್ಲಿ ಸೆರೆಸಿಕ್ಕಿರುವ ಆ ಸೀತೆಯು, ಹೆಣ್ಣು ಜಿಂಕೆಯಂತೆ ಅರಳಿದ ಕಣ್ಣುಗಳಿಂದ ನನ್ನನ್ನು ನೋಡಿ ಇಷ್ಟು ಮಾತುಗಳನ್ನು ಹೇಳಿರುವಳು. ರಾಮಾ! ಸೀತೆಯು ನನ್ನೊಡನೆ, ಯಾವಯಾವುದನ್ನು ಹೇಗೆಹೇಗೆ ಹೇಳಿದ್ದಳೋ, ಅವೆಲ್ಲವನ್ನೂ ನಿನಗೆ ಹಾಗೆಯೇ ಹೇಳಿಬಿಟ್ಟೆನು. ಮುಖ್ಯವಾಗಿ ಈಗ ನೀನು ಮೊದಲು ಸಮುದ್ರವನ್ನು ದಾಟುವುದಕ್ಕೆ ಬೇಕಾದ ಪ್ರಯತ್ನವನ್ನು ನೋಡಬೇಕು'' ಎಂದನು. ಹೀಗೆ ಹನುಮಂತನು ರಾಜಪುತ್ರರಾದ ಆ ರಾಮಲಕ್ಷ್ಮಣರಿಬ್ಬರಿಗೂ ಈ ವೃತ್ತಾಂತವನ್ನು ತಿಳಿಸಿ, ಇದರಿಂದ ಅವರ ಮನಸ್ಸಿನಲ್ಲಿ ಸ್ವಲ್ಪ ಸಮಾಧಾನವುಂಟಾದುದನ್ನು ತಿಳಿದು, ಸೀತೆಯು ಕೊಟ್ಟಿದ್ದ ಚೂಡಾಮಣಿಯನ್ನು ರಾಮನ ಕೈಗೆ ಕೊಟ್ಟು, ಅವಳು ಹೇಳಿ ಕಳುಹಿಸಿದ್ದ ಸಂಗತಿಗಳನ್ನೂ [1] ಕ್ರಮವಾಗಿ ಅವರೆ ಮುಂದೆ ತಿಳಿಸಿಬಿಟ್ಟನು.

ಇಲ್ಲಿಗೆ ಆರುವತ್ತೈದನೆಯ ಸರ್ಗವು.

ರಾಮನು ಚೂಡಾಮಣಿಯನ್ನು ನೋಡಿ ದುಃಖಿಸುತ್ತ, ತಿರುಗಿ ಸೀತಾವೃತ್ತಾಂತವನ್ನು ಇನ್ನಷ್ಟು ವಿಸ್ತರವಾಗಿ ತಿಳಿಸುವಂತೆ ಹನುಮಂತನನ್ನು ಕೇಳಿದುದು.

ಹನುಮಂತನು ಹೀಗೆಂದು ಹೇಳಿ ಚೂಡಾಮಣಿಯನ್ನು ಕೈಯಲ್ಲಿ ಕೊಟ್ಟೊಡನೆ, ದಶರಥಪುತ್ರನಾದ ರಾಮನು ಆ ಚೂಡಾಮಣಿಯನ್ನು ತನ್ನ ಎದೆಯ ಮೇಲಿಟ್ಟುಕೊಂಡು, ದುಃಖದಿಂದ ರೋದಿಸುತ್ತಿದ್ದನು. ಅವನನ್ನು ನೋಡಿ ಲಕ್ಷ್ಮ

1. ಹನುಮಂತನು ಹಿಂದೆ ಮಹೇಂದ್ರಪರ್ವತದಲ್ಲಿ ಅಂಗದಾದಿ ವಾನರರೊಡನೆ ತಾನು ನಡೆಸಿದ ಸುರಸಾನಿರಸನವೇ ಮೊದಲಾದ ಒಂದೊಂದು ಸಾಹಸಕಾರ್ಯವನ್ನೂ ವಿವರವಾಗಿ ತಿಳಿಸಿದ್ದರೂ, ಇಲ್ಲಿ ರಾಮನುಸುಗ್ರೀವರಮುಂದೆ, ಅವೆಲ್ಲವನ್ನೂ ಹೇಳಿದರೆ, ಪ್ರಭುಗಳ ಮುಂದೆ ಆತ್ಮಸ್ತುತಿಯನ್ನು ಮಾಡಿಕೊಂಡಂತಾಗುವುದೆಂಬ ಭಾವದಿಂದ, ರಾಮನಿಗೆ ಅವಶ್ಯವಾಗಿ ತಿಳಿಸಬೇಕಾದ ಸೀತಾವೃತ್ತಾಂತವನ್ನು ಮಾತ್ರವೇ ಸೂಚಿಸಿದುದಾಗಿ ತಿಳಿಯಬೇಕು.

ಣನೂ ಅಳುವುದಕ್ಕಾರಂಭಿಸಿದನು. ಉತ್ತಮರತ್ನವಾದ ಆ ಚೂಡಾಮಣಿಯನ್ನು ನೋಡಿದೊಡನೆ, ರಾಮನು ದುಃಖದಿಂದ ಕುಗ್ಗುತ್ತ ಕಣ್ಣೀರು ತುಂಬಿಕೊಂಡು, ಸುಗ್ರೀವನನ್ನು ಕುರಿತು "ಮಿತ್ರನೆ! ತನ್ನ ಕರುಳಿನಮೇಲೆ ಮೋಹಗೊಂಡ ಹಸುವು, ಆ ಕರುವನ್ನು ಕಂಡಾಗ ಅದರಲ್ಲಿ ಪ್ರೀತಿಯಿಂದ ಸೊರೆಯಿಳ್ಕುವಂತೆ, ಈ ಚೂಡಾಮಣಿಯನ್ನು ನೋಡಿ ನನ್ನ ಮನಸ್ಸು ಕರಗುತ್ತಿರುವುದು. ವಿವಾಹ ಕಾಲದಲ್ಲಿ ಈ ಮಣಿರತ್ನವನ್ನು ನನ್ನ ಪೂವನಾದ ಜನಕನು ಸೀತೆಗೆ ಕೊಟ್ಟನು. ಇದನ್ನು ಸೀತೆಯ ತಲೆಗೆ ತೊಡಿಸಿದಾಗ, ಇದು ಆಕೆಯ ತಲೆಗೇ ಒಂದು ಅಪೂರ್ವ ಶೋಭೆಯನ್ನುಂಟುಮಾಡಿತು. ಇದು ಸಮುದ್ರದಲ್ಲಿ ಹುಟ್ಟಿದುದು. ಸಜ್ಜನರಿಂದ ಪೂಜಿತವಾದುದು. ಮೊದಲು ಜನಕನು ಒಂದು ಯಜ್ಞವನ್ನು ನಡೆಸಿದಾಗ ಅದರಿಂದ ಸಂತುಷ್ಟನಾದ ದೇವೇಂದ್ರನು ಈ ರತ್ನವನ್ನು ಅತನಿಗೆ ಕೊಟ್ಟನು. ಎಲೈ ಸೌಮ್ಯನೆ! ಈ ಚೂಡಾಮಣಿಯನ್ನು ನೋಡಿದರೆ, ಈಗಲೂ ನನಗೆ ನನ್ನ ತಂದೆಯಾದ ದಶರಥರಾಜನನ್ನೂ, ಮೂವನಾದ ಜನಕರಾಜನನ್ನೂ [1] ಸೀತೆಯ ತಾಯಿಯನ್ನೂ ನೋಡಿದಂತಿರುವುದು. ಈ ರತ್ನವು ನನ್ನ ಪ್ರಿಯಪತ್ನಿಯಾದ ಸೀತೆಯ ತಲೆಗೆ ಅಲಂಕಾರವಾಗಿಯೂ ಇದ್ದುದರಿಂದ, ಈಗಲೂ ಇದನ್ನು ನೋಡಿದರೆ ನನ್ನ ಪ್ರಿಯೆಯೇ ಇಲ್ಲಿಗೆ ಬಂದು ನನ್ನೆದಿರಾಗಿ ನಿಂತಂತೆಯೂ ತೋರುವುದು" ಎಂದನು. ಆಮೇಲೆ ರಾಮನು ಹನುಮಂತನ ಕಡೆಗೆ ತಿರುಗಿ "ಎಲೈ ಸೌಮ್ಯನೆ! ದಾಹಗೊಂಡವನಿಗೆ ನೀರನ್ನು ಕೊಟ್ಟು ದಾಹವನ್ನಡಗಿಸುವಂತೆ, ಸೀತೆಯು ನನ್ನ ತಾಪಶಾಂತಿಗಾಗಿ ವೃತ್ತಾಂತ ಪ್ರಿಯವಾಕ್ಯಗಳನ್ನು ಹೇಳಿ ಕಳುಹಿಸಿರುವಳು?" ಎಂದು ಕೇಳಿದನು. ಆಮೇಲೆ ಲಕ್ಷ್ಮಣನಕಡೆಗೆ ತಿರುಗಿ, "ವತ್ಸ ಲಕ್ಷ್ಮಣಾ! ನನ್ನ ಪ್ರಿಯೆಯಾದ ಸೀತೆಯನ್ನು ಬಿಟ್ಟು ಸಮುದ್ರಜನ್ಯವಾದ ಈ ರತ್ನವು ಮಾತ್ರವೇ ಇಲ್ಲಿ ನನ್ನ ಮುಂದೆ ಬಂದಿರುವುದನ್ನು ನೋಡುತ್ತಿರುವೆನಲ್ಲಾ! ಇದಕ್ಕಿಂತಲೂ ಇನ್ನು ನನಗೆ ಬೇರೆ ಹೆಚ್ಚಾದ ದುಃಖವೇನಾಗಬೇಕು? ಎಲೈ ಸೌಮ್ಯನೆ! ಇನ್ನೊಂದು ತಿಂಗಳವರೆಗೂ ಸೀತೆಯು ಬದುಕಿರುವುದು ನಿಜವಾಗಿದ್ದರೆ, ಅವಳನ್ನು ಚಿರಂಜೀವಿನಿಯೆಂದೇ ಹೇಳಬೇಕಾಗಿದೆ! ನಾನಾದರೋ ಅಸಿತೇಕ್ಷಣೆಯಾದ ಆ ಪ್ರಿಯೆಯನ್ನು ಬಿಟ್ಟು ಕ್ಷಣಮಾತ್ರವಾದರೂ ಇನ್ನು ಬದುಕಿರಲಾರೆನು" ಎಂದನು. ಆ ಮೇಲೆ

---

1. ಇಲ್ಲಿ ಮೂಲದಲ್ಲಿ ಜನಕದಶರಥರಿಬ್ಬರನ್ನೇ ಸ್ಮರಿಸಿಕೊಂಡುದಾಗಿ ಕಾಣಿಸಿದ್ದರೂ, ಹಿಂದೆ ಸೀತೆಯು ಹನುಮಂತನ ಕೈಗೆ ಚೂಡಾಮಣಿಯನ್ನು ಕೊಟ್ಟಾಗ "ತ್ರಯಾಣಾಂ ಸಂಸ್ಮರಿಷ್ಯತಿ" ಎಂಬುದಾಗಿ ತನ್ನ ತಾಯಿಯನ್ನೂ ಸೇರಿಸಿರುವುದರಿಂದ ಇಲ್ಲಿಯೂ ಆ ಮೂವರನ್ನೂ ಸ್ಮರಿಸಿಕೊಂಡುದಾಗಿಯೇ ತಿಳಿಯಬೇಕು.

ತಿರುಗಿ ಹನುಮಂತನನ್ನು ನೋಡಿ, "ಎಲೈ ಭದ್ರನೆ, ನೀನು ನನ್ನ ಪ್ರಿಯೆಯಾದ ಸೀತೆಯನ್ನು ಯಾವ ಸ್ಥಳದಲ್ಲಿ ನೋಡಿ ಬಂದೆಯೋ, ಅಲ್ಲಿಗೆ ನನ್ನನ್ನೂ ಈಗಲೇ ಕರೆದುಕೊಂಡು ಹೋಗು. ಅವಳ ವೃತ್ತಾಂತವನ್ನು ತಿಳಿದಮೇಲೆ ನಾನು ಕ್ಷಣ ಮಾತ್ರವೂ ಇಲ್ಲಿ ನಿಲ್ಲಲಾರೆನು. ಅಹಾ! ಬಹಳ ಭಯಸ್ವಭಾವವುಳ್ಳ ನನ್ನ ಪ್ರಿಯೆಯು, ಭಯಂಕರಸ್ವರೂಪವುಳ್ಳ ಆ ಘೋರರಾಕ್ಷಸಿಯರ ನಡುವೆ ಹೇಗಿರಬಲ್ಲಳು! ಕತ್ತಲೆಯಿಲ್ಲದ ಶರತ್ಕಾಲದಲ್ಲಿ ಸ್ವಚ್ಛವಾದ ಚಂದ್ರಿಕೆಯನ್ನು ಬೀರುವ ಚಂದ್ರನು ಮೇಘದಿಂದ ಮುರಿಸಲ್ಪಡುವಂತೆ ಘೋರರಾಕ್ಷಸಿಯರ ನಡುವೆ ಸಿಕ್ಕಿಬಿದ್ದ ಆ ಸೀತೆಯ ಮುದ್ದುಮುಖವು ಎಷ್ಟುಮಾತ್ರವೂ ಶೋಭಿಸಲಾರದು. ಇದು ನಿಜವು! ಎಲೈ ಹನುಮಂತನೇ! ಸೀತೆಯು ಇನ್ನೇನನ್ನು ಹೇಳಿರುವಳು! ಅವೊಂದನ್ನೂ ಮರೆಸದೆ ಇದ್ದುದಿದ್ದಂತೆ ನನಗೆ ತಿಳಿಸು. ಔಷಧದಿಂದ ರೋಗಿಯು ಬದುಕುವಂತೆ ಆ ಸೀತೆಯ ಮಾತಿನಿಂದಲೇ ನಾನು ಬದುಕಬೇಕಾಗಿರುವುದು. ಎಲೈ ವಾನರೋತ್ತಮನೆ! ಸುಂದರಾಂಗಿಯಾಗಿಯೂ, ಮಧುರಭಾಷಿಣಿಯಾಗಿಯೂ, ನನ್ನ ಪ್ರಾಣಪ್ರಿಯೆಯಾಗಿಯೂ ಇರುವ ಆ ಸೀತೆಯು ನನ್ನ ವಿರಹದುಃಖದಿಂದ ಪೀಡಿತೆಯಾಗಿ ನಿನ್ನೊಡನೆ ಹೇಳಿದ ಮಾತುಗಳೆಲ್ಲವನ್ನೂ ನನಗೆ ಹೇಳು" ಎಂದನು.

ಇಲ್ಲಿಗೆ ಅರುವತ್ತಾರನೆಯ ಸರ್ಗವು.

ಹನುಮಂತನು ಸೀತೆಯ ಸಂದೇಶವನ್ನು ಸವಿಸ್ತರವಾಗಿ ರಾಮನಿಗೆ ತಿಳಿಸಿದುದು.

ಮಹಾತ್ಮನಾದ ರಾಮನು ನಿರ್ಬಂಧಿಸಿ ಕೇಳಿದುದರಮೇಲೆ, ಹನುಮಂತನು ತಿರುಗಿ ರಾಮನಿಗೆ ಸೀತೆಯು ಹೇಳಿದ ಮಾತುಗಳೆಲ್ಲವನ್ನೂ ವಿವರಿಸಿ ತಿಳಿಸುತ್ತ, "ಎಲೈ ಪುರುಷಸಿಂಹನೆ! ಸೀತೆಯು ಚಿತ್ರಕೂಟದಲ್ಲಿ ನಡೆದ ವೃತ್ತಾಂತವನ್ನು ಅಲ್ಲಿ ನಡೆದಂತೆಯೇ ನನ್ನೊಡನೆ ನಿನಗೆ ಗುರುತಾಗಿ ಹೇಳಿರುವಳು. ಅಲ್ಲಿ ಸೀತೆಯು ನಿನ್ನೊಡನೆ ಮಲಗಿ ಸುಖವಾಗಿ ನಿದ್ರಿಸುತ್ತಿದ್ದು ಮೊದಲು ತಾನು ಎಚ್ಚರಗೊಂಡಳು! ಆಗ ತಟ್ಟನೆ ಒಂದು ಕಾಗೆಯು ಹಾರಿಬಂದು ಅವಳ ಸ್ತನಮಧ್ಯವನ್ನು ಗೀರಿತು. ಎಲೈ ಭರತಾಗ್ರಜನೆ! ಅವಳು ಎಚ್ಚರಗೊಂಡಮೇಲೆ ನೀನೂ ಅವಳ ತೊಡೆಯಮೇಲೆ ತಲೆಯಿಟ್ಟು ನಿದ್ರಿಸುತ್ತಿದ್ದೆ! ಆ ಕಾಗೆಯು ತಿರುಗಿ ಹಾರಿಬಂದು ಅವಳನ್ನು ಪೀಡಿಸುವುದಕ್ಕೆ ತೊಡಗಿತು. ಹೀಗೆ ಆ ಕಾಗೆಯು ಬಾರಿ

ಬಾರಿಗೂ ಹಾರಿಬಂದು ಅವಳ ಎದೆಯನ್ನು ಕುಕ್ಕುತಿತ್ತು. ಕಾಗೆಯು ಕುಕ್ಕಿದ ಗಾಯದಿಂದ ಹೊರಟ ರಕ್ತವು ನಿನ್ನ ಮೇಲೆ ಬಿದ್ದು ನಿನಗೆ ಎಚ್ಚರವುಂಟಾಯಿತು. ಇದಲ್ಲದೆ ಆಗಾಗ ಬಂದು ಬಾಧಿಸುತಿದ್ದ ಆ ಕಾಗೆಯ ಹಿಂಸೆಯನ್ನು ತಡೆಯಲಾರದೆ, ಆ ಸೀತಾದೇವಿಯೂ ಸುಖಸುಪ್ತನಾದ ನಿನ್ನನ್ನು ಎಚ್ಚರಗೊಳಿಸಿದಳು. ಎಲೈ ಮಹಾಬಾಹೂ! ನೀನು ಮೇಲಕ್ಕೆದ್ದು ಸೀತೆಯ ಮೈಯಲ್ಲಿದ್ದ ಗಾಯವನ್ನು ನೋಡಿದೊಡನೆ, ಮಹಾಸರ್ಪದಂತೆ ಕೋಪದಿಂದ ನಿಟ್ಟುಸಿರುಬಿಡುತ್ತ, ಸೀತೆಯನ್ನು ಕುರಿತು, "ಎಲೈ ಭೀರು! ಇದೇನು! ನಿನ್ನ ಎದೆಯನ್ನು ಹೀಗೆ ಉಗುರುಗಳಿಂದ ಗೀರಿ ಗಾಯಮಾಡಿದವರಾರು! ಕೋಪಗೊಂಡ ಐದು ಹೆಡೆಯ ಸರ್ಪದೊಡನೆ ಆಟವಾಡುವಂತೆ ಈ ಚೇಷ್ಟೆಯನ್ನು ನಡೆಸಿದವನಾವನು?" ಎಂದು ನೀನು ಅವಳನ್ನು ಕೇಳುತ್ತ ನಾಲ್ಕುಕಡೆಗಳಿಗೂ ತಿರುಗಿ ಕಣ್ಣಿಟ್ಟುನೋಡುವಾಗ ಆ ಕಾಗೆಯು ರಕ್ತದಿಂದ ತೊಯ್ದ ತೀಕ್ಷ್ಣವಾದ ಕಾಲುಗುರುಗಳೊಡನೆ ಸೀತೆಗಿದಿರಾಗಿಯೇ ಕುಳಿತಿದ್ದುದನ್ನು ನೋಡಿದೆ. ಆ ವಾಯಸವೇ ಇಂದ್ರನ ಮಗನಂತೆ! ಆದರಿಂದಲೇ ಅದು ಆ ಪಕ್ಷಿಜಾತಿಯಲ್ಲಿ ಮೇಲೆನಿಸಿಕೊಂಡು, ವಿನೋದಾರ್ಥವಾಗಿ ಭೂವಿಯ ಮೇಲೆ ತಿರುಗುತ್ತ, ವೇಗದಲ್ಲಿಯೂ ವಾಯುವಿಗೆ ಸಮಾನವಾಗಿತ್ತು. ಆ ಕಾಗೆಯನ್ನು ನೋಡಿದೊಡನೆ ನೀನು ಕೋಪದಿಂದ ಕಣ್ಣಾಲಿಗಳನ್ನು ತಿರುಗಿಸುತ್ತ, ಅಗಲೇ ಅದನ್ನು ಕೊಲ್ಲಬೇಕೆಂದೂ ಉದ್ದೇಶಿಸಿ, ನೀನು ಕುಳಿತಿದ್ದ ದರ್ಭಾಸನದಿಂದ ಒಂದು ಹುಲ್ಲನ್ನು ಕಿತ್ತುಕೊಂಡು, ಅದನ್ನು ಬ್ರಹ್ಮಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿದೆ. ಇಷ್ಟರಲ್ಲಿಯೇ ಆ ದರ್ಭವು ಕಾಗೆಯ ಮುಂದೆ ಕಾಲಾಗ್ನಿಯಂತೆ ಜ್ವಲಿಸುವುದಕ್ಕಾರಂಭಿಸಿತು. ಹೀಗೆ ಜ್ವಲಿಸುತಿದ್ದ ಆ ದರ್ಭೆಯನ್ನೇ ತೆಗೆದು ನೀನು ಕಾಗೆಯಮೇಲೆ ಪ್ರಯೋಗಿಸಿದೆ! ಅದು ತನ್ನ ಮಹಾಜ್ವಾಲೆಯೊಡನೆ ಕಾಗೆಯನ್ನು ಬೆನ್ನಟ್ಟಿತು. ಈ ವಿಪತ್ತನ್ನು ತಪ್ಪಿಸಿ ಆ ಕಾಗೆಯನ್ನು ಕಾಪಾಡುವುದಕ್ಕೆ ಯಾರಿಂದಲೂ ಸಾಧ್ಯವಾಗಲಿಲ್ಲ! ತಂದೆಯಾದ ಇಂದ್ರನೂ ಕೈಬಿಟ್ಟನು! ದೇವತೆಗಳೂ ಕೈಬಿಟ್ಟರು. ಮಹರ್ಷಿಗಳೂ ಕೈಬಿಟ್ಟರು. ಮೂರುಲೋಕಗಳನ್ನೂ ಅನೇಕಾವರ್ತಿ ಸುತ್ತಿಸುತ್ತಿ ಬಂದರೂ, ಕೊನೆಗೂ, ಆ ಕಾಗೆಗೆ ತನ್ನನ್ನು ಕಾಪಾಡುವವರೊಬ್ಬರೂ ಸಿಕ್ಕಲಿಲ್ಲ. ಎಲೈ ಪರಂತಪನೆ! ಕೊನೆಗೆ ಆ ಕಾಗೆಯೂ ಪ್ರಾಣಭಯದಿಂದ ನಡುಗುತ್ತ, ಹಿಂತಿರುಗಿ ನಿನ್ನಲ್ಲಿಗೇ ಬಂದು ನಿನ್ನ ಕಾಲಮೇಲೆ ಬಿದ್ದಿತು. ಎಲೆ ಕಾಕುತ್ಸ್ಥನೆ! ಕಕುತ್ಸ್ಥಕುಲದಲ್ಲಿ ಹುಟ್ಟಿದ ನೀನು ಎಂತವರಿಗೂ ಶರಣ್ಯನೆಂದು ಹೆಸರುಗೊಂಡವನಾದುದರಿಂದ, ನಿನ್ನಲ್ಲಿ ಶರಣಾಗತನಾಗಿ ಬಂದು ನೆಲದಮೇಲೆ ಬಿದ್ದಿದ್ದ ಆ ಕಾಗೆಯನ್ನು ನೋಡಿ ಮರುಕಗೊಂಡು, ಕೊಲ್ಲಬೇಕಾಗಿದ್ದ

ಆ ಕೆಟ್ಟ ಕಾಗೆಯನ್ನೂ ನೀನು ಕೃಪೆಯಿಂದ ಕಾಪಾಡಿದೆಯಂತೆ! ಆದರೆ ನೀನು ಅಷ್ಟು ಕೃಪಾಪರವಶನಾಗಿದ್ದರೂ, ಮಂತ್ರಿಸಿದ ಬ್ರಹ್ಮಾಸ್ತ್ರವನ್ನು ವ್ಯರ್ಥಮಾಡುವುದು ಸಾಧ್ಯವಲ್ಲವೆಂಬುದಕ್ಕಾಗಿ, ಆ ಅಸ್ತ್ರದಿಂದ ಕಾಗೆಯ ಬಲಗಣ್ಣನ್ನು ಕೆಡಿಸಿದೆಯಂತೆ! ಹೀಗೆ ಆ ವಾಯಸವು ನಿನ್ನಿಂದ ರಕ್ಷಿತವಾಗಿ, ನಿನಗೂ ನಿನ್ನ ತಂದೆಯಾದ ದಶರಥರಾಜನಿಗೂ ನಮಸ್ಕರಿಸಿ ತನ್ನ ನಿವಾಸಕ್ಕೆ ಹೋಯಿತಂತೆ! ಈ ವೃತ್ತಾಂತವನ್ನೇ ಸೀತೆಯು ಗುರುತಾಗಿ ನಿನಗೆ ಹೇಳಿಕಳುಹಿಸಿರುವಳು. ಮತ್ತು ಅವಳು ನಿನ್ನನ್ನು ಕುರಿತು, "ನನ್ನ ಪ್ರಿಯನಾದ ರಾಮನು ನಡೆಸಿರುವ ಈ ಕಾರ್ಯಗಳೇ ಅವನು ಅಸ್ತ್ರಜ್ಞರಲ್ಲಿ ಮೇಲೆಂಬುದನ್ನು ಸೂಚಿಸುವುವು. ಮತ್ತು ಅವನು ಮಹಾಬಲಾಢ್ಯನು! ಶೀಲವಂತನು! ಹೀಗಿದ್ದರೂ ಆ ರಘುವಂಶೋತ್ತಮನು, ನನ್ನನ್ನು ಹೀಗೆ ಗೋಳಾಡಿಸುತ್ತಿರುವ ಇಲ್ಲಿನ ರಾಕ್ಷಸರಲ್ಲಿ ತನ್ನ ದಿವ್ಯಾಸ್ತ್ರಬಲವನ್ನು ತೋರಿಸದಿರುವನಲ್ಲಾ! ಇದಕ್ಕೆ ಕಾರಣವೇನು? ನಾಗರಾಗಲಿ, ಗಂಧರ್ವರಾಗಲಿ, ದೇವದಾನವರಲ್ಲಿ ಯಾರೇ ಆಗಲಿ ಯುದ್ಧದಲ್ಲಿ ಆತನನ್ನು ದಿಟ್ಟಿಸಿ ನಿಲ್ಲಲಾರರು. ಇಷ್ಟು ಮಹಾವೀರ್ಯವುಳ್ಳ ಆ ರಾಮನಿಗೆ ನನ್ನ ಈ ದುರವಸ್ಥೆಯನ್ನು ಕುರಿತು ಸ್ವಲ್ಪವಾದರೂ ಅತುರವಿದ್ದ ಪಕ್ಷದಲ್ಲಿ, ಈಗಲೂ ತಡಮಾಡದೆ ತನ್ನ ತೀಕ್ಷ್ಣಬಾಣಗಳಿಂದ ಈ ರಾವಣನನ್ನು ಯುದ್ಧದಲ್ಲಿ ಕೊಲ್ಲಲಿ! ಅವನ ತಮ್ಮನಾದರೂ ಸಾಮಾನ್ಯನಲ್ಲ! ಯಾವ ಶತ್ರುಗಳನ್ನಾದರೂ ಧ್ವಂಸಮಾಡಬಲ್ಲನು. ಮತ್ತು ಪುರುಷೋತ್ತಮನು, ರಘುವಂಶಕ್ಕೆ ದೀಪಸ್ಥಾಯನಾಗಿರುವನು. ಅವನಾದರೂ ತನ್ನಣ್ಣನ ಅನುಮತಿಯನ್ನು ಪಡೆದು, ಇಲ್ಲಿಗೆ ಬಂದು ನನ್ನನ್ನು ರಕ್ಷಿಸದಿರುವುದೇಕೆ? ಆ ಪುರುಷಸಿಂಹರಿಬ್ಬರೂ ಬಹಳ ಸಮರ್ಥರು. ವಾಯ್ವಗ್ನಿಗಳಿಗೆ ಸಮಾನವಾದ ವೀರ್ಯವುಳ್ಳವರು. ಅವರನ್ನು ದೇವತೆಗಳಾದರೂ ಇದಿರಿಸಲಾರರು. ಹೀಗಿದ್ದರೂ ಅವರು ನನ್ನನ್ನು ರಕ್ಷಿಸದೆ ಹೀಗೆ ಉಪೇಕ್ಷಿಸುವುದೇಕೆ? ಅವರಿಬ್ಬರೂ ಯಾವ ಕಾರ್ಯದಲ್ಲಿಯೂ ಸಮರ್ಥರು! ಇಬ್ಬರೂ ಶತ್ರುಗಳನ್ನಡಗಿಸತಕ್ಕ ಮಹಾಶೂರರು. ಇದರಮೇಲೆ ಅವರಿಬ್ಬರೂ ಒಬ್ಬರಿಗೊಬ್ಬರು ಬೆಂಬಲವಾಗಿಯೂ ಸೇರಿರುವರು. ಈ ಸ್ಥಿತಿಯಲ್ಲಿಯೂ ಅವರು ನನ್ನನ್ನು ಹೀಗೆ ಉಪೇಕ್ಷಿಸಬೇಕಾದರೆ, ಇದು ತನ್ನ ದೌರ್ಭಾಗ್ಯವೇ ಹೊರತು ಬೇರೆಯಲ್ಲ. ನಾನು ಹಿಂದೆ ಯಾವುದೋ ಮಹಾಪಾತಕವನ್ನು ನಡೆಸಿರಬೇಕು! ಇದರಲ್ಲಿ ಸಂದೇಹವಿಲ್ಲ" ಎಂದಳು. ಸೀತೆಯು ಹೀಗೆ ದೈನ್ಯದಿಂದ ಕಣ್ಣೀರು ತುಂಬಿಕೊಂಡು ಹೇಳಿದ ಮಾತನ್ನು ಕೇಳಿ, ನಾನು ತಿರುಗಿ ಅವಳನ್ನು ಕುರಿತು, "ಅಮ್ಮಾ! ರಾಮನು ನಿನ್ನ ವಿಷಯವಾಗಿ ದುಃಖಿಸುತ್ತ ಇತರ ವ್ಯಾಪಾರವನ್ನೇ ಮರೆತಿರುವನು. ಸತ್ಯವಾಗಿಯೂ ಹೇಳುವೆನು. ರಾಮನ

ದುಃಖವನ್ನು ನೋಡಿದಾಗ ಲಕ್ಷ್ಮಣನೂ ದುಃಖಿಸುವನು. ಎಲೆ ದೇವಿ! ನಾನು ಎಷ್ಟೋ ಪ್ರಯತ್ನದಿಂದ ನಿನ್ನನ್ನು ಕಂಡೆನು. ಇದಕ್ಕಾಗಿ ನೀನು ಸಂತೋಷಿಸ ಬೇಕೇ ಹೊರತು ಇನ್ನೂ ದುಃಖಿಸುತ್ತಿರಬಹುದೆ? ಈ ಮುಹೂರ್ತದೊಳಗಾಗಿಯೇ ನಿನ್ನ ದುಃಖವು ಕೊನೆಮುಟ್ಟುವುದು! ಇನ್ನು ಸ್ವಲ್ಪಕಾಲದಲ್ಲಿಯೇ ಪುರುಷಶ್ರೇಷ್ಠರಾಗಿಯೂ, ನಿರ್ದುಷ್ಟವಾದ ನಡತೆಯುಳ್ಳವರಾಗಿಯೂ ಇರುವ ಅವರಿಬ್ಬರೂ ಬಂದು ಈ ಲಂಕೆಯನ್ನು ಸುಟ್ಟು ಬೂದಿಮಾಡುವರು. ಕ್ರೂರನಾದ ರಾವಣನನ್ನೂ ಅವನ ಪರಿವಾರಗಳೊಡನೆ ಯುದ್ಧದಲ್ಲಿ ಕೊಂದು, ನಿನ್ನನ್ನು ತಮ್ಮ ಪಟ್ಟಣಕ್ಕೆ ಕರೆದುಕೊಂಡು ಹೋಗುವರು. ಇದು ನಿಶ್ಚಯವು. ಆದರೆ ನಾನು ನಿನ್ನನ್ನು ಇಲ್ಲಿ ನೋಡಿಬಂದ ವಿಷಯದಲ್ಲಿ, ರಾಮನಿಗೆ ನಂಬಿಕೆಯೂ, ಅವನ ಮನಸ್ಸಿಗೆ ಸಂತೋಷವೂ ಹುಟ್ಟುವಂತೆ ಯಾವುದಾದರೂ ಒಂದು ಗುರುತನ್ನು ನಿನ್ನದಾಗಿ ಕೊಡು" ಎಂದು ನಾನು ಅವಳನ್ನು ಪ್ರಾರ್ಥಿಸಿದೆನು. ಆಗ ಅವಳು ನಾಲ್ಕುದಿಕ್ಕುಗಳನ್ನೂ ತಿರುಗಿ ನೋಡಿ, ರಾಕ್ಷಸಿಯರೊಬ್ಬರೂ ಕಾಣದಂತೆ, ತನ್ನ ಸೆರಗಿನಲ್ಲಿ ಕಟ್ಟಿದ್ದ ಸರ್ವೋತ್ತಮವಾದ ತನ್ನ ಚೂಡಾಮಣಿಯನ್ನು ಬಿಚ್ಚಿ ನನ್ನ ಕೈಗೆ ಕೊಟ್ಟಳು. ಎಲೈ ರಘೂತ್ತಮನೆ! ನಾನು ನಿನಗಾಗಿ ಆ ದಿವ್ಯರತ್ನವನ್ನು ತೆಗೆದುಕೊಂಡು, ಆಕೆಗೆ ತಲೆಬಗ್ಗಿ ನಮಸ್ಕರಿಸಿ, ಇತ್ತಲಾಗಿ ಹಿಂತಿರುಗಿ ಬರ ಬೇಕೆಂಬ ಆತುರದಿಂದಿದ್ದೆನು. ಹೀಗೆ ಪ್ರಯಾಣಸನ್ನದ್ಧನಾಗಿ, ಸಮುದ್ರವನ್ನು ಹಾರುವುದಕ್ಕೆ ತಕ್ಕಂತೆ ನಾನು ನನ್ನ ದೇಹವನ್ನು ಬಳೆಸುತ್ತಿರಲು, ಅದನ್ನು ನೋಡಿ ಸೀತೆಯು, ನಾನು ಬಿಟ್ಟುಬರುವೆನೆಂಬ ದುಃಖದಿಂದ ದೀನಳಾಗಿ ಕಣ್ಣೀರುಬಿಡುತ್ತ, ತಿರುಗಿ ನನ್ನನ್ನು ಕುರಿತು, ಗದ್ಗದಸ್ವರದೊಡನೆ "ಎಲೆ ಮಹಾತ್ಮನೆ! ಮಹಾ ಬಾಹುವಾಗಿಯೂ, ಕಮಲನೇತ್ರನಾಗಿಯೂ ಇರುವ ನನ್ನ ಪ್ರಿಯನಾದ ರಾಮನನ್ನೂ, ನನಗೆ ಮೈದುನನಾದ ಯಶಸ್ವಿಯೂದ ಲಕ್ಷ್ಮಣನನ್ನೂ ಕಣ್ಣಾರೆ ನೋಡುವ ನೀನೇ ಮಹಾಭಾಗ್ಯಶಾಲಿಯು! ನನಗೆ ಆ ಭಾಗ್ಯವೆಲ್ಲಿ!" ಎಂದಳು. ಈ ಮಾತನ್ನು ಕೇಳಿ ನಾನು ತಿರುಗಿ ಸೀತೆಯನ್ನು ಕುರಿತು, "ಎಲೆ ದೇವಿ! ಹಾಗೆ ನಿನಗೆ ಕುತೂಹಲವಿದ್ದರೆ ನನ್ನ ಬೆನ್ನನ್ನೇರಿ ಕುಳ್ಳಿರು! ನಿನಗೂ ನಾನು ಈಗಲೇ ಲಕ್ಷ್ಮಣಸುಗ್ರೀವರೊಡಗೂಡಿದ ನಿನ್ನ ಪ್ರಿಯನಾದ ರಾಮನನ್ನು ತೋರಿಸಿಕೊಡುವೆನು!" ಎಂದೆನು. ಅದಕ್ಕಾ ಸೀತೆಯು "ಎಲೆ ವಾನರೋತ್ತಮನೆ! ಪರಸ್ತ್ರೀಯಾದ ನಾನು ನಿನ್ನ ಬೆನ್ನನ್ನೇರುವುದು ಧರ್ಮವಲ್ಲ! ಎಂದಿಗೂ ಪರಪುರುಷರನ್ನು ನಾನು ಸ್ಪರ್ಶಿಸುವವಳಲ್ಲ! ಮೊದಲು ಆ ರಾಕ್ಷಸನು ನನ್ನನ್ನು ಕದ್ದು ತರುವಾಗ ಬಲಾತ್ಕಾರದಿಂದ ನನ್ನ ದೇಹವನ್ನು ಸ್ಪರ್ಶಿಸಿದುದೂ ನನ್ನ ತಪ್ಪಲ್ಲ. ಕಾಲಗತಿಯಿಂದ

ಹಾಗಾದುದಕ್ಕಾಗಿ ನಾನೇನು ಮಾಡಬಲ್ಲೆನು ? ಎಲೈ ವಾಫರಸಿಂಹನೆ ! ಬೇಡ! ಈಗ ನೀನು ಮಾತ್ರವೇ ಆ ರಾಜಕುಮಾರನ ಬಳಿಗೆ ಹೋಗಿಬಾ !" ಎಂದಳು. ಹೀಗೆಂದು ಹೇಳಿ ಪುನಃ ಆಕೆಯು ನನ್ನನ್ನು ಕುರಿತು "ಎಲೈ ಹನುಮಂತನೆ! ಸಿಂಹಪರಾಕ್ರಮವುಳ್ಳ ಆ ರಾಮಲಕ್ಷ್ಮಣರಿಬ್ಬರಿಗೂ, ಅಮಾತ್ಯರೊಡಗೂಡಿದ ಆ ಸುಗ್ರೀವನಿಗೂ ನಾನು ಅವರ ಕ್ಷೇಮವನ್ನು ವಿಚಾರಿಸಿದುದಾಗಿ ತಿಳಿಸು ! ಮುಖ್ಯವಾಗಿ ಮಹಾಬಾಹುವಾದ ಆ ರಾಮನು ನನ್ನನ್ನು ಅಪಾರವಾದ ಈ ದುಃಖಸಮುದ್ರದಿಂದ ಪಾಟಿಸುವ ಹಾಗೆ ಮಾಡುವ ಭಾರವು ನಿನಗೆ ಸೇರಿದ್ದು. ಈ ನನ್ನ ತೀವ್ರವಾದ ವ್ಯಸನವನ್ನೂ, ಈ ರಾಕ್ಷಸರು ಆಗಾಗ ನನ್ನನ್ನು ಹೆದರಿಸುವುದನ್ನೂ ನೀನು ಆ ರಾಮನಿಗೆ ಚೆನ್ನಾಗಿ ತಿಳಿಸಬೇಕು. ಇನ್ನು ಹೋಗಿ ಬಾ ! ಪಾರಿಯಲ್ಲಿ ನಿನಗೆ ಮಂಗಳವಾಗಲಿ !" ಎಂದಳು. ಎಲೈ ರಾಜಸಿಂಹನೆ ! ನಿನ್ನ ಪ್ರಿಯಭಾರ್ಯೆಯಾದ ಆ ಸೀತೆಯು ಮಹಾ ವ್ಯಸನದೊಡನೆ ಇಷ್ಟು ಮಾತುಗಳನ್ನು ಹೇಳಿ ಕಳುಹಿಸಿರುವಳು ನಾನು ಇದುವರೆಗೆ ಹೇಳಿದ ಗುರುತುಗಳನ್ನೂ ಚೆನ್ನಾಗಿ ನೆನಪಿಗೆ ತಂದುಕೊಂಡು, ನಾನು ಹೇಳಿದಂತೆ ಸೀತೆಯು ಸರ್ವಪ್ರಕಾರದಿಂದಲೂ ಕ್ಷೇಮದಿಂದಿರುವಳೆಂದು ದೃಢವಾಗಿ ನಂಬು !" ಎಂದನು

ಇಲ್ಲಿಗೆ ಅರುವತ್ತೇಳನೆಯ ಸರ್ಗವು.

ಹನುಮಂತನು ತಾನು ಸೀತೆಗೆ ಹೇಳಿದ ಇನ್ನೂ ಕೆಲವು ಸಮಾಧಾನಗಳನ್ನೂ, ರಾಮನಿಗೆ ತಿಳಿಸಿ, ಸೀತೆಯ ಕ್ಷೇಮವನ್ನೂ ತಿಳಿಸಿದುದು.

"ಎಲೈ ಪುರುಷೋತ್ತಮನೆ ! ನಾನು ಈ ಕಡೆಗೆ ಪ್ರಯಾಣಕ್ಕಾಗಿ ಆತುರಪಡುತ್ತಿರುವುದನ್ನು ನೋಡಿ, ಸೀತೆಯು ನಿನಗೆ ನನ್ನಲ್ಲಿರುವ ಸ್ನೇಹದಿಂದಲೂ, ನಾನು ಮನಃಪೂರ್ವಕವಾಗಿ ಸಹಾಯಮಾಡತಕ್ಕ ಆಪ್ತನೆಂಬ ನಂಬಿಕೆಯಿಂದಲೂ, ನನ್ನನ್ನು ಬಹಳವಾಗಿ ಆದರಿಸಿ, ತಿರುಗಿ ನನ್ನೊಡನೆ ಮುಂದಿನಕಾರ್ಯವನ್ನು ಕುರಿತು, ವಿಚಾರಿಸುತ್ತ, ನನ್ನನ್ನು ಕುರಿತು, "ಎಲೈ ಕಪಿವೀರನೆ ! ಹೀಗೆ ನೀನು ದಶರಥಪುತ್ರನಾದ ರಾಮನನ್ನು ಕುರಿತು ಶೀಘ್ರದಲ್ಲಿಯೇ ಯುದ್ಧದಲ್ಲಿ ರಾವಣನನ್ನು ಕೊಂದು ನನ್ನನ್ನು ಕರೆದುಕೊಂಡು ಹೋಗುವಂತೆ ಬಾರಿಬಾರಿಗೂ ಹೇಳಿ ಪ್ರೋತ್ಸಾಹಿಸಬೇಕು. ಎಲೈ ಭದ್ರನೆ ! ನಿನಗೆ ಸಮ್ಮತವಾಗಿದ್ದ ಪಕ್ಷದಲ್ಲಿ ಇಲ್ಲಿಯೇ ಒಂದು ದಿನವಿದ್ದು ಆ ಮೇಲೆ ಪ್ರಯಾಣಮಾಡಬಹುದು. ಎಲ್ಲಿಯಾದರೂ ಒಂದು ರಹಸ್ಯಪ್ರದೇಶದಲ್ಲಿ ವಿಶ್ರಮಿಸಿಕೊಂಡಿದ್ದು ನಾಳೆ ಹೋಗು. ಇಲ್ಲಿ ನೀನು ಒಂದು ದಿನವಾದರೂ ಇದ್ದರೆ, ನಿನ್ನನ್ನು ನೋಡುವುದರಿಂದ ಮಂದಭಾಗ್ಯೆಯಾದ

ನನ್ನ ಶೋಕವು ಅದುವರೆಗಾದರೂ ಸ್ವಲ್ಪಶಾಂತವಾಗಿರುವುದು. ನೀನು ಇಲ್ಲಿಂದ ಹೋದಮೇಲೆ ಶೀಘ್ರದಲ್ಲಿಯೇ ಹಿಂತಿರುಗಿ ಬರುವವನಾಗಿದ್ದರೂ, ನೀನು ಅತ್ತಲಾಗಿ ಹೊರಟಕೂಡಲೆ, ಇತ್ತಲಾಗಿ ನನ್ನ ಪ್ರಾಣಗಳು ಹೋದರೂ ಹೋಗಬಹುದು! ಮೊದಲೇ ರಾಮನನ್ನಗಲಿದ ದುಃಖದಿಂದ ಪೀಡಿತಳಾಗಿರುವೆನು. ಮೇಲೆಮೇಲೆ ಇನ್ನೂ ಅನೇಕ ದುಃಖಗಳೂ ಬಂದೊದಗುತ್ತಿರುವವು. ಹೀಗೆ ವ್ಯಸನಪರಂಪರೆಯಿಂದ, ಕಂದಿಕುಂದಿ ಕೃಶಳಾಗಿ ದುರವಸ್ಥೆಯಲ್ಲಿರುವ ನನಗೆ, ನೀನು ಕಣ್ಮರೆಯಾದ ಕೂಡಲೆ ಮತ್ತಷ್ಟು ಸಂಕಟವು ಹೆಚ್ಚುವುದು. ಎಲೈ ವಾನರೇಶ್ವರನೆ! ಯಾವ ಕಾರ್ಯಕ್ಕಾ ನೀನು ಸಮರ್ಥನೆಂಬುದರಲ್ಲಿ ಸಂದೇಹವಿಲ್ಲ. ಆ ವಿಷಯದಲ್ಲಿ ನನಗೆ ಸಂಪೂರ್ಣವಾದ ನಂಬಿಕೆಯುಂಟು. ಆದರೆ ನಿನಗೆ ಸಹಾಯಕರಾದ ವಾನರ ಭಲ್ಲೂಕಸೈನ್ಯಗಳ ವಿಷಯದಲ್ಲಿ ನನಗೆ ದೊಡ್ಡ ಸಂದೇಹವುಂಟಾಗಿರುವುದು. ಆ ಸಂದೇಹವೇ ನನ್ನ ಕೋರಿಕೆಗಳಿಗೆಲ್ಲಾ ಅಡ್ಡಲಾಗಿ ನಿಂತಂತೆ ತೋರಿರುವುದು. ಆ ಸಂದೇಹವೇನೆಂಬುದನ್ನೂ ಹೇಳುವೆನು ಕೇಳು. ಯಾರಿಂದಲೂ ದಾಟಲಸಾಧ್ಯವಾದ ಈ ಮಹಾಸಮುದ್ರವನ್ನು ನಿನ್ನ ಕಡೆಯ ಕರಡಿಗಳೂ, ಕಪಿಗಳೂ ಹೇಗೆ ದಾಟಬಲ್ಲುವು? ರಾಜಕುಮಾರರಾದ ಆ ರಾಮಲಕ್ಷ್ಮಣರಾಗಲಿ ಇದನ್ನು ಹೇಗೆ ದಾಟಿ ಬರುವರು? ಗರುಡನೊಬ್ಬನು; ವಾಯುವೊಬ್ಬನು; ನೀನೊಬ್ಬನು; ಈ ಮೂವರಿಗೆ ಮಾತ್ರವೇ ಈ ಸಮುದ್ರವನ್ನು ದಾಟುವ ಶಕ್ತಿಯಿರುವುದೇ ಹೊರತು, ಇದನ್ನು ದಾಟುವುದು ಬೇರೊಬ್ಬರಿಗೆ ಸಾಧ್ಯವಲ್ಲ. ನೀನು ವೀರನಾಗಿಯೂ ಕಾರ್ಯಜ್ಞರಲ್ಲಿ ಮೇಲಾದವನಾಗಿಯೂ ಇರುವುದರಿಂದ ಈ ಮುಂದಿನಕಾರ್ಯವು ಹೀಗೆ ಅಸಾಧ್ಯವಾಗಿ ಬಂದೊದಗಿರುವಾಗ, ಅದನ್ನು ಸಾಧಿಸುವುದಕ್ಕಾಗಿ ಯಾವ ಉಪಾಯವನ್ನು ಯೋಚಿಸಿರುವೆ! ಅದನ್ನು ಮೊದಲು ನನಗೆ ಹೇಳು. ಎಲೈ ಪರಂತಪನೆ! ಇಲ್ಲಿನ ಕಾರ್ಯವನ್ನು ಸಾಧಿಸುವುದಕ್ಕೆ ನೀನೊಬ್ಬನೇ ಸಾಕೆಂಬುದೇನೋ ನಿಜವು. ಹಾಗೆ ನೀನೇ ಇದನ್ನು ಸಾಧಿಸಿ ಬಿಟ್ಟರೆ, ಆ ಕೀರ್ತಿಗೆ ನೀನೊಬ್ಬನೇ ಭಾಗಯಾಗುವೆಯೇ ಹೊರತು, ರಾಮನ ಹೆಸರೇ ಹೊರಕ್ಕೆ ಬಾರದು. ಆದುದರಿಂದ, ಆ ರಾಮನೇ ತನ್ನ ಸಮಗ್ರಸೈನ್ಯಗಳೊಡನೆ ಇಲ್ಲಿಗೆ ಬಂದು, ಯುದ್ಧದಲ್ಲಿ ರಾವಣನನ್ನು ಕೊಂದು ಜಯಶೀಲನಾಗಿ ನನ್ನನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗುವುದಾದರೆ ಅದರಿಂದ ನನಗೂ ಅವನಿಗೂ ಕೀರ್ತಿಯುಂಟು. ಎಲೈ ಕಪಿವೀರನೆ! ರಾಕ್ಷಸನಾದ ಈ ರಾವಣನು ರಾಮಭಾರ್ಯೆಯಾದ ನನ್ನನ್ನು ಕಾಡಿನಲ್ಲಿ ಆ ರಾಮನ ಭಯಕ್ಕಾಗಿ ಮೋಸದಿಂದ ಕದ್ದು ಕಂದಂತೆ, ರಾಮನೂ ಇಲ್ಲಿಂದ ನನ್ನನ್ನು ಯಾರಿಗೂ ತಿಳಿಯದಂತೆ ರಹಸ್ಯವಾಗಿ ಕರೆಸಿಕೊಂಡುಬಿಟ್ಟರೆ ಅದರಿಂದ ಫಲವೇನು? ಇದು ಅತನಿಗೆ

ಎಷ್ಟುಮಾತ್ರವೂ ಯುಕ್ತವಲ್ಲ. ಶತ್ರುನಾಶಕನಾದ ಆ ಶ್ರೀರಾಮನು, ತನ್ನ ಕಡೆಯ ಸೈನ್ಯಗಳಿಂದ ಈ ಲಂಕೆಯೆಲ್ಲವನ್ನೂ ದಟ್ಟವಾಗಿ ತುಂಬಿ, ಈ ಪಟ್ಟಣವನ್ನೂ ಉಲ್ಲೋಲಕಲ್ಲೋಲವನ್ನಾಗಿ ಮಾಡಿ ಆ ಮೇಲೆ ನನ್ನನ್ನು ಕರೆದುಕೊಂಡು ಹೋಗುವುದಾದರೆ, ಅದು ಕುಕುತ್ಸ್ಥಕುಲತಿಲಕನಾದ ಆತನಿಗೆ ತಕ್ಕುದಾಗಿಯೂ ಇರುವುದು. ಅದುದರಿಂದ ಮಹಾತ್ಮನಾಗಿಯೂ, ರಣಪಂಡಿತನಾಗಿಯೂ ಇರುವ ಆ ರಾಮನು, ತನಗನುರೂಪವಾದ ರೀತಿಯಲ್ಲಿ ಪರಾಕ್ರಮವನ್ನು ತೋರಿಸಿ ಹೋಗುವಂತೆ ಮಾಡಬೇಕಾದ ಕಾರ್ಯವು ನಿನ್ನದು'' ಎಂದು ಹೇಳಿರುವಳು. ಹೀಗೆ ಸೀತೆಯು ಸಾರವತ್ತಾಗಿಯೂ, ಸಹೇತುಕವಾಗಿಯೂ, ವಿನಯಯುಕ್ತವಾಗಿಯೂ ಹೇಳಿದ ಮಾತನ್ನು ಕೇಳಿ, ಅದಕ್ಕೆ ಪ್ರತ್ಯುತ್ತರವಾಗಿ ನಾನು ಅವಳನ್ನು ಕುರಿತು, ''ಎಲೆ ದೇವಿ! ಸಮಸ್ತವಾನರಸೈನ್ಯ ಭಲ್ಲೂಕಗಳಿಗೂ ಅಧೀಶ್ವರನಾಗಿಯೂ ಬಲಸಂಪನ್ನನಾಗಿಯೂ ಇರುವ ನಮ್ಮೊಡೆಯನಾದ ಸುಗ್ರೀವನೇ ಹೇಗಾದರೂ ಈ ಕಾರ್ಯವನ್ನು ಸಾಧಿಸಬೇಕೆಂದು ಸಂಕಲ್ಪಿಸಿಬಿಟ್ಟಿರುವನು. ಅಸಾಧಾರಣವೀರ್ಯವುಳ್ಳ ಎಷ್ಟೋ ಮಂದಿ ವಾನರರು ಅವನ ಕೈಕೆಳಗಿರುವರು ಅವರಲ್ಲಿ ಒಬ್ಬೊಬ್ಬರೂ, ಎಣೆಯಿಲ್ಲದ ವೀರ್ಯವುಳ್ಳವರು. ಒಬ್ಬೊಬ್ಬರೂ ಮಹಾಬಲಾಢ್ಯರು! ಒಬ್ಬೊಬ್ಬರೂ ಮನೋವೇಗದಂತೆ ಮಹಾವೇಗವುಳ್ಳವರು. ಆ ವಾನರರೊಬ್ಬೊಬ್ಬರೂ ಆಕಾಶದಲ್ಲಿಯಾಗಲಿ, ಕೆಳಗಿನ ಪಾತಾಳದಲ್ಲಿಯಾಗಲಿ, ಇವೆರಡಕ್ಕೂ ನಡುವೆ, ಅಡ್ಡಲಾಗಿಯಾಗಲಿ ತಡೆಯಿಲ್ಲದೆ ಸಂಚರಿಸಬಲ್ಲರು. ಆ ವಾನರರು ಎಣೆಯಿಲ್ಲದ ತೇಜಸ್ಸುಳ್ಳವರಾದುದರಿಂದ ಎಷ್ಟೇ ಅಸಾಧ್ಯಕಾರ್ಯಗಳನ್ನಾದರೂ ಸಾಧಿಸದೆ ಬಿಡರು. ಮಹಾತ್ಮರಾಗಿಯೂ, ಬಲದಿಂದ ಕೊಬ್ಬಿದವರಾಗಿಯೂ ಇರುವ ಆ ವಾನರರು ಆಂತರಿಕ್ಷಗತಿಯಿಂದಲೇ ಈ ಪ್ರಪಂಚವನ್ನೆಲ್ಲಾ ಅನೇಕಾವರ್ತ ಪ್ರದಕ್ಷಿಣನಮಾಡಿ ಬಂದಿರುವರು. ಅಲ್ಲಿ ಸುಗ್ರೀವನ ವಶದಲ್ಲಿರುವ ವಾನರರಲ್ಲಿ ಪ್ರಾಯಿಕವಾಗಿ ಎಲ್ಲರೂ ನಳನಿಂತಲೂ ಹೆಚ್ಚುಬಲವುಳ್ಳವರು. ಬಲದಲ್ಲಿ ನನಗೆ ಸಮಾನರಾದವರೂ ಕೆಲವರುಂಟು. ಇಷ್ಟೇ ಹೊರತು ಒಬ್ಬನಾದರೂ ನನಗೆ ಕಡಿಮೆಯಾದವನಿಲ್ಲ. ಸಾಧಾರಣಬಲವುಳ್ಳ ನನ್ನಂತವನೇ ಈ ಸಮುದ್ರವನ್ನು ದಾಟಿ ಇಲ್ಲಿಗೆ ಬಂದಿರುವಾಗ ಇನ್ನು ಮಹಾಬಲಾಢ್ಯರಾದ ಆ ವಾನರರು ಇಲ್ಲಿಗೆ ಬರಬಲ್ಲರೆಂಬುದನ್ನು ಹೇಳಬೇಕಾದುದೇನು? ಲೋಕದಲ್ಲಿ ಅರಸರು ಬೇರೆಲ್ಲಿಗಾದರೂ ಕಾರ್ಯಾರ್ಥವಾಗಿ ತನ್ನ ಕಡೆಯವರನ್ನು ಕಳುಹಿಸುವಾಗ, ಮೊದಲೇ ಹೆಚ್ಚುಬಲವುಳ್ಳವರನ್ನು ಕಳುಹಿಸುವುದಿಲ್ಲ. ಮೊದಮೊದಲು ಅಲ್ಪಬಲವುಳ್ಳವರನ್ನೇ ಕಳುಹಿಸಿಕೊಡುವರು. ಅದುದರಿಂದಲೇ ಸುಗ್ರೀವನು ಮೊದಲು ನನ್ನನ್ನು ಇಲ್ಲಿಗೆ ಕಳುಹಿಸಿರುವನು. ಎಲೆ ದೇವಿ! ಇನ್ನು ನೀನು ದುಃಖಿಸಿದುದು

ಸಾಕು ! ರಾಮನಮೇಲಿರುವ ನಿನ್ನ ಕೋಪವನ್ನೂ ಬಿಡು ! ನಮ್ಮ ಕಡೆಯ ವಾನರ ಯೂಥಪತಿಗಳು ಒಂದೇನಿಮಿಷಕ್ಕೆ ಈ ಲಂಕೆಗೆ ಬಂದು ಸೇರಬಲ್ಲರು. ಎಲೆಭಾಗ್ಯವತಿ, ಪುರುಷಸಿಂಹರಾದ ಆ ರಾಮಲಕ್ಷ್ಮಣರಾದರೋ ಈ ಸಮುದ್ರವನ್ನು ದಾಟುವ ಬಗೆಯೇನೆಂದು ಕೇಳಿದೆಯಲ್ಲವೆ ? ಇದೋ ! ಈ ನನ್ನ ಭುಜವನ್ನೇರಿ ಅವರಿಬ್ಬರೂ ಉದಿಸಿಬಂದ ಚಂದ್ರಸೂರ್ಯರಂತೆ ನಿನ್ನ ಲ್ಲಿಗೆ ಬರುವರೆಂದು ತಿಳಿ! ಪರಂತಪನಾಗಿಯೂ, ಸಿಂಹಪರಾಕ್ರಮವುಳ್ಳವನಾಗಿಯೂ ಇರುವ ಆ ರಾಮನನ್ನೂ ಧನುರ್ಧಾರಿಯಾದ ಲಕ್ಷ್ಮಣನನ್ನೂ ಶೀಘ್ರದಲ್ಲಿಯೇ ನೀನು ಈ ಲಂಕೆಯ ಬಾಗಿಲಲ್ಲಿ ನೋಡ ಬಹುದು ! ಮತ್ತು ನಖದಂಷ್ಟ್ರಗಳನ್ನೇ ಆಯುಧಗಳನ್ನಾಗಿ ಪಡೆದವರಾಗಿಯೂ, ವೀರರಾಗಿಯೂ, ಸಿಂಹಶಾರ್ದೂಲಗಳಂತೆ ಪರಾಕ್ರಮಶಾಲಿಗಳಾಗಿಯೂ, ಮದದಾನೆ ಗಳಂತೆ ಕೊಬ್ಬಿ ಬಳೆದವರಾಗಿಯೂ ಇರುವ ಅನೇಕ ವಾನರರು ಈ ಲಂಕೆಯಲ್ಲಿ ಬಂದು ಸೇರುವುದನ್ನೂ ನೀನು ಶೀಘ್ರದಲ್ಲಿಯೇ ನೋಡಬಹುದು. ಇನ್ನು ಶೀಘ್ರ ದಲ್ಲಿಯೇ ನೀನು ಈ ಲಂಕೆಗೆ ಸೇರಿದ ಮಲಯಪರ್ವತದ ತಪ್ಪಲುಗಳಲ್ಲಿ ಮಹಾ ಮೇಘಗಳಂತೆಯೂ, ಪರ್ವತಗಳಂತೆಯೂ, ದೊಡ್ಡ ದೊಡ್ಡ ದೇಹವುಳ್ಳ ಅನೇಕವಾನರರು ಸಿಂಹನಾದಮಾಡುವ ಧ್ವನಿಗಳನ್ನೂ ಕೇಳಬಹುದು. ಎಲೈ ದೇವಿ ! ಹೆಚ್ಚಾಗಿ ಹೇಳಿದುದರಿಂದೇನು ? ಇನ್ನು ಶೀಘ್ರದಲ್ಲಿಯೇ ರಾಮನು, ತನ್ನ, ವನವಾಸವ್ರತ ವನ್ನೂ ಮುಗಿಸಿಕೊಂಡು ತನ್ನ ಶತ್ರುಗಳಾದ ಸಮಸ್ತರಾಕ್ಷಸರನ್ನೂ ಯುದ್ಧ ದಲ್ಲಿ ಕೊಂದು, ನಿನ್ನೊಡನೆ ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾಗುವುದನ್ನೂ ನೀನು ನಿನ್ನ ಕಣ್ಣಾರೆ ನೋಡುವೆ! ' ಎಂದು ಸಮಾಧಾನವನ್ನು ಹೇಳಿದೆನು. ಹೀಗೆ ನಾವಿಬ್ಬರೂ ಪರಸ್ಪರಸಲ್ಲಾಪಗಳನ್ನು ಮಾಡುತ್ತಿರುವಾಗ, ಇಲ್ಲಿ ನೀನು ಆಕೆಯ ವಿರಹದಿಂದ ಅತಿಯಾಗಿ ವ್ಯಸನಪಡುವುದನ್ನೂ ತಿಳಿಸಿದೆನು. ಇದನ್ನು ಕೇಳಿ ಆಕೆಗೆ ಹೆಚ್ಚಾಗಿ ದುಃಖವುಂಟಾಗಲು, ನಾನು ಅನೇಕ ವಿಧಗಳಾದ ಪ್ರಿಯವಾಕ್ಯಗಳಿಂದ ಆಕೆಯನ್ನು ಸಮಾಧಾನಪಡಿಸಿದೆನು. ನಾನು ಹೀಗೆ ಸಮಾಧಾನಪಡಿಸಿದ ಮೇಲೆ ಜನಕಪುತ್ರಿಯಾದ ಸೀತೆಯು, ಮನಸ್ಸಿನಲ್ಲಿ ಯಾವುದೊಂದು ಕಳವಳವೂ ಇಲ್ಲದೆ ನಿಶ್ಚಿಂತಳಾಗಿ ನೆಮ್ಮದಿಯಿಂದಿರುವಳು " ಎಂದನು.

(ಇದು ಸುಂದರಕಾಂಡವು.)

ಓಂ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮನ್ಮತ್ಸಮೇತ
ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ.

——(೦)——